ಕರ್ನಾಟಕ ದೇಸಿ ಕೃಷಿ ಜ್ಞಾನ ಪರಂಪರೆಗಳು

[ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ]

2016



ಸಂಶೋಧಕರು:

ಸ್ವಾಮಿ ಆನಂದ್. ಆರ್

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-೫೮೩೨೭೬.

ಮಾರ್ಗದರ್ಶಕರು:

ಡಾ. ಮೊಗಳ್ಳಿ ಗಣೇಶ್

ಪ್ರಾಧ್ಯಾಪಕರು,
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-೫೮೩೨೭೬.

ಕರ್ನಾಟಕ ದೇಸಿ ಕೃಷಿ ಜ್ಞಾನ ಪರಂಪರೆಗಳು

[ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ]

ಸಂಶೋಧಕರು:

ಸ್ವಾಮಿ ಆನಂದ್. ಆರ್.
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-೫೮೩೨೭೬.

ಮಾರ್ಗದರ್ಶಕರು:

ಡಾ. ಮೊಗಳ್ಳಿ ಗಣೇಶ್,
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-೫೮೩೨೭೬.

ಮಾರ್ಗದರ್ಶಕರ ದೃಢೀಕರಣ ಪತ್ರ

ಸ್ವಾಮಿಆನಂದ್. ಆರ್. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಕರ್ನಾಟಕ ದೇಸಿ ಕೃಷಿ ಜ್ಞಾನ ಪರಂಪರೆಗಳು' ಎಂಬ ಈ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:೧೬-೦೫-೨೦೧೬

ಮಾರ್ಗದರ್ಶಕರು
ಡಾ. ಮೊಗಳ್ಳಿಗಣೇಶ್
ಪ್ರಾಧ್ಯಾಪಕರು,
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಹಂಪಿ, ವಿದ್ಯಾರಣ್ಯ-೫೮೩೨೭೬.

ಸಂಶೋಧಕರ ಘೋಷಣಾ ಪತ್ರ

'ಕರ್ನಾಟಕ ದೇಸಿ ಕೃಷಿ ಜ್ಞಾನ ಪರಂಪರೆಗಳು' ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಮೊಗಳ್ಳಿ ಗಣೇಶ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ:೧೬-೦೫-೨೦೧೬

ಸ್ವಾಮಿಆನಂದ್. ಆರ್
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಹಂಪಿ, ವಿದ್ಯಾರಣ್ಯ-೫೮೩೨೭೬.

ನೇಗಿಲ ಯೋಗಿ

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ.

ಫಲವನು ಬಯಸದ ಸೇವೆಯ ಪೂಜೆಯು
ಕರ್ಮವೆ ಇಹಪರ ಸಾಧನವು.

ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳವನೇ ಭೋಗಿ.

ಲೋಕದೊಳೇನೇ ನಡೆಯುತಲಿರಲಿ
ತನ್ನೀಕಾರ್ಯವ ಬಿಡನೆಂದೂ;
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು ಕವಿಗಳು ಬರೆದರು.

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿ ಸುಖಕೆಳಸದೆ
ದುಡಿವನು ಗೌರವಕಾಶಿಸದೆ.

ನೇಗಿಲ ಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ.

–ಕುವೆಂಪು

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಭಾರತೀಯ ಕೃಷಿ ಜ್ಞಾನ ಪರಂಪರೆಗೆ ಸುಮಾರು ಹತ್ತು ಸಾವಿರ ವರ್ಷಗಳ ಇತಿಹಾಸವಿದೆ. ಭಾರತ ಕೃಷಿ ಪ್ರಧಾನ ದೇಶ. ಇಂದಿಗೂ ದೇಶದ ಶೇಕಡ ೭೦ ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಸಹಸ್ರ ಸಹಸ್ರ ವರ್ಷಗಳ ಬೇಸಾಯ ಜೀವನದ ಅನುಭವ ಮತ್ತು ಜ್ಞಾನಶ್ರೀಮಂತಿಕೆಯೇ ಭಾರತ ದೇಶದ ಹೆಗ್ಗಳಿಕೆ. ಎಲ್ಲಿಯೂ ಎಂದಿಗೂ ನಿಲುಗಡೆಯೇ ಇಲ್ಲದೆ ನಿರಂತರವಾಗಿ ಯಾತ್ರಿಸುತ್ತಿರುವ ಈ ಅನಂತಯಾತ್ರೆಗೆ 'ಆರಂಭ' ಎಂತಲೆ ಹೆಸರು. ಸುಮಾರು ಹತ್ತು ಸಾವಿರ ವರ್ಷಗಳ ತಡೆರಹಿತ ಯಾತ್ರೆ ಇಂದಿಗೂ ಆರಂಭದ ಹೊಸ್ತಿಲಲ್ಲೇ ನಿಂತಿರುವುದು ಇದರ ಚಿರನೂತನತೆಗೆ, ಸಚ್ಚಿದಾನಂದ ಸ್ವರೂಪಕ್ಕೆ ಸಾಕ್ಷಿ. ರೈತನನ್ನು 'ಉಳುವ ಯೋಗಿ' ಎಂದರು ಕನ್ನಡದ ಮಹಾಕವಿ ಕುವೆಂಪು. ಭಾರತದ ರೈತನಿಗೆ ಕೃಷಿ ಎಂಬುದು ಕೇವಲ ಕಸುಬು ಆಗಿರಲಿಲ್ಲ. ಅದು ರೈತನ ಆಂತರ್ಯ ಬೆಳಗುವ ಜ್ಯೋತಿಯಾಗಿತ್ತು. ನಿಸರ್ಗ ಅನುಸರಿಸಿ ಬೇಸಾಯ ಮಾಡುವ ರೈತ ಆಳದಲ್ಲಿ ಮೋಕ್ಷ ಅರಸುವ ಅಂತರ್‌ಯಾತ್ರಿಯೂ ಆಗಿರುತ್ತಿದ್ದ. ಬೇಸಾಯ ಜೀವನದ ಜೊತೆಗೆ ಆಧ್ಯಾತ್ಮವೂ ಬೆಸೆದ ಗತಿಗೆ ಇಡಿ ಮಧ್ಯಯುಗೀನ ಗ್ರಾಮ ಭಾರತ ಆಳದಲ್ಲಿ ಮೌನವಾಗಿಯೂ, ಪ್ರಶಾಂತವಾಗಿಯೂ ಬಾಳಿದ್ದದನ್ನು ಇಲ್ಲಿ ಸ್ಮರಿಸಬಹುದು.

ಕನ್ನಡದಲ್ಲಿ 'ಕೃಷಿ'ಯನ್ನು 'ಆರಂಭ', ಬೇಸಾಯ, ವ್ಯವಸಾಯ, ಒಕ್ಕಲುತನ ಎಂದೆಲ್ಲ ಕರೆಯುತ್ತಾರೆ. ಆದಿವಾಸಿ ಬುಡಕಟ್ಟು ಜನರ ಕೃಷಿ ಸಂಸ್ಕೃತಿಗೆ ಆದಿಕಾಲದಿಂದಲೂ ಅವರೆ ರೂಪಿಸಿಕೊಂಡ ಹೆಸರುಗಳಿವೆ. ಕೃಷಿಗೆ ಸಂವಾದಿಯಾದ ಇಂಗ್ಲೀಷ್ ಪದ 'AGRICULTURE' ಆಗಿದೆ. ವಾಸ್ತವವಾಗಿ ಈ ಪದವು ಲ್ಯಾಟಿನ್ ಮೂಲದ್ದಾಗಿದೆ. ವೆಬ್‌ಸ್ಟರ್ ನಿಘಂಟು 'AGRICULTURE' ಗೆ "THE SCIENCE OR ART OF CULTIVATING THE SOIL, PRODUCING CROPS AND RISING LIVESTOCK"[1] ಎಂಬ ಅರ್ಥವನ್ನು ನೀಡುತ್ತದೆ. ಬೇಸಾಯವೆಂಬುದು ಭೂಮಿಯನ್ನು ಉಳುವ, ಬೆಳೆ ಬೆಳೆವ ವಿಜ್ಞಾನ ಅಥವಾ ಕಲೆ; ಜೊತೆಗೆ ಪಶು ಸಂವರ್ಧನೆಯೂ ಆಗಿದೆ. 'AGRICULTURE'- ಬೇಸಾಯ ಸಂಸ್ಕೃತಿ ಎಂಬುದು ಭಾರತವೇ ಏಕೆ ಜಗತ್ತಿನ ಎಲ್ಲ ಸಂಸ್ಕೃತಿಗಳ ತಾಯಿಬೇರು.

ದೇಸೀಯ ಕೃಷಿಜ್ಞಾನ ಎಂಬುದು ನಮಗೆ ನಮ್ಮ ಹಿರೀಕರಿಂದ ಬಳುವಳಿಯಾಗಿ ಬಂದದ್ದು. ಅದು ಕಾಲದಿಂದ ಕಾಲಕ್ಕೆ ತನ್ನನ್ನು ತಾನು

ಅನ್ವೇಷಿಸಿಕೊಳ್ಳುತ್ತ, ತಪ್ಪುಗಳಿಂದ, ಎಡಗುವಿಕೆಯಿಂದ ಕಲಿಯುತ್ತಾ, ಒಳಿತನ್ನು ಸಮಾಜಮುಖಿಯಾಗಿಸುತ್ತ ಸಮಷ್ಟಿಯ ಹಿತಕ್ಕಾಗಿ ಸಮಸ್ತವೂ ದುಡಿದು, ಬಾಳಿದ ಮತ್ತು ಬಾಳಿಸುತ್ತಿರುವ ಸಮೃದ್ಧ ಸಂಸ್ಕೃತಿ. ವ್ಯಕ್ತಿಯ ವೈಯಕ್ತಿಕ ಅನ್ವೇಷಣೆಗಳು, ಸಮುದಾಯದ ಅನ್ವೇಷಣೆಗಳು, ಋಷ್ಯಾಶ್ರಮಗಳ ಪ್ರಯೋಗಗಳು ನಿಸರ್ಗ ಕಲಿಸಿದ ಪಾಠಗಳು, ಕಲ್ಪಿಸಿದ ಅವಕಾಶಗಳು; ಮಾನವ ಸ್ನೇಹಿಯಾಗಿ ಸಹಚರ್ಯಕ್ಕೆ ಬಂದ ಜಾನುವಾರುಗಳು, ಮಾನವನ ಅಂತ:ಕರಣದ ವಿಸ್ತರಣೆಗೆ ಕಾರಣವಾದ ಇತರ ಸಾಕು ಪ್ರಾಣಿಗಳು.... ಈ ಎಲ್ಲವುಗಳ ಸಂಯೋಜನೆಯ ಆಳದಿಂದಲೇ ನಮ್ಮ ಕೃಷಿ ಸಂಸ್ಕೃತಿ ಅರಳಿದ್ದು.

ಗಾಳಿ, ಬೆಳಕು, ನೀರು ಮತ್ತು ಭೂಮ್ಯಾಕಾಶಗಳ ನಿಸರ್ಗ ಸೃಷ್ಟಿಯನ್ನು ಮಾನವ ಕಾಲಕ್ಕನುಗುಣವಾಗಿ ಅರಿತು ಬಾಳಿದ್ದಾನೆ. ಹೀಗೆ ಅರಿತು ಬಾಳಿದ ನೆಲೆಯಲ್ಲಿ ಕೃಷಿ ಸಂಸ್ಕೃತಿ ವಿಕಾಸಗೊಂಡಿದೆ. ಭಾಷೆ, ಸಾಹಿತ್ಯ, ಕಲೆ, ವಿಜ್ಞಾನ, ವಾಣಿಜ್ಯ, ಜಾನಪದ, ಆಯುರ್ವೇದ, ತತ್ವಜ್ಞಾನ...ಇತ್ಯಾದಿಗಳೆಲ್ಲವೂ ಈ ಮಹಾನ್ ಸಂಸ್ಕೃತಿಯ ಭಾಗವಾಗಿಯೇ ಬೆಳೆದಿವೆ ಮತ್ತು ಬೆಳೆಯುತ್ತಿವೆ.

ಭಾರತೀಯ ರೈತ ಏಳು-ಬೀಳುಗಳಿಗೆ ಹೊಸಬನೇನಲ್ಲ, ರೈತ ಚರಿತ್ರೆಯನ್ನು ಗಮನಿಸಿದರೆ ಅವನು ಪಟ್ಟ ಪಾಡುಗಳಿಗೆ ಕೊನೆ ಮೊದಲಿರಲಿಲ್ಲ. ಅತಿವೃಷ್ಟಿ-ಅನಾವೃಷ್ಟಿಗಳ ನಡುವೆ ಇಡೀ ದೇಶಕ್ಕೆ ಆತನೆ ಬೆನ್ನೆಲುಬಾಗಿದ್ದ. ಅಂಥ ರೈತ ಇಂದು ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ.

ಆಹಾರ ಧಾನ್ಯಗಳ ಇಳುವರಿ ಹೆಚ್ಚಿಸಿ ದೇಶದಲ್ಲಿ ಆಹಾರದ ಬರ ಬಾರದಂತೆ ಹಾಗೂ ಗ್ರಾಮೀಣ ಕೃಷಿ ಜೀವನವನ್ನು ಸಮೃದ್ಧಗೊಳಿಸಿ, ಗ್ರಾಮ ಭಾರತವನ್ನು ಶ್ರೀಮಂತಗೊಳಿಸುವ ಕಾರಣಕ್ಕೆ "ಹಸಿರು ಕ್ರಾಂತಿ" ಘೋಷಿಸಲಾಯಿತು. ಗ್ರಾಮೀಣ ರಸ್ತೆ, ಕೃಷಿ, ನೀರಾವರಿ, ವಿದ್ಯುತ್, ಮಾರುಕಟ್ಟೆ.... ಇತ್ಯಾದಿಗಳ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ವಿಜ್ಞಾನಿಗಳು, ಕೃಷಿ-ತೋಟಗಾರಿಕೆ-ಪಶುಸಂಗೋಪನಾ ಇಲಾಖೆಗಳೆಲ್ಲ ಒಗ್ಗೂಡಿ ಸಮರೋಪಾದಿಯಲ್ಲಿ ತಯಾರಿ ನಡೆಸಿದವು.

ಕ್ರಾಂತಿ ಅಂದರೆ ಹಠಾತ್ ಬದಲಾವಣೆ, ಸಮಗ್ರ ಬೆಳವಣಿಗೆ, ದಿಢೀರ್ ಅಭಿವೃದ್ಧಿ ಮತ್ತು ಬೆಳಕು ಎಂಬುದು ಒಟ್ಟಾರೆ ಅರ್ಥ. ಆದರೆ ನಮ್ಮ ದೇಶದಲ್ಲಿ ೧೯೬೯ ರಲ್ಲಿ ಘೋಷಣೆಯಾದ ಹಸಿರುಕ್ರಾಂತಿ ಇದಕ್ಕೆ ತದ್ವಿರುದ್ಧವಾಗಿ ಚಲಿಸಿತು. ಇದು ಸಮಗ್ರ ದೇಸೀ ಜ್ಞಾನವನ್ನು ಸಂಪೂರ್ಣವಾಗಿ ಕಡೆಗಣಿಸಿತು. ಹೊಸದಾದ ಕೃಷಿಜ್ಞಾನವನ್ನು ರೈತರಲ್ಲಿ ತುಂಬಿ ಅವರನ್ನು ಮೋಸದ ವ್ಯೂಹಕ್ಕೆ ಸಿಲುಕಿಸಿತು. ದೇಸಿ ಬೀಜಗಳ ಜಾಗದಲ್ಲಿ ಹೊಸ ಹೈಬ್ರಿಡ್ ಬೀಜಗಳನ್ನು ತರಲಾಯಿತು. ಟ್ರ್ಯಾಕ್ಟರ್, ಟಿಲ್ಲರ್‌ಗಳು ದೇಸಿ ನೇಗಿಲು, ಕುಂಟೆಗಳನ್ನು ಮೂಲೆಗುಂಪು ಮಾಡಿದವು. ನಾಟಿ

ಹಸು (ಆಕಳು) ಎಮ್ಮೆಗಳ ಜಾಗವನ್ನು ಜರ್ಸಿ, ಹೋಲ್‌ಸ್ಟೈನ್‌ನಂಥ ಹಸುಗಳು ಆಕ್ರಮಿಸಿಕೊಂಡವು. ಸಣ್ಣ, ಸಣ್ಣ ಬಾವಿ, ಏತದ ಬಾವಿ, ಕೆರೆ, ಹಳ್ಳ, ತೊರೆ, ನದಿ ನೀರಾವರಿಗಳ ಜಾಗವನ್ನು ಬೃಹತ್ ಹಾಗೂ ಮಧ್ಯಮಗಾತ್ರದ ನೀರಾವರಿ ಯೋಜನೆಗಳು ಆಹುತಿ ತೆಗೆದುಕೊಂಡವು.

ನೈಸರ್ಗಿಕವಾಗಿ ಸಾರಜನಕವನ್ನು ಉತ್ಪಾದಿಸುವ ಮತ್ತು ಭೂಮಿಯಲ್ಲಿ ಸ್ಥಿರೀಕರಿಸುವ ದ್ವಿದಳ ಧಾನ್ಯದ ಬೆಳೆಗಳನ್ನು ರೈತರು ಬೆಳೆಯುತ್ತಿದ್ದರೂ ಆ ಜಾಗಕ್ಕೆ ರಸಾಯನಿಕ ನೈಟ್ರೋಜನ್‌ಗಳನ್ನು ಹೇರಲಾಯಿತು. ಜಾನುವಾರುಗಳ ಸಗಣಿ, ಗಂಜಳ, ಕೊಟ್ಟಿಗೆ ಗೊಬ್ಬರಗಳ ಜಾಗಕ್ಕೆ ಕೃತಕ ರಾಸಾಯನಿಕ ರಂಜಕ, ಪೊಟಾಷ್‌ಗಳು ಬಂದವು. ಬೆಳೆ ಸಂರಕ್ಷಣೆಯ ದೇಸಿ ವಿಧಾನಗಳ ಜಾಗವನ್ನು ಎಂಡೋಸಲ್ಫಾನ್, ನುವಕ್ರಾನ್, ರೋಗರ್, ಟಿಕ್–೨೦ಯಂಥ ಆತಂಕಕಾರಿ ವಿಷಗಳು ಆಕ್ರಮಿಸಿಕೊಂಡವು. ಹಕ್ಕಿ–ಪಕ್ಷಿ, ಕೀಟ ವೈವಿಧ್ಯಗಳ ನಾಶಕ್ಕೂ ಇದೇ ವಿಷಗಳು ಬಳಕೆಯಾದವು. ಎರೆಹುಳು, ಗೆದ್ದಲು ನಾಶಕ್ಕಾಗಿ ಬಳಕೆಯಾದ ಪೋರೆಟ್ ಎಂಬ ವಿಷ ಅವುಗಳನ್ನು ದಾಟಿ ಅಂತರ್ಜಲವನ್ನೂ ವಿಷಮಯಗೊಳಿಸಿತು. ಬಹುಬೆಳೆ, ಜೈವಿಕ ವೈವಿಧ್ಯಗಳ ತವರಾಗಿದ್ದ ನಮ್ಮ ತೋಟ, ಹೊಲ, ಗದ್ದೆಗಳಲ್ಲಿ ಏಕ ಬೆಳೆ ಪದ್ಧತಿ ಜಾರಿಯಾಯಿತು.

ಹಸಿರುಕ್ರಾಂತಿಯ ಆರಂಭದಲ್ಲೇನೋ ಇಳುವರಿ ಹೆಚ್ಚಾಯಿತು. ಪಂಜಾಬ್‌ನಲ್ಲಿ ಎಕರೆಗೆ ೬೦ ಕ್ವಿಂಟಾಲ್‌ಗಳವರೆಗೆ ಗೋಧಿ ಬೆಳೆಯಲಾಯಿತು. ಮಂಡ್ಯದಲ್ಲಿ ಎಕರೆಗೆ ೮೦ ರಿಂ ೯೦ ಟನ್‌ವರೆಗೆ ಕಬ್ಬು ಬೆಳೆಯಲಾಯಿತು. ಆದರೆ ೯೦ ರ ದಶಕದಿಂದ ಈಚೆಗೆ ಎಷ್ಟೇ ಪ್ರಯತ್ನಿಸಿದರೂ ಆಧುನಿಕ ರಸಾಯನಿಕ ಕೃಷಿಯಿಂದ ಇಳುವರಿಯನ್ನು ಹೆಚ್ಚಿಸಿಕೊಳ್ಳಲು ಆಗಲಿಲ್ಲ. ಇದೀಗ ಪಂಜಾಬ್‌ನ ಗೋಧಿ ಇಳುವರಿ ಎಕರೆಗೆ ಸರಾಸರಿ ೧೫ ಕ್ವಿಂಟಾಲ್‌ಗೆ ಬಂದು ನಿಂತಿದೆ. ಮಂಡ್ಯದ ಕಬ್ಬು ಇಳುವರಿ ಎಕರೆಗೆ ೩೦ ರಿಂದ ೩೫ ಟನ್‌ಗಳಿಗೆ ಸೀಮಿತಗೊಂಡಿದೆ. ಈ ನಡುವೆ ಹಳ್ಳಿಗಳ ಸಾಂಪ್ರದಾಯಿಕ ಮಾರುಕಟ್ಟೆಯಾಗಿ ನೆಲೆ ಸ್ಥಾಪಿಸಿದ್ದ ಸಂತೆಗಳು ಕಣ್ಮರೆಯಾದವು. ತಳಿ ವೈವಿಧ್ಯತೆ, ಸ್ಥಳೀಯ ನಾಟಿ ಬೀಜಗಳು ನಾಶವಾದವು. ಆಧುನಿಕ ಯಂತ್ರೋಪಕರಣಗಳು ಹಳ್ಳಿಯ ಗುಡಿಕೈಗಾರಿಕೆಗಳನ್ನು ನಾಶಗೈದು ಹಳ್ಳಿಯ ಸ್ವರೂಪವನ್ನೇ ಬದಲಾಯಿಸಿದ್ದಲ್ಲದೆ ಅಂತರ್ಗತವಾಗಿದ್ದ ಸಂಬಂಧಗಳಲ್ಲಿ ಪಲ್ಲಟ ಸೃಷ್ಟಿಸಿತು.

ರೈತರು ತಮಗೆ ಹಾಗೂ ತಮ್ಮ ಇಡೀ ಗ್ರಾಮಕ್ಕೆ ಬೇಕಾದುದೆಲ್ಲವನ್ನು ಬೆಳೆದುಕೊಂಡ ಹೆಚ್ಚುವರಿಯಾದದ್ದನ್ನು ಸಂತೆಗಳಲ್ಲಿ ಸ್ವತ: ಮಾರುತ್ತಿದ್ದರು. ಏಕ ಬೆಳೆ ಪದ್ಧತಿಯ ಅನುಷ್ಠಾನದ ತರುವಾಯ ಪ್ರತಿ ಫಸಲನ್ನು ಮಾರಲು ಮತ್ತು ತನಗೆ ಬೇಕಾದ ಬಹು ಅಗತ್ಯಗಳಿಗಾಗಿ ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರ, ರಾಜಧಾನಿಗಳವರೆಗೂ ಹೋಗಿ ಬರುವಂತಾಯಿತು. ಈ ಕಾರಣವಾಗಿ ಗ್ರಾಮೀಣ

ಸಾರಿಗೆಯಾಗಿದ್ದ ಎತ್ತಿನ ಬಂಡಿಗಳು ತಮ್ಮ ಸ್ಥಾನ ಕಳೆದುಕೊಂಡವು. ಪ್ರತಿ ರೈತ ಕುಟುಂಬ ತಮ್ಮ ಜಮೀನಿನ ಮುಂದಿನ ಭಿತ್ತನೆಗಾಗಿ ತಾವು ಬಳಸುವ ಎಲ್ಲ ಬಗೆಯ ಬೀಜಗಳನ್ನು ಸಂರಕ್ಷಿಸುತ್ತಿತ್ತು. ಹಸಿರು ಕ್ರಾಂತಿಯ ಬಳುವಳಿಯ ಕಾರಣವಾಗಿ ಆಧುನಿಕ ಸಂಕರ ತಳಿಯ ಬೀಜಗಳಿಗಾಗಿ ಮೊದ ಮೊದಲು ಬೀಜ ನಿಗಮ, ಕೃಷಿ, ತೋಟಗಾರಿಕಾ ಇಲಾಖೆ ಕ್ರಮೇಣ ಖಾಸಗಿ ವ್ಯಕ್ತಿ ಮತ್ತು ಕಂಪನಿಗಳನ್ನು ಅವಲಂಬಿಸಬೇಕಾಯಿತು. ಹಸಿರು ಕ್ರಾಂತಿಯನ್ನು ಹಿಂಬಾಲಿಸಿ ಬಂದ ಜಾಗತೀಕರಣ ರೈತರನ್ನು ಮತ್ತಷ್ಟು ಸದೆ ಬಡಿಯಿತು.

ಇಂದು ಹಳ್ಳಿಗಾಡಿನ ಅವಸ್ಥೆ ಅತ್ಯಂತ ಶೋಚನೀಯ ಸ್ಥಿತಿ ತಲುಪಿದೆ. ಸಾವಿರಾರು ವರ್ಷಗಳ ಸಾಂಪ್ರದಾಯಕ ಜ್ಞಾನದ ಸುವ್ಯವಸ್ಥಿತ ಅಡಿಪಾಯ ಶಿಥಿಲಗೊಂಡಿದೆ. ಎಲ್ಲ ಬಗೆಯ ಅಭಿವೃದ್ಧಿಗಳು, ಅನ್ವೇಷಣೆಗಳು, ಬೆಳವಣಿಗೆಗಳು ರೈತಾಪಿ ವರ್ಗವನ್ನು ಕೃಶವಾಗಿಸಲು ಪ್ರಯತ್ನಿಸಿವೆ. ಹೀಗಾಗಿ ಬದುಕಿನ ದಿಕ್ಕೇ ತೋಚದೆ, ಆಶಾಹೀನನಾದ ರೈತ ಸಾವಿಗೆ ಶರಣಾಗುತ್ತಿದ್ದಾನೆ. ರೈತ ಮಹಿಳೆಯರು ವಿಧವೆಯರಾಗುತ್ತಿದ್ದಾರೆ. ಅವರ ಮಕ್ಕಳು ಅನಾಥರಾಗುತ್ತಿದ್ದಾರೆ. ಕರ್ನಾಟಕದ ಅನೇಕ ಹಳ್ಳಿಗಳು ವೃದ್ಧಾಶ್ರಮಗಳಾಗಿ ಮಾರ್ಪಾಡು ಹೊಂದಿವೆ. ತಮ್ಮ ಮಕ್ಕಳನ್ನು ಓದಿಸಿ ದೊಡ್ಡ ದೊಡ್ಡ ನಗರಗಳಿಗೊ ವಿದೇಶಗಳಿಗೊ ಕಳಿಸಿದ ವೃದ್ಧ ತಂದೆ ತಾಯಿಗಳು ಇಂದು ಪುತ್ರ ಶೋಕದಿಂದ ನರಳುವ ದಶರಥ ಮಹಾರಾಜಗಳಾಗಿ ಹೋಗಿದ್ದಾರೆ. ಈ ಇಳಿ ವಯಸ್ಸಿನವರ ಒಂಟಿತನ, ಕಡು ದುಃಖ ಮತ್ತು ಶೋಕಗಳು ಆರೋಗ್ಯವಂತ ಸಮಾಜದ ಲಕ್ಷಣಗಳೇನಲ್ಲ. ಹಳ್ಳಿಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸ್ವಾಸ್ಥ್ಯಗಳು ಹಾಳಾದಂತೆಯೇ ಅವುಗಳ ದೈಹಿಕ, ಮಾನಸಿಕ ಆರೋಗ್ಯಗಳು ಹಾಳಾಗಿವೆ. ಹೊಸ ಹೊಸ ಬಗೆಯ ರೋಗಗಳು ಹಳ್ಳಿಗಾಡನ್ನು ವಶಪಡಿಸಿಕೊಳ್ಳುತ್ತಿವೆ. ಹಿಂದೆ ಪ್ಲೇಗು, ಕಾಲರ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳು ಒಟ್ಟೊಟ್ಟಿಗೆ ಬಂದು ಹಳ್ಳಿಗಾಡನ್ನು ಸ್ಮಶಾನವಾಗಿಸುತ್ತಿದ್ದವು. ಈಗ ಉಗ್ರ ಸ್ವರೂಪದ ಆ ಸಾಂಕ್ರಾಮಿಕ ರೋಗಗಳಿಲ್ಲ.

ಆದರೆ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಅರ್ಬುದ (ಕ್ಯಾನ್ಸರ್) ಏಡ್ಸ್‌ನಂತಹ ಕಾಯಿಲೆಗಳು ಹಿಂದೆ ಹಳ್ಳಿಗಳನ್ನು ಅಷ್ಟಾಗಿ ಬಾಧಿಸಿರುತ್ತಿರಲಿಲ್ಲ. ಹೆಚ್ಚೆಂದರೆ ದುಡಿಯದೇ ತಿನ್ನುವ ಶ್ರೀಮಂತ ಕುಳಗಳನ್ನು ಅವರ ಇಳಿಗಾಲದಲ್ಲಿ ಈ ಕಾಯಿಲೆಗಳು ಸತಾಯಿಸುತ್ತಿದ್ದವು. ಈಗ ೩೦ ವಯಸ್ಸು ದಾಟಿದ ಸದೃಢರನ್ನೂ ಬಡವ, ಬಲ್ಲಿದ ಎಲ್ಲರನ್ನೂ ಈ ಶ್ರೀಮಂತ ಕಾಯಿಲೆಗಳು ಕಾಡುತ್ತಿವೆ. ಬಿ.ಪಿ., ಶುಗರ್, ಕ್ಯಾನ್ಸರ್, ಏಡ್ಸ್‌ನಂತಹ ಕಾಯಿಲೆಗಳನ್ನು ಜೀವನ ಶೈಲಿಗೆ ಸಂಬಂಧಿಸಿದ ಕಾಯಿಲೆಗಳೆಂಬಂತೆ ತಳ್ಳಿಹಾಕಲಾಗದು.

ನಾವು ಕೃಷಿಗಾಗಿ ಬಳಸುತ್ತಿರುವ ರಸಗೊಬ್ಬರಗಳು ಕೀಟನಾಶಕವಾಗಿ, ಕಳೆ ನಾಶಕವಾಗಿ ಬಳಸುತ್ತಿರುವ ವಿಷಗಳು, ಗೆದ್ದಲು ನಾಶಕ್ಕಾಗಿ ಬಳಸುತ್ತಿರುವ ಪೋರೆಟ್;

ಕೊಯ್ಲೋತ್ತರ ಧಾನ್ಯ ಸಂರಕ್ಷಣೆಗಾಗಿ ಬಳಸುತ್ತಿರುವ ಮಹಾವಿಷಗಳು....ಹೀಗೆ ಪ್ರತಿಯೊಂದು ವಿಷಗಳು, ಬೆಳೆ ಬೆಳೆವ ರೈತರನ್ನೂ, ಉಣ್ಣುವ ಪ್ರತಿಯೊಬ್ಬನನ್ನು ದೀರ್ಘಕಾಲೀನ ರೋಗಗಳ ದವಡೆಗೆ ತಂದು ಸ್ಥಾಪಿಸಿವೆ. ಇಂದು ಹಳ್ಳಿಗಾಡಿನ ಪ್ರತಿ ರೈತ ಕುಟುಂಬದಲ್ಲೂ ಕಡೇ ಪಕ್ಷ ಇಬ್ಬರಾದರೂ ದೀರ್ಘಕಾಲದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಇದೇ ಬಗೆಯ ವಿಷಮಸ್ಥಿತಿಯನ್ನು ನಗರದ ಜನರು ಅನುಭವಿಸುತ್ತಿದ್ದಾರೆ. ಕೆಮಿಕಲ್ ಫಾರ್ಮಿಂಗ್ ವಿಧಾನದಲ್ಲಿ ಬೆಳೆದ ಹಣ್ಣು, ಧಾನ್ಯ, ಸೊಪ್ಪು, ತರಕಾರಿಗಳು, ಹೈಬ್ರಿಡ್ ಹಸುವಿನ ಹಾಲು, ಮೊಸರು, ತುಪ್ಪಗಳ ಪರಿಣಾಮ ಸಣ್ಣ ಮಕ್ಕಳಲ್ಲೇ ಅಸ್ತಮಾ, ಬಾಲ್ಯಕಾಲದ ಡಯಾಬಿಟಿಸ್ ಹಾಗೂ ವಿವಿಧ ಬಗೆಯ ಅಲರ್ಜಿಗಳಿಂದ ಮಕ್ಕಳು ನರಳುತ್ತಿದ್ದಾರೆ. ೩೦ ವರ್ಷ ದಾಟುವ ಪ್ರತಿ ಶೇಕಡ ೨೦ ರಷ್ಟು ವಯಸ್ಕರು ದೀರ್ಘಕಾಲೀನ ರೋಗಗಳಿಗೆ ಗುರಿಯಾಗುತ್ತಿದ್ದಾರೆ. ಈ ಬಗೆಯ ವಾತಾವರಣ ಸಾರ್ವತ್ರಿಕ ಅನಾಸಕ್ತಿ, ಬದುಕಿನ ಕುರಿತು ಜಿಗುಪ್ಸೆಗೆ ಅವಕಾಶವಿತ್ತಿದೆ.

ಮಾನವನ ಉಳಿವಿಗೆ ಆಹಾರ ಅತ್ಯಗತ್ಯ. ಅಂಥ ಆಹಾರ ದೇಹಕ್ಕೆ ಶಕ್ತಿ, ಮನಸ್ಸಿಗೆ ಉತ್ಸಾಹ ನೀಡಬೇಕು. ಕುಡಿಯುವ ನೀರು, ಉಸಿರಾಡುವ ಗಾಳಿ, ಉಣ್ಣುವ ಅನ್ನ ವಿಷಮುಕ್ತವಾಗಿರಬೇಕು. ದೇಸೀ ಕೃಷಿ ಮಾತ್ರವೇ ಇಂಥ ಅನ್ನ, ನೀರು, ಗಾಳಿಯನ್ನು ನಿರ್ಮಿಸಲು ಸಾಧ್ಯ. ಮರೆತು ಹೋಗುತ್ತಿರುವ ದೇಸೀ ಕೃಷಿ ಜ್ಞಾನವನ್ನು ಮತ್ತೆ ಪುನರ್ ಸ್ಥಾಪಿಸುವ ಉದ್ದೇಶ ಈ ಅಧ್ಯಯನಕ್ಕೆ ಇದೆ.

ಸುಧೀರ್ಘವೂ, ತೀವ್ರವೂ ಆದ ಬರಗಾಲದ ಸನ್ನಿವೇಶಗಳಲ್ಲಿ ಮತ್ತು ಅತಿವೃಷ್ಟಿಯಂಥ ಹವಾಮಾನ ವೈಪರೀತ್ಯಗಳಂತಹ ಸಂದರ್ಭದಲ್ಲಿ ನಮ್ಮ ದೇಶ ಆಹಾರದ ಅಭಾವದಿಂದ ತತ್ತರಿಸಿದೆ. ಅಂಥ ಸಂದರ್ಭಗಳನ್ನು ಹೊರತುಪಡಿಸಿ ಉಳಿದೆಲ್ಲ ಕಾಲದಲ್ಲೂ ಕೃಷಿ ಸಮೃದ್ಧಿಯನ್ನೇ ಸಾರಿದೆ. ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಆಶಯಗಳು ಚಾಲ್ತಿಯಲ್ಲಿದ್ದಿದ್ದರೆ... ೧೯೬೨-೬೪ ರ ಬರಗಾಲಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯ ಗ್ರಾಮೀಣ ಭಾರತಕ್ಕಿತ್ತು. ಆದರೆ ನೆಹರೂ ಪ್ರಣೀತ ಆರ್ಥಿಕನೀತಿ ಗ್ರಾಮೀಣ ಭಾರತವನ್ನು ನಜ್ಜು ಗುಜ್ಜು ಮಾಡುವ ಹಸಿರುಕ್ರಾಂತಿಗೆ ಮತ್ತು ಜಾಗತೀಕರಣಕ್ಕೆ ಪೀಠಿಕೆ ಆಯಿತು. ಹಸಿರುಕ್ರಾಂತಿ, ಅಭಿವೃದ್ಧಿ ಮತ್ತು ಜಾಗತೀಕರಣಗಳ ನಡುವೆಯೂ ಸಣ್ಣ ಪುಟ್ಟ ಅತಿವೃಷ್ಟಿ-ಅನಾವೃಷ್ಟಿಗಳಿಗೂ ಇಡೀ ಭಾರತ ತತ್ತರಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಪಾರಂಪರಿಕ ಕೃಷಿ ವಿಧಾನ ಮತ್ತು ಸಾಂಪ್ರದಾಯಿಕ ತಳಿಗಳ ಜಾಗದಲ್ಲಿ ಆಧುನಿಕ ಕೃಷಿಜ್ಞಾನ, ಅಧಿಕ ಇಳುವರಿಯ ಬೀಜಗಳು ಮತ್ತು ರಾಸಾಯನಿಕ ಗೊಬ್ಬರಗಳು ಬಾರದಿದ್ದರೆ ಹೆಚ್ಚುತ್ತಿದ್ದ ಜನಸಂಖ್ಯೆಗೆ ಆಹಾರ ಪೂರೈಸಲಾಗುತ್ತಿರಲಿಲ್ಲ ಎನ್ನುತ್ತಾರೆ ಡಾ.ಎಂ.ಎಸ್.ಸ್ವಾಮಿನಾಥನ್. ಕೃಷಿ ವಿಜ್ಞಾನಿಗಳು, ಯೋಜನೆಗಳನ್ನು

ರೂಪಿಸುವವರು ಕೂಡ ಇದೇ ಮಾತನ್ನು ಹೇಳುತ್ತಾರೆ. ಈ ಮಾತುಗಳಲ್ಲಿ ನಿಜಕ್ಕೂ ವೈಜ್ಞಾನಿಕ ಸತ್ಯಗಳಿವೆಯೆ? ಇಲ್ಲವೆ? ಈ ಪ್ರಶ್ನೆಗಳಿಗೂ ಈ ಅಧ್ಯಯನ ಉತ್ತರಗಳನ್ನು ಕಂಡುಕೊಳ್ಳಲು ಯತ್ನಿಸುತ್ತದೆ. ಪೂರ್ವಾಗ್ರಹಗಳಿಲ್ಲದೆ ದೇಶಿ ಕೃಷಿ ಜ್ಞಾನವನ್ನು ಮತ್ತು ಆಧುನಿಕ ಕೃಷಿ ವಿಜ್ಞಾನವನ್ನು ವೈಜ್ಞಾನಿಕ ಕಣ್ಣುಗಳಿಂದಲೇ ಪಾರದರ್ಶಕವಾಗಿ ನೋಡುವ ಕ್ರಮ ಈ ಅಧ್ಯಯನಕ್ಕೆ ಇದೆ.

ಅಧ್ಯಯನದ ವ್ಯಾಪ್ತಿ:

ಅಧ್ಯಯನದ ವ್ಯಾಪ್ತಿಯನ್ನು ನಮ್ಮ ಇಂದಿನ ಕರ್ನಾಟಕ ಪ್ರದೇಶಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ಹಳ್ಳಿಯಿಂದ ಹಳ್ಳಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ ಭಿನ್ನ ಭಿನ್ನವಾಗಿ ಸಾಗುತ್ತದೆ ನಮ್ಮ ಕೃಷಿ ಜ್ಞಾನ ಪರಂಪರೆ. 'ಯೂನಿವರ್ಸಲ್', 'ಯೂನಿಫಾರ್ಮಿಟಿ' ಪದಗಳನ್ನು ಕೃಷಿಗೆ ಅನ್ವಯಿಸಿಕೊಳ್ಳಲು ಆಗುವುದಿಲ್ಲ. ಒಂದು ಕಣದಂತೆ ಮತ್ತೊಂದು ಕಣ ಇಲ್ಲ. ಪ್ರತಿ ಇಂಚಿಂಚು ಜಾಗದಲ್ಲೂ ಭಿನ್ನತೆ ಎದ್ದು ಕಾಣುತ್ತದೆ. ಕರ್ನಾಟಕದ ೨೯೩೪೦ ಹಳ್ಳಿಗಳಲ್ಲಿ ಒಂದು ಹಳ್ಳಿ ಇದ್ದಂತೆ ಇನ್ನೊಂದು ಹಳ್ಳಿ ಇಲ್ಲ. ಒಂದು ಪಟ್ಟಣದಂತೆ ಇನ್ನೊಂದು ಪಟ್ಟಣ ಇಲ್ಲ. ಒಂದು ಕಡೆ ಬಿದ್ದ ಮಳೆ ಇನ್ನೊಂದು ಕಡೆಗೆ ಇಲ್ಲ. ಮಳೆಗಳ ಏರಿಳಿತ, ಗಾಳಿಯ ಚಲನೆ, ಬಿಸಿಲಿನ ಪ್ರಖರತೆ, ಮಣ್ಣಿನ ವಿನ್ಯಾಸ, ಜಲದ ಪರಿಮಾಣ, ನದಿ, ಬೆಟ್ಟ, ಗುಡ್ಡ, ಕಣಿವೆ, ಸಮುದ್ರಗಳಿರುವ ಕರ್ನಾಟಕದ ಬೇಸಾಯಪ್ರಪಂಚ ಅತ್ಯಂತ ವರ್ಣರಂಜಿತವೂ, ವೈವಿಧ್ಯವೂ, ಕುತೂಹಲಭರಿತವೂ, ಮಹತ್ವವೂ ಆದ ಸೊಬಗಿನಿಂದ ಕೂಡಿದೆ. ಹಳ್ಳಿಗಾಡಲ್ಲಿ ಹುಟ್ಟುವವರು ಕೃಷಿಯನ್ನು ವಿಶೇಷವಾಗಿ ಕಲಿಯುವ ಅಗತ್ಯವಿರಲಿಲ್ಲ. ಆಡುವ ವಯಸ್ಸಿನ ಮಕ್ಕಳಿಗೆ ತಮ್ಮ ಸುತ್ತಲಿನ ಜೀವನವೆ ಪಠ್ಯಗಳು. ಉಳುವುದು, ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು, ಕೊಯ್ಲು ಮಾಡುವುದು ಇವೆಲ್ಲವೂ ಉಸಿರಿನಷ್ಟೆ ಸಹಜವಾಗಿ ಲಭಿಸುವ ಜ್ಞಾನವಾಗಿತ್ತು.

ಇಂದು ಈ ಭವ್ಯ ಕೃಷಿ ಪರಂಪರೆಯ ಜ್ಞಾನ ಹೊಸ ಶಿಕ್ಷಣದ ಕಾರಣವಾಗಿಯೆ ನಾಶವಾಗುತ್ತಿರುವುದು ವಿಲಕ್ಷಣ ಸತ್ಯ. "ಹಸಿರು ಕ್ರಾಂತಿ" ಎಂಬ ಹೊಸ ಕೃಷಿಯ ಅವಲಂಬನೆಯಿಂದ ದೇಸೀ ಕೃಷಿ ಜ್ಞಾನ ನೇಪಥ್ಯಕ್ಕೆ ಸರಿದಿದೆ. ಸಾವಿರಾರು ವರ್ಷಗಳ ಪರಂಪರೆಯಿಂದ ಬಂದ ಜ್ಞಾನ ಕೇವಲ ೪೦ ವರ್ಷಗಳ ಹಸಿರುಕ್ರಾಂತಿಯ ಆಳ್ವಿಕೆಯಲ್ಲಿ ತತ್ತರಿಸಿರುವುದು ಸೋಜಿಗ.

೧೯೨೦ ರಿಂದ ೧೯೪೦ ರ ನಡುವೆ ಹುಟ್ಟಿದ ರೈತರು ಹಸಿರುಕ್ರಾಂತಿಯ ಕಾಲಕ್ಕೆ ಕ್ರಮವಾಗಿ ೪೯ ರಿಂದ ೨೯ ರ ವಯೋಮಾನದವರಾಗಿದ್ದರು. ಬಹುತೇಕ ಅವರೆಲ್ಲರೂ ೧೯೮೫ ನೇ ಇಸವಿಯ ಹೊತ್ತಿಗೆ "ಹಸಿರು ಕ್ರಾಂತಿ" ಆಮಿಷಗಳಿಗೆ ಬಲಿಯಾಗಿದ್ದರು. ೧೯೬೫ ರ ಆಸುಪಾಸಿನಲ್ಲಿ ಹುಟ್ಟಿ ಈಗ ೫೦ ರ

ಆಸುಪಾಸಿನಲ್ಲಿರುವ ಭಾರತೀಯ ರೈತರಿಗೆ ತಮ್ಮ ಹಳೆಯ ಕಾಲದ ಜ್ಞಾನವೂ ಹೊಸತರ ಜ್ಞಾನವೂ ಇದ್ದು – ಹಾಲಿ ಸಂದರ್ಭದಲ್ಲಿ ಒಟ್ಟು ಕೃಷಿಯೇ ನಷ್ಟವಾಗಿ ಪರಿಣಮಿಸಿರುವುದರಿಂದ ವ್ಯವಸಾಯದ ಆಸಕ್ತಿಯೇ ಕರಗಿಹೋಗಿದೆ. ನಮ್ಮ ಈ ೫೦ ರ ಆಸುಪಾಸಿನ ಕೃಷಿ ಜ್ಞಾನಿಗಳು ನಶಿಸಿಹೋದರೆ – ಅಲ್ಲಿ ದೇಶಿ ಕೃಷಿ ಜ್ಞಾನವನ್ನು ಆಳವಾಗಿ ಬಲ್ಲವರ ಸಂತತಿಯೇ ಇಲ್ಲದಂತಾಗುತ್ತದೆ. ಆಗ ಅಂಥ ಕೃಷಿಯನ್ನು ಹೊಸದಾಗಿಯೇ ಕಲಿಯಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ದೇಶೀ ಕೃಷಿ ಜ್ಞಾನದ ಅಧ್ಯಯನ ಮತ್ತು ಅದರ ದಾಖಲಾತಿ ಅತ್ಯಂತ ಅನಿವಾರ್ಯ ಮತ್ತು ಸಮಯೋಚಿತ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಹಾಲಿ ಕರ್ನಾಟಕದ ವಿಸ್ತೀರ್ಣ ೧,೯೦,೪೯೮ ಚದರ ಕಿಲೋಮೀಟರ್‌ಗಳು. ಇದು ದೇಶದ ಏಳನೇ ದೊಡ್ಡ ರಾಜ್ಯ. ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಕರ್ನಾಟಕದ ಪಾಲು ಶೇಕಡ ೫.೮೩ ರಷ್ಟು. ೨೯,೩೪೦ ಹಳ್ಳಿಗಳಿರುವ ಕರ್ನಾಟಕ ಆಡಳಿತದ ಅನುಕೂಲಕ್ಕಾಗಿ ೧೭೭ ತಾಲ್ಲೂಕುಗಳು, ೩೦ ಜಿಲ್ಲೆಗಳು, ನಾಲ್ಕು ರೆವಿನ್ಯೂ ವಿಭಾಗಗಳನ್ನು ಒಳಗೊಂಡಿದೆ. ೬.೩ ಕೋಟಿ ಇಲ್ಲಿನ ಪ್ರಜಾಬಾಹುಳ್ಯ. ಸಂಸ್ಕೃತಿಗೆ ಹೆಸರಾದ ನದಿಗಳು, ಬೆಟ್ಟಗುಡ್ಡಗಳು, ಸಮುದ್ರ ದಂಡೆ, ಬಯಲುಸೀಮೆ, ಗಿರಿಸೀಮೆ, ಗಿಡಸೀಮೆ, ಮಲೆನಾಡು, ಪಶ್ಚಿಮಘಟ್ಟ ಶ್ರೇಣಿಗಳು, ಪೂರ್ವದ ಬೆಟ್ಟ ಗುಡ್ಡ, ನೀಲಗಿರಿ ಜೀವ ಸಮುಚ್ಛಯ, ಅರಣ್ಯಗಳು, ಫಲವತ್ತಾದ ಭೂಮಿಯನ್ನೊಳಗೊಂಡಿರುವ ಕರ್ನಾಟಕದ ಮುಖ್ಯ ಕಸುಬು ಬೇಸಾಯ. ಏಷ್ಯಾ ಖಂಡದ ಚಿನ್ನದ ಕಣಜ ಕೂಡ ಕರ್ನಾಟಕವೆ. ಕೋಲಾರ ಮತ್ತು ರಾಯಚೂರು ಜಿಲ್ಲೆಗಳ ಚಿನ್ನದ ಗಣಿಗಳು ದೇಶದ ಒಟ್ಟು ಚಿನ್ನಕ್ಕೆ ಶೇಕಡ ೮೪ ರಷ್ಟು ಕೊಡುಗೆ ನೀಡಿದೆ. ಇಲ್ಲಿನ ತೇಗ, ಮತ್ತಿ, ಮತ್ತು, ಬೀಟೆ ಮತ್ತು ಶ್ರೀಗಂಧ ವಿಶ್ವ ಪ್ರಸಿದ್ಧಿ ಹೊಂದಿವೆ. ಸ್ವಾಭಾವಿಕವಾಗಿ ಅತ್ಯುತ್ಕೃಷ್ಟವಾದ ಶ್ರೀಗಂಧ ಬೆಳೆಯುವ ಈ ನಾಡನ್ನು 'ಶ್ರೀಗಂಧದ ನಾಡು, ಸಿರಿಗಂಧದ ನಾಡು' ಎಂದು ಕರೆಯುವುದು ಕೂಡ ವಾಡಿಕೆ. ಪಾರಂಪರಿಕ ರೇಷ್ಮೆ ಕೃಷಿಗೂ ಇದು ಹೆಸರುವಾಸಿಯಾಗಿದೆ.

ರಾಜ್ಯದ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದ ಕಡಲಕಿನಾರೆ (ಕರಾವಳಿ), ಉತ್ತರ ಪಶ್ಚಿಮಕ್ಕೆ ಗೋವ, ಪಶ್ಚಿಮದಲ್ಲಿ ಮಹಾರಾಷ್ಟ್ರ, ಪೂರ್ವ ದಿಕ್ಕಿನಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣ, ದಕ್ಷಿಣ ಪೂರ್ವದಲ್ಲಿ ತಮಿಳುನಾಡು, ದಕ್ಷಿಣ–ಪಶ್ಚಿಮದಲ್ಲಿ ಕೇರಳ ರಾಜ್ಯಗಳಿವೆ. ಉತ್ತರದಿಂದ ದಕ್ಷಿಣಕ್ಕೆ ೭೫೦ ಕಿ.ಮೀ. ಉದ್ದ, ಪಶ್ಚಿಮದಿಂದ ಪೂರ್ವಕ್ಕೆ ೪೦೦ ಕಿ.ಮೀ. ಅಗಲ ವಿಸ್ತೀರ್ಣವನ್ನು ಒಳಗೊಂಡಿದೆ. ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ದಾಖಲೆಯ ಉಷ್ಣಾಂಶ ೪೫.೬ ಡಿಗ್ರಿ ಸೆಲ್ಸಿಯಸ್ ಮೇ ೨೩, ೧೯೨೦ ರಲ್ಲಿ ರಾಯಚೂರಿನಲ್ಲಿ ದಾಖಲಾಗಿದೆ. ಅತ್ಯಂತ ಕಡಿಮೆ ಉಷ್ಣಾಂಶ ಆಗಸ್ಟ್ ೨, ೧೯೧೮ ರಂದು ಬೀದರ್‌ನಲ್ಲಿ ದಾಖಲಾಗಿದೆ. ರಾಜ್ಯದ ಅತ್ಯಂತ ಎತ್ತರ

ಪ್ರದೇಶ ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ – ಕುದುರೆಮುಖ ...ಸಮುದ್ರ ಮಟ್ಟದಿಂದ ೧೯೨೯ ಮೀಟರ್ (೬೩೨೯ ಅಡಿ) ಎತ್ತರದಲ್ಲಿದೆ ಮತ್ತು ಜೀವ ವೈವಿಧ್ಯತೆಗೆ ಹೆಸರಾಗಿದೆ.

ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಕೊಪ್ಪಳ, ಗದಗ, ಯಾದಗೀರ್, ಬಿಜಾಪುರ, ಬೆಳಗಾಂ, ಧಾರವಾಡ, ಹಾವೇರಿ, ಉತ್ತರಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ತುಮಕೂರು, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ ಇವು ರಾಜ್ಯದ ಮೂವತ್ತು ಜಿಲ್ಲೆಗಳು.

ಅಧ್ಯಯನದ ಅನುಕೂಲಕ್ಕಾಗಿ ಮಳೆ, ಹವಾಮಾನ, ಸಮುದ್ರದ ಮಟ್ಟ, ಭೂಮಿಯ ಮೇಲ್ಮೈ ಲಕ್ಷಣಗಳನ್ನು ವಿವರಿಸುವ 'ಹವಾಮಾನ ಆಧಾರಿತ ವ್ಯವಸಾಯ ವಲಯಗಳನ್ನು (AGRO CLAIMATIC ZONE) ಪರಿಗಣಿಸಲಾಗಿದೆ. ಹವಾಮಾನಾಧಾರಿತ ವ್ಯವಸಾಯ ವಲಯಗಳ ಪಟ್ಟಿ ಈ ಕೆಳಕಂಡಂತಿದೆ.

<u>ಕರ್ನಾಟಕದ ಹವಾಮಾನಾಧಾರಿತ ವ್ಯವಸಾಯ ವಲಯಗಳ ಪಟ್ಟಿ</u>

ಕ್ರಮ ಸಂಖ್ಯೆ	ವಲಯದ ಹೆಸರು	ಜಿಲ್ಲೆ & ತಾಲ್ಲೂಕುಗಳು	ಮಳೆಯ ಪ್ರಮಾಣ ಮಿ.ಮೀ.	ಸಮುದ್ರದ ಮಟ್ಟ	ಮಣ್ಣು
೧	೨	೩	೪	೫	೬
೧	ನೈಋತ್ಯ ಸಂಕ್ರಮಣ ವಲಯ (೭ ತಾಲ್ಲೂಕುಗಳು)	ಬೀದರ್ (೫) ಗುಲ್ಬರ್ಗ (೨)	೮೨೯.೫ ರಿಂದ ೯೧೯	ಬಹುತೇಕ ೮೦೦ ರಿಂದ ೯೦೦ ೪೫೦ ರಿಂದ ೮೦೦ ಕೆಲವು ತಾಲ್ಲೂಕುಗಳ ಕೆಲವು ಪ್ರದೇಶ	ಮಧ್ಯಮ ಕಪ್ಪು ಎರೆ ಮತ್ತು ಜೆಂಬಿಟ್ಟಿಗೆ ಮಣ್ಣು
೨	ನೈಋತ್ಯದ ಒಣ ವಲಯ (೧೧ ತಾಲ್ಲೂಕು)	ಗುಲ್ಬರ್ಗ (೮) ರಾಯಚೂರು (೩)	೬೩೩.೨೨ ರಿಂದ ೮೦೬.೬	೩೦೦ ರಿಂದ ೪೫೦ ಮೀಟರ್	ಆಳವಾದ ಕಪ್ಪು ಎರೆ ಮತ್ತು ಮಧ್ಯಮ ಕಪ್ಪು ಎರೆ ಮಣ್ಣು
೩	ಉತ್ತರ ಒಣ ವಲಯ	ಕೊಪ್ಪಳ–೪ ಗದಗ–೪ ಧಾರವಾಡ (೧) ಬೆಳಗಾಂ (೫)	೪೬೪.೫ ರಿಂದ ೭೮೫.೭	೪೫೦ ರಿಂದ ೮೦೦ (೨೬ ತಾಲ್ಲೂಕುಗಳು)	ಕಪ್ಪು ಎರೆ, ಸಾಧಾರಣ ಕಪ್ಪು ಮರಳು

		ಬಿಜಾಪುರ (೬) ಬಳ್ಳಾರಿ (೭) ದಾವಣಗೆರೆ (೧) ರಾಯಚೂರು (೨)		೮೦೦ ರಿಂದ ೯೦೦ ಉಳಿದ ತಾಲ್ಲೂಕುಗಳಲ್ಲಿ	ಮಿಶ್ರಿತ
೪	ಮಧ್ಯದ ಒಣ ವಲಯ	ಚಿತ್ರದುರ್ಗ–೬ ದಾವಣಗೆರೆ–೩ ತುಮಕೂರು–೬ ಹಾಸನ–೧ ಚಿಕ್ಕಮಗಳೂರು–೧	೪೫೫.೫ ರಿಂದ ೭೧೭.೪	೮೦೦ ರಿಂದ ೯೦೦ ಹೆಚ್ಚಿನ ಪ್ರದೇಶ ೪೫೦ ರಿಂದ ೮೦೦ (ಸ್ವಲ್ಪ ಪ್ರದೇಶ)	ಕೆಂಪು ಮಿಶ್ರಿತ ಹ್ಯೂಮಸ್, ಮರಳು ಮಿಶ್ರಿತ ಕೆಂಪು
೫	ಪೂರ್ವದ ಒಣ ವಲಯ ೨೪ ತಾಲ್ಲೂಕುಗಳು	ಬೆಂಗಳೂರು ಗ್ರಾಮೀಣ–೮ ಬೆಂಗಳೂರು (ನ)–೩ ಕೋಲಾರ (೧೧) ತುಮಕೂರು–೨	೬೭೯.೧ ರಿಂದ ೮೮೮.೯	೮೦೦ ರಿಂದ ೯೦೦ ೯೦೦ ರಿಂದ ೧೫೦೦	ಕೆಂಪು ಮಿಶ್ರಿತ, ಮರಳು ಗೋಡು ಮಣ್ಣು, ಜೆಂಬಿಟ್ಟಿಗೆ ಮಣ್ಣು
೬	ದಕ್ಷಿಣದ ಒಣ ಪ್ರದೇಶ ೧೮ ತಾಲ್ಲೂಕುಗಳು	ಮೈಸೂರು (೪) ಮಂಡ್ಯ (೭) ತುಮಕೂರು (೨) ಹಾಸನ (೧) ಚಾಮರಾಜನಗರ (೪)	೬೭೦.೬ ರಿಂದ ೮೮೮.೬	೮೦೦ ರಿಂದ ೯೦೦ ೯೦೦ ರಿಂದ ೧೫೦೦ ೪೫೦ ರಿಂದ ೮೦೦	ಕೆಂಪು ಮಿಶ್ರಿತ ಮರಳು, ಕಪ್ಪು ಗೋಡು ಹ್ಯೂಮಸ್ ಇರುವ ಮಣ್ಣು
೭	ದಕ್ಷಿಣ ಸಂಕ್ರಮಣ ವಲಯ	ಹಾಸನ (೪) ಚಿಕ್ಕಮಗಳೂರು (೧) ಶಿವಮೊಗ್ಗ (೩) ಮೈಸೂರು (೩) ದಾವಣಗೆರೆ (೨)	೬೭೦.೬ ರಿಂದ ೮೮೮.೬	೮೦೦ ರಿಂದ ೯೦೦ ೯೦೦ ರಿಂದ ೧೫೦೦ ೪೫೦ ರಿಂದ ೮೦೦	ಕೆಂಪು ಮಣ್ಣು ಮರಳು ಮಿಶ್ರಿತ ಗೋಡು, ಮರಳು ಮಿಶ್ರಿತ ಕೆಂಪು ಮಣ್ಣು
೮	ಉತ್ತರದ ಸಂಕ್ರಮಣ ವಲಯ	ಬೆಳಗಾಂ (೪) ಧಾರವಾಡ (೩) ಹಾವೇರಿ (೬) ಗದಗ (೧)	೮೧೮ ರಿಂದ ೧೩೦೩.೨೦	೮೦೦ ರಿಂದ ೯೦೦ ೪೫೦ ರಿಂದ ೮೦೦	ಕಡಿಮೆ ಆಳದ ಕಪ್ಪು ಮಣ್ಣು, ಗೋಡು ಕೆಂಪು ಮಣ್ಣು
೯	ಘಟ್ಟ ಶ್ರೇಣಿ HILLY ZONE ೨೨ ತಾಲ್ಲೂಕು	ಉತ್ತರಕನ್ನಡ (೬) ಬೆಳಗಾಂ (೧) ಧಾರವಾಡ (೧) ಹಾವೇರಿ (೧) ಶಿವಮೊಗ್ಗ (೪) ಚಿಕ್ಕಮಗಳೂರು (೫) ಕೊಡಗು (೪) ಹಾಸನ (೧)	೯೦೪.೪ ರಿಂದ ೩೬೯೫.೧	೮೦೦ ರಿಂದ ೯೦೦ ಹೆಚ್ಚಿನ ಪ್ರದೇಶ ೯೦೦ ರಿಂದ ೧೫೦೦ (೪ ತಾಲ್ಲೂಕು) ೪೫೦ ರಿಂದ ೮೦೦ (೬ ತಾಲ್ಲೂಕು)	ಕೆಂಪು ಮಣ್ಣು, ಮರಳು ಮಿಶ್ರಿತ ಗೋಡು

೧೦	ಕರಾವಳಿ ವಲಯ	ಉಡುಪಿ (೩) ದಕ್ಷಿಣ ಕನ್ನಡ (೫) ಉತ್ತರ ಕನ್ನಡ (೫)	೩೦೧೧.೯ ರಿಂದ ೪೬೯೪.೪೦	೩೦೦ ಮೀಟರ್‌ಗಿಂತ ಕಡಿಮೆ ಇರುವ ಹೆಚ್ಚಿನ ಪ್ರದೇಶ ೪೫೦ ರಿಂದ ೮೦೦ ಮೀಟರ್‌ವರೆಗೆ ಕಡಿಮೆ ಪ್ರದೇಶ	ಕೆಂಪು ಜಂಬಿಟ್ಟಿಗೆ

ಹವಾಮಾನ ಆಧಾರಿತ ಕೃಷಿ ವಲಯಗಳಿಗೆ ಭೌಗೋಳಿಕವಾಗಿ ಒಳಪಡುವ ತಾಲ್ಲೂಕುಗಳು/ ಪ್ರದೇಶಗಳು

ಕೃಷಿ ವಲಯ	ತಾಲ್ಲೂಕುಗಳ ಸಂಖ್ಯೆ	ತಾಲ್ಲೂಕುಗಳ ಹೆಸರು
I	೭	ಅಳಂದ, ಬಾಲ್ಕಿ, ಬಸವಕಲ್ಯಾಣ, ಬೀದರ್, ಚಿಂಚೋಳಿ, ಹುಮ್ನಾಬಾದ್, ಔರಾದ್
II	೧೧	ಅಫಜಲ್‌ಪುರ, ಚಿತ್ತಾಪುರ, ಗುಲ್ಬರ್ಗ, ಜೇವರ್ಗಿ, ಸೇಡಂ, ಶಹಾಪುರ, ಯಾದಗೀರ್, ಸುರಪುರ, ರಾಯಚೂರು, ದೇವದುರ್ಗ, ಮಾನ್ವಿ
III	೩೫	ಗಂಗಾವತಿ, ಕೊಪ್ಪಳ, ಕುಷ್ಟಗಿ, ಲಿಂಗಸುಗೂರು, ಸಿಂಧನೂರು, ಯಲಬುರ್ಗ, ಬಾದಾಮಿ, ಬಾಗಲಕೋಟೆ, ಬಾಗೇವಾಡಿ, ಬೀಳಗಿ, ಬಿಜಾಪುರ, ಹುನಗುಂದ, ಇಂಡಿ, ಜಮಖಂಡಿ, ಮುಧೋಳ್, ಮುದ್ದೇಬಿಹಾಳ್, ಸಿಂಧಗಿ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು, ಸಿರಗುಪ್ಪ, ರೋಣ, ನವಲಗುಂದ, ನರಗುಂದ, ಗದಗ, ಮುಂಡರಗಿ, ರಾಮದುರ್ಗ, ಗೋಕಾಕ್, ರಾಯ್‌ಭಾಗ್, ಸವದತ್ತಿ ಮತ್ತು ಅಥಣಿ
IV	೧೭	ಚಳ್ಳಕೆರೆ, ಚಿತ್ರದುರ್ಗ, ದಾವಣಗೆರೆ, ಹರಿಹರ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ, ಜಗಳೂರು, ಮೊಳಕಾಲ್ಮೂರು, ಅರಸೀಕೆರೆ, ಕಡೂರು, ಮಧುಗಿರಿ, ಪಾವಗಡ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ಶಿರಾ

		ಮತ್ತು ತಿಪಟೂರು.
V	೨೪	ಗುಬ್ಬಿ, ತುಮಕೂರು, ಆನೇಕಲ್, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚನ್ನಪಟ್ಟಣ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಕನಕಪುರ, ಮಾಗಡಿ, ನೆಲಮಂಗಲ, ರಾಮನಗರ, ಬಾಗೆಪಲ್ಲಿ, ಬಂಗಾರಪೇಟೆ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರು, ಕೋಲಾರ, ಮಾಲೂರು, ಮುಳಬಾಗಿಲು, ಶಿಡ್ಲಘಟ್ಟ, ಶ್ರೀನಿವಾಸಪುರ
VI	೧೯	ಕೆ.ಆರ್.ನಗರ, ಟಿ.ನರಸೀಪುರ, ಮೈಸೂರು, ಕೊಳ್ಳೇಗಾಲ, ನಂಜನಗೂಡು, ತುರುವೇಕೆರೆ, ಕುಣಿಗಲ್, ನಾಗಮಂಗಲ, ಶ್ರೀರಂಗಪಟ್ಟಣ, ಮಳವಳ್ಳಿ, ಮದ್ದೂರು, ಮಂಡ್ಯ, ಪಾಂಡವಪುರ, ಕೆ.ಆರ್.ಪೇಟೆ, ಚನ್ನರಾಯಪಟ್ಟಣ, ಹಾಸನ, ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ.
VII	೧೩	ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ, ಹೊಳೆನರಸೀಪುರ, ಆಲೂರು, ಅರಕಲಗೂಡು, ತರೀಕೆರೆ, ಭದ್ರಾವತಿ, ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ, ಚನ್ನಗಿರಿ.
VIII	೧೪	ಹುಕ್ಕೇರಿ, ಚಿಕ್ಕೋಡಿ, ಬೈಲಹೊಂಗಲ, ಬೆಳಗಾಂ, ಹಾವೇರಿ, ಶಿಗ್ಗಾಂವ್, ಶಿರಹಟ್ಟಿ, ಕುಂದಗೋಳ, ಸವಣೂರು, ಹುಬ್ಬಳ್ಳಿ, ಧಾರವಾಡ, ಬ್ಯಾಡಗಿ, ಹಿರೇಕೆರೂರು, ರಾಣಿಬೆನ್ನೂರು
IX	೨೨	ಶಿರಸಿ, ಸಿದ್ಧಾಪುರ, ಯಲ್ಲಾಪುರ, ಸೂಪ, ಹಳಿಯಾಳ, ಮುಂಡಗೋಡ, ಖಾನಾಪುರ, ಸೊರಬ, ಹೊಸನಗರ, ಸಾಗರ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಮೂಡಿಗೆರೆ, ನರಸಿಂಹರಾಜಪುರ, ಚಿಕ್ಕಮಗಳೂರು, ಕಲಘಟಗಿ, ಹಾನಗಲ್, ಸಕಲೇಶಪುರ, ವಿರಾಜಪೇಟೆ, ಸೋಮವಾರಪೇಟೆ, ಮಡಿಕೇರಿ
X	೧೩	ಕಾರವಾರ, ಕುಮಟ, ಹೊನ್ನಾವರ, ಭಟ್ಕಳ, ಅಂಕೋಲ, ಬಂಟ್ವಾಳ, ಉಡುಪಿ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ, ಮಂಗಳೂರು, ಪುತ್ತೂರು, ಸುಳ್ಯ

ಹವಾಮಾನ, ಭೂ ಮೇಲ್ಮೈಲಕ್ಷಣ, ಮಳೆಯ ಪ್ರಮಾಣ, ಸಮುದ್ರದ ಮೇಲಿನ ಮಟ್ಟ ಇತ್ಯಾದಿ ಕರಾರುವಕ್ಕಾದ ಮಾಹಿತಿಗಳು ರೈತರಿಗೆ, ಸಂಶೋಧಕರಿಗೆ, ನೀತಿ

ನಿರೂಪಕರಿಗೆ, ಮಾರುಕಟ್ಟೆ ವಿನ್ಯಾಸಕಾರರಿಗೆ, ಪರಿಸರ ಸಂರಕ್ಷಕರಿಗೆ, ಸಂಸ್ಕೃತಿ ಅಧ್ಯಯನಕಾರರಿಗೆ ನೆರವಾಗುತ್ತವೆ.

ಮಾನ್ಸೂನ್ ಮಾರುತಕ್ಕೂ ನಮ್ಮ ವ್ಯವಸಾಯ ಜೀವನಕ್ಕೂ ಅಗಾಧವಾದ ಸಂಬಂಧವಿದೆ. ಬೇಸಾಯವೆಂಬುದು 'ಮಾನ್ಸೂನ್ ಜೊತೆಗಿನ ಜೂಜಾಟ' ಎಂಬ ಸಾರ್ವತ್ರಿಕ ಮಾತೊಂದು ಚಾಲ್ತಿಯಲ್ಲಿದೆ. ಈ ಅಧ್ಯಯನವು ಮಳೆ ಮಾರುತ, ಮಳೆ ನಕ್ಷತ್ರ, ಋತುಮಾನ, ಮಳೆ ಪಂಚಾಂಗ ಇತ್ಯಾದಿಗಳೆಲ್ಲವನ್ನು ಪಾರದರ್ಶಕವಾಗಿ ಪರಿಶೀಲಿಸುತ್ತದೆ. ಕೃಷಿ ಮೂಲದ ವೈವಿಧ್ಯಮಯ ಸಂಸ್ಕೃತಿ, ಹಬ್ಬ, ಆಚರಣೆ, ಜಾನಪದ ಒಗಟು, ಗಾದೆ, ಲಾವಣಿಗಳು ಮತ್ತು ಜನಪದರ ಅನುಭವಗಳು, ನಂಬಿಕೆಗಳು ಇತ್ಯಾದಿಗಳೆಲ್ಲವೂ ಈ ಅಧ್ಯಯನ ತನ್ನ ವ್ಯಾಪ್ತಿಯ ತೆಕ್ಕೆಗೆ ತೆಗೆದುಕೊಂಡಿದೆ. ಪಶುಸಂಗೋಪನೆ, ಬೆಳೆ ವೈವಿಧ್ಯ, ಕೊಯ್ಲೋತ್ತರ ಧಾನ್ಯ ಸಂರಕ್ಷಣೆ, ಆಚರಣೆಗಳ ನಿರ್ವಹಣೆ, ಮೂಲಿಕ ಜ್ಞಾನ, ಆರೋಗ್ಯ ಸಂರಕ್ಷಣೆಯ ಕುರಿತಾಗಿ ದೇಸಿ ಜ್ಞಾನದ ಸಿದ್ಧತೆ, ಗ್ರಾಮೀಣ ಅಡುಗೆಗಳ ವೈವಿಧ್ಯತೆ ಇತ್ಯಾದಿಗಳೆಲ್ಲವೂ ಈ ಅಧ್ಯಯನ ವ್ಯಾಪ್ತಿಗೆ ಬರುತ್ತವೆ.

ಹಸಿರು ಕ್ರಾಂತಿಗೂ ಮುಂಚಿನ ದೇಸೀ ಕೃಷಿ ಜ್ಞಾನ ಪರಂಪರೆ ಮತ್ತು ಹಾಲಿ ಚಾಲ್ತಿಯಲ್ಲಿರುವ ದೇಸಿ ಕೃಷಿ ಜ್ಞಾನ ಪರಂಪರೆಗಳನ್ನು ಈ ಅಧ್ಯಯನ ಒಳಗೊಂಡಿರುತ್ತದೆ.


ಅಧ್ಯಯನ ವಿಧಾನ

ಬೇಸಾಯ ಕುಟುಂಬದ ಹಿನ್ನೆಲೆಯಿಂದ ಬಂದ ನನಗೆ, ಬೇಸಾಯ ಜೀವನದಲ್ಲಾಗುತ್ತಿರುವ ಪಲ್ಲಟಗಳ ಅರಿವಿದೆ. ನಮ್ಮ ಪರಂಪರೆಯಿಂದ ಬಂದ ದೇಸಿ ದೃಷಿ ಜ್ಞಾನದೊಂದಿಗೆ ಪ್ರಕೃತಿಯನ್ನರಿತು ಬೇಸಾಯ ಮಾಡುವ ವಿಧಾನದಲ್ಲಿ ಸ್ವತ: ತೊಡಗಿಸಿಕೊಂಡಿರುವೆ. ಹಸಿರುಕ್ರಾಂತಿ, ಆಧುನಿಕ ಕೃಷಿ ವಿಜ್ಞಾನದ ಪರಿಣಾಮಗಳು ನಮ್ಮ ಸುತ್ತಲ ಪರಿಸರದಲ್ಲಿ ಪ್ರತಿ ನಿತ್ಯವು ಅನುಭವಕ್ಕೆ ಬರತೊಡಗಿವೆ. ಹಾಗೆಯೇ ಚಾಲ್ತಿಯಲ್ಲಿರುವ ಸಾವಯವ ಕೃಷಿಯ ಕ್ಷೇತ್ರಗಳೊಂದಿಗೂ ಇಟ್ಟುಕೊಂಡ ಸಂಪರ್ಕದಿಂದಾಗಿ ವಾಸ್ತವ ದೃಷ್ಟಿಯಿಂದ ಎಲ್ಲವನ್ನು ಕಾಣಲು ಸಾಧ್ಯವಾಗಿದೆ. ವೃಕ್ಷಾಯುರ್ವೇದದ ಕೃಷಿ, ಬಯೋಡೈನಾಮಿಕ್ ಕೃಷಿಯ ಪ್ರಾತ್ಯಕ್ಷಿಕೆಗಳನ್ನು ನೋಡಿ ಅವುಗಳಲ್ಲಿ ವೈಜ್ಞಾನಿಕ ಸಮರ್ಥನೆಗಳಿವೆಯೇ? ಇಲ್ಲವೆ? ಪರಿಶೀಲಸಿದ್ದೇನೆ. ಕರ್ನಾಟಕದಲ್ಲಿ ಕೃಷಿ ವಿಜ್ಞಾನಿ ಸುಭಾಷ್ ಪಾಳೇಕರ್ ನೈಸರ್ಗಿಕ ಕೃಷಿ ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಂತ ನನಗೆ ಈ ಎಲ್ಲವುಗಳ ತಿಳುವಳಿಕೆ ಅತ್ಯಂತ ಅಗತ್ಯವಾಗಿತ್ತು. ಹಾಗೆಯೇ ಇಲ್ಲಿ ಸಹಜ ಕೃಷಿಯ ಹರಿಕಾರರೆಂದು ಜಾಗತಿಕ ಮಟ್ಟದಲ್ಲಿ ಖ್ಯಾತರಾಗಿರುವ ಜಪಾನ್ ದೇಶದ ಮಸನೊಬು ಫುಕುವೊಕಾ.

ಹಸಿರು ಕ್ರಾಂತಿಯ ರಾಸಾಯನಿಕ ಕೃಷಿಯ ದುಷ್ಪರಿಣಾಮಗಳಿಂದ ದಿಗಿಲಾಗಿರುವ ನಮ್ಮ ಜನ ಪ್ರಾಚೀನವಾದುದೆಲ್ಲ ಶ್ರೇಷ್ಠವಾದದ್ದು ಎಂದು ಪ್ರಚಾರ ಮಾಡುವವರ ಮಾತಿಗೆ ಶರಣಾಗುವುದನ್ನು ನಾನು ನೋಡಿರುವೆ. ಈ ಹಿನ್ನೆಲೆಯಲ್ಲಿ ವೃಕ್ಷಾಯುರ್ವೇದ ಕೃಷಿಯ ಸಂಗತಿಗಳನ್ನು ತುಸು ವಿವರವಾಗಿ ವೈಜ್ಞಾನಿಕವಾಗಿ ನೋಡಲು ಪ್ರಯತ್ನಿಸಲಾಗಿದೆ.

ದೇಸಿ ಜ್ಞಾನ ಪರಂಪರೆಯಲ್ಲಿ ಕಾಣಬರುವ ಆಳವಾದ ದಾರ್ಶನಿಕತೆ ಒಂದು ಬಗೆಯಲ್ಲಿ ಆಧ್ಯಾತ್ಮಿಕ ಕೃಷಿಯಾಗಿ ನಮ್ಮ ನಾಡಿನ ಮಹಾನ್ ದಾರ್ಶನಿಕ ಅಲ್ಲಮ ಪ್ರಭುಗಳ ವಚನಗಳೊಂದಿಗೆ ಸಾಮೀಪ್ಯತೆ ಬಯಸುತ್ತದೆ. ನಮ್ಮ ಹಿರೀಕರ ಬೇಸಾಯ ಆಧಾರಿತ ಜೀವನ ದರ್ಶನವನ್ನು ಅವರ ವಚನ ದರ್ಶನಗಳೊಂದಿಗೆ ಕಾಣಲು ಯತ್ನಿಸಲಾಗಿದೆ.

ಬೇಸಾಯಕ್ಕೆ ಸಂಬಂಧಿಸಿದಂತೆ ಅಂಕಿ ಅಂಶಗಳು, ಮಾಹಿತಿಗಳು ಹೇರಳವಾಗಿದ್ದರೂ, ಅವನ್ನು ಹೆಚ್ಚು ಬಳಸದೆ ಉದ್ದೇಶ ಮತ್ತು ಮಹತ್ವವನ್ನು ಮಂಡಿಸುವ ಕ್ರಮಕ್ಕೆ ಒತ್ತು ನೀಡಲಾಗಿದೆ. ದೇಸೀಯವಾದ ಈ ಜ್ಞಾನ ದೃಷ್ಟಿಗಳನ್ನು ವಿವೇಚಿಸಲು ಬೇಕಾದ ಕಾಲ, ಸನ್ನಿವೇಶಗಳು, ಪ್ರಯೋಗಗಳು ಇಲ್ಲಿ ಹೆಚ್ಚಾಗಿ ಒದಗಿ ಬಂದಿವೆ. ಎಲ್ಲವನ್ನೂ ವೈಜ್ಞಾನಿಕ ಕ್ರಮ ಅನುಸರಿಸಿಯೇ ನೋಡಲಾಗಿದೆ.



ಕೊನೆ ಟಿಪ್ಪಣಿ:

೧) ವೆಬ್‌ಸ್ಟೇರ್ ಡಿಕ್ಷನರಿ ಪಬ್ಲಿಷ್ಡ್ ಟ್ರೈಡೆಂಟ್ ಇಂಟರ್‌ನ್ಯಾಷನಲ್–ಮೇ–೨೦೦೩

ಅಧ್ಯಾಯ – ೨

ವ್ಯವಸಾಯದ ಉಗಮ, ಬೆಳವಣಿಗೆ ಮತ್ತು ವಿಕಾಸ

ಸೃಷ್ಟಿ ತಾನು ಸೃಷ್ಟಿಸಿದ ಪ್ರತಿ ಜೀವಿಗೂ ತಾನೇ ಅನ್ನವನ್ನು ಸೃಷ್ಟಿಸಿದೆ. ಪೃಥ್ವಿಯ ಮೇಲೆ ಮೊಟ್ಟ ಮೊದಲು ಕಾಣಿಸಿಕೊಂಡ ಜೀವಿ ವೈರಸ್. ಇದು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಇದು ನೀರ ಗರ್ಭದಲ್ಲಿ ಜನಿಸಿತು. ಆನಂತರ ಶೈವಲಗಳು, ತದ ನಂತರ ಹಸಿರು ನೀಲಿ ಪಾಚಿ (ಆಲ್ಗೆ) ಎಂದು ವಿಜ್ಞಾನ ಹೇಳುತ್ತದೆ. ವಾಸ್ತವವಾಗಿ ಮೊದಲ ಜೀವಿ ಜನಿಸುವ ಎಷ್ಟೋ ಲಕ್ಷ ಕೋಟಿ ವರ್ಷಗಳ ಮುಂಚೆಯೇ ಇಲ್ಲಿ ಬೇಸಾಯ ಅಥವಾ ವ್ಯವಸಾಯ ಆರಂಭವಾಗಿದೆ. 'ಅನ್ನ' ಅಂದರೆ ನಾವು ತಿನ್ನುವ ಅನ್ನ ಮಾತ್ರವಲ್ಲ; ಗಿಡ, ಮರ, ಪ್ರಾಣಿ–ಪಕ್ಷಿಗಳೂ ಕೂಡ ತಿನ್ನುವ ಅನ್ನ. ಈ ಅನ್ನ ನಿರ್ಮಾಣ ಮಾಡುವ ಕಾಯಕ ಆಯಾ ಜೀವಿಗಳು ಹುಟ್ಟುವ ಎಷ್ಟೋ ಲಕ್ಷ ಕೋಟಿ ಸಾವಿರ ವರ್ಷಗಳ ಮುಂಚೆಯೇ ಬೇಸಾಯ ಶುರುವಾಗಿದೆ. ಭೂಮಿಗೆ ಬಿದ್ದ ಬೀಜ ಚಿಗುರೊಡೆದ ಮೇಲೆ ಅದಕ್ಕೆ ಬೇರೆ ಆಯ್ಕೆಯೇ ಇಲ್ಲ. ಅದು ಅಲ್ಲಿಯೇ ಬೆಳೆಯಬೇಕು. ಅದಕ್ಕಾಗಿ ನಿಸರ್ಗ ಅದು ನಿಂತಲ್ಲಿಯೇ ಅನ್ನ ಸರಬರಾಜಿನ ವ್ಯವಸ್ಥೆ ಮಾಡಿದೆ. ಅದು ಅಲ್ಲಿಯೇ ಜೀವಿಸಿ, ಸತ್ತು, ಇತರರ ಪಾಲಿಗೂ ಅದು ಅನ್ನವಾಗುವ ಭಾಗ್ಯವನ್ನು ಸೃಷ್ಟಿಯೇ ಕಲ್ಪಿಸಿದೆ. ಆದಾಗ್ಯೂ ಅದು ಹೂ ಬಿಟ್ಟು, ಕಾಯಾಗಿ, ಮಾಗಿದ ನಂತರ ಅದರ ಬೀಜಗಳು ಇತರ ಪ್ರಾಣಿ ಪಕ್ಷಿಗಳ ಆಹಾರವಾಗಿ, ಎತ್ತಲಿಂದೆತ್ತವಾದರೂ ಸಾಗಿ ಎಲ್ಲಿ ಅವಕಾಶ ಸಿಗಬಹುದೋ ಅಲ್ಲೆ ಮತ್ತೆ ಹುಟ್ಟಲೂಬಹುದು, ಅದರ ಬೀಜಗಳು ಸೃಷ್ಟಿಯ ಕೃಪೆಯಿಂದ ಗಾಳಿಯಲ್ಲಿ ಹಾರಿ, ತೇಲಿ ಹೋಗಿ ಆಯ್ಕೆಯ ಸ್ವಾತಂತ್ರ್ಯ ಪಡೆದು ಹದ, ಅವಕಾಶ ಸಿಕ್ಕ ಕೂಡಲೇ ಆವಿರ್ಭವಿಸಬಹುದು. ಅಲ್ಲಿಯೂ ಕೂಡ ಅದಕ್ಕೆ ನಿಸರ್ಗವೆ ಅನ್ನ ನಿರ್ಮಾಣ ಮಾಡಿದೆ. ಇದೂ ಕೂಡ ಬೇಸಾಯವೆ. ಮೀನುಗಳು ಸೃಷ್ಟಿಯಾಗುವ ಮುಂಚೆಯೇ ಇಲ್ಲಿ ಸಮುದ್ರ, ತೊರೆ, ಕೆರೆ, ಹಳ್ಳಗಳೆಲ್ಲ ತುಂಬಿ ನಿಂತಿವೆ. ಇದು ಕೂಡ ವ್ಯವಸಾಯವೆ. ಡೈನೋಸಾರಸ್‌ನಂಥ ಮಹೋರಗಗಳು ಇಲ್ಲಿ ಹಾಜರಾಗಲು ಬೇಕಾದ ವ್ಯವಸ್ಥೆಯೂ ಕೂಡ ಬೇಸಾಯವೆ. ಹೀಗಾಗಿ ಬೇಸಾಯದ ಅರ್ಥ ನಾವು ಅಂದುಕೊಂಡಿರುವ ಮಟ್ಟಿಗೆ ಸೀಮಿತವಲ್ಲ, ಅದಕ್ಕೊಂದು ವಿಸ್ತೃತವೂ, ಬಹುರೂಪಿಯೂ, ಅನಂತವೂ ಆದ ಸ್ವರೂಪವಿದೆ. ಹೀಗಾಗಿ ಬೇಸಾಯವೆಂಬುದು ಕೇವಲ ಹತ್ತು ಸಾವಿರ ವರ್ಷಗಳಿಂದೀಚೆಗೆ ಶುರುವಾದುದಲ್ಲ. ಅದು ಅನಾದಿ, ಅನಾದಿಗಳೆಲ್ಲದರ ಅನಾದಿ. ಒಂದು ಅದ್ಭುತವೂ, ಕೌಶಲ್ಯಪೂರ್ಣವೂ, ಪೂರ್ಣ ಪ್ರಜ್ಞಾ ಪರಿಣತವೂ ಆದ ಬೇಸಾಯಗಾರ ನಿಸರ್ಗ. ತಾನು ಸೃಷ್ಟಿಸಿದ ಪ್ರತಿಯೊಂದಕ್ಕೂ, ಪ್ರತಿಯೊಂದೂ ಅನ್ನ. ಅದು ಇಲ್ಲಿಯೇ ಹುಟ್ಟಬೇಕು, ಇಲ್ಲಿಯೇ ಬಾಳಬೇಕು, ಇಲ್ಲಿಯೇ ಸಾಯಬೇಕು. ಸತ್ತು

ಅನ್ನವಾಗಲೇಬೇಕು. ಇದು ನಿಯಮ. ಇದು ಜೀವನದ ಆಶೆ, ಹೋರಾಟ, ವಿರಕ್ತಿ, ಮೋಕ್ಷ ಎಲ್ಲವೂ ಹೌದು. ಹೀಗಾಗಿಯೇ ಆರಂಭದಲ್ಲಿ ಆರಂಭವನ್ನು 'ಸಚ್ಚಿದಾನಂದ ಸ್ವರೂಪ' ಎಂದದ್ದು.

ಆಗಮಿಸಿದ ಪ್ರತಿಯೊಂದೂ ನಿರ್ಗಮಿಸಲೇಬೇಕು ಎಂಬುದು ನಿಜ ಸೃಷ್ಟಿಯ ನಿಯಮ. ಯಾವ ಮೂಲಗಳಿಂದ ಜೀವ 'ಕಾಯ'ವಾಗಿ ರೂಪುಗೊಂಡಿತ್ತೊ ಮತ್ತೆ ಅದು ಅದೇ ಮೂಲಗಳಿಗೆ ಹಿಂದಿರುಗಲೇಬೇಕು. ಗಾಳಿ, ನೀರು, ಬೆಂಕಿ, ಭೂಮಿ, ಆಕಾಶ ಇತ್ಯಾದಿ "ಅನ್ಯಥಾ ಶರಣಂ ನಾಸ್ತಿ" ಇಲ್ಲಿ ಲಾಭ-ನಷ್ಟಗಳ ವ್ಯವಹಾರವೇ ಇಲ್ಲ. ಎಲ್ಲವೂ ತಥಾ ಕಥಿತ!

ಹೀಗಾಗಿ ನಿಜ 'ಆರಂಭ' ಅಥವಾ ಬೇಸಾಯ ಕ್ರಮವನ್ನು ಸೃಷ್ಟಿ ಶುರುವಾಗುವ ಮುಂಚಿನ ಬೇಸಾಯದಿಂದಲೇ ಆರಂಭಿಸಬೇಕು. ಇಷ್ಟಾಗಿಯೂ ಮಾನವನು ತನಗಾಗಿ ಬೆಳೆ ಬೆಳೆಯುವುದಕ್ಕೆ ಶುರು ಮಾಡಿದ್ದನ್ನು ಖಚಿತ ಪುರಾವೆಗಳ ಮೂಲಕ ಹುಡುಕಾಡಬೇಕು. ನೇಗಿಲ ಉಗಮವೇ ವ್ಯವಸ್ಥಿತ ವ್ಯವಸಾಯದ ಪ್ರಪ್ರಥಮ ಕುರುಹು. ನೇಗಿಲಿಗೂ ಮುಂಚೆ ಶಿಲಾಯುಧಗಳು, ಮರದ ಕಟ್ಟಿಗೆ, ಕೋಲುಗಳು, ಉಪಕರಣಗಳಾಗಿ ಬಳಕೆಯಾಗಿವೆ.

ಖಭೌತ ವಿಜ್ಞಾನಿಗಳ ಪ್ರಕಾರ ಈ ಭೂಮಿ ಸೃಷ್ಟಿಯಾಗಿ ೪.೬ ಬಿಲಿಯನ್ (೪,೬೦೦,೦೦೦,೦೦೦) ವರ್ಷಗಳಾಗಿವೆ. ಅಂದರೆ ನಾಲ್ಕು ಸಾವಿರದ ಆರುನೂರು ಲಕ್ಷ ಕೋಟಿ ವರ್ಷಗಳು. ಇಷ್ಟು.....ಲಕ್ಷ ಕೋಟಿ ವರ್ಷಗಳ ಭೂಮಿಯ ಆಯುರ್ ಮಾನದಲ್ಲಿ ಉದಯಿಸಿದ ಜೀವಿಗಳ ಚಿತ್ರಣವನ್ನು ಸರಳವಾಗಿ ಅರ್ಥೈಸಿಕೊಳ್ಳಲು ಈ ಕೆಳಗಿನ ಮಾನದಂಡವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಪ್ರತಿ ಸೆಕೆಂಡಿಗೆ ಎಷ್ಟು ಭೂ ವರ್ಷಗಳು?

೧ ದಿನ = ೨೪ ಗಂಟೆಗಳು


೧ ಗಂಟೆ = ೬೦ ನಿಮಿಷಗಳು

೧ ನಿಮಿಷ = ೬೦ ಸೆಕೆಂಡುಗಳು

ಒಂದು ದಿನದಲ್ಲಿರುವ ಸೆಕೆಂಡುಗಳು

=೨೪ x ೬೦ x ೬೦

= ೮೬,೪೦೦



ಭೂಮಿಯ ವಯಸ್ಸು – ೪.೬ ಬಿಲಿಯನ್ (೪,೬೦೦,೦೦೦,೦೦೦) ವರ್ಷಗಳು

೮೬೪೦೦ ಸೆಕೆಂಡುಗಳು = ೪,೬೦೦,೦೦೦,೦೦೦

೧ ಸೆಕೆಂಡು – ೪,೬೦,೦೦೦,೦ / ೮೬೪

ಪ್ರತಿ ಒಂದು ಸೆಕೆಂಡು – ೫೩.೨೩ ವರ್ಷಗಳು

ಈಗ ಭೂಮಿಯ ಈವರೆಗಿನ ವಯಸ್ಸನ್ನು ಒಂದು ದಿನದ ಕಾಲಕ್ಕೆ ಮಾರ್ಪಡಿಸಿಕೊಳ್ಳೋಣ. ಒಂದು ದಿನದ ೨೪ ಗಂಟೆಯ ಅವಧಿಯಲ್ಲಿ ಜರುಗಿರಬಹುದಾದ ಘಟನಾವಳಿಗಳು ಇಂತಿವೆ.

ರಾತ್ರಿಯ ೧೨ ಗಂಟೆಗೆ ಭೂಮಿ ಉದಯಿಸಿತೆಂದು ಭಾವಿಸಿದರೆ ಬೆಳಗಿನ ಜಾವ ೪ ಗಂಟೆಯ ಹೊತ್ತಿಗೆ ಜೀವಾಂಕುರವಾಗಿರಬಹುದು. ಅಂದರೆ ಭೂಮಿ ಹುಟ್ಟಿದ ೭ ಕೋಟಿ ೬೬ ಲಕ್ಷದ, ೫೧ ಸಾವಿರದ ೨೦೦ ವರ್ಷಗಳ ತರುವಾಯ ಮೊಟ್ಟ ಮೊದಲ ಜೀವಾಂಕುರ ! ಇದಕ್ಕೆ ಪುರಾವೆ ಬೆಳಗಿನ ೫.೩೦ ಗಂಟೆಗೆ ಸಿಕ್ಕಿರುವ ಕುರುಹುಗಳು. ಆನಂತರ ೬ ಗಂಟೆಯಿಂದ ಮಧ್ಯಾಹ್ನ ೧.೫೨ ರವರೆಗೆ ಕೇವಲ ಏಕಕೋಶ ಜೀವಿಗಳು ಜೀವಿಸುತ್ತಿರಬೇಕು. ಇವು ಬಹುತೇಕ ಸಾಗರ ಜೀವಿಗಳೆಂದು ಸಾಗರ ತಳದಲ್ಲಿ ಸಿಕ್ಕಿರುವ ನಿಕ್ಷೇಪಗಳಿಂದ ಊಹಿಸಲಾಗಿದೆ. ಮಧ್ಯಾಹ್ನ ೨ ಗಂಟೆಯ ಸುಮಾರಿಗೆ, ಅಂದರೆ ಭೂಮಿಯ ಹುಟ್ಟಿನ ಅರ್ಧ ವಯಸ್ಸನ್ನೂ ಮೀರಿದ ನಂತರ ಏಕಕೋಶಿ ಶೈವಲಗಳ ಕುರುಹುಗಳಿವೆ. ಸಂಜೆಯ ೬ ಗಂಟೆಯ ಸಮಯಕ್ಕೆ ಬಹುಶ: ಲೈಂಗಿಕ ಸಂತಾನೋತ್ಪಾದನೆಯ ಕ್ರಮ ಜರುಗಿರಬೇಕೆಂದು ಅಂದಾಜಿಸಬಹುದು. ಈ ಕ್ರಿಯೆಯಿಂದ ಜೀವಿಗಳ ವಿಕಾಸ ಶೀಘ್ರಗತಿಯಲ್ಲಿ ನಡೆದಿರಬೇಕು. ರಾತ್ರಿ ೮.೨೮ ರ ಸಮಯಕ್ಕೆ ಕಡಲ ಕಳೆಗಳು, ೮.೪೮ ರ ಸುಮಾರಿಗೆ ಜೆಲ್ಲಿ ಮೀನುಗಳು, ೯ ಗಂಟೆಗೆ ಟ್ರೈಲೋಬೈಟ್‌ಗಳು ಜನ್ಮ ತಾಳಿವೆ. ರಾತ್ರಿ ೯.೫೨ ರ ವೇಳೆಗೆ ನೆಲ ಸಸ್ಯಗಳು ಉದ್ಭವವಾಗಿ, ೧೦.೨೪ ರ ಹೊತ್ತಿಗೆ ಇದುವರೆವಿಗೂ ಜೀವಿಸಿದ್ದ ಜೀವಿಗಳ ಕಳೇಬರ ಕಲ್ಲಿದ್ದಲು ನಿಕ್ಷೇಪದಂತೆ ದೊರಕಿವೆ. ರಾತ್ರಿ ೧೦.೫೦ ರ ಹೊತ್ತಿಗೆ ಪೆಡಂಭೂತಗಳ ಸುವರ್ಣಯುಗ ಆರಂಭವಾಗಿ ೧೧.೩೯ ರ ವೇಳೆಗೆ ಸ್ತನಿಗಳ ಉಗಮವಾದಂತೆ, ಪೆಡಂಭೂತಗಳು ಸರ್ವನಾಶವಾಗಿವೆ. ದಿನದ ಅಂತ್ಯಕ್ಕೆ ಕೇವಲ ೧೭ ಸೆಕೆಂಡುಗಳು ಬಾಕಿ ಇದ್ದಾಗ ಮಾನವ ಜನ್ಮ ತಾಳಿದ್ದಾನೆ. ಈ ಅತ್ಯಲ್ಪ ಸಮಯದಲ್ಲಿ ಅತ್ಯಂತ ವೇಗವಾಗಿ ವಿಕಾಸ ಹೊಂದಿ ಆದಿಮಾನವ – ನವನಾಗರಿಕ ಮಾನವನಾಗಿದ್ದಾನೆ.

ಈ ಭೂ ಗಡಿಯಾರದ ವಿವರಣೆಯೊಂದಿಗೆ ಜೀವ ವಿಕಾಸದ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಜೊತೆಗೆ ಅವುಗಳ ಸಾಮ್ರಾಜ್ಯ (ಸಾ), ಶಾಖೆ (ಶಾ), ವಂಶ (ವಂ), ವರ್ಗ (ವ) ಗಳನ್ನು ಕೂಡ ಗುರುತಿಸಲಾಗಿದೆ.

ಕ್ರಮ ಸಂಖ್ಯೆ	ವರ್ಗೀಕರಣದ ಶಾಖೆಗಳು	ವರ್ಗ / ವಂಶ
೧)	ವೈರಸ್ಸುಗಳು	
೨)	ಬ್ಯಾಕ್ಟೀರಿಯ ಮತ್ತು ಹಸಿರು ನೀಲ ಶೈವಲ (ಮೊನಿರಾ)(ಸಾ)	

३)	ಶೈವಲಗಳು (ಶಾ)	ಪ್ರೊಟೆಸ್ಟಾ ಸಾಮ್ರಾಜ್ಯ
४)	ಶಿಲೀಂಧ್ರಗಳು (ಸಾ)	ಪ್ರೊಟೆಸ್ಟಾ ಸಾಮ್ರಾಜ್ಯ
೫)	ಕಲ್ಲು ಹೂ/ ಲೈಕೆನ್‌ಗಳು (ವ)	ಪ್ರೊಟೆಸ್ಟಾ ಸಾಮ್ರಾಜ್ಯ
೬)	ಜರೀ ಸಸ್ಯ – ಟೆಂಡೋ ಫೈಲಾ (ವ)	ಸಸ್ಯ ಸಾಮ್ರಾಜ್ಯ
೭)	ನಗ್ನ ಬೀಜ ಸಸ್ಯಗಳು–ಜಿಮ್ನೊಸ್ಪರ್ಮ್ (ವ)	ಸಸ್ಯ ಸಾಮ್ರಾಜ್ಯ
೮)	ಹೂ ಬಿಡುವ ಸಸ್ಯಗಳು (ವ)	ಸಸ್ಯ ಸಾಮ್ರಾಜ್ಯ
	ಏಕ ದಳ ಸಸ್ಯಗಳು	
	ದ್ವಿದಳ ಸಸ್ಯಗಳು	
೯)	ಆದಿಮ ಜೀವಿ – ಪ್ರೊಟೋಝೋವ (ವ)	ಪ್ರೊಟೆಸ್ಟಾ ಸಾಮ್ರಾಜ್ಯ
೧೦)	ಸ್ಪಂಜುಗಳು (ವಂ)	ಅಕಶೇರುಕಗಳು
೧೧)	ಕುಟುಕು ಕಣವಂತಗಳು (ವಂ)	ಅಕಶೇರುಕಗಳು
೧೨)	ಚಪ್ಪಟೆ ಹುಳುಗಳು (ವಂ)	ಅಕಶೇರುಕಗಳು
೧೩)	ದುಂಡು ಹುಳುಗಳು (ವಂ)	ಅಕಶೇರುಕಗಳು
೧೪)	ವಲಯ ವಂತಗಳು (ವಂ)	ಅಕಶೇರುಕಗಳು
೧೫)	ಕ್ರಸ್ಟೇಷಿಯಾ (ವ)	ಅಕಶೇರುಕಗಳು
೧೬)	ಕೀಟಗಳು (ವ)	ಅಕಶೇರುಕಗಳು
೧೭)	ಇತರೆ ಸಂದಿಪದಿಗಳು (ವಂ)	ಅಕಶೇರುಕಗಳು
೧೮)	ಮೃದ್ವಂಗಿಗಳು (ವಂ)	ಅಕಶೇರುಕಗಳು
೧೯)	ಕಂಟಕ ಚರ್ಮಿಗಳು (ವಂ)	ಅಕಶೇರುಕಗಳು
೨೦)	ಇತರೆ ಅಕಶೇರುಕಗಳು	ಅಕಶೇರುಕಗಳು
೨೧)	ಮತ್ಸ್ಯಗಳು (ವ)	ಕಶೇರುಕಗಳು
೨೨)	ಉಭಯ ಜೀವಿಗಳು (ವ)	ಕಶೇರುಕಗಳು
೨೩)	ಸರೀಸೃಪಗಳು (ವ)	ಕಶೇರುಕಗಳು
೨೪)	ಹಕ್ಕಿಗಳು (ವ)	ಕಶೇರುಕಗಳು
೨೫)	ಸ್ತನಿಗಳು (ವ)	ಕಶೇರುಕಗಳು

ಹೋಮೋ ಸಪಿಯನ್ಸ್ ಸಪಿಯನ್ಸ್ – ಇಂದಿನ ಆಧುನಿಕ ಮಾನವ. ಮಾನವ ಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಸುಮಾರು ಎಂಭತ್ತು ಸಾವಿರ ವರ್ಷಗಳ ಹಿಂದೆ ಮಾನವ ಕಾಣಿಸಿದ. ಮಾನವನ ಮೂಲ ಉಗಮ ಆಫ್ರಿಕ ಎಂದು ಕಂಡುಕೊಳ್ಳಲಾಗಿದೆ. ಪ್ರಾಚೀನ ಮಾನವನ ಉಗಮದ ಇತಿಹಾಸ ೩೦ ಲಕ್ಷ ವರ್ಷಗಳ ಹಿಂದಕ್ಕೆ ಚಲಿಸುತ್ತದೆ.

ಆದಿಯಲ್ಲಿ ಭೂಮಿ ಒಂದು ಅಖಂಡ ಸ್ವರೂಪದಲ್ಲಿತ್ತು. ೧೯೧೨ ರಲ್ಲಿ ಜರ್ಮನಿಯ ಭೂ ಭೌತ ವಿಜ್ಞಾನಿ ಆಲ್‌ಫ್ರೆಡ್ ವೆಗನಾರ್ 'ಖಂಡಗಳ ಅಲೆತ' ಸಿದ್ಧಾಂತವನ್ನು ಮಂಡಿಸಿದರು. ಅವರ ಪ್ರಕಾರ ಅಖಂಡ ಭೂಭಾಗ (ಪ್ಯಾಂಜಿಯಾ)ವನ್ನು ಸಾಗರ (ಪ್ಯಾಂಥಲೆಸ್ಸಾ) ಸುತ್ತುವರಿದಿತ್ತು. ಭೂಮಿಯ ಹೊರ ಕವಚಕ್ಕೆ ಕ್ರೆಸ್ಟಲ್ ಪ್ಲೇಟ್ಸ್ ಎನ್ನುತ್ತಾರೆ. ಭೂಗರ್ಭದ ಉಷ್ಣ ಪ್ರವಾಹದಲ್ಲಿ (ಕನೆಕ್ಷನ್ ಕರೆಂಟ್) ಹೆಚ್ಚಿನ ಶಕ್ತಿ ಬಿಡುಗಡೆಯಾದಾಗಲೆಲ್ಲ ಖಂಡಗಳ ಅಲೆತ ಶುರುವಾಗುತ್ತವೆ. ಇಂದಿನ ಆಸ್ಟ್ರೇಲಿಯಾ, ಅಂಟಾರ್ಟಿಕದೊಂದಿಗೆ ಹಾಗೂ ಭಾರತ, ಆಫ್ರಿಕಾ ಮತ್ತು ಅಂಟಾರ್ಟಿಕದೊಂದಿಗೆ ಕೂಡಿಕೊಂಡಿತ್ತು. ೨೦೦ ಮಿಲಿಯನ್ ವರ್ಷಗಳ ಹಿಂದೆ ಅಖಂಡ ಭೂಭಾಗವಾಗಿದ್ದ ಪ್ಯಾಂಜಿಯಾ, ೧೩೫ ಮಿಲಿಯನ್ ವರ್ಷಗಳ ಹಿಂದೆ ಸಮಭಾಜಕ ವೃತ್ತದ ಮೇಲ್ಭಾಗಕ್ಕೆ ಪೂರ್ವ ಪಶ್ಚಿಮವಾಗಿ ಇಬ್ಭಾಗವಾಗಿದೆ. ಇವುಗಳ ನಡುವೆ ಸಾಗರದ ತಗ್ಗು ಪ್ರದೇಶ ಏರ್ಪಟ್ಟು ದಕ್ಷಿಣ ಅಮೇರಿಕ, ಆಫ್ರಿಕಾ ಖಂಡದಿಂದ ಬೇರ್ಪಟ್ಟಿದೆ. ಭಾರತ ಉತ್ತರದ ಕಡೆಗೆ ಸರಿದಿದೆ. ಆಸ್ಟ್ರೇಲಿಯ ಅಂಟಾರ್ಟಿಕದೊಂದಿಗೆ ತನ್ನ ಸಂಬಂಧ ಉಳಿಸಿಕೊಂಡಿದೆ. ಈ ಇಬ್ಭಾಗಗಳನ್ನು ಲಾರೇಷಿಯಾ ಮತ್ತು ಗೊಂಡ್ವಾನಗಳೆಂದು ಗುರುತಿಸಲಾಗಿತ್ತು. ಇಂದಿನ ಯೂರೋಪ್, ಉತ್ತರ ಅಮೇರಿಕಾ ಮತ್ತು ಏಷಿಯಾದ ಬಹುತೇಕ ಭಾಗಗಳು ಲಾರೇಷಿಯಾಕ್ಕೆ ಸೇರಿದ್ದವು. ದಕ್ಷಿಣ ಅಮೇರಿಕ, ಆಫ್ರಿಕಾ, ಆಸ್ಟ್ರೇಲಿಯಾ, ಭಾರತ ಮತ್ತು ಅಂಟಾರ್ಟಿಕಗಳು ಒಗ್ಗೂಡಿ ಗೊಂಡ್ವಾನ ಭಾಗವಾಗಿತ್ತು.

ಅಮೆರಿಕಾ ಪಶ್ಚಿಮದ ಕಡೆಗೆ ಸರಿದಂತೆ, ಅಖಂಡ ಭೂಭಾಗದಿಂದ ಬೇರೆಯಾಯಿತು. ಆಫ್ರಿಕಾ ಉತ್ತರಕ್ಕೆ, ಭಾರತ ಏಷಿಯಾದ ದಕ್ಷಿಣಕ್ಕೆ ಸರಿದದ್ದರಿಂದ ಹಾಗೂ ಆಸ್ಟ್ರೇಲಿಯಾ ಅಂಟಾರ್ಟಿಕಾದಿಂದ ಬೇರ್ಪಟ್ಟು ಇಂದಿನ ಭೂಪಟ ಸೃಷ್ಟಿಯಾಗಿದೆ. ಭೂಖಂಡಗಳು ಅಲೆದಾಡಿವೆ, ಸರಿದಾಡಿವೆ ಮತ್ತು ಬೇರ್ಪಡೆಯಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಭೂಪಟವನ್ನು ಪರಿಶೀಲಿಸಬಹುದು. ಉದಾಹರಣೆಗೆ ಪೂರ್ವ ಭಾಗದ ದಕ್ಷಿಣ ಅಮೇರಿಕ, ಆಫ್ರಿಕಾ ಖಂಡಗಳನ್ನು ಹತ್ತಿರಕ್ಕೆ ಎಳೆದು ತಂದರೆ ಆಕೃತಿಗಳು ಪರಸ್ಪರ ಹೊಂದಿಕೊಳ್ಳುವುದನ್ನು ಗುರುತಿಸಬಹುದು.

ಮಾನವ ಜನಾಂಗವನ್ನು ಮಾನವಶಾಸ್ತ್ರಜ್ಞರು ದೇಹ ಲಕ್ಷಣಗಳಿಗನುಗುಣವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದಾರೆ. (೧) ಆಸ್ಟ್ರೊಲಾಯಿಡ್ (೨) ನಿಗ್ರಾಯಿಡ್ (೩) ಮಂಗೋಲಾಯಿಡ್ (೪) ಕಕೇಸಿಯನ್

ಮಾನವ ಜನಾಂಗವನ್ನು ಆಳವಾಗಿ ಅಧ್ಯಯನ ಮಾಡಿರುವ ವಿದ್ವಾಂಸ ಲೂಯಿ ಅವರು ಮನುಕುಲದ ಸಾಂಸ್ಕೃತಿಕ ಇತಿಹಾಸವನ್ನು ವಿಕಾಸ ಹಂತದಲ್ಲಿ ಗಮನಿಸಿ ಕೆಲವು ಸ್ಥೂಲವಾದ ಕಾಲಗಳನ್ನು ನೀಡಿದ್ದಾರೆ. ಲೋಹಗಳ ಆವಿಷ್ಕಾರವಾದಂತೆ ಮನುಷ್ಯನ ನಾಗರೀಕತೆ ಬೆಳೆದಿರುವುದನ್ನು ಗುರುತಿಸಿದ್ದಾರೆ. ಅವರು ನೀಡುವ ಪಟ್ಟಿ ಹೀಗಿದೆ.

ಕಾಲ	ಅವಧಿ
ಅನಾಗರಿಕ (SAVAGERY) ಪ್ರಾಚೀನ ಶಿಲಾಯುಗ	ಕ್ರಿ.ಪೂ.೧೦೦,೦೦೦ – ೧೦,೦೦೦
ಅಗೆವ ವ್ಯವಸಾಯದ (DIBBLE OR HOLE FARMING) ನವ ಶಿಲಾಯುಗ	ಕ್ರಿ.ಪೂ. ೧೦,೦೦೦ – ೪೦೦೦
ತಾಮ್ರಯುಗ	ಕ್ರಿ.ಪೂ. ೪೦೦೦ – ೩೦೦೦
ಕಂಚಿನ ಯುಗ	ಕ್ರಿ.ಪೂ. ೩೦೦೦ – ೨೦೦೦
ಕಬ್ಬಿಣ ಯುಗ	ಕ್ರಿ.ಪೂ. ೨೦೦೦ – ಇಂದಿನವರೆಗೆ

ಶಿಲಾಯುಧಗಳನ್ನು ಬಳಸುತ್ತಿದ್ದ ಮಾನವ ಕ್ರಮೇಣ ಲೋಹಗಳ ಬಳಕೆಗೆ ಬಂದು ಕ್ಷಿಪ್ರ ಗತಿಯ ಬದಲಾವಣೆ ಮತ್ತು ಬೆಳವಣಿಗೆಗಳನ್ನು ತಂದುಕೊಂಡನೆಂಬುದನ್ನು ನಾವಿಲ್ಲಿ ಗಮನಿಸಬಹುದು.

೨.೧. ಸಿಂಧೂ ನಾಗರಿಕತೆ

ಸಿಂಧೂ ನಾಗರಿಕತೆ ಪರಿಚಯವಾಗುವವರೆಗೂ ಕ್ರಿ.ಪೂ.೨೦೦೦ ರ ಆಚೆಗಿನ ಅಧಿಕೃತ ವ್ಯವಸಾಯದ ಮಾಹಿತಿ ಸಿಕ್ಕಿರಲಿಲ್ಲ. ಆರ್ಯರ ಆಗಮನದ ನಂತರವೇ ಇಲ್ಲಿ ವ್ಯವಸ್ಥಿತ ಬೇಸಾಯ ಆರಂಭವಾಗಿದೆ ಎಂದು ಭಾರತದ ಇತಿಹಾಸ ಭಾವಿಸಿತ್ತು. ೧೯೨೨ ರಲ್ಲಿ ಸಿಂಧೂ ನಾಗರಿಕತೆಯ ಉತ್ಖನನ ಶುರುವಾದ ಮೇಲೆಯೇ ಭಾರತಕ್ಕೆ ಭವ್ಯ ಇತಿಹಾಸವಿತ್ತು ಎಂಬುದು ಜಗಜ್ಜಾಹಿರಾದದ್ದು.

೧೮೫೬ರಲ್ಲಿ ವಾಯುವ್ಯ ಪ್ರದೇಶದಲ್ಲಿ ರೈಲುದಾರಿಯನ್ನು ನಿರ್ಮಿಸಲು ಪ್ರಾರಂಭಿಸಿದಾಗ ನಾಗರಿಕತೆಯ ಅವಶೇಷಗಳು ಮೊಟ್ಟ ಮೊದಲು ಗೋಚರವಾದವು. ಪಂಜಾಬಿನ ಹರಪ್ಪದ ಬಳಿ ದೊರೆತ ಹೆಚ್ಚು ಉದ್ದಗಲದ ಪ್ರಾಚೀನ ಕಾಲದಲ್ಲಿ ತಯಾರಿಸಿದ ಇಟ್ಟಿಗೆಗಳನ್ನು ರೈಲುದಾರಿಯ ನಿರ್ಮಾಣಕ್ಕೆ ಉಪಯೋಗಿಸಲಾಯಿತು. ಈ ಇಟ್ಟಿಗೆಗಳು ಅತಿ ಪ್ರಾಚೀನ ಕಾಲದವುಗಳೆಂದು ತಿಳಿದುಬಂದರೂ ಪ್ರಾಕ್ತನಶಾಸ್ತ್ರದ ಅಧ್ಯಯನ ಇನ್ನೂ ಪ್ರಾರಂಭವಾಗಿರಲಿಲ್ಲವಾದುದರಿಂದ ಈ ದಿಶೆಯಲ್ಲಿ ವಿದ್ವಾಂಸರು ಗಮನ ಹರಿಸಿರಲಿಲ್ಲ. ಪುನ: ೧೮೭೨ ರಲ್ಲಿ ಹರಪ್ಪದ ಬಳಿಯಲ್ಲಿ ದೊರೆತ ಮುದ್ರಿಕೆಗಳ ಮೇಲೆ ಲಿಪಿಗಳಿದ್ದುದನ್ನು ಹಲವರು ಗಮನಿಸಿದರು. ಆದರೂ ಈ ಸಂಸ್ಕೃತಿಯ ಅಧ್ಯಯನದತ್ತ ಹೆಚ್ಚು ಪ್ರಯತ್ನ ನಡೆಯಲಿಲ್ಲ. ಪ್ರಾರಂಭದಲ್ಲಿ ಪ್ರಾಕ್ತನ ತಜ್ಞರು ಬೌದ್ಧಮತದ ಕೇಂದ್ರಗಳಾಗಿದ್ದ ಸಾರಾನಾಥ, ಬುದ್ಧಗಯೆ, ಸಾಂಚಿ, ತಕ್ಷಶಿಲ, ನಳಂದ ಮೊದಲಾದ ನಿವೇಶನಗಳಲ್ಲಿ ಸಂಶೋಧನೆಗೆ ಹೆಚ್ಚು ಆಸಕ್ತಿ ವಹಿಸಿದ್ದರು. ೧೯೨೨ ರಲ್ಲಿ ಆರ್.ಡಿ.ಬ್ಯಾನರ್ಜಿ ಎಂಬ ವಿದ್ವಾಂಸ ಸಿಂಧೂ ಪ್ರದೇಶದ

ಮೊಹೆಂಜೋದಾರೋ (ಮಡಿದವರ ದಿಬ್ಬ) ಎಂಬ ಸ್ಥಳದಲ್ಲಿದ್ದ ಬೌದ್ಧ ಸ್ತೂಪದ ಸಂಶೋಧನೆಯಲ್ಲಿ ತೊಡಗಿದ್ದಾಗ ಪ್ರಾಚೀನ ಸಂಸ್ಕೃತಿಯ ಅನೇಕ ವಸ್ತುಗಳು ದೊರೆತವು. ಆಗ ಪ್ರಾಕ್ತನ ಶಾಖೆಯ ಮುಖ್ಯಾಧಿಕಾರಿಯಾಗಿದ್ದ ಸರ್ ಜಾನ್ ಮಾರ್ಷಲ್ ಸಂಸ್ಕೃತಿಯ ಅವಶೇಷಗಳೆಂದು ಪರಿಗಣಿಸಿ ಆರ್.ಡಿ.ಬ್ಯಾನರ್ಜಿ ಮತ್ತು ದಯಾರಾಂ ಸಹಾನಿ ಮೊದಲಾದ ವಿದ್ವಾಂಸರ ನೇತೃತ್ವದಲ್ಲಿ ಸಂಶೋಧನೆಗೆ ಚಾಲನೆ ನೀಡಿದರು.

ಸಿಂಧೂ ನಾಗರಿಕತೆಯ ಕಾಲ ಕ್ರಿಪೂ. ೪೦೦೦ ದಿಂದ ೨೫೦೦ ಎಂದು ಪರಿಗಣಿಸಲಾಗಿದೆ. ಸಿಂಧೂ ಬಯಲಿನ ಜನರ ಆಚಾರ, ವಿಚಾರ, ಧಾರ್ಮಿಕ ಪದ್ಧತಿ ಮೊದಲಾದ ಆಧಾರದ ಮೇಲೆ ಅವರು ದ್ರಾವಿಡರೆಂದು ಹೆಚ್ಚು ಮಂದಿ ವಿದ್ವಾಂಸರು ನಿರ್ಧರಿಸಿದ್ದಾರೆ. ಸಿಂಧೂ ಬಯಲಿನ ನಾಗರಿಕತೆ ಹಿಂದೂಕುಷ್ ಪರ್ವತಗಳಿಂದ ನರ್ಮದಾ ನದಿಯ ಬಯಲಿನವರೆಗೂ ವ್ಯಾಪಿಸಿತ್ತೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಪಂಜಾಬ್ ಪ್ರದೇಶದ ಹರಪ್ಪ ಮತ್ತು ಸಿಂಧ್ ಪ್ರದೇಶದ ಮೊಹೆಂಜೋದಾರೊ ನಗರಗಳಲ್ಲದೆ ಆ ಪ್ರದೇಶದಲ್ಲಿ ಚಾನ್ಹುದಾರೊ, ಚಾಸುದಾರೊ ಸಂಸ್ಕೃತಿಯ ಕೇಂದ್ರಗಳಾಗಿದ್ದವಂತೆ.

ಸಿಂಧೂ ಬಯಲಿನ ಸಂಸ್ಕೃತಿ ಜನರು ನಗರ ಮತ್ತು ಪಟ್ಟಣಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ಈ ಜನರ ನಗರ ರಚನಾ ಕೌಶಲ ಪ್ರಪಂಚದ ಆಶ್ಚರ್ಯಕರ ಸಂಗತಿಗಳಲ್ಲೊಂದು. ಅವರ ನಗರ ನಿರ್ಮಾಣ ಕಾರ್ಯದಲ್ಲಿ ವೈಜ್ಞಾನಿಕತೆ ಹಾಗೂ ಆಧುನಿಕತೆ ಕಂಡುಬರುತ್ತದೆ. ಪಟ್ಟಣದ ಮುಖ್ಯ ಬೀದಿಗಳು ಅಗಲವಾಗಿಯೂ, ನೇರವಾಗಿಯೂ ಇದ್ದವು. ಮುಖ್ಯರಸ್ತೆಗಳು ಸುಮಾರು ೩೩ ಅಡಿಗಳಷ್ಟು ಅಗಲವಾಗಿದ್ದವು. ೭ ಅಡಿ ಅಗಲದ ಪುಟ್ಟ ಪುಟ್ಟ ಬೀದಿಗಳೂ ಇದ್ದವು. ರಸ್ತೆಯ ಎರಡೂ ಬದಿಗಳಲ್ಲಿ ಒಳ ಚರಂಡಿಗಳಿದ್ದವು. ಬೀದಿಗಳಲ್ಲಿ ರಾತ್ರಿ ವೇಳೆಯಲ್ಲಿ ದೀಪ ಉರಿಸಲು ಲಾಂದ್ರದ ಕಂಬಗಳಿದ್ದವು. ಪ್ರತಿ ಬೀದಿಯಲ್ಲೂ ಸಾರ್ವಜನಿಕ ಬಾವಿಗಳಿದ್ದವು.

ರಸ್ತೆಗಳ ಎರಡೂ ಬದಿಯಲ್ಲಿ ಸಾಲಾಗಿ ಕಟ್ಟಿದ ವಾಸದ ಮನೆಗಳಿದ್ದವು. ಕಲ್ಲು, ಇಟ್ಟಿಗೆ, ಗಾರೆಗಳಿಂದ ಮನೆಗಳನ್ನು ಕಟ್ಟುತ್ತಿದ್ದರು. ಕೆಲವು ಮನೆಗಳು ಮಹಡಿಯಿಂದ ಕೂಡಿದ್ದವು. ವಾಸದ ಮನೆಗಳು ಸಾಕಷ್ಟು ವಿಶಾಲವಾಗಿದ್ದವು. ಸಾಮಾನ್ಯವಾಗಿ ಪ್ರತಿಯೊಂದು ಮನೆಯಲ್ಲೂ ಅಂಗಳ, ಅತಿಥಿ ಕೊಠಡಿ, ಮಲಗುವ ಕೊಠಡಿ, ಊಟದ ಕೊಠಡಿ, ಪೂಜಾ ಕೊಠಡಿ ಹಾಗೂ ಸ್ನಾನದ ಕೊಠಡಿಗಳಿದ್ದವು. ಊರಿನ ಪ್ರತಿಯೊಂದು ಮನೆಗೂ ಸಾಮಾನ್ಯವಾಗಿ ಕುಡಿಯುವ ನೀರಿನ ಬಾವಿಯಿದ್ದಿತು. ಮನೆಯಲ್ಲಿ ಉಪಯೋಗಿಸಿದ ನೀರನ್ನು ಕೊಳವೆಗಳ ಮೂಲಕ ಬೀದಿಯ ಚರಂಡಿಗೆ ಬಿಡಲಾಗುತ್ತಿತ್ತು. ವಾಸದ ಮನೆಗಳು ಅನೇಕ

ಪೀಠೋಪಕರಣಗಳಿಂದ ಕೂಡಿದ್ದವು. ಸಿಂಧೂ ಬಯಲಿನ ಜನ ನೆಮ್ಮದಿಯ ಬಾಳ್ವೆ ನಡೆಸುತ್ತಿದ್ದರೆಂದು ವಾಸದ ಮನೆಗಳ ವಿನ್ಯಾಸದಿಂದಲೂ ಊಹಿಸಬಹುದು.

ವಾಸದ ಮನೆಗಳ ಜೊತೆಗೆ ಪಟ್ಟಣಗಳಲ್ಲಿ ಅನೇಕ ಭವ್ಯ ಭವನಗಳಿದ್ದವು. ಹರಪ್ಪ ಪಟ್ಟಣದಲ್ಲಿ ೧೬೯ ಅಡಿ ಉದ್ದ ಮತ್ತು ೧೩೫ ಅಡಿ ಅಗಲದ ವಿಶಾಲ ಕಟ್ಟಡ ಅವಶೇಷ ದೊರೆತಿದೆ. ಆಹಾರ ಪದಾರ್ಥಗಳನ್ನು ಶೇಖರಿಸಿಡಲು ಈ ಕಟ್ಟಡವನ್ನು ಉಪಯೋಗಿಸುತ್ತಿದ್ದ ರೆಂದು ತಿಳಿದುಬಂದಿದೆ. ಚಾನ್ಹುದಾರೊ ಪಟ್ಟಣದಲ್ಲಿ ಕಾರ್ಮಿಕರ ವಸತಿಗಳೆಂದು ಗುರುತಿಸಲಾಗಿರುತವ ಕಟ್ಟಡಗಳ ಭಗ್ನಾವಶೇಷಗಳು ದೊರೆತಿವೆ. ಮೊಹೆಂಜೋದಾರೊ ನಗರದಲ್ಲಿ ದೊರೆತಿರುವ ಸಾರ್ವಜನಿಕ ಕೊಳ ಗಮನಾರ್ಹವಾದದ್ದು. ಕೊಳದ ಸುತ್ತಲೂ ೧೮೦ ಅಡಿ ಉದ್ದ ಹಾಗೂ ೧೦೮ ಅಡಿ ಅಗಲದ, ಇಟ್ಟಿಗೆಗಳಿಂದ ಕಟ್ಟಿದ ಆವರಣವಿದ್ದಿತು. ಈ ಆವರಣದ ಮಧ್ಯದಲ್ಲಿ ೩೯ ಅಡಿ ಉದ್ದವಾಗಿಯೂ ೮ ಅಡಿ ಆಳವಾಗಿಯೂ ಇದ್ದ ನೀರಿನ ಕೊಳವಿದ್ದಿತು. ಕೊಳಕ್ಕೆ ಇಳಿಯಲು ಮೆಟ್ಟಿಲುಗಳ ವ್ಯವಸ್ಥೆ ಇದ್ದಿತು. ನೀರನ್ನು ಹೊರಗೆ ಬಿಡುವ ಮತ್ತು ಶುದ್ಧವಾದ ನೀರಿನಿಂದ ಕೊಳವನ್ನು ತುಂಬುವ ಏರ್ಪಾಡು ಇದ್ದಿತು. ಸಂಚಾರ ಯೋಗ್ಯವಾದ ಮತ್ತು ಒಳಚರಂಡಿಗಳಿಂದ ಕೂಡಿದ ರಸ್ತೆಗಳೂ, ಸಾಲಾಗಿ ಕಟ್ಟಿದ ವಾಸದ ಮನೆಗಳೂ, ನೀರು, ದೀಪ, ನೈರ್ಮಲ್ಯ, ನಿರ್ವಹಣೆ, ಸಾರ್ವಜನಿಕ ಸ್ನಾನ ಕೊಳ ಮೊದಲಾದವು ಸಿಂಧೂ ಬಯಲಿನ ನಾಗರಿಕತೆಯ ಮುಖ್ಯ ವೈಶಿಷ್ಟ್ಯಗಳು.

ವ್ಯಾಪಾರ, ವ್ಯವಸಾಯ ಮತ್ತು ಕೈಗಾರಿಕೆ ಇವುಗಳು ಹರಪ್ಪ ಜನರ ಮುಖ್ಯ ಕಸುಬುಗಳಾಗಿದ್ದವು. ಈ ಜನರು ಸುಮೇರಿಯ, ಬ್ಯಾಬಿಲೋನಿಯಾ ನಾಗರಿಕತೆಗಳೊಡನೆ ವ್ಯಾಪಾರ ಸಂಪರ್ಕಗಳನ್ನೇರ್ಪಡಿಸಿ ಕೊಂಡಿದ್ದರು. ಸಮುದ್ರಯಾನ ಇವರಿಗೆ ತಿಳಿದಿತ್ತು. ದಕ್ಷಿಣ ಭಾರತದಲ್ಲೇ ದೊರೆಯುತ್ತಿದ್ದ ಹಲವು ಲೋಹಗಳನ್ನೂ, ಪಚ್ಚೆಕಲ್ಲುಗಳನ್ನೂ ಇವರು ಉಪಯೋಗಿಸುತ್ತಿದ್ದರು. ಆದುದರಿಂದ ಸಿಂಧೂ ಬಯಲಿನಲ್ಲಿ ವಾಸಿಸುತ್ತಿದ್ದ ಜನರು ದಕ್ಷಿಣ ಭಾರತದೊಡನೆ ಸಂಪರ್ಕ ಹೊಂದಿದ್ದರೆಂದು ತಿಳಿದುಬಂದಿದೆ. ಚಿನ್ನ, ಬೆಳ್ಳಿ, ತಾಮ್ರ, ಕಂಚು ಮೊದಲಾದ ಲೋಹಗಳ ಉಪಯೋಗ ಈ ಜನರಿಗೆ ತಿಳಿದಿತ್ತು. ವಸ್ತು ವಿನಿಮಯ ಪದ್ಧತಿ ಹೆಚ್ಚು ಬಳಕೆಯಲ್ಲಿದ್ದಿತು. ನಿಖರವಾದ ತೂಕ ಮತ್ತು ಅಳತೆಯ ಪರಿಕರಗಳನ್ನು ಉಪಯೋಗಿಸುತ್ತಿದ್ದರು. ಸಾಗಾಣಿಕೆಗೆ ಎತ್ತಿನ ಗಾಡಿಗಳನ್ನು ಉಪಯೋಗಿಸುತ್ತಿದ್ದರು. ಇವರ ಅನೇಕ ಮುದ್ರಿಕೆಗಳ ಮೇಲೆ ಚಕ್ರದ ಗಾಡಿಯ ಚಿತ್ರಗಳಿವೆ. ಕುದುರೆ ಮತ್ತು ಟಾಂಗಾ ಗಾಡಿಗಳೂ ಉಪಯೋಗದಲ್ಲಿದ್ದವೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ.

ನೂಲುವುದು, ನೇಯುವುದು, ಪಾತ್ರೆ ಪದಾರ್ಥಗಳ ಹಾಗೂ ಆಭರಣಗಳ ತಯಾರಿಕೆಯಲ್ಲಿ ಈ ಜನ ನುರಿತಿದ್ದರು. ಹತ್ತಿ, ನಾರು ಮತ್ತು ಉಣ್ಣೆಯ

ಬಟ್ಟೆಗಳನ್ನು ನೇಯ್ದು ಧರಿಸುತ್ತಿದ್ದರು. ಚಕ್ರದ ಸಹಾಯದಿಂದ ವಿವಿಧ ಗಾತ್ರದ ಮಣ್ಣಿನ ಮಡಕೆ, ಕುಂಭ, ವಾಡೆ ಮೊದಲಾದವನ್ನು ಮಾಡುತ್ತಿದ್ದರು. ಹಲವು ಕುಂಭಗಳ ಮೇಲೆ ಕುಸುರಿ ಚಿತ್ರಗಳನ್ನು ಬಿಡಿಸಿದ್ದರು. ಇವರು ತಾಮ್ರ, ಕಂಚು ಮತ್ತು ಬೆಳ್ಳಿಯ ಲೋಟ ಹಾಗೂ ತಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಗಾರೆ ಕೆಲಸ, ಮರಗೆಲಸ, ದಂತದ ಕೆತ್ತನೆ, ಆಭರಣ ತಯಾರಿಕೆ ಮೊದಲಾದ ಕಸುಬುಗಳಲ್ಲಿ ಪರಿಶ್ರಮ ಹೊಂದಿದ್ದರು. ವ್ಯವಸಾಯ ವ್ಯಾಪಾರದಷ್ಟೇ ಮುಖ್ಯ ಕಸುಬಾಗಿತ್ತು. ನೀರಾವರಿ ಪದ್ಧತಿ ಇವರಿಗೆ ತಿಳಿದಿತ್ತು. ರಾಗಿ, ನವಣೆ, ಗೋಧಿ, ಭತ್ತ, ಮಸ್ಸೂರಿ ತೊಗರಿ, ಬಟಾಣಿ, ಅವರೆ, ಅಗಸೆ, ಬಾರ್ಲಿ, ಜವೆಗೋಧಿ, ಕಡಲೆ, ಹೆಸರು, ಅಲಸಂದೆ, ಎಳ್ಳು, ಸಜ್ಜೆ, ಹುರುಳಿ, ಹತ್ತಿ . . ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದರು. ಮೀನು, ಮೊಟ್ಟೆ, ಮಾಂಸ ಕೂಡ ಇವರ ಆಹಾರದ ಭಾಗವಾಗಿದ್ದವು. ಹಸು, ಎತ್ತು, ಆಡು, ಕುರಿ, ಕೋಳಿ, ಕುದುರೆ, ನಾಯಿ, ಪಾರಿವಾಳ ಇವರ ಸಾಕು ಪ್ರಾಣಿಗಳಾಗಿದ್ದವು. ಒಂಟೆ, ಆನೆ, ಹುಲಿ, ಜಿಂಕೆ, ಕರಡಿ ಇವರ ಕಾಲದ ಮುಖ್ಯ ವನ್ಯ ಜೀವಿಗಳು. ಕುಡುಗೋಲು, ಸೂಜಿ, ಉಳಿ, ಚಾಕು, ಕತ್ತರಿ ಇವು ನಿತ್ಯ ಬಳಕೆಯ ಉಪಕರಣಗಳಾಗಿದ್ದವು. ಬಿಲ್ಲು, ಬಾಣ, ಕತ್ತಿ, ಕವಣೆ, ಕೊಡಲಿಗಳೂ ಬಳಕೆಯಲ್ಲಿದ್ದವು.

ಸ್ತ್ರೀಯರೂ, ಪುರುಷರೂ ಆಭರಣಗಳನ್ನು ಧರಿಸುತ್ತಿದ್ದರು. ಉಂಗುರ, ಬಳೆ, ಬಂದಿ, ಓಲೆ, ಕಂಠಾಭರಣಗಳು ಸಾಮಾನ್ಯ ತೊಡುಗೆಗಳಾಗಿದ್ದವು. ಹೆಂಗಸರು ಉಡ್ಯಾಣ, ಕಾಲಂದಿಗೆ, ಮೂಗುಬೊಟ್ಟು, ಮಣಿಸರ ಇತ್ಯಾದಿ ಆಭರಣಗಳನ್ನು ತೊಡುತ್ತಿದ್ದರು. ಆಭರಣಗಳನ್ನು ಚಿನ್ನ, ಬೆಳ್ಳಿ, ದಂತ, ಹೊಳಪಾದ ಕಲ್ಲು ಇವುಗಳಿಂದ ತಯಾರಿಸುತ್ತಿದ್ದರು. ಕನ್ನಡಿ ಮತ್ತು ಬಾಚಣಿಗೆಗಳೂ ಬಳಕೆಯಲ್ಲಿದ್ದವು. ಈ ಜನರು ಸಂಗೀತ ಮತ್ತು ನೃತ್ಯದಲ್ಲಿಯೂ ಆಸಕ್ತಿ ಹೊಂದಿದ್ದರು. ವೀಣೆಯಾಕಾರದ ತಂತಿವಾದ್ಯ, ತಾಳ, ತಮ್ಮಟೆಗಳು ಈ ಆಸಕ್ತಿಗಳಿಗೆ ಸಾಕ್ಷಿಯಾಗಿದೆ. ಗಣಿತ ಮತ್ತು ಜ್ಯಾಮಿತಿಯಲ್ಲಿ ಇವರು ಪರಿಣಿತರಾಗಿದ್ದರು. ಹಾಗೆಯೇ ಖಗೋಳಶಾಸ್ತ್ರವೂ ತಿಳಿದಿತ್ತು. ತೂಕ ಮತ್ತು ಅಳತೆಯ ವಿಷಯದಲ್ಲೂ ಇವರ ವಿವೇಚನೆ ನಿರ್ಣಾಯಕವಾಗಿತ್ತು. ಸಿಂಧೂ ನಾಗರಿಕತೆಗೆ ಬರವಣಿಗೆ ತಿಳಿದಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಆ ಕಾಲದ ೪೦೦ ಚಿಹ್ನೆಗಳು ಲಭ್ಯವಾಗಿವೆ. ಮುದ್ರಿಕೆಗಳ ಮೇಲೂ, ಆಕೃತಿಗಳ ಪಕ್ಕದಲ್ಲೂ ಲಿಪಿಗಳನ್ನು ಕೆತ್ತಿದ್ದಾರೆ. ಇವರ ಬರಹದ ಚಿಹ್ನೆಗಳು ದ್ರಾವಿಡ ಭಾಷೆಯ ಮೂಲವೆಂದು ಇತ್ತೀಚಿನ ಸಂಶೋಧನೆಗಳು ಹೇಳುತ್ತವೆ.

ಹರಪ್ಪಾದಲ್ಲಿ ಮಾತೃ ದೇವತಾರಾಧನೆಯ ಜೊತೆಗೆ ಶಿವ, ಪಶುಪತಿಯ ಆರಾಧನೆ ಪ್ರಮುಖವಾಗಿತ್ತು. ಮಾತೃದೇವತೆಗೆ ಪಶುಬಲಿಯನ್ನರ್ಪಿಸುವುದು ಆಚರಣೆಯಲ್ಲಿತ್ತು. ಯೋಗ ಮುದ್ರೆಯಲ್ಲಿ ಪದ್ಮಾಸನಾರೂಢನಾಗಿ ಧ್ಯಾನಾಸಕ್ತನಾದಂತೆ ಚಿತ್ರಿಸಿರುವ ಅನೇಕ ಕೃತಿಗಳೂ ದೊರೆತಿವೆ. ಒಂದು ಆಕೃತಿ ತ್ರಿಮುಖಗಳಿಂದ ಕೂಡಿದೆ.

ಅಲ್ಲದೆ ಇದರ ಸುತ್ತಲೂ ವೃಷಭ, ಹುಲಿ, ಜಿಂಕೆ ಮೊದಲಾದ ಪ್ರಾಣಿಗಳನ್ನು ಕೆತ್ತಲಾಗಿದೆ. ವೃಷಭವನ್ನು ಪೂಜಿಸುತ್ತಿದ್ದರು. ಲಿಂಗಾರಾಧನೆಯೂ ಆಚರಣೆಯಲ್ಲಿದ್ದಿತು. ನಂದಿ, ನಾಗ, ಮೊಸಳೆ, ಅಶ್ವತ್ಥ, ಬೇವು, ತುಳಸಿ, ಗರುಡ, ಸಾಲಿಗ್ರಾಮಗಳನ್ನು ಆರಾಧಿಸುತ್ತಿದ್ದರು. ಹೀಗಾಗಿ ವಿಷ್ಣು ಆರಾಧನೆ ಮತ್ತು ಸೂರ್ಯಾರಾಧನೆಯೂ ಇದ್ದುವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕ್ರಿ.ಪೂ. ೨೫೦೦ ರ ವೇಳೆಗೆ ಸಿಂಧೂ ನಾಗರಿಕತೆಯು ಕಾಲನ ಗರ್ಭದಲ್ಲಿ ಹುದುಗಿಹೋದರೂ ಅವುಗಳ ಬೇಸಾಯ ಕಲೆ, ನಗರ ಜೀವನ ಬೀಜಗಳು ಸಾವಿರಾರು ವರ್ಷಗಳ ನಂತರ ಅಂಕುರಿಸಿರುವುದನ್ನು ಇತಿಹಾಸಕಾರರು ಗಮನಿಸುತ್ತಾರೆ.

ಸಿಂಧೂ ನಾಗರಿಕತೆಯ ತರುವಾಯ ಕ್ರಿ.ಪೂ.೨೦೦೦-೧೫೦೦ ರಲ್ಲಿನ ವ್ಯವಸಾಯ ಬೆಳೆಗಳು, ಇತಿಹಾಸಕಾರ ಇರ್ಫಾನ್ ಹಬೀಬ್ ಮಾಡಿರುವ ಪಟ್ಟಿಯಂತೆ.

ಹಿಂಗಾರು ಬೆಳೆ	ವೈಜ್ಞಾನಿಕ ಹೆಸರು
ಗೋಧಿ	ಟ್ರಿಟಿಕಮ್ ವಲ್‌ಗೇರ್ ಇದರಲ್ಲಿ ಟ್ರಿಟಿಕಮ್ ವಸ್ಟಿವಮ್, ಬ್ರೆಡ್‌ಗೋಧಿ ಸೇರಿದೆ. ಬೆಳೆಯುತ್ತಿದ್ದ ಇತರ ಉಪವರ್ಗಗಳು ಟ್ರಿಟಿಕಮ್ ಕಾಂಪ್ಯಾಕ್ಟಂ, ಕ್ಲಬ್ ಅಥವಾ ಗಿಡ್ಡನೆಯ ಗೋಧಿ ಮತ್ತು ಟ್ರಿಟಿಕಂ ಸ್ಪಿಯರೋಕೋಕಂ, ಶಾಟ್ ಗೋಧಿ
ಬಾರ್ಲಿ	ಹಾರ್ಡಿಯಂ ವಲ್‌ಗೇರ್, ಇದು ಹಾರ್ಡಿಯಂ ವಲ್‌ಗೇರ್ ನ್ಯುಡಮ್, ಎರಡೂ ೬ ಸಾಲುಗಳದ್ದು; ಹಾಗೆಯೇ ಹಾರ್ಡಿಯಂ ಸ್ಪಿಯರೋಕೋಕಂ ಸಹ (೬ ಸಾಲು 'ಶಾಟ್' ಬಾರ್ಲಿ)
ತೋಕೆ ಗೋಧಿ	ಅವೆನ ಸಟಿವ
ಬೇಳೆ	ಸಾಮಾನ್ಯ ಬೇಳೆ, ಕಡಲೆ, ಸಿಪರ್ ಅರಿಯೆಟಿನಂ
ಚೆನ್ನಾಂಗಿಬೇಳೆ	'ಮಸೂರು', ತಿನ್ಸ್ ಕುಲಿನಾರಿಸ್/ ಎಸ್ಕುಲೆಂಟಾ
ಬಟಾಣಿ	ಬಯಲು ಬಟಾಣಿ, ಪಿಸಮ್ ಸಟಿವಸ್
ಹುಲ್ಲು ಬಟಾಣಿ	'ಕೇಸರಿ' ಲಾಥೈರಸ್ ಸಟಿವಸ್
ಅವರೆ	ತೋಟ – ಅವರೆ, ವಿಸಿಯ ಫಾಬ
ಅಗಸೆ	ಲಿನಮ್ ಯುಸಿಟಟಸಿಮಂ
ಸಾಸುವೆ	ಬ್ರಸಿಕ ಕಂಪ್ರಸ್ಟಿಸ್

ಮುಂಗಾರು ಬೆಳೆ	ವೈಜ್ಞಾನಿಕ ಹೆಸರು
ಹೆಸರು	ಫಾಸಿಲಸ್ ರೇಡಿಯೇಟರ್

'ಚೀನ'	ಪ್ಯಾನಿಕಂ ಮಿಲಿಯೇಶಿಯಂ
ಜೋಳ	ಸೋರ್ಗ್ ವಲಿಗೇರ್
ರಾಗಿ	ಇಲೆಸಿನಾ ಕಾರಕೋನ
ಸಜ್ಜೆ	ಪೆನ್ನಿಸೆಟಂ ಟೈಪಾಯಿಡಂ
ಕಿರುಧಾನ್ಯ	ಪ್ಯಾನಿಕಂ ಮಿಲರೇ
ಇಟಾಲಿಯನ್‌ಮಿಲೆಟ್	ಸೆಟರಿಯಾ ಇಟಾಲಿಕ
ಹುರುಳಿ	ಡಾಲಿಕಸ್ ಬೈಪ್ಲೋರಸ್ ಅಲ್ಲದೆ ಇನ್ನೊಂದು ಉಪವರ್ಗ ಉದ್ದು ಡಾಲಿಕಸ್ ಯುನಿಫ್ಲೋರಸ್
ಅಲಸಂದಿ	ವಿಜ್ಞ ಕ್ಯಾಟಜಂಗ್
ಹತ್ತಿ	ನಾಸಿಪಿಯಂ
ಎಳ್ಳು	ಸೇಸಮಮ್ ಇಂಡಿಕಂ

ಟಿಪ್ಪಣಿ:– (ಇರ್ಫಾನ್ ಹಬೀಬ್ ಅವರದ್ದೆ)

ಕ್ರಿ.ಪೂ. ೨೦೦೦ ಕ್ಕೆ ಆಗಲೇ ಬಾಲ್‌ಪಲ್‌ನಲ್ಲಿ ನವಣೆ (ಫಾಕ್ಸ್ ಟೇಲ್ ಮಿಲೆಟ್) ಬೆಳೆಯಲಾಗುತ್ತಿತ್ತು. ಬೇರೆ ಆಫ್ರಿಕಾದ ಮೂಲವಾದ ಬೇರೆ ಉಷ್ಣವಲಯದ ತೃಣಧಾನ್ಯಗಳಂತಲ್ಲದೆ (ಜೋಳ, ಸಜ್ಜೆ) ಇದು ಸಮಶೀತೋಷ್ಣವಲಯದ ತೃಣ ಧಾನ್ಯ ಹಾಗೂ ಅದರ ಮೊದಲು ಕ್ರಿ.ಪೂ.೫೦೦೦ ರಷ್ಟು ಹಿಂದೆ ಬೆಳೆಯಾಗಿ ಬಳಸಿದ್ದು, ಉತ್ತರ ಚೀನಾದಲ್ಲಿ ಎಂಬುದು ಆಸಕ್ತಿದಾಯಕ ಅಂಶ.

೨.೨. ವೇದಗಳ ಕಾಲ

ಸಿಂಧೂ ನಾಗರಿಕತೆಯು ಹೇಳ ಹೆಸರು ಇಲ್ಲವಾದ ತರುವಾಯವೆ ಭಾರತಕ್ಕೆ ಆರ್ಯರು ಬಂದದ್ದು, ವೈದಿಕ ನಾಗರಿಕತೆಯ ಕಾಲ ಕ್ರಿ.ಪೂ.೨೦೦೦ ರಿಂದ ಕ್ರಿ.ಪೂ.೭೦೦ ರವರೆಗೆ. ವೇದ ಯುಗದ ನಾಗರಿಕತೆಯನ್ನರಿಯಲು ವೈದಿಕ ಸಾಹಿತ್ಯವೇ ಮುಖ್ಯ ಆಧಾರ. ವೇದವಾಙ್ಮಯ ರಾಶಿಯಲ್ಲಿ ನಾಲ್ಕು ವೇದಗಳು: ಬ್ರಾಹ್ಮಣಗಳು, ಅರಣ್ಯಕಗಳು, ಉಪನಿಷತ್ತುಗಳು ಮತ್ತು ವೇದಾಂಗಗಳು ಮುಖ್ಯವಾದವು. ಇವುಗಳ ಜೊತೆಗೆ ಸೂತ್ರಗಳು, ಪುರಾಣಗಳು ಮತ್ತು ಮಹಾಕಾವ್ಯಗಳು ಕಾಲ ಕ್ರಮದಲ್ಲಿ ರಚನೆಯಾದವು. ಇವುಗಳು ಮೂಲತ: ಧಾರ್ಮಿಕ ಹಾಗೂ ಆಧ್ಯಾತ್ಮಿಕ ಗ್ರಂಥಗಳು. ಇವುಗಳೆಲ್ಲವೂ ಆಗಿನ ಕಾಲದ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ. ನಾಲ್ಕು ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ – ಇವು ಒಂದಾದ ಮೇಲೆ ಒಂದರಂತೆ ರಚನೆಯಾದವೆಂದು ನಂಬಲಾಗಿದೆ. ಋಗ್ವೇದ ಪ್ರಾಚೀನವಾದದು. ಇದು ೧೦೨೮ ಸೂಕ್ತಗಳನ್ನೊಳಗೊಂಡು ಹತ್ತು ಮಂಡಲಗಳಿಂದ ಕೂಡಿದೆ. ಋಗ್ವೇದದ

ಶ್ಲೋಕಗಳನ್ನು ಯಜುರ್ವೇದದಲ್ಲಿ ಗದ್ಯ ರೂಪದಲ್ಲಿಯೂ, ಸಾಮವೇದದಲ್ಲಿ ಗಾನ ರೂಪದಲ್ಲಿಯೂ ವಿವರಿಸಲಾಗಿದೆ. 'ಅಥರ್ವಣವೇದ' ದಾರ್ಶನಿಕ ಶ್ಲೋಕಗಳನ್ನೊಳಗೊಂಡಿದೆ. ಪ್ರತಿಯೊಂದು ವೇದವನ್ನೂ ಒಬ್ಬೊಬ್ಬ ಪುರೋಹಿತ ಪ್ರತಿನಿಧಿಸುವುದು ವಾಡಿಕೆ. ವೇದಗಳಿಗೆ ಹೊಂದಿಕೊಂಡಂತೆ 'ಬ್ರಾಹ್ಮಣಗಳು' ಎಂಬ ಸಾಹಿತ್ಯ ಪ್ರಾಕಾರವಿದೆ. ಬ್ರಾಹ್ಮಣಗಳು ಗದ್ಯ ರೂಪದಲ್ಲಿವೆ. ಪ್ರತಿಯೊಂದು ವೇದಕ್ಕೂ ನಿರ್ದಿಷ್ಟವಾದ ಬ್ರಾಹ್ಮಣಗಳಿವೆ. ಇವುಗಳು ವೇದಗಳ ಅರ್ಥಗಳನ್ನು ಗ್ರಹಿಸಲೂ ಹಾಗೂ ಯಜ್ಞ ಕ್ರಿಯೆಗಳನ್ನು ನಡೆಸಲು ಅವಶ್ಯಕವಾಗಿದ್ದವು. ಋಗ್ವೇದಕ್ಕೆ ಐತರೇಯ, ಯುಜರ್ವೇದಕ್ಕೆ ತ್ರೈತ್ತರೇಯ ಮತ್ತು ಶತಪಥ; ಸಾಮವೇದಕ್ಕೆ ಛಾಂದೋಗ್ಯ ಮತ್ತು ಅಥರ್ವಣ ವೇದಕ್ಕೆ ಗೋಪಥ ಬ್ರಾಹ್ಮಣಗಳು ಮುಖ್ಯವಾದವು.

ದಾರ್ಶನಿಕರಿಂದ ಕ್ರಮೇಣ ಅರಣ್ಯಕಗಳು, ಉಪನಿಷತ್ತುಗಳು ರಚಿತವಾದವು. ಉಪನಿಷತ್ತುಗಳು ಪ್ರಾಚೀನ ಭಾರತೀಯ ದರ್ಶನದ ಮೇರುಕೃತಿಗಳು. ಅವುಗಳಲ್ಲಿ ಆತ್ಮ ಮತ್ತು ಪರಮಾತ್ಮದ ವಿಷಯವಾಗಿ ಗಹನವಾದ ಜಿಜ್ಞಾಸೆಗಳನ್ನು ನಡೆಸಲಾಗಿದೆ. ಸುಮಾರು ೧೫೦ ಕ್ಕೂ ಹೆಚ್ಚಿನ ಸಂಖ್ಯೆಯ ಉಪನಿಷತ್ತುಗಳಿವೆ. ಇವುಗಳಲ್ಲಿ ಈಶೋಪನಿಷತ್ತು, ಕಠೋಪನಿಷತ್ತು, ಕೇನೋಪನಿಷತ್ತು, ಮಾಂಡೋಕ್ಯೋಪನಿಷತ್ತು, ಛಾಂದೋಗ್ಯೋಪನಿಷತ್ತು, ಬೃಹದಾರಣ್ಯಕ ಮೊದಲಾದ ೧೨ ಉಪನಿಷತ್ತುಗಳು ಅತ್ಯಂತ ಮುಖ್ಯವಾದವುಗಳೆಂದು ಪರಿಗಣಿಸಲ್ಪಟ್ಟಿವೆ.

ಕಾಲಾನುಕ್ರಮದಲ್ಲಿ ರಚಿತವಾದ ವೇದಾಂಗಗಳು, ಪುರಾಣಗಳು, ಮಹಾಕಾವ್ಯಗಳು, ಧನುರ್ವೇದ, ಆಯುರ್ವೇದ, ಗಂಧರ್ವವೇದಗಳಿಗೆ ಸಂಬಂಧಿಸಿದ ಗ್ರಂಥಗಳೂ ಆಗಿನ ಕಾಲದ ಸಂಸ್ಕೃತಿಯ ಚಿತ್ರವನ್ನು ಮೂಡಿಸಿಕೊಳ್ಳಲು ಬಹುಮಟ್ಟಿಗೆ ಸಹಕಾರಿಯಾಗಿವೆ.

ಭಾರತಕ್ಕೆ ಆರ್ಯರು ಹೊರಗಿನವರು. ಅಹಿತಕರ ವಾಯುಗುಣದಿಂದಲೋ ಅಥವಾ ಆಹಾರದ ಅಭಾವದಿಂದಲೋ ಆರ್ಯರು ತಮ್ಮ ಮೂಲ ನಿವಾಸವನ್ನು ತೊರೆದು ಯೋಗ್ಯವಾದ ವಲಸೆಗಳನ್ನು ಹುಡುಕುತ್ತಾ ಹೊರಟರು. ಅವರಲ್ಲಿ ಒಂದು ಗುಂಪು ಪಶ್ಚಿಮದತ್ತ ಮುಂದುವರಿದು ಜರ್ಮನಿ, ರೋಮ್ ಮತ್ತು ಗ್ರೀಸ್ ಪ್ರದೇಶಗಳಲ್ಲಿ ನೆಲೆಸಿತು. ಮತ್ತೊಂದು ಗುಂಪು ಪೂರ್ವದತ್ತ ಮುಂದುವರಿದು ಟರ್ಕಿ ಮತ್ತು ಇರಾನ್ ದೇಶಗಳಲ್ಲಿ ವ್ಯಾಪಿಸಿಕೊಂಡಿತು. ಈ ಪಂಗಡದ ಸಣ್ಣ-ಪುಟ್ಟ ಗುಂಪುಗಳು ತಂಡ ತಂಡವಾಗಿ ವಾಯುವ್ಯ ಕಣಿವೆಗಳ ಮೂಲಕ ಪಂಜಾಬ್ ಮತ್ತು ಸಿಂಧ್ ಪ್ರದೇಶಗಳನ್ನು ಪ್ರವೇಶಿಸಿ ಪ್ರಾರಂಭದಲ್ಲಿ ಅಲ್ಲಿ ನೆಲೆಸಿದರು. ಅಲ್ಲಿನ ನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ ಅವರನ್ನು ದಸ್ಯುಗಳೆಂದು ಕರೆದರು. ಸೋತ ಮೂಲ ನಿವಾಸಿಗಳು ದಕ್ಷಿಣ ಭಾರತದತ್ತ ಚದುರಿದರು.

ಆರ್ಯರು ಗುಂಪು ಗುಂಪಾಗಿ ಭಾರತವನ್ನು ಪ್ರವೇಶಿಸಿ ಕಾಬೂಲ್ ಮತ್ತು ಸರಸ್ವತಿ ನದಿಗಳ ಬಯಲಿನ ಪ್ರದೇಶದಲ್ಲಿ ನೆಲೆ ನಿಂತರು. ಪ್ರಾರಂಭದಲ್ಲಿ ತಾವು ನೆಲೆಸಿದ ಪ್ರದೇಶವನ್ನು **"ಆರ್ಯಾವರ್ತ"** ಎಂದು ಕರೆಯುತ್ತಿದ್ದರು. ಆರ್ಯರು ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಮತ್ತು ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲೂ ರಕ್ತಸಂಬಂಧ ಹೊಂದಿದ್ದ ಅನೇಕ ಕುಟುಂಬಗಳಿದ್ದವು. 'ಕುಟುಂಬ' ಆರ್ಯರ ರಾಜಕೀಯ ಮತ್ತು ಸಾಮಾಜಿಕ ಜೀವನದ ಅಡಿಗಲ್ಲಾಗಿತ್ತು. ತಮ್ಮ ತಮ್ಮಲ್ಲಿ ಸಣ್ಣ ಪುಟ್ಟ ಜಗಳಗಳು ನಡೆಯುತ್ತಿದ್ದುದರಿಂದಲೂ ಮತ್ತು ಅವರು ದಸ್ಯು ಅಥವಾ ದ್ರಾವಿಡರೊಡನೆ ಕಾದಾಡುತ್ತಿದ್ದುದರಿಂದಲೂ ಗುಂಪಿಗೆ ಒಬ್ಬ ನಾಯಕ ಇರುತ್ತಿದ್ದನು. ಕ್ರಮೇಣ ನಾಯಕನ ಪ್ರಾಮುಖ್ಯ ಬೆಳೆದು ರಾಜತ್ವ ಆಚರಣೆಗೆ ಬಂದಿತು. ಕೆಲವೇ ಹಳ್ಳಿಗಳು ಅಥವಾ ಗ್ರಾಮಗಳಿಗೆ ಒಬ್ಬೊಬ್ಬ ರಾಜನಿರುತ್ತಿದ್ದನು. ಹೆಚ್ಚು ಸಂಖ್ಯೆಯ ಸಣ್ಣ ಪುಟ್ಟ ರಾಜ್ಯಗಳು ತಲೆ ಎತ್ತಿದವು. ಪ್ರಾರಂಭದಲ್ಲಿ ರಾಜನನ್ನು ಚುನಾಯಿಸುವ ಪದ್ಧತಿ ಇದ್ದಿತಾದರೂ ಕಾಲ ಕ್ರಮೇಣ ರಾಜತ್ವ ವಂಶಪಾರಂಪರ್ಯ ವಾಗತೊಡಗಿತು.

ರಾಜ್ಯದಲ್ಲಿ ಶಾಂತಿ ಸಂರಕ್ಷಣೆ ಮಾಡುವುದೂ ಮತ್ತು ಪರಾಕ್ರಮಣದಿಂದ ರಾಜ್ಯವನ್ನು ರಕ್ಷಿಸುವುದೂ ರಾಜನ ಮುಖ್ಯ ಕರ್ತವ್ಯವಾಗಿದ್ದವು. ನ್ಯಾಯ ವಿತರಣೆ ಮಾಡುವುದು ತೆರಿಗೆಗಳನ್ನು ಪಡೆಯುವುದು ಇತರ ಕರ್ತವ್ಯಗಳಾಗಿದ್ದವು. ಯುದ್ಧಗಳಲ್ಲಿ ರಾಜ ಸ್ವತ: ಸೈನ್ಯದ ಮುಖಂಡತ್ವವನ್ನು ವಹಿಸುತ್ತಿದ್ದ. ಸೈನಿಕ ವ್ಯವಸ್ಥೆಯಲ್ಲಿ ರಾಜನ ಸಹಾಯಕ್ಕಾಗಿ 'ಸೇನಾನಿ' ಎಂಬ ಅಧಿಕಾರಿ ಇರುತ್ತಿದ್ದ. ಬಿಲ್ಲು, ಬಾಣ, ಕತ್ತಿ, ಗುರಾಣಿ, ಭರ್ಜಿ, ಶಿರಸ್ತ್ರಾಣ ಮೊದಲಾದುವನ್ನು ಸೈನಿಕರು ಯುದ್ಧದಲ್ಲಿ ಬಳಸುತ್ತಿದ್ದರು. ಯಜ್ಞ-ಯಾಗಾದಿಗಳನ್ನು ನಡೆಸಲು ಮತ್ತು ನ್ಯಾಯ ವಿತರಣೆ ಮಾಡಲು ರಾಜನ ಸಹಾಯಕ್ಕೆ 'ಪುರೋಹಿತ'ನೆಂಬ ಅಧಿಕಾರಿ ಇರುತ್ತಿದ್ದ. 'ಗ್ರಾಮಿಣಿ' ಗ್ರಾಮದ ಮುಖ್ಯಸ್ಥನಾಗಿದ್ದ. ಸೇನಾನಿ, ಪುರೋಹಿತ ಮತ್ತು ಗ್ರಾಮಿಣಿ ಇವರು ರಾಜನ ಮುಖ್ಯ ಸಹಾಯಕರಾಗಿದ್ದರು. ಋಗ್ವೇದ ಕಾಲದ ಅಂತ್ಯದ ವೇಳೆಗೆ ಅನೇಕ ಬದಲಾವಣೆಗಳಾದವು. ರಾಜನ ಅಧಿಕಾರ ಹೆಚ್ಚಿತು, ಗಾತ್ರದಲ್ಲಿ ಹಿರಿದಾದ ರಾಜ್ಯಗಳು ಸ್ಥಾಪನೆಯಾದವು. ರಾಜನು ಯಜ್ಞ, ಯಾಗಗಳನ್ನು ಹೆಚ್ಚು ಆಡಂಬರದಿಂದ ಆಚರಿಸುವುದು ರೂಢಿಗೆ ಬಂತು. ರಾಜನ ಪಟ್ಟಾಭಿಷೇಕ ಮಹೋತ್ಸವವನ್ನು ಹೆಚ್ಚು ವೈಭವದಿಂದ ಆಚರಿಸಲಾಗುತ್ತಿತ್ತು. ರಾಜ್ಯದ ಅಧಿಕಾರಿಗಳ ಸಂಖ್ಯೆಯೂ ಹೆಚ್ಚಿತು. ಸಚಿವ ಸಮಿತಿಯೂ ಸ್ಥಾಪಿತವಾಯಿತು.

ಆರ್ಯರು ಹತ್ತಿ, ನಾರು ಮತ್ತು ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಿದ್ದರು. ಗೋಧಿ, ಬಾರ್ಲಿ, ಅಕ್ಕಿ, ದ್ವಿದಳ ಧಾನ್ಯಗಳು; ಹಾಲು, ಮೊಟ್ಟೆ, ಮೀನು, ಮಾಂಸ ಇವು ಅವರ ಮುಖ್ಯ ಆಹಾರವಾಗಿದ್ದವು. ಸುರ ಮತ್ತು ಸೋಮ ಎಂಬ ಮದ್ಯವನ್ನು ಅವರು ಸೇವಿಸುತ್ತಿದ್ದರು.

ಕುಟುಂಬ ಸ್ವಾವಲಂಬಿಯಾಗಿತ್ತು. ಪಶುಪಾಲನೆ ಮತ್ತು ವ್ಯವಸಾಯ ಮುಖ್ಯ ಕಸುಬುಗಳಾಗಿದ್ದವು. ಆರ್ಯರು ಹಸು, ಕುದುರೆ, ಎಮ್ಮೆ, ಕುರಿ, ಕೋಳಿ, ಆಡು, ನಾಯಿ, ಬೆಕ್ಕುಗಳನ್ನು ಸಾಕುತ್ತಿದ್ದರು. ಗೋಧಿ, ಜವೆಗೋಧಿ, ಭತ್ತ, ದ್ವಿದಳ ಧಾನ್ಯ, ಹಣ್ಣು ತರಕಾರಿಗಳನ್ನು ಬೆಳೆಯುತ್ತಿದ್ದರು. ವ್ಯವಸಾಯದ ಭೂಮಿಯನ್ನು 'ಕ್ಷೇತ್ರ' ಎಂದು ಕರೆಯುತ್ತಿದ್ದರು. ನೂಲುವುದು, ನೇಯುವುದು, ಪಾತ್ರೆ ತಯಾರಿಕೆ, ಮರಗೆಲಸ, ಲೋಹದ ಕೆಲಸ, ದಂತದ ಕೆತ್ತನೆ ಮುಂತಾದವು ಉಪ ಕಸುಬುಗಳಾಗಿದ್ದವು. ವಸ್ತು ವಿನಿಮಯ ಪದ್ಧತಿ ಆಚರಣೆಯಲ್ಲಿತ್ತು. 'ನಿಷ್ಕ' ಮತ್ತು 'ಶತಮಾನ' ಎಂಬ ನಾಣ್ಯ ಚಲಾವಣೆಯಲ್ಲಿದ್ದರೂ ಅವುಗಳ ಬಳಕೆ ಹೆಚ್ಚಾಗಿರಲಿಲ್ಲ. ಹಸು ಮುಖ್ಯ ವಿನಿಮಯ ಸಾಧನವಾಗಿತ್ತು. ರಥದ ಜೂಜು, ಕುದುರೆ ಜೂಜು, ಜಟ್ಟಿ ಕಾಳಗ, ಬೇಟೆ ಮೊದಲಾದವು ಮುಖ್ಯ ವಿನೋದ ಹಾಗೂ ಪಂದ್ಯಗಳಾಗಿದ್ದವು.

ಋಗ್ವೇದ ಕಾಲದ ಆರ್ಯರು ಪ್ರಕೃತಿಯ ಶಕ್ತಿಗಳಾದ ಸೂರ್ಯ, ಚಂದ್ರ ಅಗ್ನಿ, ಇಂದ್ರ, ವರುಣ, ವಾಯು ಮೊದಲಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಪ್ರಾರಂಭದಲ್ಲಿ ಸ್ತ್ರೀದೇವತೆಗಳಿಗೆ ಹೆಚ್ಚಿನ ಮಹತ್ವ ಇರಲಿಲ್ಲ. ಉಷಃ ಹಾಗೂ ಪೃಥ್ವಿಯನ್ನು ಮಾತ್ರ ಪೂಜಿಸುತ್ತಿದ್ದರು. ಮೂರ್ತಿ ಪೂಜೆ ಆರ್ಯರಲ್ಲಿ ಪ್ರಚಾರದಲ್ಲಿರಲಿಲ್ಲ. ಅಗ್ನಿಯ ಮುಖಾಂತರ ಎಲ್ಲಾ ದೇವತೆಗಳಿಗೂ ಹವಿಸ್ಸನ್ನು ಅರ್ಪಿಸುತ್ತಿದ್ದರು. ತುಪ್ಪ, ಹಾಲು, ಮಾಂಸ, ಮದ್ಯಗಳನ್ನು ದೇವತೆಗಳಿಗೆ ಅರ್ಪಣೆ ಮಾಡುತ್ತಿದ್ದರು. ಪೂಜೆ ಪುರಸ್ಕಾರದಿಂದ ದೇವತೆಗಳು ಸಂಪ್ರೀತರಾಗಿ ಇಷ್ಟಾರ್ಥ ಸಿದ್ಧಿಯಾಗುವುದೆಂಬ ನಂಬಿಕೆ ಪ್ರಚಲಿತವಾಗಿತ್ತು. ಬಹುದೇವತಾರಾಧನೆ ಪ್ರಚಾರದಲ್ಲಿದ್ದರೂ, ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆದ ದೇವ ಒಬ್ಬನೇ ಎಂಬ ಭಾವನೆ ಮೂಡಿತ್ತು. ಪ್ರಾರಂಭದಲ್ಲಿ ನಿರ್ಧಿಷ್ಟವಾದ ಪುರೋಹಿತ ವರ್ಗ ಇನ್ನೂ ರೂಪ ತಾಳಿರಲಿಲ್ಲ. ಗೃಹಸ್ಥರು ತಮ್ಮ ತಮ್ಮ ಮನೆಗಳಲ್ಲಿ ಅಗ್ನಿಯನ್ನು ಸ್ಥಾಪಿಸಿ, ಮಂತ್ರಗಳನ್ನು ಜಪಿಸಿ ಹೋಮ ಅರ್ಪಣೆಗಳನ್ನು ಆಚರಿಸುವುದು ವಾಡಿಕೆಯಾಗಿತ್ತು. ಪುನರ್ಜನ್ಮದಲ್ಲಿ ನಂಬಿಕೆ ಇನ್ನೂ ಪೂರ್ಣವಾಗಿ ಬೆಳೆದಿರಲಿಲ್ಲ. ಸ್ವರ್ಗ ನರಕಗಳ ಕಲ್ಪನೆಯಿದ್ದಿತಾದರೂ ಅದು ಅಷ್ಟಾಗಿ ಪ್ರಬಲವಾಗಿ ಬೇರೂರಿರಲಿಲ್ಲ. ಶವಗಳನ್ನು ಸುಡಲಾಗುತ್ತಿತ್ತು. ಅವುಗಳನ್ನು ನದಿಗಳ ಪ್ರವಾಹದಲ್ಲಿ ವಿಸರ್ಜಿಸುವ ಪದ್ಧತಿಯೂ ಇದ್ದಿತು.

ಋಗ್ವೇದ ಯುಗದ ಕೊನೆಯ ವೇಳೆಗೆ ಜಾತಿಪದ್ಧತಿ ಅಂಕುರಿಸಿತು. ಋಗ್ವೇದದ ಪುರುಷ ಸೂಕ್ತದಲ್ಲಿ ಪ್ರಪ್ರಥಮವಾಗಿ ಜಾತಿ ಪದ್ಧತಿಯನ್ನು ಅವಲೋಕಿಸಲಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು ಆಚರಣೆಗೆ ಬಂದವು. ಜಾತಿ ಪದ್ಧತಿಯು ವೃತ್ತಿಯನ್ನು ಅವಲಂಬಿಸಿತ್ತು. ಬ್ರಾಹ್ಮಣರು ಅಧ್ಯಯನದಲ್ಲೂ, ಕ್ಷತ್ರಿಯರು ಸಂರಕ್ಷಣಾ ಕಾರ್ಯದಲ್ಲೂ, ವೈಶ್ಯರು ವ್ಯವಸಾಯ ಮತ್ತು ವ್ಯಾಪಾರದಲ್ಲೂ ನಿರತರಾಗಿದ್ದರು. ಶೂದ್ರರು ಮೇಲಿನ ಮೂರು

ವರ್ಗಗಳ ಸೇವೆಯಲ್ಲಿ ತೊಡಗಿದ್ದರು. ಪ್ರಾರಂಭದಲ್ಲಿ ಜಾತಿಪದ್ಧತಿ ತೊಡಕಾಗಿರಲಿಲ್ಲ ಮತ್ತು ಬದಲಾವಣೆಗೆ ಅವಕಾಶವಿತ್ತು. ಕ್ರಮೇಣ ವೃತ್ತಿ ಅನೂಚಾನವಾಯಿತು. ಪರಸ್ಪರ ವಿವಾಹ ನಿಷೇಧವಾಯಿತು. ಮೇಲು-ಕೀಳೆಂಬ ಭಾವನೆಗಳು ಬೇರೂರತೊಡಗಿದವು.

೨.೩. ವೈದಿಕ ಯುಗದ ಉತ್ತರಾರ್ಧ ಕಾಲದ ನಾಗರಿಕತೆ

ಇದು ಕರ್ನಾಟಕವೂ ಸೇರಿದಂತೆ ಇಡೀ ಭಾರತದ ಮೇಲೆ ಪರಿಣಾಮವುಂಟು ಮಾಡಿದ ಸಂದರ್ಭ. ಹೀಗಾಗಿ ನಮ್ಮ ಬೇಸಾಯ ಯಾತ್ರೆಗೆ ಹಿನ್ನೆಲೆಯಾಗಿ ಇವುಗಳನ್ನು ಪರಿಶೀಲಿಸುವುದು ಅನಿವಾರ್ಯವಾಗಿದೆ. ಕ್ರಿ.ಪೂ.೧೫೦೦ ರಿಂದ ಬೌದ್ಧ ಜೈನ ಮತಗಳು ಹುಟ್ಟುವವರೆಗಿನ ಕಾಲದ ನಾಗರಿಕತೆಯನ್ನು, ಸಾಮಾನ್ಯವಾಗಿ ವೈದಿಕ ಯುಗದ ಉತ್ತರಾರ್ಧ ಕಾಲ ಎಂದು ಪರಿಗಣಿಸಲಾಗಿದೆ. ಈ ಕಾಲದಲ್ಲಿ ಸಮಾಜದಲ್ಲಿ ಮಹತ್ವಪೂರ್ಣ ಬದಲಾವಣೆಗಳಾದವು. ಆರ್ಯರು ಉತ್ತರ ಭಾರತದಲ್ಲೆಲ್ಲಾ ವ್ಯಾಪಿಸಿದರು. ಅವರು ಬಂದು ನೆಲೆಸಿದ ಪ್ರಾರಂಭದಲ್ಲಿ ಎದುರಿಸಬೇಕಾಗಿದ್ದ ಅಡಚಣೆಗಳು ನಿವಾರಣೆಯಾಗಿದ್ದವು. ಬಲಯುತ ಹಾಗೂ ವಿಸ್ತೃತ ರಾಜ್ಯಗಳು ಸ್ಥಾಪಿತವಾದವು. ಉತ್ತರ-ದಕ್ಷಿಣ ಭಾರತಗಳ ಮಧ್ಯೆ ಹೆಚ್ಚು ಸಂಪರ್ಕ ಏರ್ಪಟ್ಟಿತು. ಆರ್ಯ-ದ್ರಾವಿಡ ಪಂಗಡಗಳಲ್ಲಿ ಹೊಂದಾಣಿಕೆ ಮೂಡಿತು. ಹಿಂದೂ ಸಂಸ್ಕೃತಿಯ ವಿಶಿಷ್ಟ ರೂಪುರೇಖೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಹೆಚ್ಚು ಸಂಖ್ಯೆಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಗ್ರಂಥಗಳು ಪ್ರಚಾರಕ್ಕೆ ಬಂದವು. ವ್ಯಾಪಕವಾದ ಯಜ್ಞ ಯಾಗಗಳನ್ನು ಆಚರಿಸುವ ಪದ್ಧತಿ ಬೆಳೆಯಿತು. ಜಾತಿ ಪದ್ಧತಿ ಜಟಿಲವಾಗುತ್ತ ಬಂದಿತು. ವರ್ಣಾಶ್ರಮ ವ್ಯವಸ್ಥೆ ಆಚರಣೆಗೆ ಬಂದಿತು. ನೂರಾರು ದೇವಾನುದೇವತೆಗಳ ಪೂಜೆ, ಆಚರಣೆಗೆ ಬಂದಿತು. ಕ್ರಮೇಣ ವಿಗ್ರಹಾರಾಧನೆ ರೂಪುಗೊಂಡಿತು. ತ್ರಿಮೂರ್ತಿಗಳ ಆರಾಧನಾಕ್ರಮ ರೂಢಿಗೆ ಬಂದಿತು. ಸತಿ ಮುಂತಾದ ಹಿಂದೂ ಸಾಮಾಜಿಕ ಪದ್ಧತಿಗಳೂ ಅಂಕುರಿಸಿದವು. ಸರಳವಾದ ಧಾರ್ಮಿಕ ಭಾವನೆಗಳಲ್ಲಿ ಮಹತ್ವದ ಪರಿವರ್ತನೆಗಳುಂಟಾಗಿ ಪೌರಾಣಿಕ ಹಿಂದೂ ಮತ ಈ ಕಾಲದಲ್ಲಿ ರೂಪುಗೊಂಡಿತು.

ವೇದ, ವೇದಾಂಗ, ಉಪನಿಷತ್ತುಗಳ ಜೊತೆಗೆ ಅನೇಕ ಧಾರ್ಮಿಕ ಗ್ರಂಥಗಳು, ಸ್ಮೃತಿಗಳು, ಸೂತ್ರಗಳು, ಪುರಾಣಗಳು ಕಾಲಕ್ರಮದಲ್ಲಿ ರೂಪುಗೊಂಡವು. ಮಿಗಿಲಾಗಿ, ರಾಮಾಯಣ ಮತ್ತು ಮಹಾಭಾರತ ಕಾವ್ಯಗಳೂ ಪ್ರಚಾರಕ್ಕೆ ಬಂದವು. ವಾಲ್ಮೀಕಿ ಮಹರ್ಷಿಯಿಂದ ರಚಿತವಾದ ರಾಮಾಯಣ ೨೪೦೦೦ ಶ್ಲೋಕಗಳನ್ನೊಳಗೊಂಡು 'ಆದಿ ಕಾವ್ಯ' ಎಂದು ಪ್ರಸಿದ್ಧಿಗೆ ಬಂದಿತು. ವ್ಯಾಸಭಾರತ ಪ್ರಾರಂಭದಲ್ಲಿ ಗಾತ್ರದಲ್ಲಿ ಚಿಕ್ಕದಾಗಿತ್ತೆಂದೂ, ಕಾಲಕ್ರಮದಲ್ಲಿ ವ್ಯಾಸ ಮುನಿಗಳ ಶಿಷ್ಯವೃಂದಕ್ಕೆ ಸೇರಿದ ಭಾರ್ಗವ ಗೋತ್ರದ ವಿದ್ವಾಂಸರು ಅದನ್ನು ಒಂದು ಲಕ್ಷ

ಶ್ಲೋಕಗಳ ಉದ್ಗ್ರಂಥವಾಗಿ ಮಾರ್ಪಡಿಸಿದರೆಂದೂ ತಿಳಿದು ಬಂದಿದೆ. ರಾಮಾಯಣ–ಮಹಾಭಾರತ ಕಾವ್ಯಗಳು ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗಳನ್ನರಿಯಲು ಸಹಕಾರಿಯಾಗಿವೆ. ಮಹಾಭಾರತ ಪ್ರಾಚೀನ ಭಾರತದ ವಿಶ್ವಕೋಶವೆಂದು ಪರಿಗಣಿತವಾಗಿದೆ. ಈ ಗ್ರಂಥದಲ್ಲಿ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ವ್ಯಾಖ್ಯೆಗಳು, ವರ್ಣಾಶ್ರಮ ಧರ್ಮ, ಭೌಗೋಳಿಕ ವರ್ಣನೆ, ಆಧ್ಯಾತ್ಮಿಕ, ಪಾರಮಾರ್ಥಿಕ ವಿವರಣೆ ಮೊದಲಾದ ವಿವರವಾದ ಸಂಗತಿಗಳು ಅಡಕವಾಗಿವೆ. ಮಿಗಿಲಾಗಿ ಈ ಕಾವ್ಯ ೧೮ ಪರ್ವಗಳ ಮಧ್ಯಭಾಗದಲ್ಲಿ ೧೮ ಅಧ್ಯಾಯಗಳ ಭಗವದ್ಗೀತೆಯನ್ನೊಳಗೊಂಡಿದೆ. ಉಪನಿಷತ್ತುಗಳಂತೆ ಭಗವದ್ಗೀತೆಯೂ ಸಹ ದೇಶೀಯ, ವಿದೇಶೀಯ ದಾರ್ಶನಿಕರ ಮೇಲೆ ಪ್ರಭಾವ ಬೀರಿದೆ. ಮೇಲ್ಕಂಡ ಕಾವ್ಯ ವೈದಿಕ ಯುಗದ ಉತ್ತರಾರ್ಧ ಕಾಲದ ನಾಗರಿಕತೆಯನ್ನು ತಿಳಿಯಲು ಮುಖ್ಯ ಆಧಾರವಾಗಿದೆ.

"ರಾಮಾಯಣ ರಚನೆಯಾದ ಕಾಲದಲ್ಲಿ ವಿಂಧ್ಯದ ದಕ್ಷಿಣ ಭಾಗದಲ್ಲಿ ಆರ್ಯರು ಇನ್ನೂ ಪ್ರವೇಶಿಸಿರಲಿಲ್ಲ. ಆದರೆ ಉತ್ತರ ಭಾರತದ ಎಲ್ಲ ವಿಭಾಗಗಳಲ್ಲಿಯೂ ಅವರು ನೆಲೆಸಿದ್ದರು. ಪ್ರಾರಂಭದಲ್ಲಿ ದಕ್ಷಿಣಾವರ್ತ ಆರ್ಯರಿಗೆ ನಿಷಿದ್ಧ ಸ್ಥಳವೆಂದು ಪರಿಗಣಿತವಾಗಿದ್ದರೂ ಕಾಲ ಕ್ರಮೇಣ ಹಲವು ಋಷಿಗಳು ವಿಂದ್ಯ ಪ್ರದೇಶವನ್ನು ದಾಟಿ ದಕ್ಷಿಣದಲ್ಲಿ ಆಶ್ರಮಗಳನ್ನು ಸ್ಥಾಪಿಸಿದರು. ಮಹಾಭಾರತದ ಕಾಲದ ವೇಳೆಗೆ ದಕ್ಷಿಣ ಭಾರತ ಸುಪರಿಚಿತವಾಗಿತ್ತು. ದಕ್ಷಿಣ ಭಾರತದ ಅನೇಕ ರಾಜರು ಮಹಾಭಾರತ ಯುದ್ಧದಲ್ಲಿ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ"[1] ಎಂಬುದಾಗಿ ಪ್ರೊ॥ ಬಿ.ಷೇಕ್‌ಅಲಿಯವರು ಹೇಳುತ್ತಾರೆ.

ರಾಮಾಯಣ ಮಹಾಕಾವ್ಯದಲ್ಲಿ ಕಾಶಿ, ಕೋಸಲ, ವಿದೇಹ, ಮಿಥಿಲ, ಕೇಕಯ, ಮೊದಲಾದ ರಾಜ್ಯಗಳು ಸ್ಥಾಪಿತವಾಗಿದ್ದವು. ಮಹಾಭಾರತದ ವೇಳೆಗೆ ಕುರು, ಪಾಂಚಾಲ ರಾಜ್ಯಗಳು ಪ್ರಬಲವಾಗಿದ್ದವು. ರಾಜ್ಯಗಳು ವಿಸ್ತಾರವಾದಂತೆಲ್ಲ ರಾಜರ ಅಧಿಕಾರ ಬಲಗೊಂಡಿತು. ರಾಜರನ್ನು 'ಸಾಮ್ರಾಟ್', 'ಸ್ವರಾಟ್', 'ವಿರಾಟ್' ಮೊದಲಾದ ಬಿರುದುಗಳಿಂದ ಕರೆಯಲಾಗುತ್ತಿತ್ತು. ರಾಜಸೂಯ, ವಾಜಪೇಯ ಹಾಗೂ ಅಶ್ವಮೇಧ ಯಾಗಗಳನ್ನು ರಾಜರು ಆಚರಿಸುತ್ತಿದ್ದರು. ರಾಜತ್ವ ಅನುವಂಶೀಯವಾಗಿತ್ತು. ಹಿರಿಯ ಮಗ ಉತ್ತರಾಧಿಕಾರಿಯಾಗಿರುತ್ತಿದ್ದ. ಮಂತ್ರಿ ಪರಿಷತ್ ಸ್ಥಾಪಿತವಾಗಿತ್ತು. ಅಮಾತ್ಯ, ಪುರೋಹಿತ, ಭಂಡಾರಿ, ಸೇನಾನಿ ಮೊದಲಾದ ಅಧಿಕಾರಿಗಳು ಮಂತ್ರಿ ಪರಿಷತ್ತಿನ ಸದಸ್ಯರಾಗಿದ್ದರು. ರಾಜನ ಪಟ್ಟಾಭಿಷೇಕ ಮಹೋತ್ಸವ ವೈಭವದಿಂದ ನಡೆಯುತ್ತಿತ್ತು. ಸಿಂಹಾಸನರೋಹಣ ಸಮಯದಲ್ಲಿ ರಾಜ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸುತ್ತಿದ್ದ. ರಾಜತ್ವದ ಜೊತೆಗೆ ಸಣ್ಣ ಪುಟ್ಟ ಗಣತಂತ್ರಗಳೂ ಅಸ್ತಿತ್ವದಲ್ಲಿದ್ದವು.

ಯೋಧರು ಯುದ್ಧ ಕಲೆಯಲ್ಲಿ ನುರಿತಿದ್ದರು. ಧನುರ್ವಿದ್ಯೆ ಮುಂದುವರಿದಿತ್ತು. ಶ್ರೀರಾಮ, ಅರ್ಜುನ, ಮೊದಲಾದವರು "ಧನುರ್ಧರ ಶ್ರೇಷ್ಠ"ರೆಂದು ಖ್ಯಾತಿ ಹೊಂದಿದ್ದರು. ರಾಜಕುಮಾರರು ಪ್ರವೀಣರಾದ ಶಿಕ್ಷಕರಿಂದ ರಾಜನೀತಿ ಮತ್ತು ಧನುರ್ವಿದ್ಯೆಯನ್ನು ಕಲಿಯುತ್ತಿದ್ದರು. ಅಶ್ವದಳ, ಪದಾತಿದಳ ಮತ್ತು ಆನೆಯ ದಳಗಳನ್ನು ಯುದ್ಧಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಮಲ್ಲಯುದ್ಧ ಆಚರಣೆಯಲ್ಲಿತ್ತು. ವೈದಿಕ ಯುಗದ ಉತ್ತರಾರ್ಧದಲ್ಲಿ ಅನೇಕ ಸಾಮಾಜಿಕ ಬದಲಾವಣೆಗಳಾದವು. ಅವಿಭಕ್ತ ಕುಟುಂಬ ವ್ಯವಸ್ಥೆ ಮುಂದುವರಿದಿತ್ತು. ವೃತ್ತಿಗಳು ವಂಶಪಾರಂಪರ್ಯವಾಗಿದ್ದವು. ಜಾತಿ ಪದ್ಧತಿ ಜಟಿಲವಾಗುತ್ತಿತ್ತು. ಅಂತರ್ಜಾತೀಯ ವಿವಾಹವನ್ನು ನಿಷೇಧಿಸಲಾಗಿತ್ತು. ಕ್ಷತ್ರಿಯರು ಮಾತ್ರ ಯಾವ ವರ್ಗದ ಕನ್ಯೆಯನ್ನಾದರೂ ವಿವಾಹವಾಗಬಹುದಾಗಿತ್ತು ಹಾಗೂ ಮೇಲ್ವರ್ಗಗಳ ಪುರುಷರು ಕೆಳವರ್ಗದ ಸ್ತ್ರೀಯರ ಸಂಬಂಧ ಬೆಳೆಸಬಹುದಿತ್ತು. ಬಹುಪತ್ನಿ ಪದ್ಧತಿ ಆಚರಣೆಯಲ್ಲಿದ್ದರೂ ಏಕಪತ್ನಿ ಪದ್ಧತಿಗೆ ಸರ್ವ ಮನ್ನಣೆಯಿತ್ತು. ಶ್ರೀರಾಮ, ಹರಿಶ್ಚಂದ್ರ ಮೊದಲಾದವರು ಏಕ ಪತ್ನಿ ವ್ರತಸ್ಥರೆಂದು ಶ್ಲಾಘಿಸಲ್ಪಟ್ಟಿದ್ದಾರೆ. ಸ್ತ್ರೀಯರ ಶೀಲ ಮತ್ತು ಪಾತಿವ್ರತ್ಯಕ್ಕೆ ಹೆಚ್ಚು ಮಹತ್ವವಿದ್ದಿತು. ಬ್ರಹ್ಮ, ಆರ್ಷ, ದೈವ, ಗಾಂಧಾರ, ಪೈಶಾಚ ಮೊದಲಾದ ೮ ಬಗೆಯ ವಿವಾಹಗಳ ವರ್ಣನೆಗಳು ಆ ಕಾಲದ ಸಾಹಿತ್ಯ ಗ್ರಂಥಗಳಲ್ಲಿ ಕಾಣ ಬರುತ್ತವೆ. ಸ್ತ್ರೀಯರ ಸ್ಥಾನಮಾನಗಳಿಗೆ ಕ್ರಮೇಣ ಕುಂದುಂಟಾಯಿತು. ಸತಿ ಪದ್ಧತಿ ಆಚರಣೆಗೆ ಬಂದಿತು.

ಅನೇಕ ಸೂತ್ರ ಗ್ರಂಥಗಳು ಈ ಕಾಲದಲ್ಲಿ ರೂಪುಗೊಂಡವು. ಸೂತ್ರಗಳು ಆಶ್ರಮ ಧರ್ಮಗಳಿಗೆ ಸಂಬಂಧಿಸಿದ ನೀತಿ ನಿಯಮಗಳನ್ನೊಳಗೊಂಡಿವೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ಆಶ್ರಮ ವ್ಯವಸ್ಥೆ ಈ ಕಾಲದಲ್ಲಿ ಆಚರಣೆಗೆ ಬಂದಿತು. ಸಾಮಾನ್ಯವಾಗಿ ಈ ನಾಲ್ಕು ಆಶ್ರಮಗಳ ವ್ಯವಸ್ಥೆ ಮೇಲಿನ ಮೂರು ವರ್ಣಗಳಿಗೆ ಮಾತ್ರ ಸೀಮಿತವಾಗಿತ್ತು. ಆಯಾ ಆಶ್ರಮದಲ್ಲಿ ತೊಡಗಿದ ವ್ಯಕ್ತಿಗಳು ಅನುಸರಿಸಬೇಕಾದ ಸಂಸ್ಕಾರ, ಪದ್ಧತಿಗಳನ್ನು ಆ ಕಾಲದ ಗ್ರಂಥಗಳಲ್ಲಿ ವಿವರವಾಗಿ ವರ್ಣಿಸಲಾಗಿದೆ.

ಉತ್ತರ ಕಾಲೀನ ವೈದಿಕ ಯುಗದಲ್ಲಿ ಅನೇಕ ಧಾರ್ಮಿಕ ಬದಲಾವಣೆಗಳು ಉಂಟಾದವು. ಋಗ್ವೇದ ಯುಗದ ದೇವತೆಗಳ ಜೊತೆಗೆ ಅನೇಕಾನೇಕ ದೇವಾನುದೇವತೆಗಳ ಆರಾಧನೆ ಆಚರಣೆಗೆ ಬಂದಿತು. ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಕ್ರಮವಾಗಿ ಇವರ ಅರ್ಧಾಂಗಿಯರಾದ ಸರಸ್ವತಿ, ಲಕ್ಷ್ಮಿ, ಪಾರ್ವತಿ ಇವರ ಉಪಾಸನೆ ಬೆಳೆಯಿತು. ಕ್ರಮೇಣ ವಿಗ್ರಹಾರಾಧನೆ ಆಚರಣೆಗೆ ಬಂದಿತು. ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವು ಪ್ರಚಾರಕ್ಕೆ ಬಂದವು. ವ್ಯಾಪಕವಾದ ಯಜ್ಞ, ಯಾಗಾದಿಗಳನ್ನು ಆಚರಿಸುವ ಪದ್ಧತಿ ಬೇರೂರಿತು. ಯಜ್ಞ ಯಾಗಗಳನ್ನು ಆಚರಿಸುವ ಸಲುವಾಗಿ ಪುರೋಹಿತವರ್ಗ ರೂಪುಗೊಂಡಿತು.

ಹಾಗೆಯೇ ಮಂತ್ರಗಳಿಗೆ ಮಹತ್ವವೂ ಉಂಟಾಯಿತು. ಅಧ್ಯಯನ ಬ್ರಾಹ್ಮಣ ವರ್ಗದವರಿಗೆ ಮಾತ್ರ ಮೀಸಲಾಗಿತ್ತು. ವಟುವಿಗೆ ಉಪನಯನ ಸಂಸ್ಕಾರದೊಡನೆ ಅಧ್ಯಯನವನ್ನು ಪ್ರಾರಂಭಿಸಲಾಗುತ್ತಿತ್ತು. ಗುರುಕುಲಾಶ್ರಮಗಳಲ್ಲಿ ಪ್ರೌಢಶಿಕ್ಷಣ ಕೊಡಲಾಗುತ್ತಿತ್ತು. ನಾಲ್ಕು ವೇದಗಳು, ವೇದಾಂಗಗಳು, ಪುರಾಣಗಳು, ಜ್ಯೋತಿಷ್ಯ, ಖಗೋಳಶಾಸ್ತ್ರ ಇವು ಮುಖ್ಯ ಅಧ್ಯಯನ ವಿಷಯಗಳಾಗಿದ್ದವು. ಕ್ಷತ್ರಿಯ ರಾಜಕುಮಾರರಿಗೆ ರಾಜನೀತಿ ಮತ್ತು ಧನುರ್ವಿದ್ಯೆಗಳಲ್ಲಿ ಶಿಕ್ಷಣವನ್ನೊದಗಿಸಲಾಗುತ್ತಿತ್ತು.

ವೇದಗಳ ಕಾಲದ ಗುಂಗು ಮತ್ತು ಅಮಲಿನಿಂದ ಇಡೀ ಭಾರತ ಇಂದಿಗೂ ಹೊರ ಬಂದಿಲ್ಲ. ಕ್ರಿಸ್ತಪೂರ್ವ ೬ನೇ ಶತಮಾನದಲ್ಲಿ ಉದಯಿಸಿದ ಬೌದ್ಧಧರ್ಮ ಆ ಕಾಲದ ಪುರೋಹಿತರ ಕಬಂಧ ಬಾಹುಗಳಿಂದ ನರಳುತ್ತಿದ್ದ ಜನಸಾಮಾನ್ಯರ ಬಿಡುಗಡೆಗೆ ದಾರಿ ಮಾಡಿಕೊಟ್ಟಿತು. ಬುದ್ಧರ ಸಮಕಾಲೀನರಾದ ಮಹಾವೀರರ ಜೈನಧರ್ಮವೂ ಅದೇ ಕಾಲಕ್ಕೆ ಪ್ರವರ್ಧಮಾನಕ್ಕೆ ಬಂದಿತು. ಪಾಲಿ ಆ ಕಾಲದ ಜನ ಸಾಮಾನ್ಯರ ಆಡುಭಾಷೆಯಾಗಿತ್ತು. ವೇದಗ್ರಂಥಗಳೆಲ್ಲವೂ ಸಂಸ್ಕೃತದಲ್ಲಿದ್ದವು. ಯಾಗ-ಯಜ್ಞ, ಪುರೋಹಿತರ ಪೂಜೆ ರೈತರಲ್ಲಿ ಜನಸಾಮಾನ್ಯರಲ್ಲಿ ಭೀತಿ ಸೃಷ್ಟಿಸಿದ್ದವು. ಮೇಲು-ಕೀಳು ಜಾತೀಯತೆಯಿಂದ ಬಳಲಿದ್ದ ಜನ ಬೌದ್ಧಧರ್ಮದ ಸರಳ ಬೋಧನೆಗೆ ಮನಸೋತರು. ಜೈನಧರ್ಮದ ಅಹಿಂಸೆಯ ತತ್ವವನ್ನು ಜೀರ್ಣಿಸಿಕೊಳ್ಳುವುದು ವ್ಯವಸಾಯ ಅವಲಂಬಿತರಿಗೆ ಸಾಧ್ಯವಾಗಲಿಲ್ಲ. ಭೂಮಿಯ ಉಳುಮೆಯಲ್ಲಿ ಗೋಚರ-ಅಗೋಚರ ಜೀವಿಗಳಿಗೆ ತೊಂದರೆಯಾಗುತ್ತದೆ. ಕಳೆ ಕೀಳುವುದು, ಕೊಯ್ಲು ಮಾಡುವುದು ಹಿಂಸೆಗೆ ದಾರಿ ಎಂಬುದು ಅಂದಿನ ನಿಲುವಾಗಿತ್ತು. ಅಹಿಂಸೆ, ಸತ್ಯ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಇವು ಜೈನಧರ್ಮದ ಮೂಲತತ್ವಗಳಾಗಿದ್ದವು. ಹೀಗಾಗಿ ಜೈನರು ಕೃಷಿಯಿಂದ ಹಿಂದೆ ಸರಿದರು. ಆ ಕಾಲದಲ್ಲಿ ಗ್ರಾಮಗಳಲ್ಲಿ ನೆಲೆ ನಿಂತಿದ್ದ ಕೃಷಿಕರು ಅನಿವಾರ್ಯವಾಗಿ ಜೈನ ಧರ್ಮದಿಂದ ಬೌದ್ಧಧರ್ಮದೆಡೆಗೆ ಚಲಿಸಿದರು. (ಕರ್ನಾಟಕದಲ್ಲಿ ಗ್ರಾಮವಾಸಿಗಳಾಗಿರುವ ಜೈನರು ಈಗಲೂ ಕೃಷಿಯನ್ನೇ ಜೀವನವನ್ನಾಗಿಸಿಕೊಂಡಿದ್ದಾರೆ. ಉತ್ತರ ಭಾರತದಿಂದ ಲೇವಾದೇವಿ ವ್ಯವಹಾರಕ್ಕೆ ಬಂದು ಕರ್ನಾಟಕದ ನಗರಗಳಲ್ಲಿ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ನೆಲೆಸಿರುವ ಜೈನ ಧರ್ಮೀಯರು ಕೃಷಿ ಭೂಮಿ ಕೊಂಡು ಕೃಷಿಕರಾಗುತ್ತಿಲ್ಲ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಭೂ ವಹಿವಾಟಿನ ರಿಯಲ್ ಎಸ್ಟೇಟ್ ದಂಧೆ ಹೆಚ್ಚಿರುವ ಈ ಸಂದರ್ಭದಲ್ಲಿ ಆ ವಹಿವಾಟಿನ ಮೇಲೆ ಬಂಡವಾಳ ಸುರಿಯುವುದರಲ್ಲಿ ಜೈನರೇನೂ ಹಿಂದೆ ಬಿದ್ದಿಲ್ಲ.

ಶಾಕ್ಯ ಬುಡಕಟ್ಟಿನ ರಾಜ ಶುದ್ದೋದನ. ಅವರ ರಾಜ್ಯಧಾನಿ ಕಪಿಲವಸ್ತು. ಶುದ್ಧೋಧನ ಮತ್ತು ಮಾಯಾದೇವಿಯವರ ಮಗನಾಗಿ ಬುದ್ಧ ಜನಿಸಿದ್ದು

ಕ್ರಿಪೂ.೫೬೭ ರಲ್ಲಿ ದೊರೆತನ, ಅರಮನೆ, ಲೌಕಿಕ ಜಗತ್ತನ್ನೆಲ್ಲ ತೊರೆದು ಜ್ಞಾನೋದಯಕ್ಕೆ ಒಳಗಾದವರು ಬುದ್ಧ. ಜಾಗತಿಕ ಮಟ್ಟದ ಮಹಾ ದಾರ್ಶನಿಕ ಬುದ್ಧ ಭಾರತದ ಅಂತ:ಸಾಕ್ಷಿಯಾಗಿ ವಿಸ್ತರಿಸಿ ಬೆಳೆದಿದ್ದಾರೆ. ಅವರ ಕಾಲದ ಶಾಕ್ಯರು-ಕೋಲಿಗಳ ನಡುವಿನ ಯುದ್ಧ ಅಥವಾ ಜಗಳ ನದಿ ರೋಹಿಣಿ ನೀರಿಗಾಗಿ! ಗೌತಮ ಬುದ್ಧರು ನಡುವೆ ಪ್ರವೇಶಿಸಿ ನದಿ ನೀರಿನ ವ್ಯಾಜ್ಯ ಬಗೆಹರಿಸಿದರೆಂಬುದು ಈ ಕಾಲದಲ್ಲೂ ಆಗಾಗ್ಗೆ ಸ್ಮರಿಸಲ್ಪಡುತ್ತಿದೆ.

ಕ್ರಿಪೂ.೬೦೦ ರ ವೇಳೆಗೆ ಉತ್ತರ ಭಾರತದಲ್ಲಿ ಗಣರಾಜ್ಯಗಳ ಹಾಗೂ ಮಹಾ ಜನಪದಗಳ ಸ್ಥಾಪನೆಯಿಂದಾಗಿ ಭಾರತೀಯ ಇತಿಹಾಸದ ವಿವರಗಳು ಹೆಚ್ಚು ನಿಶ್ಚಿತವಾಗಿ ಗೋಚರಿಸುತ್ತವೆ. ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಒಂದು ಪಂಗಡವು ಶಾಶ್ವತವಾಗಿ ನೆಲೆಸುವುದರಿಂದಾಗಿ ಆ ಪಂಗಡಕ್ಕೆ ಅಥವಾ ಪಂಗಡಗಳ ಗುಂಪಿಗೆ ಆ ಪ್ರದೇಶದೊಂದಿಗೆ ಭೌಗೋಳಿಕ ಅನನ್ಯತೆ ಒದಗಿತ್ತು. ಆ ಪ್ರದೇಶದ ಒಡೆತನದ ಮನೋಭಾವನೆಯ ರೂಪದಲ್ಲಿ ಇಡಲಾಯಿತು. ಈ ಒಡೆತನವನ್ನು ಕಾಪಾಡಿಕೊಳ್ಳಲು ಮಹಾಜಾನಪದ/ ಗಣರಾಜ್ಯದ ಆಳ್ವಿಕೆಯ ವ್ಯವಸ್ಥೆಗಳು ಏರ್ಪಟ್ಟವು. ಕಾಶಿ, ಕೋಸಲ, ಅಂಗ, ಮಗಧ, ವೃಜ್ಜಿ ಅಥವಾ ವಜ್ಜಿ, ಮಲ್ಲ ಅಥವಾ ಮಾಳವ, ಚೇದಿ, ವತ್ಸವ ಅಥವಾ ವಮ್ಸ, ಕುರು, ಪಾಂಚಾಲ, ಮತ್ಸ್ಯ, ಶೂರಸೇನ, ಅಸ್ಮಾಕ, ಅವಂತಿ, ಗಾಂಧಾರ, ಕಾಂಬೋಜ....ಇವು ಆ ಹದಿನಾರು ಮಹಾಜನಪದಗಳು. ಇವಲ್ಲದೆ ೧೦ ಗಣರಾಜ್ಯಗಳು ಅಸ್ತಿತ್ವದಲ್ಲಿದ್ದವು. ೧) ಕಪಿಲ ವಸ್ತುವಿನ ಶಾಕ್ಯರು ೨) ಅಲ್ಲಕಪ್ಪದ ಬುಲ್ಲಿಯರು ೩)ಕೆಸಪಟ್ಟದ ಕಳಮಾರುಗಳು ೪) ಸಮಸುಮಾ ಬೆಟ್ಟಗಳ ಭಗ್ಗರು ೫) ಮಿಥಿಲದ ವಿದೇಹರು ೬) ವೈಶಾಲಿಯ ಲಿಚ್ಛವಿಗಳು ೭) ವಸಾಲಿಯ ನಾಯರು ೮) ಪಿಪ್ಪಲಿವನದ ಮೌರ್ಯರು ೯) ಪವದ ಮಲ್ಲರು ೧೦) ಹುಸಿನಾರದ ಮಲ್ಲರು.

ಈ ಮಹಾಜನಪದಗಳು ಮತ್ತು ಗಣರಾಜ್ಯಗಳ ಪೈಕಿ ಮಗಧ ರಾಜ್ಯವು ಪ್ರಾಬಲ್ಯಕ್ಕೆ ಬಂದು ಉಳಿದವುಗಳೆಲ್ಲ ಮಗಧ ರಾಜ್ಯದ ಅಧೀನಕ್ಕೆ ಬಂದವು. ಮಗಧ ರಾಜ್ಯವು ಇಡೀ ಉತ್ತರ ಭಾರತಕ್ಕೆ ವಿಸ್ತರಣೆಯಾಗಿ ಮೊಟ್ಟ ಮೊದಲ ಸಾಮ್ರಾಜ್ಯವಾಗಿ ಚರಿತ್ರೆಯಲ್ಲಿ ಸ್ಥಾನ ಪಡೆಯಿತು. ಉತ್ತರ ಭಾರತದ ಈ ಭೂಮಿ ಜೈನ-ಬೌದ್ಧ ಧರ್ಮಗಳ ನೆಲೆವೀಡಾಗಿ; ಕೌಟಿಲ್ಯ, ಪಾಣಿನಿ ಮತ್ತು ಪತಂಜಲಿಯವರಂತಹ ವಿದ್ವಾಂಸರ ಜನನ ಭೂಮಿಯಾಗಿ; ನಳಂದ ಮತ್ತು ವಿಕ್ರಮಶೀಲದಂತಹ ಶಿಕ್ಷಣ ಕೇಂದ್ರಗಳ ಕೇಂದ್ರವಾಗಿ ಮೌರ್ಯ, ಗುಪ್ತ ಮುಂತಾದ ಬೃಹತ್ ಸಾಮ್ರಾಜ್ಯಗಳ ಏಳಿಗೆ ಹಾಗೂ ಅವನತಿ ಕಂಡಂತಹ ಭೂ ಭಾಗವಾಗಿತ್ತು.

ಭಾರತದ ಪೂರ್ವೇತಿಹಾಸ ಋಗ್ವೇದಗಳ ಕಾಲ, ಮಹಾಜನಪದಗಳ ಕಾಲ, ಮಗಧರು, ಮೌರ್ಯರು ಮಧ್ಯಯುಗೀನ ಆಳ್ವಿಕೆ, ಮೊಘಲರು, ವಿಜಯನಗರ ಸಾಮ್ರಾಟರು, ಬ್ರಿಟೀಷರು. . . . .ಈ ಎಲ್ಲರ ಆಳ್ವಿಕೆ, ಚರಿತ್ರೆಗಳ ಹಿಂದೆ ದುಡಿಯುವ

ರೈತರ ಪರಿಶ್ರಮವೇ ಪ್ರಧಾನವಾಗಿ ಅಡಗಿದೆ. ಆದರೆ ಶುದ್ಧ ಬೇಸಾಯ ಜೀವನದ ಕುರಿತು, ಬೆಳೆ ಬೆಳೆವ ವಿಧಾನಗಳ ಕುರಿತು, ಪಶುಪಾಲನೆಯ ಕುರಿತು, ಮೀನುಗಾರಿಕೆ, ಬೇಟೆ ಇತ್ಯಾದಿ ಕುರಿತು ಅಧಿಕೃತ ಚರಿತ್ರಾ ದಾಖಲಾತಿಗಳಿಲ್ಲ. ಸಿಂಧೂ ನಾಗರಿಕತೆಯ ಉತ್ಖನನದಿಂದಾಗಿ ಅಷ್ಟು ದೊಡ್ಡ ಮಟ್ಟದ ಉನ್ನತ ನಾಗರಿಕತೆ ನಮ್ಮಲ್ಲಿತ್ತು ಎಂಬುದು ಗೊತ್ತಾಗುತ್ತದೆ. ಅಷ್ಟು ದೊಡ್ಡ ಉನ್ನತ ನಾಗರಿಕತೆಯ ಹಿಂದೆ ಅಷ್ಟೇ ಉನ್ನತ ಮಟ್ಟದ ಬೇಸಾಯ ಜ್ಞಾನದ ಬೆಂಬಲವಿತ್ತು ಎಂಬುದನ್ನು ನಾವು ಮನಗಾಣಬಹುದು. ಇಷ್ಟು ದೊಡ್ಡ ಮಟ್ಟದ ವ್ಯವಸಾಯ ಪ್ರಧಾನ ದೇಶದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಶಾಸ್ತ್ರೀಯ ಗ್ರಂಥ, ಇತಿಹಾಸದಲ್ಲಿ ರಚನೆ ಆಗದೇ ಹೋಗಿರುವುದು ಕೌತುಕದ ಸಂಗತಿ.

ಕೃಷಿ ಚಟುವಟಿಕೆ ತುಂಬಾ ಸುಲಭ ಅನ್ನುವ ಕಾರಣಕ್ಕೊ ದೇಶದ ಎಲ್ಲರೂ ಕೃಷಿಯಲ್ಲಿ ಪಳಗಿದ್ದಾರೆ ಅನ್ನುವ ಕಾರಣಕ್ಕೋ, ಆರ್ಯರು ರಚಿಸಿರುವುದೆಲ್ಲ ಸಂಸ್ಕೃತದಲ್ಲಿರುವ ಕಾರಣಕ್ಕೋ, ಬೌದ್ಧ ಯುಗವೆಲ್ಲ ಪಾಳಿ/ಪ್ರಾಕೃತ ಭಾಷೆಯಲ್ಲಿರುವುದಕ್ಕೋ, ಆನಂತರ ಉಗಮಗೊಂಡ ಬಹುಭಾಷೆಗಳ ಕಾರಣಕ್ಕೋ; ಕೃಷಿಯ ಸ್ಥಿತ್ಯಂತರಗಳ ಕುರಿತಾಗಿ, ಕೃಷಿಕರ ಜೀವನ ಕುರಿತಾಗಿ ಬಹುತೇಕ ಇತಿಹಾಸಕಾರರು ಅಷ್ಟಾಗಿ ಗಮನಹರಿಸಲಿಲ್ಲ. ಜಾನಪದ ಹಾಡುಗಳು ಲಾವಣಿಗಳು, ಗಾದೆಗಳು, ಸಾಂಸ್ಕೃತಿಕ ಆಚರಣೆಗಳು ಸದ್ಯಕ್ಕೆ ಕೃಷಿಯ ಸ್ಮೃತಿಗಳಾಗಿವೆ. ಆಯಾಯ ಕಾಲದ ರಾಜರುಗಳು, ಚಕ್ರವರ್ತಿಗಳ ಕಾಲದ ಬೇಸಾಯ ಕುರಿತು, ಭೂ ವಾರಸುದಾರಿಕೆ, ತೆರಿಗೆ ಕುರಿತು ವಿವರಗಳಿವೆಯೇ ಹೊರತು ಸಮಗ್ರವಾಗಿ ಕೃಷಿಯ ಕುರಿತಾಗಲಿ ಇಲ್ಲ. ಕೃಷಿಯ ವ್ಯವಹಾರ ಕುರಿತಂತೆ ಕಾಲ ಕಾಲಕ್ಕೆ ಬಂದ ವಿದೇಶಿ ಪ್ರವಾಸಿಗರು, ಆಳಿದ ಬ್ರಿಟೀಷರು ದೇಸಿ ಕೃಷಿ ಕುರಿತು ಗಮನ ಹರಿಸಿರುವುದರ ದಾಖಲೆಗಳಿವೆ.

(ವಾಸ್ತವವಾಗಿ ಭಾರತದ 'ಸಾಂಬಾರ ಪದಾರ್ಥ' ಗಳ ಕಾರಣವಾಗಿಯೇ ಬ್ರಿಟೀಷ್ ವ್ಯಾಪಾರಿಗಳು ಭಾರತದ ಕದ ತಟ್ಟಿದ್ದು ಮತ್ತು ಇಡೀ ದೇಶವೇ ಬ್ರಿಟೀಷರ ಕೈ ವಶವಾಗಿದ್ದು ನೋಡಿದರೆ ನಮ್ಮ ದೇಸಿ ವ್ಯವಸಾಯ ಉತ್ಪನ್ನಗಳ ಮೋಹಕತೆ ಬೆರಗಾಗಿಸುತ್ತದೆ.)

ಹತ್ತನೆ ಶತಮಾನದ ಆಜು ಬಾಜಿನಲ್ಲಿ ಬಂದ ಸುರಪಾಲನ ವೃಕ್ಷಾಯುರ್ವೇದ (ಸಂಸ್ಕೃತ ಪಠ್ಯ) ಕನ್ನಡದಲ್ಲಿ ಬಂದ ಶ್ರೀ ಘನ ಮಠ ಶಿವಯೋಗಿಗಳ "ಕೃಷಿ ಜ್ಞಾನ ಪ್ರದೀಪಿಕೆ" ಈ ಎರಡೂ ಕೃತಿಗಳು ಕೃಷಿಯ ಬಗೆಗೆ ಗಮನ ಸೆಳೆಯುತ್ತವೆ. ಆದರೆ ಇವುಗಳನ್ನು ಕೃಷಿಕರಾಗಲಿ, ಇತರರಾಗಲಿ ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ.

ಟಿಪ್ಪು ಸುಲ್ತಾನ ಮಡಿದ ಬಳಿಕ – ಇಲ್ಲಿನ ಜನ ಜೀವನ–ಸಂಸ್ಕೃತಿ ಅರಿಯಲು ಕ್ರಿ.ಶ.೧೮೦೦ ರಲ್ಲಿ ಬರುವ **HAMILTON FRANCIS BUCHANAN** ತಮ್ಮ **HISTORY OF TRAVEL** ಕುರಿತು **"A JOURNEY FROM MADRAS THROUGH THE COUNTRIES OF MYSORE, CANARA AND MALABAR"** ೧೮೦೭ ರಲ್ಲಿ ೩ ಸಂಪುಟಗಳಲ್ಲಿ ಪ್ರಕಟಣೆಯಾಗಿದೆ. ಇದು ಅಧಿಕೃತವಾಗಿ ಈ ಭಾಗದ ಆ ಕಾಲದ ಕೃಷಿಯ ವಾಸ್ತವ ಸ್ಥಿತಿಯನ್ನು ವಸ್ತುನಿಷ್ಠವಾಗಿ ನೋಡಿರುವ ಕೃತಿಯಾಗಿದೆ. ಅದರಲ್ಲಿ ಅಗತ್ಯ ಎಂದು ಕಂಡುಬಂದ ಮಾಹಿತಿಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೨.೪. ಆಧ್ಯಾತ್ಮಿಕ ಕೃಷಿ ಸಂಸ್ಕೃತಿ

ಹನ್ನೆರಡನೇ ಶತಮಾನದ ಕಾಯಕ ಚಳವಳಿ ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಯ ಉತ್ತುಂಗದ ಸ್ಥಿತಿಯನ್ನು ಸಾರುತ್ತದೆ. ಅಲ್ಲಿ ಕುಲಸಂಬಂಧಿ ಕಸುಬುಗಳು, ಬೇಸಾಯ, ಎಲ್ಲವೂ ಆಧ್ಯಾತ್ಮದ ಬೆಸುಗೆ ಪಡೆದುಕೊಂಡಿವೆ. 'ಕಾಯಕವೆ ಕೈಲಾಸ' ವೆಂಬುದು ದುಡಿಮೆಯ ಸಂಸ್ಕೃತಿಗೆ ನೀಡಿದ ಅಪ್ರತಿಮ ಗೌರವವಾಗಿದೆ. ಪುರೋಹಿತ ವರ್ಗದ ದಬ್ಬಾಳಿಕೆಯನ್ನೂ ಮೀರಿಕೊಂಡ ಅರಿವು ಆ ಕಾಲದ ತಳ ಸಮುದಾಯಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಂದಿನ ಬೇಸಾಯದ ಸ್ಥಿತಿ–ಗತಿ ಮತ್ತು ಬೇಸಾಯ, ಜೀವನದ ಸಮಸ್ತವನ್ನು ಹೇಗೆ ಆವರಿಸಿಕೊಂಡಿತ್ತು ಎಂಬುದನ್ನು ಅಲ್ಲಮ ಪ್ರಭುಗಳ ಈ ವಚನಗಳಲ್ಲಿ ನಾವು ಕಾಣಬಹುದು.

"ತನುವ ತೋಂಟವ ಮಾಡಿ
ಮನವ ಗುದ್ದಲಿ ಮಾಡಿ
ಅಗೆದು ಕಳೆದನಯ್ಯ ಭ್ರಾಂತಿನ ಬೇರೊಡೆದು
ಸಂಸಾರದ ಹೆಂಟೆಯ ಬಗಿದು
ಬಿತ್ತಿದೆಯನಯ್ಯ ಬ್ರಹ್ಮ ಬೀಜವ!
ಅಖಿರಂಡ ಮಂಡಲವೆಂಬ ಭಾವಿ
ಪವನವೆ ರಾಟಾಳ
ಸುಷಮ್ನ ನಾಳದಿಂದವೆ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಅವಾಗಲೂ ಆ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗೊಗೇಶ್ವರ" ೧

ಇಡೀ ಜಗತ್ತಿನ ಬೇಸಾಯ ಜ್ಞಾನ ಪರಂಪರೆಯಲ್ಲಿ ಮೈಲಿಗಲ್ಲಾಗಿ ನಿಲ್ಲಬಹುದಾದ ದಾರ್ಶನಿಕ ಸಾಲುಗಳಿವು. ಅಲ್ಲಮ ಪ್ರಭುಗಳು ಮೂಲತ: ಕರ್ನಾಟಕದ ಶಿವಮೊಗ್ಗೆ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ 'ಬಳ್ಳಿಗಾವಿ'ಯವರು. ಗ್ರಾಮೀಣ ಹಿನ್ನೆಲೆ ಬೇಸಾಯ ಸಂಬಂಧ ಇರುವವರು ಮಾತ್ರವೆ ಇಂಥ ಅನುಭಾವಿ ಬೆಡಗಿನ ವಚನ ಹೇಳಲು ಅಥವಾ ಬರೆಯಲು ಸಾಧ್ಯ. "ದೇಹ ದೇವಾಲಯ; ಜೀವ ದೇವ" ಎಂಬುದು ಅಲ್ಲಮರ ನಿಲುವು.

ತೋಟ, ಗುದ್ದಲಿ, ಹೆಂಟೆ, ರಾಟಾಳ, ಬ್ರಹ್ಮ ಬೀಜ, ಬೇಲಿ, ಸಸಿ. . . . ವಚನದಲ್ಲಿ ಈ ಪದಗಳ ಬಳಕೆಯ ಪ್ರಕಾರ; ಅಂದಿನ ಕಾಲದ ಬೇಸಾಯ ಅತ್ಯಂತ ವ್ಯವಸ್ಥಿತವಾಗಿತ್ತು. ಎಂಬುದನ್ನು ಹೇಳುತ್ತದೆ. ಬೆಳೆಯ ಸಂರಕ್ಷಣೆಗಾಗಿ ಬೇಲಿ ನೆಡುತ್ತಿದ್ದರು ಎಂಬುದು ತಿಳಿಯುತ್ತದೆ. ಬಾವಿ ನೀರಾವರಿ ವ್ಯವಸ್ಥೆಯೂ ಇತ್ತು ಎಂಬುದು ಗೊತ್ತಾಗುತ್ತದೆ.

ವಾಸ್ತವವಾಗಿ ಈ ವಚನವನ್ನು ಶರಣ ಗೊಗ್ಗಯ್ಯನವರ ಮುಂದೆ ಹೇಳುತ್ತಾರೆ. ಶರಣರಾದ ಸಿದ್ಧರಾಮ, ಗೋಗಯ್ಯ, ಗೋರಕ್ಷ, ಮುಕ್ತಾಯಕ್ಕ ಮುಂತಾದವರಿಗೆ ಅಲ್ಲಮ ಪ್ರಭುಗಳೇ ಆಧ್ಯಾತ್ಮಿಕ ಗುರುಗಳು. ತಾನು ತನ್ನ ಆಧ್ಯಾತ್ಮಿಕ ಸಾಧನೆಗೆ ಅರಸಿದ ಮಾರ್ಗವನ್ನು ಈ ಸೊಬಗಿನಲ್ಲಿ ಅಲ್ಲಮರು ಹೇಳುತ್ತಿದ್ದಾರೆ.

ತನುವ ತೋಂಟ ಮಾಡಿ = ದೇಹವನ್ನೆ ತೋಟವಾಗಿಸಿ, ಮನಸ್ಸನ್ನೆ ಗುದ್ದಲಿ ಮಾಡಿ, ಅಗೆದು ಕಳೆದನಯ್ಯ ಭ್ರಾಂತಿ ಎಂಬ ಬೇಡ. ಸಂಸಾರದ ಕಗ್ಗಂಟುಗಳಿಂದ ಹೊರ ಬಂದು ಮೋಕ್ಷ ಸಾಧನೆಗಾಗಿಯೇ ಬಿತ್ತಿದ್ದು 'ಬ್ರಹ್ಮ ಬೀಜ' ಆಕಾಶವೆ ಭಾವಿ, ಗಾಳಿಯೇ ರಾಟೆ ಪ್ರಾಣಾಯಾಮದಿಂದ ಸುಷಮ್ನ ನಾಡಿಯನ್ನು ಚೇತನಗೊಳಿಸಿ; ಬಸವಗಳೈವರು = ಪಂಚೇಂದ್ರಿಯಗಳು:: ಈ ಪಂಚೇಂದ್ರಿಯಗಳು ಹಸನುಗೆಡಿಸದಿರಲೆಂದು ಸಮತೆ ಸೈರಣೆಯ ಬೇಲಿಯನ್ನಿಕ್ಕಿ ಸದಾ ಜಾಗ್ರತೆಯಲ್ಲಿದ್ದು, ಸಸಿಯ ಸಲಹಿದೆ ನೋಡಾ ಗುಹೇಶ್ವರ: ಇದು ಲೌಕಿಕ ಬೇಸಾಯದ ಮೂಲಕ ಅಲೌಕಿಕ ಬೇಸಾಯವನ್ನು ಕಟ್ಟುಕೊಳ್ಳುವ ರೀತಿಯದ್ದಾಗಿದೆ.

"ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಭತ್ತವಿಲ್ಲದಿದ್ದರೆ
ಆ ಬೆವಸಾಯದ ಗೋರವೇತಕಯ್ಯ?
ಕ್ರಯ ವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕ
ಆ ಕ್ರಯ ವಿಕ್ರಯದದ ಗೋರವೇತಕಯ್ಯ?
ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ
ಆ ಓಲಗದ ಗೋರ ವೇತಕಯ್ಯ
ಭಕ್ತನಾಗಿ ಭವಂ ನಾಸ್ತಿಯಾಗದಿದ್ದರೆ
ಆ ಉಪದೇಶವ ಕೊಟ್ಟ ಗುರು ಕೊಂಡ ಶಿಷ್ಯ

ಇವರಿಬ್ಬರ ಮನೆಯಲ್ಲಿ ಮಾರಿ ಹೋಗಲಿ
ಗುಹೇಶ್ವರ ಲಿಂಗವತ್ತಲೆ ಹೋಗಲಿ." ೨

ಆ ಕಾಲದ ಬೇಸಾಯದಲ್ಲೂ ಕ್ರಯ, ವಿಕ್ರಯ, ವ್ಯಾಪಾರದಲ್ಲೂ ಕಷ್ಟಗಳಿದ್ದವು ಅನ್ನುವುದಕ್ಕೆ ಈ ವಚನ ಸಾಕ್ಷಿ. ಚೆನ್ನಾಗಿ ವ್ಯವಸಾಯ ಮಾಡಿದ್ರೂ ಮನೆಯಲ್ಲಿ ಉಣ್ಣೋದಕ್ಕೆ ಇಲ್ಲ ಅಂದ ಮೇಲೆ ಆ ವ್ಯವಸಾಯ ಯಾಕೆ ಮಾಡಬೇಕು? ಹಾಗೆಯೇ ವ್ಯವಹಾರ ಮಾಡಿ ಮನೆಯ ತಾಪತ್ರಯಗಳು ಸರಿದೂಗದಿದ್ದರೆ ಆ ವ್ಯವಹಾರವಾದರೂ ಯಾಕೆ ಬೇಕು? ಆಳುವ ದೊರೆಗೆ ಹತ್ತಿರವಾಗಿದ್ದುಕೊಂಡು ಸೇವೆ ಮಾಡಿದ್ರೂ ದಾರಿದ್ರ್ಯ ಅಂದ ಮೇಲೆ, ಆ ಓಲಗದ ಚಾಕರಿ ಏಕೆ ಬೇಕು? ಆಧ್ಯಾತ್ಮದ ದಾರಿಯಲ್ಲಿದ್ದು ತನ್ನ ತಾನು ಕಳಕೊಳ್ಳದಿದ್ದರೆ ಆ ದಾರಿಯಾದರೂ ಯಾಕೆ ಬೇಕು? ಸತ್ಯ ಅರಸುವವರು ನೋಡುವ ನಿರ್ದಾಕ್ಷಿಣ್ಯದ ನೋಟವಿದು.

"ಮರದೊಳಗಣ ಪತ್ರೆ ಫಲಂಗಳು
ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು
ಹರಭಾವದಿಚ್ಛೆಗೆ ತೋರುವವು
ಲೀಲೆಯಾದಡೆ ಉಮಾಪತಿ
ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರ." ೩

ಸೃಷ್ಟಿಯ ಈ ಬಹು ಸೂಕ್ಷ್ಮ ತತ್ವವನ್ನು ನಿರೂಪಿಸಲು ಅಲ್ಲಮರು ಬಳಸಿರುವ ಫಲ-ಪುಷ್ಪಗಳಿಂದ ಕೂಡಿರುವ ಮರದ ನಿದರ್ಶನ ಬಹು ಸರಳ ರೂಪದಲ್ಲಿರುವಂತೆ ಕಂಡರೂ ಇದರಲ್ಲಿ ಅಂತರ್ಗತವಾಗಿರುವ ತತ್ವ ಸೃಷ್ಟಿಯ ಬಹು ದೊಡ್ಡ ನಿಗೂಢತೆಯ ಕಡೆಗೆ ಹೊರಳುವಂತೆ ಮಾಡುತ್ತದೆ. ಮರದಿಂದ ಮೂಡಿ ಬಂದಿರುವ ಫಲ ಪುಷ್ಪಂಗಳು ಮರದಿಂದ ಭಿನ್ನವಾದವುಗಳಲ್ಲ. ಏಕೆಂದರೆ ಅವು ಮರದ ಎಲ್ಲ ಗುಣ ಧರ್ಮಗಳನ್ನು ಹೊತ್ತು ಮೂಡಿ ಬರುತ್ತವೆ. ಶಿವನ ಅಂತರ್ಗತ ಶಕ್ತಿಯ ಅಭಿವ್ಯಕ್ತಿಯಾದ ಜೀವ-ಜಡಯುಕ್ತವಾದ ಈ ವಿಶ್ವವು, ಪರಶಿವನ ಅವಿಚ್ಛಿನ್ನ ಶಕ್ತಿಯೇ ಹೊರತು ಮಾಯೆಯಲ್ಲ ಎಂಬುದು ಇದರ ಆಂತರ್ಯ.

"ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ಧಗೊಳಗಣ ನಿಶ್ಯಬ್ಧದಂತೆ
ಗುಹೇಶ್ವರ ನಿಮ್ಮ ಶರಣ ಸಂಬಂಧ." ೪

ಬೀಜದೊಳಗೆ ಮುಂದಿನ ವೃಕ್ಷವನ್ನೇ ಕಾಣುವ ಕಾಣ್ಕೆ ಮಹಾಕಾಣ್ಕೆ. ಇದು ಬೇಸಾಯ ಜ್ಞಾನದ ನಿಜ ಆಂತರ್ಯ. ಇಂಥ ದೃಷ್ಟಿಗೆ ಶಿಲೆಯೊಳಗೆ ಲಾವಾರೂಪಿಯಾಗಿರುವ ಅಗ್ನಿಯೂ ಕಾಣುತ್ತಾನೆ. (ಪಾವಕ=ಅಗ್ನಿ, ಬೆಂಕಿ) ಉದಕ = ನೀರು: ನೀರೊಳಗೆ ಪ್ರತಿಬಿಂಬ ಕಾಣುತ್ತದೆ. ನೀರು ಯಾರ ಪ್ರತಿಬಿಂಬ ಬೇಕಾದರೂ ತೋರಿಸುತ್ತದೆ. ಅದು, ಅದರ ಒಂದು ಸ್ಥಿತಿ. ಪುಟ್ಟದಾದ ಬೀಜದೊಳಗೆ ಬೃಹತ್ ವೃಕ್ಷವೆ ಅಡಗಿದೆ. ಬೀಜವು ವ್ಯಕ್ತರೂಪವಾದರೆ; ಅದರೊಳಗಿನ ವೃಕ್ಷ ಅವ್ಯಕ್ತ ರೂಪ. ಶ್ರವಣೇಂದ್ರಿಯ ಗ್ರಾಹ್ಯವಾದ ಶಬ್ಧದೊಳಗೆ; ಶಬ್ಧದ ಹಿಂದೆ ಅಗ್ರಾಹ್ಯವಾದ ನಿಶ್ಯಬ್ಧ ವ್ಯಾಪಿಸಿದೆ. ಯಾವ ಶಬ್ಧವೇ ಆಗಲಿ; ಅದು ನಿಶ್ಯಬ್ಧತೆಯನ್ನು ಬೇಧಿಸಲಾರದು.

“ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಕಾಯಿ
ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ.” ೫

ಸಮುದ್ರ ಎಲ್ಲಿ? ಬೆಟ್ಟದ ನೆಲ್ಲಿಕಾಯಿ ಎಲ್ಲಿ? ಯಾವತ್ತಿಗಾದರೂ ನೆಲ್ಲಿಕಾಯನ್ನು ಉಪ್ಪಿನೊಂದಿಗೆ ತಿನ್ನುವಾಗ – ಬೆಟ್ಟವನ್ನೊ ಸಮುದ್ರವನ್ನೋ ಕಲ್ಪಿಸಿಕೊಳ್ಳಲು ಆಗಿದೆಯೇ? ಒಂದು ಪ್ರಜ್ಞಾ ಪೂರ್ಣ ಸ್ಥಿತಿ. ಇದನ್ನು ಸಹಜವಾಗಿಯೇ ಪರಿಭಾವಿಸಿಬಿಡುತ್ತದೆ. ಇರಲಿ, ಆ ಕಾಲದಲ್ಲಿ ಬೆಟ್ಟದ ನೆಲ್ಲಿಕಾಯಿಯೂ ಇತ್ತು. ಉಪ್ಪು ಇತ್ತು. ಕೋಗಿಲೆಗಳೂ ಇದ್ದವು, ಮಾವಿನ ಮರಗಳೂ ಇದ್ದುವು. ಹಾಗೆಯೇ ಅಲ್ಲಮ ಪ್ರಭುಗಳೂ ಮತ್ತು ಅವರ ಗುಹೇಶ್ವರ ಲಿಂಗವೂ ಕೂಡ.

“ಭಾವದಲೊಬ್ಬ ದೇವರ ಮಾಡಿ
ಮನದಲೊಂದು ಭಕ್ತಿಯ ಮಾಡಿದಡೆ
ಕಾಯದ ಕೈಯಲಿ ಕಾರ್ಯವುಂಟೆ?
ವಾಯಕ್ಕೆ ಬಳಲುವವರು ನೋಡಾ?
ಎತ್ತನೇರಿ ಎತ್ತನರಸುವರು
ಎತ್ತ ಹೋದರೈ ಗುಹೇಶ್ವರಾ?” ೬

ಎಂಟುನೂರು ವರ್ಷಗಳ ಹಿಂದೆ ಎತ್ತು ಕೂಡ ಸವಾರಿ. ಎತ್ತಿನ ಮೇಲೇರಿ ಕುಳಿತು, ತಾನು ಏರಿ ಕುಳಿತಿರುವ ಆ ಎತ್ತನ್ನು ಹುಡುಕುತ್ತಿದ್ದಾನೆ. ಅಂತೆಯೇ ಬಹುಜನ ಸಾಧಕರು ದೇಹವೇ ದೇಗುಲವೆಂಬುದನ್ನು ಮರೆತು ಆತ್ಮವೇ ಶಿವನೆಂದು ಅರಿಯದೆ ಸಿಕ್ಕ ಸಿಕ್ಕಲೆಲ್ಲ ದೇವರನ್ನು ಹುಡುಕುತ್ತಾರೆ. ಅಲ್ಲಮರ ದೃಷ್ಟಿಯಲ್ಲಿ ಇದು ವ್ಯರ್ಥ. ಇಂತಹ ಸಾಧಕ ಜನ ಆಧ್ಯಾತ್ಮ ಸಾಧನೆಯ ಹೆಸರಲ್ಲಿ ವೃಥಾ ಬಳಲುತ್ತಿದ್ದಾರೆ ಎಂಬುದು ಅವರ ದಿಗಿಲು.

"ಹೊನ್ನು ಮಾಯೆಎಂಬರು, ಹೆಣ್ಣು ಮಾಯೆಯೆಂಬರು,
ಮಣ್ಣು ಮಾಯೆಯೆಂಬರು;
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ;
ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸಯೆ ಮಾಯೆ ಕಾಣ ಗುಹೇಶ್ವರಾ!" ೭

–ಈ ವಚನ ಲೌಕಿಕದ್ದೂ ಹೌದು; ಆಧ್ಯಾತ್ಮದ್ದೂ ಹೌದು!

"ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು
ಜಲಪ್ರಳಯವಾದಲ್ಲಿ ವಾಯುವಿನಸಂತಿರಬೇಕು
ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು
ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು
ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು." ೮

"ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತಯ್ಯಾ
ಬಯಲ ಜೀವನ, ಬಯಲ ಭಾವನೆ;
ಬಯಲು ಬಯಲಾಗಿ ಬಯಲಾಯಿತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು,
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ!" ೯

ಅಲ್ಲಮ ಪ್ರಭುಗಳು ಖಭೌತ ವಿಜ್ಞಾನಿಯ ಹಾಗೆ ಈ ಅನಂತ ಸೃಷ್ಟಿಯ ಉಗಮ – ವಿಕಾಸ – ಲಯಗಳನ್ನು ಕಾಣಿಸುವುದು ಹೀಗೆ.

"ಏಕಂ ಏಕವಾದ ವಸ್ತುವ ಲೋಕಾಲೋಕಂಗಳರಿಯವು
ಸ್ಥೂಲ ಸೂಕ್ಷ್ಮವೆನುತಿಪ್ಪರೆಲ್ಲರೂ!
ಆತನೀತ ಬೇರೆ ಮತ್ತೊಬ್ಬಾತನೆಂಬ ಭ್ರಮೆಯಲ್ಲಿ

ಭೂತಪ್ರಾಣಿಗಳವರೆತ್ತ ಬಲ್ಲರು ಆತನ ಘನವ?
ಚಿಟುಕು ಮುನ್ನೂರರವತ್ತು ಕೂಡಿದೊಡೆ ಒಂದು ವಿಘಳಿಗೆ,
ಆ ವಿಘಳಿಗೆ ಅರುವತ್ತು ಕೂಡಿದೊಡೆ ಒಂದು ಘಳಿಗೆ,
ಆ ಘಳಿಗೆ ಅರುವತ್ತು ಕೂಡಿದೊಡೆ ಒಂದು ದಿನ,
ದಿನ ಮೂವತ್ತು ಕೂಡಿದೊಡೆ ಒಂದು ಮಾಸ,
ಮಾಸ ಹನ್ನೆರಡು ಕೂಡಿದೊಡೆ ಒಂದು ವರುಷ,
ವರುಷ ಅರುವತ್ತು ಕೂಡಿದೊಡೆ ಒಂದು ಸಂವತ್ಸರ –
ಇಂತೀ ಕಾಲಚಕ್ರಂಗಳು ಈ ಪರಿಯಲ್ಲಿ ತಿರುಗಿ ಬರುತ್ತಿಹವು ಕಾಣಿರೆ.
ನಾಲ್ಕು ಯುಗಂಗಳು ಬೇರೆ ಬೇರೆ ಕಟ್ಟಿದ ಕಟ್ಟಡಳೆಯೊಳು,
ತಿರುಗಿ ಬರುತ್ತಿಹರು ಕಾಣಿರೆ.
ಕೃತಯುಗ ಹದಿನೇಳು ಲಕ್ಷವು ಇಪ್ಪತ್ತೆಂಟು ಸಾವಿರ ವರ್ಷ ವರ್ತಿಸಿ ನಿಂದಿತ್ತು.
ತ್ರೇತಾಯುಗ ಹನ್ನೆರಡು ಲಕ್ಷವು ತೊಂಭತ್ತಾರು ಸಾವಿರ ವರ್ಷ ವರ್ತಿಸಿ ನಿಂದಿತ್ತು.
ದ್ವಾಪರಯುಗ ಎಂಟು ಲಕ್ಷವು ಅರುವತ್ತು ನಾಲ್ಕು ಸಾವಿರ ವರ್ಷ ವರ್ತಿಸಿ ನಿಂದಿತ್ತು.
ಕಲಿಯುಗ ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ವರ್ಷ ವರ್ತಿಸಿ ನಿಂದಿತ್ತು.
–ಇಂತೀ ನಾಲ್ಕು ಯುಗಂಗಳು ಕೂಡಿ ಒಂದಾಗಿ ಮೇಳಯಿಸಿದೊಡೆ,
ನಾಲ್ವತ್ತು ಮೂರು ಲಕ್ಷವು ಇಪ್ಪತ್ತು ಸಾವಿರ ವರುಷ ಕಟ್ಟಳೆಯಾಯಿತ್ತು.
ಈ ನಾಲ್ಕು ಯುಗಂಗಳು ಇಪ್ಪತ್ತೊಂದು ಬಾರಿ ತಿರುಗಿದಡೆ
ಸುರಪತಿಗೆ ಪರಮಾಯು, ಬ್ರಹ್ಮಂಗೆ ಜಾವ.
ಅಷ್ಟಾಶಿತಿ ಸಹಸ್ರ ಋಷಿಯರು ಸಾವಿರ ಬಾರಿ ತಿರುಗಿದಡೆ
ಬ್ರಹ್ಮಂಗೆ ಆಯುಷ್ಯ ನೂರಪ್ಪುದು, ವಿಷ್ಣುವಿಗೆ ಜಾವವಪ್ಪುದು.
ಆ ವಿಷ್ಣುವಿನ ಒಂದು ದಿನ (ಜಾವ?)ದೊಳಗೆ
ನಾಲ್ಕುಬಾರಿ ಹುಟ್ಟಿ ನಾಲ್ಕು ಬಾರಿ ಹೊಂದುವ ಬ್ರಹ್ಮನು,
ಆ (ದಿ) ವಿಷ್ಣುವಿನ ಒಂದು ದಿನವಪ್ಪರು (ಅಂಥ ವಿಷ್ಣುವಿನ ಒಂದು ದಿನದಲ್ಲಿ)
ಸಮಸ್ತ ಈರೇಳು ಭುವನಂಗಳೆಲ್ಲ ಭೂತ ಸಂಹಾರ,
ಅಂಥಾ ಭೂತ ಸಂಹಾರಂಗಳು
ಹದಿನೆಂಟು ಲಕ್ಷವು ಇಪ್ಪತ್ತೆಂಟು ಸಹಸ್ರ ವರುಷ ತಿರುಗಲು
ಪೃಥ್ವಿಯೆಲ್ಲಾ ಜಲ ಪ್ರಳಯ
ಅಂಥಾ ಜಲಪ್ರಳಯವೆಂಟು ಬಾರಿ ತಿರುಗಿದಡೆ ವಿಷ್ಣುವಿಂಗೆ ಮರಣ,
ರುದ್ರಂಗೆ ನಿಮಿಷ,
ಅಂಥಾ ರುದ್ರನ ಒಂದು ನಿಮಿಷದಲ್ಲಿ
ಅತಳ ವಿತಳ ಸುತಳ ಮಹೀತಳ ರಸಾತಳ ತಳಾತಳ ಪಾತಾಳ
ಇಂತು ಕೆಳಗೇಳು ಭುವನಂಗಳು,
ಮೇಲೆ, ಸತ್ಯಲೋಕ ಜನರ್ಲೋಕ, ತಪೋಲೋಕ ಮಹರ್ಲೋಕ ಸ್ವರ್ಲೋಕ

ಭುವರ್ಲೋಕ, ಭೂಲೋಕ ಮೊದಲಾಗಿ –
ಇಂತೀ ಲೋಕಾಲೋಕಂಗಳೆಲ್ಲ ಮುಳುಗಿ
ಮಹಾಪ್ರಳಯವಾದಲ್ಲಿ ರುದ್ರಲೋಕವೊಂದುಳಿಯೆ, ಆ ರುದ್ರಂಗೆ ಒಂದು ದಿನ.
ಅಂಥಾ ದಿನ ಮುನ್ನೂರರುವತ್ತು ಕೂಡಿದಡೆ ಒಂದು ವರುಷ.
ಅಂಥಾ ವರುಷ ಶತಕೋಟಿ ಕೂಡಿದಡೆ ರುದ್ರಂಗೆ ಪರಮಾಯು.
ಅಂಥಾ ರುದ್ರರು ಅನೇಕರು ಹೋದರಲ್ಲಾ,
ಮತ್ತಂಪಶುಪತಿ, ಶಂಕರ, ಶಶಿಧರ, ಸದಾಶಿವ, ಗೌರಿಪತಿ,
ಮಹಾದೇವ ಈಶ್ವರರೆಂಬವರು
ಆ ದಿನದಲ್ಲಿ ಇವರು ಪ್ರಥಮ ಗಣೇಶ್ವರರು, ತಪೋರಾಜ್ಯವನುಂಬರು.
ತಪಕ್ಕೆ ಬಿಜಯಂಗೈವರು ಆ ರುದ್ರರು
ಲೋಕಾಲೋಕಂಗಳು ಕೂಡಿ ಭೂ ವರ್ತಿಸುತ್ತಿದ್ದಿತ್ತೊಂದು ಕೆಲವು ಕಾಲ,
ಅದು ತೊಡೆದು ಹೋಯಿತ್ತು,
ಬಳಿಕ ಶೂನ್ಯವರ್ತಿಸುತ್ತಿದ್ದಿತ್ತೊಂದು ಕೆಲವು ಕಾಲ,
ಅದು ತೊಡೆದು ಹೋಯಿತ್ತು,
ಬಳಿಕ ಕಾಳಾಂಧರ ವರ್ತಿಸುತ್ತಿದ್ದಿತ್ತೊಂದು ಕಾಲ
ಅದು ತೊಡೆದು ಹೋಯಿತ್ತು – ಬಳಿಕ ಮಹಾಪ್ರಕಾಶದ ಬೆಳಗು,
ಇಂತಹ ಕಾಲಂಗಳು ಈ ಪರಿಯಲ್ಲಿ ತಿರುಗಿ ಬರುತ್ತಿಹವು ಕಾಣಿರೆ !
ಅಂತಹ ಕಾಲಂಗಳೂ ಅರಿಯವು, ಅಂತಹ ದಿನಂಗಳೂ ಅರಿಯವು
ಅಂತಹ ದೇವತೆಗಳೂ ಅರಿಯರು,
ಅಪ್ರಮಾಣ ಅಗಮ್ಯ ಅಗೋಚರ ಉಪಮಿಸಬಾರದು.
ಅಂತಿಂತೆನಲಿಲ್ಲ ಗುಹೇಶ್ವರ ಲಿಂಗ ನಿರಂಜನ ನಿರಾಳ! ನಿರಾಮಯ!" ೧೦

<u>ಕಾಲ ಚಕ್ರ</u>

೧ ಕ್ಷಣ = ಚಿಟುಕು (ಚಿಟಿಕೆ ಹೊಡೆಯುವಷ್ಟು ಸಮಯ)
೩೬೦ ಚಿಟುಕು = ೧ ವಿಘಳಿಗೆ
೬೦ ವಿಘಳಿಗೆ = ೧ ಘಳಿಗೆ
೬೦ ಘಳಿಗೆ = ೧ ದಿನ
೩೦ ದಿನ = ೧ ಮಾಸ
೧೨ ಮಾಸ = ೧ ವರ್ಷ
೬೦ ವರ್ಷ = ೧ ಸಂವತ್ಸರ
೧೭೨೮೦೦೦ ವರ್ಷ = ಕೃತಯುಗ

೧೨೯೬೦೦೦ ವರ್ಷ = ತ್ರೇತಾಯುಗ
೮೬೪೦೦೦ ವರ್ಷ = ದ್ವಾಪರಯುಗ
೪೩೨೦೦೦ ವರ್ಷ = ಕಲಿಯುಗ
೪೩೨೦೦೦೦ ವರ್ಷ = ೪ ಯುಗಗಳು

೪೩,೨೦,೦೦೦ (೪ ಯುಗಗಳು) X ೭೧ = ದೇವೇಂದ್ರನ ಪರಮಾಯುಷ್ಯ = ಬ್ರಹ್ಮನ ೧ ಜಾವ

ಬ್ರಹ್ಮನ ಪರಮಾಯುಷ್ಯ = ೮೮೦೦೦ ಋಷಿಗಳು x ೧೦೦೦ ಜನ್ಮ (೧೦೦ ವರ್ಷ) = ವಿಷ್ಣುವಿನ ೧ ಜಾವ (೪ ಜಾವ = ೧ ದಿನ)

ವಿಷ್ಣುವಿನ ೧ ದಿನ = ಬ್ರಹ್ಮನ ೪ ಜನ್ಮ ೧೪ ಲೋಕಗಳ ಪ್ರಳಯ (ಭೂತ ಸಂಹಾರ)

೧೮,೭೮,೦೦೦ ಭೂತ ಸಂಹಾರ = ಪೃಥ್ವಿಯ ಜಲಪ್ರಳಯ

೮ ಜಲ ಪ್ರಳಯ = ವಿಷ್ಣುವಿನ ಆಯುಷ್ಯ
= ರುದ್ರನ ೧ ನಿಮಿಷ
= ೧೪ ಲೋಕಗಳ ಮಹಾ ಪ್ರಳಯ

ರುದ್ರನ ೩೬೦ ದಿನ = ರುದ್ರನ ೧ ವರ್ಷ

೧,೦೦,೦೦,೦೦,೦೦೦ ವರ್ಷ = ರುದ್ರನ ಆಯುಷ್ಯ

ಚಿಟುಕು = ಚಿಟಿಕೆ ಹಾಕುವುದಕ್ಕೆ ಬೇಕಾದ ಅತ್ಯಲ್ಪ ಸಮಯ ಒಂದು ಕ್ಷಣ.

ವಿಘಳಿಗೆ = ಮೂರುನೂರ ಅರವತ್ತು ಕ್ಷಣಗಳು, ೨೪ ಸೆಕೆಂಡುಗಳು

ಘಳಿಗೆ = ೨೪ ನಿಮಿಷಗಳು

ಸಂವತ್ಸರ = ೬೦ ವರ್ಷಗಳ ಒಂದು ಗುಂಪು

ಜಾವ = ಯಾಮ, ೩ ತಾಸು

ವರ್ತಿಸು = ಇರು, ಕ್ರಿಯಾಶೀಲವಾಗಿ ಅಸ್ತಿತ್ವದಲ್ಲಿ ಇರು

ತೊಡೆದುಹೋಗು = ಅಡಗಿ ಹೋಗು.

ಇದು ಕ್ಷಣದಿಂದ ಆರಂಭವಾಗುವ ಕಾಲದ ಭವ್ಯ ಚಕ್ರ

ಸೃಷ್ಟಿಯ ಉಗಮದೊಂದಿಗೆ ಪ್ರವಹಿಸಲು ತೊಡಗಿದ ಕಾಲವು ಸೃಷ್ಟಿಯ ಅಸ್ತಮಾನದೊಂದಿಗೆ ಶಾಂತವಾಗುತ್ತದೆ. ಇದು ಕಾಲದ ಒಂದು ಆವರ್ತನ. ಈ ಆವರ್ತನದೊಳಗೆ ಯಾವುದೇ ವಸ್ತು, ಯಾವುದೇ ವ್ಯಕ್ತಿ ಅಥವಾ ಶಕ್ತಿ ಸಿಲುಕಿರಲಿ, ಅದು ಕಾಲದೊಂದಿಗೆ ಸುತ್ತಲೇಬೇಕು. ಜನ್ಮ-ಜೀವನ-ಮರಣ ಈ ಕಾಲಾ ವರ್ತನೆಗೆ ಒಳಗಾಗಲೇಬೇಕು. ಅತ್ಯಲ್ಪಕಾಲ ಬದುಕುವ ಜೀವರೇ ಇರಲಿ, ಅವರು ಆವರ್ತನದಿಂದ ಹೊರಗಲ್ಲ. ಜೀವಿಯೊಂದು ಹುಟ್ಟಿ ಸಾಯುವಂತೆ ಸೃಷ್ಟಿಯನ್ನು ನಿಯಂತ್ರಿಸುವ, ಅಸಂಖ್ಯ ಕಾಲ ಬದುಕುವ ರುದ್ರ-ಭದ್ರ ಎಂಬುವರೂ

ಸಾಯಲೇಬೇಕು. ಮೊದಲು ಸಾಮಾನ್ಯ ಜೀವಿಗಳ ಲಯ, ಮಧ್ಯದಲ್ಲಿ ದೇವ-ದೇವತೆಗಳ ಲಯ, ಕೊನೆಯಲ್ಲಿ ಏನಿರುವುದೆಲ್ಲ ಲಯ. ಉಳಿವುದು ಶೂನ್ಯ-ನಿಶ್ಶೂನ್ಯ ಅಪ್ರಮಾಣ ಅಗಮ್ಯ, ಅಗೋಚರ ಉಪಮಿಸಬಾರದು. . . .ನಿರಾಮಯ.

ವಚನಕಾಲದ ಎಲ್ಲ ಮಹನೀಯರು ಶ್ರದ್ಧೆಯ ಕಾಯಕದಲ್ಲಿ ತೊಡಗಿ ೧೨ನೇ ಶತಮಾನದ ಆ ಎಲ್ಲಾ ವೈರುಧ್ಯಗಳನ್ನು ಪ್ರತಿನಿಧಿಸುವುದರೊಂದಿಗೆ – ಒಂದು ಬಗೆಯ ಪಾರದರ್ಶನ ಸ್ಥಿತಿಯನ್ನು ಕಾಣಲು ಪ್ರೇರೇಪಿಸುತ್ತಾರೆ. ಬಿಜ್ಜಳ ಮಹಾರಾಜ, ಬಸವಣ್ಣ, ಅಕ್ಕ ಮಹಾದೇವಿ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ, ಮಡಿವಾಳರ ಮಾಚಯ್ಯ ಹೀಗೆ ಸಮಸ್ತರೂ ಸಮಗ್ರ ಜೀವನವನ್ನು ಅಭಿವ್ಯಕ್ತಿಸುತ್ತ ಆ ಕಾಲದ ಸಾಕ್ಷಿ ಪ್ರಜ್ಞೆಯಾಗಿದ್ದಾರೆ. ಮುಂದೆ ಸಾಂದರ್ಭಿಕವಾಗಿ ಬರುವ ವಚನಗಳಿಗೆ ಸರ್ವಜ್ಞನ ಕಾಣ್ಕೆ, ಜಾನಪದರ ಒಳನೋಟ, ರೈತರ ಮತ್ತು ರೈತಮಹಿಳೆಯರ ಸಾಮಾಜಿಕ ಕಾಳಜಿ; ಇವೆಲ್ಲವೂ ಈ ಅಧ್ಯಯನದ ಧಾರೆಯಲ್ಲಿ ನಿರಂತರವಾಗಿ ಪ್ರವಹಿಸುತ್ತಿರುತ್ತವೆ.

ಈ ಎಲ್ಲವೂ ಕೂಡ ಈ ಅಧ್ಯಯನದ ಮಹತ್ವವನ್ನು ಹೆಚ್ಚಿಸಿವೆ ಮತ್ತು ಅಧ್ಯಯನಕಾರನನ್ನು ಸಮಚಿತ್ತ ಮಟ್ಟದಲ್ಲಿನ ಅಧ್ಯಯನದ ಯಶಸ್ಸಿಗೆ ಪ್ರೇರಣಾದಾಯಕವಾಗಿವೆ.

೧೨ನೇ ಶತಮಾನದ ಕಾಯಕ ತತ್ಪರತೆ, ಆಧ್ಯಾತ್ಮಿಕ ಹಂಬಲ, ಸಾಮಾಜಿಕ ಕಾಳಜಿಯೂ ಆಗಿ ಸಮಾನತೆಯ ಆಶಯವೂ ಒಡಮೂಡಿ ಮುಂದೆ ಅವುಗಳ ಪ್ರಭಾವ ದಟ್ಟವಾಗಿ ವಿಸ್ತಾರವಾಗುವುದನ್ನು ಕಂಡಿದ್ದೇವೆ. ತಮ್ಮ ಕುಲ ಕಸುಬುಗಳನ್ನು ಗೌರವದಿಂದ ಕಾಣುವ; ಬೇಸಾಯ ಜೀವನವನ್ನು ಬದುಕಿನ ಸಾರ್ಥಕತೆಯಾಗಿ ಪರಿಭಾವಿಸುವ, ಮಹಿಳೆಯರನ್ನು ಘನತೆಯಿಂದ ಕಾಣುವ ಕಾಲಧರ್ಮವಾಗಿ ಇದು ಕನ್ನಡ ನೆಲದಲ್ಲಿ ಪಸರಿಸಿತು. ವೀರಶೈವಧರ್ಮ ಮತ್ತು ಅದರ ಉಳಿದ ಶಾಖಾ ಮಾರ್ಗಗಳು ಮೂಲತ: ಬೇಸಾಯ ಸಂಸ್ಕೃತಿಯಿಂದಲೆ ಅರಳಿದವುಗಳು. ಶರಣ ಚಳವಳಿಗೂ ಹಿಂದೆ ಹುಟ್ಟಿದ ಮಠಗಳು (ಸುತ್ತೂರು ವೀರಸಿಂಹಾಸನ ಮಠ) ಆನಂತರ ಹುಟ್ಟಿದ ಮಠಗಳು ಬೇಸಾಯ ಸಂಸ್ಕೃತಿಯ ನಡುವೆಯೇ ಹುಟ್ಟಿ ಬೇಸಾಯವನ್ನು ಅಭಿವೃದ್ಧಿಪಡಿಸುತ್ತ; ಅದನ್ನು ಅನುಸರಿಸುವ ಜನರಿಗೆ ಮಾರ್ಗದರ್ಶನ ಮಾಡುತ್ತ ಅವರ ನಡುವೆಯೇ ಬೇರೂರಿದವು. ಇವತ್ತು ಕರ್ನಾಟಕದಲ್ಲಿರುವ ಎಲ್ಲ ವೀರಶೈವ ಮಠಗಳು ಗ್ರಾಮೀಣ ಶ್ರಮಿಕರಿಂದ, ಗ್ರಾಮೀಣ ಜೀವನ ಮತ್ತು ಗ್ರಾಮೀಣ ಬೇಸಾಯ ಸಂಸ್ಕೃತಿಯ ನೆರವಿನಿಂದಲೇ ಹುಟ್ಟಿದಂಥವುಗಳು. ಹಾಗೆ ನೋಡಿದರೆ ಕರ್ನಾಟಕದಲ್ಲಿರುವ ಎಲ್ಲ ಮೂಲ ಬೇಸಾಯ ಸಂಸ್ಕೃತಿಯ ಮಠಗಳು ಅನುಭಾವ ಮತ್ತು ಬೇಸಾಯ ಎರಡಕ್ಕೂ ಹೆಗಲೆಣೆಯಾಗಿವೆ. 'ದಾಸೋಹ' ಮತ್ತು ಶಿಕ್ಷಣ ಬಹುತೇಕ ಎಲ್ಲ ಮಠಗಳ ಮೂಲ ಆಶಯಗಳಾಗಿದ್ದವು. ಇದೀಗ ದಾಸೋಹ, ಶಿಕ್ಷಣ, ಆರೋಗ್ಯ ಅವುಗಳ ಪ್ರಧಾನ ಕಾಳಜಿಗಳಾಗಿವೆ.

೨.೫. ಸುರಪಾಲನ ವೃಕ್ಷಾಯುರ್ವೇದ ಸಂಸ್ಕೃತಿ

ಕೃಷಿಯ ಚರಿತ್ರೆಯಲ್ಲಿ ಶುದ್ಧ ಬೇಸಾಯಕ್ಕೆ ಸಂಬಂಧಿಸಿದಂತೆ ಸುಮಾರು ನೂರೈವತ್ತು ವರ್ಷಗಳ ಹಿಂದಿನವರೆಗೆ ಸಿಗುವ ಕೃತಿಗಳು ಬೆರಳೆಣಿಕೆಯಷ್ಟು, ಅದರಲ್ಲಿ ಸುರಪಾಲ ಮುನಿಯ ವೃಕ್ಷಾಯುರ್ವೇದವೂ ಒಂದು. ಇವರನ್ನು ಕ್ರಿಶ. ಹತ್ತನೆ ಶತಮಾನದ ಆಜು ಬಾಜಿನವರೆಂದು ಪರಿಗಣಿಸಲಾಗಿದೆ. ಸುಬಂಧುವಿನ "ವಾಸವದತ್ತಾ" (೭ನೇ ಶತಮಾನ) ದ ಕೃತಿಯಲ್ಲಿ 'ಸುರಪಾಲ ವೃತ್ತಿಮಿವದರ್ಶಿತ ಗಣಿಕಾರಮ್' ಎಂಬ ಶಬ್ಧ ಪ್ರಯೋಗವಾಗಿದೆ. ಆ ಕಾರಣಕ್ಕೆ ಆತ ೭ನೇ ಶತಮಾನಕ್ಕೂ ಹಿಂದಿನವನಿರಬಹುದು ಎಂಬ ಜಿಜ್ಞಾಸೆಗೆ ಕಾರಣವಾಗುತ್ತದೆ. 'ಸುರಪಾಲ' ಅಂತ ಒಬ್ಬರೆ ಇರಲಿಲ್ಲ. ಬಹಳ ಜನ ಇದ್ದರು. ಹೀಗಾಗಿ ವೃಕ್ಷಾಯುರ್ವೇದದಲ್ಲಿ ಸುರಪಾಲ ಆಗಿರಲು ಸಾಧ್ಯವಿಲ್ಲ' ಎಂದು ವಿದ್ವಾಂಸರಾದ ನಳಿನಿಸಾಧತಿ ಹೇಳುತ್ತಾರೆ.

ಆರನೇ ಶತಮಾನದ ವರಾಹಮಿಹಿರ ಋಷಿ 'ಬೃಹತ್ಸಂಹಿತಾ' ಗ್ರಂಥ ರಚಿಸಿದ್ದಾರೆ. ಇದೂ ಕೂಡ ಸಂಸ್ಕೃತದಲ್ಲಿದೆ. ಗ್ರಂಥದಲ್ಲಿ ಜ್ಯೋತಿಷ್ಯಶಾಸ್ತ್ರ, ಭೌತಶಾಸ್ತ್ರ, ವಾಸ್ತುಶಿಲ್ಪ'ದ ಜೊತೆಗೆ ತೋಟಗಾರಿಕೆಯ ಅಧ್ಯಾಯವೂ ಇದೆ. ಹದಿಮೂರನೆ ಶತಮಾನದಲ್ಲಿ ಶಾರ್ಙ್ಗಧರ 'ಶಾರ್ಙ್ಗಧರ ಪದ್ಧತಿ' ಎಂಬ ಸಂಕಲಿತ ಗ್ರಂಥವೊಂದನ್ನು ತಂದಿದ್ದಾರೆ. ಆ ಗ್ರಂಥದಲ್ಲಿ ಒಂದು ಅಧ್ಯಾಯವಾಗಿ 'ಉಪವನ ವಿನೋದ' ಇದೆ. ಈ ಉಪವನ ವಿನೋದದಲ್ಲಿ ಸುರಪಾಲನ ವೃಕ್ಷಾಯುರ್ವೇದವೂ; ವರಾಹಮಿಹಿರರ 'ಬೃಹತ್ಸಂಹಿತ'ಗಳ ಉಲ್ಲೇಖಗಳು ಕಾಣಸಿಗುತ್ತವೆ. 'ಉಪವನ ವಿನೋದ' ಅನೇಕ ಸಂಗತಿಗಳ ಸಂಗ್ರಹವಾಗಿದ್ದು, ವೃಕ್ಷೋದ್ಯಾನದ ಬಗೆಗಿನ ವಿವರಗಳನ್ನು ಕೊಡುತ್ತದೆ. ಗಿಡಗಳನ್ನು ನೆಡುವುದು, ಗಿಡಗಳನ್ನು ಪೋಷಿಸುವುದು, ಮಣ್ಣಿನ ವಿಧಗಳು, ರೋಗಗಳು ಮತ್ತು ಪರಿಹಾರ, ಅಂತರ್‌ಜಲ ಶೋಧನೆ....ಹೀಗೆ ವೃಕ್ಷಾಯುರ್ವೇದದಲ್ಲಿರುವ ಬಹುಪಾಲು ವಿಷಯಗಳು 'ಶಾರ್ಙ್ಗಧರ ಪದ್ಧತಿ'ಯಲ್ಲಿ ಕಾಣಸಿಗುತ್ತವೆ.

ಸುರಪಾಲ ಮುನಿಯ ಕೃತಿ ರಚನೆಗೂ ಮುಂಚೆ ಇದ್ದ ಜ್ಞಾನ–ಅಥರ್ವವೇದ, ವರಾಹಮಿಹಿರನ ಬೃಹತ್ಸಂಹಿತೆ, ಸಾರಂಗಧರನ 'ಸಾರಂಗಧರ ಪದ್ಧತಿ', ಇತ್ಯಾದಿಗಳನ್ನು ಇದು ಒಳಗೊಂಡಿದೆ. ಚರಕ ಮತ್ತು ಸುಶ್ರುತ ಸಂಹಿತೆಗಳಲ್ಲಿ ಅವುಗಳ ಔಷಧೀಯ ವಿಷಯಗಳು ಬರುತ್ತವೆ. ಗೃಹ್ಯಸೂತ್ರ, ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿ, ಪರಾಶರ ಮುನಿಗಳ ಕೃಷಿ ಸಂಗ್ರಹ, ಕಾಮಂದಕೀಯ ನೀತಿಸಾರ, ಬುದ್ಧರ ಜಾತಕ ಕತೆಗಳು; ಮತ್ಸ್ಯ, ವರಾಹ, ಪದ್ಮ, ಅಗ್ನಿ ಪುರಾಣಗಳು;

ಮಹಾಭಾರತ, ರಾಮಾಯಣಗಳ ಉಲ್ಲೇಖಗಳಲ್ಲಿ ಕಂಡುಬರುವ ಮರ, ಗಿಡಗಳು....ಇತ್ಯಾದಿಗಳೆಲ್ಲವೂ ಸುರಪಾಲ ಮುನಿಗಳ ಕೃತಿಗೆ ಬನಿ ತಂದಿರಬೇಕು.

ವೃಕ್ಷಾಯುರ್ವೇದವು ಸಾವಿರ ವರ್ಷಗಳಿಗೂ ಮುಂಚಿನದು ಎಂಬ ಕಾರಣಕ್ಕೆ ಮತ್ತು ಆವರೆಗಿನ ಜ್ಞಾನದ ಫಲಿತಾಂಶ ಎಂಬ ಕಾರಣಕ್ಕೆ ಅದರ ಪಾಠದ ಸಂಗ್ರಹಗಳನ್ನು ಇಲ್ಲಿ ಉಲ್ಲೇಖಿಸುವುದು 'ಅಗತ್ಯ' ಎಂಬುದನ್ನು ಮನಗಾಣಲಾಗಿದೆ. ಡಾ॥ ವೈ.ಎಲ್.ನೇನೆ ಅವರ 'ASIAN AGRI-HISTORY FOUNDATION' ಗಾಗಿ ಹೈದ್ರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕಿ ಡಾ॥ ನಳಿನಿ ಸಾಧಲೆ ಅವರು ಸುರಪಾಲ ಮುನಿಗಳ ಮೂಲ ಸಂಸ್ಕೃತ ಪಠ್ಯವನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದ ಆರ್.ಪಿ.ಹೆಗಡೆ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ.

೩೭೫ ಸಂಸ್ಕೃತ ಶ್ಲೋಕಗಳಿರುವ ಕೃತಿ ಸುರಪಾಲರ ವೃಕ್ಷಾಯುರ್ವೇದ. ಇವುಗಳಲ್ಲಿ ೧೮೪ ಮತ್ತು ೨೦೨ ರ ಸಂಖ್ಯೆಯ ಶ್ಲೋಕಗಳು ಕಾಣೆಯಾಗಿವೆ.

೨. ಸಂತೋಷವನ್ನು ಅನುಭವಿಸಲು ರಾಜನು ಸುಂದರವಾದ ಉದ್ಯಾನವನಗಳನ್ನು ಅವಲಂಬಿಸದೆ, ಕೇವಲ ಯೌವನ, ಆಕರ್ಷಕ ದೇಹಸೌಷ್ಟವ, ಸುಂದರ ಮಹಿಳೆಯರು, ಜಾಣಮಿತ್ರರು, ಮಧುರಸಂಗೀತ, ಮರಗಳು ಇತ್ಯಾದಿಗಳನ್ನು ಬಯಸುವುದು 'ಅರ್ಥಹೀನ'.

೪. ಅಡವಿಯಲ್ಲಿ ಬೆಳೆದ ನಾನಾ ಬಗೆಯ ವೃಕ್ಷಗಳ ಪ್ರಯೋಜನವಾಗಲಿ, ಧರ್ಮ ಮತ್ತು ಅರ್ಥಗಳ ಉಪಯುಕ್ತತೆಯನ್ನು ಸಿದ್ಧಪಡಿಸಲಾಗದ ಮಕ್ಕಳ ಪ್ರಯೋಜನವಾಗಲಿ ಏನು? (ಅದರ ಬದಲು) ದಾರಿಯ ಬದಿಯಲ್ಲಿನ ಒಂದು ಮರವು ತನ್ನ ಕೆಳಗಿನ ನೆರಳಲ್ಲಿ ದಾರಿಹೋಕರಿಗೆ ಆಸರೆಯನ್ನು ನೀಡಬಲ್ಲುದಾದರೆ ಅದೇ ಉತ್ತಮವಾದುದು.

೫. ಐದು ಗಿಡಗಳನ್ನು ನೆಡುವುದೆಂದರೆ ಹತ್ತು ಮಕ್ಕಳನ್ನು ಪಡೆದಿದ್ದಕ್ಕಿಂತ ಹೆಚ್ಚು ಒಳ್ಳೆಯದು. ಮಕ್ಕಳು ತಂದೆಗೆ ತರ್ಪಣ ನೀಡಿದರೆ, ಮರಗಳು ತಮ್ಮನ್ನು ನೆಟ್ಟವರಿಗೆ ಎಲೆಗಳನ್ನೂ, ಹಣ್ಣುಗಳನ್ನೂ ಅರ್ಪಿಸುವವು.

೬. ಹತ್ತು ಬಾವಿಗಳು ಒಂದು ಕೆರೆಗೆ ಸಮಾನ, ಹತ್ತು ಕೆರೆಗಳು ಒಂದು ಸರೋವರಕ್ಕೆ ಸಮಾನ, ಹತ್ತು ಸರೋವರಗಳು ಒಬ್ಬ ಮಗನಿಗೆ ಸಮಾನ. ಹತ್ತು ಮಕ್ಕಳು ಒಂದು ಮರಕ್ಕೆ ಸಮಾನ.

೭. ವ್ಯಕ್ತಿಯೊಬ್ಬನು ಸುಂದರವಾದ ತೋಟ ಪಟ್ಟಿಗಳನ್ನು ಬೆಳೆಸಿ ಅದರಲ್ಲಿ ಅಸಂಖ್ಯಾತ ಹಣ್ಣು ಹಂಪಲುಗಳನ್ನು ಸಮೃದ್ಧವಾಗಿ ಬೆಳೆದರೆ ದೇವತೆಗಳು, ಬುದ್ಧಿವಂತ ಜನರು, ಅಪ್ಸರೆಯರು, ಯಕ್ಷರು ಮುಂತಾದವರು ಮೂರು ಯುಗಗಳವರೆಗೆ ಅಲ್ಲಿಯೇ ವಾಸ ಮಾಡುವರು.

೮. ಈ ನಿಜವನ್ನು ಅರಿಯಲು ಪ್ರತಿಯೊಬ್ಬರೂ ಗಿಡಗಳನ್ನು ನೆಡಬೇಕು. ಯಾಕೆಂದರೆ ವೃಕ್ಷಾರೋಪಣದಿಂದ ಧರ್ಮ, ಅರ್ಥ, ಕಾಮ, ಮೋಕ್ಷ (ಜೀವನದ ನಾಲ್ಕು ಪುರುಷಾರ್ಥ)ಗಳನ್ನು ಪಡೆಯಲು ದಾರಿ ಸುಗಮವಾಗುವುದು.

೯. ತುಳಸಿ ಗಿಡವಿರುವ ಮನೆಯಲ್ಲಿ ಒಬ್ಬ ವ್ಯಕ್ತಿಯು ಬಾಳಿದ ದಿನಗಳಷ್ಟು ಸಾವಿರ ವರ್ಷಗಳವರೆಗೆ ಆ ವ್ಯಕ್ತಿಗೆ ವೈಕುಂಠ (ಸ್ವರ್ಗ) ವಾಸವು ಪ್ರಾಪ್ತವಾಗುತ್ತದೆ.

೧೦. ಶಿವನಿಗೆ ಪ್ರಿಯವಾದ ಬಿಲ್ವ ವೃಕ್ಷವನ್ನು ಸರಿಯಾಗಿ ಬೆಳೆಸುವವನ ಮನೆಯಲ್ಲಿ ಸಂಪತ್ತಿನ ದೇವತೆಯಾದ ಲಕ್ಷ್ಮಿಯು ಶಾಶ್ವತವಾಗಿ ನಿವಾಸ ಮಾಡುತ್ತಾಳೆ. ಆ ಸಂಪತ್ತು ಅವರ ಮಕ್ಕಳು ಮೊಮ್ಮಕ್ಕಳ ಕಾಲದವರೆಗೂ ಸಮೃದ್ಧವಾಗಿರುತ್ತದೆ.

೧೧. ಎಲ್ಲಿಯೇ ಆಗಲಿ ಒಬ್ಬನು ಅಶ್ವತ್ಥ ವೃಕ್ಷವನ್ನು ಸರಿಯಾದ ರೀತಿಯಲ್ಲಿ ನೆಟ್ಟರೂ ಸಾಕು, ಅವನು ವೈಕುಂಟಧಾಮದಲ್ಲಿ ವಾಸ ಮಾಡುವ ಯೋಗ್ಯತೆಯನ್ನು ಹೊಂದುತ್ತಾನೆ.

೧೨. 'ಧಾತ್ರಿ' ಗಿಡವನ್ನು ನೆಟ್ಟರೆ ಅವನು ಬಹುದೊಡ್ಡ ತ್ಯಾಗವನ್ನು ಮಾಡಿದಂತೆ, ಅವನು ಭೂಮಿಯನ್ನು ದಾನ ಮಾಡಿದಂತೆ, ಯಾವಾಗಲೂ ಅವನನ್ನು ದಾನಿಯಾಗಿಯೇ ಗುರುತಿಸಲಾಗುತ್ತದೆ.

೧೩. ಒಂದು ಜೋಡಿ ಆಲದ ಗಿಡವನ್ನು ಸೂಕ್ತ ವಿಧಾನದಲ್ಲಿ ನೆಟ್ಟುವನು ಶಿವನ ಆವಾಸದಲ್ಲಿ ಸ್ಥಾನ ಪಡೆಯುತ್ತಾನೆ. ಅಲ್ಲದೆ ಅಪ್ಸರೆಯರು ಅವನ ಯೋಗಕ್ಷೇಮ ನೋಡಿಕೊಳ್ಳುತ್ತಾನೆ.

೧೪. ಧರ್ಮವನ್ನು ಅರಿತ ವ್ಯಕ್ತಿಯು ಬೇವಿನ ಗಿಡಗಳನ್ನು ನೆಟ್ಟರೆ ಸೂರ್ಯಧಾಮವನ್ನು ಪಡೆಯುತ್ತಾನೆ. ತುಂಬ ದೀರ್ಘಕಾಲ ಅಲ್ಲಿಯೇ ವಾಸ ಮಾಡುತ್ತಾನೆ.

೧೫. ನಾಲ್ಕು ಪ್ಲಕ್ಷ ಗಿಡಗಳನ್ನು ನೆಟ್ಟವನಿಗೆ ನಿಸ್ಸಂದೇಹವಾಗಿ ರಾಜಾಸೂಯ ಯಾಗವನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ. ಐದು–ಆರು ಮಾವಿನ ಗಿಡಗಳನ್ನು ಹಾಕಿ ವ್ಯಕ್ತಿಯು ಗರುಡಧಾಮಕ್ಕೆ ಯೋಗ್ಯನೆನಿಸುತ್ತಾನೆ. ಅವನು ಅಲ್ಲಿ ಸಂತೋಷಚಿತ್ತನಾಗಿ ದೇವತೆಗಳಂತೆ ವಾಸ ಮಾಡುತ್ತಾನೆ.

೧೬. ಪ್ರತಿ ವ್ಯಕ್ತಿಯೂ ಏಳು ಮುತ್ತುಗದ ಗಿಡಗಳನ್ನು ನೆಡಬೇಕು, ಕನಿಷ್ಠ ಪಕ್ಷ ಒಂದನ್ನಾದರೂ; ಅಂಥ ವ್ಯಕ್ತಿಯು ಬ್ರಹ್ಮಲೋಕವನ್ನು ಪಡೆದು ದೇವತೆಗಳ ಒಡನಾಟದಲ್ಲಿರುತ್ತಾನೆ.

೧೮. ಔದುಂಬರದ ಎಂಟು ವೃಕ್ಷಗಳನ್ನು ನೆಡುವ ವ್ಯಕ್ತಿಯು ಅಥವಾ ಹಾಗೆ ನೆಡಲು ಪ್ರೋತ್ಸಾಹಿಸಿದ ವ್ಯಕ್ತಿಯು ಚಂದ್ರಲೋಕದ ವಾಸದ ಆನಂದಕ್ಕೆ ಬಾಧ್ಯನಾಗುತ್ತಾನೆ.

೧೯. ಮಧಕ ವೃಕ್ಷವನ್ನು ಆರೋಪಣ ಮಾಡಿದ ವ್ಯಕ್ತಿಗೆ ಪಾರ್ವತಿಯು ಪ್ರಸನ್ನಳಾಗುತ್ತಾಳೆ. ಅವನು ಸಕಲ ರೋಗಗಳಿಂದ ಮುಕ್ತನಾಗಿ ದೇವತೆಗಳ ಪ್ರೀತಿಗೆ ಪಾತ್ರನಾಗುತ್ತಾನೆ.

೨೦. ಕ್ಷೀರಿಣಿ, ದಾಳಿಂಬ, ಬಾಳೆ, ಪ್ರಯಾಲ ಹಾಗೂ ಹಲಸಿನ ವೃಕ್ಷಾರೋಹಣ ಮಾಡಿ ಪೋಷಿಸುವವನು ಏಳು ಬಾರಿ ಜನ್ಮವೆತ್ತುವ ಪಾಪದಿಂದ ಮುಕ್ತನಾಗುತ್ತಾನೆ.

೨೧. ಗೊತ್ತಿದ್ದೊ ಗೊತ್ತಿಲ್ಲದೆಯೋ ಜಂಬೂ ವೃಕ್ಷವನ್ನು ನೆಟ್ಟವನು ಮನೆಯಲ್ಲಿದ್ದರೂ ಸನ್ಯಾಸಿಯಂತೆ ಸಕಲರ ಆದರಕ್ಕೆ ಪ್ರಾಪ್ತನಾಗುತ್ತಾನೆ.

೨೨. ಹೂ ಹಣ್ಣು ನೀಡುವ ಇತರ ಅನೇಕ ಬಗೆಯ ಸಸ್ಯಗಳನ್ನು ನೆಡುವವನು ರತ್ನಗಳಿಂದ ಅಲಂಕೃತವಾದ ಸಾವಿರ ಗೋವುಗಳನ್ನು ಹೊಂದಿದ ಗೌರವಕ್ಕೆ ಪ್ರಾಪ್ತನಾಗುತ್ತಾನೆ.

೨೩. ಒಂದು ಅಶ್ವತ್ಥ, ಒಂದು ಪಿಚುಮಂಡ, ಒಂದು ನ್ಯಗ್ರೋಧ, ಹತ್ತು ಹುಣಸೆ, ಕಪಿತ್ಥ, ಬಿಲ್ವ, ನೆಲ್ಲಿ, ಮೂರು ವೃಕ್ಷಗಳ ಗುಂಪು ಅಥವಾ ಐದು ಮಾವಿನ ಮರಗಳನ್ನು ನೆಡುವ ವ್ಯಕ್ತಿಯು ಎಂದಿಗೂ ನರಕಕ್ಕೆ ಹೋಗುವುದಿಲ್ಲ.

ಮನೆಯ ಸಮೀಪದಲ್ಲಿ ವೃಕ್ಷಾರೋಪಣ ಮಾಡುವುದರ ಲಾಭ – ಹಾನಿಗಳು

೨೪. ಮನೆಯ ಪೂರ್ವ ದಿಕ್ಕಿಗೆ ವಟ ವೃಕ್ಷವನ್ನು ನೆಡುವ ವ್ಯಕ್ತಿಗೆ ಎಲ್ಲ ಅಭೀಷ್ಟಗಳೂ ನೆರವೇರುತ್ತವೆ. ಹಾಗೆಯೇ ದಕ್ಷಿಣದಲ್ಲಿ ಔದುಂಬರ, ಪಶ್ಚಿಮದಲ್ಲಿ ಪಿಪ್ಪಲ ವೃಕ್ಷವನ್ನು ನೆಡುವುದು ಶುಭಕರವಾದದ್ದು.

೨೫. ಮನೆಯ ಪೂರ್ವಕ್ಕೆ, ಅಶ್ವತ್ಥ, ದಕ್ಷಿಣಕ್ಕೆ ಪ್ಲಕ್ಷ, ಪಶ್ಚಿಮಕ್ಕೆ ನ್ಯಗ್ರೋಧ ಹಾಗೂ ಉತ್ತರಕ್ಕೆ ಔದುಂಬರವನ್ನು ಹಾಕದಂತೆ ಎಚ್ಚರ ವಹಿಸಬೇಕು. ದೇವತೆ, ದಾನವ, ಗಂಧರ್ವ, ಭೂತ–ಪ್ರೇತ, ಪರ್ಪ, ರಾಕ್ಷಸ, ಪಶುಪಕ್ಷಿ ಹಾಗೂ ಮಾನವರು ಸದಾ ಈ ವೃಕ್ಷಗಳಲ್ಲಿ ವಾಸಿಸುತ್ತಾರೆ.

೨೬. ಯಾವುದೇ ಮರದ ನೆರಳು ಮನೆಯ ಮೇಲೆ ಬೀಳಬಾರದು. ಬಂಗಾರವನ್ನು ಕೊಡುವ ಗಿಡವೇ ಆದರೂ ಕೂಡ ಮನೆಯ ಪ್ರವೇಶದ್ವಾರದ ಬಳಿ ಹಾಕಬಾರದು.

೨೭. ಮನೆಯ ಬಳಿ ಬದರಿ, ಬಾಳೆ, ದಾಳಿಂಬ ಹಾಗೂ ಬೀಜ ಪೂರಕಗಳನ್ನು ಬೆಳೆಸಿದರೆ ಆ ಮನೆಯು ಸಮೃದ್ಧವಾಗಲಾರದು.

೩೦. ಸದಾ ಪ್ರಸನ್ನಚಿತ್ತನಾಗಿರುವ ಸುಖೀ ವ್ಯಕ್ತಿಯ ಮನೆಯ ಬಳಿ ವರಂಡ, ಕಾಂಚನಾರ, ಶ್ಲೇಷಾತ್ಮಕ, ಅರ್ಜುನ ಹಾಗೂ ಕರಂಜಿ ವೃಕ್ಷಗಳನ್ನು ಹಾಕಬಾರದು.

೩೧. ಮನೆಯ ಅಕ್ಕಪಕ್ಕದಲ್ಲಿ ಮುಳ್ಳುಗಳಿರುವ ಗಿಡಗಳನ್ನು ಬೆಳೆಸಿದರೆ ಶತೃಗಳಿಂದ ಅಪಾಯವಾದೀತು. ಮನೆಯ ಸಮೀಪದಲ್ಲಿ ಕ್ಷೀರಿಣಿ ಗಿಡ ಹಾಕಿದರೆ ಧನ ಸಂಪತ್ತಿಯು ನಾಶವಾಗುವುದು. ಹಣ್ಣು ನೀಡುವ ವೃಕ್ಷಗಳನ್ನು ಬೆಳೆಸುವುದು ಒಳ್ಳೆಯದಲ್ಲ. ಯಾಕೆಂದರೆ ಅದರಿಂದ ವಂಶಪರಂಪರೆ ನಡೆಯುವುದಿಲ್ಲ ಹಾಗೂ ಅವುಗಳ ಕಟ್ಟಿಗೆಯನ್ನು ಮನೆ ಕಟ್ಟಲು ಬಳಸಬಾರದು.

೩೨. ನೀಲಿ ಹಾಗೂ ಹರಿದ್ರಾ ಬೆಳೆಯುವ ವ್ಯಕ್ತಿಯು ಎಂದೆಂದಿಗೂ ವಂಶ ಸಮೃದ್ಧಿಯನ್ನು ಸಂತೋಷವನ್ನು ಕಳೆದುಕೊಳ್ಳುತ್ತಾನೆ. ಒಮ್ಮೆ ಈ ಗಿಡಗಳು ಆಕಸ್ಮಾತ್ ತಂತಾನೆ ಬೆಳೆದರೆ ಅದನ್ನು ಕಿತ್ತು ಹಾಕಬೇಕು.

೩೩. ಮನೆಯ ದಕ್ಷಿಣದಲ್ಲಿ, ದಕ್ಷಿಣ–ಪಶ್ಚಿಮ ಅಥವಾ ಉತ್ತರ–ಪೂರ್ವದಲ್ಲಿ ಯಾರೂ ತೋಟ ಹಾಕಿಸಬಾರದು. ಇದರಿಂದ ಕ್ಲೇಶ, ಕಲಹ, ಅವಘಡಗಳು ಉಂಟಾಗುತ್ತವೆ.

೩೪. ಆದ್ದರಿಂದ, ಮನೆಯ ಸಮೀಪ ತೋಟ ಹಾಕಲು ಪಶ್ಚಿಮ, ಉತ್ತರ ಹಾಗೂ ಪೂರ್ವ ದಿಕ್ಕುಗಳು ಸರಿಯಾದವುಗಳು. ಹೀಗೆ ಮಾಡಿದರೆ ಭೂ ಮಾಲೀಕನಿಗೆ ಒಳ್ಳೆಯದು ಮತ್ತು ಸಂತತಿ ಲಾಭವಾಗುವುದು.

ಮಣ್ಣು

೩೫. ಸಾಮಾನ್ಯವಾಗಿ ಮಣ್ಣಿನಲ್ಲಿ ಒಣ ಭೂಮಿ ಹಾಗೂ ಸಾಮಾನ್ಯ ಭೂಮಿ, ಅವುಗಳಲ್ಲಿ ಮತ್ತೆ ಬಣ್ಣ ಹಾಗೂ ವಾಸನೆಯ ಆಧಾರದ ಮೇಲೆ ಆರು ವಿಧವಾಗಿ ವಿಭಜಿಸಬಹುದಾಗಿದೆ.

೩೬. ಕಪ್ಪು, ಬಿಳಿ, ಮಬ್ಬು, ಗಾಢ, ಕೆಂಪು, ಹಳದಿ ಬಣ್ಣದ ಮಣ್ಣುಗಳು ಸಿಹಿ, ಹುಳಿ, ಕ್ಷಾರ, ಕಟು, ತಿಕ್ತ, ಖಾರ ಹೀಗೆ ರುಚಿಯ ಆಧಾರದ ಮೇಲೆ ವಿಭಾಗಿಸಲಾಗುವುದು.

೩೭. ನಂಜಿನ ಅಂಶ, ಕಲ್ಲುಬೆರೆತಿರುವುದು, ಇರುವೆ ಹುತ್ತ, ಬಿಲಗಳು, ಪೊಳ್ಳುಗಳು, ಬಂಜರು, ನೀರು ಹಿಡಿದಿಡಲಾರದ ಭೂಮಿ ಇವೆಲ್ಲ ಗಿಡ ನೆಡಲು ಉಪಯುಕ್ತವಲ್ಲ.

೩೮. ನೀಲಮಣಿಯಂತೆ ನೀಲವರ್ಣದ ಗಿಳಿಯ ಗರಿಯಂತೆ ನುಣುಪಾದ, ಶಂಖ, ಮಲ್ಲಿಗೆ, ಕಮಲ ಅಥವಾ ಚಂದ್ರನಂತೆ ಬೆಳ್ಳಗಿರುವ ಮತ್ತು ಕಾದ ಬಂಗಾರ ಅಥವಾ ಅರಳಿದ ಸಂಪಿಗೆಯಂತೆ ಹಳದಿಯಾದ ಭೂಮಿಯಲ್ಲಿ ಗಿಡ ನೆಡಬಹುದಾಗಿದೆ.

೩೯. ಸಮತಟ್ಟಾದ, ನೀರು ದೊರೆಯಬಹುದಾದ ಹಸಿರುಗಿಡ ತುಂಬಿದ ಭೂಮಿಯಲ್ಲಿ ಯಾವ ಗಿಡಗಳನ್ನದರೂ ಬೆಳೆಯಬಹುದು.

೪೧. ಹಲಸು, ಲಕುಚ, ತಾಲ, ಬಿದಿರು, ಜಂಜೀರ, ಜಂಬೂ, ತಿಲಕ, ವಟ, ಕದಂಬ, ಅಮೃತ, ಖರ್ಜೂರ, ಬಾಳೆ, ತಿನಿಸ, ಮೃದ್ವಿ, ಕೇತಕಿ, ತೆಂಗು ಇತ್ಯಾದಿ ಮರಗಳು ಜವುಗು ಭೂಮಿಯಲ್ಲಿ ಬೆಳೆಯುತ್ತವೆ.

೪೨. ಶೋಭಾಂಜನ, ಶ್ರೀಫಲ, ಸಪ್ತವರ್ಣ, ಶೇಫಾಲಿಕ, ಅಶೋಕ, ಶಮೀ, ಕರೀರ, ಕರ್ಕುಂಧು, ಕೇಸರ, ನಿಂಬ ಹಾಗೂ ಶಕ (ಸಾಗುವಾನಿ) ಮುಂತಾದವು ಒಣ ಭೂಮಿಯಲ್ಲಿ ಬೆಳೆಯುತ್ತದೆ.

೪೩. ಬೀಜಪೂರಕ, ಪುನ್ನಾಗ, ಚಂಪಕ, ಮಾವು, ಅರಿಮುಕ್ತಕ, ಪ್ರಿಯಂಗು, ದಾಳಿಂಬ ಇತ್ಯಾದಿಗಳು ಸಾಮಾನ್ಯ ಮಣ್ಣಿನಲ್ಲಿ ಬೆಳೆಯುತ್ತವೆ.

೪೪. ಹಣ, ಅದೃಷ್ಟ ಹಾಗೂ ರಾಜನು (ಶಾಸಕನು) ಅನುಕೂಲಕರವಾಗಿದ್ದಲ್ಲಿ ಯಾವುದೇ ವೃಕ್ಷವನ್ನು ಎಲ್ಲಿ ಬೇಕಾದರೂ ವಿಶೇಷ ಪರಿಶ್ರಮದಿಂದ ಬೆಳೆಯಬಹುದಾಗಿದೆ.

ನೈಸರ್ಗಿಕ ಪುನರುತ್ಪತ್ತಿ

೪೫. ವನಸ್ಪತಿ, ದ್ರುಮ, ಲತಾ, ಗುಲ್ಮ ಎಂದು ಗಿಡಗಳಲ್ಲಿ ನಾಲ್ಕು ವಿಧ. ಅವು ಬೀಜ, ಟೊಂಗೆ, ಗಡ್ಡೆಯಿಂದ ಚಿಗಿತು ಬೆಳೆಯುತ್ತವೆ. ಹೀಗೆ ಇವು ಮೂರು ವಿಧ.

೪೬. ಕಾಯಿಯಾಗದೆ ಕೇವಲ ಹೂವಾಗುವ ಜಾತಿಯವು ವನಸ್ಪತಿಗಳು, ಹೂವಿನಿಂದ ಕಾಯಿಯಾಗುವ ಜಾತಿಯವು ದ್ರುಮಗಳು.

೪೭. ಬೇರಿನೊಂದಿಗೆ ಪ್ರಸಾರವಾಗುವ ಜಾತಿಗಳು ಲತೆಗಳು, ಚಿಕ್ಕದಾಗಿದ್ದರೂ ಟೊಂಗೆಗಳನ್ನು ಹೊಂದಿದ್ದರೆ ಅವು ಗುಲ್ಮಗಳು.

೪೮–೪೯. ಜಂಬೂ, ಚಂಪಕ, ಪುನ್ನಾಗ, ನಾಗಕೇಸರ, ಹುಣಸೆ, ಕಪಿತ್ಥ, ಬದರಿ, ಬಿಲ್ವ, ಕುಂಭಕಾರಿ, ಪ್ರಿಯಂಗು, ಪನಸ, ಆಮ್ರ, ಮಧುಕ, ಕರಮರ್ದು ಇತ್ಯಾದಿಗಳು ಬೀಜದಿಂದ ಉತ್ಪನ್ನವಾಗುತ್ತವೆ. ತಾಂಬೂಲೀ, ಸಿಂಧುವಾರ, ತಗರ ಇತ್ಯಾದಿಗಳು ದಂಟಿನಿಂದ ಹುಟ್ಟುತ್ತವೆ.

೫೦. ಪಾಟಲ, ದಾಡಿಮ, ಪ್ಲಕ್ಷ, ಕರವೀರ, ವಟ, ಮಲ್ಲಿಕಾ, ಔದುಂಬರ, ಕುಂದ ಇತ್ಯಾದಿಗಳು ಬೀಜ ಹಾಗೂ ದಂಟುಗಳೆರಡರಿಂದಲೂ ಉತ್ಪಾದನೆಯಾಗುತ್ತವೆ.

೫೧. ಕುಂಕುಮ, ಆರ್ದ್ರ, ರಸೋನ, ಆಲೂಗೆಡ್ಡೆ ಇತ್ಯಾದಿಗಳು ಕಂದಮೂಲಗಳಿಂದ ಉತ್ಪನ್ನವಾಗುತ್ತವೆ. ಏಲಾ, ಪದ್ಮ, ಉತ್ಪಲ ಇತ್ಯಾದಿಗಳು ಬೀಜ ಹಾಗೂ ಗೆಡ್ಡೆಗಳೆರಡರಿಂದಲೂ ಉತ್ಪತ್ತಿಯಾಗುತ್ತವೆ.

೫೨. ಪ್ರಕೃತಿ ಸಹಜವಾಗಿ ಶ್ರಾಯದಲ್ಲಿ ತಂತಾನೆ ಪಕ್ವವಾದ ಫಲಗಳು ಬೀಜಗಳನ್ನು ಕೊಡುತ್ತವೆ. ಅನಂತರ ಅವುಗಳ ಮೇಲೆ ಹಾಲನ್ನು ಚಿಮುಕಿಸಲಾಗುತ್ತದೆ ಮತ್ತು ಐದು ದಿನಗಳ ಕಾಲ ಒಣಗಿಸಬೇಕಾಗುತ್ತದೆ. ಆನಂತರ ವಿಡಂಗದ ಜೊತೆಗೆ ಸಾಸಿವೆಯನ್ನು ಸೇರಿಸಿ ಹೊಗೆ ಹಾಕಲಾಗುತ್ತದೆ.

೫೩. ಬೀಜಕ್ಕೆ ಹಾಲಿನ ಸಿಂಪರಣೆ, ಸಾಸಿವೆ, ಎಳ್ಳು ಹಾಗೂ ಬ್ರಹತಿಯ ಬೂದಿಯಿಂದ ಲೇಪಿತ, ಸಗಣಿ ಗೊಬ್ಬರದಲ್ಲಿ ಹಾಕಿ ತಿಕ್ಕಿದ ಹಾಗೂ ಮಜ್ಜೆಯಿಂದ ಹೊಗೆ ಹಾಕಿ ಉಪಚರಿಸಿದ ಕೂಡಲೇ ಮೊಳಕೆ ಒಡೆಯುವುದು.

೫೪. ಹಾಲಿನಿಂದ ಸಿಂಪಡಿಸಿದ, ಸಗಣಿಗೊಬ್ಬರ ತಿಕ್ಕಿದ ಹಾಗೂ ಅನಂತರ ನೆರಳಿನಲ್ಲಿ ಚೆನ್ನಾಗಿ ಒಣಗಿಸಿ ಆ ನಂತರ ಸಾಸಿವೆ ಬೆರೆಸಿದ ಎಳ್ಳು ಬೃಹತಿ, ತಾಲದ (ಕಮಲದ ಹಳದಿ ದಂಟು) ಪುಡಿಯನ್ನು ಚೆನ್ನಾಗಿ ಲೇಪಿಸಿದ ಬೀಜಗಳು ನೆಡಲು ಉತ್ತಮವಾಗಿರುತ್ತದೆ.

೫೬. ಮೊಕಂದ, ಜಂಬೂ ಹಾಗೂ ಪನಸದ ಬೀಜಗಳು ಹಸಿಯಾಗಿದ್ದಾಗಲೇ ಈ ಮೇಲಿನಂತೆ ಬೀಜೋಪಚಾರಕ್ಕೆ ಒಳಗಾದರೆ ಉತ್ತಮ. ಕ್ಷೀರಿಕಾ ಹಾಗೂ ಬಕುಲದ ಬೀಜಗಳನ್ನು ಒಣಗಿಸಿ ಈ ಮೇಲಿನಂತೆ ಉಪಚರಿಸಿ ಅದರ ತುದಿಯನ್ನು ತುಸು ಕತ್ತರಿಸಿ ಅಥವಾ ಬಾಗಿಸಿ ನಾಟಿ ಮಾಡಿದರೆ ನೆಡಲು ಯೋಗ್ಯವಾಗಿರುತ್ತದೆ.

೫೭. ಎಲೆಯಿಂದ ತಯಾರಿಸಿದ ನಳಿಕೆಯಲ್ಲಿ ತುಂಬಿದ ಬೆಲ್ಲದ ನೀರಿನಿಂದ ಚಿಮುಕಿಸಿದ 'ಉರ್ವರು' ಬೀಜವನ್ನು ನೆಲದ ಮೇಲಿಟ್ಟು ನಿರಂತರ ಮೂರು ದಿನ ಬಿಸಿ ಮಾಡಿ ತೆಗೆದರೆ, ನಾಟಿ ಮಾಡಲು ಯೋಗ್ಯವಾಗಿರುತ್ತದೆ.

೫೮. ಬೀಜಗಳನ್ನು ಹೀಗೆ ಉಪಚರಿಸಿ, ಈ ರೀತಿ ಸಂರಕ್ಷಿಸಿ ಇಟ್ಟುಕೊಂಡರೆ ಬಳಕೆಗೆ ಯೋಗ್ಯವಾಗಿರುತ್ತವೆ. ಇಂಥ ಬೀಜಗಳಿಂದ ಹುಟ್ಟಿ ಬೆಳೆದ ಮರಗಳು ಸದಾ ಕಾಲ ಹೂ ಹಣ್ಣುಗಳಿಂದ ತುಂಬಿರುತ್ತವೆ.

೫೯. ಕೃಷಿ ಭೂಮಿಯ ಒಡೆಯನಾದವನು ಸ್ನಾನ ಮಾಡಿ ಶುಭ್ರ ಬಟ್ಟೆಯನ್ನು ಧರಿಸಿ ದೇವರಪೂಜೆ ನಮಸ್ಕಾರಗಳಲ್ಲದೆ, ತನ್ನ ಗುರು ಮಾರ್ಗದರ್ಶನದಿಂದ ಆಶೀರ್ವಾದ ಪಡೆದು, ಸಂಪತ್ತು ಭೂಮಿಯನ್ನು ಯೋಗ್ಯರಿಗೆ ಅರ್ಪಿಸಿಕೊಂಡು, ವಾಸ್ತುವಿಗೆ ನಮಸ್ಕಾರ ಮಾಡಿ, ಆನಂತರ ಭೂಮಿಯಲ್ಲಿ ಆತನೇ ಸ್ವಯಂ ಕೆಲವು ಬೀಜಗಳನ್ನಾದರೂ ಬಿತ್ತಲೇಬೇಕು. ಆನಂತರ ಕೆಲಸಗಾರರು ಅವನನ್ನು ಅನುಸರಿಸಬೇಕು.

೬೦. ಬೀಜ ಬಿತ್ತಿದ ಅನಂತರ ಅದರ ಮೇಲೆ ಹುಲ್ಲು ಮುಚ್ಚಿ ಹಾಲು ಮಿಶ್ರಿತ ನೀರನ್ನು ಸಿಂಪಡಿಸಬೇಕು. ಬೀಜ ಮೊಳಕೆಯೊಡೆದ ಮೇಲೆ ನೀರನ್ನು ಸಿಂಪಡಿಸಬೇಕು. ಆನಂತರ ಹೊದಿಸಿದ ಹುಲ್ಲನ್ನು ತೆಗೆದು ತೇವ ಆರಲು ಬಿಡಬೇಕು.

೬೧. ಶುಕ್ಲಪಕ್ಷದ ಪ್ರತಿಪದೆ, ಹುಣ್ಣಿಮೆ ಅಥವಾ ಶುಕ್ಲಪಕ್ಷದ ಪಂಚಮಿ ತ್ರಯೋದಶಿಗಳಂದು ಬೀಜ ಬಿತ್ತಲು ಶ್ರೇಷ್ಠವಾದ ದಿನಗಳು. ಸೋಮ, ಬುಧ, ಗುರು, ಶುಕ್ರ ಒಳ್ಳೆಯ ದಿನಗಳು.

೬೨. ವಿಶಾಖಾ, ಮೃಗಶಿರಾ, ಮೂಲಾ, ಚಿತ್ರಾ, ಉತ್ತರಾ, ಉತ್ತರಾಷಾಢ, ಉತ್ತರಾಭಾದ್ರ, ಅನುರಾಧ, ಜೇಷ್ಠ, ಕೃತ್ತಿಕಾ ನಕ್ಷತ್ರಗಳು ಶ್ರೇಷ್ಠ ನಕ್ಷತ್ರಗಳು ಅಲ್ಲದೆ ಸ್ಥಿರ ಲಗ್ನವು ಒಳ್ಳೆಯದು.

ಸಸಿ ನೆಡುವ ವಿಧಾನ

೬೩. ಸುಂದರವಾಗಿ ಅಣಿಗೊಳಿಸಿದ ಸಮತಟ್ಟಾದ ಭೂಮಿಯಲ್ಲಿ ಸಸಿಗಳನ್ನು ನೆಡಬೇಕು. ಆದರೆ ಅಲ್ಲಿ ಎಳ್ಳು, ಉದ್ದುಗಳನ್ನು ಈ ಮೊದಲು ಬೆಳೆದಿರಬಾರದು. ಹೂಗಳನ್ನು ರಾಶಿಯಾಗಿ ಹರಡಿರಬೇಕು.

೬೪. ಎರಡು ಗಿಡಗಳ ಅಂತರವು ೧೪, ೧೬ ಹಾಗೂ ೨೦ ಮೊಳ ಇರಬೇಕು. ಈ ಅಂತರಕ್ಕೆ ಅನುಗುಣವಾಗಿ ವೃಕ್ಷಗಳ ಉತ್ಪತ್ತಿಯ ಇಳುವರಿಯು ಸಾಧಾರಣ, ಮಧ್ಯಮ ಹಾಗೂ ಉತ್ತಮವಾಗಿರುತ್ತದೆ.

೬೫. ಎರಡು ಪೊದೆಗಳ ಅಂತರವು ೪ ಅಥವಾ ೫ ಮೊಳ ಇರಬೇಕು. ಅಡಿಕೆ ಮುಂತಾದವುಗಳನ್ನು ಎರಡು ಅಥವಾ ಮೂರು ಮೊಳದಷ್ಟು ಅಂತರದಲ್ಲಿ ಜಾಗರೂಕತೆಯಿಂದ ನೆಡಬೇಕು.

೬೬. ಇದಕ್ಕಿಂತ ಹೆಚ್ಚು ಅಂತರದಲ್ಲಿ ನೆಟ್ಟರೆ ಭಾರೀ ಗಾಳಿಯ ಅಪಾಯವನ್ನು ಎದುರಿಸಬೇಕಾಗುತ್ತದೆ. ಇದಕ್ಕಿಂತ ಕಡಿಮೆ ಅಂತರದಲ್ಲಿ ನೆಟ್ಟರೆ ಇಳುವರಿ ಕಡಿಮೆಯಾಗುತ್ತದೆ.

೬೭. ಗಿಡ ನಾಟಿಗೆ ಮೊದಲು ಹೊಂಡವನ್ನು ಅಗೆದು ಸಿದ್ಧಪಡಿಸಿಕೊಳ್ಳಬೇಕು. ಹೊಂಡದ ಆಳ-ಅಗಲ-ಉದ್ದ ಸರಿಯಾಗಿ ಒಂದು ಮೊಳ ಇರುವಂತೆ ನೋಡಿಕೊಳ್ಳಬೇಕು. ಗಿಡ ನೆಡುವ ಹೊಂಡವು ಒಣಗಿರಬೇಕು. ಹಸುವಿನ ಎಲುಬು ಸಗಣಿ ಗೊಬ್ಬರ ಹಾಗೂ ಸುಟ್ಟ ಪದಾರ್ಥಗಳಿಂದ ಸರಿಯಾಗಿ ತುಂಬಬೇಕು.

೬೮. ಬೂದಿಯು ತಣ್ಣಗಾದ ಮೇಲೆ ಅದನ್ನು ತೆಗೆಯಬೇಕು. ಆನಂತರ ಕುಣಪ [ಕುಣಪ-ಅನೇಕ ಪ್ರಾಣಿಗಳ ಮಾಂಸ ಮಜ್ಜೆಯಿಂದ ಕೂಡಿದ ಗೊಬ್ಬರ. ಇದನ್ನು ಬೇಯಿಸಿ, ಆನಂತರ ಅದಕ್ಕೆ ಎಣ್ಣೆಯ ಹಿಂಡಿ, ಜೇನು, ಉದ್ದು, ತುಪ್ಪ

ಇತ್ಯಾದಿ ಪದಾರ್ಥಗಳನ್ನು ಸೇರಿಸಲಾಗುತ್ತದೆ. ಈ ಪೂರ್ಣ ಮಿಶ್ರಣವನ್ನು ಚೆನ್ನಾಗಿ ಕಾಪಾಡಿಕೊಂಡು ಆನಂತರ ಅದಕ್ಕೆ ನೀರು ಸೇರಿಸಿ ರಸಗೊಬ್ಬರವಾಗಿ ಮಾಡಲಾಗುತ್ತದೆ. ಕುಣಪವನ್ನು ತಯಾರು ಮಾಡುವುದು ಹಾಗೂ ಸಂರಕ್ಷಿಸಿ ಇಡುವ ಬಗೆಗಿನ ದೀರ್ಘ ಹಾಗೂ ಜಟಿಲವಾದ ಪ್ರಕ್ರಿಯೆಯು ಶ್ಲೋಕ ೧೦೧-೧೦೬ ರಲ್ಲಿ ವಿಸ್ತಾರವಾಗಿ ಸ್ಪಷ್ಟಪಡಿಸಲಾಗಿದೆ] ಜಲದಿಂದ ಚಿಮುಕಿಸಿ, ಒಳ್ಳೆಯ ಮಣ್ಣಿನಿಂದ ತುಂಬಬೇಕು.

೬೯. ಮಾಕಂದ, ದಾಳಿಂಬ, ಕುಂಬಳ, ಆಲಂಬುಕಗಳ ಬೀಜಗಳನ್ನು ಹಾಕುವುದೇ ಒಳ್ಳೆಯದು. ತುಂಬ ಫಲವತ್ತಾದ ನೆಲವನ್ನು ಕೃಷಿಗೆ ಬಳಕೆ ಮಾಡುವ ಸಂದರ್ಭದಲ್ಲಿ ತ್ರಪ್ಸಾ ಅಥವಾ ಇತರೆ ಕಾಯಿಪಲ್ಲೆ ಬೀಜಗಳನ್ನು ನಡು ನಡುವೆ ಹಾಕಬೇಕು. ಈ ನೆಲದಲ್ಲಿ ಕೇಸರಿ, ಮರುವಕ, ದಮನಕಗಳು ಸಮಾನವಾಗಿ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಬೆಳೆಯುತ್ತವೆ.

೭೨. ಉದ್ದನೆಯ ಬೀಜವನ್ನು ಒಂದನ್ನೇ ನಾಟಿ ಮಾಡಬೇಕು, ಸಣ್ಣ ಬೀಜಗಳನ್ನು ಕೆಲ ಸಂಖ್ಯೆಯಲ್ಲಿ ನಾಟಿ ಮಾಡಬೇಕು. ನಾರಂಗ ಬೀಜವನ್ನು ನೆಡುವಾಗ ಬಾಗಿಸಿ ನೆಡಬೇಕು.

೭೩. ಫಣಿಜ್ಜಕ ಬೀಜವನ್ನು ಮಣ್ಣಿನೊಂದಿಗೆ ಬೆರೆಸಿ ಬಿತ್ತಬೇಕು ಹಾಗೂ ಸಗಣಿ ಗೊಬ್ಬರ ಮಿಶ್ರಿತವಾದ ನೀರನ್ನು ಅದರ ಮೇಲೆ ನಿಧಾನವಾಗಿ ಸಿಂಪಡಿಸಬೇಕು.

೭೪-೭೫. ಸಹಜವಾಗಿ ಹಣ್ಣಾದ, ಸೂರ್ಯನ ತಾಪದಲ್ಲಿ ಒಣಗಿಸಿದ ಬಾಳೆಹಣ್ಣನ್ನು ಅರೆದು ತಯಾರಿಸಿದ ದಪ್ಪ ರಸವನ್ನು ಲೇಪಿಸಿದ ಷಷ್ಠಕದ ಕಾಂಡವನ್ನು ನಿಧಾನವಾಗಿ ಊರಬೇಕು ಮತ್ತು ಬೇಸಗೆಯ ದಿನಗಳಲ್ಲಿ ನಿರಂತರವಾಗಿ ತೆಳ್ಳಗೆ ನೀರುಣ್ಣಿಸಬೇಕು. ಅದು ತಮೂಲದಂತೆ ನೀಲಸುಳಿಯೊಡೆದು ತಪ್ಪದೆ ಉತ್ತಮ ಫಸಲು ನೀಡುತ್ತದೆ.

೭೬. ಕಾಂಡವು ೧೮ ಅಂಗುಲ ಉದ್ದವಾಗಿರಬೇಕು. ಬಹಳ ಮೃದುವಾಗಲಿ, ಬಹಳ ಗಟ್ಟಿಯಾಗಲಿ ಇರಬಾರದು. ಅದರ ಅರ್ಧಭಾಗವನ್ನು ದನದ ಸಗಣಿಯಿಂದ ಲೇಪಿತಗೊಳಿಸಿ ಮುಕ್ಕಾಲುಭಾಗ ಕುಣಿಯಲ್ಲಿ ನೆಡಬೇಕು. ಆಮೇಲೆ ಮಿದುವಾದ ಮರಳುಮಿಶ್ರಿತ ಮಣ್ಣು ಬೆರೆಸಿದ ನೀರನ್ನು ಸಿಂಪಡಿಸಬೇಕು.

೭೭. ಶತಪ್ರತಿಕಾದ ಟೊಂಗೆಯ ಕೆಳ ಭಾಗವು ಅರ್ಧಪಕ್ವವಾಗಿರಬೇಕು. ಅದನ್ನು ಕಾರ್ತಿಕ ಮಾಸದಲ್ಲಿ ಬೇರೆ ಕಡೆ ಕಿತ್ತು ನೆಡಬೇಕು ಹಾಗೂ ಎರಡು ತಿಂಗಳವರೆಗೆ ನೀರು ನಿಂತಿರುವಂತೆ ನೋಡಿಕೊಳ್ಳಬೇಕು. ಅದು ಚಿಗುರಿ ಎಲೆಗಳಿಂದ ತುಂಬಿದ ಮೇಲೆ ಆಷಾಢಮಾಸದ ಪ್ರಾರಂಭದಲ್ಲಿ ಅದನ್ನು ಕಿತ್ತು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಪುನ: ನೆಡಬೇಕು.

೮೨. ಕುಣಿಯಲ್ಲಿ ಚೆನ್ನಾಗಿ ಗೊಬ್ಬರ ತುಂಬಿ ಬಾಳೆಯನ್ನು ಅದರ ಬೇರು ಸಹಿತವಾಗಿ ನೆಡಬೇಕು. ಅಲ್ಲದೇ ಚೆನ್ನಾಗಿ ನೀರು ಕೊಡಬೇಕು.

೮೩. ಚಿಕ್ಕ ಮರಗಳಾಗುವ ಗಿಡಗಳನ್ನು ಒಂದು ಮೊಳ ಎತ್ತರವಾಗಿದ್ದಾಗ ಕಿತ್ತು ಹಗಲು ಹೊತ್ತಿನಲ್ಲಿ ಸರಿಯಾದ ದಿಕ್ಕಿನಲ್ಲಿ ನೆಡಬೇಕು. ಅದರ ಬೇರುಗಳಿಗೆ ಜೇನು, ಕಮಲದ ತಂತುಗಳನ್ನು ತುಪ್ಪ ಹಾಗೂ ವಿಳಂಗಗಳನ್ನು ಲೇಪಿಸಬೇಕು ಮತ್ತು ಸೂಕ್ತವಾದ ಕುಣಿಯಲ್ಲಿ ಉತ್ತಮ ಮಣ್ಣಿನೊಂದಿಗೆ ಹುಗಿಯಬೇಕು.

೮೪. ದೊಡ್ಡ ಮರಗಳಾಗುವ ಗಿಡಗಳನ್ನು ಈ ಮೇಲಿನಂತೆಯೇ ಬೇರುಗಳಿಗೆ ಉಪಚರಿಸಿ ನೆಡಬೇಕು. ಹಾಗೆ ಕಿತ್ತು ನೆಡುವ ಮೊದಲ ದಿನ ಸಂಜೆ ಈ ಮಂತ್ರವನ್ನು ಆ ಗಿಡದ ಎದುರು ಪಠಿಸಬೇಕು. 'ಓ ಮರವೇ, ನಾನು ನಿನ್ನನ್ನು ಇಲ್ಲಿಂದ ಇನ್ನೂ ಇಳ್ಳೆಯ ಸ್ಥಳಕ್ಕೆ ತೆಗೆದುಕೊಂಡು ಹೋಗುವೆನು. ಮತ್ತೆ ನಿನಗೆ ಸಂತುಷ್ಟಿಯಾಗುವಷ್ಟು ನೀರನ್ನು ಕೊಡುವೆನು. ಅಲ್ಲಿ ನೀನು ಬೆಳೆಯುವೆ ಹಾಗೂ ಅಲ್ಲಿ ನಿನಗೆ ಗುಡುಗು ಸಿಡಿಲುಗಳ ಯಾವ ಭಯವೂ ಇರುವುದಿಲ್ಲ. ಅಲ್ಲಿ ನಿನ್ನನ್ನು ನಾನು ನನ್ನ ಪ್ರಿಯ ಪುತ್ರನಂತೆ ನೋಡಿಕೊಳ್ಳುವೆ.'

೮೭–೮೮–೮೯. ಕ್ಷೀರಿಕಾ, ದಾಡಿಮ, ತೂತ, ಬಕುಲ ಇತ್ಯಾದಿಗಳನ್ನು ಶ್ರಾವಣ ತಿಂಗಳಲ್ಲಿ ನೆಡಬೇಕು. ರಾಜಕೋಶ, ಮಾವು, ಲಕುಚ, ಇತ್ಯಾದಿಗಳನ್ನು ಭಾದ್ರಪದ ಮಾಸದಲ್ಲಿ ನೆಡಬೇಕು. ಗೊಲ್ಲ, ವಾರ್ತಕ ಮುಂತಾದವುಗಳನ್ನು ಅಶ್ವೀಜ ಮಾಸದಲ್ಲಿ ನೆಡಬೇಕು. ಫಣಿಂಜಕ, ಶತಪತ್ರಿಕಾ, ಧಾನ್ಯಕ, ಮೂಲಕ, ಇತ್ಯಾದಿಗಳನ್ನು ಕಾರ್ತಿಕ ಮಾಸದಲ್ಲಿ ನೆಡಬೇಕು. ಪಟೋಲ, ಫಾಲ್ಗುಣದಲ್ಲಿ, ಕಾಕರಕವನ್ನು ಚೈತ್ರದಲ್ಲಿ; ಬುದ್ಧಿವಂತ ವ್ಯಕ್ತಿಯು ಬಾಳೆಯನ್ನು ವೈಶಾಖ ಶುಕ್ರವಾದಲ್ಲಿ ನೆಡಬೇಕು. ಯಾವುದೇ ಇಚ್ಛಿತ ಗಿಡಗಳನ್ನು ಆಷಾಢ ಮಾಸದಲ್ಲಿ ನೆಡಬೇಕು.

೯೨. ಫಲಿನಿ, ಅಶೋಕ, ಪುನ್ನಾಗ, ಶಿರೀಷ ಮತ್ತು ನಿಂಬೆಯನ್ನು ಮೊದಲು ನೆಡಬೇಕು. ಯಾಕೆಂದರೆ ಅವು ಶುಭಪ್ರದ. ರೋಗ, ಆಪತ್ತುಗಳಿಂದ ರಕ್ಷಣೆ ನೀಡುತ್ತವೆ.

೯೩. ಕರಮರ್ದ, ವಂಶಗಳನ್ನು ಪೂರ್ವ ದಿಕ್ಕಿನಲ್ಲಿ, ಪಾರಾವತ, ಬದರಿ, ಕಪಿತ್ಥ ದಕ್ಷಿಣ ದಿಕ್ಕಿನಲ್ಲಿ, ಧಾತ್ರಿಯನ್ನು ಉತ್ತರ ದಿಕ್ಕಿನಲ್ಲಿ ನೆಟ್ಟರೆ ಶುಭ.

೯೪. ಗಿಡಗಳನ್ನು ನೆಡುವ ವಿಧಾನವೆಂದರೆ, ಮಂಟಪ (ಶಾಮಿಯಾನ), ನಂದ್ಯಾವರ್ತ (ಪಶ್ಚಿಮದಲ್ಲಿ ತೆರೆದಿರುವ ಚತುಷ್ಕೋನ) ಸ್ವಸ್ತಿಕ (ಧಾರ್ಮಿಕ ಮಹತ್ವದ ಸುಪ್ರಸಿದ್ಧ ಗುರುತು) ಚತುರಸ್ರ (ನಾಲ್ಕು ಭುಜ) ಸರ್ವತೋಭದ್ರ (ಚತುಷ್ಕೋನದಿಂದ ಸುತ್ತುವರಿದ ವರ್ತುಲ) ವೀಥೀ (ಸಾಲು), ನಿಕುಂಜ (ಲತಾ ಮಂಟಪ) ಹಾಗೂ ಪುಂಜಕ (ಗುಂಪು).

೯೯. ಮರಗಳನ್ನು ಹಿಮ, ಬಿರುಗಾಳಿ, ಬೆಂಕಿ, ಹೊಗೆ ಹಾಗೂ ಜೇಡರಹುಳುವಿನಿಂದ ಜಾಗ್ರತೆಯಾಗಿ ರಕ್ಷಣೆ ಮಾಡಬೇಕು.

೧೦೦. ಚೆನ್ನಾಗಿ ಪರಿಣಿತರಾದವರಿಂದ ಗಿಡಗಳನ್ನು, ಎಳ್ಳು ಹಾಗೂ ವಿಡಂಗಗಳನ್ನು ಕ್ರಿಮಿನಾಶಕವಾಗಿ ಬಳಸಿ ಉಪಚರಿಸಿ, ಹಾಲು ಹಾಗೂ ನೀರಿನ ಮಿಶ್ರಣವನ್ನು ರಸರೂಪದ ಗೊಬ್ಬರವನ್ನು ತುಪ್ಪದ ಹೊಗೆಯನ್ನು ಕೊಟ್ಟು ಉಪಚರಿಸಬೇಕು.

ಈ ಎಲ್ಲ ರೀತಿಯ ವೃಕ್ಷಾರೋಪಣ ವಿಧಾನವನ್ನು ಅರಿತ ನಂತರ, ಸಂಬಂಧಪಟ್ಟ ವ್ಯಕ್ತಿಯು ದೇವರು ಹಾಗೂ ಗುರುವಿನ ಸ್ತುತಿ ಮಾಡಬೇಕಲ್ಲದೆ ತನ್ನೆಲ್ಲ ಅಶುದ್ಧತೆಗಳನ್ನು ದೂರ ಮಾಡಿಕೊಳ್ಳಬೇಕು.

ಪಾಲನೆ – ಪೋಷಣೆ

೧೦೧. ಹಂದಿಯ ಮಲ–ಮೂತ್ರಗಳು, ಮಜ್ಜೆ, ಮಾಂಸ, ಎಲುಬು, ರಕ್ತ, ಮಿದುಳು ಇವನ್ನೆಲ್ಲ ನೀರಿಗೆ ಸೇರಿಸಿ ಮಿಶ್ರಣ ಮಾಡಿ ನೆಲದಡಿಯಲ್ಲಿ ಸಂಗ್ರಹಿಸಿಟ್ಟಿದ್ದಕ್ಕೆ 'ಕುಣಪ' ಎನ್ನುತ್ತಾರೆ.

೧೦೨. ಮೀನು, ಟಗರು, ಹೋತ ಮುಂತಾದ ಕೊಂಬುಳ್ಳ ಪ್ರಾಣಿಗಳ ಮಾಂಸ, ಮಜ್ಜೆ, ಕೊಬ್ಬು ಮುಂತಾದವುಗಳನ್ನು ಸಂಗ್ರಹಿಸಿಟ್ಟುಕೊಳ್ಳಬೇಕು.

೧೦೩. ಇವನ್ನು ನೀರಿಗೆ ಸೇರಿಸಿ ಚೆನ್ನಾಗಿ ಕುದಿಸಬೇಕು. ಇದರ ಜೊತೆಗೆ ಹೊಟ್ಟು ಮುಂತಾದವುಗಳನ್ನು ಸೇರಿಸಿದ ನಂತರ, ಎಣ್ಣೆಯುಕ್ತವಾದ ಪಾತ್ರೆಯಲ್ಲಿ ಮಿಶ್ರಣವನ್ನು ಸಂಗ್ರಹಿಸಿಟ್ಟುಕೊಳ್ಳಬೇಕು.

೧೦೪. ಕಬ್ಬಿಣದ ಪಾತ್ರೆಯಲ್ಲಿ ಇವನ್ನೆಲ್ಲ ಹುರಿದ ಮೇಲೆ ಎಳ್ಳಿನ ಹಿಂಡಿ, ಜೇನು ಇವುಗಳನ್ನು ಬೆರೆಸಬೇಕು. ಉತ್ತಮ ಗುಣಮಟ್ಟದ ಉದ್ದನ್ನು ನೆನೆಸಿ ಸೇರಿಸಬೇಕು, ಆನಂತರ ಸ್ವಲ್ಪ ತುಪ್ಪವನ್ನು ಸುರಿಯಬೇಕು.

೧೦೫. ಈ ಮೇಲೆ ಹೇಳಿದ ವಸ್ತುಗಳನ್ನು ಅನಿರ್ಧಿಷ್ಟ ಪ್ರಮಾಣದಲ್ಲಿ ತೆಗೆದುಕೊಳ್ಳಬಹುದು. ಯಾಕೆಂದರೆ ಇದಕ್ಕೆ ಯಾವ ನಿಶ್ಚಿತ ಮಾಪನವೂ ಇಲ್ಲ. ಇವುಗಳಲ್ಲಿ ಒಂದೊಂದನ್ನು ಬೆಚ್ಚಗಿನ ಪಾತ್ರೆಯೊಂದರಲ್ಲಿ ಗೊತ್ತಿರುವ ವ್ಯಕ್ತಿಯು ಸಂಗ್ರಹಿಸಿ ಇಡಬೇಕು.

೧೦೬. ಈ ಕುಣಪವು ಮರಗಳಿಗೆ ಬೇಕಾದ ಉತ್ತಮ ಪೋಷಕಾಂಶವಾಗಿರುತ್ತದೆ. ಹೀಗೆಂದು ಪ್ರಾಚೀನರಾದ ಪ್ರಾಜ್ಞರು ಹೇಳಿದ್ದಾರಷ್ಟೇ ಅಲ್ಲ, ನಾನು ಕೂಡ (ಸುರಪಾಲ) ಈ ಮಾತಿನ ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡಿದ ಆನಂತರ ಇದನ್ನೇ ಪುನಃ ಹೇಳುತ್ತಿದ್ದೇನೆ.

೧೦೭. ಎಳೆಯ ಗಿಡದ ಬೆಳವಣಿಗೆಗಾಗಿ ಮೀನು, ಮಾಂಸ ಹಾಗೂ ಎಳ್ಳಿನಿಂದ ತಯಾರಿಸಿದ ತಂಪು ಮಿಶ್ರಣವನ್ನು ವಾರಕ್ಕೊಂದು ಬಾರಿಯಂತೆ ಕೊಡಬೇಕು.

೧೧೨. ಮಳೆಗಾಲದಲ್ಲಿ, ಬೇಸಿಗೆಯಲ್ಲಿ ಅಥವಾ ಭೂಮಿ ಒಣಗಿದಾಗಲೆಲ್ಲ ಔಷಧೀಯ ಸಸ್ಯಗಳ ರಸದ ಜೊತೆಗೆ ಮೂತ್ರ, ಮಜ್ಜೆ ಹಾಗೂ ಹಾಲನ್ನು ಸೇರಿಸಿ ಗಿಡಗಳಿಗೆ ಕೊಡಬೇಕು.

೧೧೬. ಮರಗಳನ್ನು ಅವುಗಳ ಅಶುದ್ಧ ವಾತಾವರಣದಿಂದ ಮುಕ್ತಗೊಳಿಸಲು ಬಿಳಿ ಸಾಸಿವೆ ಬೀಜ, ಅರ್ಜುನ ವೃಕ್ಷದ ಹೂ, ಮೊಲದ ಮಾಂಸ ಇವುಗಳ ಮಿಶ್ರಣಕ್ಕೆ ರೋಗಾಣುನಾಶಕವೆನಿಸಿದ ವಿಡಂಗ ಹಾಗೂ ಅರಿಶಿನ

ಪುಡಿಯನ್ನು ಸೇರಿಸಿ ಹೊಗೆ ಹಾಕಿ ಉಪಚರಿಸಿದರೆ ವೃಕ್ಷಗಳು ಹೂ ಹಣ್ಣುಗಳಿಂದ ಸಮೃದ್ಧವಾಗಿ ಅತೀವ ಸಂತೋಷವನ್ನು ಕೊಡುತ್ತವೆ.

೧೧೭. ಬಾಳೆಯ ಎಲೆ, ಬೆಳಿ ಸಾಸಿವೆ ಬೀಜ, ಚಿಕ್ಕ ಹೊಳಪಿನ ಮೀನುಗಳ ಮಿಶ್ರಣದ ಹೊಗೆಯನ್ನು ಮರಗಳಿಗೆ ಕೊಟ್ಟರೆ ಅತ್ಯಲ್ಪ ಕಾಲದಲ್ಲಿಯೇ ಹೂ-ಹಣ್ಣುಗಳ ಕೊಡುಗೆಯನ್ನು ಪಡೆಯಬಹುದು.

೧೨೦. ಹೆಬ್ಬಾವು ಹಾಗೂ ಧಮ್ಮಿನ ಹಾವಿನ ಮಜ್ಜೆಯನ್ನು ಬೆರೆಸಿದ ನೀರನ್ನು ಬಳ್ಳಿಗಳ ಮೇಲೆ ಸಿಂಪಡಿಸಿದರೆ, ಎಲ್ಲ ಬಳ್ಳಿಗಳು ಚೆನ್ನಾಗಿ ಹೂ ಬಿಡುವವು.

೧೨೧. ಬಳ್ಳಿಗಳಿಗೆ ಮೊನಚಾದ ಚಿಕ್ಕ ಉಪಕರಣದಿಂದ ಛಿದ್ರಗೊಳಿಸಿದರೆ (ಅಕ್ಷರಶಃ ಚೇಳಿನ ಕೊಂಡಿಯ ಕಡಿತದಂತೆ) ಮತ್ತು ಸಫಾರಿಯ (ಒಂದು ಜಾತಿಯ ಹೊಳಪುಳ್ಳ ಚಿಕ್ಕ ಮೀನು) ಮಜ್ಜೆಯಿಂದ ಹೊಗೆ ಹಾಕಿದರೆ ಹಂದಿ ಹಾಗೂ ಇಲಿಯ ಮಜ್ಜೆಯ ನೀರನ್ನು ಸಿಂಪಡಿಸಿದರೆ ಬಳ್ಳಿಗಳಲ್ಲಿ ಹೂ ಕಾಯಿಗಳನ್ನು ಬಿಡುತ್ತವೆ.

೧೨೨. ದ್ರಾಕ್ಷಿಯ ಬಳ್ಳಿಯ ಬೇಳುಗಳಿಗೆ ಕೋಳಿಯ ಮಲ ಮೂತ್ರಗಳ ಪುಡಿಯಿಂದ ಪೋಷಣೆ ಒದಗಿಸಿದರೆ, ಮೀನಿನ ಮಜ್ಜೆಮಿಶ್ರಿತ ನೀರನ್ನು ಸಿಂಪಡಿಸಿದರೆ ತುಂಬಾ ಹೂ-ಕಾಯಿಗಳು ಫಲಿಸುವವು.

೧೨೩. ಮಾವಿನ ಮರಗಳಿಗೆ ಅಂಕೋಲದ ಮರದ ಪಕ್ವವಾದ ಹಣ್ಣು, ತುಪ್ಪ, ಜೇನು ಮತ್ತು ಹಂದಿಯ ಮಜ್ಜೆ ಬೆರೆಸಿದ ನೀರಿನಿಂದ ಉಪಚರಿಸಿದರೆ ಸಿಹಿಯಾದ ದೊಡ್ಡ ಹಣ್ಣುಗಳಿಂದ ತುಂಬಿ ಹೋಗುತ್ತವೆ.

೧೨೪. ತೆಂಗಿನ ಜಾತಿಯ ಮರಗಳಿಗೆ (ತಾಳೆ, ಖರ್ಜೂರ, ಅಡಿಕೆ, ಕತಕ) ಹಸು, ಹಂದಿ ಹಾಗೂ ಕಡಲ ಹಂದಿಯ ಮಾಂಸದ ಕಷಾಯ ಮಿಶ್ರಿತ ನೀರನ್ನು ಕೊಟ್ಟರೆ ಚೆನ್ನಾಗಿ ಕಾಯಿ ಬಿಡುತ್ತವೆ. ಎಳ್ಳು ಮಿಶ್ರಿತ ಸಫಾರಿ ಮೀನಿನ ಪುಡಿಯನ್ನು ಗೊಬ್ಬರವಾಗಿ ಕೊಟ್ಟರೆ ಚೆನ್ನಾಗಿ ಫಲಿಸುವವು.

೧೨೫. ತೆಂಗಿನ ಮರಗಳಿಗೆ ಜೇನು, ಉಪ್ಪು, ವಿಳಂಗ ಜೊತೆಗೆ ಎಳ್ಳು, ಉದ್ದು ಹಾಗೂ ಮದ್ಯವನ್ನು ಸೇರಿಸಿ ರಾತ್ರಿಯ ಕಾಲದಲ್ಲಿ ಲೇಪಿಸಿದರೆ ತೆಂಗು ಕಾಯಿಗಳಿಂದ ತುಂಬಿ ತೊನೆಯುವವು ಹಾಗೂ ಬಾಧೆಗಳಿಂದ ಮುಕ್ತವಾಗುವವು.

೧೨೬. ಉದ್ದಿನ ಕಾಳಿನ ತಿಳಿ, ಬಾರ್ಲಿ ಪುಡಿ ಅಥವಾ ಹೊಟ್ಟಿನ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಕೊಟ್ಟರೆ ತೆಂಗಿನ ಮರಗಳು ಗಡಿಗೆಯಷ್ಟು ದೊಡ್ಡದಾದ ಕಾಯನ್ನು ಯಾವಾಗಲೂ ಕೊಡುತ್ತವೆ.

೧೨೭. ದಾಳಿಂಬೆಯ ಗಿಡಗಳಿಗೆ ನೀಲಕಂಠಹಕ್ಕಿ, ಬೆಕ್ಕು, ಜಿಂಕೆ, ಆನೆ ಹಾಗೂ ಹಂದಿಯ ಮಾಂಸದ ಜೊತೆಗೆ ತಕ್ಕಷ್ಟು ಮಜ್ಜೆಯನ್ನು ಎಮ್ಮೆಯ ಹಾಲಿಗೆ

ಸೇರಿಸಿ ನೀರು ಬೆರೆಸಿ ಸಿಂಪಡಿಸಿದರೆ ಸಿಹಿಯಾದ, ರಸಭರಿತವಾದ ಬೀಜಗಳುಳ್ಳ ದೊಡ್ಡ ಕಾಯಿಗಳನ್ನು ಕೊಡುತ್ತದೆ.

೧೨೯. ದನಗಳ ಹಾಗೂ ನರಿಯ ಮಾಂಸದ ಚೂರುಗಳನ್ನು ಗೊಬ್ಬರವಾಗಿ ದೊಡ್ಡ ಪ್ರಮಾಣದಲ್ಲಿ ದಾಳಿಂಬಕ್ಕೆ ಕೊಟ್ಟರೆ ಹಾಗೂ ಅದರ ಬುಡಕ್ಕೆ ಹರಳು ಸಕ್ಕರೆಯ ನೀರನ್ನು ಭರಪೂರ ಕೊಟ್ಟರೆ ಅತ್ಯಂತ ಸಿಹಿಯಾದ ರಸಭರಿತವಾದ ಹಣ್ಣುಗಳಿಂದ ತುಂಬಿ ಬಾಗಿ ಹೋಗುತ್ತವೆ.

೧೩೧. ಮೀನಿನ ನೀರು ಹಾಗೂ ಹಾಲಿನಿಂದ ಉಪಚರಿಸಿದ ಎರೆಹುಳುಗಳನ್ನು ಬುಡಕ್ಕೆ ಕೊಟ್ಟರೆ, ದಾಳಿಂಬವು ಸಿಹಿಯಾದ ದೊಡ್ಡ ಕಾಯಿಗಳನ್ನು ಕೊಡುತ್ತವೆ.

೧೩೩. ಹಲಸಿನ ಮರಗಳಿಗೆ ತ್ರಿಫಲಾ ಕಷಾಯ ಸೇರಿಸಿ ನೀರೆರದರೆ ಮತ್ತು ಅದರ ಬುಡಕ್ಕೆ ಕೂಡಲೇ ಹೊಟ್ಟು ತುಂಬಿ ಮುಚ್ಚಿದರೆ ಅದರಲ್ಲಿ ದೊಡ್ಡ ಆಕಾರದ ಸಿಹಿಯಾದ ಹಾಗೂ ಬೀಜವಿಲ್ಲದ ಫಲಗಳು ದೊರೆಯುತ್ತವೆ.

೧೩೫. ಕರ್ಕಂಧು, ಲಕುಚ, ಬದರಿ, ಧಾತ್ರಿ, ಜಂಬೂ ವೃಕ್ಷಗಳಿಗೆ ತುಪ್ಪ, ಜೇನು, ಕ್ರಸರ (ಅಕ್ಕಿ, ಎಳ್ಳು ಬಟಾಣಿ ಬೆರೆಸಿದ ಮಸಾಲೆ ಖಾದ್ಯ) ಮತ್ತು ಲೋಧ್ರ, ಬಾರ್ಲಿಯ ದಪ್ಪ ಮಿಶ್ರಣ ಸೇರಿಸಿ ಲೇಪಿಸಬೇಕು ಅಥವಾ ಎಳ್ಳು, ಜೇನು, ಬಾರ್ಲಿ ಸೇರಿಸಿ ೧೨ ದಿನಗಳವರೆಗೆ ಲೇಪಿಸಬೇಕು ಮತ್ತು ಹೊಗೆ ಹಾಕಬೇಕು ಮತ್ತು ಹೂ ಬಿಡುವ ಸಮಯದಲ್ಲಿ ಹಾಲು–ನೀರನ್ನು ಸಿಂಪಡಿಸಿದರೆ ಚೆನ್ನಾಗಿ ಕಾಯಿ ಬಿಡುವುದು.

೧೪೨. ವಿಡಂಗ, ಉದ್ದು, ಎಳ್ಳು, ಸಾಸಿವೆ ಹಾಗೂ ಅರಿಶಿನಪುಡಿ ಮತ್ತು ಮೊಲದ ಮಾಂಸದೊಂದಿಗೆ ಮಿಶ್ರಿತವಾದ ನೀರನ್ನು ಬಿಲ್ವದ ನೀರಿಗೆ ಬೆರೆಸಿಕೊಟ್ಟರೆ ಹಾಗೂ ಮೊಲದ ಮಾಂಸದ ಹೊಗೆ ಹಾಕಿದರೆ ಕಿತ್ತಳೆ ಗಿಡಗಳು ಭರಪೂರ ಹಣ್ಣುಗಳನ್ನು ಕೊಡುವವು.

೧೪೯. ಮದನ ಪತಾಕೆಯಂತೆ ಅತ್ಯಂತ ಸುಂದರಳಾದ ಯುವತಿಯು ಕಮಲದಂತಿರುವ ತನ್ನ ಕಾಲುಗಳನ್ನು ಅರಗಿನ ಕೆಂಪಿನಿಂದ ಅಂದವಾಗಿ ಅಲಂಕರಿಸಿಕೊಂಡು ನೂಪುರ ಸಹಿತವಾದ ತನ್ನ ಕಾಲುಗಳಿಂದ ಮೆಲ್ಲಗೆ ಮೃದುವಾಗಿ ಒದೆದರೆ ಅಶೋಕ ವೃಕ್ಷವು ಹೂಗಳಿಂದ ತುಂಬಿ ಹೋಗುವುದು.

೧೫೦. ಸುಂದರಿಯಾದ ಯುವತಿಯು ಆಕರ್ಷಕವಾದ ಬಳೆಗಳನ್ನು ಧರಿಸಿಕೊಂಡು, ಬಳ್ಳಿಯಂತಿರುವ ಕಮಲದ ದೇಟಿನಂತಿರುವ ತನ್ನ ಮೃದು ಬಾಹುಗಳನ್ನು ಚಾಚಿ ಅಪ್ಪಿಕೊಂಡರೆ ಕುರಬಕ ಹಾಗೂ ತಿಲಕ ವೃಕ್ಷಗಳು ಬಹಳ ಹೂ ಬಿಡುತ್ತವೆ.

೧೫೩. ಮಲ್ಲಿಗೆ ಗಿಡಕ್ಕೆ ಒಣಗಿದ ಹುಲ್ಲಿನ ಬೆಂಕಿಯಿಂದ ನಸುವಾಗಿ ಶಾಖ ಕೊಟ್ಟರೆ, ತುಂಬಾ ಹೂ ಬಿಡುವವು. ಹಾಲು ಮಿಶ್ರಿತ ನೀರನ್ನು ಪಾಟಲ ಗಿಡಕ್ಕೆ

ಸಿಂಪಡಿಸಿದರೆ, ಜೇನುಗಳು ಪಾಟಲ ಗಿಡಕ್ಕೆ ಗೂಡು ಕಟ್ಟಿದರೆ ಚೆನ್ನಾಗಿ ಹೂ ಬಿಡುವವು.

೧೬೦. ಹೊಲಗಳಲ್ಲಿ ಇಲಿಗಳ ಕಾಟ ಜೋರಾಗಿದ್ದರೆ ಅರಗಿನ ದ್ರವದಲ್ಲಿ ಬಾಳೆಯ ಮೇಲೆ ಈ ಕೆಳಗಿನಂತೆ ಮಂತ್ರವನ್ನು ಬರೆದು ಹೊಲದ ಮಧ್ಯದಲ್ಲಿ ತ್ರಿಕೋನಾಕಾರದಲ್ಲಿ ಇಡಬೇಕು.

೧೬೧-೧೬೨. ಓಂ ಸ್ವಸ್ತಿ (ಸದಾ ಶಾಂತಿಯಿರಲಿ) ಕಿಷ್ಕಿಂಧೆಯಿಂದ ಭಗವಾನ್ ಹನುಮಾನ್‌ಜೀ ಯವರ ಕೃಪೆಯಿಂದ ಸದಾ ವಿಜಯ ದೊರೆಯುವುದು. ಸಂಕಟದ ಸಮಯದಲ್ಲಿ ಸೂರ್ಯನನ್ನೇ ಹಿಡಿದು ಶೌರ್ಯವನ್ನು ಪ್ರಕಟಿಸಿದವರು ಅವರು. ಭೂಮಿಯ ಮೇಲಿನ ಇಲಿ, ಮೂಗಿಲಿ, ಮಿಡತೆ ಮುಂತಾದವುಗಳಿಗೆಲ್ಲ ಅವರೇ ದೇವರ ದೇವರು. ರಾಜಾ ಹನುಮಾನ್‌ಜೀ ಅವರ ಆಜ್ಞೆಯಂತೆ ನೀವೆಲ್ಲ ಈ ಭೂಮಿಯನ್ನು ಬಿಟ್ಟು ಬೇರೆ ಕಡೆ ತಕ್ಷಣ ಹೊರಟು ಹೋಗಿ, ಇಲ್ಲವಾದರೆ ಅವರು ತಮ್ಮ ಬಾಲವನ್ನು ಪ್ರಯೋಗಿಸಿ, ನಿಮ್ಮನ್ನೆಲ್ಲ ಬಡಿದು ಸುಟ್ಟು ನಾಶ ಮಾಡಬಲ್ಲಷ್ಟು ವಜ್ರ ಸಮಾನರು. ಹಮ್! ಫಟ್! ಸ್ವಾಹಾ!

೧೬೩. ಎಲೆಯ ಮೇಲೆ ಈ ಮಂತ್ರ ಬರೆದು, ಅದನ್ನು ಓದಿ, ಆ ಎಲೆಯನ್ನು ಹೊಲದಲ್ಲಿ ಹುಗಿಯಬೇಕು. ಇದರ ಪ್ರಭಾವದಿಂದ ಹುಳು-ಹುಪ್ಪಡಿ, ಇಲಿ, ಗೆದ್ದಲು, ಗಿಳಿ, ಪತಂಗ ಮುಂತಾದವೆಲ್ಲ ನಾಶವಾಗುವವು.

ರೋಗ

೧೬೪. ವೃಕ್ಷಗಳಿಗೆ ಬಾಧಿಸುವ ರೋಗಗಳು ಎರಡು ತೆರನಾದವು – (೧) ಆಂತರಿಕ (೨) ಬಾಹ್ಯ.

೧೬೬. ಆಂತರಿಕ ರೋಗಗಳು ವಾತಾ ಪಿತ್ತ ಕಫಗಳಿಂದ ಉಂಟಾಗುತ್ತವೆ. (ತ್ರಿದೋಷ) ಬಾಹ್ಯ ರೋಗಗಳು ಕೀಟಗಳಿಂದ, ಶೀತಲ ವಾತಾವರಣ ಇತ್ಯಾದಿಗಳಿಂದ ಉಂಟಾಗುತ್ತವೆ.

೧೬೭. ಒಣ ಹಾಗೂ ತೀಕ್ಷ್ಣ ಪದಾರ್ಥಗಳ ಅತಿಶಯತೆಯ ಪರಿಣಾಮವು ಭೂಮಿಯ ಮೇಲೆ ಆಗುವುದರಿಂದ ವಾತರೋಗ ಉಂಟಾಗುತ್ತದೆ.

೧೬೯. ಶೀತಕಾಲ ಅಥವಾ ವಸಂತ ಋತುವಿನಲ್ಲಿ ಕಫದಿಂದುಂಟಾಗುವ ರೋಗ ಕಾಣಿಸಿಕೊಳ್ಳುತ್ತದೆ.

೧೭೧. ಪಿತ್ತ ಪ್ರಕೃತಿಯ ರೋಗಗಳು ಗ್ರೀಷ್ಮ ಋತುವಿನ ಅಂತ್ಯದಲ್ಲಿ ಕಾಣಿಸಿಕೊಳ್ಳುತ್ತವೆ. ಮೋಡಗಳು ಕಾಣೆಯಾದ ಮೇಲೆ ಗಿಡಗಳಿಗೆ ಕಹಿ, ಹುಳಿ, ಉಪ್ಪು, ಕಟುವಾದ ಪದಾರ್ಥಯುಕ್ತವಾದ ನೀರನ್ನು ಅತಿಯಾಗಿ ಹಾಕಿದರೆ ಈ ರೋಗಗಳು ಕಾಣಿಸಿಕೊಳ್ಳುವವು.

೧೭೪. ಅಧಿಕವಾದ ಚಂಡಮಾರುತದಿಂದಲೂ ಗಿಡಗಳಿಗೆ ಹಾನಿಯಾಗುತ್ತದೆ. ಪರಿಣಾಮವಾಗಿ ಮರಗಳು ಮುರಿದು ಬೀಳುತ್ತವೆ. ಬೇರು ಸಹಿತ ಕಿತ್ತು ಬೀಳುತ್ತವೆ. ಮರಗಳು ಬಾಗುತ್ತವೆ.

೧೭೫. ಬೆಂಕಿ ತಾಗಿದರೆ, ಸಿಡಿಲು ಬಡಿದರೆ ಮರಗಳು ಒಣಗಿ ಹೋಗುತ್ತವೆ. ಮಣ್ಣು ತೇವಾಂಶ ಕಳೆದುಕೊಳ್ಳುವುದು. ನೀರು ಅಲಭ್ಯವಾಗುವುದರಿಂದಲೂ ಮರಗಳು ಒಣಗುತ್ತವೆ.

೧೭೬. ಕೊಡಲಿ ಪೆಟ್ಟು ತಾಗಿದರೆ ಗಾಯವಾಗುವುದರಿಂದ ಮರಗಳು ಒಣಗುತ್ತವೆ.

೧೭೭. ಕಫ ತತ್ವದ ಅಸಮತೋಲನದ ಪರಿಣಾಮವಾಗಿ ಮರಕ್ಕೆ ಗಾಯವಾಗದಿದ್ದರೂ ಅದರಿಂದ ರಸ ಒಸರುತ್ತದೆ. ತಪ್ಪು ಉಪಚಾರ ಮಾಡಿದರೆ ವಾತ ರೋಗಕ್ಕೆ ಸಮಾನವಾದ ರೋಗ ಕಾಣಿಸಿಕೊಳ್ಳುತ್ತದೆ.

೧೭೮. ವಾತಕ್ಕೆ ಸಂಬಂಧಿಸಿದ ರೋಗಗಳಿಂದಾಗಿ, ಮರಗಳು, ಎಲೆಗಳನ್ನು, ಹೂವುಗಳನ್ನು ಕಾಯಿಗಳನ್ನು ಕಳೆದುಕೊಳ್ಳತೊಡಗುತ್ತವೆ. ಹೆಚ್ಚು ನೀರು ಕೊಡುವುದು, ತಾಪವನ್ನು ಎದುರಿಸುವುದು, ದೋಷಪೂರ್ಣವಾದ ಮಣ್ಣು ಮತ್ತು ಪ್ರತಿಕೂಲ ಹವಾಮಾನದಿಂದಾಗಿ ಈ ಬಗೆಯ ಪರಿಣಾಮಗಳು ಕಾಣಿಸಿಕೊಳ್ಳಬಹುದು.

೧೮೧. ಇರುವೆಗಳ ಆಕ್ರಮಣ, ಹೆಚ್ಚು, ನೀರು ಹಾಕುವುದು ಇವುಗಳಿಂದ ಅಜೀರ್ಣವಾಗಿ ಮರಗಳು ದುರ್ಗಂಧ ಸೂಸತೊಡಗುತ್ತವೆ. ಅವುಗಳ ಸ್ವಾಭಾವಿಕ ಸುಗಂಧ ಕಡಿಮೆಯಾಗುತ್ತದೆ ಮತ್ತು ಎಲೆ ಅಂಕುರಗಳು ಮುರುಟಿಕೊಳ್ಳುತ್ತವೆ.

೧೮೨. ಅಗ್ನಿ, ವಾಯು, ಬೇರೆ ಮರಗಳ ತಿಕ್ಕುವಿಕೆ, ನಿರಂತರ ನೆರಳಿನಲ್ಲಿರುವುದು, ಹೆಚ್ಚು ಪಕ್ಷಿಗಳು ಗೂಡು ಕಟ್ಟುವುದು, ಬಳ್ಳಿಗಳು-ಬಿಳಿಲುಗಳು ಅತಿಯಾಗಿ ಆವರಿಸಿಕೊಳ್ಳುವುದು, ಹತ್ತಿರದಲ್ಲಿ ಅತಿಯಾಗಿ ಕಳೆ ಬೆಳೆಯುವುದು, ಇವೆಲ್ಲವು ಮರಗಳು ನಾಶವಾಗಲು ಕಾರಣಗಳು.

ಉಪಚಾರ

೧೮೫. ವಾತದ ಅಸಮತೋಲನದಿಂದ ಬರುವ ರೋಗಗಳಿಗೆ ಉಪಚಾರವನ್ನು ಮಾಂಸ, ಮಜ್ಜೆ, ತುಪ್ಪ ಇವುಗಳಿಂದ ಮಾಡಬಹುದು. ಕುಣಪ ಜಲದ ಸಿಂಪಡಿಕೆಯಿಂದ ವಾತತತ್ವದ ರೋಗಗಳಿಗೆ ಉಪಚರಿಸಬಹುದು.

೧೮೬. ವಾತ ತತ್ವದ ರೋಗಗಳಿಗೆ ಹಂದಿಯ ಮಜ್ಜೆಯ ಹೊಗೆ ಹಾಕುವುದು. ಮೀನಿನ ಎಣ್ಣೆ, ತುಪ್ಪ, ಕುದುರೆ ಬಾಲ, ಆಕಳ ಕೊಂಬು ಸೇರಿಸಿ ಕುದಿಸಿ ಕಷಾಯ ಮಾಡಬೇಕು.

೧೮೭. ಕಫ ತತ್ವದ ರೋಗಗಳಿಗೆ ಸುಗಂಧಿತ ನೀರಿನೊಂದಿಗೆ ಪಂಚಮೂಲ, ಶ್ರೀಫಲ, ಸರ್ವತೋಭದ್ರ, ಪಾಟಲ, ಗಣಿಕರಿಕಾ ಮತ್ತು ಸ್ಯೋನಾಕಗಳಿಂದ ತಯಾರಿಸಿದ ಕಷಾಯವನ್ನು ಶಕ್ತಿಯುತವಾಗಿ ತಯಾರಿಸಿ ಬಳಸಬೇಕು.

೧೮೯. ಮರಗಳು ಕಫ ರೋಗ ಬಾಧೆಯಿಂದ ತೊಂದರೆಗೀಡಾಗಿದ್ದರೆ, ಮರದ ಬೇರಿನ ಸುತ್ತ ನಾಲ್ಕೂ ದಿಕ್ಕಿನಲ್ಲಿ ಮಣ್ಣು ತೆಗೆಯಬೇಕು ಮತ್ತು ಹೊಸ ಒಣ ಮಣ್ಣು ಹಾಕುವುದರ ಮೂಲಕ ಉಪಚರಿಸಬೇಕು.

೧೯೦. ಪಿತ್ತದ ಲಕ್ಷಣದ ರೋಗಗಳಿಗೆ ತಣ್ಣಗಿನ ಹಾಗೂ ಸಿಹಿಯಾದ ಪದಾರ್ಥದಿಂದ ಉಪಚರಿಸಿ ಬುದ್ಧಿವಂತ ವ್ಯಕ್ತಿಯು ರೋಗ ಪರಿಹಾರ ಮಾಡಬಲ್ಲ.

೧೯೧. ಪಿತ್ತ ರೋಗಪೀಡಿತ ಮರಗಳಿಗೆ ಯಷ್ಟಿಮಧು, ಮಧೂಕ, ಹಾಲು, ಜೇನುಗಳ ಕಷಾಯವನ್ನು ಸಿಂಪಡಿಸಬೇಕು.

೧೯೨. ಹಣ್ಣುಗಳು, ತ್ರಿಫಲಾ, ತುಪ್ಪ, ಜೇನು ಸೇರಿಸಿ ಕಷಾಯ ಮಾಡಿ ಸಿಂಪಡಿಸಿದರೆ ಮರಗಳು ಪಿತ್ತ ವಿಕಾರದಿಂದ ಮುಕ್ತವಾಗುತ್ತವೆ.

೧೯೩. ಬಿಳಿ ಸಾಸುವೆ, ರಾಮಠ, ವಜಾ, ಊಷ್ಮದ ಮಿಶ್ರಣ, ಗೋಮಾಂಸ, ಕೋಣನ ಕೋಡು, ಪಾರಿವಾಳದ ಮಾಂಸ ಹಾಗೂ ಭಲ್ಲಾಟದ ಚೂರ್ಣದೊಂದಿಗೆ ನೀರು ಸೇರಿಸಿ ಹೊಗೆ ಕೊಟ್ಟರೆ, ಮರದ ಮೇಲೆ ಸಂಗ್ರಹಗೊಂಡ ಕೀಟಗಳನ್ನು ನಾಶ ಮಾಡಬಹುದು.

೧೯೬. ತುಪ್ಪದ ಜೊತೆ ಸೇರಿಸಿದ ವಿಡಂಗವನ್ನು ತಿಕ್ಕಿದರೆ, ಉಪ್ಪು ಸೇರಿಸಿದ ನೀರನ್ನು ೭ ದಿನ ಸಿಂಪಡಿಸಿದರೆ, ಗೋಮಾಂಸ, ಬಿಳಿಸಾಸುವೆ, ಎಳ್ಳು ಸೇರಿಸಿ ಲೇಪಿಸಿದರೆ ರೋಗಾಣು ಕೀಟಾಣುಗಳು ನಾಶವಾಗುವವು.

೨೦೦-೨೦೧. ಮುರಿದು ಹೋದ ಮರಗಳಿಗೆ ಜೇನು, ಮದ್ಯ, ಹಾಲಿನೊಂದಿಗೆ ಪ್ಲಕ್ಷ ಹಾಗೂ ಔದುಂಬರಗಳ ತೊಗಟೆಯನ್ನು ಸೇರಿಸಿ ಸಿಂಪಡಿಸಬೇಕು. ಮುರಿದು ಹೋದ ಭಾಗಗಳಿಗೆ ಅನ್ನದ ಗಂಜಿಯನ್ನು ದಾರದಿಂದ ಗಟ್ಟಿಯಾಗಿ ಕಟ್ಟಬೇಕು. ಆನಂತರ ಮರಗಳ ನಾಲ್ಕೂ ದಿಕ್ಕಿಗೆ ತಗ್ಗು ತೋಡಿ ಹೊಸ ಮಣ್ಣು ತುಂಬಬೇಕು. ಎಮ್ಮೆಯ ಹಾಲನ್ನು ತಕ್ಷಣ ಚಿಮುಕಿಸಬೇಕು ಮತ್ತು ನೀರಿನಿಂದ ಹೊಂಡವನ್ನು ತುಂಬಬೇಕು. ಹೀಗೆ ಮಾಡಿದರೆ ಎಲ್ಲ ಸರಿಹೋಗುತ್ತದೆ.

೨೦೬. ಮರಗಳು ಸಿಡಿಲಿನ ಬೆಂಕಿಯಿಂದ ಸುಟ್ಟರೆ, ವಿದಾರಿ, ಸಕ್ಕರೆ, ನಾಗಜಿಹ್ವಾ ಹಾಗೂ ಎಳ್ಳುಗಳನ್ನು ಚೆನ್ನಾಗಿ ಸೇರಿಸಿ ಅದನ್ನು ಲೇಪಿಸಬೇಕು ಮತ್ತು ಹಾಲು–ನೀರನ್ನು ಸಿಂಪಡಿಸಬೇಕು. ಆಗ ಆ ಗಿಡದಲ್ಲಿ ಚಿಗುರು ಕಾಣಿಸಿಕೊಳ್ಳುತ್ತದೆ.

೨೧೩. ಬಾರ್ಲಿ ಅಥವಾ ಗೋಧಿಯ ಹಿಟ್ಟಿಗೆ ಜೇನು ಹಾಗೂ ಹಾಲು ಸೇರಿಸಿ ನೀರು ಬೆರೆಸಿ ಸಿಂಪಡಿಸಿದರೆ ಕೆಲವೇ ದಿನಗಳಲ್ಲಿ ಹಳದಿ ರೋಗ ನಿಯಂತ್ರಣದಲ್ಲಿ ಬರುತ್ತದೆ.

೨೧೫. ಎಳ್ಳು ಹಾಗೂ ಕುರಿಯ ಹಿಕ್ಕೆ ಪ್ರತಿಯೊಂದನ್ನು ೨೫೬ ಮುಷ್ಟಿ, ಬಾರ್ಲಿಯನ್ನು ಒಂದು ಪ್ರಸ್ಥ (೬೪ ಮುಷ್ಟಿ) ನೀರು ಒಂದು ದ್ರೋಣ (೧೦೨೪ ಬೊಗಸೆ) ಮತ್ತು ಅದಕ್ಕೆ ಸರಿಯಾಗಿ ಗೋಮಾಂಸವನ್ನು ಸೇರಿಸಿ ೭ ರಾತ್ರಿಗಳವರೆಗೆ ಸಂಗ್ರಹಿಸಿ ಇಡಬೇಕು. ಆ ನಂತರ ಮರಕ್ಕೆ ಅದನ್ನು ಸಿಂಪಡಿಸಬೇಕು. ಆಗ ಹಣ್ಣು–ಹೂಗಳು ಸಮೃದ್ಧವಾಗಿ ಆಗುವುದು.

೨೧೮. ಹುಲಿ, ಮೊಸಳೆ, ನರಿಗಳ ಮಾಂಸದ ದಪ್ಪ ದಪ್ಪ ಮಿಶ್ರಣವನ್ನು ಆನೆಯ ಹಾಗೂ ಎಮ್ಮೆಯ ಹಾಲು ಸೇರಿಸಿ ಗಿಡಕ್ಕೆ ಸಿಂಪಡಿಸಿದರೆ ಹಣ್ಣು–ಹೂಗಳನ್ನು ಕೊಡುತ್ತದೆ.

೨೨೦. ಸವತೆಯಂಥ ಜಾತಿಯ ತರಕಾರಿಗಳಿಗೆ ಹಸು ಹಾಗೂ ನಾಯಿಯ ಎಲುಬಿನೊಂದಿಗೆ ಬೆಕ್ಕಿನ ಮಲಮೂತ್ರ ಸೇರಿಸಿ ನಾಲ್ಕುದಿನ ಹೊಗೆ ಹಾಕುವುದರಿಂದ ರೋಗ ಮುಕ್ತವಾಗುವುದು.

ತೋಟಗಾರಿಕೆಯ ಅಚ್ಚರಿಯಗಳು

೨೨೩–೨೨೬. ಗಿಡಗಳನ್ನು ಕುರಿತು ಕೆಲವು ವಿಶಿಷ್ಟ ಪ್ರಕ್ರಿಯೆಗಳನ್ನು ಈ ಮುಂದೆ ಹೇಳಲಾಗಿದೆ. ವರ್ಷದುದ್ದಕ್ಕೂ ಹೂ–ಹಣ್ಣು ಕೊಡುವುದು, ಶ್ರಾಯವಲ್ಲದ ದಿನಗಳಲ್ಲಿ ಹೂ–ಹಣ್ಣು ಬಿಡುವುದು, ಸುಗಂಧದ ಉತ್ಪಾದನೆ, ರುಚಿಯಲ್ಲಿ ಬದಲಾವಣೆ, ಹೂಗಳಲ್ಲಿ ಬದಲಾವಣೆ, ಹಣ್ಣುಗಳಲ್ಲಿ ಬದಲಾವಣೆ, ಸುಗಂಧದಲ್ಲಿ ಬದಲಾವಣೆ, ಹೂ ಬಾರದ ಬಳ್ಳಿಗಳಲ್ಲಿ ಹೂ ಬರುವುದು. ಮರಗಳನ್ನು ಬಳ್ಳಿಗಳಾಗಿ ಬದಲಾಯಿಸುವುದು, ಮರಗಳನ್ನು ಗಿಡ್ಡ ತಳಿಯಾಗಿಸುವುದು, ಮಿಶ್ರ ತಳಿ ತಯಾರಿಸುವುದು, ಹಣ್ಣು ಮಾಗುವ ಅವಧಿ ಹೆಚ್ಚಿಸುವುದು, ಹಣ್ಣಾಗದಿರುವುದು, ಬೆಳೆಯ ಅವಧಿ ದೀರ್ಘವಾಗುವುದು, ಅಲ್ಪಾವಧಿಯಲ್ಲಿ ಹೂ–ಹಣ್ಣುಗಳು ಅಕಾಲದಲ್ಲಿ ಬೆಳೆಯುವುದು, ಬೇರೆ ಪ್ರಜಾತಿಗಳಾಗಿ ರೂಪಾಂತರ ಹೊಂದುವುದು, ಶೀಘ್ರದಲ್ಲಿ ಪುನರುಜ್ಜೀವನಗೊಳ್ಳುವುದು ಅಥವಾ ನಷ್ಟವಾಗುವುದು ಇತ್ಯಾದಿ.

೨೩೬. ಅಶ್ವಘ್ನ, ಲಾಂಗಲಿ, ಚಿಕ್ಕ ಅಥವಾ ದೊಡ್ಡ ಬೃಹತಿ ಇವುಗಳ ಮಿಶ್ರಣದಿಂದ ತಯಾರಿಸಿದ ಗುಳಿಗೆಯನ್ನು (ಉಂಡೆಯನ್ನು) ಅದೇ ಮಿಶ್ರಣದಿಂದ

ಸಿಂಪಡಿಸಿದ ಮರದ ಬೇರಿನ ಛಿದ್ರದ ಒಳಗೆ ಇಟ್ಟರೆ, ಅದರ ಕಾಯಿಗಳು ಖಾರವಾದ ರುಚಿಯನ್ನು ಹೊಂದುತ್ತವೆ – ಸಜಹ ಸ್ಥಿತಿಯಲ್ಲಿ ಅವು ಸಿಹಿಯಾಗಿದ್ದರೂ ಕೂಡ.

೨೩೭. ವಿಡಂಗ, ಯಷ್ಟಿ, ಯವ, ಹಾಲು ಹಾಗೂ ಬೆಲ್ಲದಿಂದ ತಯಾರಿಸಿದ ಮಿಶ್ರಣದ ದ್ರಾವಣವನ್ನು ಮರದ ಬೇರಿಗೆ ಚೆನ್ನಾಗಿ ಲೇಪಿಸಿದರೆ, ಸಾಮಾನ್ಯವಾಗಿ ಖಾರವಾಗಿ ರುಚಿಯಿರುವ ಕಾಯಿಗಳು ಸಿಹಿಯಾಗುತ್ತವೆ.

೨೩೮. ಹುಳಿಯಾದ ಹಣ್ಣುಗಳನ್ನು ಕೊಡುವ ಮರದ ಬೇರಿನ ಮೇಲಿನ ಮಣ್ಣು ತೆಗೆದು, ಬೇರುಗಳಿಗೆ ಯಷ್ಟಿ, ಮಧೂಕದ ಹೂರಸ, ದ್ರಾಕ್ಷಿ, ಪುಡಿಸಕ್ಕರೆ ಮತ್ತು ಬಾರ್ಲಿಯ ಮಿಶ್ರಣವನ್ನು ಲೇಪಿಸಿದರೆ ಹಾಗೂ ಅದೇ ಮಿಶ್ರಣವನ್ನು ಮರದ ಬುಡಕ್ಕೆ ನೀರು ಸೇರಿಸಿ ಎರೆದರೆ ಸಿಹಿಯಾದ ಹಣ್ಣು ಕೊಡಲು ಪ್ರಾರಂಭಿಸುವವು.

೨೬೭. ಮದೋನ್ಮತ್ತ ಆನೆಯ ಮದೋದಕದಲ್ಲಿ ಮುಳುಗಿಸಿದ ಮಂಗಕಾಲಿನ ಉದ್ದನೆಯ ಎಲುಬಿನಿಂದ ಮರದ ಬೇರನ್ನು ಕತ್ತರಿಸಿ ಛಿದ್ರಗೊಳಿಸಿದರೆ, ಅದರಲ್ಲಿ ಬರುವ ಕಾಯಿಗಳನ್ನು ಒಂದು ವರ್ಷದವರೆಗೂ ತಡೆಯಬಹುದು.

೨೬೮. ಅದೇ ತಾನೆ ಮರಣ ಹೊಂದಿದ ಎತ್ತಿನ ಚರ್ಮವನ್ನು ನಿರ್ದಿಷ್ಟ ಗಿಡದ ಟೊಂಗೆಗೆ ಚೆನ್ನಾಗಿ ಬಿಗಿದು ಕಟ್ಟಿದರೆ, ಮರದ ಆ ಟೊಂಗೆಯ ಫಲಗಳು ಹಣ್ಣಾಗುವುದನ್ನು ತಡೆಯಬಹುದು.

೨೬೯. ಯಾವುದಾದರೂ ಗಿಡದ ನಿರ್ದಿಷ್ಟ ಟೊಂಗೆಯಲ್ಲಿನ ಕಾಯಿಗಳು ಹಣ್ಣಾಗಬಾರದೆಂದಿದ್ದರೆ, ಆ ಉದ್ದೇಶದಿಂದಲೇ ಸಾಯಿಸಿದ ಕಪ್ಪು ಎತ್ತಿನ ಕುತ್ತಿಗೆಯ ಚರ್ಮವನ್ನು ಆ ಟೊಂಗೆಯಲ್ಲಿನ ಕಾಯಿಗಳು ಹಣ್ಣಾಗುವುದಿಲ್ಲ.

೨೭೪. ಅಕ್ಕಿಯನ್ನು ತೊಳೆದ ನೀರನ್ನು ತೆಂಗಿನ ಮರಕ್ಕೆ ಸಿಂಪಡಿಸಿದರೆ ತೆಂಗಿನ ಮರ ಸತ್ತು ಹೋಗುತ್ತದೆ. ಬೇವಿನ ಎಲೆಗಳಿಂದ ಉಪಚರಿಸಿದ ನೀರನ್ನು ಹತ್ತಿಯ ಗಿಡಗಳಿಗೆ ಸಿಂಪಡಿಸಿದರೆ ಹತ್ತಿಯ ಗಿಡ ತಕ್ಷಣ ನಾಶವಾಗುವುದು.

೨೮೫–೨೮೬. ಸವತೆ ಹಾಗೂ ಬೂದು ಕುಂಬಳದ ಗಿಡದ ದಪ್ಪ ಟಿಸಿಲನ್ನು ಜೇನು ಹಾಗೂ ತುಪ್ಪದಿಂದ ಲೇಪಿಸಿ ಹುಲ್ಲಿನ ಹಗ್ಗದಿಂದ ಚೆನ್ನಾಗಿ ಬಿಗಿದು ಮೇಲಿನಿಂದ ಸಗಣಿಯನ್ನು ದಪ್ಪಗೆ ಮುಚ್ಚಿದರೆ ಅವೆರಡೂ ಒಂದಾಗುತ್ತವೆ. ಆ ನಂತರ ಅದರ ಕಾಂಡವನ್ನು ಬೇರು ಹಾಗೂ ತುದಿಯ ಕ್ರಮದಿಂದ ಕತ್ತರಿಸಿದರೆ ತ್ರಪುಸಾ (ಸವತೆ) ಬೂದುಗುಂಬಳಕಾಯಿಯ ಗಾತ್ರದ ಫಲವನ್ನೂ ಕೊಡುತ್ತದೆ.

೨೮೯. ಉತ್ಪಲದ ಬೀಜವನ್ನು ಎಮ್ಮೆಯ ಮೂತ್ರ ಹಾಗೂ ಒಣ ಸಗಣಿಯ ಮಿಶ್ರಣದಲ್ಲಿ ೭ ದಿನಗಳವರೆಗೆ ಚೆನ್ನಾಗಿ ತಿಕ್ಕಬೇಕು. ಅದನ್ನು ಒಳ್ಳೆಯ ಮಣ್ಣಿನಲ್ಲಿ ನಾಟಿ ಮಾಡಿದ ಅನಂತರ ತೆಂಗಿನಕಾಯಿ ನೀರಿನಿಂದ ಪೋಷಿಸಬೇಕು. ಆಗ ಅದು ಕರವೀರದ ರೂಪದಲ್ಲಿ ಮೇಲೇಳುವುದು.

೨೯೦. ಉತ್ಪಲದ ಬೀಜವನ್ನು ಹೆಬ್ಬಾವಿನ ಚರ್ಮದಿಂದ ಸುತ್ತಿ ಕೊಳೆತ ಕಮಲದ ಬೀಜದಿಂದ ದುರ್ಗಂಧಯುಕ್ತವಾದ ಕೆಸರಿನ ಭೂಮಿಯಲ್ಲಿ ಹುಗಿದರೆ ಮತ್ತು ಮಾಂಸದ ನೀರಿನಿಂದ ಪೋಷಿಸಿದರೆ ಪದ್ಮದ ಅಡವಿಯೇ ನಿರ್ಮಾಣವಾಗುವುದು.

೨೯೧-೨೧೨. ಶ್ಲೇಷ್ಮಾತಕದ ಬೀಜವನ್ನು ಹೊರತೆಗೆದು ಅಂಕೋಲದ ಎಣ್ಣೆಯಲ್ಲಿ ೭ ಬಾರಿ ಉಪಚರಿಸಬೇಕು. ಆನಂತರ ಎಮ್ಮೆಯ ಸಗಣಿಯನ್ನು ಅದಕ್ಕೆ ಚೆನ್ನಾಗಿ ತಿಕ್ಕಿ ನೆರಳಿನಲ್ಲಿ ಒಣಗಿಸಬೇಕು. ಈ ಬೀಜವನ್ನು ಎಮ್ಮೆಯ ಒಣ ಸೆಗಣಿಗೊಬ್ಬರ ಹಾಗೂ ಮಣ್ಣು ಸೇರಿಸಿ ಅದರಲ್ಲಿ ನೆಡಬೇಕು ಮತ್ತು ತೆಂಗಿನ ನೀರಿನಿಂದ ಅದನ್ನು ಚೆನ್ನಾಗಿ ಪೋಷಿಸಬೇಕು. ಆಗ ಅದು ಕುಮುದದ ಸಸ್ಯವಾಗಿ ಪರಿವರ್ತಿತವಾಗುವುದು. ಇದರಲ್ಲಿ ಆಶ್ಚರ್ಯವೇನಿಲ್ಲ.

ವಿಹಾರೋದ್ಯಾನ

೨೯೫. ಆ ಉದ್ಯಾನವನದಲ್ಲಿ ಯಾವುದೇ ಜಲಚರಗಳ ವಾಸವಿಲ್ಲದ ಒಂದು ಉದ್ದವಾದ ಸರೋವರವನ್ನು ನಿರ್ಮಿಸಬೇಕಲ್ಲದೆ, ಅದರಲ್ಲಿ ನೌಕೆಗಳಲ್ಲಿ ವಿಹರಿಸುವಂತಾಗಬೇಕು. ಅದರ ನಾಲ್ಕೂ ಕಡೆ ಹೂ ಗಿಡಗಳಿರಬೇಕು. ಕೆಲವೆಡೆ ಅರಳಿದ ಕಮಲದ ಎಲೆಗಳು ಹಚ್ಚ ಹಸಿರಿನಿಂದ ಕೂಡಿದ್ದರೆ, ಮತ್ತೆ ಕೆಲವೆಡೆ ನೀಲೋತ್ಪಗಳು ಸುಂದರಿಯರಾದ ಸ್ತ್ರೀಯರ ಕಣ್ಣುಗಳ ಕಪ್ಪು ಗೊಂಬೆಯಂತೆ ಕಾಣಬೇಕು.

೨೯೭. ಉದ್ಯಾನದಲ್ಲಿ ಅಲ್ಲಲ್ಲಿ ಸ್ಫಲಿತ ಶುಭ್ರವಾದ ಬಿಳಿ ಬಣ್ಣದ ಮಂಟಪಗಳನ್ನು ಕಟ್ಟಿ ಅದರ ಬಳಿ ಬಾಳೆಯ ಗಿಡಗಳನ್ನು ನೆಟ್ಟು ಸಜ್ಜುಗೊಳಿಸಬೇಕು. ಅಲ್ಲಿ ಸುಗಂಧಿತ ವಾತಾವರಣ ಇರಬೇಕು. ಇಂಥ ಮಂಟಪಗಳ ಮಧ್ಯಭಾಗದಲ್ಲಿ ಬಾಳೆಯ ಮರದಿಂದ ಕೂಡಿದ, ಹಿಮಾಲಯ ಪರ್ವತದಂತೆ ಬಿಳಿಯಾದ ಶುಭ್ರ ಹಾಗೂ ಹವಾದಾರ್ ಹಾಗೂ ಸುಗಂಧಿತ ಹೂಗಳ ಹೊರೆಯೇರಿಕೊಂಡ ಮರಗಳು ಸುತ್ತುವರಿದ ಭವನವನ್ನು ನಿರ್ಮಿಸಬೇಕು.

ಬಾವಿ ತೋಡಿಸಲು ಅಂತರ್ಜಲ ಸೂಚಿತವಾದ ಪ್ರಾಕೃತಿಕ ಚಿಹ್ನೆಗಳು

೩೦೧. ಪಾತಾಳ ಲೋಕದಿಂದ ನೀರಿನ ಹರಿವು ಮೇಲ್ಮುಖವಾಗಿ ಚಿಮ್ಮುತ್ತಿರುತ್ತದೆ ಮತ್ತು ಭೂಮಿಯ ಕೆಳಗಡೆ ಎಲ್ಲ ಭಾಗದಲ್ಲಿ ಅದು ಹರಡಿರುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ಬಾವಿ ತೆಗೆಸುವ ಯೋಜನೆ ಹಾಕಬೇಕು

೩೦೨. ನೀರಿಲ್ಲದ ಪ್ರದೇಶದಲ್ಲಿ ಮೂರು ಮೊಳ ಅಂತರದಲ್ಲಿ ಬೆತ್ತ ಬೆಳೆದಿದ್ದರೆ ಜಲ ಪ್ರವಾಹವು ಅದರ ಪಶ್ಚಿಮ ದಿಕ್ಕಿನಲ್ಲಿ ಒಂದೂವರೆ ಆಳು ತಗ್ಗಿನಲ್ಲಿ ದೊರೆಯುತ್ತದೆ. ಅದು ಪಶ್ಚಿಮದ ಪ್ರವಾಹ.

೩೦೩. ಒಂದೂವರೆ ಅಡಿ ಆಳ ತಗ್ಗು ತೋಡಿದ ಮೇಲೆ ಬಿಳಿಯ ಬಣ್ಣದ ಕಪ್ಪೆ ಮತ್ತು ಹಳದಿಯ ಬಣ್ಣದ ಮಣ್ಣು ಕಂಡರೆ ಅದರ ಕೆಳಗೆ ಕಲ್ಲಿನ ಒಂದು ಪದರವಿದ್ದು, ಅದಕ್ಕೂ ಕೆಳಗೆ ಅಗೆದರೆ ಸಾಕಷ್ಟು ಪ್ರಮಾಣದಲ್ಲಿ ನೀರು ದೊರೆಯುವುದು.

೩೦೫. ನೆಲವನ್ನು ಅರ್ಧ ಆಳು ತಗ್ಗು ತೆಗೆದಾಗ, ಅಲ್ಲಿ ಮೀನಿನ ಚಿಹ್ನೆಗಳು ಕಂಡುಬಂದರೆ, ಪಾರಿವಾಳದ ಬಣ್ಣದ ಕಲ್ಲು ಕಾಣಿಸಿದರೆ, ಅಲ್ಲಿ ಬಹುಕಾಲ ಬಳಸಿದರೂ ಮುಗಿಯಲಾರದಷ್ಟು ಪ್ರಮಾಣದ ನೀರು ದೊರಕುವುದು.

೩೦೬. ನೀರ್ಗುಂಡಿ ಮರವನ್ನು ಇರುವೆಯ ಹುತ್ತವು ಸುತ್ತುಗಟ್ಟಿದ್ದರೆ, ಅದರ ದಕ್ಷಿಣದಲ್ಲಿ ೩ ಮೊಳ ದೂರದಲ್ಲಿ ಸುಮಾರು ೧೨ ಅಡಿ ಆಳದಲ್ಲಿ ಸಿಹಿಯಾದ ನೀರು ಸದಾ ದೊರೆಯುತ್ತದೆ.

೩೦೭. ಅರ್ಧ ಆಳು ತಗ್ಗು ತೋಡಿದಾಗ ರೋಹಿತ ಮೀನು ಕಾಣಿಸಿದರೆ, ಮಣ್ಣು ಸಂಪಿಗೆ ಬಣ್ಣದಾಗಿದ್ದರೆ, ಆ ನಂತರ ಹರಳು ಹಾಗೂ ಉಸಕು ಕಾಣಿಸಿಕೊಂಡರೆ ಅವರ ಆನಂತರ ನೀರು ದೊರೆಯುತ್ತದೆ.

೩೦೮. ಬದರಿ ಮರದ ಪೂರ್ವ ದಿಕ್ಕಿನಲ್ಲಿ ಇರುವೆಯ ಹುತ್ತವಿದ್ದರೆ, ಅದರ ಪಶ್ಚಿಮದಲ್ಲಿ ೩ ಆಳಿನಷ್ಟು ತಗ್ಗಿನಲ್ಲಿ ನೀರು ಇರುತ್ತದೆ. ಅರ್ಧ ಆಳು ತೋಡುತ್ತಲೇ ಮೂಗಿಲಿಯಂತಹ ಪ್ರಾಣಿ ಕಾಣುತ್ತದೆ.

೩೦೯. ಬದರಿ ಮರದ ಒಂದು ಕಡೆ ಪಲಾಶ ವೃಕ್ಷವಿದ್ದರೆ, ಅದರ ಪಶ್ಚಿಮದಲ್ಲಿ ಸುಮಾರು ೧೮ ಅಡಿ ಆಳದಲ್ಲಿ ನೀರು ಹೊರಡುವುದು. ಮತ್ತೊಂದು ಆಳು ತಗ್ಗು ತೆಗೆದರೆ ಅಲ್ಲಿ ಆಮೆ ಕಾಣುವುದು.

೩೧೦. ಕಾಷ್ಠ ಹಾಗೂ ಔದುಂಬರ ವೃಕ್ಷದ ಸಮೀಪದಲ್ಲಿ ಇರುವೆಯ ಹುತ್ತವಿದ್ದರೆ, ನೀರಿನ ಪ್ರವಾಹ ಪಶ್ಚಿಮ ದಿಕ್ಕಿನತ್ತ ಹರಿಯುತ್ತದೆ. ಅಲ್ಲಿ ಸುಮಾರು ೨೦ ಅಡಿ ಆಳ ತೋಡಿದರೆ ನೀರಿನ ಪ್ರವಾಹ ದೊರೆಯುತ್ತದೆ.

೩೧೧. ಅಲ್ಲಿ ಬಿಳಿ ಮಿಶ್ರಿತ ಹಳದಿ ಮಣ್ಣು ಇರುತ್ತದೆ. ಬಂಡೆಗಲ್ಲು ಹಾಲು ಬಣ್ಣದಿದ್ದು, ಮತ್ತೆ ಅರ್ಧ ಆಳು ತೋಡಿದ ಮೇಲೆ ಕಮಲದ ಹಾಗಿನ ಬಿಳಿಯ ಬಣ್ಣದ ಇಲಿ ಕಾಣಿಸುತ್ತದೆ.

೩೧೨. ವಿಭಿತಕ ಮರದ ದಕ್ಷಿಣದಲ್ಲಿ ಇರುವೆಯ ಹುತ್ತ ಕಾಣಿಸಿದರೆ, ಅದರ ಪೂರ್ವ ದಿಕ್ಕಿಗೆ ನೀರಿನ ಹರಿವು ಇರುತ್ತದೆ. ಹಾಗೂ ಪೂರ್ವದಿಕ್ಕಿನಲ್ಲಿ ಒಂದೂವರೆ ಆಳಿನಷ್ಟು ತೋಡಿದರೆ ನೀರಿನ ಪ್ರವಾಹ ದೊರೆಯುವುದು.

೩೧೩. ಇರುವೆಯ ಹುತ್ತವು ಪಶ್ಚಿಮ ದಿಕ್ಕಿನಲ್ಲಿ ೧ ಮೊಳ ಅಂತರದಲ್ಲಿ ಇದ್ದರೆ, ಸುಮಾರು ನಾಲ್ಕುವರೆ ಆಳು ಆಳದಲ್ಲಿ ನೀರು ದೊರೆಯುತ್ತದೆ.

೩೧೪. ಸುಮಾರು ೧ ಆಳುದ್ದ ತೋಡಿದ ಮೇಲೆ ಬಿಳಿಯ ಚೇಳು ಕಾಣಿಸಿಕೊಂಡರೆ, ಅದರ ಆನಂತರ ಕೇಸರಿ ಬಣ್ಣದ ಕಲ್ಲುಬಂಡೆ ಕಾಣುತ್ತದೆ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಜಲಪ್ರವಾಹ ಸಿಗುತ್ತದೆ. ಆದರೆ ಎರಡು ವರ್ಷದಲ್ಲಿಯೇ ಅದು ಮುಗಿದು ಹೋಗುತ್ತದೆ.

೩೧೬. ಒಂದು ಆಳುದ್ದ ತಗ್ಗು ತೋಡಿದಾಗ ಕಮಲದ ಹೂವಿನ ಒಳ ಭಾಗದ ಗುಲಾಬಿ ರಂಗನ್ನು ಹೋಲುವ, ಸರ್ಪ ಕಂಡು ಬಂದರೆ, ಕೆಂಪು ಮಣ್ಣು ಹಾಗೂ ಕೆಂಪು ಬಂಡೆಯೊಂದಿಗೆ ನೀರಿನ ಚಿಹ್ನೆ ಕಾಣುತ್ತದೆ.

೩೧೭. ಅನೇಕ ಮರಗಳ ನಡುವೆ ಕಪ್ಪೆಯೇನಾದರೂ ಕಂಡುಬಂದರೆ, ಅದರ ಕೆಳಗೆ ನಾಲ್ಕೂವರೆ ಆಳು ತಗ್ಗಿನಲ್ಲಿ ಒಂದು ಮೊಳದ ದೂರದಲ್ಲಿ ನೀರು ದೊರೆಯುತ್ತದೆ.

೩೧೮. ಮುಂಜ ಹುಲ್ಲು ಅಥವಾ ಕಾಶ-ಕುಶ ಹುಲ್ಲಿನ ಭೂಮಿಯಲ್ಲಿ ನೆಲ ಹರಳು ಮಣ್ಣು ನೀಲಿ ಬಣ್ಣದ್ದು ಆಗಿದ್ದರೆ ಅಲ್ಲಿ ಸಾಕಷ್ಟು ನೀರು ಇರುವುದು, ಸಿಹಿಯಾಗಿಯೂ ಇರುವುದು. ಮಣ್ಣು ಕಪ್ಪು ಅಥವಾ ಕೆಂಪು ಇದ್ದರೂ ಸಿಹಿಯಾದ ನೀರು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ.

೩೧೯. ಕೆಂಪು ಬಣ್ಣದ ಹರಳು ಮಣ್ಣು ನೀರನ್ನು ಕಟುವಾದ ರುಚಿಯದನ್ನಾಗಿ ಮಾಡುತ್ತದೆ. ಸಂಪಿಗೆ ಬಣ್ಣದ ಭೂಮಿಯು ನೀರನ್ನು ಕಾಸ್ಟಿಕ್ ಮಾಡುತ್ತದೆ., ಬಿಳಿ ಬಣ್ಣದ ಮಣ್ಣು ನೀರನ್ನು ಉಪ್ಪು ಮಾಡುತ್ತದೆ, ನೀಲಿ ಬಣ್ಣದ ಮಣ್ಣು ನೀರನ್ನು ಸಹಿ ಮಾಡುತ್ತದೆ.

ಬೆಳೆ ಹಾಗೂ ಪಶು ಸಂಗೋಪನೆಗೆ ಸಂಕೇತ ನೀಡುವ ಗಿಡಗಳು:

೩೨೦. ನ್ಯಗ್ರೋಧ ಮರವಿದ್ದರೆ ಅಲ್ಲಿ ಗೋಧಿ ಚೆನ್ನಾಗಿ ಬೆಳೆಯುತ್ತದೆ. ತಿಂದುಕ ವೃಕ್ಷವಿದ್ದರೆ ಅಲ್ಲಿ ಷಷ್ಟಿಕ (೬೦ ದಿನಗಳಲ್ಲಿ ಮಾಗುವ ಭತ್ತದ ತಳಿ) ವನ್ನು ಬೆಳೆಯಲು ಅನುಕೂಲ, ಅಶ್ವತ್ಥ ವೃಕ್ಷವಿದ್ದರೆ ಎಲ್ಲ ಬಗೆಯ ಬೆಳೆಗಳಿಗೂ ಉತ್ಪಾದನೆಗೂ ಯೋಗ್ಯವಾಗಿರುತ್ತದೆ.

೩೨೧. ಜಂಬೂ ವೃಕ್ಷವು ಬೆಳೆದಿದ್ದರೆ ಅಲ್ಲಿ ಉದ್ದು ಹಾಗೂ ಎಳ್ಳು ಬೆಳೆಯಲು ಅನುಕೂಲ, ಶಿರೀಷ, ವೃಕ್ಷವಿದ್ದ ಭೂಮಿ ಹೆಸರು ಬೆಳೆಗೆ, ಮಧೂಕ ವೃಕ್ಷವಿದ್ದರೆ ಗೋಧಿಗೆ, ಸಪ್ತ ಪರ್ಣ ವೃಕ್ಷವಿದ್ದ ಭೂಮಿಯು ಬಾರ್ಲಿ ಬೆಳೆಯಲು ಅನುಕೂಲಕರ.

೩೨೨. ಹಸ್ತಿಕರ್ಣ ವೃಕ್ಷಗಳು ಅಧಿಕವಾಗಿದ್ದರೆ ಅಲ್ಲಿ ಆನೆಗಳು ಇರುವ ಸಾಧ್ಯತೆ ಇದೆ. 'ಅಶ್ವಕರ್ಣ ವೃಕ್ಷಗಳು (ಎಲೆಯ ಆಕಾರದ ಮೇಲೆ ಹೆಸರು) ಬಹಳವಾಗಿ ಇದ್ದರೆ ಅಲ್ಲಿ ಕುದುರೆಗಳು ಇರುವ ಸಾಧ್ಯತೆ ಹೆಚ್ಚು. ಪಾಟಲ ವೃಕ್ಷಗಳು

ದಟ್ಟವಾಗಿದ್ದರೆ ಹಸುಗಳು ಇರುವ ಸೂಚನೆ, ಬಾಳೆಯ ಮರಗಳು ದಟ್ಟವಾಗಿದ್ದರೆ ಅಲ್ಲಿ ಕುರಿಗಳು ಇರುವ ಸಾಧ್ಯತೆ ಹೆಚ್ಚು

೩೨೩. ಮಾವಿನ ಮರಗಳು ಸಂತೋಷ ಸೂಚಕ. ಭಲ್ಲಾತಕ ವೃಕ್ಷಗಳು ಭಯವನ್ನುಂಟು ಮಾಡುತ್ತವೆ. ಖರ್ಜೂರ ವೃಕ್ಷಗಳು ಆರೋಗ್ಯ ಸೂಚಕ, ಖದಿರ ಹಾಗೂ ಶಮೀ ವೃಕ್ಷಗಳಿಂದ ಅಕಾಲದಲ್ಲಿ ಮಳೆಯಾಗುವ ಲಕ್ಷಣ. ಅರ್ಜುನ ವೃಕ್ಷಗಳಿದ್ದಲ್ಲಿ ಸಂತೋಷದಾಯಕ ಮಳೆಯಾಗುವ ಸೂಚನೆಗಳು.

೩೨೪. ಪಿಚುಮುಂಡ ಹಾಗೂ ನಾಗಗಳು ಅರಳಿದರೆ ಅಕಾಲ ವರ್ಷವನ್ನು ದೂರ ಮಾಡುತ್ತವೆ. ಕಪಿತ್ಥದಿಂದ ಹಸಿವಿನ ಆಕ್ರಂದನ ಸೂಚಿತವಾಗುತ್ತದೆ. ನಿಚುಲ ವೃಕ್ಷ ಬರಗಾಲ ಸೂಚಕ ಅಥವಾ ಮಹಾಮಾರಿ ರೋಗದ ಸೂಚಕ.

ಪ್ರಾಚೀನ ಕಾಲದ ಬಹಳಷ್ಟು ಮರಗಿಡಗಳ ಹೆಸರುಗಳು ಕಾಲ ಕ್ರಮೇಣ ರೂಪಾಂತರಗೊಂಡಿವೆ. ಹೀಗಾಗಿ ಅಂದಿನ ಮರ ಗಿಡಗಳಿಗೆ ಇಂದಿನ ಅರ್ಥಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಅರ್ಜುನ	=	ಮತ್ತಿಮರ (ಇದರಲ್ಲಿ ಹೊಳೆಮತ್ತಿ, ಬಿಳಿಮತ್ತಿ, ಕರಿಮತ್ತಿ – ೩ ವಿಧದ ಮರಗಳು) ಈ ಮರದ ತೊಗಟೆಯನ್ನು ಪುಡಿ ಮಾಡಿ (ಅರ್ಜು ಕ್ವಾತ) ಕುದಿಸಿ ರಕ್ತದೊತ್ತಡ ಸಾಮಾನ್ಯ ಮಟ್ಟಕ್ಕೆ ತರಲು ಬಳಸಲಾಗುತ್ತದೆ.)
ಅಂಕೋಲ	=	ಅಂಕೋಲ
ಅರ್ಕ	=	ಎಕ್ಕದ ಗಿಡ
ಅಶ್ಮಷ	=	ಹಾವಸೆ
ಅತಿ ಮುಕ್ತಾ	=	ಒಂದು ಜಾತಿಯ ಮಲ್ಲಿಗೆ ಬಳ್ಳಿ, ಮಾಧವಿಲತೆ
ಆಮಲಕ	=	ನೆಲ್ಲಿಕಾಯಿ
ಅಸಿತ	=	ಕಡುನೀಲಿ / ಕಪ್ಪು
ಅಶ್ವಕರ್ಣ	=	ಇಸಬಗೋಲು ಬೀಜ
ಆರ್ದ್ರ	=	ಹಸಿ ಶುಂಠಿ
ಆಲಂಬು	=	ಕುಂಬಳ
ಉರ್ವರು	=	ಸೌತೆ
ಉಷಣ	=	ಕರಿಮೆಣಸು
ಏಲಾ	=	ಏಲಕ್ಕಿ
ಏರಂಡ	=	ಔಡಲ / ಹರಳು ಗಿಡ

ಔದುಂಬರ	=	ಅತ್ತಿ ಮರ
ಕ್ಷೀರಣಿ	=	ಹಾಲಿನಂತಹ ದ್ರವ ಸೂಸುವ ಯಾವುದೇ ಬಗೆಯ ಮರ
ಕುಂಭಕಾರಿ	=	ದೊಡ್ಡ ಆಲದ ಮರ
ಕದಳಿ	=	ಬಾಳೆ
ಕಪಿತ್ಥ	=	ಬೇಲದ ಮರ
ಕರಂಜಿ	=	ಹೊಂಗೆ
ಕಾಂಚನಾರ	=	ನಾಗಸಂಪಿಗೆ
ಕರವೀರ	=	ಕಣಗಿಲೆ
ಕತಕ	=	ಬಿಲ್ಲದ ಮರ
ಕಷ	=	ತಾರೆ ಮರ
ಕರ್ಕಂಧ	=	ಬೋರೆ
ಕದಂಬ	=	ಕದಂಬ ವೃಕ್ಷ
ಕಾಶೀಶ	=	ನುಗ್ಗೇಕಾಯಿ
ಕೇತಕಿ	=	ಕೇದಗೆ, ತಾಳೆ ಗಿಡ
ಕುರುಂಟ	=	ಗೋರಂಟಿ
ಕುಲತ್ಥ	=	ಹುರಳಿ
ಕೂಷ್ಮಾಂಡ	=	ಬೂದುಗುಂಬಳ
ಕಿಂಶುಕ	=	ಮುತ್ತುಗ
ಕಲಾಯ	=	ಬಟಾಣಿ
ಕೋಷಾತಕ	=	ಕುಂಬಳ / ಸೋರೆ
ಕುಶ	=	ದರ್ಭೆ / ಹುಲ್ಲು
ಖದಿರ	=	ಕಗ್ಗಲಿ / ಕಾಚಿಮರ
ಜಂಬೀರ	=	ನಿಂಬೆ
ಜಂಬೂ	=	ನೇರಳೆ
ತಾಂಬೂಲಿ	=	ವೀಳ್ಯದೆಲೆ
ತಾಲ	=	ತಾಳೆಮರ
ತಿಲಕ	=	ಹೂಬಿಡುವ ಮರ

ತಮಾಲ	=	ದಾಲ್ಚಿನ್ನಿ
ತ್ರಪುಸ	=	ಸೌತೆಕಾಯಿ
ಧಾತಕಿ	=	ಮರಾಠಿ ಮೊಗ್ಗು
ಧಾತ್ರಿ	=	ನೆಲ್ಲಿ
ದಾಡಿಮ	=	ದಾಳಿಂಬೆ
ಧಾನ್ಯಕ	=	ಕೊತ್ತಂಬರಿ ಸೊಪ್ಪು/ ಕೊತ್ತಂಬರಿ ಬೀಜ
ಧವ	=	ದಿಂಡಿಗದ ಮರ
ನ್ಯಗ್ರೋಧ	=	ಆಲದ ಮರ
ನಾಗ ಜಿಹ್ವಾ	=	ಕೆಂಪು ಪಾಷಾಣ
ನಿಚುಲ	=	ಅಬಸೆಗಿಡ
ನೀಲ	=	ನೀಲ
ನಟ	=	ಆನೆ ಮುಂಗು
ನಾರಿಕೇಳ	=	ಎಳನೀರು (ತೆಂಗು)
ನೀಲೋತ್ಪಲಾ	=	ನೀಲಿ ತಾವರೆ
ನೀರ್ಗುಂಡಿ	=	ಲಕ್ಕಿಗಿಡ
ಪನಸ	=	ಹಲಸು
ಪ್ಲಕ್ಷ	=	ಅತ್ತಿಮರ
ಪಿಪ್ಪಲ	=	ಹಿಪ್ಪಲಿ
ಪಟೋಲ	=	ಪಾದರಿಮರ
ಪಣಿಜ್ವರ	=	ಬಿಳಿ ಮರುಗ
ಫಲಿನಿ	=	ಆರ್ದಿ ಮರ (ಪೊದರು)
ಪಾರಾವತ	=	ಹಾಲವಾಣ
ಪದ್ಮಾವತ	=	ನೆಲದಾವರೆ
ಪಾಟಲ	=	ಪಾದರಿ/ ಬಿಳಿಸೂಲಿಮರ
ಪಿಚುಮುಂಡ	=	ಬೇವು
ಪಲಾಸಿನಿ	=	ಮುತ್ತುಗ
ಬೀಜಪೂರಕ	=	ನಿಂಬೆ/ ದೊಡ್ಡೀಳೆ/ ಮಾದಲ
ಬಿಲ್ವ	=	ಬಿಲ್ವಪತ್ರೆ ಮರ

ಬದರಿ	=	ಬೋರೆ/ ಬೊಗರಿ
ಬಕುಲ	=	ಪಗಡೆ ಮರ
ಬೃಹತಿ	=	ಗುಳ್ಳಬದನೆ
ಭಲ್ಲಾತಕ	=	ಗೇರು / ಕರಿಗೇರು
ಬ್ರಹತಿ	=	ಕಾಡು ಸುಂಡೆ / ಸುಂಡೆ
ಮರುವಕ	=	ಮರುಗ
ಮೂಲಕ	=	ಮೂಲಂಗಿ
ಮಾತುಲಂಗಿ	=	ಮಾದಳದ ಮರ
ಮಧುಕ ವೃಕ್ಷ	=	ಇಪ್ಪೆ ಮರ/ ಚಿಣ್ಣೇಗಿಡ
ಮುಸ್ತಾದ	=	ಕೊನ್ನಾರಿ ಗಡ್ಡೆ
ಮಾಕಂದ	=	ಮಾವಿನ ಮರ
ಮಾಧವಿ	=	ಬಿಳಿಯ ಬಣ್ಣದ ಸುವಾಸನೆಯ ಹೂಬಿಡುವ ಬಳ್ಳಿಗಿಡ
ಮುರಾ	=	ಒಂದು ಬಗೆಯ ಸಸ್ಯ ಹಾಗೂ ಅದರ ಗಂಧ ದ್ರವ್ಯ
ಯಷ್ಟಿಮಧು	=	ಜೇಷ್ಠಮಧು
ಯವ	=	ಬಿದಿರು/ ಬಾರ್ಲಿ
ರಸೋನ	=	ಬೆಳ್ಳುಳ್ಳಿ
ರಾಜಕೋಶ	=	ಸೌತೆ / ಕಲ್ಲಂಗಡಿ
ರಾಮಠ	=	ಇಂಗು
ಲಕುಚ	=	ಗಜನಿಂಬೆ
ಲೋಧ್ರ	=	ಲೋಧ್ರ
ಲಾಂಗಲಿ	=	ಅಕ್ಕತಂಗಿ ಬಳ್ಳಿ
ವಿಳಂಗ	=	ವಾಯುವಿಳಂಗ
ವಾರ್ತಕ	=	ಬದನೆ
ವಚಾ	=	ಬಜೆ
ವಿಭಿತಕ	=	ತಾರೆ
ವಿರಾರಿ	=	ಮೂರೆಲೆ ಹೊನ್ನೆ
ವೇತಸಾ	=	ಬಿದಿರಿನ ಒಂದು ಜಾತಿ/ ಜೊಂಡು ಹುಲ್ಲು
ಸ್ಯೋನಾಕ	=	ತಿಗಡುಮರ (ಆನೆ ಮುಂಗು)

ಸಿಂಧುವಾರ	=	ಒಂದು ಬಗೆಯ ಮರ / ಅದರ ಹೂವು
ಶ್ರೀಫಲ	=	ಬಿಲ್ವಪತ್ರೆ
ಶತಪತ್ರಿಕಾ	=	ಸೇವಂತಿಗೆ
ಶಿರೀಷ	=	ಬಾಗೆ
ಶ್ಯಾಮಾ	=	ಗುಲಾಬಿಮರ / ಬೀಟೆಮರ
ಶ್ರೀಪರ್ಣಿಕಾ	=	ಶಿವನಿಮರ
ಶಾಲ್ಮಲಿ	=	ಬೂರುಗ
ಶಿಂಶಿಪ	=	ಅಶೋಕವೃಕ್ಷ / ಬಿರಿಡಿಮರ
ಶಮೀ	=	ಬನ್ನೀಮರ
ಶಾಕ	=	ಸಾಗವಾನಿ / ತೇಗ
ಶೇಫಾಲಿಕ	=	ಪಾರಿಜಾತ

– ಹೀಗೆ ಔಷಧ ವಿಶೇಷ ಜ್ಞಾನದ ಸುರಪಾಲನ ಪರಿಪೂರ್ಣ ಯಶಸ್ಸು ಇಡಿಯ ವಿಶ್ವವನ್ನೇ ವ್ಯಾಪಿಸಿದೆ. ಅವನು ತನ್ನ ಅಭಿರುಚಿಯಿಂದ ಮತ್ತು ತನ್ನ ಕ್ಷೇತ್ರದಲ್ಲಿ ಸಂಪಾದಿಸಿದ ನೈಪುಣ್ಯದಿಂದ ಪರಮಶೂರನಾದ ರಾಜ ಭೀಮಪಾಲನ ಆಶ್ರಯದಲ್ಲಿ ವೃಕ್ಷಾಯುರ್ವೇದದ ಈ ಕಾರ್ಯವನ್ನು ಸಂಪಾದನೆ ಮಾಡಿದ್ದಾನೆ.

"ಋಷಿಗಳ ವೈಜ್ಞಾನಿಕ ಕಾರ್ಯಗಳನ್ನು ಅಧ್ಯಯನ ಮಾಡಿದ ಅನಂತರ ಈ ಪುಸ್ತಕದಲ್ಲಿ ಅವುಗಳನ್ನೆಲ್ಲ ಅದೇ ರೀತಿಯಲ್ಲಿ ಯಶಸ್ವಿಯಾಗಿ ಸಂಯೋಜಿಸುವಲ್ಲಿ ನನ್ನ ಬುದ್ಧಿಶಕ್ತಿಯನ್ನು ಬಳಸಿರುವೆನೇ ವಿನಾ ಇದರಲ್ಲಿ ನನ್ನ ಸ್ವಂತದ್ದೇನನ್ನೂ ಸೇರಿಸಿಲ್ಲ. ನಾನು ಅವರದೇ ಅಭಿಪ್ರಾಯಗಳ ಸ್ಪಷ್ಟ ವ್ಯಾಖ್ಯೆಯನ್ನು ಮಾಡಿದ್ದೇನೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಸಜ್ಜನರು ಈ ಕೃತಿಯನ್ನು ಓದಲಿ ಮತ್ತು ಸಹಜವಾಗಿ ದೊರೆಯುವ ಆನಂದವನ್ನು ಪಡೆಯಲಿ."

ಸುರಪಾಲರು ತಮ್ಮ ಗ್ರಂಥದ ಆರಂಭದಲ್ಲೇ ಈ ಮಾತುಗಳನ್ನು ಆಡಿದ್ದಾರೆ. ಈ ಕೃತಿಯನ್ನು ಮುಖ್ಯವಾಗಿ ಇಲ್ಲಿ ಪರಾಮರ್ಶಿಸಲು ಕಾರಣ– ಈ ಕೃತಿ ಬ್ರಿಟೀಷ್ ಲೈಬ್ರರಿಯಲ್ಲಿ ದೊರೆತ ತರುವಾಯ – ಇದೊಂದು ಪ್ರಾಚೀನ ಕಾಲದ ಮೊಟ್ಟ ಮೊದಲ ಕೃಷಿ ಕುರಿತ ಲಿಖಿತ ಕೃತಿ ಎಂಬ ಕಾರಣಕ್ಕೆ ಕೊಂಡಾಡಲ್ಪಡುತ್ತಿದೆ. ಕರ್ನಾಟಕದ 'ಕೃಷಿ ಪ್ರಯೋಗ ಪರಿವಾರ' ಮತ್ತು ವಿದೇಶಿ ಧನಸಹಾಯ ಪಡೆದು ಕೃಷಿ ತರಬೇತಿ ನೀಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು – ಇದೊಂದು ಕೃಷಿ ಕುರಿತ 'ಬೈಬಲ್' ಎಂಬಂತೆ ವ್ಯವಹರಿಸುತ್ತಿವೆ.

"ಪತಂಜಲಿ ಮಹರ್ಷಿ"ಯನ್ನು ಗುರುಗಳ ಗುರು, ಆದಿಗುರು, ಮಹಾಗುರು ಎನ್ನುತ್ತಾರೆ. ಮಾನವ ದೇಹವನ್ನು ಅವರಷ್ಟು ಸೂಕ್ಷ್ಮವಾಗಿ, ವೈಜ್ಞಾನಿಕವಾಗಿ ಆ

ಕಾಲದಲ್ಲೇ ನೋಡಿದವರು. ಅಷ್ಟು ನಿಖರಜ್ಞಾನ ಜಗತ್ತಿನ ಬೇರೆಡೆಯಲ್ಲಿ ಎಲ್ಲಿಯೂ ಇರಲಿಲ್ಲ ಎನ್ನುತ್ತಾರೆ. ಅವರು ರೂಪಿಸಿದ 'ಯೋಗ ಸೂತ್ರ' ಇಂದಿಗೂ ಚಾಲ್ತಿಯಲ್ಲಿದೆ.

ಸುಶೃತ-ಚರಕ ಭಾರತೀಯ ಆಯುರ್ವೇದದ ದರ್ಶನ ನೀಡಿದವರು. ನಿಖರತೆ ಮತ್ತು ವೈಜ್ಞಾನಿಕ ತಿಳುವಳಿಕೆಗೆ ಅವರಲ್ಲಿ ಪ್ರಖರವಾಗಿತ್ತು. ಆ ಕಾರಣವಾಗಿಯೇ ಮೂಲ ಆಯುರ್ವೇದ ಇಂದಿಗೂ ಚಾಲ್ತಿಯಲ್ಲಿದೆ ಮತ್ತು ಅಭಿವೃದ್ಧಿಯೂ ಆಗಿದೆ.

ಸುರಪಾಲರಿಗೂ ಸಾವಿರಾರು ವರ್ಷ ಮುಂಚೆ ಇದ್ದ ಪತಂಜಲಿ, ಚರಕ, ಸುಶೃತರಲ್ಲಿದ್ದ ನಿಖರತೆ, ವಿಜ್ಞಾನ ದೃಷ್ಟಿ, ದೂರಗಾಮಿ ಪರಿಣಾಮ ಸಾವಿರ, ಸಾವಿರ ವರ್ಷಗಳು ಕಳೆದರೂ ಅವುಗಳ ಕುಗ್ಗದ ಮಹತ್ವ . . .ಇವುಗಳನ್ನು ಗಮನಿಸಿದರೆ, ಸುರಪಾಲರ ವೃಕ್ಷಾಯುರ್ವೇದದಲ್ಲಿ ಬಹಳ ಮಟ್ಟಿನ 'ಐಬು'ಗಳೇ ತುಂಬಿ ಹೋಗಿರುವುದು ಗೋಚರಿಸುತ್ತದೆ.

ದೇಹದ ಕಾಯಿಲೆಗಳಿಗೆ ನೀಡುವ ಮದ್ದನ್ನೇ ಸುರಪಾಲರು ವೃಕ್ಷಗಳಿಗೂ ಅನ್ವಯಿಸುತ್ತಾರೆ. ನಮ್ಮ ಹಿಂದಿನ ಜನರಿಗೆ ಬೇಸಾಯದಲ್ಲಿ ಮಾದರಿಯಾಗುವುದು ಮೂಲತ: ಪ್ರಕೃತಿ. ಪ್ರಕೃತಿಯನ್ನರಿಯುತ್ತಲೆ ಬಾಳುತ್ತ, ಪ್ರಕೃತಿಯಿಂದಲೇ ಕಲಿತು, ಪ್ರಕೃತಿಯ ಭಾಗವಾಗಿಯೇ ವ್ಯವಸಾಯವನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಸುರಪಾಲರು ಹೇಳಿರುವುದು ಬೆಳೆಯುವ ಬೆಳೆಗಳಿಗಿಂತ ಹೆಚ್ಚಾಗಿ ಬೆಳೆಯುವ/ ಬೆಳೆಸುವ ಮರಗಳ ಕುರಿತಾಗಿಯೇ ಹೆಚ್ಚು. ಆ ಕಾರಣಕ್ಕಾಗಿಯೇ ಅದು ವೃಕ್ಷಾಯುರ್ವೇದ.

ಆ ವೃಕ್ಷಾಯುರ್ವೇದದ ಯಾವ ಪದ್ಧತಿಯೂ ಇಂದು ಆಚರಣೆಯಲ್ಲಿ ಇಲ್ಲ. ಅದು ಭಾರತದ ದಂಡಕಾರಣ್ಯ ಇರಬಹುದು, ಹಿಮಾಲಯದ ತಪ್ಪಲು ಇರಬಹುದು, ನೀಲಗಿರಿಯ ತೋಡ ಜನಾಂಗದವರಿರಬಹುದು, ಪಶ್ಚಿಮ ಘಟ್ಟದ ಕಾಡುಗಳಲ್ಲಿರುವ ಬುಡಕಟ್ಟು ಜನರಾಗಿರಬಹುದು ಯಾರಲ್ಲಿಯೂ ಇವು ಆಚರಣೆಯಲ್ಲಿ ಇಲ್ಲ.

ಸರುಪಾಲರ ಕೃತಿ ನೋಡಿದರೆ ಮೇಲ್ನೋಟಕ್ಕೆ ಮನು, ಕೌಟಿಲ್ಯಗಳ ಮನಸ್ಥಿತಿ ಎದ್ದು ಕಾಣುತ್ತದೆ. ಮರಗಳಿಗೆ ಅಜೀರ್ಣವಾದರೆ ತ್ರಿಫಲ ಕಷಾಯ! "ಹಣ, ಅದೃಷ್ಟ ಹಾಗೂ ರಾಜನು ಅನುಕೂಲಕರವಾಗಿದ್ದಲ್ಲಿ ಯಾವುದೇ ವೃಕ್ಷವನ್ನು ಎಲ್ಲಿ ಬೇಕಾದರೂ ವಿಶೇಷ ಪರಿಶ್ರಮದಿಂದ ಬೆಳೆಯಬಹುದಾಗಿದೆ" (ಶ್ಲೋಕ-೪೪) ಎಂಬ ಧೋರಣೆ ಇವು ನಿಜಕ್ಕೂ ನಿಸರ್ಗ ವಿರೋಧಿ ಧೋರಣೆಯೇ ಸರಿ.

ಯಜ್ಞ-ಯಾಗಾದಿಗಳು ನಡೆಯುವೆಡೆ, ಪ್ರಾಣಿಬಲಿ ಇರುವೆಡೆ 'ಕುಣಪ' ರಕ್ತ, ಮಾಂಸ, ಮಜ್ಜೆ, ಎಲುಬು, ಇತ್ಯಾದಿಗಳು ಬೇಸಾಯ ಭೂಮಿಗೆ ಬಳಕೆಯಾಗಿರಬಹುದು. ಆದರೆ ನಮ್ಮ ಹಿಂದಿನ ತಲೆಮಾರಿನ ರೈತರು ತಮ್ಮ

ಬೇಸಾಯ ಅಭಿವೃದ್ಧಿಯ ಚರಿತ್ರೆಯಲ್ಲಿ ಸುರಪಾಲ ಮತ್ತು ಅವರ ಕೃತಿಗೆ ಆಧಾರವಾದ ಇತರ ಋಷಿಗಳ 'ವೈಜ್ಞಾನಿಕ ಕಾರ್ಯ'ಗಳನ್ನು ಹೊತ್ತು ತರಲಿಲ್ಲ. 'ಮನು' ಮನಃಸ್ಥಿತಿಯವರು ಇಂದು ಸುರಪಾಲರನ್ನು ಕೊಂಡಾಡಲು ಶುರುಮಾಡಿದ್ದಾರೆ. ಕೊಂಡಾಡಲೇಬೇಕಾದ ಎಷ್ಟೋ ಪ್ರಾಚೀನ ಸಂಗತಿಗಳನ್ನು ಕೊಂಡಾಡದೆ !

ಸುರಪಾಲರ ಈ ಗ್ರಂಥವನ್ನೇ ಆಧಾರವಾಗಿಸಿಕೊಂಡು ಪ್ರಾಚೀನ ಋಷಿಗಳ ಕೃಷಿ ಜ್ಞಾನವನ್ನು ಅಲ್ಲಗಳೆಯಬೇಕಾಗಿಲ್ಲ. ಅಥರ್ವಣ ವೇದಕಾಲದ ಋಷಿಕೃಷಿ ಜ್ಞಾನ ಹೆಚ್ಚು ಪ್ರಾಯೋಗಿಕವಾದ, ಪಂರಪರೆಯಿಂದ ಪರಂಪರೆಗೆ ವಿಸ್ತರಿಸಬೇಕಾದ ಮಹತ್ವದೊಂದಿಗೇ ಅದು ಬೆಳೆದಿದೆ.

ಆ ಮರ ನೆಟ್ಟರೆ ಇಂಥ ಫಲ, ಈ ಮರ ನೆಟ್ಟರೆ ಅಂಥ ಫಲ: ನೆಡದಿದ್ದರೆ – ನರಕ ಎನ್ನುವ ಸುರಪಾಲ, ದೇವರುಗಳ ಸಂತುಷ್ಟಿಗಾಗಿ ಮಾಡಬೇಕಾದುದೆಲ್ಲವುಗಳ ಪಟ್ಟಿ ಮಾಡಿ ಕಸಿವಿಸಿಗೊಳಿಸುತ್ತಾರೆ. ಸುರಪಾಲರ ತರುವಾಯ ೨೦೦ ವರ್ಷಗಳ ನಂತರ ಬರುವ ಅಲ್ಲಮ ಪ್ರಭುಗಳ ಈ ವಚನ ಈ ಸಂದರ್ಭಕ್ಕೆ ಅರ್ಥಪೂರ್ಣವೆನಿಸುತ್ತದೆ.

"ಅಗ್ನಿಯ ಸುಡುವಲ್ಲಿ
ಉದಕವ ತೊಳೆವಲ್ಲಿ
ವಾಯುವ ಮೆಟ್ಟಿ ಆಕಾಶವ ಹಿಡಿವಲ್ಲಿ
ಯೋಗದ ಹೊಲಬ ನೀನೆತ್ತ ಬಲ್ಲೆ?
ಕದಳಿಯ ಬನವ
ನಿನ್ನಲ್ಲಿ ನೀನು ತಿಳಿದು ನೋಡು
ಮದ ಮತ್ಸರ ಬೇಡ
ಹೊದಕುಳಿಗೊಳಬೇಡ
ಗುಹೇಶ್ವರ ಲಿಂಗ ಕಲ್ಪಿತವಲ್ಲ ನಿಲ್ಲೋ!"೧೧

೨.೬. ಶ್ರೀ ಘನ ಮಠ ಶಿವಯೋಗಿಗಳ ಕೃಷಿಜ್ಞಾನ ಪ್ರದೀಪಿಕೆ

ಕರ್ನಾಟಕದ ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು ಸಂತೆಕೆಲ್ಲೂರು: ಆ ಭಾಗದ ರೈತರಿಗೆ ಸುಪರಿಚಿತ. ಅಲ್ಲಿರುವ ಶ್ರೀ ಘನಮಠೇಶ್ವರ ಮಠ, ಕೃಷಿಜ್ಞಾನ ದಾಸೋಹ ಮಾಡುವ ವಿಶೇಷ ಮಠ ಪ್ರತಿವರ್ಷದ ಜಾತ್ರೆಯಲ್ಲಿ, ವಾಡಿಕೆಯಂತೆ ಕೃಷಿಜ್ಞಾನ ಗೋಷ್ಠಿಗಳನ್ನು ಏರ್ಪಡಿಸಿ ಸಹಸ್ರಾರು ಸಂಖ್ಯೆಯಲ್ಲಿ

ಸೇರುವ ಜನರಿಗೆ, ಕೃಷಿ ಸಾಧಕರಿಂದ ಪಾಠ ಹೇಳಿಸಿ; ಕೃಷಿ ತಜ್ಞರು, ಅನುಭವಿಗಳನ್ನು ಸನ್ಮಾನಿಸುತ್ತ – ಹೊಸ ಹೊಸ ಕೃಷಿ ಜ್ಞಾನವನ್ನು ಪ್ರಚುರಪಡಿಸುತ್ತ ಸಾಗಿರುವ ಮಠ.

ಶ್ರೀ ಘನಮಠೇಶ್ವರ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಘನಮಠ ಶಿವಯೋಗಿಗಳು ೧೮೭೬ ರಲ್ಲಿ ತಮ್ಮ ಸಹಚರರಾಗಿದ್ದ ಸಿಂಧಗಿ ತಾಲ್ಲೂಕಿನ ಕುನ್ನಾಳ ಸಿದ್ದರಾಮಪ್ಪ ಅವರಿಂದ ತಮ್ಮ 'ಕೃಷಿಜ್ಞಾನ ಪ್ರದೀಪಿಕೆ'ಯನ್ನು ಹೇಳಿ ಬರೆಯಿಸಿದರು. ಕಾರಣಾಂತರಗಳಿಂದ ಇದು ಆಗ ಪ್ರಕಟವಾಗದೆ ೧೯೧೭ ರಲ್ಲಿ ರಾ.ರಾ.ಪಿ.ಎಂ.ದಾನಯ್ಯ ಬಿಜಾಪುರ ಮಾಸ್ತರ ಜೇಗುಂಟ ಇವರು ಅಚ್ಚು ಮಾಡಿ ಪ್ರಕಟಿಸಿದರು. ವಾಸ್ತವವಾಗಿ ಇದು ೧೫೦ ವರ್ಷಗಳ ಹಿಂದೆ ಚಾಲ್ತಿಯಲ್ಲಿದ್ದ ಕೃಷಿ ಜ್ಞಾನ. ಆ ಕಾಲದ ರೈತರ ಅನಕ್ಷರತೆ, ಮೌಢ್ಯ, ಜಾಣತನ, ಕಷ್ಟ, ನಷ್ಟ, ಬರ ಇತ್ಯಾದಿಗಳೆಲ್ಲವನ್ನು ಶ್ರೀ ಘನ ಮಠ ಶಿವಯೋಗಿಗಳು ತಮ್ಮ ಗಮನದಲ್ಲಿರಿಸಿಕೊಂಡಿದ್ದಾರೆ. ೩೧೨ ಪುಟಗಳಿರುವ ಈ ಪುಸ್ತಕ ಈವರೆಗೆ ೪ ಮುದ್ರಣಗಳನ್ನು ಕಂಡಿದೆ.

ಪ್ರತಿ ಸಾರಿಯೂ ಇದು ದಾನಿಗಳ ಮರ್ಜಿ ಹಿಡಿದೇ ಪ್ರಕಟಗೊಳ್ಳಬೇಕಾಗಿದೆ.

ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ಗಾದೆಗಳು, ಸರ್ವಜ್ಞನ ಮತ್ತು ತೆಲುಗಿನ ಕೆಲವು ಹಿತೋಕ್ತಿಗಳು ಲೋಕ ಕಲ್ಯಾಣಾರ್ಥ ತಮ್ಮ ಕಾಳಜಿಗಳನ್ನು ಸೇರಿಸಿ ರೂಪುಗೊಂಡಿರುವ ಈ ಕೃತಿಯ ಉದ್ದೇಶವನ್ನು ಶ್ರೀ ಘನ ಮಠರು ವಿವರಿಸುವುದು ಹೀಗೆ.

"ಈ ಲೋಕದ ಸಮಸ್ತ ಬುದ್ಧಿಹೀನ ಜನರ ದಾರಿದ್ರ್ಯವನ್ನು ದೂರ ಮಾಡುವುದಕ್ಕಾಗಿಯೂ ಭೂಲೋಕದ ಸಮಸ್ತ ಜನರೆಲ್ಲರಿಗೂ ಘನ ಸಂಪತ್ತನ್ನು ಕೊಡುವುದಕ್ಕಾಗಿಯೂ ಲೋಕೋಪಕಾರವಾದ 'ಕೃಷಿಜ್ಞಾನ ಪ್ರದೀಪಿಕೆ' ಎಂಬ ಗ್ರಂಥ ರಚಿಸಲ್ಪಡುವಂತಾಯಿತು ಮತ್ತು ಈ ಲೋಕದ ಸಮಸ್ತ ಪ್ರಾಣಿಗಳ ರಕ್ಷಣಾರ್ಥಕ್ಕೆ ಅನ್ನೋದಕವೇ ಮುಖ್ಯವಾದ ಕಾರಣ, ಈ ಕಲಿಯುಗದಲ್ಲಿ ಉದ್ಭವಿಸಿದ ಪ್ರಾಣಿಗಳು ಯಾವತ್ತೂ ಅನ್ನಗತ ಪ್ರಾಣಿಗಳಾದುದರಿಂದ ಅನ್ನ ಕಡಿಮೆಯಾದಾಗಲೇ ಆಯುಷ್ಯವು ಕಡಿಮೆಯಾಯಿತೆಂದು ತಿಳಿಯಬೇಕು".

॥ ಸಾಕ್ಷಿ ॥ "ಕೂಳು ಕೂಟವೆ ಕೂಟ !

ಕೂಳು ಮೇಳವೇ ಮೇಳ !

ಕೂಳೊಂದುಗಳಿಗೆ ತಪ್ಪಿದರೆ ಪಾತರದ

ಮೇಳ ಮುರಿದಂತೆ ಸರ್ವಜ್ಞ ॥"೧೨

ಎಂದು ಸರ್ವಜ್ಞ ಮೂರ್ತಿಗಳ ವಾಕ್ಯವುಂಟು ಮತ್ತು ಹಸಿವೆಯ ವೇಳೆಗೆ ಅಶನವು ದೊರೆತರೆ ಭಸಿಕಧಾರಕರಾದ ಸನ್ಯಾಸಿಗಳಾದರೂ ಕುಸುಮಶರನಂತೆ ಸ್ತ್ರೀಲೋಲರಾಗುವರು. ಅಶನವು ವೇಳೆಗೆ ದೊರೆಯಾದಲ್ಲಿ ಕುಸುಮಶರನಾದರೂ ಸನ್ಯಾಸಿಯಂತೆ ಸ್ತ್ರೀವ್ಯಸನವನ್ನು ತೊರೆದು ಗಾಂಭೀರ್ಯಹೀನನಾಗಿ ಅಗೌರವದಿಂದ ಭಿಕ್ಷಕ್ಕೆ ಪೋಗನೆ?

॥ ಸಾಕ್ಷಿ ॥ "ಅನ್ನರಸಂ ಜಾತ ಅತಿವೇಲು ಪುರುಷಲು ।

ಯೇ ಪುರೇಗಿನ ಮದನಡೇ ಚನಂಚು ॥

ಅನ್ನ ಮುಡಿಗಿನಯನಕ । ಅತಡೆಂದು ಬೋಯನೋ ।

ವಿಶ್ವತಾಭಿರಾಮ ವಿನರವೇಮಾ॥"೧೩

ಇದರ ಅನ್ವಯವೇನಂದರೆ, ಅನ್ನರಸದಿಂದ ಸ್ತ್ರೀಪುರುಷರು ಸೊಕ್ಕಿದರೆ ಮನ್ಮಥನ ಕ್ರೀಡೆ ವಿಶೇಷವಾಗುವುದು. ಅನ್ನ ತಪ್ಪಿದ ಬಳಿಕ ಮನ್ಮಥನು ಯಾವ ಕಡೆಗೆ ಹೋದನೋ ಎಂಬ ಅಭಿಪ್ರಾಯವು.

॥ ಸಾಕ್ಷಿ ॥ "ಅನ್ನ ಪರಬ್ರಹ್ಮಮಯ್ಯನ್ಮದನ್ನಂ

ಅನುಚಮೆಮಿನ್ನಂ।"೧೪

ಆತ್ಮಲೋಗನ್ನಂ । – ಎಂಬ ಆಂಧ್ರ ಪಂಡಿತರ ವಚನ ಉಂಟಾಗಿ, ಅನ್ನವು ಆತ್ಮ ತೃಪ್ತಿಯ ಪದಾರ್ಥವಾದ ಕಾರಣ ಸಕಲ ರಸರಸಾಯನ ಪದಾರ್ಥವಾದ ದಿವ್ಯಾನ್ನ, ದೇವಾನ್ನ, ರಾಜಾನ್ನ, ಪರಮಾನ್ನ ಮೊದಲಾದ ಸಮಸ್ತ ಸುಭೋಜನವನ್ನುಂಡು ಪರಿಣಾಮಿಯಾಗಿದ್ದರೆ ಸಕಲ ಚಾತುರ್ಯ ಕಲಾ ಕೌಶಲ್ಯ, ರಾಗರಸ ಹಾಸ್ಯ ವಿನೋದ ವಿಲಾಸಗಳು ಮತ್ತು ಮಂತ್ರಶಾಸ್ತ್ರ, ನೀತಿಸ್ತೋತ್ರ ಪುರಾಣ ಇತಿಹಾಸ ತಾಳ ಮೃದಂಗ ವೀಣಾದಿ ತಿತ್ತಪಗಡೆ, ಚದುರಂಗ, ರಂಜೀಪ ಮೊದಲಾದ ವಿನೋದ ಪ್ರಸಂಗ, ಸ್ತ್ರೀಸಂಗ ಮುಂತಾದ ಆನಂದಕರ ಕಾರ್ಯಗಳೆಲ್ಲ ಜರುಗುತ್ತಿಹವು. ಅನ್ನವು ಕ್ಷಣ ಮಾತ್ರ ತಡೆದರೆ ವಡಬಾಗ್ನಿ ತಾಪದಿಂದ ಕರುಳು ಸುಟ್ಟು, ಕಳೆಗುಂದಿ ಮುಖಬಾಡಿ ಸಕಲ ವಿನೋದಂಗಳೆಲ್ಲ ತಪ್ಪಿ, ಆಯಾಸಗೊಂಡಂತೆ ಅವಯವಾದಿಗಳ ತ್ರಾಣವೆಲ್ಲ ನಿಸ್ಸಾರವಾಗಿ ಸಕಲ ಪ್ರಸಂಗಗಳಲ್ಲಿ ರುಚಿ ತಪ್ಪಿ ಬಿದ್ದಲ್ಲಿ ಬೀಳುವರಲ್ಲದೆ, ಎದ್ದು ತಿರುಗಾಡುವುದಕ್ಕೆ ಆಯಾಸವಾಗುವುದು. ಹತ್ತೆಂಟು ದಿವಸ ಅನ್ನವಿಲ್ಲದಿದ್ದರೆ ನೇತ್ರ ಪ್ರಕಾಶವು ಅಡಗುವುದು. ಮತ್ತು ಮೂವತ್ತು ದಿವಸಕ್ಕೆ ಸರ್ವೇಂದ್ರಿಯಂಗಳು ಕೆಡುವವು. ನಾಲ್ವತ್ತು ದಿವಸಕ್ಕೆ ಪ್ರಾಣ ಹೋಗುವುದು. ಅದು ಕಾರಣ, ಅನ್ನದ ಮಕ್ಕಳು ಅಖಿಳ ಮಂತ್ರ ಶಾಸ್ತ್ರ ಸಂಗೀತ ಸಾಹಿತ್ಯಂಗಳು ಎಂಬುದು ನಿಶ್ಚಯವೆ ಸರಿ.

ಸಕಲ ಪ್ರಾಣಿಗಳೆಲ್ಲರಿಗೂ ಮನುಷ್ಯರುಗಳೆಲ್ಲರಿಗೂ ಶರೀರ ಪೋಷಣೆಗೆ ಅನ್ನಪಾನಾದಿಗಳೇ ಮುಖ್ಯವಲ್ಲದೆ, ಅನ್ನಪಾನಾದಿಗಳು ತಪ್ಪಿದರೆ ನುಣ್ಣನ್ನ ಶರೀರವೆಲ್ಲ ಬಣ್ಣ ಗುಂದುವುದು ಹಾಗೂ ಕಣ್ಣುಗಳು ಒಳನಟ್ಟು ಮೂಗುದ್ದಾಗಿ ಗೋಣು ಹಾಯ್ದು ಬಹುಕಾಲದ ತಪೋವೃದ್ಧರಂತೆ ಅಸ್ತಿಮಯವಾದ ದೇಹವಾದ ಮಾಂಸ, ರಕ್ತ ಮೊದಲಾದವುಗಳು ಕಡಿಮೆಯಾಗುವವು. ಸಪ್ತಧಾತುಗಳು ಕ್ಷೀಣವಾಗುವವು. ವಾಯುಗತಿ ಹೆಚ್ಚಾಗಿ ಸರ್ವೇಂದ್ರಿಯಗಳ ತ್ರಾಣ ತಪ್ಪಿ ಅಚೇತನ ಪ್ರಾಣಿಗಳಾಗುವರು ಮತ್ತು ಅನ್ನಪಾನಾದಿಗಳು ತಪ್ಪಿದ ಕಾಲದಲ್ಲಿ ಸಕಲ ಭೋಗಸಾಧನ ದಿವ್ಯ ಪದಾರ್ಥಗಳೆಲ್ಲ ತಿರಸ್ಕಾರವಾಗಿ ಸದ್ಗುಣ ಸುಬುದ್ಧಿಗಳು ಅಡಗಿ, ಜ್ಞಾನ ಹೀನರಾಗಿ ಲಜ್ಜಾಭಿಮಾನಂಗಳು ನಷ್ಟವಾಗಿ ಗಾಂಭೀರ್ಯಾದಿ, ಗೌರತ್ವಗೆಟ್ಟು, ದಶಾವಸ್ಥೆಗೆ ಬಂದು ಪ್ರಾಣ ತ್ಯಾಗವಾಗುವುದು. . . .

ಪ್ರಾಜ್ಞರಾದ ಶಾಸ್ತ್ರಜ್ಞರೆಲ್ಲರೂ ಈ ಲೋಕೋಪಕಾರಶಾಸ್ತ್ರವಾದ 'ಕೃಷಿ ಜ್ಞಾನ ಪ್ರದೀಪಿಕೆ' ಎಂಬ ಗ್ರಂಥವ ನೋಡಿ, ಇದು ಕನ್ನಡ ವಾಚ್ಯರೂಪವಾದುದರಿಂದ, ಇದೇನು ಸಂಸ್ಕೃತವಾದುದಲ್ಲ ಮತ್ತು ಪದ ಪಠ್ಯ ಪ್ರಬಂಧವಲ್ಲ; ಇದೇತರ ಕವಿತೆ ಎಂದು ತಾತ್ಸಾರ ಮಾಡುವರು ಮಾಡಿದರೂ ಮಾಡಲಿ, ಅದು ವಿದ್ಯಾಮದದ ಗುಣವು. ಅದಂತಿರಲಿ, ಸಕಲ ಶಾಸ್ತ್ರಂಗಳೆಲ್ಲ ಮಾತಿನ ಮಕ್ಕಳಾದ ಕಾರಣ ಕನ್ನಡವಾದರೇನು? ಸಂಸ್ಕೃತವಾದರೇನು? ಆಂಧ್ರ, ಫರ್ಸಿ, ಇಂಗ್ಲೀಷ್ ಭಾಷೆಯಾದರೇನು? ಭಾಷಾ ಬೇಧವಲ್ಲದೆ ಸಾರವೆಲ್ಲ ಒಂದೇ ಇರ್ಪುದು, ಅದು ಕಾರಣ ಬಲ್ಲವರು ಈ ಶಾಸ್ತ್ರವನುಪೇಕ್ಷಿಸದೆ, ಈ ಗ್ರಂಥರಚನಾಕರ್ತೃಗಳನ್ನು ತಿರಸ್ಕರಿಸುತ್ತಾದರೂ ಚೆನ್ನಾಗಿ ಓದಿ ನೋಡಿ, ಇದರ ಅಭಿಪ್ರಾಯವನ್ನು ತಿಳಿದು, ಕುಶಲಮತಿಗಳಾಗಿ ಅದರಂತೆ ಪ್ರಯತ್ನಮಾಡಿ, ಭೋಗ ಮೋಕ್ಷಂಗಳನ್ನು ಪಡೆಯತಕ್ಕದ್ದೆಂದು ಪ್ರಾರ್ಥಿಸುವೆನು.

ಸರ್ವಶಾಸ್ತ್ರಸಾರಜ್ಞರಾದ ಪ್ರೌಢರಿಗೆ ಹಾಗೂ ವಾಣಿಜ್ಯಾದಿ ಸಕಲ ವ್ಯವಹಾರ ಚಾತುರ್ಯರಿಗೆ ಕೃಷಿ ಎಂಬುದು ಅಲಕ್ಷವಾದ ಕಾರಣ, ಈ ಕೃಷಿ ಜ್ಞಾನ ಪ್ರದೀಪಿಕೆ ಎಂದರೆ ಅವರೆಲ್ಲರೂ ಇದರ ಸಾರವನ್ನರಿಯದೆ ದೂಷಿಸಿ ಉಪೇಕ್ಷೆ ಮಾಡತಕ್ಕವರೇ ಸರಿ. ಆದಾಗ್ಯೂ ಸಮಸ್ತ ವ್ಯಾಪಾರಿಗಳೆಲ್ಲರಿಗೂ ಹೇಳತಕ್ಕದ್ದೇನೆಂದರೆ, ಕೋಟಿ ವ್ಯಾಪಾರಗಳೆಲ್ಲ ಮೇಟಿಯ ಸಮವಲ್ಲವೆಂಬ ಲೋಕದ ಗಾದೆಯುಂಟಾಗಿರ್ಪುದು ಮತ್ತು ವ್ಯಾಪಾರಿಗಳೆಲ್ಲ ಮೇಟಿಯ ಸಮವಲ್ಲವೆಂಬ ಲೋಕದ ಗಾದೆಯುಂಟಾಗಿರ್ಪುದು ಮತ್ತು ವ್ಯಾಪಾರಿಗಳೆಲ್ಲರೂ ಕೊಟ್ಟು ಚಿಂತಿಸುವರು, ಇಟ್ಟು ಚಿಂತಿಸುವರು, ಕೃಷಿಕರು ನಿಶ್ಚಿಂತರಾದ ಕಾರಣ 'ಬಾದಶಾಹ, ರೈತರು' ಎಂಬುದು ಪ್ರಸಿದ್ಧವಾಗಿದೆ.

ಈ ಕೃಷಿಯೊಂದು ಸಾಗದಿದ್ದರೆ ಸಕಲ ವ್ಯಾಪಾರಿಗಳು, ಸಮಸ್ತ ಶಾಸ್ತ್ರಜ್ಞರು, ಮೂಢರು, ಮೂರ್ಖರು, ಪಂಡಿತರು ಮೊದಲಾದವರೆಲ್ಲರೂ ದು:ಖಾಬ್ಧಿಯೊಳು

ಮುಳುಗುವರಲ್ಲದೆ ಯಾರಿಗೂ ಪರಿಣಾಮವಿಲ್ಲ. ವ್ಯಾಪಾರಕ್ಕಾದರೂ ಕೃಷಿಯೇ ಮುಖ್ಯ, ಸಮರ್ಥರಾದ ಭೂಪಾಲರಿಗಾದರೂ ವೀರರಿಗೂ, ಧೀರರಿಗೂ, ವೇದಾಗಮ ಶಾಸ್ತ್ರಪುರಾಣ ಪಂಡಿತರಿಗೂ ಸೇವಾಯಾಚನಾದಿ ಷಟ್ಕೃತ್ಯಂಗಳಿಗಾದರೂ ಕೃಷಿಯೇ ಮುಖ್ಯವು. ಅನ್ನವೇ ಆನಂದದ ಬೀಜವು. ಭೂಮಿಯಿಂದ ಬೆಳೆಯುವ ಸಕಲ ಪದಾರ್ಥಗಳು ಬೆಳೆಯದಿದ್ದರೆ ಲೋಕ ವ್ಯವಹಾರವೇ ನಿಲ್ಲುವುದು ಮತ್ತು ಈ ವ್ಯಾಪಾರಿಗಳು ತಂದು ತಂದು ಮಾರುವ ಪದಾರ್ಥಗಳೆಲ್ಲ ಭೂಮಿಯಿಂದ ಉತ್ಪನ್ನವಾದ ಕಾರಣ, ಕೃಷಿಯ ತಡೆದರೆ ಸಕಲ ವ್ಯಾಪಾರವೇ ತಡೆಯುವುದು. ಒಂದು ವೇಳೆಗೆ ಪಾರಜ, ಚಂದ್ರ, ಹುರಿಮಂಜು, ಅರದಾಳ, ತಾಳಕ, ಇಂಗ್ಲೀಕ, ಗಂಧಕ, ಮುಡದಾರ ಸಿಂಗಿ, ವಚನಾಭಿ, ಪಾಷಾಣ, ಸಂಗ, ಜೀರಿಗೆ, ಸೋರುಪ್ಪು, ಉಪ್ಪು, ಪಂಚವಿಧ ಲವಣ ಮೊದಲಾದ ಖನಿಜ ಪದಾರ್ಥಗಳನ್ನು ಒಂದುವೇಳೆ ತಂದು ಮಾರಿದರೆ ಬಂದೀತೆಂಬರು. ಅನ್ನ ವಸ್ತ್ರಗಳಿಲ್ಲದಿದ್ದರೆ, ಅಖಿಳಪದಾರ್ಥಗಳನ್ನು ಕೊಂಬುವರಾರು? ಆತ್ಮಹಿತವಾದದ್ದೇ ಅನ್ನ ಪದಾರ್ಥವು. ಈ ಅನ್ನ ವಸ್ತ್ರಗಳೆರಡು ಕೃಷಿಯಿಂದುತ್ಪನ್ನವಾಗುವವು. ಆದ ಕಾರಣ ಅಖಿಳಶಾಸ್ತ್ರಂಗಳೆಲ್ಲ ಅನ್ನದ ಮಕ್ಕಳೆಂಬ ಗಾದೆಯುಂಟು, ಮತ್ತು "ರಂಜನೆಯ ಬೀಜಕ್ಕೆ ರಾಗ ಮೂವತ್ತೆರಡು" ಎಂದಹಾಗೆ, ಕೃಷಿಕರು ಸಕಲ ಪದಾರ್ಥಗಳನ್ನು ಸಮೃದ್ಧಿಯಾಗಿ ಬೆಳೆದರೆ ಸರ್ವರೂ ಆನಂದದಿಂದ ಬದುಕುವರು. ಕೃಷಿ ಕೆಲಸ ಒಂದು ತಪ್ಪಿದರೆ ಭೂಮಿ ಯಾವತಕ್ಕೂ ಕ್ಷಾಮ ಕಾಲವಾಗಿ ಸರ್ವರೂ ದೇಶಭ್ರಷ್ಟ ಓಡಾಡುವರು. ಇಂಥ ಕ್ಷಾಮ ಕಾಲವು ಕೆಲವು ವರ್ಷಗಳ ಹಿಂದೆ ಅನಂತ ವೇಳೆ ಆಗಿ, ಎಷ್ಟೋ ಅನರ್ಥಗಳಾಗಿ ಬಹುಜನರು ಸತ್ತರೆಂದು ಕೇಳುತ್ತಿದ್ದೆವು. ಆದರೆ ಈ ಕ್ಷಾಮಕಾಲದ ಅನುಭವವು ಈ ನಾಲ್ಕು ವರ್ಷದ ದುಷ್ಕಾಲದಲ್ಲಿ ದಕ್ಷಿಣ ಪ್ರಾಂತದ ಸರ್ವಜನರಿಗೂ ಪೂರ್ಣ ಗೊತ್ತಾಗಿರಬಹುದು. ಇದರ ವಿಷಯಕ್ಕೆ ಬಹಳ ಹೇಳತಕ್ಕದ್ದೇನಿದೆ? "ಕೃಷಿತೋನಾಸ್ತಿ ದುರ್ಭಿಕ್ಷಂ" ವೆಂಬ ಪ್ರಮಾಣವಿರಲಾಗಿ ಕೃಷಿಯ ಜ್ಞಾನದ ಯುಕ್ತಿಯನ್ನರಿಯದೆ ದುಷ್ಕಾಲದ ತಾಪವನ್ನು ಭೋಗಿಸಲಾಯಿತು. ಇನ್ನುಮೇಲಾದರೂ ಸಕಲರು ಈ ಗ್ರಂಥವನ್ನು ಚೆನ್ನಾಗಿ ಓದಿ, ಇದರ ಸಾರವನ್ನು ತಿಳಿದು, ಯುಕ್ತಿಯಿಂದ ಯತ್ನಮಾಡಿ ಧನ ಧಾನ್ಯ ಸಂಪನ್ನರಾಗಿ ಸೌಖ್ಯ ಪಡತಕ್ಕದೆಂದು ಪ್ರಾರ್ಥಿಸುವೆನು.

ಇದಲ್ಲದೆ ಸಮಸ್ತ ದೇಶದ ಸಕಲ ಭೂಪತಿಗಳು ಮತ್ತು ಸಮಸ್ತ ವಿದ್ಯಾವಿಶಾದರರಾದ, ಕಲಾ ಕೌಶಲ್ಯ ಪ್ರವೀಣರಾದ ಮಂತ್ರಿಗಳು ಸಮಸ್ತ ರಾಜ್ಯಭಾರದ ಹುದ್ದೆದಾರರು ರಾಜಬುದ್ಧಿಯುಳ್ಳ ರಾಜ ಕೃಷಿಕರು ಮತ್ತು ಕುಶಲಮತಿಗಳಾದ ಪ್ರೌಢರು ವಿದಗ್ಧರೆಲ್ಲರನ್ನೂ ಕುರಿತು ವಿನಯಪೂರ್ವಕವಾಗಿ ವಿಜ್ಞಾಪನೆ ಮಾಡುವುದೇನೆಂದರೆ; ಈ ಲೋಕದ ಸಮಸ್ತ ಜನರ ಭುಕ್ತಿಮುಕ್ತಿಯ ವಿಷಯದಲ್ಲಿ ಪರೋಪಕಾರ ಶಾಸ್ತ್ರವಾದ ಈ ಕೃಷಿಜ್ಞಾನ ಪ್ರದೀಪಿಕೆಯನ್ನು ಅಲಕ್ಷದಿಂದ ಅಲ್ಪ ಸ್ವಲ್ಪ ಹಾರಿಕೆಯ ಮೇಲೆ ನೋಡಿ, ಇದರ ಸಾಕಾರವನ್ನು ಚೆನ್ನಾಗಿ ಪರೀಕ್ಷಿಸದೆ ಧಿಕ್ಕರಿಸಬಾರದು. ಕೆಲವರು ಅನ್ನುವುದೇನೆಂದರೆ, ಭೂ ನಿರ್ಮಾಣ ಕಾಲದಿಂದ

ಇವೊತ್ತಿನವರೆಗೂ ಸರ್ವಜನರು ಹರಗಿ ಬಿತ್ತುವುದಕ್ಕೆ ಬಲ್ಲದ್ದೆ ಸರಿ, ಇದಾವ ಘನಮಾತು? ಈ ಕೃಷಿ ಕೆಲಸವನ್ನರಿಯದವರಾರು? ಈ ಕೃಷಿ ಪ್ರಶಂಸನೆಯನ್ನು ಇಷ್ಟು ವರ್ಣನೆ, ಅತಿ ಬಾಹುಲ್ಯವಾಗಿ ಘನಶಾಸ್ತ್ರವೆಂಬಂತೆ ವಿಸ್ತರಿಸಿ ದೊಡ್ಡ ಗ್ರಂಥವ ಮಾಡಿ ಬರೆಯಬೇಕಾದರೆ ಇವನಿಗೆ ಮತ್ತೇನು ಕೆಲಸವಿದ್ದಿಲ್ಲವೆ? ಎಂದು ನನ್ನನ್ನು ಕುರಿತು ಹಾಸ್ಯವನ್ನು ಮಾಡುವವರು. ಮಾಡಿದರೂ ಮಾಡಲಿ, ಈ ಗ್ರಂಥಸಾರವನ್ನು ಚೆನ್ನಾಗಿ ತಿಳಿದ ಮೇಲೆ ಯಾರು ಹಾಸ್ಯ ಮಾಡಲಿಕ್ಕಿಲ್ಲವು. ಅಂದರೆ ಈ ಗ್ರಂಥ ಪ್ರಶಂಸನೆಯನ್ನು ಸರ್ವರಿಗೂ ಶ್ರುತಿಗೊಳಿಸುವುದೇನಂದರೆ, ನನ್ನ ಬುದ್ಧಿ ಅಲ್ಪವಾದರೇನಾಯಿತು? ಈ ಗ್ರಂಥವು ಸರ್ವರಿಗೂ ಪ್ರಾಣಪದವಾದದ್ದು, ಹೇಗೆಂದರೆ; ಸಮಸ್ತ ಮಹಾರಾಜರುಗಳು ಮತ್ತು ರಾಜಪಂಡಿತರು ಹಾಗೂ ಸರ್ವಜ್ಞಾನಿಗಳಾದ ಬುದ್ಧಿಶಾಲಿಗಳೆಲ್ಲರೂ ಈ ಕೃಷಿಜ್ಞಾನ ಶಾಸ್ತ್ರವನ್ನು ಉಪೇಕ್ಷಿಸಲಾಗದೆಂದು ನನ್ನ ವಿಜ್ಞಾಪನೆಯಿದೆ ಮತ್ತು ಸೂರ್ಯನೆದುರಿನಲ್ಲಿ ದೀವಟಿಗೆಯಂತೆ ನಾನಿರುವೆನು.....

॥ ಶ್ಲೋಕ ॥ "ಆಶಾಬದ್ಧತೇ ಲೋಕೇ । ಕರ್ಮಣಾ ಬಹುಚಿಂತಯಾ । ಆಶಾ ಪರಮಂ ದು:ಖ। ನಿರಾಶಾ ಪರಮಂ ಸುಖಂ।" ಎಂಬ ಶಾಸ್ತ್ರ ಪ್ರಮಾಣ ಉಂಟಾಗಿ ಲೌಕಿಕರೆಲ್ಲರು ಕೃಷಿ ಮುಂತಾದ ಕಾರ್ಯಂಗಳ ಮಾಡುವಲ್ಲಿ ಪ್ರಯತ್ನ ಮುಖದಿಂದ ತನುವ ದಂಡಿಸಿ, ವಿಶ್ವಾಸದಿಂದ ಮಾಡಿ ಸಕಲ ಸಂಪತ್ತನ್ನು ಪಡೆಯಲಾರದೆ, ಮೈಗಳ್ಳತನದಿಂದ ಅನಿರ್ವಾಹಪಕ್ಷಕ್ಕೆ ಅಲ್ಪ ಸ್ವಲ್ಪ ಕಾರ್ಯಗಳನ್ನು ಆದಷ್ಟಾಗಲಿ ಎಂದು ಆಲಸತ್ವದ ಬೇಸರದಿಂದ ಮಾಡಿದಲ್ಲಿ ಸರ್ವಾರಂಭದ ಕ್ರಮದ ಯುಕ್ತಗಳು ತಪ್ಪಿ ಹದ ಬೆದೆಗಳು ಮೀರಿದ ಕಾರಣ, ಅಲ್ಪ ಸ್ವಲ್ಪ ಧಾನ್ಯಾದಿಗಳು ಅಥವಾ ಸಲ್ಪಸ್ವಲ್ಪ ದ್ರವ್ಯವಾದರೂ ದೊರೆಯುವುದರಿಂದ, ಅದು ಅನ್ನ ವಸ್ತ್ರಕ್ಕೆ ಸಾಲದಾಗಿರುವುದರಿಂದ, ಪುಣ್ಯಶಾಲಿಗಳಾದ ಧನಧಾನ್ಯ ಸಂಪನ್ನರಲ್ಲಿಗೆ ಹೋಗಿ ಕಡ, ಬಡ್ಡಿ ಸಾಲಗಳನ್ನು ಕೇಳುತ್ತಿರಲು, ಅವರು ಇವನ ಮೈಗಳ್ಳತನದ ಸ್ವಭಾವವನ್ನು ಬಲ್ಲವರಾದುದರಿಂದ, ಇವನಿಗೆ ಕೊಟ್ಟ ದ್ರವ್ಯವು ತಿರುಗಿ ಬರಲಾರದೆಂದು ತಿಳಿದು, ಕೊಡದೇ ಇದ್ದಲ್ಲಿ, ಹೊಟ್ಟೆಗೆ ಅನ್ನವ ಕಾಣದೆ ಹಸಿವಿನಿಚ್ಛಾಧೀನನಾಗಿ ಹಬ್ಬ, ಹುಣ್ಣಿವೆ, ಸೋಮವಾರ, ಮಂಗಳವಾರವೆಂಬ ವಾರ ತಿಥಿಗಳನ್ನು ಪರೀಕ್ಷಿಸುತ್ತ ಮತ್ತು ನೆರೆ ಹೊರೆ ಮನೆಗಳಲ್ಲಿ ಬೀಗರು, ಆಪ್ತರು, ಸ್ನೇಹಿತರು ಬಂದ ಸಮಯದಲ್ಲಿ ಯಾರೇನು ಮಾಡ್ಯಾರೊ? ಎಂದು ನಿರೀಕ್ಷಿಸುತ್ತ ಇದ್ದಲ್ಲಿ, ಸಕಲೈಶ್ವರ್ಯ ಸಂಪನ್ನರು ಯಾವುದಾದರೊಂದು ಕಾರ್ಯ ನಿಮಿತ್ತ ಅಥವಾ ಹಬ್ಬದ ನಿಮಿತ್ಯ ಇಲ್ಲವೆ ಆಪ್ತರಿಷ್ಟ ನಿಮಿತ್ಯ ಸಂಭ್ರಮದಿಂದ ಹೋಳಿಗೆ, ಹುಗ್ಗಿ, ಕರ್ಚಿಕಾಯಿ, ಕಡಬು, ಕಜ್ಜಾಯಗಳನ್ನು ಮಾಡಿದ ವಾಸನೆಯ ತಿಳಿದು, ಅವರು ಉಂಬುವ ವೇಳೆಗೆ ಹೋಗಿ ಅವರ ಮನೆಯ ಮುಂದೆ ನಿಂತು, ಹಬ್ಬವ ಮಾಡಿದ ಹರದಿಯರಿರಾ ಹಲವರೆಲ್ಲರೂ ಉಂಡು ಪರಿಣಾಮವೇ, ಎಂಬ ಬಣ್ಣದ ಮಾತಿನ ಗುಪ್ತಯಾಚನೆಯ ಸಂಜ್ಞೆಯನ್ನು ತಿಳಿದು ಮಾತಾಡದೇ ಇರುವರು. ಆ ಭಾವವನ್ನು ತಿಳಿದು ಈ ಗುಪ್ತಯಾಚಕನು ಹಿಂದಿರುಗಿ ಹೋಗುವಾಗ ಹಸಿವೆಯಾಸೆಯಿಂದ ಕರಳು ಸುಟ್ಟಂತಾಗಿ ಹೊಟ್ಟೆ ಉರಿಯಲು, ತಾನು ಗೃಹಸ್ಥನೆಂಬ

ಧರ್ಮಕ್ಕೆ ತಪ್ಪಿ ಹಸಿವಿನಿಚ್ಛೆಗೆ ಪ್ರಕಟಯಾಚಕತ್ವದಿಂದ, ಅವರಿರವರೆನ್ನದೆ ಎಲ್ಲರ ಬೇಡಿದಲ್ಲಿ ಯಾರೇನು ಕೊಡದೆ ಹೋದ ಕಾಲದಲ್ಲಿ, ಕಳವು ಹಿಂಸಾದಿ ದ್ರೋಹಂಗಳಿಗೆ ಹೇಸದೆ ಪರದ್ರವ್ಯಂಗಳನಪಹರಿಸುತ್ತ ಸೆರೆಮನೆಯ ಸಂಕೋಲೆಯ ಬಂಧನಕ್ಕೊಳಗಾಗಿ ಮಾನಹೀನನೆನಿಸಿ ನರಕಯಾತನೆಗೆ ಪಾತ್ರನಾಗಿ, ಭೂಭಾರಿಕನಾಗಿ, ಅನ್ನಶತ್ರುವಾಗಿ, ದಾರಿದ್ರ್ಯದೋಷಿಯಾಗಿ ಖಲಜನರೆನಿಸಿ ಅವಮರ್ಯಾದೆಯಿಂದ ಜೀವನವನ್ನು ಮಾಡುವನು.

ಈ ಮಾತುಗಳನ್ನು ಗ್ರಂಥದ ಪೀಠಿಕೆಯಾಗಿ ಬರೆಸಿದ್ದಾರೆ. ಶ್ರೀ ಘನಮಠ ಶಿವಯೋಗಿಗಳು. ಕೃತಿಯಲ್ಲಿ ೨೩ ಅಧ್ಯಾಯಗಳಿದ್ದು, ಒಂದೊಂದು ಅಧ್ಯಾಯಕ್ಕೂ, ೧ನೇ ಪ್ರಕರಣ, ೨ನೇ ಪ್ರಕರಣ, ೩ನೇ ಪ್ರಕರಣ ಎಂದು ಹೆಸರಿಸಿದ್ದಾರೆ. ಪೀಠಿಕೆಯಲ್ಲಿ ವ್ಯಕ್ತವಾಗಿರುವ ಸಂಗತಿಗಳು ಶಿವಯೋಗಿಗಳ ವ್ಯಕ್ತಿತ್ವ ಅಳೆಯಲು ನೆರವಾಗುತ್ತವೆ. ನೇರವಾಗಿ, ಸರಳವಾಗಿ ಹೇಳಬಹುದಾದುದನ್ನು ಕ್ಲಿಷ್ಟಗೊಳಿಸಿ ಹೇಳುವ ಕ್ರಮದಿಂದಲೇ ಈ ಕೃತಿ ಜನರಿಂದ ದೂರವಾಗಿದೆ. ಇಷ್ಟಾಗಿಯೂ ಇಲ್ಲಿ ಬರುವ ಗಾದೆಗಳು, ವಚನಗಳು, ಲೋಕೋಕ್ತಿಗಳು ಆ ಕಾಲದ ಪರಿಸ್ಥಿತಿಯ ಅವಲೋಕನಕ್ಕೆ ನೆರವಾಗುತ್ತವೆ.

ಈಗ ಚಾಲ್ತಿಯಲ್ಲಿರುವವರು ಉಳುವ ಪದ್ಧತಿಯಲ್ಲಿ ಎರಡು ಎತ್ತು, ಒಂದು ನೊಗ, ಒಬ್ಬ ವ್ಯಕ್ತಿ ಮತ್ತು ಉಳುವ ನೇಗಿಲು – ಇಷ್ಟು ಮಾತ್ರ ಪರಿಕರ. ಕ್ರಿ.ಶ. ೧೮೦೦ ರ ಕಾಲದಲ್ಲಿ ಒಂದೇ ನೊಗಕ್ಕೆ ೨ ಎತ್ತು, ೪ ಎತ್ತು, ಆರು ಎತ್ತು, ಎಂಟು, ಹತ್ತು, ಹನ್ನೆರಡು ಎತ್ತುಗಳನ್ನು ಕಟ್ಟುವ ಚಿತ್ರಣಗಳಿವೆ. ಆದರೆ ನೇಗಿಲು ಮಾತ್ರ ಒಂದೆ. ಹೆಚ್ಚು ಆಳವಾಗಿ ಉಳುವಾಗ ಉದ್ದನೆಯ ನೇಗಿಲು ಮತ್ತು ನೊಗ ಬಳಸುವುದು ರೂಢಿಯಲ್ಲಿತ್ತು ಎಂಬುದು ಇಲ್ಲಿ ತಿಳಿಯುತ್ತದೆ. ಇಲ್ಲಿ ಬಳಕೆಯಾಗುತ್ತಿದ್ದ ನೊಗ ಹನ್ನೆರಡು ಎತ್ತುಗಳನ್ನು ಕಟ್ಟುವ ೨೦ ಅಡಿಗಿಂತ ಹೆಚ್ಚು ಉದ್ದ ಇದ್ದಿರಲೇಬೇಕು.

ಆ ಕಾಲದಲ್ಲಿ ರೂಢಿಯಲ್ಲಿದ್ದ ಎಲ್ಲ ಬೆಳೆಗಳನ್ನು ಹೀಗೆಯೆ ಬೆಳೆಯಬೇಕು; ಇಷ್ಟೆ ಗೊಬ್ಬರ ಹಾಕಬೇಕು, ಎಂಬಿತ್ಯಾದಿ ವಿವರಗಳೊಂದಿಗೆ ಬೆಳೆ ಬೆಳೆಯುವುದನ್ನು ಹೇಳಿಕೊಡುತ್ತಾರೆ. ಹಾರಕ, ನವಣೆ, ಸಜ್ಜೆ, ಜೋಳ, ಕಡಲೆ, ನೆಲಗಡಲೆ, ಹೆಸರು, ಉದ್ದು, ಮಡಕಿ, ಅಲಸಂದಿ, ಹುರುಳಿ, ರಾಗಿ, ನೆಲ್ಲು (ಭತ್ತ), ಬರಗು, ಊದಲು, ಕೊರಲೆ, ಗೋಧಿ, ಬೆಳ್ಳುಳ್ಳಿ, ಮೆಣಸಿನಕಾಯಿ, ಸಾಸಿವೆ, ಹತ್ತಿ, ಜೀರಿಗೆ, ಯಳ್ಳು, ಹುಚ್ಚೆಳ್ಳು, ಕುಸಲೆ, ನೀಲಿ ಇತ್ಯಾದಿ. ತೆಂಗು, ಬಾಳೆ, ಅಡಿಕೆ, ಮಾವು ಮತ್ತು ಇತರದ ತೋಟದ ಬೆಳೆಗಳ ಕುರಿತು ರೈತರ ಗಮನ ಸೆಳೆಯಲು ಯತ್ನಿಸುತ್ತಾರೆ.

ಮಳೆಯ ವಿಚಾರ, ಕಳೆ, ಅದರಲ್ಲೂ ಗರಿಕೆ ನಿರ್ಮೂಲನೆ ಕುರಿತು ಸಾಕಷ್ಟು ಎಚ್ಚರ ನೀಡುತ್ತಾ, ಒಕ್ಕಲುತನ ಮಾಡುವ ಮನೆಯ ಯಜಮಾನನ ಕೆಲಸ ಗಟ್ಟಿಮುಟ್ಟಾದ ಗೆಯ್ಯುವ ಎತ್ತುಗಳನ್ನು ಇಟ್ಟುಕೊಳ್ಳುವುದು, ಅಷ್ಟೇ ಗಟ್ಟಿ ಮುಟ್ಟಾದ

ಗೆಯ್ಯುವ ಆಳುಗಳನ್ನು ಇಟ್ಟುಕೊಳ್ಳುವುದು, ಹೊಲ-ಗದ್ದೆ-ತೋಟಗಳಿಗಾಗಿ ಒಳ್ಳೊಳ್ಳೆಯ ತಿಪ್ಪೆಗಳನ್ನು ಇಟ್ಟುಕೊಳ್ಳುವುದು, ಚಕ್ಕಡಿ ಬಂಡಿಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳುವುದು, ವ್ಯವಸಾಯಕ್ಕೆ ಬೇಕಾದ ಕಟ್ಟಿಗೆಯ, ಕಬ್ಬಿಣದ ನೇಗಿಲು, ಮಡಿಕೆ, ರೆಂಟೆ, ಕುಂಟೆ, ಕೂರಿಗಿ, ಯಡಿಯ ಕುಂಟಿ, ಈಸುನೊಗಗಳು....ಇವುಗಳು ಶಿಲ್ಪಶಾಸ್ತ್ರ ಕ್ರಮದಂತೆ ಅನುವಾಗಿಯೂ, ಬಲಯುತವಾಗಿಯೂ ಇರಲೇಬೇಕು ಎನ್ನುತ್ತಾರೆ. ಹಾಗೆಯೇ ಕಬ್ಬಿಣದ ಸಾಮಾನುಗಳಲ್ಲಿ ಮುಂಜ, ಬಳಿ, ಕುಡ, ಮೊಳಿ, ಕೊಡ್ಲಿ, ಗುದ್ದಲಿ, ಬೆಡಗ, ಬಾಚಿ, ಉಳಿ, ಕುರಿಪೆ, ಕುಡುಗೋಲು, ಮಿಣಿಕಣಿ, ಹಗ್ಗ ಮೊದಲಾದವುಗಳೆಲ್ಲ ಪ್ರಮಾಣ ಬದ್ಧವಾಗಿ, ಸತ್ವಯುತವಾಗಿ ಇರಲೇಬೇಕು. ಈ ಉಪಕರಣಗಳು ಯಜಮಾನನ ಯೋಗ್ಯತೆಯನ್ನು ಅಳೆಯುತ್ತವೆ. ಜಮೀನನ್ನು ಆಬದ್ದು ಮಾಡಲು ಯಾವ ಕಾರಣಕ್ಕೂ ರೈತ ಹಿಂದೆ ಸರಿಯಬಾರದು. ಸಾಲ ಮಾಡಿಯಾದರೂ, ಎಷ್ಟು ಬೇಕಾದರೂ ಸಾಲ ಮಾಡಿ ಜಮೀನನ್ನು ಆಬದ್ದು ಮಾಡಿದರೆ– ಅದು ಮಾಡಿದ ಖರ್ಚಿನ ಹತ್ತು ಪಟ್ಟು ಹಿಂದಿರುಗಿ ಬರುತ್ತದೆ ಎನ್ನುತ್ತಾರೆ.

ಹೊಲವನ್ನು ನೋಡದೆ ಇದ್ದರೆ ಕೆಡುವುದು, ಸಾಲವನ್ನು ಕೇಳದೆ ಇದ್ದರೆ ಮುಳುಗುವುದು – ಹೀಗಾಗಿ ಕೃಷಿಕನಾದವನು 'ನೋಡಿದರೆ ಹೊಲ, ಮಾಡಿದರೆ ಮನೆ, ಕೇಳಿದರೆ ಸಾಲ, ವಿಚಾರಿಸಿದರೆ ಜ್ಞಾನ' ಎಂಬಂತಿರಬೇಕು. ಅಲ್ಲದೆ "ಪಠಿತೆ ಪಂಚ ರಾತ್ರೇಣ! ಕೃಷಿತೋ ದಶರಾತ್ರಯೋ" ಹೀಗಾಗಿ ಕೃಷಿಕನ ಶ್ರಮ – ಕೃಷಿಗಾಗಿ ಹೆಚ್ಚು ಬೇಕು.

ಭೂಮಿಗಾಗಿ ಖರ್ಚು ಮಾಡುವ ದ್ರವ್ಯ ಎಂದಿಗೂ ವ್ಯರ್ಥವಾಗುವುದಿಲ್ಲ. ಆದರೆ ಕೃಷಿಕರಾದವರು ಸಾಲವನ್ನು ಮಾಡಿ ಹಬ್ಬವನ್ನು ಮಾಡಬಾರದು. ಮನೆಯನ್ನು ಕಟ್ಟಿಸಬಾರದು, ಲಗ್ನ, ಮುಂಜಿ, ಶೋಭನ ಮಾಡಿಸಬಾರದು, ಆಭರಣ ಕೂಡ ಮಾಡಿಸಬಾರದು. "ಈ ವಿಷಯದಲ್ಲಿ ಗುಳೇದಗುಡ್ಡದಲ್ಲಿ ಮೂವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಘನ ಸಂಭ್ರಮದಿಂದ ಲಗ್ನವನ್ನು ಮಾಡಿದ ಆಲೂರ ಕರಕಪ್ಪನವರೇ ಸಾಕ್ಷಿ. ಈಗಲೂ ಆತನ ಸ್ಥಿತಿಯು ಹೇಗಿರುವುದೆಂಬುದನ್ನು ನೀವೇ ವಿಚಾರಿಸಿ ತಿಳಿಯತಕ್ಕದ್ದು. ಆತನು ಮಾಡಿದ ಕೃತ್ಯವು ಹದಿನೈದು ದಿವಸದ ಪೂರ್ತಿ ಮಹಾ ಸಂಭ್ರಮವಾಗಿ ಕಾಣಿಸಿ ಕಡೆಯಲ್ಲಿ ಹಾನಿಗೆ ಕಾರಣವಾಯಿತು. ಹೀಗೆ ಮಾಡದೆ ಇಷ್ಟು ದ್ರವ್ಯಗಳನ್ನು ಖರ್ಚು ಮಾಡಿ ಕೆಲವು ಹೊಲಗಳನ್ನು ನಾಲ್ಕಾರು ಸಂಭ್ರಮದ ತೋಟಗಳನ್ನು ಮಾಡಿಸಿದ್ದರೆ ವರುಷಕ್ಕೆ ಇಪ್ಪತ್ತೈದು, ಮೂವತ್ತು ಸಾವಿರ ರೂಪಾಯಿಯ ಉತ್ಪನ್ನವು ನಿರಾಯಾಸದಿಂದ ಆಗುತ್ತ ತನ್ನ ವಂಶ ಪರಂಪರೆಯಲ್ಲಿ ದಾರಿದ್ರ್ಯವೇ ಇಲ್ಲದ ಹಾಗೆ ಆಗುತ್ತಿತ್ತು" ಎಂದು ಎಚ್ಚರಿಸುತ್ತಾರೆ.

ಬೇಸಾಯ ದೇಹ ದಂಡಿಸಿಯೇ ಮಾಡಬೇಕಾದ ಕೃತ್ಯವಾದ್ದರಿಂದ; ಕೃಷಿಕರು ಅನಕ್ಷರಸ್ಥರಾದ ಕಾರಣ; ಕೃಷಿಕರಿಗೆ ಓದಿ ತಿಳಿಸುವವರು ಶ್ರದ್ಧೆಯಿಂದ ಓದಿ,

ಮನದಟ್ಟು ಮಾಡಿಕೊಂಡು, ಪದೇ ಪದೇ ಇದನ್ನು ಕೃಷಿಕರಿಗೆ ಹೇಳಿಕೊಡಬೇಕೆಂದು ಶ್ರೀ ಘನಮಠರು ಆಶಿಸುತ್ತಾರೆ. ಗಾದೆಗಳು, ಉಪಕತೆಗಳು, ವಿನೋದ ಪ್ರಸಂಗಗಳು, ಕೃತಿಯ ಧ್ಯೇಯಗಳನ್ನು ಬಲಗೊಳಿಸುತ್ತವೆ. ಕೃತಿಯ ಉತ್ತರಾರ್ಧ ಪಾಠವು ಸಂಸಾರ ಜೀವನವು ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ ಹೇಗೆ ಸಜ್ಜಾಗಬೇಕು ಎಂಬುದರ ಕುರಿತು ಒತ್ತು ನೀಡಲಾಗಿದೆ.

ವ್ಯವಸಾಯ ಸಂಬಂಧಿ ಬರಹಗಳು, ಪುಸ್ತಕಗಳು ಬರುತ್ತಿರುವುದು ತೀರಾ ಇತ್ತೀಚೆಗೆ ಸುರಪಾಲನ ವೃಕ್ಷಾಯುರ್ವೇದ ಇರಬಹುದು, ಘನ ಮಠ ಶಿವಯೋಗಿಗಳ 'ಕೃಷಿಜ್ಞಾನ ಪ್ರದೀಪಿಕೆ' ಇರಬಹುದು....ಆಯಾಯ ಕಾಲದಲ್ಲೂ ಅಷ್ಟಾಗಿ ಪ್ರಾಮುಖ್ಯತೆ ಪಡೆದಿರುವ ಕುರಿತು ಪುರಾವೆಗಳಿಲ್ಲ. ಮೂಲತ: ಕೃಷಿಕರು ಅನಕ್ಷರಸ್ಥರಾಗಿದ್ದರಿಂದ; ಬೇಸಾಯ ಜ್ಞಾನ – ಓದಿ ಕಲಿತು ಮಾಡುವುದಲ್ಲವಾದ್ದರಿಂದ ಅಥವಾ ಓದಿ ಕಲಿಯುವ ಅಗತ್ಯವೂ ಇಲ್ಲದ ಕಾರಣ ಜನ ಪ್ರಕಟಿತ ಕೃತಿಗಳ ಕಡೆಗೆ ಗಮನ ಹರಿಸದೇ ಹೋಗಿರಬಹುದು.

ದೇಶಿ ಕೃಷಿ ಜ್ಞಾನವು ಆಯಾ ಕಾಲಘಟ್ಟದ ಜಾನಪದ ಗೀತೆಗಳು, ಲಾವಣಿಗಳು, ಶೋಭಾನದ ಪದಗಳು, ವಚನಗಳು, ಸ್ರ್ವಜ್ಞನ ಪದಗಳು. . . . ಇವುಗಳ ಮೂಲಕವೆಲ್ಲ ಹೊರಹೊಮ್ಮಿದೆ. ಜಾನಪದ ಸಾಹಿತ್ಯ ಸಂಗ್ರಹಗಳಲ್ಲಿ ಇದು ಎದ್ದು ಕಾಣುತ್ತದೆ. ಉದಾಹರಣೆಗೆ ಜಾನಪದ ವಿದ್ವಾಂಸರಾಗಿದ್ದ ಡಾ॥ ಎಚ್.ಎಲ್.ನಾಗೇಗೌಡರು – 'ಕರ್ನಾಟಕ ಜಾನಪದ ಪರಿಷತ್'ಗಾಗಿ ಸಂಗ್ರಹಿಸಿದ ಜ್ಞಾನ ಅಗಾಧ ವಿಸ್ತಾರವನ್ನು ಪಡೆದುಕೊಂಡಿದೆ. ಸರಿ ಸುಮಾರು ೩೦ ವರ್ಷಗಳ ಕಾಲ ಕರ್ನಾಟಕದ ಬಹುಪಾಲು ಗ್ರಾಮಗಳನ್ನು ಸುತ್ತಿ, ಜಾನಪದ ಜ್ಞಾನ ಇರುವವರನ್ನೆಲ್ಲ ಸಂಪರ್ಕಿಸಿ; ರಾಜ್ಯಮಟ್ಟದ ಜಾನಪದ ಮೇಳಗಳನ್ನು ಸಂಘಟಿಸಿ ಅವರು ಕಲೆ ಹಾಕಿರುವ ಜ್ಞಾನರಾಶಿಯ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

ಇವೆಲ್ಲವೂ ಗ್ರಾಮೀಣ, ವಿಶೇಷವಾಗಿ ಕರ್ನಾಟಕದ ಹಳ್ಳಿಗಾಡಿನ ಬೇಸಾಯ ಜ್ಞಾನ, ಗುಡಿಕೈಗಾರಿಕೆಗಳ ಜ್ಞಾನ, ಆರ್ಥಿಕ ಜ್ಞಾನ, ಸಾಮಾಜಿಕ ಜ್ಞಾನ, ಸಮಗ್ರ ಬದುಕಿನ ಸಾಂಸ್ಕೃತಿಕ ಜ್ಞಾನವೆಂದೇ ಪರಿಗಣಿಸಲ್ಪಟ್ಟಿವೆ.

೧) ಬೀಸುವ ಪದಗಳು
೨) ಕುಟ್ಟುವ ಪದಗಳು
೩) ಮೊಸರು ಕಡೆಯುವ ಪದಗಳು
೪) ಒಕ್ಕಲುತನದ ಪದಗಳು
೫) ಬಾಂಧವ್ಯದ ಪದಗಳು
೬) ಒಸಗೆ ಪದಗಳು
೭) ಮದುವೆ ಪದಗಳು
೮) ಬಯಕೆ ಪದಗಳು

೯) ಬಾಣಂತಿ ಪದಗಳು
೧೦) ಬಂಜೆ ಪದಗಳು
೧೧) ಲಾಲಿ/ ದೂರಿ/ ಜೋಗುಳ/ ತೊಟ್ಟಿಲ ಪದಗಳು
೧೨) ಶಿಶುಪ್ರಾಸಗಳು
೧೩) ಪ್ರೇಮ ಗೀತೆಗಳು
೧೪) ತಿಂಗಳು ಮಾವನ ಪದಗಳು
೧೫) ಮಳೆರಾಯನ ಪದಗಳು
೧೬) ಜೋಕುಮಾರನ ಪದಗಳು
೧೭) ಜೋಗಯ್ಯನ ಪದಗಳು
೧೮) ತಮಾಷೆ ಪದಗಳು
೧೯) ಕಗ್ಗದ ಪದಗಳು
೨೦) ದೇವರ ಪದಗಳು
೨೧) ಕ್ರೈಸ್ತ ಹೆಂಗಸರ ಪದಗಳು
೨೨) ಮುಸಲ್ಮಾನ ಹೆಂಗಸರ ಪದಗಳು
೨೩) ಶರಣರ ಮೇಲಿನ ಪದಗಳು
೨೪) ರಾಮ ಸೀತೆ ಪದಗಳು
೨೫) ಧರ್ಮದ ಪದಗಳು ಮತ್ತು ಕುಂತಿ ಪದಗಳು
೨೬) ತತ್ವಪದಗಳು
೨೭) ಭಜನೆ ಪದಗಳು
೨೮) ಮಂಗಳಾರತಿ ಪದಗಳು
೨೯) ಗೀಗಿ ಪದಗಳು
೩೦) ಡೊಳ್ಳಿನ ಪದಗಳು
೩೧) ಭಾಗವತಿಕೆ ಪದಗಳು
೩೨) ಅಂಟಿಕೆ ಪಂಟಿಕೆ ಪದಗಳು
೩೩) ಲಾವಣಿಗಳು
೩೪) ಹರದೇಶಿ – ನಾಗೇಶಿ ಪದಗಳು
೩೫) ಹಟ್ಟಿ ಪದಗಳು
೩೬) ಬುಡಕಟ್ಟು ಜನಾಂಗದವರ ಪದಗಳು
೩೭) ಅಲಾವಿ ಪದಗಳು
೩೮) ವೀರ ಮಕ್ಕಳ ಪದಗಳು
೩೯) ಪಂಡರೀ ಭಜನೆ ಪದಗಳು
೪೦) ಜನಪದ ರಂಗಭೂಮಿ ಪದಗಳು
೪೧) ಕಥನ ಗೀತೆಗಳು

೪೨) ಕಥನ ಕಾವ್ಯಗಳು
೪೩) ಕಂಸಾಳೆ ಪದಗಳು
೪೪) ಚೌಡಿಕೆ ಪದಗಳು
೪೫) ಗೊಂದಲಿಗರ ಪದಗಳು
೪೬) ಗೊರವರ ಪದಗಳು
೪೭) ನೀಲಗಾರರ ಪದಗಳು
೪೮) ದೊಂಬಿ ದಾಸರ ಪದಗಳು
೪೯) ಹೆಳವರ ಪದಗಳು
೫೦) ಗೊಲ್ಲರ ಪದಗಳು
೫೧) ಕಿನ್ನರಿ ಜೋಗಿಗಳ ಪದಗಳು
೫೨) ಕರಪಾಲದವರ ಪದಗಳು
೫೩) ಜಾನಪದ ಕಥೆ, ಪುರಾಣ, ಐತಿಹ್ಯಗಳು
೫೪) ಒಗಟು, ಗಾದೆ, ಒಡಪುಗಳು
೫೫) ಅಡಿಗೆ, ವೈದ್ಯ, ನಂಬಿಕೆ, ಸಂಪ್ರದಾಯ, ಹಬ್ಬ ಹರಿದಿನ, ವೃತ್ತಿ, ಬದುಕು, ವೇಷ ಭೂಷಣಗಳಿಗೆ ಸಂಬಂಧಿಸಿದ ವಿವರಣೆಗಳು
೫೬) ವಿವಿಧ ಜನಪದ ವಾದ್ಯಗಳ ಸಂಗೀತ
೫೭) ಕೋಲಾಟದ ಪದಗಳು

ಮೇಲ್ಕಾಣಿಸಿದ ಎಲ್ಲವೂ ಬರಹ ರೂಪದಲ್ಲಿ ದಾಖಲಿಸಲ್ಪಟ್ಟಿವೆ. ನಾಡಿನ ಸಾಂಸ್ಕೃತಿಕ ಜಗತ್ತನ್ನು ಅರಿಯುವವರಿಗೆ; ಜಾನಪದ ಸಂಶೋಧಕರಿಗೆ; ವ್ಯವಸಾಯ ಸಂಬಂಧ ಅಧ್ಯಯನಕಾರರಿಗೆ ಈ ಬೃಹತ್ ಆಕರ ನೆರವಿಗೆ ಬರುತ್ತದೆ.

ಇಷ್ಟೇ ಅಲ್ಲದೆ ರಾಮನಗರದ ಬಳಿಯ 'ಜಾನಪದ ಲೋಕ'ದ ಜಾನಪದ ವಸ್ತು ಸಂಗ್ರಹಾಲಯದಲ್ಲಿ ನಾಡಿನ ಸಂಸ್ಕೃತಿ ಬಿಂಬಿಸುವ ವಸ್ತುಗಳು ಸಂಗ್ರಹಿಸಲ್ಪಟ್ಟಿವೆ. ಬೇಸಾಯ ಮತ್ತು ಇತರ ವೃತ್ತಿಗೆ ಸಂಬಂಧಿಸಿದ ಉಪಕರಣಗಳೂ ಇವೆ. ಇಷ್ಟಲ್ಲದೆ ಜಾನಪದ ವೈವಿಧ್ಯ ಸಾರುವ, ಗೀತೆ/ಹಾಡುಗಳ ೩೦ ಧ್ವನಿಸುರುಳಿಗಳೂ ಇವೆ. ಈ ಎಲ್ಲವೂ ಅನಕ್ಷರಸ್ಥ ಗ್ರಾಮೀಣ ಜನರ ಜ್ಞಾನ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುತ್ತವೆ.

ಕೊನೆ ಟಿಪ್ಪಣಿ:–

೧) 'ಇತಿಹಾಸ ಪರಿಚಯ'– ಡಾ. ಬಿ.ಷೇಕ್‌ಅಲಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೧೯೭೬
೨) 'ಅಲ್ಲಮನ ವಚನಗಳು'–ಸಂ. ಡಾ. ಎಲ್.ಬಸವರಾಜು, ಗೀತಾ ಬುಕ್‌ಹೌಸ್, ಮೈಸೂರು ೧೯೫ ಪುಟ–೧೭೬
೩) ಅದೇ ಪುಟ –೭೮
೪) ಅದೇ ಪುಟ– ೨೫

೫) ಅದೇ ಪುಟ- ೨೬

೬) ಅದೇ ಪುಟ- ೭೭

೭) ಅದೇ ಪುಟ- ೯೫

೮) ಅದೇ ಪುಟ- ೮೦

೯) ಅದೇ ಪುಟ- ೧೪೪

೧೦)ಅದೇ ಪುಟ- ೭೩

೧೧)'ಅಲ್ಲಮ ಪ್ರಭು ದೇವರ ವಚನ ನಿರ್ವಚನ' ಶ್ರೀ ಸಿದ್ದೇಶ್ವರ ಸ್ವಾಮಿಗಳು, ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು – ೨೦೦೧ ಪುಟ-೧೦೧೧

೧೨)'ವೃಕ್ಷಾಯುರ್ವೇದ' ಸಂ. ನಳಿನಿ ಸಾದಲೆ, ಅಭಿನವ ಪ್ರಕಾಶನ, ಬೆಂಗಳೂರು ೨೦೦೭

೧೩)'ಅಲ್ಲಮನ ವಚನಗಳು'-ಸಂ. ಡಾ. ಎಲ್.ಬಸವರಾಜು, ಗೀತಾ ಬುಕ್‌ಹೌಸ್, ಮೈಸೂರು ೧೯೯೫ ಪುಟ-೧೦೩

೧೪)'ವೃಕ್ಷಾಯುರ್ವೇದ' ಸಂ. ನಳಿನಿ ಸಾದಲೆ, ಅಭಿನವ ಪ್ರಕಾಶನ, ಬೆಂಗಳೂರು ೨೦೦೭

ಅಧ್ಯಾಯ : ೩

ದೇಸೀ ಜಾನುವಾರು ಸಂಸ್ಕೃತಿ

ಮಾನವ ಮತ್ತು ಜಾನುವಾರುಗಳ ನಡುವಿನ ಸಹಚರ್ಯ ಎಂದಿನಿಂದ ಶುರುವಾಯ್ತು? ಯಾಕೆ ಶುರುವಾಯ್ತು? ಹೇಗೆ ಶುರುವಾಯ್ತು? ಈ ಪ್ರಶ್ನೆಗಳಿಗೆಲ್ಲ ದಾಖಲಿತ ಚರಿತ್ರೆಗಳಲ್ಲಿ ನಿಖರವಾದ ಉತ್ತರಗಳಿಲ್ಲ. ಆದರೆ ಸಿಂಧೂ ನಾಗರಿಕತೆಯ ಮುಖ್ಯ ಲಾಂಛನವೆ ಎತ್ತು. ಮಹಾಭಾರತದ ಕಾಲಕ್ಕೆ ಶ್ರೀ ಕೃಷ್ಣ ಗೋಪಾಲಕನಾಗಿ ಪಶು ಸಂಸ್ಕೃತಿಯ ನಾಯಕನಾಗಿದ್ದ. ಶ್ರೀಕೃಷ್ಣನ ಸಹೋದರ ಬಲರಾಮ ಹಲಾಯುಧವನ್ನು ಹೆಗಲಿಗೇರಿಸಿ ಬೇಸಾಯ ಸಂಸ್ಕೃತಿಯ ಪ್ರತೀಕನಾಗಿದ್ದ.

ಇನ್ನು ಕರ್ನಾಟಕದಲ್ಲಿ ರೈತರಾದವರಿಗೆ ತಾವು ಹುಟ್ಟುವ ಮುಂಚೆಯೇ ಜಾನುವಾರುಗಳಿದ್ದವು, ಬೇಸಾಯವೂ ಇತ್ತು, ಉತ್ತು, ಬಿತ್ತಿ ಬೆಳೆಯುವ ಹಿರೀಕರೂ ಇದ್ದರು. ಹೀಗಾಗಿ ಬೇಸಾಯ ಕುಟುಂಬದಲ್ಲಿ ಹುಟ್ಟುವವರಿಗೆ ತಮ್ಮ ಸುತ್ತಲ ಪರಿಸರ ಮರ, ಗಿಡ, ಬೆಳೆ, ಹಕ್ಕಿ, ಪಕ್ಷಿಗಳಂತೆ ತಾವು ಸಾಕುವ ಜಾನುವಾರುಗಳು ಕೂಡ ಅನಾದಿ ಕಾಲದಿಂದಲೂ ತಮ್ಮೊಡನೆ ಇವೆ ಎಂಬ ಭಾವ. ಒಂದು ಸುಂದರವೂ, ಆರೋಗ್ಯ ಪೂರ್ಣವೂ ಆದ ಕೃಷಿ ಸಂಸ್ಕೃತಿಗೆ ಗೋವುಗಳೇ ಜೀವಾಳ.

ಒಂದು ಸಮೃದ್ಧ ಕೃಷಿ ಕುಟುಂಬ ಅಂದ ಮೇಲೆ ಅಲ್ಲಿ ಉಳುವ ಎತ್ತುಗಳಿರಬೇಕು. ದನ ಕರುಗಳಿರಬೇಕು, ಹಾಲು, ಮೊಸರು, ಬೆಣ್ಣೆ, ತುಪ್ಪ ಆ ಕುಟುಂಬದ ಆರೋಗ್ಯ ಸಂಪತ್ತು, ಆರ್ಥಿಕ ಸಂಪತ್ತು, ಸಾಮಾಜಿಕ ಸಂಪತ್ತು, ಸಾಂಸ್ಕೃತಿಕ ಸಂಪತ್ತು ಕೂಡ! 'ವೃಷಭ' – ಎತ್ತು, ನಂದಿ ಅಥವಾ ಬಸವ ಶಿವನ ವಾಹನವೆಂಬ ನಂಬಿಕೆ ನಮ್ಮ ಜನರಲ್ಲಿದೆ. ಕರ್ನಾಟಕದಲ್ಲಿ ಹಸುವನ್ನು (ಹೆಣ್ಣು) ದನ, ಆಕಳು ಎಂದು ಕರೆಯುತ್ತಾರೆ. ಧನ ಅಂದರೆ ದುಡ್ಡು (ಹಣ), ದನ ಅಂದರೆ ಹಸು. ಈ ಎರಡೂ ಸಂಪತ್ತಿನ ಸಮೀಕರಣವೆ ಹೌದು.

ಪೂರ್ಣ ಮಟ್ಟದ ಪಶು ಸಂಗೋಪನೆಯ ಕಾಲದಲ್ಲಿ ಪಶುಬಾಹುಳ್ಯವೆ ಸಂಪತ್ತಿನ ಮಾನದಂಡವಾಗಿತ್ತು. ಯಾರ್ಯಾರು ಎಷ್ಟೆಷ್ಟು ಸಂಖ್ಯೆಯಲ್ಲಿ ಹಸುಗಳನ್ನು ಹೊಂದಿದ್ದರೋ ಆ ಪ್ರಮಾಣದ ಮೇಲೆಯೇ ಅವರ ಶ್ರೀಮಂತಿಕೆಯು ನಿರ್ಧಾರವಾಗುತ್ತಿತ್ತು.

ಪ್ರಾಣಿಶಾಸ್ತ್ರಜ್ಞರು ನಮ್ಮ ದೇಸಿ ಆಕಳುಗಳನ್ನು 'ಜೆಬು' ಕುಲಕ್ಕೆ ಸೇರಿದವೆಂದು ವರ್ಗೀಕರಿಸುತ್ತಾರೆ. ನಮ್ಮ ಏಷ್ಯಾ ಮತ್ತು ಆಫ್ರಿಕಾದ ದೇಶಗಳು ಈ ಜೆಬುಕುಲದ ಆಕಳುಗಳ ಆವಾಸ. ನಮ್ಮ ನಾಡ ಹಸುಗಳ ಶರೀರ ರಚನಾ ಶಾಸ್ತ್ರ ವಿಶಿಷ್ಟ ಬಗೆಯಿಂದ ಕೂಡಿದೆ. ಇವುಗಳಲ್ಲಿ ನಿರ್ಧಿಷ್ಟವಾದ ೨೧ ಗುಣ ಲಕ್ಷಣಗಳಿವೆ. ಕಾರುಣ್ಯ ಸೂಸುವ ಕಣ್ಣುಗಳು, ವಾತ್ಸಲ್ಯ ಸೂಸುವ ಮುಖಭಾವ, ವಿವಿಧ ವಿನ್ಯಾಸಗಳ

ಕೊಂಬು, ಉತ್ತಮವಾದ ಇಣಿ (ಎದೆ ಭುಜ–ಗುಂಭ) ಸಿಂಹಕಟಿಯಂಥ ನಡು, ಸುಪುಷ್ಟವಾದ ಗಂಧೊಗಲು, ಸರ್ವಋತುಗಳಿಗೂ ಒಗ್ಗುವ ದೇಹ ಪ್ರಕೃತಿ, ಅಗತ್ಯಕ್ಕನುಗುಣವಾಗಿ ನೀಳ ಬಾಲ ಹೀಗೆ......

ಸಾಮಾನ್ಯವಾಗಿ ಹಸು ಎತ್ತುಗಳ ಸರಾಸರಿ ಆಯುಷ್ಯ ಇಂದಿಗೆ ಇಪ್ಪತ್ತು ವರ್ಷ. ೧೯೬೦ರ ಸಂದರ್ಭದಲ್ಲಿ ಅವುಗಳ ಸರಾಸರಿ ಆಯುಷ್ಯ ಮೂವತ್ತು, ಸಾಮಾನ್ಯವಾಗಿ ಹಸುಗಳ ಹಲ್ಲುಗಳು ಅವುಗಳ ಆಯುಷ್ಯ ನಿರ್ಣಯಿಸಲು ನೆರವಾಗುತ್ತವೆ. ಕರುವಿನ ಬಾಲ್ಯ ಎರಡು ವರ್ಷ. ಎರಡು ವರ್ಷ ತುಂಬುತ್ತಿದ್ದಂತೆ ಅದರ ವಯಸ್ಸು ನಿರ್ಧರಿಸುವ ಎರಡು ಹಲ್ಲುಗಳು ಬರುತ್ತವೆ. ಬಾಲ್ಯ ಕಳೆದು ಯೌವ್ವನಕ್ಕೆ ಬರುತ್ತಿದ್ದಂತೆ ನಾಲ್ಕು ಹಲ್ಲುಗಳು, ಆನಂತರ ಅದರ ೬ನೇ ವಯಸ್ಸಿಗೆ ೬ ಹಲ್ಲುಗಳು, ನಂತರದ ಎರಡು ವರ್ಷಗಳಲ್ಲಿ ಮತ್ತೆರಡು ಹಲ್ಲುಗಳು ಹೊರ ಸೂಸಿ ೮ನೇ ವಯಸ್ಸಿಗೆ ಕಾಲಿಟ್ಟವನ್ನು ಜಾಹೀರು ಪಡಿಸುತ್ತದೆ. ೮ ರಿಂದ ೧೨–೧೩ ವರ್ಷಗಳವರೆಗೆ ಅವುಗಳ ಸಾಮರ್ಥ್ಯ ವೃದ್ಧಿಯಾಗಿ; ಮುಂದಿನ ನಾಲ್ಕು ವರ್ಷ ತಮ್ಮ ಸಾಮರ್ಥ್ಯವನ್ನು ಕಾಪಾಡಿಕೊಳ್ಳುತ್ತವೆ. ನಂತರ ಹಲ್ಲುಗಳು ಸವೆಯುತ್ತಾ ಬಂದು ಇಳಿವಯಸ್ಸಿಗೆ ಜಾರುತ್ತವೆ.

ಹಸುಗಳ ಗರ್ಭಾವಸ್ಥೆಯ ಅವಧಿ ೯ ತಿಂಗಳು ೯ ದಿವಸ, ನವ ಮಾಸ ತುಂಬಿದ ತರುವಾಯ ೯ ದಿನಗಳ ಒಳಗೆ ಕರುವಿನ ಜನನ. ನೂತನ ಕರುವಿನ ಆಗಮನ ಕೃಷಿಕರಾದವರಿಗೆ ಹಿಗ್ಗು. ಹಸುವಿಗಂತೂ ತನ್ನ ಕಂದಮ್ಮನ ಕುರಿತು ಅಗಾಧ ಕಾಳಜಿ. ಹಾಲು ಹೆಚ್ಚು ಕೊಡುವ ಹಸುಗಳಲ್ಲಿ ಹೆಂಗರು (ಹೆಣ್ಣು ಕರು) ಹುಟ್ಟಿದರೆ ರೈತರಿಗೆ ಭಾರೀ ಸಂತಸ, ಅಷ್ಟಾಗಿ ಹಾಲು ಕರೆಯದ ಹಸುಗಳಲ್ಲಿ ಹೆಂಗರು ಆಗಲಿ, ಹೋರಿ ಕರುವಾಗಲಿ ಸಮ ತೂಕದ ಸಂತಸ.

೩.೧ – ಜಾನುವಾರು ವೈವಿಧ್ಯ :

ವಿಶೇಷವಾಗಿ ನಮ್ಮ ಕರ್ನಾಟಕದಲ್ಲಿ ಹಸುವಿನ ಐದು ಮುಖ್ಯ ತಳಿಗಳಿವೆ.

೧) ಹಳ್ಳಿಕಾರ್

೨) ಅಮೃತ್ ಮಹಲ್

೩) ಮಲೆನಾಡು ಗಿಡ್ಡ

೪) ಜವಾರಿ

೫) ಕೃಷ್ಣಾತೀರ (ಕೃಷ್ಣವ್ಯಾಲಿ)

ಗುಜ್ಜ ಮಾವು, ಕಾರೆಹಳ್ಳಿ ಗಿಡ್ಡ, ಆಲಂಬಾಡಿ, ಈ ಮೂರು ಬಗೆಯ ಹಸುಗಳು – ಹಳ್ಳಿ ಕಾರ್ ತಳಿಯ ಉಪಜಾತಿಗೆ ಸೇರಿವೆ. ಗುಜ್ಜಮಾವು ಮತ್ತು ಕಾರೆಹಳ್ಳಿ ಗಿಡ್ಡ ಹಸುಗಳು ನಾಗಮಂಗಲದಿಂದ ತುಮಕೂರಿನವರೆಗೆ ವ್ಯಾಪಿಸಿವೆ. ಆಲಂಬಾಡಿ ತಳಿಯ ಹಸುಗಳು ಮಲೈ ಮಹಾದೇಶ್ವರನ ಬೆಟ್ಟ ಶ್ರೇಣಿಯ ವ್ಯಾಪ್ತಿಯಲ್ಲಿ ವ್ಯಾಪಿಸಿವೆ. ಮಹಾರಾಷ್ಟ್ರದ ಉದಗೀರ್ ತಾಲ್ಲೂಕಿನ ದೇವಣಿ ಗ್ರಾಮದ ದೇವಣಿ ತಳಿ ಕರ್ನಾಟಕದ ಬೀದರ್ ಸೇರಿದಂತೆ, ಆಂಧ್ರದ ಗಡಿ ಜಿಲ್ಲೆಗಳಲ್ಲೂ ವ್ಯಾಪಿಸಿವೆ. ದೇವಣಿ ತಳಿ ಗುಜರಾತಿನ ಗಿರ್, ನಾಸಿಕ್‌ನ ಡಾಂಗಿ ಮತ್ತು ಕರ್ನಾಟಕದ ಜವಾರಿ ತಳಿಯ ಉಪತಳಿಯೆಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಹೇಳುತ್ತದೆ. ಮುಖ್ಯ ತಳಿ ಉಪತಳಿ ಸೇರಿದಂತೆ ದೇಶದಲ್ಲಿ ೩೦ ಬಗೆಯ ದೇಸೀ ತಳಿಗಳಿವೆ.

ನಮ್ಮ ನಾಟಿ ತಳಿಗಳಲ್ಲಿ ಕರಾವು ಅಥವಾ ಹೈನುಗಾರಿಕೆಗಾಗಿಯೇ ಇರುವ ಹಸುಗಳಿವೆ. ಜೊತೆಗೆ ಇತ್ತ ಕರಾವಿಗೂ ಸೈ–ಉಳುಮೆಗೂ ಸೈ ಅನ್ನುವ ಹಸುಗಳೂ ಇವೆ. ವಿಶೇಷವಾಗಿ ದುಡಿಮೆಗಾಗಿಯೇ ಮೀಸಲಾದ ಹಸು ಮತ್ತು ಎತ್ತಿನ ತಳಿಗಳಿವೆ.

೧) ಹಾಲಿನ ತಳಿಗಳು : ಸಾಹಿವಾಲ್, ಮಾಂಟ್‌ಗುಮರಿ, ಗಿರ್, ಕೆಂಪುಸಿಂಧಿ ಮತ್ತು ಥಾರ್‌ಪಾರ್ಕರ್:

೨) ಹೈನುಗಾರಿಕೆ ಮತ್ತು ಕೃಷಿ (ದುಡಿಮೆ) ತಳಿ : ದೇವಣಿ, ನಿಮಾರಿ, ಕಾಂಕ್ರೇಜ್, ಹರಿಯಾಣಿ ಒಂಗೋಲ್, ಡಾಂಗಿ, ಮೇವಾರಿ, ಸೀರೀ ಕಂಗಾಯಮ್, ಕೃಷ್ಣವ್ಯಾಲಿ, ಗೌಳಾವು, ರಾಟಿ (ರತಿ) ಹಾಸಿಹಿಸಾರ್, ಮೋಹಾನಿ, ಮಲೆನಾಡು ಗಿಡ್ಡ, ಕಾಸರಗೋಡುಗಿಡ್ಡ

೩) ಶ್ರಮದ ದುಡಿಮೆಗಾಗಿ : ಅಮೃತ್ ಮಹಲ್, ಹಳ್ಳಿಕಾರ್, ಜವಾರಿ, ಬರಗೂರ್, ಆಲಂಬಾಡಿ, ಮಾಲವಿ, ಖಿಲಾರಿ, ಖೈರೀಗಡ್, ನಾಗೌರಿ, ಭಗನಾರಿ ಧನ್ನಿ, ದಜ್ಜಲ್, ಮೇವಾರಿ ಕೆಂಕಥ, ಪೊನ್ವಾರ್, ಬಚಾರ್ ಮುಂತಾಗಿ.

೩.೨. ಹಳ್ಳಿಕಾರ್ :

ಕರ್ನಾಟಕದ ಹೆಮ್ಮೆಯ ಹಸುಗಳ / ಎತ್ತುಗಳ ಪೈಕಿ ಹಳ್ಳಿಕಾರ್‌ಗೆ ವಿಶೇಷ ಸ್ಥಾನ. ಬೇಸಾಯ ಜೀವನದ ಅವಿಭಾಜ್ಯ ಅಂಗವಾಗಿರುವ ಹಳ್ಳಿಕಾರ್ ತಳಿಯನ್ನು ರೈತನಾದವನು ತನ್ನ ಜೀವನದಿಂದ ಪ್ರತ್ಯೇಕವಾಗಿ ನೋಡಲು ಯತ್ನಿಸಲಾರ. "ರೂಪಾಯಿಬಣ್ಣ" ಅಂದರೆ ಅದು ಹಳ್ಳಿಕಾರ್ ಬಣ್ಣಕ್ಕೆ ಅನ್ವಯಿಸುವ ಮಾತು. ಹಸುವಿನ ಮೈಮೇಲೆ ಪ್ರತಿ ಬಿಳಿಕೂದಲಿಗೆ ಒಂದರಂತೆ ಒಂದು ಕಪ್ಪು ಬಣ್ಣದ ಕೂದಲೂ ಮೂಡಿರುತ್ತದೆ. ಹೀಗಾಗಿ ಹೆಚ್ಚಿನ ಹಳ್ಳಿಕಾರ್ ರೂಪಾಯಿ ಬಣ್ಣ ದಿಂದಲೇ ಕೂಡಿರುತ್ತವೆ. ಬಿಳಿ ಮತ್ತು ಕಪ್ಪು ಕೂದಲ ಅನುಪಾತದಲ್ಲಿ

ವ್ಯತ್ಯಾಸವಾದಂತೆ ಬಣ್ಣಗಳಲ್ಲೂ ವ್ಯತ್ಯಾಸ ಕಾಣಬಹುದು. ತಿಳಿ ಬೂದು, ಬಿಳಿ, ಕಪ್ಪು ಬಣ್ಣಗಳಲ್ಲಿಯೂ ಹಳ್ಳಿ ಕಾರ್‌ಗಳನ್ನು ನೋಡಬಹುದು.

ಹಳ್ಳಿಕಾರ್‌ನ ೨ ರಿಂದ ೪ರ ಪ್ರಾಯದ ಹಸುಗಳನ್ನು ಕಡಸು ಅನ್ನುತ್ತಾರೆ. ಕಡಸುಗಳ ಸ್ವಭಾವ ತೀರಾ ಲಜ್ಜಾ ಸ್ವಭಾವ. ಹಸುವಿನ ಬಾಲ್ಯ-ಕರು', ಯೌವನ ಕಡಸು, ವಯಸ್ಕ – 'ಧನ', ವಯಸ್ಸಾದಂತೆ ಮುದಿ ಹಸು ಹಾಲು ಕೊಡುವ ಹಸುಗಳು ದಿನಕ್ಕೆ ೧/೨ ಲೀಟರ್ ನಿಂದ ೩ ಲೀಟರ್‌ವರೆಗೆ ಹಾಲು ಕೊಡುತ್ತವೆ. ಕಡಸು ತನ್ನ ಮೂರನೇ ಪ್ರಾಯಕ್ಕೆ ಹೋರಿಗೆ ಬರುತ್ತದೆ ಅಥವಾ ಬೆದೆಗೆ ಬರುತ್ತದೆ.

ಬೆದೆಗೆ ಬಂದ ಕಡಸು ಅಥವಾ ಹಸುಗಳು ಸಮಾಧಾನದಿಂದ ಇರಲಾರವು. ಅವುಗಳ ಕಣ್ಣು ತುಸು ಕೆಂಪಗಾಗುತ್ತವೆ. ಕೊಟ್ಟಿಗೆಯಲ್ಲಿ ಕಟ್ಟಿದ್ದರೆ ಹಗ್ಗಕಿತ್ತುಕೊಳ್ಳಲು ಯತ್ನಿಸುತ್ತವೆ. ಪದೇ ಪದೇ ಅಂಬಾ ಅಂಬಾ ಅನ್ನುತ್ತವೆ. ಬಯಲಲ್ಲಿ ಇರುವ ಹಸುಗಳಾದರೆ ನಾಗಾಲೋಟದಿಂದ ಬಾಲ ಎತ್ತಿಕೊಂಡು ಓಡುತ್ತವೆ, ಕೆನೆಯುತ್ತವೆ, ಅಷ್ಟೇ ರಭಸದಿಂದ ಹಿಂದಕ್ಕೂ ಓಡಿ ಬರುತ್ತವೆ. ಸಿಕ್ಕ ಸಿಕ್ಕ ದನ, ಎತ್ತು, ಕರುಗಳ ಮೇಲೆಲ್ಲ ಹತ್ತಲು ಯತ್ನಿಸುತ್ತವೆ. ಈ ಸ್ವಭಾವ ಒಂದೂವರೆ ದಿವಸ ಹೀಗೆಯೇ ಮುಂದುವರಿದು ತರುವಾಯ ಶಾಂತವಾಗುತ್ತವೆ. ಬೆದೆಯ ಲಕ್ಷಣಗಳು ತಿಳಿಯುತ್ತಿದ್ದಂತೆ ಹಳ್ಳಿಗರು ಸೂಕ್ತ ಬೀಜದ ಹೋರಿ ಹುಡುಕಿ, ಹೋರಿ ಕೊಡಿಸುತ್ತಾರೆ. ಸಾಮಾನ್ಯವಾಗಿ ಗಬ್ಬದ ಹಸುಗಳನ್ನು ದುಡಿಮೆಗೆ ಹಚ್ಚುವುದಿಲ್ಲ. ಹಾಗೆಯೇ ಕರಾವು ಹಸುಗಳನ್ನು ಕೂಡ. ಹಳ್ಳಿಕಾರ್ ಹಸುಗಳಲ್ಲಿ ಹೋರಿಗರು ಅಥವಾ ಗಂಡು ಕರು ಹುಟ್ಟಿದರೆ ಮನೆ ಮಂದಿಗೆಲ್ಲ ಸಂತೋಷ, ಹಳ್ಳಿಕಾರ್ ಎತ್ತುಗಳು ದುಡಿಯುವುದರಲ್ಲಿ ಎತ್ತಿದ ಕೈ. ಲಕ್ಷಣವಾಗಿರುವ ಬೀಜದ ಹೋರಿಗಳನ್ನು ವಿಶೇಷ ಮುತುವರ್ಜಿ ವಹಿಸಿ ಪೈಲ್ವಾನನಂತೆ ಸಾಕುತ್ತಾರೆ. ಒಳ್ಳೆಯ ಬೀಜದ ತಳಿ ಸುತ್ತಳ್ಳಿಗೆಲ್ಲ ಹೆಸರುವಾಸಿಯಾಗುತ್ತದೆ. ಅದನ್ನು ಸಾಕಿದವರ ಸಾಮಾಜಿಕ ಘನತೆಯ ತೂಕವೂ ಹೆಚ್ಚುತ್ತದೆ. ಅಂಥ ಹೋರಿ ಸಾಕಿದವರ ಹೆಸರಿನ ಹಿಂದೆ ಹೋರಿಯೂ ಸೇರಿಕೊಳ್ಳುತ್ತದೆ. 'ಹೋರಿ ನಿಂಗಣ್ಣ' 'ಹೋರಿ ಕರಿಯಣ್ಣ', 'ಹೋರಿ ಬೊಮ್ಮೇಗೌಡ', 'ಹೋರಿ ಚಿಕ್ಕಹೈದಣ್ಣ' ಇತ್ಯಾದಿ, ಒಂದೊಂದು ಹೋರಿ ದಿನಕ್ಕೆ ೩-೪ ಹಸುಗಳ ಮೇಲೆ ಹತ್ತಲ್ಪಡುತ್ತವೆ. ಕೆಲವೊಮ್ಮೆ ೬ ರಿಂದ ೮ ಹಸುಗಳ ಮೇಲೆ. ಹೀಗಾಗಿ ಹೋರಿಗಳನ್ನು 'ಪೈಲ್ವಾನ್' ಮಾದರಿಯಲ್ಲೇ ಸಾಕುತ್ತಾರೆ. ಹೋರಿ ಬಿಡುವವರು ಹಿಂದೆಲ್ಲ ಎಂಟಾಣೆ, ಒಂದು ರೂ, ಎರಡೂ ರೂ. ಪಡೆಯುತ್ತಿದ್ದರು. ಈಗ ಹೋರಿ ಬಿಡಲು ೨೦೦ ರೂ.ದಿಂದ ೩೦೦ ರೂ. ನಿಗಧಿಯಾಗಿದೆ. ಬೀಜದ ಹೋರಿ ಸಾಕುವವರು ದುಡ್ಡಿನ ಆಶೆಗಾಗಿ ಅನಗತ್ಯವಾಗಿ ತಮ್ಮ ಹೋರಿಯನ್ನು ದಣಿಸುವುದಿಲ್ಲ.

ದುಡಿಮೆಗಾಗಿ ಬಳಸುವ ಎತ್ತುಗಳಿಗೆ ನಮ್ಮ ಜನ ಹಿಡ ಹೊಡೆಸುತ್ತಾರೆ. ಸಾಮಾನ್ಯವಾಗಿ ಗೆಯ್ಯಲು ತರಬೇತಿಗೆ ಅಣಿಗೊಳಿಸುವಾಗಲೇ ಅವುಗಳ ರೂಪು-

ರೇಷೆ, ಲಕ್ಷಣಗಳನ್ನು ನಿಖರವಾಗಿ ಪತ್ತೆ ಹಚ್ಚಿದ ಮೇಲೆ ಹಿಡ ಹೊಡೆಸುತ್ತಾರೆ. ಹಿಡ ಹೊಡೆಸದಿದ್ದರೆ ಹೋರಿಗಳನ್ನು ಹತೋಟಿಯಲ್ಲಿಡುವುದು, ಉಳುಮೆಗೆ ಪಳಗಿಸುವುದು ಕಷ್ಟ. ಗಾಡಿಗೆ ಹೂಡಿದ ಹೋರಿಗಳಾದರೂ ಕಡಸು ಕಂಡ ಕೂಡಲೇ ಹತ್ತಲು ಹೋಗುತ್ತವೆ. ಹೀಗಾಗಿ ಹಿಡ ಹೊಡೆಸುವುದೆಂದರೆ ನಿರ್ಬೀಜೀಕರಣ ಮಾಡುವುದು. ಕರುಗಳಿದ್ದಾಗಲೆ ಬೀಜ ಹೊಡೆಸುವುದು ಸುಲಭ. ವಯಸ್ಸು ಮೀರಿದರೆ ಬೀಜ ಹೊಡೆಸುವುದು ಎತ್ತುಗಳಿಗೂ, ರೈತರಿಗೂ ಹಿಂಸೆಯ ಕೆಲಸ. ಹಳ್ಳಿಕಾರ್ ಎತ್ತುಗಳು ೫ಟನ್ ಭಾರದ ಗಾಡಿಗಳನ್ನು ಎಳೆಯ ಬಲ್ಲವು ಮತ್ತು ಅಷ್ಟು ಭಾರದ ಗಾಡಿಯನ್ನು ೧೫ ಕಿ.ಲೋ.ಮೀಟರ್‌ವರೆಗೆ ವಿಶ್ರಾಂತಿ ಇಲ್ಲದೆ ಎಳೆಯ ಬಲ್ಲವು.

ಕೆಲಸದ ಹಸುಗಳು ಸಾಧಾರಣವಾಗಿ ಗೊಡ್ಡು ಬೀಳುವುದು ಸಹಜ. ಇವುಗಳನ್ನು 'ಗೊಡ್ಡಸ' ಎಂತಲೇ ಕರೆಯುತ್ತಾರೆ. ಮಕ್ಕಳಾಗದವರನ್ನು 'ಬಂಜೆ' ಅನ್ನುತ್ತದೆ ಸಮಾಜ. ಸಮಾಜದಲ್ಲಿ ಮಕ್ಕಳಾಗದವರಿಗೆ ಇರುವ ಸ್ಥಾನವೇ- ವ್ಯವಸಾಯದಲ್ಲಿ ಗೊಡ್ಡು ಹಸುಗಳ ಸ್ಥಾನ. ಕರುಗಳನ್ನು ಹಾಕಲಿಲ್ಲ ಅನ್ನುವುದೊಂದನ್ನು ಬಿಟ್ಟರೆ ಎತ್ತುಗಳಿಗೆ ಸಮನಾಗಿಯೇ ದುಡಿಯುವ ಶಕ್ತಿಯನ್ನು ನಾವು ಗೊಡ್ಡು ಹಸುಗಳಲ್ಲಿ ಗುರುತಿಸಬಹುದು.

ಹಳ್ಳಿಕಾರ್ ಹಸು, ಎತ್ತುಗಳು ತಮ್ಮನ್ನು ಸಾಕುವವರ ಮೇಲೆ ಬಹಳವಾಗಿ ಅವಲಂಬನೆ ಇಟ್ಟು ಕೊಳ್ಳುತ್ತವೆ ಮತ್ತು ಆಳವಾಗಿ ಹಚ್ಚಿಕೊಳ್ಳುತ್ತವೆ. ಹಸು/ಎತ್ತುಗಳ ಕೊಂಬು ನೇರವಾಗಿಯೂ ಚೂಪಾಗಿಯು ಇರುತ್ತದೆ. ಕಣ್ಣುಗಳು ತೀಕ್ಷ್ಣವಾಗಿರುತ್ತವೆ. ಕಷ್ಟ ಬಂದಾಗ ವೇಗವಾಗಿ ಬುಸುಗುಡುತ್ತವೆ. ಕೆಲವು ಹಸುಗಳಿಗೆ ವಿಪರೀತ ಕ್ಯಾಣ. ಅಂಥ ಕ್ಯಾಣದ ಹಸುಗಳನ್ನು ಸುಲ್ತಾನ್ ಟಿಪ್ಪು ತಮ್ಮ ಸೈನ್ಯಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದುದರ ಬಗ್ಗೆ ಉಲ್ಲೇಖಗಳಿವೆ. ಹೈದರ್ ಮತ್ತು ಟಿಪ್ಪು ಅಮೃತ್ ಮಹಲ್ ತಳಿಗೆ ಎಷ್ಟು ಪ್ರಾತಿನಿಧ್ಯ ನೀಡಿದ್ದರೋ ಅಷ್ಟೇ ಪ್ರಾತಿನಿಧ್ಯವನ್ನು, ತೀಕ್ಷ್ಣ ಕಣ್ಣುಳ್ಳ, ಚೂಪಾದ ಕೊಂಬುಳ್ಳ, ಕ್ಯಾಣದ ಹಳ್ಳಿಕಾರ್ ಗಳನ್ನು ಆಯ್ಕೆ ಮಾಡಿ ತರಬೇತಿ ನೀಡುತ್ತಿದ್ದರು. ವಿಶೇಷವಾಗಿ ತಿವಿಯುವ ಹಳ್ಳಿಕಾರ್‌ಗಳಿಗೆ, ಶತ್ರುಗಳನ್ನು ತಿವಿಯುವಂತೇ ತರಬೇತಿ ನೀಡುತ್ತಿದ್ದರಂತೆ. ಜೊತೆಗೆ ಅತಿಯಾದ ಸಿಟ್ಟು ಭರಿಸುವುದಕ್ಕಾಗಿಯೇ ನಾಗರ ಹಾವಿನ ಪೊರೆಯನ್ನು ಮೇವಿನ ಜೊತೆ ತಿನ್ನಿಸುತ್ತಿದ್ದರೆಂಬುದಾಗಿ ಹಳ್ಳಿಗಳಲ್ಲಿ ಮಾತಾಡಿಕೊಳ್ಳುತ್ತಾರೆ.

ಹಳ್ಳಿಕಾರ್ ಹಸು/ಎತ್ತುಗಳಲ್ಲಿ ಶೇಕಡಾ ೫೦ ರಷ್ಟು ಪೊಸೆಸಿವ್ ಸ್ವಭಾವವುಳ್ಳವು. ಇವು ತಮ್ಮ ನೆಚ್ಚಿನ ಒಡೆಯ/ಒಡತಿ ಅಥವಾ ನಿಗಾ ನೋಡಿಕೊಳ್ಳುವವರ ಹೊರತಾಗಿ ಇತರ ಯಾರನ್ನೂ ಹತ್ತಿರ ಸುಳಿಯಗೊಡುವುದಿಲ್ಲ. ಅಪರಿಚಿತರು/ತಮಗಾಗದವರು ಅಥವಾ ಬೇರೆಯವರನ್ನು ತಿವಿಯಲು, ಒದೆಯಲು, ಕೆಕ್ಕರಿಸಿ ನೋಡಲು, ಬುಸುಗುಡಲು ಯತ್ನಿಸುತ್ತವೆ. ತನ್ನ ಸಲುಗೆಯಿಂದ ಹೊರತಾದ ಯಾರನ್ನೂ ಇತರ ಕರುಗಳನ್ನೂ ಸಹ ಹತ್ತಿರ ಬಿಟ್ಟುಕೊಡುವುದಿಲ್ಲ. ಹಳ್ಳಿಕಾರ್

ಹಸುವಿಗೆ ತನ್ನ ತಾಯಿ, ತನ್ನ ಅಕ್ಕ, ತನ್ನ ಅಣ್ಣ, ತನ್ನ ತಮ್ಮ, ತನ್ನ ಕರುಗಳು- ಇವೇ ಅವರ ಬಳಗ ಜೊತೆಗೆ ತನ್ನ ಯಜಮಾನ ಮತ್ತು ತನ್ನನ್ನು ಮುದ್ದಿಸುವವರು.

ಇಂಥ ಹಸುಗಳು ಆಕಸ್ಮಿಕವಾಗಿ ಕೊಟ್ಟಿಗೆಯಿಂದ ಹಗ್ಗ ಕಿತ್ತುಕೊಂಡು ಹೋದರೆ ಅದನ್ನು ನಿಯಂತ್ರಿಸಿ ಕರೆತರಲು ಅದರ ನಿಗಾವಹಿಸುವವರೇ ಆಗಿರಬೇಕು. ಅದು ನಿರ್ದಿಷ್ಟಪಡಿಸಿಕೊಂಡವರೇ ಅದರ ಹಾಲು ಕರೆಯಬೇಕು. ಹೀಗಾಗಿಯೇ ಹಳ್ಳಿಕಾರ್ ಪ್ರಾಚೀನ ತಳಿಯಾದರೂ ಅದು ತನ್ನ ಸೀಮಿತ ಪ್ರದೇಶದಿಂದ ವಿಸ್ತರಿಸಲು ಸಾಧ್ಯವಾಗಲಿಲ್ಲ. ಮುಂಚಿನಿಂದಲೂ ಅದರ ಸಾಮ್ರಾಜ್ಯ ಹಳೇ ಮೈಸೂರು ಪ್ರಾಂತ್ಯ!

ಮೈಸೂರು ಚಾಮರಾಜನಗರ, ಮಂಡ್ಯ, ಹಾಸನ, ರಾಮನಗರ, ಬೆಂಗಳೂರು, ಕೋಲಾರ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ ಹಳ್ಳಿಕಾರ್ ತಳಿಯ ಸಾಮ್ರಾಜ್ಯ. ತನಗೆ ಒಗ್ಗದ ಕೆಲಸ, ಒಗ್ಗದ ಪರಿಸರ, ಒಗ್ಗದ ಮಾಲೀಕ ಇಂಥ ಸಂದರ್ಭಗಳಲ್ಲಿ ಹಳ್ಳಿಕಾರ್ ಸಂತತಿಯ ಏಕೈಕ ಪ್ರತಿಭಟನೆ ಮೈಗಳ್ಳವಾಗುವುದು. ಇಂಥ ಅನಂತ ವೈಚಿತ್ರ್ಯಗಳನ್ನಿಟ್ಟುಕೊಂಡು ಈಗಲೂ ತಾರುಣ್ಯ ಸೂಸುವ ಹಳ್ಳಿಕಾರ್ ನಿಜಕ್ಕೂ ಭರವಸೆಯ ತಳಿ.

ಹಳ್ಳಿಯ ಹೆಣ್ಣು ಮಕ್ಕಳು ತಮ್ಮ ಚೊಚ್ಚಲ ಹೆರಿಗೆಗಾಗಿ ತವರು ಮನೆಗೆ ಹೋಗುವುದು ವಾಡಿಕೆ. ಕೂಸು ಹೆತ್ತು ಬಾಣಂತನ ಮುಗಿಸಿ ಗಂಡನ ಮನೆಗೆ ಬರುವಾಗ "ಕರಾವು"ಗಾಗಿಯೇ ಎಮ್ಮೆ ಅಥವಾ ಹಸು ಉಡುಗೊರೆಯಾಗಿ ಬರುತ್ತಿತ್ತು. ಈ ಹಸು ಅಥವಾ ಎಮ್ಮೆ ಅವರ ಸಂಗಡವೇ ಬರುವ ಆ ಕರು ಆ ಹೆಣ್ಣು ಮಗಳಲ್ಲಿ ಅಪಾರ ಭರವಸೆಯನ್ನು ಮೂಡಿಸುತ್ತಿದ್ದವು. ತವರು ಕುರಿತಾಗಿ ಆಕೆಯಲ್ಲಿ ಆಪಾರ ಧನ್ಯತೆ ಮತ್ತು ಕೃತಜ್ಞತೆ. ಆಕೆ ತವರಿಂದ ಗಂಡನ ಮನೆಗೆ ಹೋಗುವಾಗಿನ ದೃಶ್ಯ ನಮ್ಮ ಜಾನಪದರ ಬಣ್ಣನೆಯಲ್ಲಿ ಹೀಗಿದೆ.

"ತೊಟ್ಟಿಲ ಹೊತ್ಕೊಂಡು ತೌರ್ಬಣ್ಣ ಉಟ್ಟುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು – ತಂಗ್ಯಮ್ಮ
ತಿಟ್ಹತ್ತಿ ತಿರುಗಿ ನೋಡ್ಯಾಳು."೧

ಹೀಗೆ ತವರು ಮನೆಯಿಂದ ಬಂದ 'ಕರಾವು' ಬಳುವಳಿ ಆಕೆಗೆ ನಿಜಸಂಪತ್ತು. ಆ ಹಸುವಿನ ಅಥವಾ ಎಮ್ಮೆಯ ಹಾಲು ಕೇವಲ ಹಾಲಲ್ಲ; ಅದು ತನ್ನ ಕಂದನಿಗಾಗಿ ತವರು ಮನೆಯಿಂದ ಬಂದ ಅಮೃತ, ತಾಯಿಯ ಹಾಲಿನಷ್ಟೇ ಸತ್ವ ಹಸುವಿನ ಹಾಲಿಗೂ ಇದೆ ಎಂಬುದು ನಮ್ಮ ಹಳ್ಳಿಗರ ತಿಳುವಳಿಕೆ. ಹಾಲು-ಅನ್ನ; ಅದು ಶಕ್ತಿ ನೀಡುತ್ತದೆ, ಅದು ಮನಸ್ಸನ್ನು ಪವಿತ್ರಗೊಳಿಸುತ್ತದೆ.

ಹೀಗಾಗಿ ಹಳ್ಳಿಯ ಯಾವ ಮನಸ್ಸಿಗೂ ಹಸುವನ್ನು ಹೊರಗಿನಿಂದ ನೋಡಲು ಸಾಧ್ಯವಿಲ್ಲ. ಹಸು ತನ್ನ ಗುಣ-ಸ್ವಭಾವಗಳನ್ನು ಹಾಲಿನ ಮೂಲಕ

ನೀಡುತ್ತದೆ. ಆ ಹಾಲು ಕುಡಿದವರ ಆಂತರ್ಯ ಹಸುವಿನ ಹೃದಯದಲ್ಲಿ ಮಿಳಿತವಾಗುತ್ತದೆ.

ಹಳ್ಳಿಯ ಹೆಣ್ಣುಮಕ್ಕಳು ತವರಿನಿಂದ ಬಂದ ಕರಾವುಗಳನ್ನು ಎಷ್ಟೇ ಕಷ್ಟ ಬಂದರೂ ಮಾರಾಟ ಮಾಡಲು ಬಿಡುವುದಿಲ್ಲ. ಅದು ಆಕೆಯ ಜೊತೆಗೆ ಬಂದ ತವರು ಸಂಬಂಧ, ಬಾಂಧವ್ಯ, ಭಾಗ್ಯ ಎಲ್ಲವೂ. ತವರಿನ ನೆನಪಾಗಿ, ಕನಸ್ಸಾಗಿ, ಅದನ್ನಾಕೆ ವಿಸ್ತರಿಸಿ ಬೆಳೆಸಲೆತ್ನಿಸುತ್ತಾಳೆ. ಒಂದರ ಹಿಂದೆ ಒಂದು ಕರು ಹಾಕಿಸಿ ಅದರ ದೊಡ್ಡ ಸಂತತಿಯನ್ನೇ ರೂಪಿಸುತ್ತಾಳೆ. ಪ್ರಧಾನವಾಗಿ ಈ ಬಾಂಧವ್ಯವೇ ನಮ್ಮಲ್ಲಿ ಹೈನುಗಾರಿಕೆ ಸಮೃದ್ಧವಾಗಿ ಬೆಳೆಯಲು ಕಾರಣ.

ದಕ್ಷಿಣ ಕರ್ನಾಟಕದಲ್ಲಿ ಹಸುವಿನ ಹಾಲಿಗೆ ಇರುವ ಮಹತ್ವ ಎಮ್ಮೆಯ ಹಾಲಿಗೆ ಇಲ್ಲ. ಎಮ್ಮೆಯ ಹಾಲು ತುಸು ಮಂದ. ಎಮ್ಮೆ ಹಸುವಿನಷ್ಟು ಚುರುಕಲ್ಲ. ಅದರ ಸ್ವಭಾವ ನಿಧಾನವೇ ಪ್ರಧಾನ. ಜೊತೆಗೆ ಹಸುವಿಗಿಂತ ತೀರಾ ಸಾಧು. ಸಾಮಾನ್ಯವಾಗಿ ಎಮ್ಮೆ ಸವಾರಿ ಹಳ್ಳಿಗಳಲ್ಲಿ ಸಹಜ ಸೊಬಗು. ಜಾನುವಾರು ಮೇಯಿಸಲು ಹೋಗುವ ಹುಡುಗರು / ಹುಡುಗಿಯರು ಎಮ್ಮೆ ಮೇಲೆಯೇ ಕುಳಿತು ಹೋಗುವುದು.

ಬೇಸಾಯ ಸಂಸ್ಕೃತಿಯಲ್ಲಿ ಹಸು/ಎಮ್ಮೆ ಸಾಕುವುದು ರಗಳೆಯ ಕೆಲಸವಲ್ಲ. ಅದು ಬೇಸಾಯ ಜೀವನದ ಅವಿಭಾಜ್ಯ ಅಂಗ. ಉಳಿದವರಿಗೆ ಎಮ್ಮೆ/ಹಸು ಸಾಕುವುದು ಎಷ್ಟು ಕಷ್ಟ ಅನ್ನುವುದನ್ನು ಈ ಪ್ರಸಂಗಗಳ ಮೂಲಕ ಕಾಣಬಹುದು.

ಮಲೆನಾಡಿನ ರೈತಾಪಿ ಹಿನ್ನೆಲೆಯವರಾದ ನಮ್ಮ ರಾಷ್ಟ್ರ ಕವಿ ಕುವೆಂಪುರವರು; ನಾನಾ ಕಾರಣಗಳಿಗಾಗಿ ಮೈಸೂರಿನ ತಮ್ಮ 'ಉದಯರವಿ' ಯಲ್ಲಿ 'ಕರಾವು' ಸಾಕಲು ತೀರ್ಮಾನಿಸುತ್ತಾರೆ. ಅವರ ಮಗ ಪೂರ್ಣಚಂದ್ರ ತೇಜಸ್ವಿ ತಮ್ಮ **"ಅಣ್ಣನ ನೆನಪು"** ಕೃತಿಯಲ್ಲಿ ಅದರ ನೆನಪು ಮಾಡಿಕೊಂಡಿದ್ದಾರೆ.

". . . . ಈ ಚಿಲ್ಲರೆ ಪಂಚಾಯ್ತಿಗಳ ಬಗ್ಗೆ ಎಲ್ಲಾ ಅಣ್ಣ ಎಷ್ಟೇ ನಿರ್ಲಿಪ್ತರಾಗಿ ದೂರ ಇದ್ದರೂ ಪ್ರತಿದಿನ ಹಾಲಿನ ಸಂಬಂಧವಾಗಿ ನಡೆಯುತ್ತಿದ್ದ ಅಮ್ಮನ ವ್ಯವಹಾರಗಳನ್ನು ಸಂಪೂರ್ಣ ಅಲಕ್ಷಿಸಲಾಗುತ್ತದೆಯೆ? ಒಂದು ದಿನ ಮಾದಮ್ಮ ಎಮ್ಮೆ ಹೊಡೆದುಕೊಂಡು ಬರದೆ ಹಾಗೇ ಹಾಲು ತಂದುಕೊಟ್ಟಳು. ಅಮ್ಮ ಏಕೆಂದು ಕೇಳಿದ್ದಕ್ಕೆ ಅವಳ ಎಮ್ಮೆಯ ಕರು ಸತ್ತು ಹೋಯ್ತೆಂದೂ, ಕರು ಇಲ್ಲದಿದ್ದರೆ ಎಮ್ಮೆ ಹಾಲು ಕೊಡುವುದಿಲ್ಲವಾದ್ದರಿಂದ ಅವಳ ಹಟ್ಟಿಯ ಪಕ್ಕದವರ ಕರು ತಂದು ಕಟ್ಟಿ ಹಾಲು ಕರೆಯುತ್ತಿದ್ದೇನೆಂದು ಹೇಳಿದ್ದಳು. ಅಮ್ಮನಿಗೆ ಅವಳ ವಿವರಣೆ ಪೂರ್ವಯೋಜಿತ ಸಂಚಿನಂತೆನ್ನಿಸಿ, ಹಾಲು ಇನ್ನೂ ಹೆಚ್ಚು ನೀರಾಗಿ ಕಂಡಿತೇನೋ! ಮನೆಯ ಹತ್ತಿರ ಹಾಲು ಕರೆದುಕೊಡುವುದಿದ್ದರೆ ಮಾತ್ರ ಹಾಲು ಕೊಳ್ಳುವುದಾಗಿ ಮಾದಮ್ಮನಿಗೆ ಹೇಳಿದರು.

ಮಾರನೆ ದಿನ ಬೆಳಿಗ್ಗೆ ಎದ್ದಾಗ ನನಗೊಂದು ಆಘಾತಕಾರಿ ದೃಶ್ಯ ಕಾದಿತ್ತು. ಮಾದಮ್ಮ ಹಾಲು ಕರೆಯಲು ಎಮ್ಮೆಯನ್ನೇನೋ ತಂದಿದ್ದಳು. ಆದರೆ ಕರು ಇಲ್ಲದೆ ಎಮ್ಮೆ ಹಾಲು ಕೊಡುವುದಿಲ್ಲವಾದ್ದರಿಂದ ಅವಳು ಸತ್ತ ಕರುವಿನ ಚರ್ಮ ಸುಲಿಸಿ ಅದರೊಳಗೆ ಹುಲ್ಲು ತುಂಬಿ ಹೊಲಿಸಿ ಒಂದು ಅಸಹ್ಯವಾದ ಕರುವಿನ ಗೊಂಬೆ ಮಾಡಿ ಹೊತ್ತು ತಂದಿದ್ದಳು. ಆ ಗೊಂಬೆಯ ಗುಳಿಬಿದ್ದ ಕಣ್ಣು ಬಾಯಿಗಳಿಂದೆಲ್ಲಾ ಹುಲ್ಲು ಹೊರಚಾಚಿಕೊಂಡು ಅದು ಹೊಸ ಮನೆಗಳೆದುರು ಕಟ್ಟುವ ದೃಷ್ಟಿ ಬೊಂಬೆಯಂತೆ ವಿಕಾರವಾಗಿ ಕಾಣುತ್ತಿತ್ತು. ಎಮ್ಮೆ ಅದನ್ನೇ ತನ್ನ ಕರುವೆಂದು ಪರಿಭಾವಿಸಿ ನೆಕ್ಕುತ್ತಾ ಹಾಲು ಕೊಡುತ್ತಿತ್ತು. ಅಣ್ಣನಿಗೆ ಬೆಳಿಗ್ಗೆ ಎದ್ದು ಈ ಕರುಣಾಜನಕ ದೃಶ್ಯ ನೋಡುವುದು ಎರಡೇ ದಿನಕ್ಕೆ ಅಸಹನೀಯವಾಯ್ತೆಂದು ತೋರುತ್ತದೆ. ಮೂರನೆಯ ದಿನ ಮಾದಮ್ಮನಿಗೆ "ನೀನು ಹಟ್ಟಿಯಿಂದಲೇ ಹಾಲು ಕರೆದು ತಂದು ಕೊಡು, ಇಲ್ಲಿಗೆ ಎಮ್ಮೆ ಹೊಡಕೊಂಡು ಬರುವ ಅಗತ್ಯವಿಲ್ಲ" ಎಂದು ಹೇಳಿ ಬಿಟ್ಟರು.

ಅಮ್ಮನ ಕಷ್ಟ ಅಮ್ಮನಿಗೇ ಗೊತ್ತು. ಹೇಗೋ ಕಷ್ಟಪಟ್ಟು ಮನೆ ಬಳಿ ಹಾಲು ಕರೆದುಕೊಡುವ ಏರ್ಪಾಡು ಮಾಡಿದ್ದರೆ ಅಣ್ಣ ಏಕಾಏಕಿ ಹೀಗೆ ಮಾಡಿದರಲ್ಲ ಎನ್ನಿಸಿ ನೀರು ಹಾಲಿನ ವಿಷಯ ಎಲ್ಲ ಹೇಳಿ ಜಗಳ ಶುರುಮಾಡಿದರು. ಅಣ್ಣ ಆಗ "ನೋಡು ದುಡ್ಡಿನ ಆಸೆಗೋ, ಹೊಟ್ಟೆ ಪಾಡಿಗೋ ಅವಳು ಅದರ ಕರುವಿಗೆ ಕೊಂಚವೂ ಹಾಲು ಕುಡಿಯಲು ಬಿಡದೆ ಹಲವಾರು ಮನೆಗಳಿಗೆ ಹಾಲು ಕರೆದುಕೊಟ್ಟು ಕರು ಸತ್ತಿರಬಹುದು. ನಿಮಗೆಲ್ಲಾ ಅವಳು ಅಳೆದುಕೊಡುವ ಹಾಲು ನೋಡಿದಾಗ ಅದರಲ್ಲಿ ಸೇರಿಸಿರುವ ನೀರು ಜ್ಞಾಪಕಕ್ಕೆ ಬಂದರೆ, ನನಗೆ ಅದರ ಕರುವಿನ ಕರುಣಾಜನಕ ಸ್ಥಿತಿ ನೆನಪಿಗೆ ಬರುತ್ತದೆ. ನೀರು ಹಾಲು ಕುಡಿದರೂ ಪರ್ವಾಗಿಲ್ಲ. ಆ ಕೈಕಾಲು ಸೆಟೆದುಕೊಂಡ ಕರುವಿನ ಗೊಂಬೆ ನೆಕ್ಕುತ್ತಾ ಎಮ್ಮೆ ಹಾಲು ಕರೆಯುವ ದೃಶ್ಯ ದಿನಾ ಬೆಳಿಗ್ಗೆ ಎದ್ದು ನೋಡುವುದು ಬೇಡ" ಎಂದರು. ಅಣ್ಣ ಹಾಗೆ ಹೇಳಿದ ಮೇಲೆ ಅಮ್ಮನ ಅಂತಃಸ್ಸಾಕ್ಷಿ ಕುಟುಕಿದಂತಾಗಿ ಮನೆ ಹತ್ತಿರ ಹಾಲು ಕರೆದುಕೊಡುವ ವಿಚಾರಕ್ಕೇ ವಿದಾಯ ಹೇಳಿದರು. ಆದರೆ ಹಾಲಿನ ಬಗ್ಗೆಯ ಅಮ್ಮನ ಆಕ್ಷೇಪಣೆಗಳು ಮುಂದುವರಿದೇ ಇದ್ದವು. ಆಗಾಗ ಮನೆಗೆ ಹಾಲು ತಂದುಕೊಡುವ ವರ್ತನೆಯವರನ್ನು ಬದಲಾಯಿಸುತ್ತಲೇ ಇದ್ದರು. ಹಾಲು ಕೊಡುವವರೂ ಅಷ್ಟೆ, ನಾಲ್ಕು ದಿನ ಒಳ್ಳೆ ಹಾಲು ಕೊಟ್ಟವರು ಆಮೇಲೆ ನಿಧಾನವಾಗಿ ನೀರು ಸೇರಿಸಲು ಶುರು ಮಾಡುತ್ತಿದ್ದರು. ಹೀಗಾಗಿ ಅಣ್ಣ ಕೊನೆಗೆ ಒಂದು ದಿನ ಅಮ್ಮನ ದನ ಸಾಕುವ ಯೋಜನೆಗೆ ಸಮ್ಮತಿಸಲೇ ಬೇಕಾಯ್ತು.

ಆದರೆ ಅದು ಬಾಣಲೆಯಿಂದ ಬೆಂಕಿಗೆ ಹಾರಿದಂತಾಯ್ತೆ ಹೊರತು ಯಾವ ಸಮಸ್ಯೆಗಳೂ ಪರಿಹಾರವಾಗಲಿಲ್ಲ. ಬೋರಮ್ಮನೂ, ಬೋರಮ್ಮನ ಗಂಡನೂ, ಕುಂಬಾರ ಕೊಪ್ಪಲಿಗೆ ಹೋಗಿ ಒಂದು ಎಮ್ಮೆ ಇನ್ನೂರು ರೂಪಾಯಿಗೆ ವ್ಯಾಪಾರ

ಮಾಡಿ ತಂದರು. ನಮ್ಮ ಮನೆ ಹಿಂದುಗಡೆ ಇದ್ದ ಶೆಡ್ಡಿನ ಪಕ್ಕ ಅಣ್ಣ ಒಂದು ಕೊಟ್ಟಿಗೆ ಕಟ್ಟಿಸಿದರು. ಆ ಕೊಟ್ಟಿಗೆಗೆ ಹುಲ್ಲು ದಾಸ್ತಾನು ಮಾಡಲು ಒಂದು ಅಟ್ಟ ಸಹ ಇತ್ತು. ನಮ್ಮ ಮನೆಯ ಪರಿಸ್ಥಿತಿ ಮತ್ತು ನಮ್ಮ ಜೀವನ ಕ್ರಮಗಳು ಅಮ್ಮನ ತವರು ಮನೆಯಲ್ಲಿದ್ದಂತೆ ಖಂಡಿತಾ ಇರಲಿಲ್ಲ. ಅಲ್ಲಿದ್ದ ಅಸಂಖ್ಯ ಆಳುಕಾಳುಗಳು, ಗದ್ದೆ ತೋಟಗಳು, ಒಂದೂ ಇಲ್ಲದ ನಾವು ಪೇಟೆಯಲ್ಲಿ ದನ ಕಟ್ಟಿಕೊಂಡು ಏಗಬೇಕಾದ ತೊಂದರೆಗೆ ಸಿಕ್ಕಿಕೊಂಡೆವು. ನೀರು ಸೇರಿಸದ ಹಾಲಿಗಾಗಿ ದನ ಕಟ್ಟಿಕೊಂಡು ಅಮ್ಮ ಪಡುತ್ತಿದ್ದ ಪಾಡು, ಕಷ್ಟ, ನನ್ನ ಮನಸ್ಸಿನ ಮೇಲೆ ಎಂಥ ಪರಿಣಾಮ ಬೀರಿತೆಂದರೆ ನನ್ನ ಜೀವಮಾನದಲ್ಲಿ ಎಷ್ಟೇ ನೀರು ಹಾಲು ಕುಡಿದರೂ ಚಿಂತೆಯಿಲ್ಲ, ದನ ಎಮ್ಮೆ ಮಾತ್ರ ಕಟ್ಟಬಾರದೆಂದು ಚಿಕ್ಕವನಿದ್ದಾಗಲೇ ತೀರ್ಮಾನಿಸಿದೆ".

ಬೇಸಾಯ ಜಗತ್ತಿನ ಹೊರಗೆ ಹಸು/ಎಮ್ಮೆಗಳನ್ನು ನಿಭಾಯಿಸುವುದೆಷ್ಟು ಕಷ್ಟ ಅನ್ನುವುದನ್ನು ಮೇಲಿನ ಪ್ರಕರಣ ನಿರೂಪಿಸುತ್ತದೆ.

೩.೩ ಬೆಣ್ಣೆ ಚಾವಡಿ ಮತ್ತು ಅಮೃತ್ ಮಹಲ್

ಕರ್ನಾಟಕದ ಮತ್ತೊಂದು ಹೆಮ್ಮೆಯ ತಳಿ ಅಮೃತ್ ಮಹಲ್, ಅಪ್ಪಟ ಮೃಗೀಯ ಶಕ್ತಿಯ ಈ ತಳಿಹೆಚ್ಚು ಕಾಲ ಹಿಂಡು ಹಿಂಡಾಗಿ ಅರಣ್ಯಗಳಲ್ಲಿ ಬಾಳುವೆ ನಡೆಸಿದೆ. ಮೈಸೂರಿನ ಹಿಂದಿನ ಅರಸರು ಈ ತಳಿಯ ಉತ್ತಮ ಹಸುಗಳನ್ನು ಹೈನುಗಾರಿಕೆಗಾಗಿಯೇ ಆಯ್ಕೆ ಮಾಡಿದರು. ಇದರಿಂದಾಗಿ ಹಾಲಿನ ಇಳುವರಿ ಅಧಿಕವಾಗಿ ಚಿಕ್ಕದೇವರಾಜ ಒಡೆಯ (ಕ್ರಿ.ಶ. ೧೬೭೨-೧೭೦೪) ತನ್ನ ಆಡಳಿತಾವಧಿಯಲ್ಲಿ 'ಬೆಣ್ಣೆ ಚಾವಡಿ' ಸ್ಥಾಪಿಸಿದರು. ಈ ಬೆಣ್ಣೆ ಚಾವಡಿ ಅರಮನೆಗೆ ಸೇರಿದ ಜಾನುವಾರು ಉಸ್ತುವಾರಿಯನ್ನಷ್ಟೇ ಅಲ್ಲದೆ ಸಮಗ್ರ ಮೈಸೂರು ರಾಜ್ಯದ ಜಾನುವಾರು ಇಲಾಖೆಯಾಗಿಯೂ ಕೆಲಸ ಮಾಡಿತು.

ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಅಮೃತ್ ಮಹಲ್ ತಳಿ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಯಿತು. ಟಿಪ್ಪು ನಂತರ ಬ್ರಿಟೀಷರು ಈ ತಳಿಯ ವಿಶೇಷಗಳ ಬಗ್ಗೆ ಅಧ್ಯಯನ ನಡೆಸಿ ಮತ್ತಷ್ಟು ಅಭಿವೃದ್ಧಿಗೆ ಕಾರಣರಾದರು. ನಿರಂತರ ರಾಜಾಶ್ರಯ ಸಿಕ್ಕ ಕಾರಣ "ಅಮೃತ್ ಮಹಲ್ ಕಾವಲ್" ಎಂಬ ಸಾವಿರಾರು ಎಕರೆ ವಿಸ್ತೀರ್ಣದ ಜಾಗಗಳನ್ನು ಗೋಮಾಳಗಳಾಗಿ ಮೀಸಲಿಡಲಾಯ್ತು.

ಈ ತಳಿಗೆ ಅಮೃತ್ ಮಹಲ್ ಅಂತ ಹೆಸರಿಟ್ಟವರು ಟಿಪ್ಪು ಸುಲ್ತಾನ್, ಅದಕ್ಕೂ ಮುಂಚೆ ಇವನ್ನು 'ದೊಡ್ಡದನ' 'ಬೆಣ್ಣೆ ಚಾವಡಿ' ಎಂದೇ ಕರೆಯಲಾಗುತ್ತಿತ್ತು. ರಭಸವಾಗಿ ಓಡುವ, ನುಗ್ಗುವ, ಭಾರ ಎಳೆಯುವುದರಲ್ಲಿ ಅಸಾಧಾರಣ ಸಾಮರ್ಥ್ಯ ಪ್ರದರ್ಶಿಸುತ್ತಿದ್ದ ಈ ಹಸು/ಎತ್ತುಗಳನ್ನು ಹೈದರ್ ಮತ್ತು ಟಿಪ್ಪು ಸುಲ್ತಾನ್ ತಮ್ಮ

ಸೈನ್ಯದ ಭಾಗವಾಗಿಸಿಕೊಂಡಿದ್ದರು. ದಿವಸಕ್ಕೆ ೧೦೦ ಮೈಲಿ ಕ್ರಮಿಸುವ ವೇಗ ಈ ತಳಿಗೆ ಇದ್ದ ಕಾರಣವಾಗಿಯೇ ಆಹಾರ ಸಾಮಾಗ್ರಿ, ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಇವು ಬಳಕೆಯಾಗುತ್ತಿದ್ದವು. ಕ್ಷಿಪ್ರಗತಿಯ, ಆಕ್ರಮಣಗಳನ್ನು ಟಿಪ್ಪು ಯಶಸ್ವಿಯಾಗಿ ನಿಭಾಯಿಸುತ್ತಿದ್ದದ್ದು ಅಮೃತ್ ಮಹಲ್ ನೆರವಿನಿಂದಲೇ, ಇಂದಿಗೂ ಈ ತಳಿಯ ಉತ್ತಮ ಎತ್ತು ಹಸುಗಳಿಗೆ ಭಾರೀ ಬೇಡಿಕೆ ಇದೆ. ಕೆಲವು ಶ್ರೀಮಂತ ಹಳ್ಳಿಗರಿಗೆ ಅಮೃತ್ ಮಹಲ್ ಸಾಕುವುದೇ ಒಂದು ಖಯ್ಯಾಲಿ ಮತ್ತು ಹೆಗ್ಗಳಿಕೆ.

ಅಪರಿಚತರನ್ನು ಹತ್ತಿರ ಸುಳಿಯಗೊಡದ ಅಮೃತ್ ಮಹಲ್ ಪರಿಚಿತರನ್ನು ಅಪರಾತ್ರಿಯಲ್ಲು ಗುರುತಿಸಬಲ್ಲದು. ಅತ್ಯಧಿಕ ರೋಷ ಮತ್ತು ಶ್ರಮದ ದುಡಿಮೆ ಇದರ ತ್ರಾಣ. ಅತ್ಯಂತ ನಂಬಿಕಸ್ಥ ಹಸು/ಎತ್ತು. ಗುಂಪಿನಲ್ಲಿ, ಹಿಂಡು–ಹಿಂಡಾಗಿ ಮೇಯುವುದರಲ್ಲಿ ಆಸಕ್ತಿ, ಬಿಳಿ, ಬೂದು, ಕಪ್ಪು ಬಣ್ಣಗಳಲ್ಲಿ ಮಿಂಚುವ ರೋಮಗಳಲ್ಲಿ, ತೇಜೋಮಯವಾದ ಕಣ್ಣುಗಳಲ್ಲಿ; ಬುಸುಗುಡುವ ಫೋಟೋ ಫಿನಿಷ್ ಆಕೃತಿಗಳಲ್ಲಿ ಇವು ಕಂಗೊಳಿಸುತ್ತವೆ. ಹೆಂಗಸರು, ಮಕ್ಕಳು, ಯಜಮಾನ, ಆಳು. . . . ಆಪ್ತವಾಗಿರುವ ಎಲ್ಲರನ್ನು ಇವು ಒಗ್ಗಿಸಿಕೊಳ್ಳುತ್ತವೆ. ಉತ್ತಮ ಮೇವು ಸಿಕ್ಕರೆ ಮೈದುಂಬಿ ಬೆಳೆಯುತ್ತವೆ.

ಅಮೃತ್ ಮಹಲ್ ಎತ್ತುಗಳು ಸದಾ ಕೊಬ್ಬಿರುವ ಗೂಳಿಯ ತರ ಕಾಣುತ್ತವೆ. ನೀಳ ಮುಖ, ನಡುವೆ ಕೊಂಚ ತಗ್ಗು, ಮೂಗಿನ ಒಳ್ಳೆಗಳು ತುಸು ಎತ್ತಿಕೊಂಡಿರುತ್ತವೆ. ಭುಜ ಗುಂಭ–ಇದರ ಸಕಲ ಶ್ರೀಮದ್ ಗಾಂಭೀರ್ಯಕ್ಕೆ ಕಾರಣ. ಕೊಂಬುಗಳು ಈ ಆಕೃತಿಗೆ ಕಳಶವಿಟ್ಟಂತೆ, ಕಪ್ಪಾಗಿ, ನೀಳವಾಗಿ ಬಿಲ್ಲಿನಾಕೃತಿಯ ಕೊಂಬುಗಳು. ಭುಜಗುಂಭದಂತೆಯೇ ಇದರ ಇಳಿ ಬಿದ್ದ ಗಂಗೆದೊಗಲು ಮತ್ತೊಂದು ಆಕರ್ಷಣೆ, ಬಲವಾದ ಗೊರಸುಗಳು, ಪುಟ್ಟದಾದ, ಚುರುಕಾದ ಕಿವಿ, ನೀಳ ಬಾಲ, ಕಪ್ಪು ಮುಸುಡಿ. ಸೃಷ್ಟಿ ಕ್ರಿಯೆಯ ಲೀಲೆ ಎದ್ದು ಕಾಣುತ್ತದೆ. ಹಳ್ಳಿಕಾರ್ ದೇಹಾಕೃತಿಗೂ ಅಮೃತ್ ಮಹಲ್‌ಗೂ ಎದ್ದು ಕಾಣುವ ವ್ಯತ್ಯಾಸಗಳಿದ್ದರೂ ಎರಡೂ ತಳಿಗಳ ನಡುವೆ ಪರಸ್ಪರ ವೈಷಮ್ಯ ಇಲ್ಲ.

ಅಮೃತ್ ಮಹಲ್ ಹಸು ಹೋರಿಗರು ಹಾಕಿದರೆ; ಆ ಕರುವಿನ ಭಾಗ್ಯ ಹೇಳ ತೀರದು. ತಾಯಿಯ ಪೂರ್ಣ ಹಾಲು ಕರುವಿಗೆ ಮೀಸಲು, ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದಲ್ಲಿ 'ಅಮೃತ್ ಮಹಲ್ ತಳಿ ಅಭಿವೃದ್ಧಿಕೇಂದ್ರ'ವಿದೆ. ಈ ತಳಿಗಳು ಮೈಸೂರು ಪ್ರಾಂತ್ಯಕ್ಕೆ ಸೀಮಿತವಾಗಿರದೆ ಕೃಷ್ಣೆಯವರೆಗೂ ವಿಸ್ತರಿಸಿವೆ. ೨೪ ರಿಂದ ೩೦ ತಿಂಗಳ ನಡುವಿನ ಅವಧಿಯಲ್ಲಿ ಅಮೃತ್ ಮಹಲ್ ಕಡಸುಗಳು ಹೋರಿಗೆ (ಬೆದೆ) ಬರುತ್ತವೆ.

೩.೪. ಮಲೆನಾಡು ಗಿಡ್ಡ

ಮತ್ತೊಂದು ಮುಖ್ಯ, ಬಹು ಅಮೂಲ್ಯ ದೇಸಿ ತಳಿ ಮಲೆನಾಡುಗಿಡ್ಡ, ಹೆಸರೇ ಸೂಚಿಸುವಂತೆ ಅತ್ಯುತ್ಕೃಷ್ಟ ಗಿಡ್ಡ ತಳಿ. ಮಲೆನಾಡಿಗೆ ಅನುಗುಣವಾದ ಮೈಮಾಟ, ಬೆಟ್ಟ-ಗುಡ್ಡ, ಕಣಿವೆಗಳಲ್ಲಿ ಲೀಲಾಜಾಲವಾಗಿ ಓಡಾಡುವ ಇವು ಶ್ರಮದ ತಳಿಗಳು, ಅತೀವ ಮಳೆಯ ಸಂದರ್ಭದಲ್ಲೂ ಉತ್ತಮ ಸ್ವಾಸ್ಥ್ಯ ತೋರುವ ಇವು ರೋಗಗಳ ಬಾಧೆಗೆ ಒಳಗಾಗುವುದು ತೀರ ಅಪರೂಪ. ೭೦ ರಿಂದ ೧೮೦ ಕೆ.ಜಿ. ವರೆಗೆ ತೂಕ, ಕಪ್ಪು, ಕಂದು, ಕೆಂಪು, ಬಿಳಿಗಳಲ್ಲಿ ಮತ್ತು ಇವುಗಳೆಲ್ಲದರ ಮಿಶ್ರಣದಲ್ಲಿ ಇವುಗಳ ರಂಗು, ನೀಳ, ನೇರ ನಿಶ್ಚಿತ ಕೊಂಬು ಇವುಗಳಲ್ಲಿ ವಿರಳ. ಗಿಡ್ಡ ಕೊಂಬು, ವಕ್ರಕೊಂಬು, ಕೆಲವೊಮ್ಮೆ ಸುರುಳಿ ಸುತ್ತಿದಂತೆ, ಕೆಲವೊಮ್ಮೆ ಎರಡೇ ಇಂಚಿನ ಮೋಟುಗೊಂಬು ಮತ್ತು ನೆಲಕ್ಕೆ ತಾಗುವ ಬಾಲ. ಕರಾವಿನ ಹಸುಗಳು ದಿನಕ್ಕೆ ಸರಾಸರಿ ೨ ೧/೨ ಲೀಟರ್ ಹಾಲು ಕೊಡುತ್ತವೆ. ಉಳಿದಂತೆ ಚಟಾಕು, ೧/೨ ಪಾವು ಹಾಲು ನೀಡುವ ಹಸುಗಳಿವೆ. ಸ್ವಭಾವದಲ್ಲಿ ಸಾಧು; ಎಲ್ಲರೊಂದಿಗೆ ಒಗ್ಗುವ, ಏಗುವ, ಶ್ರಮಪಡುವ ಗುಣ. ಇವುಗಳಲ್ಲಿ "ಕಪಿಲೆ ಹಸು"ವಿಗೆ ವಿಶೇಷ ಮಹತ್ವ ಕಂದು ಮಿಶ್ರಿತ ಹೊಂಬಣ್ಣ ಹೊಂದಿರುವ ಈ ಹಸು ಸೂರ್ಯ ರಶ್ಮಿಯಿಂದ ಕಾಸ್ಮಿಕ್ ಎನರ್ಜಿಯನ್ನು ಸ್ವೀಕರಿಸುತ್ತದೆಯಂತೆ. ಹೀಗಾಗಿ ಇದರ ಹಾಲು ಶ್ರೇಷ್ಠ ಎಂಬ ನಂಬಿಕೆ ಇದೆ. ಇಂಥ ಹಲವಾರು ಕಪಿಲೆ ಹಸುಗಳು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಾಮಚಂದ್ರಾಪುರ ಮಠದಲ್ಲಿವೆ.

ಕರ್ನಾಟಕದ ಶಿವಮೊಗ್ಗ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳು ಮಲೆನಾಡು ಗಿಡ್ಡಗಳ ಆವಾಸ. ಚಿಕ್ಕಮಗಳೂರು, ಹಾವೇರಿ, ಹಾಸನ, ಧಾರವಾಡದ ಅರೆಮಲೆನಾಡು ಪ್ರದೇಶಗಳಲ್ಲೂ ಮಲೆನಾಡು ಗಿಡ್ಡಗಳನ್ನು ಕಾಣಬಹುದು. ದೇಸಿ ತಳಿಗಳ ಸಂರಕ್ಷಣೆ ಹಿನ್ನೆಲೆಯಲ್ಲಿ ಮಲೆನಾಡು ಅಲ್ಲದ ಪ್ರದೇಶದಲ್ಲಿಯೂ ಈ ತಳಿಗಳನ್ನು ನಾವಿಂದು ಕಾಣಬಹುದು.

ಮಲೆನಾಡಿನ ಬೇಸಾಯದ ಮುಖ್ಯ ಆಧಾರಸ್ತಂಭವಾಗಿರುವ ಗಿಡ್ಡಗಳು ಸರಕು ಸಾಗಾಣಿಕೆಗೂ ಬಳಸಲ್ಪಡುತ್ತವೆ. ಇವುಗಳನ್ನು ಹಿಂಡು ಹಿಂಡಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಿ ಮೇವಿಗಾಗಿ ಕಾಡು ಮತ್ತು ಗೋಮಾಳಗಳಿಗೆ ಬಿಡಲಾಗುತ್ತದೆ. ಇವು ಕಡಿಮೆ ಮೇವು ಮೇಯುತ್ತವೆ. ಹೀಗಾಗಿ ಇವುಗಳ ಸಗಣಿ ಗಂಜಳದ ಪ್ರಮಾಣವು ಕಡಿಮೆ ಇರುತ್ತದೆ. ಇವುಗಳ ಸಗಣಿ ಮತ್ತು ಗಂಜಳಗಳಲ್ಲಿ ಪರಿಣಾಮಕಾರಿ ಜೀವಾಣುಗಳ ಸಂಖ್ಯೆ ಹೆಚ್ಚಿರುವುದರಿಂದ ಭೂಮಿ ಸಮೃದ್ಧಗೊಳ್ಳಲು ನೆರವಾಗುತ್ತದೆ. ಹೀಗಾಗಿ ಮಲೆನಾಡು ಪ್ರದೇಶದ ರೈತರು ಇವುಗಳ ಗೊಬ್ಬರವನ್ನು ಮಾರುವುದಿಲ್ಲ. ಗಿಡ್ಡದ ಕಡಸುಗಳು ೩೦ ತಿಂಗಳ ನಂತರ ಬೆದೆಗೆ ಬರುತ್ತವೆ. ಇವುಗಳ ಗರ್ಭಚೀಲ ಪುಟ್ಟದಾಗಿರುವುದರಿಂದ ಬೇರೆ ತಳಿಗಳ ಸಂಯೋಗ ಮಾಡಲು ಯತ್ನಿಸಿಲ್ಲ. ಹೀಗಾಗಿಯೇ ಇವು ತಳಿ ಶುದ್ಧತೆಗೆ ಹೆಸರಾಗಿವೆ. ಮತ್ತು ೨೦ ವರ್ಷದ ಆಯಸ್ಸಿನವರೆಗೂ ಕಾಯಿಲೆಗಳಿಲ್ಲದೆ ಬದುಕುತ್ತವೆ. ಇವುಗಳ ಹಾಲು ಗಟ್ಟಿ,

ಮೊಸರು, ಮಜ್ಜಿಗೆಗೆ ವಿಶೇಷ ಸ್ವಾದ; ಬೆಣ್ಣೆ ಅಕ್ಕಿರೊಟ್ಟಿಯ ಜೊತೆಗೆ ಅದ್ಭುತ. ತುಪ್ಪ ತೀವ್ರವಾಗಿ ಆಘ್ರಾಣಿಸುತ್ತ ಕುಡಿಯುವ ಸೂಪಿನೊಂದಿಗೆ ಅತ್ಯಂತ ಹಿತ.

೩.೫. ಜವಾರಿ, ಖಿಲಾರಿ, ಕೃಷ್ಣ ವ್ಯಾಲಿ :

ಇವು ಉತ್ತರ ಕರ್ನಾಟಕದ ಬೇಸಾಯ ಜೀವನದ ಜೀವಾಳ. ಜವಾರಿಯ ಮೂಲ ಗುಲ್ಬರ್ಗ ಜಿಲ್ಲೆಯ ಜೀವರ್ಗಿ ಅಂದುಕೊಂಡರೂ, ಇದು ಇಡೀ ಉತ್ತರ ಕರ್ನಾಟಕದಲ್ಲಿ ಹಾಸು ಹೊಕ್ಕಾದ ತಳಿ, ಜವಾರಿಗೆ ಸ್ಥಳೀಯ, ದೇಸೀಯ ಎಂಬ ಅರ್ಥಗಳೂ ಇವೆ. ಆ ಅರ್ಥವು ಈ ತಳಿಗೆ ಅನ್ವರ್ಥವೂ ಆಗಿದೆ.

ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗೀರ್, ಬಿಜಾಪುರ, ಬಾಗಲಕೋಟೆ, ಗದಗ, ಹಾವೇರಿ, ಬೆಳಗಾವಿ ಮತ್ತು ಧಾರವಾಡ ಪ್ರದೇಶ ವ್ಯಾಪ್ತಿಯ ಸಹಜ ಸೊಬಗಾಗಿರುವ ಈ ತಳಿ ಅಪಾರ ಮಟ್ಟದಲ್ಲಿ ಕಷ್ಟ ಸಹಿಷ್ಣು. ಈ ಭಾಗದ ಬಿಸಿಲು ಸಹಿಸುವ ಸಾಮರ್ಥ್ಯದ ಕಾರಣವಾಗಿಯೇ ಇದರ ಸ್ಥಾನ ಪಲ್ಲಟ ಮಾಡುವ ಇನ್ನೊಂದು ತಳಿ ಇಲ್ಲಿಗೆ ಬರಲಿಲ್ಲ. ಹೋಲಿಕೆಯಲ್ಲಿ ಈ ತಳಿ ಖಿಲಾರಿಯಂತೆ ಕಂಡು ಬಂದರೂ ಶ್ರಮದ ದುಡಿಮೆಯಲ್ಲಿ ಖಿಲಾರಿಯನ್ನು ಮೀರಿಸುತ್ತದೆ. ಗಾತ್ರದಲ್ಲಿ ಮಧ್ಯಮ ಗಾತ್ರ, ಎತ್ತರದಲ್ಲಿ ಸಾಧಾರಣ ಎತ್ತರ. ಬಣ್ಣ ತುಸು ಬಿಳಿ, ಬೂದು, ಕೆಂಪು, ಕಪ್ಪು ಮತ್ತು ಇವುಗಳೆಲ್ಲದರ ಮಿಶ್ರಣವಾಗಿಯು ಕಾಣುವುದುಂಟು. ಚಿಕ್ಕದಾದ ಮುಖ, ಸರಳವಾದ ಕಣ್ಣು, ಸಾಧಾರಣ ಎತ್ತರದ ಕೊಂಬು, ಸಾಧಾರಣ ಎತ್ತರದ ಭುಜಗುಂಭ, ಸಶಕ್ತ ಕಾಲುಗಳು, ಗಟ್ಟಿಯಾದ ಗೊರಸುಗಳು, ರೋಗ ನಿರೋಧಕ ಶಕ್ತಿ ಅಧಿಕ. ಮೂಲತಃ ಇದು ದುಡಿಮೆಯ ತಳಿ. ಆದ ಕಾರಣ ಕರಾವುಗಾಗಿ ಅವಲಂಬಿತವಾಗಲಿಲ್ಲ. ಕಡಸುಗಳು ೨೪ ರಿಂದ ೩೦ ತಿಂಗಳ ಒಳಗೆ ಬೆದೆಗೆ ಬರುತ್ತವೆ. ತಳಿ ಶುದ್ಧತೆಗಾಗಿ ಅಧಿಕ ಸಾಮರ್ಥ್ಯದ ಹೋರಿಗಳನ್ನು ಸಾಕಲಾಗುತ್ತದೆ.

ರೈತ ಸ್ನೇಹಿಯಾದ ಇದನ್ನು ರೈತರು ಆಪ್ತವಾಗಿ ಕಾಣುತ್ತಾರೆ. ಬೆಳ್ಳಂಬೆಳಿಗ್ಗೆ ಎದ್ದು ಕಡಸುಗಳ ದರ್ಶನ ಮಾಡುವುದು ಪುಣ್ಯವೆಂದೇ ಭಾವಿಸುತ್ತಾರೆ. ಸಚಿವ ಎಚ್.ಕೆ. ಪಾಟೀಲರು ತಮ್ಮ ಗದಗ ಕ್ಷೇತ್ರದ ಹುಲಕೋಟಿಯ ತಮ್ಮ ವಾಸದ ಮನೆಯ ಒಳ ಆವರಣದ ಮುಂಭಾಗದಲ್ಲಿ ಜವಾರಿ ಆಕಳುಗಳನ್ನು ಸಾಕಿದ್ದಾರೆ. ಅವರು ಮತ್ತು ಕುಟುಂಬದ ಎಲ್ಲರೂ (ಡಿ.ಆರ್. ಪಾಟೀಲ್ ಸೇರಿದಂತೆ) ಮುಂಜಾನೆ ಎದ್ದಕೂಡಲೆ ಈ ಆಕಳುಗಳ ದರ್ಶನ ಪಡೆಯುತ್ತಾರೆ.

ಮಹಾರಾಷ್ಟ್ರದ ಶೋಲಾಪುರ, ಸೀತಾಪುರ ಹಾಗೂ ಸಾತ್ಪುರ ಬೆಟ್ಟ ಪ್ರದೇಶ ವ್ಯಾಪ್ತಿಯ ಸ್ಥಳೀಯ ಆಕಳು ಮತ್ತು ಹಳ್ಳಿಕಾರ್ ಸಂಯೋಗದಿಂದ ಹುಟ್ಟು ಪಡೆದ ತಳಿ ಖಿಲಾರಿ. ಮಹಾರಾಷ್ಟ್ರದ ಆ ಭಾಗ ಮತ್ತು ಕರ್ನಾಟಕದ ಬೆಳಗಾವಿ,

ಬಿಜಾಪುರ, ಧಾರವಾಡ ಜಿಲ್ಲೆಗಳ ಮುಖ್ಯ ಆಕಳ ಸ್ಥಾನದಲ್ಲಿ ಖಿಲಾರಿ ಕೂಡ ಒಂದು. ಸಿಟ್ಟಿನ ವಿಷಯದಲ್ಲಿ ಇದು ಹಳ್ಳಿಕಾರ್‌ದೇಆದ ಸ್ವಭಾವವನ್ನು ಪಡೆದುಕೊಂಡಿದೆ. ಕರಾವಿನಲ್ಲಿ ಹಳ್ಳಿಕಾರ್‌ಗಿಂತ ತುಸು ಮುಂದೆ, ಒಂದು ಕರಾವು ಅವಧಿಯಲ್ಲಿ ೬೦೦ ರಿಂದ ೧೦೦೦ ಲೀಟರ್ ವರೆಗೆ ಹಾಲು ಕರೆಯುತ್ತದೆ. ಖಿಲಾರಿ ತಳಿಯ ಹಾಲು, ಮೊಸರು, ಬೆಣ್ಣೆ ತುಪ್ಪ ಹೆಸರುವಾಸಿ.

೩೦೦ ರಿಂದ ೬೦೦ ಕಿಲೋಗ್ರಾಂವರೆಗಿನ ತೂಕದ ಇವು ಬಿರುಸಿನ ನಡಿಗೆಗೆ ಹೆಸರುವಾಸಿ. ಬಿಳಿ ಮಿಶ್ರಿತ ಬೂದು ಬಣ್ಣ. ದುಂಡಗಿನ ಮೈಕಟ್ಟು, ಬಿಗಿಯಾಗಿ ಮೈಗೆ ಅಂಟಿಕೊಂಡಂತಿರುವ ಚರ್ಮ, ಕೋಲುಮುಖ, ಸಾಧಾರಣ ಗಂಗೆದೊಗಲು, ಮಟ್ಟದಾದ ಕಣ್ಣುಗಳು; ಪುಟ್ಟ ಮತ್ತು ಚೂಪಾಗಿರುವ ಕಿವಿಗಳು, ಉದ್ದವಾದ, ಬಲವಾದ ಕಾಲುಗಳು, ಎತ್ತರದ ಗುಂಭ, ಕಪ್ಪಗಿನ ಗೊರಸು ಈ ತಳಿಯ ವೈಶಿಷ್ಟ್ಯ. ಈ ತಳಿಯ ಕರುಗಳು ಹುಟ್ಟಿದಾಗ ನೆತ್ತಿಯ ಭಾಗ ಕೆಂಪಾಗಿದ್ದು, ಕ್ರಮೇಣ ಬಿಳಿಯಾಗುತ್ತದೆ.

೩.೬. ಕೃಷ್ಣಾ ತೀರ ಅಥವಾ ಕೃಷ್ಣ ವ್ಯಾಲಿ

ಕೃಷ್ಣಾ ನದಿ ತೀರದಲ್ಲಿ; ಹಳ್ಳಿಕಾರ್, ಗಿರ್, ಕಾಂಕ್ರೇಜ್, ಓಂಗೋಲ್ ತಳಿಗಳ ಸಂಕರದಿಂದ ಹುಟ್ಟಿದ್ದು, ಕೃಷ್ಣಾ ತೀರ. ಬೆಳಗಾವಿ, ವಿಜಾಪುರ, ಬಾಗಲಕೋಟೆ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಇವು ವಿರಳವಾಗಿವೆ. ಜವಾರಿ ತಳಿಯ ಪ್ರಭುತ್ವದಿಂದಾಗಿ ಕೃಷ್ಣಾತೀರಕ್ಕೆ ಇಲ್ಲಿ ಬಲವಾದ ನೆಲೆ ಸ್ಥಾಪಿಸಿಕೊಳ್ಳಲು ಆಗಲಿಲ್ಲ. ಹಳ್ಳಿಕಾರ್ ಸಂಕರದಿಂದಾಗಿ ದುಡಿಮೆಯ ಕೆಚ್ಚು; ಗಿರ್, ಕಾಂಕ್ರೇಜ್, ಓಂಗೋಲ್ ಸಂಕರಣದಿಂದಾಗಿ ಹಾಲಿನಲ್ಲಿ ಹೆಚ್ಚಳ ಸಾಧಿಸಿರುವ ಈ ಹಸು ಕೃಷಿಯಲ್ಲಿ ಹೆಚ್ಚು ಪಳಗಿದೆ.

ಅಮೆರಿಕಾ ಮತ್ತು ಬ್ರೆಜಿಲ್ ದೇಶಗಳು ಈ ತಳಿಯ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಆಮದು ಮಾಡಿಕೊಂಡಿವೆ. ಬೂದು, ಕಪ್ಪು, ಕಂದು, ಬಿಳಿ ಈ ತಳಿಯ ಮುಖ್ಯ ಬಣ್ಣಗಳು, ದೊಡ್ಡ ಗಾತ್ರದ ಮೈ ಈ ತಳಿಯ ವಿಶೇಷ. ಆದರೆ ದೇಹದ ಉದ್ದ ಚಿಕ್ಕದು. ಕಾಲುಗಳ ಉದ್ದ ಕೊಂಚ ಕಡಿಮೆಯಾಗಿದ್ದರೂ ಗೊರಸುಗಳು ದೊಡ್ಡವಾಗಿದ್ದು ಸದೃಢತೆಯನ್ನು ಸೂಸುತ್ತವೆ. ಕೊಂಬುಗಳು ಎತ್ತರಕ್ಕಿರುತ್ತವೆ. ಕಣ್ಣಿನ ಸುತ್ತಲೂ ಕಪ್ಪು ಪಟ್ಟಿ ಇದ್ದು, ಕಣ್ಣಿಗೆ ಕಾಡಿಗೆ ಹಚ್ಚಲಾಗಿದೆಯೇನೋ ಎಂಬಂತೆ ತೋರುತ್ತದೆ.

ಹೆಚ್ಚಿನ ಭಾರ ಎಳೆಯುವಲ್ಲಿ, ಬಿಗಿದು ಕೊಂಡಿರುವ ಕಪ್ಪು ಮಣ್ಣಿನ ಉಳುಮೆಯಲ್ಲಿ ಈ ತಳಿಯ ಎತ್ತುಗಳು ಬಲು ನಿಸ್ಸೀಮ.

ತಮಿಳು ನಾಡಿನ ಈರೋಡು, ಕೊಯಮತ್ತೂರು ಭಾಗದ ಬರಗೂರು ತಳಿ ನಮ್ಮ ಕರ್ನಾಟಕದ ಚಾಮರಾಜನಗರ, ಹೊಸಕೋಟೆ, ಕನಕಪುರ ಭಾಗಗಳಲ್ಲಿ ಕಾಣುತ್ತೇವೆ. ಇವು ತಮಿಳು ಭಾಷಿಕ ಕೃಷಿಕರೊಂದಿಗೆ ಬಂದು ಈ ಭಾಗದಲ್ಲಿ ಪಳಗಿವೆ. ಆಲಂಬಾಡಿ ತಳಿ ಗುಂಡ್ಲುಪೇಟೆ, ಮಹದೇಶ್ವರನ ಬೆಟ್ಟ ಬಿಟ್ಟು ಹೆಚ್ಚು ವ್ಯಾಪಿಸಲಿಲ್ಲ, ಆಂಧ್ರದ ಓಂಗೋಲ್, ಮಹಾರಾಷ್ಟ್ರದ ದೇವಣಿ, ನಿಮಾರಿ; ಕಾಸರಗೋಡಿನ ಗಿಡ್ಡ ಇವುಗಳೆಲ್ಲ ಕರ್ನಾಟಕದ ಗಡಿ ಭಾಗಕ್ಕೆ ಸುಪರಿಚಿತ ತಳಿಗಳಾಗಿವೆ.

ಜೆರ್ಸಿ, ಹೋಲ್‌ಸ್ಟೈನ್, ಎಚ್‌ಎಫ್ ನಂತ ಅಧಿಕ ಹಾಲು ಇಳುವರಿಯ ವಿದೇಶಿ ಹೈಬ್ರಿಡ್ ಹಸುಗಳು ನಮ್ಮ ನಾಡಿಗೆ ಪಾದಾರ್ಪಣೆ ಮಾಡುವವರೆಗೆ; ನಮ್ಮಲ್ಲಿ ಹೈನುಗಾರಿಕೆಗಾಗಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಅಧಿಕ ಇಳುವರಿಯ ದೇಸಿ ತಳಿಗಳನ್ನು ಸಾಕುವ ಪರಿಪಾಠವಿತ್ತು. ಇಂಥ ಹಸುಗಳಲ್ಲಿ ಕೆಂಪು ಸಿಂಧಿ ಪ್ರಮುಖ, 'ಸಿಂಧಿ" ಅಂದರೆ ಅಧಿಕ ಹಾಲುಕೊಡುವ ತಳಿ ಎಂದರ್ಥ. ಉತ್ತರ ಇಂಡಿಯಾದ ಜೈನರು, ಮಾರ್ವಾಡಿಗಳ ಕಾರಣವಾಗಿ ರೆಡ್‌ಸಿಂಧಿ, ಸಾಹಿವಾಲ್, ಕಾಂಕ್ರೇಜ್ ತಳಿಗಳು ಇಲ್ಲಿಗೆ ಬಂದು-ಕ್ರಮೇಣ ವಿದೇಶಿ ತಳಿಗಳ ಆಗಮನದಿಂದಾಗಿ ಕ್ಷೀಣಿಸುತ್ತಾ ಬಂದವು.

೩.೭. ಎಮ್ಮೆಗಳು :

ಎಮ್ಮೆ ತಳಿಗಳ ಮೂಲ ಭಾರತ. ಇಂದು ಏಷ್ಯಾದ ಎಲ್ಲ ದೇಶಗಳಲ್ಲೂ ಎಮ್ಮೆಗಳನ್ನು ಕಾಣಬಹುದು. ಕರ್ನಾಟಕದ ಬಹು ಮುಖ್ಯ ತಳಿಗಳೆಂದರೆ "ಧಾರವಾಡ" ಮತ್ತು "ದಕ್ಷಿಣ ಕನ್ನಡ" "ಮುರ್ರಾ" ಮೂಲತಃ ದೆಹಲಿಯ ತಳಿ. 'ಸೂರ್ತಿ' ಗುಜರಾತರ್‌ನ ಖೈರಾ ಮತ್ತು ಬರೋಡ ಜಿಲ್ಲೆಗಳದ್ದು, "ಪಂಡರಾಪುರಿ' ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಗೆ ಸೇರಿದ್ದು, ದೇಶದ ಇತರ ಭಾಗಗಳಲ್ಲಿ ಜಾಫರ್‌ಬಾದಿ, ಬಾದಾವರಿ, ಮೆಹಸಾನ, ನಾಗಪುರ, ನೀಲೀರವಿ, ತೋಡ, ತರಾಯಿ, ಕುಂಡಿ, ಕಾಲಾಹಂಡಿ, ಸಂಬಲಪುರಿ, ಗೋದಾವರಿ, ಮಂಡ, ಜರಂಗಿ ತಳಿಗಳಿವೆ.

ಹಾಲು ಮತ್ತು ಕೃಷಿ ಕೆಲಸಗಳಿಗಾಗಿ ಎಮ್ಮೆಗಳು ಬಳಕೆಯಾಗುತ್ತಿವೆ. ಕೆಲವು ಕಡೆ ಉಳಲು ಮತ್ತು ಗಾಡಿ ಎಳೆಯಲು ಕೋಣಗಳು ಬಳಕೆಯಾಗುತ್ತಿವೆ. ಕೇರಳ ರಾಜ್ಯ ಕೋಣದ ಮಾಂಸಕ್ಕೆ ಪ್ರಸಿದ್ಧಿಯಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೆಸರು ಗದ್ದೆ ಕ್ರೀಡೆಗಳಲ್ಲಿ ಕೋಣಗಳನ್ನು ಬಳಸಲಾಗುತ್ತದೆ. ಕೆಸರು ಗದ್ದೆಯ ಈ ಕ್ರೀಡೆಗೆ ಕಂಬಳ ಎಂದು ಕರೆಯಲಾಗುತ್ತದೆ. ಕಂಬಳದ ಕೆಸರು ಗದ್ದೆಯ ಓಟ ಅತ್ಯಂತ ರೋಚಕವೂ, ಸಾಹಸದ್ದೂ ಆದ ಮನರಂಜನಾ ಕ್ರೀಡೆಯಾಗಿ ಕೃಷಿ ಸಂಸ್ಕೃತಿಯ ಭಾಗವಾಗಿದೆ. ಕಂಬಳದ ಕೋಣಗಳಿಗೆ ಇಲ್ಲಿ ವಿಶೇಷ

ಗೌರವವೂ ಇದೆ. ಬೆಲೆಯೂ ಇದೆ. ಬೆಲೆ ಎಂದರೆ ಒಂದು ಜೊತೆ ಕೋಣಗಳಿಗೆ ೭೦ ಸಾವಿರದಿಂದ ೧,೫೦,೦೦೦ ರೂ.ಗಳ ವರೆಗೆ. ದಕ್ಷಿಣ ಕನ್ನಡ ಜಿಲ್ಲೆಯ ಬಹುಭಾಗದ ಬೇಸಾಯದ ನೊಗ ಕೋಣಗಳ ಹೆಗಲ ಮೇಲೆಯೇ ನಿಂತಿರುವುದು.

ಧಾರವಾಡ ಎಮ್ಮೆಗಳು:

ಧಾರವಾಡ ತಳಿಯ ಎಮ್ಮೆಗಳನ್ನು ಗೌಳಿ ಎಮ್ಮೆಗಳೆಂತಲೂ ಕರೆಯುತ್ತಾರೆ. ಇವು ಧಾರವಾಡ ಜಿಲ್ಲೆ ಸೇರಿದಂತೆ ಬೆಳಗಾವಿ, ಹಾವೇರಿ, ಗದಗ, ಉತ್ತರ ಕನ್ನಡ ಜಿಲ್ಲೆಗಳ ಭೌಗೋಳಿಕ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಇವು ದಿನಕ್ಕೆ ಸರಾಸರಿ ೭ ಲೀಟರ್ ಹಾಲು ಕೊಡುತ್ತವೆ. ಹಾಲಿನ ಬೆಲೆ ಹೆಚ್ಚುತ್ತಿದ್ದರೆ ಗೌಳಿ ಸಾಕುವವರ ಜೀವನಮಟ್ಟವೂ ಸುಧಾರಿಸುತ್ತಿತ್ತು. ಗೌಳಿ ಎಮ್ಮೆಗಳ ಬಣ್ಣ ಕಪ್ಪು, ಕಪ್ಪಗಿನ ಮುಸುಡಿ, ನೀಳವಾದ ತಲೆ, ಕಿರಿದಾದ ಹಣೆ, ಚಪ್ಪಟೆಯಾಗಿ ಉದ್ದವಾಗಿರುವ ಕೊಂಬುಗಳು ಭುಜಗಳನ್ನು ದಾಟಿ ಮೇಲಕ್ಕೆ ಬರುತ್ತವೆ. ಕಿವಿಗಳೂ ಉದ್ದಕ್ಕಿರುತ್ತವೆ. ಗೌಳಿ ಈ ಭಾಗದವರ ಮೊದಲ ಆಯ್ಕೆ, ಹೆಚ್ಚಿನ ಹಾಲಿನ ಇಳುವರಿಯ ಕಾರಣಕ್ಕೆ ಇಲ್ಲಿ ಮುರಾ ಎಮ್ಮೆಗಳೂ ಜಾಗ ಸಂಪಾದಿಸಿವೆ. ಹಾಗೆಯೇ ಅಧಿಕ ಕೊಬ್ಬಿನ ಕಾರಣ (ಶೇಕಡ ೮ ರಿಂದ ೧೨) ಕ್ಕೆ ಸೂರ್ತಿ ಎಮ್ಮೆಗಳು ಕೂಡ ಈ ನಾಡಿನ ಆಧಾರಸ್ತಂಭವಾಗಿವೆ. ಧಾರವಾಡ ಪೇಡದ ಖ್ಯಾತಿಯನ್ನು ಸೂರ್ತಿ ಎಮ್ಮೆಯ ಕೊಬ್ಬು ಎತ್ತಿ ಹಿಡಿದಿದೆ.

ಪಂಡರಾಪುರಿ ತಳಿ ಎಮ್ಮೆಗೆ ಹೆಚ್ಚು ಬಿಸಿಲು ಸಹಿಸುವ ಸಾಮರ್ಥ್ಯ, ಬರಗಾಲಕ್ಕೆ ಹೊಂದಿಕೊಳ್ಳುವ ಗುಣವೂ ಇದೆ. ಹೀಗಾಗಿ ಇದು ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳ ನೆಚ್ಚಿನ ತಳಿಯಾಗಿದೆ.

ಇನ್ನು ಕರ್ನಾಟಕದ ಬೆಂಗಳೂರು ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ ಜಿಲ್ಲೆಗಳ ವ್ಯಾಪ್ತಿಯ ಎಮ್ಮೆಗಳೆಲ್ಲವೂ ನಾಟಿ ತಳಿಗಳೇ ಆಗಿವೆ. ಆದರೆ ಇವುಗಳ ವರ್ಗೀಕರಣ ನಿಖರವಾಗಿ ಆಗಬೇಕಾಗಿದೆ. ಈ ಭಾಗದಲ್ಲಿ ಎಮ್ಮೆಗಿರುವ ಕಿಮ್ಮತ್ತು ಕೋಣಗಳಿಗೆ ಇಲ್ಲ. ಇಲ್ಲಿ ಕೋಣಗಳನ್ನು ಉಳುಮೆಗಾಗಲಿ, ಗಾಡಿ ಕಟ್ಟಲಾಗಲಿ ಬಳಸುವುದಿಲ್ಲ. ತಳಿ ಸಂವರ್ಧನೆಗಾಗಿ ಬಳಸುವ ಕೋಣಗಳನ್ನು ಹೊರತು ಪಡಿಸಿ, ಉಳಿದೆಲ್ಲ ಕೋಣಗಳು ಇಲ್ಲಿ ನಗಣ್ಯ, ಕೋಣದ ಕರುಗಳು ಬಾಲ್ಯದಲ್ಲೇ ದೇವರ ಹರಕೆಗೆ ಮೀಸಲಾಗುತ್ತವೆ. ಇಲ್ಲವೆ ಮಾರಲ್ಪಡುತ್ತವೆ.

ಈಗಲೂ ಹೀಗೆ ಹರಕೆಯಾಗಿ ಅರ್ಪಿಸಿದ ಹಸುಗಳು/ಎತ್ತುಗಳು ಚಾಮುಂಡಿಬೆಟ್ಟ, ಬಿಳಿಗಿರಿ ರಂಗನ ಬೆಟ್ಟ, ಮಲೈ ಮಹಾದೇಶ್ವರನ ಬೆಟ್ಟ, ಚುಂಚನಗಿರಿ, ಸಿದ್ದರ ಬೆಟ್ಟ, ಮುಳ್ಳಯ್ಯನಗಿರಿ, ಜೇನ್‌ಕಲ್ ಬೆಟ್ಟ ಮುಂತಾದೆಡೆ ಯಥೇಚ್ಛವಾಗಿ ಓಡಾಡುವುದನ್ನು ಕಾಣಬಹುದು.

ಮೊದ ಮೊದಲು ಗ್ರಾಮದ ಎಲ್ಲ ಜಾನುವಾರುಗಳು ದೊಡ್ಡಿಗಳಲ್ಲೆ ಇರುತ್ತಿದ್ದವು. ಕ್ರಮೇಣ ಹಾಲು ಕರೆಯುವ ಹಸುಗಳು, ದುಡಿಯುವ ಎತ್ತುಗಳು ದೊಡ್ಡಿಯಿಂದ ಪ್ರತ್ಯೇಕವಾದವು. ಬೇಸಾಯ ವ್ಯವಸ್ಥಿತವಾಗಿ ಅಭಿವೃದ್ಧಿಯಾದಂತೆಲ್ಲ ದೊಡ್ಡಿಗಳು ನಶಿಸಿದವು. ದನ ಮೇಯುವ ಜಾಗವೂ ಕ್ಷೀಣಿಸಿತು. ಈಗಲೂ ಪಂಚಾಯ್ತಿ, ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಕೆಲವು ದೊಡ್ಡಿಗಳಿವೆ. ಇವು ಬಿಡಾಡಿ ದನಗಳನ್ನು ಕೂಡಲು ಮಾತ್ರ. ಇಂಥ ದನಗಳಿಗೆ ಮಾಲೀಕರಿದ್ದರೆ ಅವರು ದಂಡ ಕಟ್ಟಿ ಅವನ್ನು ಬಿಡಿಸಿ ತರಬೇಕು.

ಹಸು/ಎತ್ತುಗಳನ್ನು ನಿರ್ಧಿಷ್ಟ ಉದ್ದೇಶಕ್ಕೆ ಬಳಸಲು ಶುರುವಾದ ಬಳಿಕವೇ ಮೂಗುದಾರದ ಅವಶ್ಯಕತೆ ಕಂಡುಬಂದದ್ದು. ಹೆಸರೇ ಸೂಚಿಸುವಂತೆ ಮೂಗುದಾರ ಅಂದರೆ ಹತೋಟಿ, ನಿಯಂತ್ರಣ ಇತ್ಯಾದಿ, ಪರಿಣಿತರ ಕೈಯಿಂದ ದಪ್ಪನೆಯ ದಬ್ಬಳದ ಸಹಾಯದಿಂದ ಎರಡು ಒಳ್ಳೆಗಳ ನಡುವಿನಿಂದ ಮೇಲ್ ಮುಸುಡಿಯ ಮಧ್ಯದಲ್ಲಿ ಚುಚ್ಚಿ ದಾರ ಹಾಕಿಸಲಾಗುತ್ತದೆ. ಕಿರು ಬೆರಳು ಗಾತ್ರದ ಈ ದಾರವನ್ನು ಕೊಂಬಿನ ಹಿಂಭಾಗಕ್ಕೆ ಸೇರಿಸಿ ಕಟ್ಟಲಾಗುತ್ತದೆ. ಕೊರಳಿಗೆ ಒಂದು ಹಗ್ಗ ಹಾಕಿ; ಈ ಕೊರಳ ಹಗ್ಗ ಮತ್ತು ಮೂಗುದಾರ ಎರಡನ್ನು ಸೇರಿಸಿ ಮತ್ತೊಂದು ಉದ್ದನೆಯ ಹಗ್ಗ – ಇದು ಹಿಡಿದುಕೊಳ್ಳಲು ಮತ್ತು ಕಟ್ಟಿಹಾಕಲು ನೆರವಾಗುತ್ತದೆ.

ಬಾಯಿಕುಕ್ಕೆ ಮತ್ತು ಮಕರಂಬೆ ತಂತ್ರಜ್ಞಾನ ಜಾನುವಾರುಗಳ ದ್ವಿತೀಯ ಹಂತದ ನಿಯಂತ್ರಣಕ್ಕೆ ಅವಶ್ಯಕ.

ಬೆಳೆದ ಹೊಲಗಳನ್ನು ಹರಗುವಾಗ, ಪೈರಿನ ವೇಳೆ ಎಡೆಕುಂಟೆ ಹೊಡೆಯುವಾಗ ಕುಂಟೆಗೆ ಕಟ್ಟಿದ ಎತ್ತುಗಳು ಫಸಲಿಗೆ ಬಾಯಿ ಹಾಕದಿರಲು ಬಾಯಿಕುಕ್ಕೆ ಹಾಕುತ್ತಾರೆ. ಹೊಲಗಳ ಹಾದಿಯಲ್ಲಿ ದಾರಿ ಸವೆಯುವಾಗಲೂ ಈ ಬಾಯಿಕುಕ್ಕೆ ಅನಿವಾರ್ಯ. ಬಿದಿರಿನಿಂದ ಮಾಡಿದ ಬಾಯಿ ಕುಕ್ಕೆಗಳನ್ನು ಹಿಂದೆಲ್ಲ ಸಂತೆಗಳಲ್ಲಿ ಮಾರುತ್ತಿದ್ದರು. ಕೆಲವು ಕುಶಲೀ ರೈತರುಗಳು ನಾರಿನಂತಿರುವ ಅಂಬುಗಳಿಂದ ಎಳೆ ಬಿದಿರುಗಳಿಂದ ತಾವೇ ಬಾಯಿಕುಕ್ಕೆಯನ್ನು ಎಣೆದುಕೊಳ್ಳುತ್ತಿದ್ದರು. ಫಸಲು ಕಾಲದಲ್ಲಿ ಹೊರತು ಪಡಿಸಿ ಉಳಿದ ಸಮಯದಲ್ಲಿ ಈ ಬಾಯಿ ಕುಕ್ಕೆಗಳು ಕೊಟ್ಟಿಗೆಯ ಮೂಲೆಯಲ್ಲಿ ಅಟ್ಟ ಸೇರುತ್ತಿದ್ದವು.

ಹಾಲು ಕುಡಿಯುವ ಹಂತದ ಕರುಗಳಿಗಾಗಿ ಮಕರಂಬೆ ಬಳಸಲಾಗುತ್ತದೆ. ಇದು ನೂಲಿನ ಹಗ್ಗದಿಂದ ಮಾಡಿದ್ದು ಕರು ಮಣ್ಣು ನೆಕ್ಕದಂತೆ, ಮಣ್ಣುತಿನ್ನದಂತೆ, ಪದೇ ಪದೇ ಹಾಲು ಕುಡಿಯದಂತೆ ಮಾಡಲು ಈ ತಂತ್ರಜ್ಞಾನ ಬಳಕೆಗೆ ಬಂದಿದೆ.

ಜಾನುವಾರುಗಳ ನಿಯಂತ್ರಣ ತಂತ್ರಜ್ಞಾನದಲ್ಲಿ ಬಾರುಕೋಲಿನ ಪಾತ್ರವೂ ಇದೆ. ಉಳುವಾಗ, ಬಿತ್ತುವಾಗ, ಗಾಡಿ ಹೊಡೆಯುವಾಗ ಮೌಖಿಕ ಸಂಜ್ಞೆಗಳ

ಪಾತ್ರವೂ ಇದೆ. ಕೋಲು ಮತ್ತು ಬಾರುಗೋಲುಗಳನ್ನು ಹೊಡೆಯುವುದಕ್ಕಾಗಿ ಮಾತ್ರವೇ ಬಳಸದೆ ಸಂಜ್ಞೆ ನೀಡಲೂ ಬಳಸಲಾಗುತ್ತದೆ. ವಾಸ್ತವವಾಗಿ ಬಾರುಕೋಲುಗಳು ಹೊಡೆಯುವ ಕಾರಣಕ್ಕಾಗಿ ರೂಪುಗೊಂಡವಲ್ಲ. ಕೋಲಿನ ಮುಂಭಾಗದ ದಾರ ಚುರುಕಾಗಿರುವಂತೆ ಹೇಳಲು ಬಳಕೆಯಾದರೆ, ಕೋಲಿನ ಮುಂಭಾಗದ ತುದಿ ಎಚ್ಚರಿಸಲು ಮತ್ತು ಇತರ ಸಂಜ್ಞೆಗಳನ್ನು ನೀಡಲು ಬಳಸಲಾಗುತ್ತದೆ. ಉದಾಹರಣೆಗೆ ಉಳುವಾಗ/ ಗಾಡಿ ಎಳೆಯುವಾಗ ಎಡಗೋಲು (ಎಡಕ್ಕೆ ಇರುವ ಹಸು/ಎತ್ತು) ಬಲಗೋಲು (ಬಲಕ್ಕೆ ಇರುವ ಹಸು/ಎತ್ತು)ಗಳ ನಡುವೆ ಸಮನ್ವಯ ಸಾಧಿಸಲು; ಎಡಗೋಲು ವೇಗವಾಗಿದ್ದು, ಬಲಗೋಲು ವೇಗವಾಗಿರದಿದ್ದರೆ ಅಥವಾ ಬಲಗೋಲು ವೇಗವಾಗಿದ್ದು ಎಡಗೋಲು ನಿಧಾನವಾಗಿದ್ದರೆ, ಎರಡಕ್ಕೂ ಕೋಲಿನ ತುದಿಯಿಂದ ನವಿರಾಗಿ ಚುಚ್ಚಿ / ತಟ್ಟಿ ಹೇಳಬೇಕಾಗುತ್ತದೆ. ಬಲಕ್ಕೆ ತಿರುಗು, ಎಡಕ್ಕೆ ತಿರುಗು: ಏ ಬಲಗೋಲು ನಿಧಾನಿಸು, ಎಡಗೋಲೆ ನೀನು ನಿಧಾನಿಸಬೇಡ. ಎಡಕ್ಕೆ ಸರಿ; ಬಲಕ್ಕೆ ಬಾ; ಮುನ್ನುಗ್ಗು; ನಿಧಾನಿಸು, ನಿಲ್ಲು ಇತ್ಯಾದಿ ಸಂಜ್ಞೆಗಳನ್ನು ಮೌಖಿಕ ಸಂಜ್ಞೆಗಳಿಂದಲೂ ಯಶಸ್ವಿಯಾಗಿ ನೀಡಬಹುದು.

ಹೊಸದಾಗಿ ಉಳುಮೆಗೆ ಅಥವಾ ಗಾಡಿಗೆ ಕಟ್ಟುವ ಕರು/ಕಡಸುಗಳಿಗೆ ತರಬೇತಿಯ ಅಗತ್ಯವಿದೆ. ಉಳುಮೆ ಕಲಿತ ಎತ್ತುಗಳಿಗೆ – ಗಾಡಿ ಎಳೆಯುವ ತಿಳುವಳಿಕೆಯನ್ನು ಹೆಚ್ಚಾಗಿ ಹೇಳಿ ಕೊಡಬೇಕಾಗಿಲ್ಲ. ಇದು ಒಂದು ರೀತಿಯಲ್ಲಿ ಸೈಕಲ್ ಹೊಡೆಯುವುದರಲ್ಲಿ ಪಳಗಿದವರು – ಬೈಕ್ ಓಡಿಸಿದಂತೆ!

ಏರಿನ ಆರಂಭದ ಮೊದಲ ಪಾಠ – ಅವುಗಳ ಸ್ಥಾನವನ್ನು ನಿರ್ಧರಿಸುವುದು (೧) ಎಡಗೋಲು; (೨) ಬಲಗೋಲು; ಎಡಗೋಲಿಗೆ ಅಭ್ಯಾಸವಾದ ಎತ್ತು ಬಲಗೋಲಿಗೆ ಸರಿ ಬರುವುದಿಲ್ಲ. ತಾಳ, ಲಯ ಎಲ್ಲವೂ ತಪ್ಪಿ ಅಪಾಯ ಸಂಭವಿಸುವ ಸಾಧ್ಯತೆ ಹೆಚ್ಚು. ಹಾಗೆಯೇ ಬಲಗೋಲಿಗೆ ರೂಢಿಯಾದ ಎತ್ತು ಎಡಗೋಲಿಗೆ ಸರಿ ಬರುವುದಿಲ್ಲ. ಶುರುವಿನಲ್ಲಿ ಅವುಗಳ ಸ್ಥಾನ ನಿರ್ಧಾರವಾದ ಬಳಿಕ ಎಡಗೋಲನ್ನು ನೊಗದ ಎಡಭಾಗಕ್ಕೆ ನಿಲ್ಲಿಸಿ; ಬಲಗೋಲನ್ನು ನೊಗದ ಬಲಭಾಗಕ್ಕೆ ನಿಲ್ಲಿಸಿ ನಂತರ ಎರಡರ ಕೊರಳ ಮೇಲೆ ನೊಗ ಇರಿಸಿ: ಎರಡರ ಕೊರಳುಗಳನ್ನು ಹಗ್ಗದ ಸಹಾಯದಿಂದ ನೊಗಕ್ಕೆ ಕಟ್ಟಬೇಕು. ಖಾಲಿ ನೊಗ ಮಾತ್ರ ಕಟ್ಟಬೇಕು. ನೇಗಿಲು ಕಟ್ಟಬಾರದು, ಹೀಗೆ ಕೇವಲ ನೊಗ ಮಾತ್ರ ಕಟ್ಟಿ ಹೊಲದಲ್ಲಿ ತರಬೇತಿ ನೀಡಬೇಕು. ನೊಗ ಕಟ್ಟಿ ಹಗ್ಗ ಹಿಡಿದುಕೊಂಡು ಹೊರಟರೆ – ಎತ್ತುಗಳು ಮೊದ ಮೊದಲು ಗೊಂದಲ ಗೊಂಡಿರುತ್ತವೆ. ಒಂದೆರಡು ಗಂಟೆಯ ತರುವಾಯ ನೊಗದ ಪಾತ್ರವನ್ನು ಅರ್ಥಮಾಡಿಕೊಳ್ಳುತ್ತವೆ. ಆನಂತರ ಸಂಜ್ಞೆಗಳನ್ನು ಕೂಡ ಅರ್ಥೈಸಿಕೊಳ್ಳ ತೊಡಗುತ್ತವೆ. ಒಂದರಿಂದ ಎರಡುವಾರ ನೊಗಗಳಲ್ಲಿ

ಓಡಾಡುವಂತೆ ಮಾಡಿ, ಆನಂತರ ನೇಗಿಲು ರಹಿತ 'ಸರ' ಕಟ್ಟಿ ಎಳೆಸಲಾಗುತ್ತದೆ. ಹೀಗೆ ಎಳೆಸಿದ ನಾಲ್ಕೈದು ದಿನಗಳಲ್ಲೇ ನೇಗಿಲು ಹೂಡಬಹುದು. ಮುಂದಿನ ಏರಿನ ಹಿಂದೆ ನಾಲ್ಕಾರು ದಿನ ಉತ್ತು ಬಂದರೆ, ಆ ಮೇಲೆ ಅವು ಸ್ವತಂತ್ರವಾಗಿಯೇ ಉಳುವುದನ್ನು ರೂಢಿಮಾಡಿಕೊಳ್ಳುತ್ತವೆ.

ದುಡಿವ ಜಾನುವಾರುಗಳ ಸಂರಕ್ಷಣೆಗೆ ರೈತರು ತೆಗೆದುಕೊಂಡ ಮುಂಜಾಗರೂಕತೆಯೇ ಲಾಳ. ಕುದುರೆಗಳಿಗೆ ಮೀಸಲಾಗಿದ್ದ ಲಾಳ ಅಳವಡಿಕೆ ಕ್ರಮ ಕ್ರಮೇಣ ಅತ್ಯುತ್ತಮ ಗುಣಮಟ್ಟದ ಎತ್ತುಗಳ ಪಾದ ರಕ್ಷೆಗಾಗಿ ಎಂಬಂತೆ ಶುರುವಾದದ್ದು ಕ್ರಮೇಣ ಎಲ್ಲ ದುಡಿಯುವ ಹಸು, ಎತ್ತುಗಳಿಗೂ ವಿಸ್ತರಿಸಿತು. ನಮ್ಮ ಹಳ್ಳಿಗಾಡಿನಲ್ಲಿ ವರ್ಷಕ್ಕೆ ಎರಡು ಬಾರಿ ಅಥವಾ ಮೂರು ಬಾರಿ ಲಾಳ ಕಟ್ಟಲಾಗುತ್ತದೆ.

ಲಾಳ ಕಟ್ಟುವುದು ಅತ್ಯಂತ ನೈಪುಣ್ಯದ ಮತ್ತು ಶ್ರಮದಿಂದ ಕೂಡಿದ ಕೆಲಸ, ಜಾನುವಾರುಗಳನ್ನು ಪೆಟ್ಟಾಗದಂತೆ ನೆಲಕ್ಕೆ ಕೆಡುವುದರಲ್ಲೂ ನೈಪುಣ್ಯತೆಯಿದೆ. ಸಾಮಾನ್ಯವಾಗಿ ಈ ಲಾಳದ ಕೆಲಸ ಮಾಡುವವರೆಲ್ಲರೂ ಸಾಬರುಗಳೆ (ಮುಸಲ್ಮಾನರು) ಜಾನುವಾರಗಳ ಹೊಟ್ಟೆಯನ್ನು ಹಗ್ಗದಿಂದ ಬಿಗಿ ಮಾಡಿ, ಕೊಂಬುಗಳು ನೆಲಕ್ಕೆ ಬಡಿಯದಂತೆ ಎಚ್ಚರ ವಹಿಸಿ ಜೋಪಾನವಾಗಿ ಕೆಡವಿಕೊಂಡು ೨೦ ರಿಂದ ೩೦ ನಿಮಿಷದೊಳಗೆ ಲಾಳ ಕಟ್ಟುತ್ತಾರೆ. ಗೊರಸುಗಳನ್ನು ಲಾಳದ ಕತ್ತಿಯಿಂದ ಎರೆದು; ಟ್ರಿಮ್ ಮಾಡಿ, ಪಾದದ ಉಬ್ಬು-ತಗ್ಗುಗಳನ್ನೆಲ್ಲ ಸವರಿ, ೪ ರಿಂದ ೫ ಕಣ್ಣುಳ್ಳ ಲಾಳಗಳನ್ನು ಮೊಳೆಗಳಿಂದ ಬಡಿದರೆ ಜಾನುವಾರಗಳ ಪಾದರಕ್ಷೆ ಸಿದ್ಧ!.

ದುಡಿಮೆಗೆ ಹೆಚ್ಚಾಗಿ ಬಳಸುವ, ಟಾರು ರಸ್ತೆಗಳಲ್ಲಿ ಓಡಾಡುವ, ಕೆಸರು ಗದ್ದೆಗಳಲ್ಲಿ ಕೆಲಸ ಮಾಡುವ ಎತ್ತುಗಳಿಗೆ ಪ್ರತಿ ಎರಡು ತಿಂಗಳಿಗೊಮ್ಮೆ ಅಥವಾ ಸವೆದಾಗಲೆಲ್ಲ ಲಾಳ ಕಟ್ಟಿಸುವುದು ರೂಢಿಯಾಗಿದೆ.

ರೈತಾಪಿ ಜನ ಜಾನುವಾರುಗಳನ್ನು ತಮ್ಮ ಮನೆಯ ಮಕ್ಕಳಂತೆ ಪರಿಭಾವಿಸುತ್ತಾರೆ. ಹಸು, ಎತ್ತು, ಕರುಗಳ ಕೊರಳಿಗೆ ನಾನಾ ನಮೂನೆಯ ಗಂಟೆಗಳು, ಬುಗುಡಿಗಳು, ಗಿಲಕಿಗಳನ್ನು ಕಟ್ಟಿ ತಾವೇ ಕಟ್ಟಿಕೊಂಡಷ್ಟು, ಸಂಭ್ರಮ ಪಡುತ್ತಾರೆ. ಸಂಕ್ರಾಂತಿ / ದೀಪಾವಳಿ / ರಾಮನವಮಿ, ಬಸವ ಜಯಂತಿಗಳಲ್ಲಿ ಜಾನುವಾರುಗಳನ್ನು ನೀರಿಗಿಳಿಸಿ ಈಜಿಸಿ, ಮೈತಿಕ್ಕಿ ಮಜ್ಜನ ಮಾಡಿಸಿ ಖುಷಿಗೊಳ್ಳುತ್ತಾರೆ. ಸಂಕ್ರಾಂತಿಯಂದು ಕೊಂಬುಗಳಿಗೆ ಬಣ್ಣ ಬಳೆದು, ಗುಲಾಂ ಪಟ್ಟಿ ಅಂಟಿಸಿ ಶೃಂಗಾರ ಮಾಡಿ ಗ್ರಾಮದ ದಾರಿಗಳಲ್ಲಿ ಅಡ್ಡಲಾಗಿ ಕಿಚ್ಚು ಹಾಕಿ, ಕಿಚ್ಚು ಹಾಯಿಸುತ್ತಾರೆ. ಹೀಗೆ ಮಾಡುವುದರ ಮೂಲಕ ಅವುಗಳ ಕುರಿತಾಗಿ ತಮಗಿರುವ ಜತನ, ಕಾಳಜಿ, ಪ್ರೀತಿಗಳನ್ನು ವ್ಯಕ್ತಮಾಡಿ ಧನ್ಯತೆ ಅನುಭವಿಸುತ್ತಾರೆ.

ವಾಸ್ತವವಾಗಿ ಕನ್ನಡ ನಾಡಿನಾದ್ಯಂತ ಪ್ರತಿ ಸೋಮವಾರ ದುಡಿಯುವ ಎತ್ತುಗಳಿಗೆ ವಿಶ್ರಾಂತಿ. ಅಂದು ಉಳುವ ಎತ್ತುಗಳನ್ನು ಉಳುಮೆಗಾಗಲಿ, ಗಾಡಿ ಕಟ್ಟಲಾಗಲಿ ಬಳಸುವುದಿಲ್ಲ. ವರ್ಷವಿಡೀ ಅಹರ್ನಿಷಿ ದುಡಿವ ರೈತಾಪಿ ಜನರಿಗೆ ರಜಾ, ವಿರಾಮ ಅನ್ನುವುದೇ ಇರುವುದಿಲ್ಲ. ಹೀಗಿರುವಾಗ ತಮಗಾಗಿ ದುಡಿಯುವ ಜಾನುವಾರುಗಳಿಗೆ ರಜೆ ಘೋಷಿಸುವುದರ ಹಿಂದೆ ಇರಬಹುದಾದ ಮಿಡಿಯುವ ಹೃದಯವೇ ಬೇಸಾಯ.

ದನದ ಸಂತೆಗಳು, ಜಾತ್ರೆಗಳು, ಜಾನುವಾರು ವಹಿವಾಟಿನ ಮಗದೊಂದು ಜಗತ್ತನ್ನು ಅನಾವರಣಗೊಳಿಸುತ್ತವೆ. ಹೇಮಗಿರಿ ಜಾತ್ರೆ, ಬೇಬಿ ಜಾತ್ರೆ, ಜೋಡುಗಟ್ಟೆ ಜಾತ್ರೆ, ಅಯ್ಯನಗಿರಿ ಜಾತ್ರೆ, ಚುಂಚನಕಟ್ಟೆ ಜಾತ್ರೆ, ಮುಡುಕುತೊರೆ ಜಾತ್ರೆ ಇವೆಲ್ಲ ಕೃಷಿ ಬದುಕಿನ ವೈಭವದ ಪತಾಕೆಗಳು. ಕೊಡು ಕೊಳ್ಳುವ ಈ ಜಾಗ ಮನುಷ್ಯನ ಮತ್ತು ಜಾನುವಾರಗಳ ಸಾಂಸ್ಕೃತಿಕ ಸೌಂದರ್ಯವನ್ನು ಸಾರುತ್ತವೆ.

ನಮ್ಮ ಜನ ಹಸುವನ್ನು ಕಾಮಧೇನು ಅನ್ನುತ್ತಾರೆ. ತಾನು ಹುಟ್ಟಿದಂದಿನಿಂದ ಸಾಯುವವರೆಗೂ ಪೂರ್ಣಮಟ್ಟದಲ್ಲಿ ಅದು ಉಪಯುಕ್ತವಾಗುತ್ತದೆ. ಜಾನುವಾರುಗಳ ಸಗಣಿಯಲ್ಲಿ ಬೆಳೆ ಬೆಳೆಯಲು ಬೇಕಾದ ಪೋಷಕಾಂಶಗಳನ್ನು ಸರಬರಾಜು ಮಾಡುವ ಜೀವಾಣುಗಳಿವೆ. ಗಂಜಳಕ್ಕೆ ರೋಗ ನಿರೋಧಕ ಶಕ್ತಿ ಇದೆ. ಸಗಣಿಯನ್ನು ಬೆರಣಿಯಾಗಿಸಿದರೆ ಒಲೆಗೆ ಉರುವಲು ಆಗುತ್ತದೆ. ಇನ್ನು ಹಸುವಿನ ಹಾಲು ತಾಯಿಯ ಹಾಲಿನಷ್ಟೇ ಶ್ರೇಷ್ಠ ಎಂಬುದು ಎಲ್ಲರಿಗೂ ತಿಳಿದಿದೆ. ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ನಮ್ಮ ಆಹಾರದ ಭಾಗವಾಗಿದೆ. ಈಗಲೂ ಜಗತ್ತಿನ ಮಾಂಸಬೇಡಿಕೆಗೆ ಹೆಚ್ಚಿನ ಮೂಲ ಜಾನುವಾರುಗಳದ್ದೇ ಆಗಿದೆ. ಬೇಸಾಯ ಸಂಸ್ಕೃತಿಯಲ್ಲಿ ದನದ ಮಾಂಸ ತಿನ್ನುವವರಿಗೂ ಪಾಲಿದೆ. ಗೋಹತ್ಯೆ ನಿಷೇಧಕ್ಕೆ ನಮ್ಮ ಹಳ್ಳಿಗಳಲ್ಲಿ ಯಾವುದೇ ಮಹತ್ವ ಇಲ್ಲ. ಈಗಲೂ ಕುಂಟುವ ಅಥವಾ ತಮಗೆ ಉಪಯುಕ್ತವಿಲ್ಲದ ರಾಸುಗಳನ್ನು ನಮ್ಮ ಜನ ಸ್ವಾಭಾವಿಕವೆಂಬಂತೆ ಕಸಾಯಿಖಾನೆಗಳಿಗೆ ಮಾರುತ್ತಾರೆ. ಹಾಲಿನ ಮೂಲಕ ಮಾನವನ ಹೃದಯ ಮಿಡಿಯುವ ಜಾನುವಾರು, ತನ್ನ ಮಾಂಸದ ಮೂಲಕ ಹೃದಯ ಮಿಡಿಯಲಾರದೆಂದು ಹೇಗೆ ವಾದಿಸುವುದು? ಹಾಲು ಕೂಡ ಶ್ರೇಷ್ಠ ಆಹಾರವೆ! ಹಾಗೆಯೇ ಮಾಂಸ ಕೂಡ ! ಯಾವ ಮಗ್ಗಲಿನಿಂದ ನೋಡಿದರೂ ಹಸು ಕಾಮಧೇನುವೆ. ಅದು ಸಮಸ್ತ ಮಾನವ ಜೀವನವನ್ನು ಸರ್ವರೀತಿಯಲ್ಲೂ ವ್ಯಾಪಿಸಿಕೊಂಡಿದೆ.

೩.೮. ಆಡು – ಕುರಿ ಕೃಷಿ

ಕುರಿ ಮತ್ತು ಆಡು ಸಾಕಣೆ ನಮ್ಮ ನಾಡಿನ ಬೇಸಾಯ ಜೀವನದ ಉಪಕಸುಬು, ಹಾಗೆಯೇ ಕೆಲವರ ಪ್ರಧಾನ ಕಸುಬು ಕೂಡ. ದೊಡ್ಡ ದೊಡ್ಡ ಗಾತ್ರದಲ್ಲಿ ಮಂದೆ ಕುರಿ ಮಾಡಿಕೊಂಡವರಿಗೆ ತಲತಲಾಂತರಗಳಿಂದ ಅದೇ ಕಸುಬು. ಅದು ಎಷ್ಟು ತೀವ್ರವಾಗಿದೆಯೆಂದರೆ ಕುರಿ ರೊಪ್ಪದಲ್ಲೇ ಹುಟ್ಟಿ ಕುರಿರೊಪ್ಪದಲ್ಲೇ ಸಾಯುವ ಮಟ್ಟಿಗೆ ಅಷ್ಟು ತೀವ್ರವಾಗಿ, ಅಷ್ಟು ಅನನ್ಯವಾಗಿ ಬದುಕುವವರು ನಮ್ಮ ಕುರುಬರು. ಅವರದೊಂದು ಬೀರೇದೇವರ ಪ್ರಾರ್ಥನೆ ಹೀಗಿದೆ.

"ಬೀರೇ ದ್ಯಾವರ ಪದವ ಹಾಡಿರೋ
ಗೆಣೆಯರೆಲ್ಲರು ಬಂದು ಸೇರಿರೋ
ಯಾರು ನಮಗೆ ಸರಿ ಹೇಳಿರೋ
ನಮ್ಮ ಊರೇ ಭೂಮಿಗೆ ಚಂದ ಕಾಣಿರೋ
ದೇವರ ದೇವ ಬೀರಪ್ಪ
ನಮ್ಮ ನೋವಿಲ್ಲದೆ ಕಾಯೋ ಬೀರಪ್ಪ
ಕಾಳಿಯ ರಮಣನೆ ಬೀರಪ್ಪ
ನಮ್ಮ ಮೇಲಾಗಿ ಪಾಲಿಸೊ ಬೀರಪ್ಪ

ದೇವರ ದೇವ ಬೀರಪ್ಪ
ಮಳೆಯನ್ನು ಕಾಲಕ್ಕೆ ಬೀರಪ್ಪ
ಊರೂರ ಬೆಳೆಯ ನೀ ಬೆಳೆಸೊ ಬೀರಪ್ಪ
ದನಕರು, ಕುರಿ ಆಡು ಬೀರಪ್ಪ
ನೀ ಮನವಿಟ್ಟು ಹೆಚ್ಚಿಸೊ ಬೀರಪ್ಪ
ಕೆರೆಕಟ್ಟೆ ಕಾಲುವೆ ಹರಿಯಲಿ
ಬಾವೀಲಿ ಸಿಹಿ ನೀರು ಉಕ್ಕಲಿ

ದೇವ ನಿನ್ನ ಹಬ್ಬ ಹೆಚ್ಚಲಿ
ಹೋದ ಜೀವವು ಕೂಡಿ ಕೊಂಡೇಳಲಿ
ಹೊಡೆದಾಟ ಜಗಳವು ಇಲ್ಲದೆ
ಎಂದೂ ಮಂದಿಗೆ ಬಡತನ ಬಾರದೆ
ವಿಷಮ ಬೆಂಕಿಯ ಭಯ ತೋರದೆ
ನಮ್ಮ ಹಸನಾಗಿ ಬಾಳಿಸೊ ಕೈಬಿಡದೆ

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣಿ ಬಸವಣ್ಣ! ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ"೨

ಇದು ಕುರಿ ಸಾಕುವವರ ಆಂತರ್ಯ. ಜನಪದರು ಯಾವ ಸನ್ನಿವೇಶಕ್ಕೂ ಇದನ್ನು ಅನ್ವಯಿಸಿಕೊಳ್ಳುವರು. ಛಳಿ, ಗಾಳಿ, ಮಳೆ, ಬಿಸಿಲುಗಳೊಂದಿಗೆ ಒಂದಾಗಿ ತಮ್ಮ ಸಾಂಪ್ರದಾಯಿಕ ಮೇವಿನ ಜಾಡಿಡಿದು ಹೊರಡುವ ಕುರಿ ಕೃಷಿಕರ ಜೀವನವೇ ಒಂದು ವಿಸ್ಮಯ. ಒಂದು ರೀತಿಯಲ್ಲಿ ಈ ಮಂದೆ ಕುರಿಗಳದ್ದು 'ಸಂಚಾರಿ ಕೃಷಿ' ಕಾರ್ಯಕ್ರಮ. ಯುಗಾದಿ ಕಳೆದು ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಂದ ಪ್ರತ್ಯೇಕ, ಪ್ರತ್ಯೇಕ ಮಂದೆಗಳಲ್ಲಿ ಹೊರಡುವ ಕುರಿಗಳು ಆಯಾಯ ಸನ್ನಿವೇಶಕ್ಕನುಗುಣವಾಗಿ ಬೆಳೆದ ಮೇವನ್ನು ಬಾಯಾಡಿಸುತ್ತ ಚಿತ್ರದುರ್ಗ, ನಾಗಮಂಗಲ, ಕೆ.ಆರ್.ಪೇಟೆ, ಕೆ.ಆರ್.ನಗರ ಮಾರ್ಗವಾಗಿ ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನ ಕೋಟೆ ನಂಜನಗೂಡು, ಗುಂಡ್ಲುಪೇಟೆವರೆಗೆ ಸಾಗುತ್ತವೆ. ಅಲ್ಲಿಂದ ಸಂತೆ ಮರಳ್ಳಿ, ಕೊಳ್ಳೇಗಾಲ, ಕನಕಪುರ, ರಾಮನಗರ, ಮಾಗಡಿ, ನೆಲಮಂಗಲ ಮಾರ್ಗವಾಗಿ ತಮ್ಮ ಮೂಲ ನೆಲೆಯತ್ತ ಸಾಗುತ್ತವೆ. ಕೆಲವು ಮಂದೆಗಳು ದಕ್ಷಿಣಕ್ಕೆ ವಿರುದ್ಧವಾಗಿ ಬೀದರ್ ಕಡೆಗೂ, ಬೆಳಗಾಂ ಕಡೆಗೂ ಹೊರಡುತ್ತವೆ.

ತುಮಕೂರು ಜಿಲ್ಲೆಯ ಶಿರಾ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕಿನ ಮಂದೆ ಕುರಿಯ ಕೃಷಿಕರು ಹೀಗೆಯೆ ರಾಜ್ಯದ ನಾನಾ ಮೂಲೆಗಳಿಗೆ ತಮ್ಮ ಮೂಲಪಥಗಳಲ್ಲಿ ಸಾಗುತ್ತಾರೆ. ಶಿವರಾತ್ರಿ ಕಳೆದು ಊರು ಬಿಟ್ಟವರು ಮತ್ತೆ ಯುಗಾದಿಯ ವೇಳೆಗೆ ಊರ ಸಮೀಪಕ್ಕೆ ಮಂದೆಗಳು ಆಗಮಿಸುತ್ತವೆ. ವರ್ಷಕ್ಕೆ ಎರಡು ಬಾರಿ ಮರಿ ಹಾಕುವ ಕುರಿಗಳು ಹೋಗುವಾಗ ಹೊಸ ಸಂತಾನದೊಂದಿಗೆ ಹೋಗಿ ಬರುವಾಗಲು ಹೊಸ ಸಂತಾನದೊಂದಿಗೆ ಬರುತ್ತವೆ.

ಬಳ್ಳಾರಿ ತಳಿ:

ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ರಾಯಚೂರು, ಧಾರವಾಡ ಮತ್ತು ಆಂಧ್ರದ ಕರ್ನೂಲು ಜಿಲ್ಲಾ ವ್ಯಾಪ್ತಿಯಲ್ಲಿ ಈ ತಳಿ ವ್ಯಾಪಿಸಿದೆ. ಇವು ಮೂಲತಃ ಕಪ್ಪು ಕುರಿಗಳು. ಜೋತು ಬಿದ್ದ ಕಿವಿಗಳು, ಉದ್ದದೇಹ, ತುಂಡು ಬಾಲ, ಸಣ್ಣ ಕುತ್ತಿಗೆ ಈ ತಳಿಯ ಮುಖ್ಯ ದೇಹಲಕ್ಷಣಗಳು. ತುಂಗಭದ್ರ ನದಿ ತೀರದ ತಳಿ ಎಂತಲೂ ಇದನ್ನು ಕರೆಯಬಹುದಾಗಿದೆ. ಟಗರುಗಳಿಗೆ ಕೊಂಬು ಇರುತ್ತವೆ. ಹೆಣ್ಣು ಕುರಿಗಳಿಗೆ ಕೊಂಬುಗಳು ಇರುವುದಿಲ್ಲ. ವರ್ಷಕ್ಕೆ ೬೦೦ ರಿಂದ ೭೦೦ ಗ್ರಾಂ ಉಣ್ಣೆ ಉತ್ಪಾದನೆಯಾಗುತ್ತದೆ. ಟಗರುಗಳು ೩೦ ರಿಂದ ೩೫ ಕಿ.ಲೋ ಗ್ರಾಂ ವರೆಗೂ ತೂಗಿದರೆ ಕುರಿಗಳು ೨೫ ರಿಂದ ೩೦ ಕಿಲೋಗ್ರಾಂ ತೂಗುತ್ತವೆ. ಈ ತಳಿಯು

ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಇದರ ಮಾಂಸ ರುಚಿಯಾಗಿರುತ್ತದೆ.

'ಎಳಗ ಕುರಿ' ಹೆಸರಿನ ಕುರಿಗಳು ಬಾಗಲಕೋಟೆ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಯ ಮುಖ್ಯ ಕುರಿಗಳಾಗಿವೆ. ಈ ಕುರಿ ಉಣ್ಣೆ ಉತ್ಪಾದಿಸುವುದಿಲ್ಲ. ಈ ಕುರಿಯ ರೋಮಗಳು ಬಿಳಿಯಾಗಿರುತ್ತವೆ. ಇದು ಅಷ್ಟಾಗಿ ಪ್ರಸಿದ್ಧಿಗೆ ಬಾರದ ತಳಿಯಾಗಿದೆ.

ಕೊಪ್ಪಳ ಮತ್ತು ರಾಯಚೂರು ಮೂಲದ ಮುಖ್ಯ ತಳಿ ಕೆಂಗುರಿ, ಈ ಕುರಿಗೆ ಉಣ್ಣೆ ಇರದೆ, ಮೈಭಾಗ ಹಸುವಿನ ಮೈಯಂತಿರುತ್ತದೆ. ಟಗರುಗಳಿಗೆ ದೊಡ್ಡದಾದ ಕೊಂಬುಗಳಿರುತ್ತವೆ. ಇವು ದೊಡ್ಡ ಗಾತ್ರದ ಕುರಿಗಳಾಗಿರುವುದರಿಂದ ಟಗರು ೫೦ ಕಿಲೋ ಗ್ರಾಂ ವರೆಗೆ ತೂಗಿದರೆ, ಕುರಿ ೪೦ ಕಿಲೋ ಗ್ರಾಂವರೆಗೆ ತೂಗುತ್ತದೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಸಾಕಲ್ಪಡುತ್ತಿವೆ.

ದೆಕ್ಕನಿ ತಳಿ :

ಈ ಕುರಿ ತಳಿ ಬೆಳಗಾಂ. ಬಿಜಾಪುರ, ಬಾಗಲಕೋಟೆ, ಧಾರವಾಡ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ನೆರೆಯ ಮಹಾರಾಷ್ಟ್ರದ ನಾಸಿಕ್, ಪೂನಾ, ಅಹಮದ್‌ನಗರ, ಕೊಲ್ಲಾಪುರ, ಶೋಲಾಪುರ, ಔರಂಗಾಬಾದ್ ಜಿಲ್ಲೆಗಳ ವ್ಯಾಪ್ತಿಯಲ್ಲೂ ಇವುಗಳ ಬಾಹುಳ್ಯ ದೊಡ್ಡದಾಗಿದೆ. ದಕ್ಷಿಣದ ಪ್ರಸ್ಥಭೂಮಿ ಈ ಕುರಿಗಳ ಮುಖ್ಯ ನೆಲೆಯಾದ ಪರಿಣಾಮ ಈ ತಳಿಗೆ 'ದೆಕ್ಕನಿ ತಳಿ" ಎಂದು ಕರೆಯಲಾಗಿದೆ. ತುಂಡು ಬಾಲ, ರೋಮನ್ ಮೂಗು, ತೆಳುವಾದ ಕತ್ತು, ಚಿಕ್ಕದಾದ ಎದೆಗೂಡು, ಚಪ್ಪಟೆಯಾದ ಪಕ್ಕೆಲುಬುಗಳು, ತೆಳ್ಳನೆಯ ಕಾಲುಗಳು ಈ ತಳಿಯ ಲಕ್ಷಣಗಳು. ಸಾಮಾನ್ಯವಾಗಿ ಇವುಗಳ ಬಣ್ಣ ಕಪ್ಪು, ಕೆಲ ಕುರಿಗಳಲ್ಲಿ ಬಿಳಿ ಅಥವಾ ಕಂದು ಮಚ್ಚೆಗಳಿರುತ್ತವೆ. ಒರಟಾದ ಕಂಬಳಿಗೆ ಇದರ ಉಣ್ಣೆ ಬಳಸಲ್ಪಡುತ್ತದೆ.

ಮಂಡ್ಯ ಕುರಿ :

ಮೂಲತಃ ಇದು ಬಂಡೂರು (ಮಳವಳ್ಳಿ ತಾಲ್ಲೂಕು) ತಳಿ. ಬನ್ನೂರ್ ಕುರಿ ಎಂದೇ ಜಗದ್ ಪ್ರಸಿದ್ಧಿ. ರೋಮನ್ ಮೂಗು, ಜೋಲುಗಡ್ಡ, ಮೋಟುಗಾಲುಗಳ ಮೇಲೆ ಮೈದುಂಬಿ ನಿಂತ ಭಂಗಿ – ಈ ತಳಿ ವೈಶಿಷ್ಟ್ಯ. ದಪ್ಪನೆಯ ಎದೆ ಚಿಗುರು, ಹದವಾದ ಚರಬಿ ರುಚಿಯಾದ ಮಾಂಸ– ಹೀಗಾಗಿ ಈ ಕುರಿಯ ಹೆಸರಲ್ಲಿ 'ಬನ್ನೂರ್ ಮಿಲ್ಟ್ರಿ ಹೋಟೆಲ್'ಗಳು ತಲೆ ಎತ್ತಿವೆ. ಕಾಲು ಸೂಪು,

ತಲೆಮಾಂಸ, ಬೋಟಿಗೊಜ್ಜು, ಬ್ರೈನ್ ಫ್ರೈ, ಕುರ್ಮಾ, ರಾಗಿ ಮುದ್ದೆ ಈ ಹೋಟೆಲ್‌ಗಳ ವಿಶೇಷ ಮೆನು.

ಇವುಗಳನ್ನು ಮಂದೆಗಳಲ್ಲಿ ಮೇಯುಸುವುದಿಲ್ಲ. ದೊಡ್ಡ ದೊಡ್ಡ ದೊಡ್ಡಿಗಳಲ್ಲಿ ಕೂಡಿ ಹಾಕಿಯೂ ಬಾಳಿಸುವುದಿಲ್ಲ. ಬಯಲಲ್ಲಿ ಬಿಟ್ಟು ಮೇಯಿಸುತ್ತಾರೆ. ಮತ್ತು ಹಸುಗಳ ರೀತಿಯಲ್ಲಿ ಗೊತ್ತುಗಳಲ್ಲಿ ಕಟ್ಟಿ ಹಾಕುತ್ತಾರೆ. ಕನಕಪುರ, ಕೊಳ್ಳೇಗಾಲಗಳಲ್ಲಿ ಹಿಂಡು ಹಿಂಡುಗಳಲ್ಲಿ ಮೇಯಿಸಿ ರಾತ್ರಿ ಕೊಟ್ಟಿಗೆಗಳಿಗೆ ಕೂಡುತ್ತಾರೆ. ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳು ಇವುಗಳ ವ್ಯಾಪ್ತಿ, ಕತ್ತಿನ ತಳ ಭಾಗದಲ್ಲಿ ಗಂಟೆಗಳ ತರ ಎರಡು ಮಾಲೆಗಳು ನೇತಾಡುತ್ತಿರುತ್ತವೆ. ಹೀಗಾಗಿ ಈ ತಳಿಯನ್ನು ಗುರುತಿಸುವುದು ಸುಲಭ. ಟಗರುಗಳು ೩೦ ರಿಂದ ೩೫ ಕಿಲೋಗ್ರಾಂ ತೂಗಿದರೆ ಹೆಣ್ಣು ಕುರಿಗಳು ೨೫ ರಿಂದ ೩೦ ಕಿಲೋಗ್ರಾಂ ತೂಗುತ್ತವೆ. ಆಡು, ಕುರಿ ಸಾಕದವರೂ ಕೂಡ ಮಹರ್‌ನವಮಿ ಹಬ್ಬಗಳಲ್ಲಿ ಕೊಯ್ಯಲು ೨-೩ ಟಗರುಗಳನ್ನು ಹರಕೆಯ ರೂಪದಲ್ಲಿ ಬಿಟ್ಟುಕೊಂಡು; ಕೈ ಪಾಟ ಮಾಡಿ ಮುದ್ದಿನಿಂದ ಬೆಳೆಸುತ್ತಾರೆ. ಈ ಕಾರಣವಾಗಿ ಇಂಥ ಕುಟುಂಬಗಳಲ್ಲಿ ಮಾಂಸ ತಿನ್ನುವುದನ್ನೇ ಬಿಟ್ಟು ಬಿಡುವ ಪ್ರಸಂಗಗಳೂ ಇವೆ.

ಹಾಸನ ಜಿಲ್ಲೆಯದ್ದೂ ಒಂದು ಕುರಿತಳಿ ಇದೆ. ಇದಕ್ಕೆ ಹಾಸನದ ತಳಿ ಎನ್ನುತ್ತಾರೆ. ಬಿಳಿ, ಕಂದು, ಕಪ್ಪು ಮಿಶ್ರಿತ ಬಿಳಿ ಬಣ್ಣದಲ್ಲಿ ಇವು ಕಂಡುಬರುತ್ತವೆ. ರೋಮನ್ ಮೂಗು, ಜೋತಾಡುವ ಕಿವಿ, ಮಧ್ಯಮ ಗಾತ್ರ ಈ ತಳಿಯ ವಿಶೇಷ. ಇದು ಮೂಲತಃ ಮಾಂಸದ ತಳಿ. ಹೆಣ್ಣು ಕುರಿಯ ಸರಾಸರಿ ತೂಕ ೨೪ ಕಿಲೋಗ್ರಾಂ. ಆದರೆ ಟಗರಿನ ಸರಾಸರಿ ತೂಕ ೩೨ ಕಿಲೋಗ್ರಾಂ ಆಗಿರುತ್ತದೆ. ಸಣ್ಣ ಹಿಡುವಳಿದಾರರು ಮತ್ತು ಭೂಹೀನ ಕೃಷಿಕರು ಇವನ್ನು ಸಾಕುತ್ತಾರೆ.

ಮಂದೆ ಕುರಿಗಳಿಂದಾಗಿ ಬೀಜ ಪ್ರಸಾರವಾಗುತ್ತದೆ. ಇದರಿಂದಾಗಿ ಸಸ್ಯ ವೈವಿಧ್ಯತೆ ಉಳಿಯಲು ಮತ್ತು ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಈಗಲೂ ನಮ್ಮ ಕೃಷಿಕರು ತಮ್ಮ ತೋಟ, ಹೊಲ ಗದ್ದೆಗಳಿಗೆ ಕುರಿ ತಡೆಸುತ್ತಾರೆ. ಒಂದು ರಾತ್ರಿ ಮಂದೆ ಕುರಿ ತಡೆದರೆ, ಮಂದೆ ಕುರಿಯವರಿಗೆ ರೈತರು ಇಂತಿಷ್ಟು ಎಂದು ದುಡ್ಡು ಕೊಡುತ್ತಾರೆ. ಇದು ಮಂದೆ ಕುರಿಯವರ ಊಟ ಮತ್ತು ದಾರಿ ಖರ್ಚಿಗೆ ನೆರವಾಗುತ್ತದೆ.

ಕುರಿ ತಡೆಯುವಿಕೆಗಾಗಿಯೇ "ಕುರಿದಳ" ರಚನೆಯಾಗುತ್ತದೆ. ಸಾವಿರ ಕುರಿಗಳಿರುವ ಮಂದೆಯನ್ನು ನೋಡಿಕೊಳ್ಳಲು ೮ ಜನರಿರುವ ದಳ ಇರುತ್ತದೆ. ಅದರೊಂದಿಗೆ ಅವರ ನಾಲ್ಕು ಸಾಕು ನಾಯಿಗಳೂ ಇರುತ್ತವೆ. ರಾತ್ರಿ ವೇಳೆ ಸರದಿ ಪ್ರಕಾರ ಎಚ್ಚರವಿದ್ದು ಕುರಿ ಕಾಯುತ್ತಾರೆ. ಬೀದಿ ನಾಯಿಗಳು, ತೋಳಗಳು ಮತ್ತು

ಕದಿಯುವವರು – ಈ ಮೂರು ಕಾಟ ಹೊರತು ಪಡಿಸಿದರೆ ಮತ್ತಾವ ಕಾಟವೂ ಇಲ್ಲ ಕುರಿ ಕೃಷಿಕರಿಗೆ, ಕುರಿ ಸಾಕಾಣೆಯಿಂದ ಇಲ್ಲಿ ಉಣ್ಣೆ ಉದ್ಯಮವೂ ಬೆಳೆದಿದೆ.

ಆಡುಗಳನ್ನು ಕುರಿ ಮಂದೆಯ ಹಾಗೆ ದೊಡ್ಡಮಟ್ಟದಲ್ಲಿ ಸಾಕುವುದಿಲ್ಲ. ಗ್ರಾಮೀಣ ಆರ್ಥಿಕತೆಗೆ ಆಡಿನ ಪಾತ್ರವೂ ದೊಡ್ಡದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಡಿನ ಹಾಲು ಪ್ರಾಮುಖ್ಯತೆ ಪಡೆದುಕೊಂಡಿದೆ. ಆಡು, ಆಡಿನ ಮರಿಗಳು ಬೇಸಾಯ ಕುಟುಂಬದ ಭಾಗವಾಗಿವೆ. ಇವುಗಳನ್ನು ಹೆಚ್ಚು ಮುದ್ದಿನಿಂದ ಸಾಕಿ ಬೆಳೆಸುತ್ತಾರೆ. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆಯಿದೆ. ಎಲ್ಲ ಬಗೆಯ ಸೊಪ್ಪುಗಳು, ಧಾನ್ಯದ ಗಿಡಗಳು, ಇತರೆ ಸಸ್ಯಗಳನ್ನೆಲ್ಲ ಆಡು ಮನಸ್ಸೋ ಇಚ್ಛೆ ಮೇಯುತ್ತವೆ. ಅಧ್ಯಯನದ ಹಿನ್ನೆಲೆಯಲ್ಲಿ ಕರ್ನಾಟಕದ ಜಾನುವಾರು ಸಂಪತ್ತಿನ ಕೋಷ್ಠಕವನ್ನು ಇಲ್ಲಿ ನೀಡಲಾಗಿದೆ.

೩.೯. ದೇಸೀ ಪಶು ವೈದ್ಯ ಜ್ಞಾನ :

ಮಾನವ ಮತ್ತು ಪಶುಗಳ ನಡುವೆ ಮೈತ್ರಿ ಬೆಳೆದ ತರುವಾಯ, ಅನಾದಿ ಕಾಲದಿಂದಲೂ ಪಶುಗಳ ಸಂರಕ್ಷಣೆಯ ಹೊಣೆ ಹೊತ್ತು ಸಾಗಿದ್ದಾನೆ. ಹೊತ್ತು ಹೊತ್ತಿಗೆ ಮೇವು, ನೀರು ಮತ್ತು ರಕ್ಷಣೆ ಬೇಸಾಯ ಜೀವನದ ಆದ್ಯ ಕರ್ತವ್ಯ. ಕೂಡುಕುಟುಂಬ / ಅವಿಭಕ್ತ ಕುಟುಂಬಗಳಿದ್ದಾಗ ಇಂಥವಕೆಲ್ಲ ನಿರ್ದಿಷ್ಟ ಪಡಿಸಿದ ವ್ಯಕ್ತಿಗಳಿದ್ದರು. ಒಬ್ಬರಿಲ್ಲದಿದ್ದರೆ ಮತ್ತೊಬ್ಬರು ಅವುಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ನಮ್ಮ ಗ್ರಾಮೀಣ ವ್ಯವಸ್ಥೆಯಲ್ಲಿ ಅವಿಭಕ್ತ ಕುಟುಂಬಗಳು ಶಿಥಿಲವಾಗಲು ಶುರುವಾದ ಮೇಲೆ – ವ್ಯವಸ್ಥಿತ ಪಶುಪಾಲನೆಗೆ ತೊಡಕು ಕಾಣಿಸಿಕೊಂಡಿತು.

ರೈತಾಪಿ ಕುಟುಂಬದಲ್ಲಿ ಜಾನುವಾರುಗಳಿಗೆ ಕುಟುಂಬದ ಸದಸ್ಯನಿಗಿರುವಷ್ಟೇ ಪ್ರಾಮುಖ್ಯತೆ ಇದೆ. ಈಗಿನ ವಿಭಕ್ತ ಕುಟುಂಬಗಳಲ್ಲಿ ಮನೆಯಲ್ಲಿ ರಾಸುಗಳಿದ್ದರೆ ದೂರದ ಊರುಗಳಿಗೊ; ನೆಂಟರಿಷ್ಟರ ಮದುವೆ, ನೆರವಿ, ತಿಥಿ, ಸಾವಿನಂತ ಸಂದರ್ಭಗಳಿಗೆ ಹೋಗಿ ದಿನಗಟ್ಟಳೆ, ವಾರಗಟ್ಟಲೆ ಉಳಿಯುವುದು ಅಸಾಧ್ಯ. ಬೆಳಿಗ್ಗೆ ಪೇಟೆಗೆ ಬಂದ ರೈತ, ನಾನಾ ಕಾರಣಗಳಿಂದ ಸಂಜೆ ೧/೨ ಗಂಟೆ ತಡವಾಗಿ ಬಸ್ಸು ಬಂದರೆ ತತ್ತರಿಸಿ ಹೋಗುತ್ತಾನೆ. ಅವನ ಆ ಘಳಿಗೆಯ ದುಃಖ, ಸಂಕಟಗಳಿಗೆ ನೇರ ಕಾರಣ ಹಸುವಿಗೆ ನೀರು ಕುಡಿಸಿಲ್ಲ. ಮೇವು ಹಾಕುವವರಿಲ್ಲ, ಕೊಟ್ಟಿಗೆಗೆ ಕಟ್ಟಿ ಹಾಕುವವರಿಲ್ಲ ಎಂಬುದು. ಇದಿಷ್ಟೆ ಕಾರಣಕ್ಕೆ ಒಂಟಿ ಕುಟುಂಬದವರು ತಮ್ಮ ಹೊಲ, ಮನೆ ಬಿಟ್ಟು ಹೊರಗೆ ಬರುವುದಿಲ್ಲ. ಆಧುನಿಕ ಕೃಷಿಯ ಈ ಸಂದರ್ಭದಲ್ಲಿ ಇದೇ ಕಾರಣ ಪ್ರಧಾನವಾಗಿ ಜಾನುವಾರುಗಳ ಸಾಕಾಣಿಕೆಯನ್ನು ನಿಲ್ಲಿಸುತ್ತಿರುವುದನ್ನು ನಾವು ಕಾಣಬಹುದು. ಎತ್ತುಗಳ ಜಾಗಕ್ಕೆ ಟಿಲ್ಲರ್, ಟ್ರಾಕ್ಟರ್‌ಗಳು ಬರುತ್ತಿವೆ.

ಹಾಲಿಗಾಗಿ ಅಧಿಕ ಇಳುವರಿಯ ವಿದೇಶಿ ತಳಿಗಳು ಬಂದಿವೆ. ವ್ಯವಸ್ಥಿತವಾಗಿ ಹಾಲು ವಿತರಿಸುವ ಡೈರಿಗಳ ಜಾಲವೂ ಬೆಳೆದಿದೆ. ಬೇಸಾಯ ಜೀವನದಿಂದ ಜಾನುವಾರುಗಳನ್ನು ದೂರ ಮಾಡಲು ಇದಕ್ಕಿಂತ ಸುಸಂದರ್ಭ ಇನ್ನಾವುದಾದರೂ ಇದೆಯೇ?

ಇಷ್ಟಾದರೂ ಪಾರಂಪರಿಕವಾಗಿ ಬಂದ ಆಸಕ್ತಿ, ರಕ್ತಗತವಾಗಿ ಬಂದ ಜ್ಞಾನ, ರಕ್ತಗತವಾಗಿ ಬಂದ ಮೋಹ ಜಾನುವಾರುಗಳೊಂದಿಗೆ ನಮ್ಮ ರೈತರನ್ನು ಕಟ್ಟಿ ಹಾಕಿದೆ. ಹೀಗಾಗಿ ರೈತ ತನಗೆ ಬರುವ ಕಾಯಿಲೆಗಳಿಂದ ಹೇಗೆ ತೊಳಲಾಡುವನೊ, ನರಳುವನೊ, ಆತಂಕ ಪಡುವನೋ ಹಾಗೆಯೇ ತನ್ನ ಸಾಕು ಪ್ರಾಣಿಗಳಿಗೆ ಕಾಯಿಲೆಗಳು ಬಂದಾಗಲೂ ನರಳುತ್ತಾನೆ. ಚಡಪಡಿಸುತ್ತಾನೆ. ತನ್ನನ್ನು ಉಪಚರಿಸಿಕೊಂಡ ಮಾರ್ಗದಲ್ಲೇ ತನ್ನ ಪ್ರಾಣಿಗಳನ್ನು ಉಪಚರಿಸಲು ಯತ್ನಿಸುತ್ತಾನೆ. ಅದರ ಅಂಗವಾಗಿಯೇ ಜನಿಸಿದ್ದು ಈ ಪಶು ವೈದ್ಯ ಜ್ಞಾನ!

ಹೇಳಿ–ಕೇಳಿ ಹಸುಗಳು ಮೂಗು ಬಸವಣ್ಣ, ಮೂಕ ಪ್ರಾಣಿಗಳು ಮಾತನಾಡಲಾರವೆಂದೇ ಆ ಮಟ್ಟಿಗಿನ ಕಾಳಜಿ. ಈ ದಿನ ದನಗಳು ಹುಲ್ಲು ಮೇಯದಿದ್ದರೆ, ನೀರು ಕುಡಿಯದಿದ್ದರೆ, ದುಃಖಿತವಾಗಿದ್ದರೆ. ಅಲ್ಲಿಗೆ ಶುರುವಾಯ್ತು ಈತನ ಆರೈಕೆಯ ಬಯಕೆ, ಅಜೀರ್ಣವೆ, ಬೇಧಿಯೇ, ಹೊಟ್ಟೆ ಕೆಟ್ಟಿದೆಯೇ? ಹೊಟ್ಟೆಯಲ್ಲಿ ಉಬ್ಬರ ಕಾಣಿಸಿಕೊಂಡಿದೆಯೆ? ಹೀಗೆ: ಭೌತಿಕ ಲಕ್ಷಣಗಳಾದರೆ ಯಾವುದಾದರೂ ದನ ತಿವಿದಿದೆಯೇ? ಪಾದಕ್ಕೆ ಆನೆನಗ್ಗಲು ಮುಳ್ಳು ಹೊಕ್ಕಿದೆಯೆ? ಕಣಿವೆಗೆ ಕಾಲಿಟ್ಟು ಆಯ ತಪ್ಪಿ ಬಿದ್ದಿದೆಯೇ? ಹಾವು ಕಚ್ಚಿದೆಯೇ? ವಿಷಕಾರಿ ಸೊಪ್ಪು / ಹುಲ್ಲುಗಳನ್ನು ಮೇಯ್ದಿದೆಯೇ? ಹೀಗೆ ರೋಗ ವಿಧಾನದ ಅನ್ವೇಷಣೆ ಶುರುವಾಗುತ್ತದೆ.

ಎಲ್ಲದಕ್ಕೂ ಇವನಿಗೆ ಮದ್ದು ಗೊತ್ತು. ತನಗೂ ಮೀರಿದ್ದಕ್ಕೆ ಪರಿಣತರಿದ್ದಾರೆ, ಇಷ್ಟಾಗಿಯೂ ಸಮಸ್ಯೆಯ ನಿರ್ಣಯ ಬಹಳ ಮುಖ್ಯ. ನಮ್ಮ ರೈತಾಪಿ ಜೀವನದಲ್ಲಿ ಜಾನುವಾರುಗಳಿಗೆ ನೀರು ಕುಡಿಸಲು ಬಾವಿಗಳಿವೆ. ಕಲಗಚ್ಚುಗಳಿವೆ. ಹಾಗೆಯೇ ಮದ್ದು ಅರೆಯುವ ಸಲಕರಣೆಗಳು, ಕುಡಿಸುವ ಸಲಕರಣೆಗಳೂ ಇವೆ. ಮದ್ದು ಕುಡಿಸುವ ಗೊಟ್ಟ (ಕೊಟ್ಟ) ಬಿದಿರು ಬೊಂಬಿನಿಂದ ಮಾಡಿ ಇಟ್ಟುಕೊಂಡದ್ದು. ಬೂತಾಳೆ, ಲೋಕಸರ (ಲೋಳೇಸರ– ಅಲೋವೆರಾ), ನಾಗದಾಳಿ, ಎಕ್ಕದಬೇರು ಮುಂತಾದವೆಲ್ಲ ಮುಂಜಾಗ್ರತೆಯಾಗಿ ಕೊಟ್ಟಿಗೆಯ ತೀರು/ಜಂತಿ ಗಳಲ್ಲಿ ಕಟ್ಟಲ್ಪಟ್ಟಿರುತ್ತವೆ. ಅಳಲೆಕಾಯಿ, ನೆಲ್ಲಿಕಾಯಿ, ತಾರೆಕಾಯಿ, ಅರ್ಜುನ ಚಕ್ಕೆ ಮುಂತಾದವುಗಳನ್ನು ಸಹ ಇಟ್ಟುಕೊಂಡಿರುತ್ತಾರೆ.

ಈರುಳ್ಳಿ, ಬೆಲ್ಲ ಮತ್ತು ವೀಳ್ಯದೆಲೆ ಇವುಗಳನ್ನು ಸಾಮಾನ್ಯ ಅಜೀರ್ಣ ಸಮಸ್ಯೆಗಳಿಗೆ ಬಳಕೆಯಾಗುತ್ತವೆ. ಅಜೀರ್ಣ, ಹೊಟ್ಟೆಯುಬ್ಬರ, ಹುಣ್ಣು, ಕೀವುಗಟ್ಟಿದ

ಗಾಯ ಇವುಗಳ ಪರಿಹಾರ ಸಾಮಾನ್ಯವಾಗಿ ಎಲ್ಲ ರೈತರಿಗೂ ತಿಳಿದಿರುತ್ತದೆ. ಮೂಳೆಗೆ ಏಟು ಬಿದ್ದು ಬಿರುಕುಬಿಟ್ಟರೆ ವಿಶೇಷ ಪರಿಣಿತರ ನೆರವು ಬೇಕು. ಆಕಸ್ಮಾತ್ ಕಾಲು ಮುರಿದರೆ, ಕಣ್ಣಿಗೆ ಏಟಾದರೆ – ಬೇರೆ ದಾರಿಯಿಲ್ಲದೆ. ಅವು ಕಸಾಯಿಖಾನೆ ಯತ್ತ ಮುಖ ಮಾಡಲೇಬೇಕು.

ಅಜೀರ್ಣ, ಹೊಟ್ಟೆ ಉಬ್ಬರ ಜಾನುವಾರುಗಳಲ್ಲಿ ಸಾಮಾನ್ಯ, ಮೇವುಗಳಲ್ಲಿ ವ್ಯತ್ಯಾಸವಾದರೆ, ಹೆಚ್ಚಿನ ಕ್ಷಾರೀಯ ಗುಣದ ಮೇವುಗಳನ್ನು ತಿಂದಾಗ ಈ ಸಮಸ್ಯೆ ಉದ್ಭವವಾಗುತ್ತದೆ. ಆಗ ಜಾನುವಾರುಗಳು ಮೇವು ನೀರು ಕುಡಿಯದೆ ಸಹಜವಾಗಿ ಈ ಸಮಸ್ಯೆಗಳಿಂದ ಹೊರ ಬರಲು ಯತ್ನಿಸುತ್ತವೆ. ಇಷ್ಟಾದರು ತೊಡಕು ಮುಂದು ವರಿದರೆ ನಮ್ಮ ಹಳ್ಳಿಗರು ಎರಡು ಅಚ್ಚು ಬೆಲ್ಲ, ಎರಡು ಕವಳಿಗೆ ವೀಳ್ಯದೆಲೆ ಮತ್ತು ಒಂದು ಹಿಡಿ ಜೀರಿಗೆಯನ್ನು ಕುಟ್ಟಿ ಪುಡಿ ಮಾಡಿ ಅಂಥ ಜಾನುವಾರುಗಳಿಗೆ ದಿನಕ್ಕೆ ಒಂದು ಬಾರಿಯಂತೆ ಮೂರು ದಿವಸ ತಿನ್ನಿಸಿ ಸರಿಮಾಡುತ್ತಾರೆ.

ಎರಡು ದಿವಸವಾದರೂ ಮೇವು ತಿನ್ನದಿದ್ದರೆ ವಾಯುವಿಳಂಗ, ಹಸಿ ಈರುಳ್ಳಿ, ಮೆಣಸು ಮತ್ತು ಬೆಲ್ಲ ಪುಡಿ ಮಾಡಿ ೭ ದಿವಸಗಳ ಕಾಲ ತಿನ್ನಿಸಿ ಸಹಜ ಸ್ಥಿತಿಗೆ ಬರುವಂತೆ ಮಾಡುತ್ತಾರೆ.

ದುಡಿಯುವ ಎತ್ತು ಬೆಳಿಗ್ಗೆ ಎದ್ದ ಕೂಡಲೆ ಸಗಣಿ ಹಾಕದಿದ್ದರೆ ಕುಟ್ಟಿ ಪುಡಿ ಮಾಡಿದ ಅಳಲೆಕಾಯಿ, ನೆಲ್ಲಿಕಾಯಿ, ತಾರೆಕಾಯಿಗಳನ್ನು ವಾಯುವಿಳಂಗದ ಜೊತೆಗೆ ನೀರಿನಲ್ಲಿ ಕುದಿಸಿ ಸ್ವಲ್ಪ ಆರಿದ ಮೇಲೆ ರಾತ್ರಿಯ ವೇಳೆ ಒಂದು ವಾರದದವರೆಗೆ ಕುಡಿಸಿ ಸಹಜ ಸ್ಥಿತಿಗೆ ತರುತ್ತಾರೆ.

ಈ ಬಗೆಯ ನಿರ್ದಿಷ್ಟ ಸಮಸ್ಯೆಗೆ ರಾಜ್ಯದ ನಾನಾ ಭಾಗಗಳಲ್ಲಿ ಅನುಭವದ ಆಧಾರದಲ್ಲಿ ಮೇಲ್ಕಾಣಿಸಿದ ಮಿಶ್ರಣಗಳಲ್ಲಿ ಏರು–ಪೇರುಗಳಾಗಬಹುದು ಅಥವಾ ಹೊಸದೊಂದನ್ನು ಸೇರಿಸಿಕೊಳ್ಳಲುಬಹುದು.

ಮೂಲತಃ ಬೆಲ್ಲ ಅಜೀರ್ಣ ನಿವಾರಿಣಿ: ಜೀರ್ಣಕಾರಿ ಮತ್ತು ಬಲವರ್ಧಿನಿ. ಜೀರಿಗೆಯೂ ಜೀರ್ಣಕಾರಿ. ಹೊಟ್ಟೆಯಲ್ಲಿರುವ ವಾಯು ವಿಕಾರವನ್ನು ಶಮನಗೊಳಿಸುತ್ತದೆ. ಈರುಳ್ಳಿ ಜೀರ್ಣಕ್ಕೆ ರಕ್ತಶುದ್ಧಿಗೆ, ಶ್ವಾಸಶುದ್ದಿಗೆ, ನಾಲಗೆ ರುಚಿ ವೃದ್ಧಿಸಲು ಸಹಕಾರಿ. ಇನ್ನು ಅಳಲೆ, ನೆಲ್ಲಿ, ತಾರೆ – ಆಯುರ್ವೇದದಲ್ಲಿ "ತ್ರಿಫಲ" ಅನ್ನಿಸಿಕೊಂಡಿವೆ. ಇದು ಹೊಟ್ಟೆಯಲ್ಲಿ ಅನಗತ್ಯವಾಗಿ ಸಂಗ್ರಹವಾಗಿರುವ ಮಲವನ್ನುಹೊರದಬ್ಬಲು ಸಹಕರಿಸುತ್ತದೆ. ವೀಳ್ಯದೆಲೆಯಲ್ಲಿ ಹೆಚ್ಚಿನ ಆಂಟಿ ಆಕ್ಸಿಡೆಂಟ್‌ಗಳಿದ್ದು; ಜೀರ್ಣಕಾರಿ ಎಂಜೈಮ್‌ಗಳಿದ್ದು, ಶ್ವಾಸ ಶುದ್ಧಿ ಮಾಡುವ ಗುಣವಿದ್ದು ಹೊಟ್ಟೆ ಉಬ್ಬರ, ಅಜೀರ್ಣಗಳಲ್ಲಿ ದಿಢೀರ್ ಪ್ರಯೋಜನಕ್ಕೆ ಬರುತ್ತದೆ.

ನಿಷ್ಕ್ರಿಯ ಗ್ರಂಥಿಗಳನ್ನು ಸಕ್ರಿಯಗೊಳಿಸುವುದರಲ್ಲೂ ವೀಳ್ಯದೆಲೆಗೆ ಮನ್ನಣೆ ಇದೆ. ಮತ್ತು ಆಂಟಿ ಬ್ಯಾಕ್ಟೀರಿಯಾ, ಆಂಟಿ ಫಂಗಸ್ ಆಗಿಯೂ ಕೆಲಸ ಮಾಡುತ್ತದೆ.

ನಮ್ಮಲ್ಲಿ ಬಡಕಲು ಜಾನುವಾರುಗಳಿಗೆ ವಿಶೇಷ ಮದ್ದು ಇದೆ. ಇದ್ದಕ್ಕಿದ್ದಂತೆ ಹಸು/ಎತ್ತುಗಳು ಬಡಕಲಾದರೆ, ರೈತರು ಚಿಂತಿಸುವ ಗೊಡವೆಗೆ ಹೋಗುತ್ತಿರಲಿಲ್ಲ. ಪ್ರತಿದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಲೋಕಸರ ಎಸಳು ಸುಮಾರು ೨೦೦ ಗ್ರಾಂ ತೂಕದ್ದು (ಲೋಳೆಸರ – ಅಲೋವೆರಾ) ೨೦೦ ಗ್ರಾಂ ತೂಕದ ಬೆಲ್ಲ ಎರಡನ್ನು ಸೇರಿಸಿ ಮೂರು ತಿಂಗಳವರೆಗೆ ತಿನ್ನಿಸಿದರೆ ಹಸು/ಎತ್ತು ಎರಡೂ ಕೂಡ ಕೊಬ್ಬಿ ಬೆಳೆಯುತ್ತವೆ. ಕೃಶವಾದ / ಅಥವಾ ದೇಹ ತೂಕ ಹೆಚ್ಚಿಸಿಕೊಳ್ಳುವವರೂ ಕೂಡ ಪ್ರತಿದಿನ ಖಾಲಿ ಹೊಟ್ಟೆಯಲ್ಲಿ ೫ ಗ್ರಾಂ ಲೋಳೆಸರ ಸೇವಿಸಿದರೆ ೩ ತಿಂಗಳಲ್ಲಿ ತೂಕ ಹೆಚ್ಚಿಸಿಕೊಳ್ಳಬಹುದು, ಸದೃಢರೂ ಆರೋಗ್ಯವಂತರೂ ಆಗಬಹುದು.

ಲೋಳೆಸರ ಬೂತಾಳೆಗೆ ಸೇರಿದ ಸಸ್ಯವರ್ಗ. ನಮ್ಮ ಹಿರೀಕರು ಇದನ್ನು ಬೇರು ಸಹಿತ ಕಿತ್ತು ತಂದು ಕೊಟ್ಟಿಗೆ, ತೊಲೆಗಳಿಗೆ ಅಥವಾ ತೀರುಗಳಿಗೆ ನೇತು ಹಾಕುತ್ತಿದ್ದರು. ವರ್ಷಕಳೆದರೂ ಲೋಳೆಸರ ಬಾಡುತ್ತಿರಲಿಲ್ಲ. ಗಾಳಿಯಲ್ಲಿ ಸಿಗುವ ಆಹಾರವನ್ನು ಸ್ವೀಕರಿಸಿ ಅದು ತನ್ನ ತಾಜಾತನ ಪ್ರದರ್ಶಿಸುತ್ತಿತ್ತು. ಹೀಗಾಗಿ ಇದರಲ್ಲಿ ಅವಿನಾಶಿನಿಯೂ ಆದ ಸಂಜೀವಿನಿ ಗುಣವಿದೆ ಎನ್ನುತ್ತಾರೆ. ಲೋಳೆಸರಕ್ಕೆ ಈಲಿ (ಲಿವರ್) ಮತ್ತು ಪಿತ್ತಕೋಶ (ಪ್ಯಾನ್ ಕ್ರಿಯಾಸ್) ಗಳನ್ನು ಸದೃಢಗೊಳಿಸುವ ಶಕ್ತಿ ಇದೆ. ಮೂತ್ರಪಿಂಡದ ಸಮಸ್ಯೆಗಳಿಗೂ ಇದು ಔಷಧಿ. ಡಯಾಲೀಸಿಸ್‌ಗೆ ಒಳಗಾದವರಿಗೆ ಲೋಳೆಸರ ಕುಡಿಸುವುದರಿಂದ ಗುಣಾತ್ಮಕ ಫಲಿತಾಂಶ ಸಿಗುತ್ತದೆ. ರಕ್ತ ಶುದ್ಧಿ ಮಾಡುವ, ಗ್ರಂಥಿಗಳ ಸಾಮರ್ಥ್ಯ ಹೆಚ್ಚಿಸುವ; ಪಿತ್ತಕೋಶ, ಈಲಿ, ಜಠರಗಳನ್ನು ಆರೋಗ್ಯವಾಗಿರುವಂತೆ ಮಾಡುವ, ತನ್ಮೂಲಕ ತ್ವಚೆಯ ಕಾಂತಿಯನ್ನು ವೃದ್ಧಿಸಿ ತಾರುಣ್ಯ ಸೂಸುವಂತೆ ಮಾಡುವ ಗುಣಗಳನ್ನು ನಮ್ಮ ಹಿರೀಕರು ಕಂಡುಕೊಂಡಿದ್ದ ಕಾರಣಕ್ಕೇ ಲೋಳೆಸರಕ್ಕೆ ಕೊಟ್ಟಿಗೆಯಲ್ಲಿ ಖಾಯಂಸಂಜೀವಿನಿಯ ಸ್ಥಾನ ಕಲ್ಪಿಸಿದ್ದರು.

ಕೆಲವು ಸಂದರ್ಭಗಳಲ್ಲಿ ಪ್ಲೇಗ್ ಕಾಲರಾ ಮಾದರಿಯಲ್ಲಿ – ಜಾನುವಾರುಗಳನ್ನು ಈ ಕಾಲು ಬಾಯಿ ಜ್ವರ ಕಾಡುತ್ತಿರುತ್ತದೆ. ದೇಶಿ ಪಶು ವೈದ್ಯ ಜ್ಞಾನ ಗೊತ್ತಿದ್ದವರಿಗೆ ಈ ಕಾಲು ಬಾಯಿ ಜ್ವರ ಅಂಥ ದೊಡ್ಡ ಸಮಸ್ಯೆ ಏನಲ್ಲ; ಆದರೆ ಸಮಸ್ಯೆ ಇರುವುದು ಆಧುನಿಕ ಪಶುವೈದ್ಯಕೀಯ ವ್ಯವಸ್ಥೆಯನ್ನು ನಂಬಿ ನಮ್ಮ ದೇಸೀ ಪಶುವೈದ್ಯ ಜ್ಞಾನವನ್ನು ಬಹುವಾಗಿ ಕಳೆದು ಕೊಂಡಿರುವರಲ್ಲ – ಅದು ಸಮಸ್ಯೆ.

ಹಳೆಯದಾದ ನಾಟಿ ಹಸುವಿನ ತುಪ್ಪ, ಅರಿಶಿಣ, ದೇಸೀ ಆಕಳ ಗಂಜಳ, ಬೇವು, ತುಂಬೆ ಮತ್ತು ಲಕ್ಕಿ ಸೊಪ್ಪಿನ ರಸ; ಲೋಳೆಸರ ಇವಿಷ್ಟನ್ನು ಸಮ ಪ್ರಮಾಣದಲ್ಲಿ ಬೆರೆಸಿ; ಉಗುರು ಬೆಚ್ಚಗೆ ಬಾಯಿಯ ಹುಣ್ಣಿನ ಜಾಗಕ್ಕೆ ಮತ್ತು ಪಾದಗಳ ಜಾಗಕ್ಕೆ ಹಚ್ಚಬೇಕು. ಈ ರೀತಿ ನಾಲ್ಕು ದಿವಸ ಮಾಡಿದರೆ ಈ ರೋಗ ಸಂಕ್ರಾಮಿಕವಾಗಿ ಹರಡುವುದನ್ನು ತಪ್ಪಿಸಬಹುದು ಮತ್ತು ಗುಣಪಡಿಸಬಹುದು. ಈ ಮೇಲ್ಕಾಣಿಸಿದ ಪರಿಹಾರಗಳನ್ನು ನಿರ್ಧಿಷ್ಟವಾಗಿ ಕಂಡುಹಿಡಿದವರಾರು ಎಂಬುದು ಈಗಿರುವ ಯಾರಿಗೂ ಗೊತ್ತಿಲ್ಲ. ಆದರೆ ಇವು ಔಷಧಿಗಳಾಗಿ ಬಳಕೆಯಲ್ಲಿವೆ ಮತ್ತು ನಿಸ್ಸಂದೇಹವಾಗಿ ಸಮಸ್ಯೆಗಳನ್ನು ಬಗೆಹರಿಸುವ ಔಷಧಿಗಳಾಗಿ ಉಳಿದುಕೊಂಡಿವೆ.

ದನಗಳಿಗೆ ಆಗುವ ಗಾಯಗಳನ್ನು ವಾಸಿ ಮಾಡಲು ಹಳೆಯದಾದ ನಾಟಿ ಹಸುವಿನ ತುಪ್ಪ, ಬೇವಿನ ಎಣ್ಣೆ, ಪಚ್ಚ ಕರ್ಪೂರ, ತುಂಬೆ ಸೊಪ್ಪಿನ ರಸ, ಕೊಳಕೆ ಮುಳ್ಳಿನ ಸೊಪ್ಪು, ಅರಿಷಿಣ ಮತ್ತು ಚೆಂಡಿನ ಮಾದರಿಯಲ್ಲಿ ಕಾಯಿಬಿಟ್ಟು ಅದರ ಹೊರಮೈ ಮುಳ್ಳಿನಿಂದ ಕೂಡಿ, ಬಿಳಿಯದಾದ ಉದ್ದನೆ ಹೂ ಬಿಡುವ–ಗಿಡ–ಅದನ್ನು ಬ್ಯಾಟರಿ ಗಿಡ ಎನ್ನುತ್ತಾರೆ. ಆ ಗಿಡದ ಎಲೆಗಳು – ಈ ಸೊಪ್ಪುಗಳೆಲ್ಲದರ ರಸತೆಗೆದು ಗಂಜಳದೊಂದಿಗೆ ಮಿಶ್ರಣಮಾಡಿ, ಸದರಿ ಮಿಶ್ರಣಕ್ಕೆ ಪಚ್ಚ ಕರ್ಪೂರ ಅರಿಷಿಣ ಸೇರಿಸಿ ಕುದಿಸಿ, ಆ ಕುದಿಗೆ, ತುಪ್ಪ ಬೆರೆಸಿ – ತಣಿಸಿ; ತಣಿದ ಮೇಲೆ ಮುಲಾಮು ಸಿದ್ದವಾಗುತ್ತದೆ. ಈ ಮುಲಾಮು ಜಾನುವಾರು ಗಾಯಗಳಿಗೆ ರಾಮಬಾಣ. ಕೆಲವೇ ದಿನಗಳಲ್ಲಿ ಗಾಯದ ಕುರುಹು ಕೂಡ ಇಲ್ಲದಂತೆ ವಾಸಿಯಾಗುತ್ತದೆ. ಈ ರೀತಿ ಮುಲಾಮು ತಯಾರಿಸಿಕೊಂಡ ರೈತರ ಮನೆಯವರು ತಮಗೆ ಗಾಯಗಳಾದಾಗ ಮತ್ತು ಕಾಲಿನ ಪಾದಗಳು ಒಡೆದುಕೊಂಡಾಗ ಹಚ್ಚಿ ವಾಸಿ ಮಾಡಿಕೊಳ್ಳುತ್ತಾರೆ.

ಹಸುಗಳಿಗೆ ಹುಣ್ಣುಗಳಾದಾಗ ಹುಣ್ಣು ಮೆದುವಾಗಿ, ಒಡೆದು ಕೀವು ಹೊರಬರಲು ಬ್ಯಾಟರಿಗಿಡದ ಅಗಲವಾದ ಎಲೆಗಳಿಗೆ ಕೈಎಣ್ಣೆ (ಹರಳೆಣ್ಣೆ) ಸವರಿ ದೀಪದ ಕುಡಿಯಲ್ಲಿ ಬಿಸಿ ಮಾಡಿ ಲೇಪ ಹಾಕಿದರೆ ೨–೩ ಬಾರಿ ದಿವಸಕ್ಕೆ, ೩ ದಿವಸದಲ್ಲಿ ಹುಣ್ಣು ಒಡೆದು ಕೀವು ಸುರಿಯುತ್ತದೆ.

ದನಗಳು ಉಚ್ಚುಕೊಳ್ಳುತ್ತಿದ್ದರೆ (ಬೇಧಿ); ಹೊಳೆ ಮತ್ತಿ ಮರ(ಅರ್ಜುನ)ದ ಚಕ್ಕೆಯನ್ನು ಪುಡಿ ಮಾಡಿ; ಮುಟ್ಟಿದರೆ ಮುನಿ (ನಾಚಿಕೆಮುಳ್ಳು) ಸೊಪ್ಪು (ಅರ್ಧ ಕೆ.ಜಿ.) ಅನ್ನು ಬೇಯಿಸಿ, ಕುದಿವ ನೀರಿಗೆ ೨೦ ಗ್ರಾಂ ಹೊಳೆಮತ್ತಿಯ ಚಕ್ಕೆಯ ಪುಡಿಯನ್ನು ಹಾಕಿ; ತಣಿದ ನಂತರ ದಿನಕ್ಕೆ ಎರಡು ಬಾರಿಯಂತೆ ೪ ದಿನ ಕುಡಿಸಿದರೆ ಉಚ್ಚುಕೊಳ್ಳುವುದು ನಿಲ್ಲುತ್ತದೆ.

ದನಗಳು ಕುಂಟುತ್ತಿದ್ದರೆ ಚಪ್ಪೆ ಬಳಿ ಮೂಳೆ ಸಣ್ಣದಾಗಿ ಬಿರುಕು ಬಿಟ್ಟಿದ್ದರೆ ಅಂಥವುಗಳಿಗೆ ದಬ್ಬೆ ಕಟ್ಟುವ ಪರಿಣಿತರನ್ನು ಕರೆಸಲಾಗುತ್ತದೆ. ಅವರು ಹಳೆಯದಾದ

ನಾಟಿ ಹಸುವಿನ ತುಪ್ಪ, ಹಂದಿಯ ತುಪ್ಪ, ನೀರ್ಗುಂಡಿ ತೈಲ ಅರಿಷಿಣ – ಇವುಗಳ ಮೂಲಕ ಮುಲಾಮು ಮಾಡಿ ಹಚ್ಚಿ ಆಯ ನೋಡಿ ಪಟ್ಟಿ ಕಟ್ಟುತ್ತಾರೆ. ಜೊತೆಗೆ ಪ್ರತಿದಿನವು ಕುಟ್ಟಿಪುಡಿ ಮಾಡಿದ ನವಣೆ ಅಕ್ಕಿ, ಬೆಲ್ಲ ಎರಡು ಕವಳಿಗೆ ವೀಳ್ಯದೆಲೆ, ೧೦ ಗ್ರಾಂ ಸುಣ್ಣ, ೫ ಗ್ರಾಂ ವಾಯುವಿಳಂಗ, ಎಲ್ಲವನ್ನು ಸೇರಿಸಿದ ಮಿಶ್ರಣವನ್ನು ಮುದ್ದೆ ಮಾಡಿ ತಿನ್ನಿಸಲು ಹೇಳುತ್ತಾರೆ. ಕನಿಷ್ಟ ೨೧ ದಿವಸ ಹೀಗೆ ತಿನ್ನಿಸಲು ತಿಳಿಸುತ್ತಾರೆ. ರೋಗನಿರ್ಣಯ ಸರಿಯಾಗಿದ್ದರೆ, ಚಿಕಿತ್ಸೆ ಫಲಕಾರಿಯಾಗಿ ಕುಂಟುವಿಕೆ ಮರೆಯಾಗುತ್ತದೆ.

ಜಾನುವಾರು ಚಿಕಿತ್ಸೆಯ ಇಂಥ ಸಹಸ್ರ ಸಹಸ್ರ ಬಗೆಯ ವಿಧಾನಗಳು ನಮ್ಮ ದೇಸಿ ಕೃಷಿ ಪರಂಪರೆಯಲ್ಲಿ ಉಳಿದು ಬಂದಿವೆ. ಹಾಗೆಯೇ ಬಾಣಂತಿ ಹಸುಗಳ ಆರೈಕೆ, ಕರುಗಳ ಆರೈಕೆ, ಹೋರಿಗಳ ಆರೈಕೆಯೂ ಕೂಡ.

೩.೧೦. ಫ್ರಾನ್ಸಿಸ್ ಬುಕನನ್ ಕಂಡಂತೆ ದೇಸಿ ಕೃಷಿ ವಿಧಾನ

ಫ್ರಾನ್ಸಿಸ್ ಬುಕನನ್ ಇಂಗ್ಲಿಷ್ ವಿದ್ವಾಂಸರು. ಕರ್ನಾಟಕದ ಇತಿಹಾಸ ರಚನೆಯಲ್ಲಿ ಮರೆಯಲಾರದ ಹೆಸರು. ೧೮೦೦ ರಲ್ಲಿ ಬ್ರಿಟಿಷ್ ಭಾರತದ ಗೌರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯ ಆದೇಶದಂತೆ ಆಗಿನ ಮೈಸೂರು ರಾಜ್ಯ, ದಕ್ಷಿಣ ಕನ್ನಡದ ಕರಾವಳಿ ಪ್ರದೇಶ ಮತ್ತು ಮದ್ರಾಸು, ಮಲಬಾರ್ ಪ್ರಾಂತ್ಯಗಳಲ್ಲಿ ವ್ಯವಸ್ಥಿತ ಅಧ್ಯಯನ ಪರ್ಯಟನೆ ಮಾಡಿ ಮೇಲ್ಕಂಡ ಪ್ರದೇಶಗಳ ಸ್ಥಳೀಯ ಸಂಪನ್ಮೂಲಗಳು, ವ್ಯವಸಾಯ ಕ್ರಮಗಳು, ಅಲ್ಲಿನ ಬೆಳೆಗಳು, ಆಹಾರಪದ್ಧತಿ, ಜಾನುವಾರು ತಳಿಗಳು, ಕೈಗಾರಿಕೋತ್ಪನ್ನಗಳು, ವ್ಯಾಪಾರ, ಸಮಾಜದ ರೀತಿ ನೀತಿಗಳು ಮುಂತಾದವುಗಳನ್ನು ಅಭ್ಯಸಿಸಿ ನೀಡಿದ ವಿಸ್ತೃತ ವರದಿ A HISTORY OF TRAVEL : A JOURNEY FROM MADRAS THROUGH THE COUNTRIES OF MYSORE, CANARA AND MALABAR ಎಂಬ ಮೂರು ಸಂಪುಟಗಳ ಬೃಹತ್ ಗ್ರಂಥವಾಗಿದೆ. ಹಾಗೂ ಐತಿಹಾಸಿಕ ದಾಖಲೆಯಾಗಿದೆ.

ಬುಕನನ್‌ರವರು ತಮ್ಮ ಸಹಾಯಕರೊಡನೆ ಕುದುರೆಗಳ ಮೇಲೆ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಾ ಕ್ರಿ.ಶ., ೧೮೦೦ ರ ಮೇ ತಿಂಗಳಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡುತ್ತಾರೆ. ಮೈಸೂರು ರಾಜ್ಯದ ದಿವಾನರಾಗಿದ್ದ ಪೂರ್ಣಯ್ಯನವರ ಸಹಕಾರ ಪಡೆದು ಅಲ್ಲಿನ ಅಮಲ್ದಾರ್, ಶಿರಸ್ತೇದಾರ್, ಶಾನುಭೋಗರು ಹಾಗೂ ಸ್ಥಳೀಯ ಅನುಭವಿ ಹಿರಿಯರೂ ತಿಳಿವಳಿಕಸ್ತರೂ ಮುತ್ಸದ್ದಿಗಳೂ ಆದ ಕೆಲವು ಊರಗೌಡರುಗಳ ಸಹಾಯದಿಂದ ತನಗೆ ಬೇಕಾದ ಯಾವುದೇ ಮಾಹಿತಿಯನ್ನು ವಿವರವಾಗಿ ತಿಳಿದುಕೊಂಡು ಸ್ವತಃ ಪರೀಕ್ಷಿಸಿ ವರದಿ ಸಿದ್ಧಪಡಿಸುತ್ತಾರೆ. ಆಗಿನ

ಶ್ರೀರಂಗಪಟ್ಟಣದ ಆಡಳಿತವು ಅಷ್ಟಗ್ರಾಮಗಳು ಅಥವಾ ೮ ಗ್ರಾಮಗಳ ಸಮುಚ್ಛಯವೇ ಆಗಿದ್ದ ತಾಲ್ಲೂಕು ಎಂದು ಕರೆಯಲ್ಪಡುವ ರೆವಿನ್ಯೂ ವಿಭಾಗ. (ASTGRAMA TALUCS) ಕಾವೇರಿ ನದಿಯ ಇಕ್ಕೆಲದ ಭೂಭಾಗಗಳಿಗೆ ಅಂದಿನ ಕಾಲದ ಕಲ್ಲು ಸುಣ್ಣ ಮತ್ತು ಗ್ರಾನೈಟ್‌ಗಳನ್ನು ಬಳಸಿ ನಿರ್ಮಿಸಿದ ಆರ್ಕಿಟೆಕ್ಟ್ ಮಾದರಿಯ ಕೃತಕ ನಾಲೆಗಳ ಮೂಲಕ ನೀರಾವರಿ ಸೌಲಭ್ಯ ಪಡೆದುಕೊಂಡಿದ್ದ ಆ ಭೂ ಪ್ರದೇಶವನ್ನು ಬುಕನನ್‌ರವರು ಮೂರು ಬಗೆಯಲ್ಲಿ ವಿಂಗಡಿಸುತ್ತಾರೆ

೧. ನೀರಾವರಿ ಕೃಷಿ ಭೂಮಿ (Wet land) ಇವು ಕೃತಕವಾಗಿ ನಿರ್ಮಿಸಿದ ಕಾಲುವೆಗಳಿಂದ ನದಿನೀರಿನ ಸೌಲಭ್ಯ ದೊರಕಿದಂಥವುಗಳು.
೨. ಒಣಭೂಮಿ ಅಥವಾ ಒಣಬೇಸಾಯ (dry land)
೩. ತೋಟಗಳು (ಬಾಗಾಯ್ತು) (Gardens)

ಅಷ್ಟ ಗ್ರಾಮಗಳ ಮಣ್ಣಿನ ಗುಣ ಸ್ವಭಾವಗಳನ್ನು ನಾಲ್ಕು ಬಗೆಯಾಗಿ ವಿಂಗಡನೆ ಮಾಡಲಾಗಿದೆ.

ಈ ವರ್ಗೀಕರಣವು ಉತ್ಕೃಷ್ಟತೆ, ಉತ್ತಮ ಗುಣಮಟ್ಟಕ್ಕನುಗುಣವಾಗಿ ಕೆಳಕಂಡಂತಿವೆ.

೧. ಕಪ್ಪು ಮಣ್ಣು ಅಥವಾ ಎರೆಭೂಮಿ ಅಥವಾ ಮಕುಟು (mukutu) ಮಣ್ಣು.
೨. ಕೆಂಪು ಭೂಮಿ ಅಥವಾ ಕೆಮ್ಮಣ್ಣು (Red soil) ಅಥವಾ ಕೆಬ್ಬೆ (cubbay)
೩. ಮರಳು ಭೂಮಿ (marulu is light brown coloured soil, with a large proportion of sand)
೪. ಧರೆ ಭೂಮಿ.

ಈ ಭೂವಿಂಗಡನೆಗಳಿಗೆ ಬುಕನನ್‌ರವರು ನೀಡುವ ವಿವರಣೆ to avoid circumlocution, I shall frequently use these native terms.

ಈ ಗದ್ದೆಗಳಲ್ಲಿ ಶ್ರೀರಂಗಪಟ್ಟಣದ ಅಷ್ಟ ಗ್ರಾಮಗಳ ರೈತರು ಭತ್ತ, ಕಬ್ಬು ನಂತರದಲ್ಲಿ ಉದ್ದು, ಹೆಸರು, ಎಳ್ಳು, ಮತ್ತು ತೊಗರಿ ಬೆಳೆಗಳನ್ನು ಬೆಳೆಯುತ್ತಿದ್ದರು ಮತ್ತು ವಾರ್ಷಿಕ ಎರಡು ಬೆಳೆಗಳನ್ನು ಬೆಳೆಯುತ್ತಿದ್ದರು.

೧. ಮುಂಗಾರು ಬೆಳೆ, ಸ್ಥಳೀಯರ ಪ್ರಕಾರ ಐನು ಬೆಳೆ (Hainu) ಅಥವಾ ಗಂಡು ಬೆಳೆ.

೨. ಕಾರು ಫಸಲು (caru) ಹಿಂಗಾರು ಬೆಳೆ ಅಥವಾ ಹೆಣ್ಣು ಫಸಲು

ನೀರು ಹೊರಹೋಗದಂತೆ ಸುತ್ತಲೂ ಬದುವಿನಿಂದ ನಿರ್ಮಿಸಿದ ತಾರಸಿಯಂತೆ ಸಮತಟ್ಟಾದ (ಗುಂಡ್ಲು) (plot) ಗದ್ದೆಗಳಿಗೆ ಕೃತಕ ನಾಲೆಗಳಿಂದ ನೀರಾವರಿ ಸಂಪರ್ಕ ಕಲ್ಪಿಸಲಾಗಿತ್ತು. ಕೌತುಕವೆಂದರೆ ಆ ಗದ್ದೆಗಳಲ್ಲಿ ೩ ಮಾದರಿಯಲ್ಲಿ (Three modes of sowing) ಭತ್ತ ಬಿತ್ತನೆ ಮಾಡಲಾಗುತ್ತಿತ್ತು. ಅವುಗಳೆಂದರೆ,

ಮೊದಲನೆಯದು ಭತ್ತದ ಬಿತ್ತನೆ ಬೀಜಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಚೆಲ್ಲುವುದು, ಬಿತ್ತುವುದು.
ಸ್ಥಳೀಯರು ಈ ಕ್ರಮವನ್ನು ಬರಭತ್ತ ಅಥವಾ ಪುಣಜಿ ಬೇಸಾಯ ಎನ್ನುವರು. ಎತ್ತರ ಪ್ರದೇಶದಲ್ಲಿನ ಸಮತಟ್ಟು ಗದ್ದೆಗಳನ್ನು ಹದಗೊಳಿಸಿ, ಗದ್ದೆಯಲ್ಲಿ ಬಿತ್ತನೆ ಸಮಯದಲ್ಲಿ ನೀರು ನಿಂತು ಕೆಸರಾಗದ ರೀತಿ, ಆದರೆ ನಿರ್ದಿಷ್ಟ ಪ್ರಮಾಣದಲ್ಲಿ ತೇವಾಂಶವಿರುವಂತೆ ನಿರ್ವಹಿಸಿ, ನಂತರ ಭತ್ತದ ಒಣ ಬೀಜವನ್ನು ಚೆಲ್ಲಿಕೆ ಮಾಡುವುದು.

ಎರಡನೇ ಮಾದರಿಯದು ಮೊಳಕೆ ಭತ್ತದ ಬಿತ್ತನೆ (Sprouted cultivation) ಬಿತ್ತನೆಯನ್ನು ನೀರಿನಲ್ಲಿ ನೆನಸಿ, ನೆರಳಿನಲ್ಲಿ ಒಣಗಿಸಿ, ಮೊಳಕೆ ಬಂದ ನಂತರ ಬಿತ್ತುವ ಕ್ರಮ ಇಲ್ಲಿ ಭತ್ತವನ್ನು ಮೊಳಕೆ ಕಟ್ಟುವ ಕ್ರಮವನ್ನು ವಿವರವಾಗಿ ನೀಡಲಾಗಿದೆ.

ಮೂರನೇ ಕ್ರಮವು ನಮಗೆಲ್ಲ ತಿಳಿದಿರುವಂತೆ ಗದ್ದೆಯ ಒಂದು ನಿರ್ದಿಷ್ಟ ಭಾಗದಲ್ಲಿ ಸಸಿ ಮಡಿಗಳನ್ನು ನಿರ್ಮಿಸಿ, ಭತ್ತವನ್ನು ಹಗೆ ಉಯ್ಯುವುದು ನಂತರ ೧೦ ರಿಂದ ೩೦ ದಿವಸದೊಳಗಿನ ಸಸಿಗಳನ್ನು ತಂದು ನಾಟಿ ಮಾಡುವ ಪದ್ಧತಿ (The Cultivation by Transplating).

ಆ ಪ್ರದೇಶದಲ್ಲಿ ಬೆಳೆಯುತ್ತಿದ್ದ ಭತ್ತದ ತಳಿಗಳು:

1) ದೊಡ್ಡ ಭತ್ತ (ಹೊಟಿಕಯ್ಯಂಬತ್ತಿ) (Hote caimbati)
2) ಅರಿಶಿಣ ಕೈಂಬತ್ತಿ (Arsina Caimbati)
3) ಸುಕದಾಸ್ (Sucadas)
4) ಮುರಾರ್ ಗಿಲ್ಲಿ (Muraggilli)
5) ಯಾಲಿಕ್ ರಾಜ (Yalic Raja)

6) ಕೊನಾವಲಿ (Conawali)

೭) ಬಿಳಿಸಣ್ಣ (Bilisanna)

8) ಪುಟ್ಟಭತ್ತ (Puttne Batta)

೯) ಕಾರಕುಳ್ಳು (Caracullu)

ಬರಭತ್ತದ ಬೇಸಾಯ ಕ್ರಮ : ಫಾಲ್ಗುಣ ಮಾಸದಿಂದ ಪ್ರಾರಂಭಿಸಿ ಅಂದರೆ ಫೆಬ್ರವರಿ ೧೪ ರಿಂದ ೨೩ ವರೆಗಿನ ಅವಧಿಯಲ್ಲಿ ಒಟ್ಟು ೪ ಬಾರಿ ವೈರುಧ್ಯ ದಿಕ್ಕುಗಳಿಂದ ಉಳುಮೆ ಮಾಡುವುದು. ೩-೪ ದಿವಸಗಳ ತನಕ ಗದ್ದೆಯನ್ನು ನೀರು ಕಟ್ಟಿ ಕೊಳೆಯಿಸಿದ ನಂತರ ನೀರು ಖಾಲಿ ಮಾಡಿ ಕೊಟ್ಟಿಗೆ ಗೊಬ್ಬರ ಅಥವಾ ದನಗಳ ಸಗಣಿ ಗೊಬ್ಬರವನ್ನು ಮಣ್ಣಿಗೆ ಸೇರಿಸುವುದು, ೩-೪ ದಿವಸಗಳ ನಂತರ, ೫ನೇ ಅಗತ್ಯವಾದರೆ ೬ನೇ ಉಳುಮೆ ಮಾಡಿದ ನಂತರ ಬರ-ಭತ್ತ ಬಿತ್ತನೆ ಮಾಡುವುದು. ಬಿತ್ತನೆ ನಂತರ ಮತ್ತೊಮ್ಮೆ ಉಳುಮೆ ಮಾಡುವ ಮೂಲಕ ಬಿತ್ತನೆ ಬೀಜಕ್ಕೆ ಮೇಲ್ಮೈ ಮಣ್ಣಿನ ತೆರೆ ಎಳೆಯುವುದು.

ಈ ಕ್ರಮದ ಮಹತ್ವದ ಮುಂಗಾರು ಅಥವಾ ಐನು ಬೇಸಾಯವು ಫಾಲ್ಗುಣ, ಚೈತ್ರ, ವೈಶಾಖ, (ಫೆಬ್ರವರಿಯಿಂದ) ದಲ್ಲಿ ಶುರುವಾಗಿ ಆಷಾಢ ಮಾಸದಲ್ಲಿ ಅಂದರೆ ಜೂನ್ ಕೊನೆಯ ವಾರ ಅಥವಾ ಜುಲೈ ಮೊದಲ ದಿನಗಳಲ್ಲಿ ಮುಗಿಯುತ್ತದೆ. ಕಾರು(ಅಚಿಡಿಣ) ಫಸಲಿನ ಬೇಸಾಯ ಅಥವಾ ಹಿಂಗಾರು ಬೇಸಾಯವು ೩ ಮಾದರಿಯಲ್ಲಿದೆ.

1) ಕುಂಬಕಾರು (Cumba Caru)

2) ತುಲಾಕಾರು (Tula Caru)

3) ಮಹಿಷಕಾರು (Mayisha Caru)

ಕಾರ್ತಿಕ ಮಾಸದಲ್ಲಿ ಶುರುವಾಗುವ ಕುಂಬಕಾರು ಬೇಸಾಯವು ನವೆಂಬರ್‌ನ ಮಧ್ಯಾವಧಿಯಲ್ಲಿ ಶುರುವಾಗಿ ಡಿಸೆಂಬರ್ ಕೊನೆಯವರೆಗೂ ಬಿತ್ತನೆ ಕಾರ್ಯ ನಡೆಯುತ್ತದೆ.

ಹಿಂಗಾರಿನ ಎರಡನೇ ಮಾದರಿಯ ತುಲಾಕಾರು ಬೇಸಾಯವು ಭಾದ್ರಪದ ಮಾಸದಲ್ಲಿ ಶುರುವಾಗಿ ಮಾರ್ಗಶಿರ ಮಾಸದಲ್ಲಿ ಮುಗಿಯುತ್ತದೆ. ಅಂದರೆ ಆಗಸ್ಟ್ ಕೊನೇವಾರದಿಂದ ಡಿಸೆಂಬರ್ ತಿಂಗಳ ಮಧ್ಯ ಭಾಗದ ನಡುವಿನ ಅವಧಿ.

ಮೇಲ್ಕಂಡ ಎರಡೂ ಅವಧಿಯಲ್ಲಿ ಬಿತ್ತನೆ ಕಾರ್ಯ ನಡೆಯದೆ ಕಾಲವು ತೀರಾ ವಿಳಂಬವಾದ ನಂತರದ ದಿನಗಳಲ್ಲಿ ನಡೆಸುವ ಹಿಂಗಾರು ಬೇಸಾಯವೇ ಮಹಿಷಕಾರು ಫಸಲು. ಈ ಕ್ರಮವು ವೈಶಾಖ ಅಥವಾ ಮೇ ತಿಂಗಳ ಅವಧಿಯಲ್ಲಿ ಶುರುವಾಗಿ ಡಿಸೆಂಬರ್ ಮೊದಲ ವಾರ ಅಥವಾ ಪುಷ್ಯ ಮಾಸದಲ್ಲಿ ಮುಗಿಯುತ್ತದೆ.

ಭತ್ತದ ಒಕ್ಕಣೆ ನಂತರ ಅಷ್ಟಗ್ರಾಮಗಳ ರೈತರು ಭತ್ತವನ್ನು ಬೇಯಿಸಿ ಕುಸುಬಲಕ್ಕಿ ಮಾಡಿಕೊಳ್ಳುವರು ತಾವು ಬೆಳೆದ ಬೆಳೆಗಳನ್ನು ಕುಟುಂಬದ ಉಪಯೋಗಕ್ಕೆ ಇಟ್ಟುಕೊಂಡು ಹೆಚ್ಚಿನ ಪ್ರಮಾಣದ ಉಳಿಕೆಯನ್ನು ಮಾರಾಟ ಮಾಡುತ್ತಿದ್ದರು. ವ್ಯಾಪಾರಕ್ರಮ ಆಗಿನ ಅಳತೆಯ ಮಾನದಂಡಗಳಾದ ಸೇರು, ಕೊಳಗ ಮುಂತಾದ ವಿವರಗಳನ್ನೆಲ್ಲಾ ನೀಡುತ್ತಾ ಖಂಡುಗ(canduca)ದ ಲೆಕ್ಕಚಾರಗಳ ಪದ್ಧತಿಯನ್ನು ಸಹ ವಿವರಿಸಿರುವರು ಹಾಗೂ ಹಿಂಗಾರಿನ ಮಿಶ್ರ ಫಸಲಿನ ಬೇಸಾಯದಲ್ಲಿ ಬೆಳೆಯುವ ರಾಗಿ, ಉದ್ದು, ದೊಡ್ಡ ಉದ್ದು, ಹೆಸರು, ಅವರೆ, ತೊಗರಿ, ಹುರುಳಿ, ಎಳ್ಳು, ಉಚ್ಚೆಳ್ಳು, ಕಡಲೆ, ಅರ್ಕ, ಜೋಳ, ಹರಳು ಇತ್ಯಾದಿ ದ್ವಿದಳ ಹಾಗೂ ಸಿರಿಧಾನ್ಯಗಳ ಬೇಸಾಯ ಕ್ರಮ ಮತ್ತು ಅವುಗಳ ಮಹತ್ವವನ್ನು ವಿವರಿಸಿದ್ದಾರೆ. ಪ್ರಕೃತಿಯನ್ನು ಅರ್ಥೈಸಿಕೊಂಡು, ಹೊಳೆ ನೀರನ್ನು ಒಡ್ಡು ಕಾಲುವೆಗಳ ಮೂಲಕ ಹಾಯಿಸಿಕೊಂಡು ಆರೋಗ್ಯ ಪೂರ್ಣ ಉತ್ತಮ ತಳಿ ರಾಸುಗಳಿಂದ ಕೊಟ್ಟಿಗೆ ಗೊಬ್ಬರವನ್ನೇ ಆಧರಿಸಿ ಉತ್ಕೃಷ್ಟ ದರ್ಜೆಯ ಹೆಚ್ಚು ಇಳುವರಿ ಪಡೆದು, ವರ್ಷಕ್ಕೆ ಮೂರು ಬೆಳೆ ಬೆಳೆಯುತ್ತಿದ್ದ, ಶ್ರೀರಂಗಪಟ್ಟಣದ ಅಷ್ಟಗ್ರಾಮಗಳ ರೈತರ ಬೇಸಾಯದ ಬದುಕನ್ನು ಹೀಗೆ ವಿವರಿಸುತ್ತಾರೆ.

> So Far as I have observed in Mysore, ground, once brought into cultivation for rice, is universally considered as arrived at the highest possible degree of improvement and all attempts to render it more productive by a succession of crops or by fallow would be looked up on as proofs of insanity. Where there is supply of water, the farmers in general think that the best plan of cultivation is to sow one crop of rice, immediately after another has been reaped; and many parts, favoured with a supply of water, three crops of rice are every year regularly produced. In the Astagarma's however, there is no such land; and the though some parts each year give two crops of rice, by far the greater part of the irrigated lands have too small a supply of water to ripen two crops of rice; and the farmer must content himself with one crop of the article and another of some kind of pulse, or other dry grain. Even this crop frequently prevented by some of the operations attending the cultivation of rice, as i have had several times occasion to mention; but still it is of considerable importance. The articles of which it consists are Udu, Hesaru, Ellu and Tadaguny.

ಮಾನ್ಯ ಬುಕನನ್ ರವರು ಶ್ರೀರಂಗಪಟ್ಟಣದ ಅಷ್ಟಗ್ರಾಮಗಳ ಬಾಗಾಯ್ತು ಅಥವಾ ತೋಟಗಾರಿಕೆಯಲ್ಲಿನ ನಾಲ್ಕು ವಿಧಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ

೧) ತೆಂಗಿನ ತೋಟಗಳು : ಮುಖ್ಯವಾಗಿ ತೆಂಗಿನ ಬೆಳೆಯೊಡನೆ ಹದವಾಗಿ ಬೆರೆತ ಇನ್ನಿತರ ಜಾತಿಯ ಹಣ್ಣಿನ ಗಿಡಗಳ ವ್ಯವಸ್ಥಿತ ಪ್ರದೇಶ.
೨) ತರಕಾರಿ ತೋಟಗಳು
೩) ವೀಳ್ಯದೆಲೆ ತೋಟಗಳು
೪) ಹೂವಿನತೋಟಗಳು

ತರಕಾರಿಬೆಳೆಗಳು


ಹೀರೆ	ನೆಲಗಡಲೆ	ಬೆಳ್ಳುಳ್ಳಿ
ಸೌತೆ	ಮೆಣಸಿನಕಾಯಿ	ಅರಿಶಿನ
ಕುಂಬಳ,	ಮುಸುಕಿನ ಜೋಳ	ಶುಂಠಿ
ಬೂದುಗುಂಬಳ	ಧವನ	ಕರಬೂಜ
ಸೋರೆ	ಕೀರೆ	ಮಿಣಕೆ
ಪಡವಲ	ಕೊತ್ತಂಬರಿ	ಗೆಣಸು
ಹಾಗಲ	ಸಬಸೀಗೆ	ಕೆಸುವಿನದಂಟು
ಬೆಂಡೆ	ಚಕೋತ	ಬಸಳೆ ಇತ್ಯಾದಿ
ಚಪ್ಪರದಅವರೆ	ಈರುಳ್ಳಿ	

ಬಹಳಷ್ಟು ಕಡೆ ನಾಲೆಗಳಿಂದ ಅಥವಾ ಸಣ್ಣ ಸಣ್ಣ ಕಿರುಗಾಲುವೆಗಳಿಂದ, ಬೇಸಿಗೆಯಲ್ಲಿ ತೆರೆದ ಬಾವಿಗಳಿಂದ, ಮಡಕೆಗಳಿಂದ ತರಕಾರಿತೋಟಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು, ಯಾವಾಗಲೂ ಸಣ್ಣ ಸಣ್ಣ ಗುದ್ದಲಿಗಳಿಂದ ತೋಟವನ್ನು ಅಗೆದು ಹಸನುಮಾಡುತ್ತಾ, ದನಗಳ ಕೊಟ್ಟಿಗೆ ಗೊಬ್ಬರದಿಂದ ಈ ತೋಟಗಳನ್ನು ಪೋಷಿಸಿಕೊಂಡು ಮನೆಗಳಲ್ಲದೆ, ಸಂತೆಗಳು, ನಗರಗಳು ಮಾರ್ಕೆಟ್‌ಗಳಿಗೆ ಒದಗಿಸುತ್ತಿದ್ದರು.

ವೈವಿಧ್ಯಮಯ ತಳಿಗಳ ಜಾನುವಾರಗಳ, ಅಂದರೆ ಉಳುವ ಎತ್ತುಗಳು, ಹಸುಗಳು, ಎಮ್ಮೆ, ಕುರಿಗಳು, ಆಡು ಅಥವಾ ಮೇಕೆ, ಕುದುರೆ ಮತ್ತು ಕತ್ತೆಗಳನ್ನು ವ್ಯವಸಾಯದ ಕಸುಬುಗಳು ಹಾಗೂ ವ್ಯವಸಾಯಕ್ಕೆ ಬೇಕಾಗುವ ಸಗಣಿ ಗೊಬ್ಬರ ಮತ್ತು ಸಾಗಾಣಿಕೆ, ಪ್ರಯಾಣಗಳಿಗಾಗಿ ಜಾನುವಾರುಗಳನ್ನು ಸಾಕಿಕೊಂಡಿದ್ದರು.

ಮುಖ್ಯವಾಗಿ ಉಳುವ ಎತ್ತುಗಳ ಉತ್ತಮ ತಳಿ ರಾಸುಗಳನ್ನು – ಆಲಂಬಾಡಿ, ತಿಪಟೂರು, ಕಾನಕಾನಹಳ್ಳಿ ರಾಮಗಿರಿ ಮುಂತಾದದೂರ ಪ್ರದೇಶಗಳಿಂದ ತಂದು, ತಳಿ ಸಂರಕ್ಷಣೆ, ಮತ್ತು ಸಂತಾನವೃದ್ಧಿ ಮಾಡಿಕೊಳ್ಳುತ್ತಿದ್ದರು.

ಜಾನುವಾರುಗಳ ಮುಖ್ಯ ಆಹಾರವಾಗಿ ರಾಗಿ, ಭತ್ತದಂತಹ ಮುಖ್ಯ ಆಹಾರ ಬೆಳೆಗಳ ಒಕ್ಕಣೆಮಾಡಿದ ಸತ್ವಯುತ ಸತ್ವಯುತ ಹುಲ್ಲನ್ನು ವ್ಯವಸ್ಥಿತವಾಗಿ ಸಂಗ್ರಹಿಸಿಕೊಂಡು ಬಳಸುತ್ತಿದ್ದರು.



ಫ್ರಾನ್ಸಿಸ್ ಬುಕನನ್ ಚಿತ್ರಿಸಿರುವ ಬನವಾಸಿ ನೇಗಿಲು

೩.೧೧. ದೇಸಿ ಕೃಷಿಕರ ಮಳೆ ಜ್ಞಾನ

ಅನಾದಿ ಕಾಲದಿಂದಲೂ ಇಳೆಯನ್ನು ಪೊರೆಯುತ್ತಿರುವ ಮಳೆಯ ಬಗೆಗೆ ಭಾರತೀಯ ಕೃಷಿಕರ ನಂಬಿಕೆ, ಅವಲಂಬನೆ, ಆಚರಣೆಗಳು ಅತಿ ವಿಶಿಷ್ಟವಾಗಿವೆ. ಮಳೆಯ ಸಂಬಂಧ, ಅನುಬಂಧ ಅವನ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ರೈತನ ಮೊದಲ ದೇವರು ಭೂದೇವಿ. ಎರಡನೇ ದೇವರು ಮಳೆರಾಯ. ಈ ಇಬ್ಬರ ಸಂಯೋಗದ, ಸಮ್ಮಿಲನದ ಫಲವೇ ಬೆಳೆ, ಮಳೆಯೇ ಸರ್ವಜೀವಿಗಳಿಗಾಧಾರ, ರೈತರಿಗಂತೂ ಸಕಲಾಧಾರ, ಮಳೆರಾಯನ ಆಗಮನ ವಿಳಂಬವಾಯಿತೆಂದರೆ ಅವನ ಸಂಕಟ ಹೇಳತೀರದು. ತನ್ನ ಬದುಕಿಗಾಧಾರವಾದ ಮಳೆಯನ್ನವನು ನಾನಾ ವಿಧವಾಗಿ ಸ್ತುತಿಸುತ್ತಾನೆ, ಹಾಡಿಹೊಗಳುತ್ತಾನೆ, ಕಾಡಿಬೇಡುತ್ತಾನೆ,

"ಅಪ್ಪಾ ನೀನಿಲ್ಲದೇ ಬೆಪ್ಪಾದೊ ಈ ಭೂಮಿ

ಬಿಟ್ಟ ನೂಲಾದೊ ದನಕರ ಮಳೆರಾಯ

ಅಂಬರದ ಕರುಣೆ ಕರುಣಿಸೋ,

ದೇವ ದೇವರಿಗೆಲ್ಲ ಯಾವ ದೇವರೆಚ್ಚು

ಭೂಮಿಯ ಮೇಲೆ ಮಣಿಪಾದಲೂರುವ



ದೇವೇಂದ್ರ ಸ್ವಾಮಿ ಧರೆಗೆಚ್ಚು"೩

ಮಳೆಯ ಅಧಿದೇವತೆ ವರುಣ. ಒಂದು ವರ್ಷದಲ್ಲಿ ೧೪ ದಿವಸಗಳ ಅವಧಿಯಂತೆ ಒಟ್ಟು ೨೭ ಮಳೆಗಳನ್ನು ವಿಭಾಗಿಸಿ, ಪ್ರತಿಯೊಂದು ಮಳೆಗೂ ಜನ್ಮಜಾತವೆಂಬಂತೆ ಸುಂದರ ಹೆಸರುಗಳಿಂದ ನಾಮಾಲಂಕೃತಗೊಳಿಸಿ, ಇಪ್ಪತ್ತೇಳು ಮಂದಿ ದೇವಾನುದೇವತೆಗಳ ರಾಜ ದೇವೇಂದ್ರ ಅಥವಾ ಇಂದ್ರನ ಹೆಣ್ಣುಮಕ್ಕಳೆಂಬ ಸುಂದರ ಕಥೆಯು ಭಾರತೀಯ ಪುರಾಣದಲ್ಲಿದೆ. ಸುರಸುಂದರನಾದ ಚಂದಿರನು ವಧು ಅನ್ವೇಷಣೆಗೆ ಹೋಗಿದ್ದಾಗ, ಒಬ್ಬರನ್ನೊಬ್ಬರು ಮೀರಿಸುವ ಚೆಲುವಿನಿಂದ ಬೆಳಗುತ್ತಿದ್ದ ಆ ೨೭ ಮಂದಿ ಸುರದ್ರೂಪಿ ಕನ್ಯೆಯರಲ್ಲಿ ಯಾರನ್ನೂ ನಿರಾಕರಿಸಲಾಗದೆ. ಆ ಎಲ್ಲರ ಚೆಲುವಿಗೆ ಮನಸೋತು ಎಲ್ಲರನ್ನು ವರಿಸಿದ ಕಥೆಯದು. ಉದಯಿಸುವ ಚಂದಿರನ ಆಯುರ್ಮಾನ ೧೫ ದಿನಗಳಾಗಿರುವುದು, ಒಂದು ಮಳೆನಕ್ಷತ್ರದ ಕಾಲಾವಧಿ ಕೂಡ ಸರಿಸುಮಾರು ೧೫ ದಿನಗಳಾಗಿರುವ ವಿಸ್ಮಯದ ಥಳುಕು ಅಚ್ಚರಿ ಮೂಡಿಸದೆ ಇರದು. ಭಾರತೀಯರು ತಮ್ಮ ಹೆಣ್ಣುಮಕ್ಕಳಿಗೆ ಪ್ರೀತಿಯಿಂದ ಈ ಮಳೆ ನಕ್ಷತ್ರಗಳ ಹೆಸರಿಡುವುದನ್ನು ಇಂದಿಗು ಮುಂದುವರಿಸಿದ್ದಾರೆ.

ಮಳೆಯ ನಕ್ಷತ್ರಗಳು..

ಪಂಚಾಂಗದ ಪ್ರಕಾರ ಚೈತ್ರಮಾಸ ಆರಂಭವಾಗಿ ಯುಗಾದಿಯನಂತರ ಅಮಾವಾಸ್ಯೆಯಿಂದ ಹುಣ್ಣಿಮೆವರೆಗೆ ಮತ್ತು ಹುಣ್ಣಿಮೆಯಿಂದ ಅಮಾವಾಸ್ಯೆವರೆಗೆ ೧೪ ದಿನಕ್ಕೊಂದರಂತೆ ಒಟ್ಟು ೨೭ ಮಳೆ ನಕ್ಷತ್ರಗಳು ಹೀಗಿವೆ.

೧) ಅಶ್ವಿನಿ – ಏಪ್ರಿಲ್ ೧೩ ರಿಂದ ಏಪ್ರಿಲ್ ೨೬

೨) ಭರಣಿ – ಏಪ್ರಿಲ್ ೨೭ ರಿಂದ ಮೇ ೧೦

೩) ಕೃತ್ತಿಕೆ – ಮೇ ೧೧ ರಿಂದ ಮೇ ೨೩

೪) ರೋಹಿಣಿ – ಮೇ ೨೪ ರಿಂದ ಜೂನ್ ೬

೫) ಮೃಗಶಿರ – ಜೂನ್ ೭ ರಿಂದ ಜೂನ್ ೨೦

೬) ಆರಿದ್ರ – ಜೂನ್ ೨೧ ರಿಂದ ಜುಲೈ ೪

೭) ಪುನರ್ವಸು – ಜುಲೈ ೫ ರಿಂದ ಜುಲೈ ೧೯

೮) ಪುಷ್ಯ – ಜುಲೈ ೨೦ ರಿಂದ ಆಗಸ್ಟ್ ೨

೯) ಆಶ್ಲೇಷ – ಆಗಸ್ಟ್ ೩ ರಿಂದ ಆಗಸ್ಟ್ ೧೬

೧೦) ಮಖೆ – ಆಗಸ್ಟ್ ೧೭ ರಿಂದ ಆಗಸ್ಟ್ ೨೯

೧೧) ಹುಬ್ಬ – ಆಗಸ್ಟ್ ೩೦ ರಿಂದ ಸೆಪ್ಟೆಂಬರ್ ೧೨

೧೨) ಉತ್ತರೆ – ಸೆಪ್ಟೆಂಬರ್ ೧೩ ರಿಂದ ಸೆಪ್ಟೆಂಬರ್೨೬

೧೩) ಹಸ್ತ – ಸೆಪ್ಟೆಂಬರ್ ೨೭ ರಿಂದ ಅಕ್ಟೋಬರ್ ೯

೧೪) ಚಿತ್ತಾ – ಅಕ್ಟೋಬರ್ ೧೦ ರಿಂದ ಅಕ್ಟೋಬರ್ ೨೪

೧೫) ಸ್ವಾತಿ – ಅಕ್ಟೋಬರ್ ೨೫ ರಿಂದ ನವೆಂಬರ್ ೬

೧೬) ವಿಶಾಖ – ನವೆಂಬರ್ ೭ ರಿಂದ ನವೆಂಬರ್ ೧೮

೧೭) ಅನುರಾಧ – ನವೆಂಬರ್ ೧೯ ರಿಂದ ಡಿಸೆಂಬರ್ ೧

೧೮) ಜೇಷ್ಠ – ಡಿಸೆಂಬರ್ ೨ ರಿಂದ ಡಿಸೆಂಬರ್ ೧೪

೧೯) ಮೂಲಾ – ಡಿಸೆಂಬರ್ ೧೫ ರಿಂದ ಡಿಸೆಂಬರ್ ೨೭

೨೦) ಪೂರ್ವಾಷಾಢ – ಡಿಸೆಂಬರ್ ೨೮ ರಿಂದ ಜನವರಿ ೧೦

೨೧) ಉತ್ತರಾಷಾಢ – ಜನವರಿ ೧೧ ರಿಂದ ಜನವರಿ ೨೩

೨೨) ಶ್ರಾವಣ – ಜನವರಿ ೨೪ ರಿಂದ ಫೆಬ್ರವರಿ ೫

೨೩)ಧನಿಷ್ಠ – ಫೆಬ್ರವರಿ ೬ ರಿಂದ ಫೆಬ್ರವರಿ ೧೮

೨೪) ಶತಭಿಷ – ಫೆಬ್ರವರಿ ೧೯ ರಿಂದ ಮಾರ್ಚ್ ೩

೨೫) ಪೂರ್ವಾಭಾದ್ರ – ಮಾರ್ಚ್ ೪ ರಿಂದ ಮಾರ್ಚ್ ೧೬

೨೬)ಉತ್ತರಾಭಾದ್ರ – ಮಾರ್ಚ್ ೧೭ ರಿಂದ ಮಾರ್ಚ್ ೨೯

೨೭)ರೇವತಿ. – ಮಾರ್ಚ್ ೩೦ ರಿಂದ ಏಪ್ರಿಲ್ ೧೨

ಇವನ್ನೆ ರೈತರು ಮಳೆ ನಕ್ಷತ್ರಗಳೆಂದು ಕರೆಯುತ್ತಾರೆ. ಇವು ೩ ಅಥವಾ ೪ ದಿನಕ್ಕೊಂದು ಪಾದದಂತೆ ಪ್ರತಿ ಮಳೆಯನ್ನು ನಾಲ್ಕು ಪಾದಗಳಾಗಿ ವಿಂಗಡಿಸಲಾಗಿದೆ. ಈ ಇಪ್ಪತ್ತೇಳರಲ್ಲಿ ಮೊದಲ ಹದಿನೇಳು ಮಳೆಗಳು ಅಂದರೆ ಅಶ್ವಿನಿಯಿಂದ ಅನುರಾಧವರೆಗಿನ ಮಳೆಗಳು ವ್ಯವಸಾಯ ಕ್ಷೇತ್ರದಲ್ಲಿ ಪ್ರಾಧಾನ ಪಾತ್ರ ವಹಿಸಿವೆ. ಉಳಿದವು ಅಷ್ಟೇನೂ ಗ್ಯಾರಂಟಿಯಲ್ಲದ–ರೈತರು ಅವಲಂಬಿಸದೆ ಇರುವ ಅತಿಥಿಗಳಾಗಿವೆ. ಯುಗಾದಿ ಹಬ್ಬದ ನಂತರ ಮೊದಲ ಮಳೆಯೊಡನೆ ರೈತರಿಗೆ ವ್ಯವಸಾಯದ ವರ್ಷಾರಂಭವಾಗುತ್ತದೆ. ಅಶ್ವಿನಿಯಿಂದ ಶುರುವಾಗಿ ಹುಬ್ಬ ಮಳೆಯವರೆಗೆ ಮುಂಗಾರು (ಖಾರಿಫ್) ಉತ್ತರೆಯಿಂದ ಅನುರಾಧ ಮಳೆಯ ಅವಧಿ ಹಿಂಗಾರು. (ರಾಬಿ) ಈ ಕ್ರಮಕ್ಕೆ ಅನುಗುಣವಾಗಿಯೇ ಭೂಮಿಯ ಉಳುಮೆ, ಬಿತ್ತನೆ, ರಕ್ಷಣೆ, ಕೊಯ್ಲು, ಒಕ್ಕಣೆ ಇತ್ಯಾದಿಗಳನ್ನು ಕೈಗೊಳ್ಳುತ್ತಾರೆ. ಒಂದೊಂದು ಮಳೆಯನ್ನು

ಗಮನಿಸಿ ಅದರ ಗುಣ ಸ್ವಭಾವಗಳನ್ನು ಅಭ್ಯಸಿಸಿ, ಅವಕ್ಕೊಂದು ವ್ಯಕ್ತಿತ್ವ ರೂಪಿಸಿದ್ದಾರೆ. ಮಳೆಯ ಆರ್ಭಟ, ವರ್ಷಧಾರೆಯ ಲಾಲಿತ್ಯ, ಕೆಲವು ಮಳೆಗಳ ಹಾಜರಿ ಅಜ್ಞಾತಗಳನ್ನರಿತು. ಮಳೆಯ ಏಳು ಬೀಳುಗಳೊಡನೆ ಒಂದಾಗಿ ಬದುಕು ಸಾಗುತ್ತದೆ. ಪ್ರತಿಯೊಂದು ಮಳೆಯ ವಿಶಿಷ್ಟ ಗುಣಲಕ್ಷಣಗಳನ್ನು ರೈತ ಗುರುತಿಸಿದ್ದಾನೆ. ಅದರ ಸ್ವರೂಪ ರಭಸ, ಭರಾಟೆ, ಮಂದಗಾಮಿತನ, ಸುರಿಯುವ ಲಕ್ಷಣ, ಅವುಗಳ ಪರಿಣಾಮದ ಲಾಭ ನಷ್ಟಗಳನ್ನು ಪಟ್ಟಿ ಮಾಡುವ ಸಂಕ್ಷಿಪ್ತೀಕರಿಸುವ ರೀತಿ ರೈತರ ಮೌಖಿಕ ಪರಂಪರೆಯ ಅಪಾರ ಅನುಭವದ ಪ್ರತೀಕವಾಗಿದೆ. ರೈತರ ಬದುಕಿನ ಅವಿಭಾಜ್ಯ ಅಂಗವಾದ ಮಳೆಯ ಬಗ್ಗೆ ಅವರಿಗೆ ಪೂಜ್ಯಭಾವನೆ. ನಮ್ಮ ರೈತರಲ್ಲಿ ಮಗೆ ಮಳೆಯ ಬಗ್ಗೇ ವಿಶೇಷ ಆಸ್ಥೆ, ಅಭಿಮಾನ. ಅದು ರೈತನಿಗೆ ವರದಾನವಾಗಿ ಅವತರಿಸಿತೆಂಬ ನಂಬಿಕೆ. ರೈತನಿಗೆ ಭರವಸೆಯ ಭಾಷೆ ಕೊಟ್ಟು ಅದರಂತೆ ತಪ್ಪದೇ ನಡೆದುಕೊಂಡು ಆತನ ಬದುಕನ್ನು ಬೆಳಗಿಸುವ ತಾಯಿ ಅಂತೆಯೆ ರೈತರು ಮಗೆ ಅಥವಾ ಮಖಾ ಮಳೆಯನ್ನು ಹಬ್ಬ ಮಾಡಿ ಆಚರಿಸಿ ಪೂಜಿಸುತ್ತಾರೆ. ಕೆಲವರು ತಮ್ಮ ಪಿತೃ ಸ್ಮರಣೆಯನ್ನು ಈ ಹಬ್ಬದ ಮೂಲಕ ಆಚರಿಸುತ್ತಾರೆ. ಗಾದೆ, ಒಗಟು, ಹಾಡು, ಜನಪದ ಹಾಡುಗಳು, ಲಾವಣಿ ಮೊದಲಾದ ರೂಪಗಳಲ್ಲಿ ಮಳೆಯು ರೈತರ ಕಾಯಕ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಕೃತಕ ಬರಗಾಲದಲ್ಲಿ ಮಳೆಗಾಗಿ ಪ್ರಾರ್ಥಿಸಿ ಆಚರಿಸುವ ಹಲವಾರು ರೀತಿಯ ಜಾನಪದ ಆಚರಣೆಗಳು – ಆಯಾ ಪ್ರದೇಶಗಳ ಸ್ಥಳೀಯ ನಂಬಿಕೆಗಳಿಗನುಗುಣವಾಗಿ – ವಿಶಿಷ್ಟತೆ, ವಿಶೇಷತೆಗಳಿಂದ ಕೂಡಿ ಗಮನ ಸೆಳೆಯುತ್ತವೆ.

ಮಳೆಯ ಹಾದೆಗಳು:

ಭರಣಿ ಮಳೆ, ಧರಣೀಲಿ ಬೆಳೆ [೧]

"ದೋಣೀಲಿ ಬಿತ್ತಿದರೆ, ಓಣಿತುಂಬ ಜೋಳ" [೨]

ಮಿರುಗ (ಮೃಗಶಿರ) ಮಿಂಚಿದರೆ ಮೂರು ಮಳೆ, [೩]

ಆರಿದ್ರ ಗುಡುಗಿದರೆ ಆರುಮಳೆ. [೪]

"ಆದ್ರಿ ಮಳೆಗೆ ಆರುಕಾಯಿ ಹೆಚ್ಚು, [೫]

ಕೃತ್ತೀಕೇಲಿ ಎಳ್ಳು ಬಿತ್ತಿದರೆ – ಕೇಳಿದಷ್ಟು ಫಸಲು" [೬]

"ನೀನಾದ್ರೂ ಬಾ, ಇಲ್ಲಾಂದ್ರೆ ನಾನಾದ್ರು ಬರ್ತಿನಿ,
(ಅಣ್ಣತಮ್ಮಂದಿರಾದ ಪುನರ್ವಸು–ಪುಷ್ಯ, ಸಂಭಾಷಣೆ)

"ಉತ್ತರೆ ಮಳೆ ಬಂದರೆ ಬಿತ್ತಿದ್ದೆಲ್ಲಾ ಬೆಳೆ"

"ಉತ್ತರೆಗೆ ಹೊಡೆ ಕಡೀತು"

"ಉತ್ತರೆ ಆದ್ಮೇಲೆ ಇನ್ಯಾತರ ಮಳೆ"

"ಮಳೆ ಬಂದ್ರೆ ಮನೇಲಿ ಹಬ್ಬ, ಬಾರದಿದ್ದರೆ ಬೀದೀಲಿ ಪರ" ಎಂಬಂತೆ ನಮ್ಮ ರೈತರ ನಿಲುವು ಪರ ಎಂದರೆ ಊರೊಟ್ಟಿಗೆ ಸೇರಿ – ಒಂದು ನಿರ್ಧಿಷ್ಟ ಜಾಗದಲ್ಲಿ ಸ್ಥಳೀಯ ಖಾದ್ಯಗಳನ್ನು ತಯಾರಿಸಿ ಮಳೆರಾಯನನ್ನು ಪೂಜಿಸಿ ತಮ್ಮದೇ ವಿಶಿಷ್ಟ ಆಚರಣೆಯಿಂದ ಮಳೆಗಾಗಿ ಮಾಡುವ ಸಾಮೂಹಿಕ ಪ್ರಾರ್ಥನೆ. ರೈತರು ತಮಗೆ ಅನ್ನ ನೀಡುವ ಭೂಮಿಯನ್ನು ಭೂತಾಯಿ ಎಂದು ಪರಿಗಣಿಸಿ ಪೂಜಿಸುವ, ತನ್ನ ಬೇಸಾಯಕ್ಕೆ ಆಧಾರವಾದ ಗೋವುಗಳನ್ನು ಗೋಮಾತೆಯೆಂದು ನೇಗಿಲು, ನೊಗ, ರಂಟೆ, ಕುಂಟೆ, ಹಲುಬೆ, ಕುಡುಗೋಲು, ಕಳಾರಿ, ಕತ್ತಿ ಇತ್ಯಾದಿ ಬೇಸಾಯದ ಆಯುಧಗಳನ್ನು ಮತ್ತು ತಮ್ಮ ಫಸಲಿಗೆ ಅತ್ಯಗತ್ಯವಾದ ಗೊಬ್ಬರದ ತಿಪ್ಪೆಯನ್ನು ಸಹ ಪೂಜ್ಯ ಭಾವದಿಂದ ಆಧರಿಸಿ – ಆಚರಣೆ ಮಾಡುವುದರ ಜೊತೆಗೆ ತನ್ನ ದವಸ ಧಾನ್ಯ ಒಕ್ಕಣೆಗಾಗಿ ಸಿದ್ಧಪಡಿಸಿದ ಕಣದ ಮಧ್ಯ ಭಾಗದಲ್ಲಿ ನೆಟ್ಟ ಮೇಟಿಯನ್ನು ಪೂಜಿಸುವ ಹಲವಾರು ಆಚರಣೆಗಳು – ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿಯೂ ವಿಶಿಷ್ಟವಾಗಿಯೂ ಸ್ಥಳೀಯ ಪರಂಪರೆಗನುಗುಣವಾಗಿ ಚಾಲ್ತಿಯಲ್ಲಿವೆ.

ಹೊಲಗಳಿಗೆ ಗೊಬ್ಬರ ಸಾಗಿಸುವ ಮೊದಲು, ತಿಪ್ಪೆಯನ್ನು ಪೂಜೆ ಮಾಡಿ ನಂತರ ಕಾರ್ಯೋನ್ಮುಖರಾಗುತ್ತಾರೆ. ಹೊಲವನ್ನು ಪ್ರಥಮ ಬಾರಿಗೆ ಉಳುವ ಹೊನ್ನಾರು ಆಚರಣೆ, ದವಸ ಧಾನ್ಯ ಬಿತ್ತುವ ಮೊದಲು ಹೊಲದ ಮಣ್ಣಿಗೆ ಪೂಜೆ ಮಾಡುವುದು, ಬಿತ್ತನೆ ಮಾಡಿದ ನಂತರ ಆಚರಿಸುವ " ಬೆದುಗೆ" ಎಂದು ಕರೆಯಲ್ಪಡುವ ಪೂಜೆ, ಹಬ್ಬದಲ್ಲಿ – ದುಡಿಯುವ ಎತ್ತುಗಳನ್ನು ಶುಭ್ರವಾಗಿ ತೊಳೆದು ಅಲಂಕರಿಸಿ, ತನ್ನ ಬೇಸಾಯ, ಆಯುಧ ಪರಿಕರಗಳೊಡನೆ ಪೂಜಿಸುತ್ತಾರೆ. ನಂತರ ಬಿತ್ತಿದ ಬೆಳೆಯು ಕಟಾವಿಗೆ ಬಂದಾಗ ಕೊಯ್ಲಿಗೂ ಮುನ್ನ ಬೆಳೆದ ಫಸಲನ್ನು ಪೂಜಿಸುವ ಆಚರಣೆಯನ್ನು "ಹೆಚ್ಚು" ಎಂದು ಕರೆಯುತ್ತಾರೆ. ಕೊಯ್ಲಾದ ಫಸಲನ್ನು ಕಣದಲ್ಲಿ ಒಕ್ಕಣೆ ಮಾಡಿದ ನಂತರ ಬೆಳೆದ ಫಸಲಿನ ರಾಶಿ ಪೂಜೆ ಮಾಡುವ ಆಚರಣೆಯಂತೂ ಸಂಭ್ರಮದ ಹಬ್ಬವೇ ಸರಿ. ಅಂದು ತನ್ನ ಅಕ್ಕ ಪಕ್ಕದ ರೈತರೇ ಅಲ್ಲದೆ, ತನ್ನ ಬೆಳೆಗೆ ಪ್ರಾರಂಭದಿಂದಲೂ ಉಳುಮೆ ಕಳೆ ಕೀಳುವುದು, ಕೊಯ್ಲು, ಒಕ್ಕಣೆ ಈ ಎಲ್ಲಾ ಕಾರ್ಯಗಳಲ್ಲಿ ಭಾಗಿಯಾದ ಶ್ರಮಿಕರು ಮತ್ತು ಊರಿನ ಕುಶಲ ಕರ್ಮಿಗಳ ಸಮೂಹವೇ ರೈತನ

ಅತಿಥಿಗಳಾಗಿರುತ್ತಾರೆ. ಬೇಸಾಯಕ್ಕೆ ಆಧಾರವಾದ ಎತ್ತುಗಳನ್ನು ತನ್ನ ಕುಟುಂಬಕ್ಕೆ ಹಯನು ಕೊಡುವ ಆಕಳನ್ನು ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳಂದು ಚೆನ್ನಾಗಿ ತೊಳೆದು, ಕೊಂಬುಗಳನ್ನು ಹೊರೆದು ವಿವಿಧ ಬಣ್ಣಗಳಿಂದ ಶೃಂಗರಿಸಿ, ಹೂವಿನ ಅಲಂಕಾರ ಮಾಡಿ ಮೆರವಣಿಗೆ ಹೊರಡಿಸಿ ಊರ ಮುಂದಲ ಕಿಚ್ಚು ಹಾಯಿಸುವ ಸಂಭ್ರಮದ ಆಚರಣೆಯು ಇಂದಿಗೂ ಮುಂದುವರಿಯುತ್ತಾ ಬಂದಿದೆ. ಅಷ್ಟೇ ಅಲ್ಲದೇ ರೈತರು ತಾವು ಅವಲಂಬಿಸಿರುವ ಹೊಳೆ, ಕೆರೆ, ಬಾವಿ, ಮುಂತಾದ ಜಲ ಮೂಲಗಳನ್ನು ಗೌರವಾದರಗಳಿಂದ ಪೂಜಿಸುವ ನಂಬಿಕೆಯು ಪರಂಪರಾನುಗತವಾಗಿ ಉಳಿದು ಬೆಳೆದು ಬಂದಿದೆ.

******

ಕೊನೆ ಟಿಪ್ಪಣಿ:-

೧) 'ಜನಪದ ಮಹಾ ಸಂಪುಟ'- ದೇ.ಜ.ಗೌ. ಹಿರೇಕೂರು ಪ್ರಕಾಶನ, ಮೈಸೂರು ೨೦೧೦
೨) 'ಜನಪದ ಮಹಾ ಸಂಪುಟ'- ದೇ.ಜ.ಗೌ. ಹಿರೇಕೂರು ಪ್ರಕಾಶನ, ಮೈಸೂರು ೨೦೧೦
೩) 'ಬೆಳ್ದಿಂಗ್ಳಪ್ಪನ ಪೂಜೆ' ಅಗ್ರಹಾರ ಕೃಷ್ಣಮೂರ್ತಿ

ಅಧ್ಯಾಯ-೪

ಬೆಳೆ ಬೆಳೆವ ಜ್ಞಾನ ಮತ್ತು ಕೃಷಿ ಪದ್ಧತಿಗಳು

ನಮ್ಮ ಕೃಷಿ ಪರಂಪರೆ ಭೂಮಿಯನ್ನು ಯಾವತ್ತಿಗೂ ತಾಯಿಯೆಂದೇ ತಿಳಿದು ಬಾಳಿದ್ದು, ನಿಸರ್ಗ ಸೃಷ್ಟಿ ಲೀಲೆಗೆ ಶರಣಾಗಿ ವಿನೀತ ಭಾವದಲ್ಲಿ ಬೇಸಾಯ ಜೀವನ ಕೈಗೊಂಡ ನಮ್ಮ ಹಿರೀಕರು ಜನನಿ - ಜನ್ಮ ಭೂಮಿಗಳಿಗೆ ಅರ್ಪಿಸಿದ ಪ್ರಾರ್ಥನೆ, ಕೃತಜ್ಞತೆಗಳಿಗೆ ಎಣೆಯಿಲ್ಲ.

"ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ॥ ಭೂಮ್ತಾಯಿ
ಎದ್ದೊಂದುಗಳಿಗೆ ನೆನದೇನ

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನು
ಮಣ್ಣೆನಗೆ ಮುಂದೆ ಹೊನ್ನು ॥ ಅಣ್ಣಯ್ಯ
ಮಣ್ಣೆ ಲೋಕದಲ್ಲಿ ಬೆಲೆಯಾದ್ದು.

ಕಸವ ಹೊಡೆದ ಕೈ ಕಸ್ತೂರಿ ನಾತಾವು
ಬಸವಣ್ಣ ನಿನ ಸೆಗಣೀಯ ಬಳಿದ ಕೈ
ಎಸಳ ಯಾಲಕ್ಕಿ ಗೊನೆ ನಾತ

ಬಡತನ ನಮಗಿರಲಿ ಬಾಳ ಮಕ್ಕಳು ಇರಲಿ
ಅಡಿಗಡಿಗೆ ದುಕ್ಕ ಬರುತಿರಲಿ ॥ ನಮ್ಮೂರ
ಅಡವಿ ಸಾಂಬಾನ ದಯೆ ಇರಲಿ"[೧]

ಸಮುದ್ರ ವಸನೇದೇವಿ ಪರ್ವತಸ್ತ ನಮಂಡಲೆ
ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶ ಕ್ಷಮಸ್ವಮೆ

"ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಃ
ಸರ್ವೇ ಪಶ್ಯಂತು ಭದ್ರಾಣಿ"

ಪ್ರಕೃತಿಯನ್ನನುಸರಿಸಿ ಬಾಳುವವರು ತಮ್ಮ ಸುತ್ತಲ ಕೊಡುಗೆಗಳಿಗೆ ಕೃತಜ್ಞತೆ ಅರ್ಪಿಸಿ ಧನ್ಯತೆ ಪಡೆಯುತ್ತಾರೆ.

ಆಹಾರದ ಅನ್ವೇಷಣೆಯಲ್ಲಿ – ತಮಗೆ ಒದಗಿ ಬಂದ ಗೆಡ್ಡೆ ಗೆಣಸು, ಹಣ್ಣು – ತರಕಾರಿ, ಸೊಪ್ಪು ಮತ್ತು ಧಾನ್ಯಗಳನ್ನು ತಾವೇ ಬೆಳೆಯಲು ಶುರುವಾದ ಕ್ಷಣದಿಂದ ವ್ಯವಸಾಯ ಶುರುವಾಯ್ತು. ಹಾಗೆ ಶುರುವಾದ ಆರಂಭ ಕಲಿಯುವ ಪ್ರಕ್ರಿಯೆಗಳಲ್ಲಿ ಅಗತ್ಯವಾದ ಉಪಕರಣಗಳು ರೂಪುಗೊಂಡವು. ತಮ್ಮ ಜಾನುವಾರುಗಳು – ಅವುಗಳ ಗೊಬ್ಬರ; ಮಳೆ, ನೀರು; ಗಾಳಿ–ಬೆಳಕು ಈ ಎಲ್ಲವುಗಳ ಪರಿಣಾಮಗಳನ್ನು ಪ್ರಾಯೋಗಿಕವಾಗಿ ಗುರುತಿಸಿಕೊಳ್ಳುತ್ತಾ ಸಾಗಿದಂತೆ ವ್ಯವಸ್ಥಿತ ಬೇಸಾಯ ಪದ್ಧತಿಗಳು ರೂಪುಗೊಂಡವು.

ಹೀಗೆ ರೂಪುಗೊಂಡ ಬೇಸಾಯ ಪದ್ಧತಿಗಳು ಜಗತ್ತಿನಾದ್ಯಂತ ಅಸ್ತಿತ್ವದಲ್ಲಿವೆ. ಬಿತ್ತುವುದು, ಬೆಳೆಯುವುದು, ನಂತರ ಕೊಯ್ಯುವುದು – ಇದು ಬೇಸಾಯದ ಸೀಮಿತ ವ್ಯಾಪ್ತಿ, ಆದರೆ ಇದರ ಆಳದಲ್ಲಿ ಮಾನವನ ಅನ್ವೇಷಣೆ, ಸಾಹಸ, ಆಶೆ, ಕನಸು, ಚಡಪಡಿಕೆಗಳೆಲ್ಲ ಮೇಳೈಸಿ ನಿಂತಿವೆ. ಸಮಾಜ, ಧರ್ಮದೊಂದಿಗೆ ಅರ್ಥ, ಕಾಮ, ಮೋಕ್ಷಾದಿ ಸಂಗತಿಗಳೆಲ್ಲ ತಳುಕು ಹಾಕಿಕೊಂಡಿವೆ. ಆಳುವ ಆಳಿಸಿಕೊಳ್ಳುವ ವ್ಯವಸ್ಥೆಗಳೆಲ್ಲ ಜಾರಿಯಲ್ಲಿವೆ. ಹತೋಟಿ, ಪೈಪೋಟಿ, ಸರ್ವೋದಯಗಳ ನಿಸರ್ಗದ ಅಂತರ್ಗತ ಸ್ವಭಾವಗಳು, ತೀವ್ರಗತಿಯ ಮೂರ್ತ ರೂಪದಲ್ಲಿ ವ್ಯಕ್ತವಾಗುತ್ತಿವೆ. ಆಧುನಿಕ ಶಿಕ್ಷಣ, ಆಧುನಿಕ ನಗರ, ಆಧುನಿಕ ಪರಿಸರ, ಆಧುನಿಕ ಯಂತ್ರೋಪಕರಣ, ಜಾಗತೀಕರಣ, ಯುದ್ಧ, ಅಣುಬಾಂಬು, ಹಸಿರುಕ್ರಾಂತಿ, ಜಾಗತಿಕ ತಾಪಮಾನ. ಇವೆಲ್ಲವುಗಳ ಶಕ್ತಿಗೆ ಇಂಧನವಾಗಿರುವ 'ಅನ್ನದ ಸ್ವಭಾವವೆ' ಬೇಸಾಯದ ಜ್ಞಾನವಾಗಿದೆ.

ಸಹಸ್ರ, ಸಹಸ್ರ ವರ್ಷಗಳ 'ಸರ್ವಸಾರ'ವೇ ನಮ್ಮ 'ದೇಸೀ ಕೃಷಿ ಜ್ಞಾನ ಪರಂಪರೆ'! ವಿಷಹಾಕದೆ ಬೆಳೆ ಬೆಳೆದು ಉಣ್ಣುವ ಅನ್ನ ಅಮೃತ. ವಿಷ ಹಾಕಿ ಬೆಳೆ ಬೆಳೆದು ಉಣ್ಣುವ ಅನ್ನ ವಿಷಕನ್ಯೆ. ಈ ಎರಡನೇ ಅನ್ನ ಹಸಿರು ಕ್ರಾಂತಿ, ಜಾಗತೀಕರಣ, ಜಾಗತಿಕ ತಾಪಮಾನ, ಕೋಮುವಾದ– ಭಯೋತ್ಪಾದನೆ ಮತ್ತು ಅಣು ಬಾಂಬು, ಅಮೃತ ಪುತ್ರರ ಕೈಯಲ್ಲೆ ಅಣುಬಾಂಬು ಇದ್ದರೆ – ಅದು ವಿವೇಚನೆ ವಿವೇಕ. ವಿಷಕನ್ಯೆಯರ ಕೈಯಲ್ಲಿ ಅಣುಬಾಂಬು ಇದ್ದರೆ – ಅದು ಅವಿವೇಚನೆ – ಅವಿವೇಕ. ಅಮೃತತ್ವದ ಕಡೆಗೆ ಕೈ ಹಿಡಿದು ನಡೆಸುವುದೇ ದೇಶಿ ಕೃಷಿ ಜ್ಞಾನ. ಅಣುಬಾಂಬುವಿನ ಕಡೆಗೆ ಕೈಹಿಡಿದು ನಡೆಸುವುದೇ ರಸಾಯನಿಕ ಕೃಷಿ ವಿಜ್ಞಾನ.

೧೯೬೦ನೇ ದಶಕದ ಹೊತ್ತಿಗೆ ನಮ್ಮ ದೇಸೀಯ ಕೃಷಿ 'ಸ್ವಯಂ ಪರಿಪೂರ್ಣ' ಅನ್ನುವ ಸ್ಥಿತಿಯಲ್ಲಿತ್ತು. ೧೯೧೦ ರಲ್ಲಿ ಬ್ರಿಟನ್ನಿನಿಂದ ಭಾರತಕ್ಕೆ ಬಂದಿದ್ದ ಡಾ. ಸರ್ ಆಲ್ಬರ್ಟ್ ವಿಲಿಯಂ ಎಂಬ ಕೃಷಿ ವಿಜ್ಞಾನಿ ಈ 'ಸ್ವಯಂ

ಪರಿಪೂರ್ಣ' ಎಂಬ ಮಾತನ್ನು ಆಗಲೇ ಹೇಳಿದ್ದರು "ಸಾಕಷ್ಟು ಬೆಳಕು ಇರದ" ನಾವು ಇಂಡಿಯಾದ ಕೃಷಿ ಅಭಿವೃದ್ಧಿ ಕುರಿತು ಸಲಹೆ ನೀಡುವಷ್ಟು ದೊಡ್ಡವರಾಗಿಲ್ಲ ಮತ್ತು ಈ ದೇಶದ ಸಂಪದ್ಭರಿತವಾದ ಕೃಷಿ ಜ್ಞಾನವನ್ನು ನಾವು ಕಲಿಯುವ ಅಗತ್ಯವಿದೆ ಎಂದು ಅವರು ಹೇಳಿದ್ದರು.

ಜ್ಞಾನದ ವಿಷಯದಲ್ಲಿ ಹೊರಗಿನ ಆಸರೆ ಬಯಸದೆ; ಅನುಭವದ ದೃಷ್ಟಿಯಿಂದ ವಿರಾಟ್ ರೂಪವೇ ಆಗಿದ್ದ ಕೃಷಿ: ಬೀಜ, ಗೊಬ್ಬರ, ಬೆಳೆ ಬೆಳೆವ ತಂತ್ರಜ್ಞಾನಗಳ ವಿಷಯದಲ್ಲಿ ಯಾರ ಮೊರೆಯನ್ನು ಹೋಗಬೇಕಾಗಿರಲಿಲ್ಲ.

ಬರಗಾಲ, ಅತಿವೃಷ್ಟಿಗಳು ನಮ್ಮ ಜನರಿಗೆ ಹೊಸದಾಗಿರಲಿಲ್ಲ. ಇಂಥ ಸಂದರ್ಭಗಳನ್ನು ಜಯಿಸುವ ಬೀಜಗಳು ಅವರಲ್ಲಿದ್ದವು. ಬರಗಾಲದಲ್ಲಿ ಬರಗಾಲದ್ದೇ ಆದ ಅನ್ನವನ್ನು ನಿಸರ್ಗವೇ ದಯಪಾಲಿಸುತ್ತಿತ್ತು. ಉದಾಹರಣೆಗೆ ಬಿದಿರು ಅಕ್ಕಿ; ಬೂರಗದ ಮರಗಳಲ್ಲಿ ಯಥೇಚ್ಚ ನೀರು; ನವಣೆ, ಸಾಮೆ, ಹಾರಕ, ಸಜ್ಜೆ, ರಾಗಿ, ಜೋಳದ ತರದ ಏಕಧಾನ್ಯ ಬೆಳೆಗಳು. ಬರಗಾಲಗಳಲ್ಲಿ ಹೆಚ್ಚು ಫಸಲು ಕಾಣುವ ನೇರಳೆ, ಬೇಲ, ನಾಟಿ ತಳಿಯ ಮಾವುಗಳು, ಕಾರೆ ಹಣ್ಣು, ಹುಣಸೆ, ಸೀಮೆ ಹುಣಸೆ ಮುಂತಾದವುಗಳು, ಕಿತ್ತು ತಿನ್ನುವ ಆಳರಸರು, ಆಕ್ರಮಣಕಾರರು ಇರದೇ ಹೋಗಿದ್ದರೆ, ಬಹುಶಃ ಬರಗಾಲವೂ ನಮ್ಮ ರೈತರಿಗೆ ತನುಗಾಲವೇ ಆಗಿರುತ್ತಿತ್ತು. ಸಾಂಕ್ರಾಮಿಕ ಕಾಯಿಲೆಗಳನ್ನು ಹೊರತು ಪಡಿಸಿ; ಹಳ್ಳಿಗಳನ್ನು ಪೀಡಿಸುವ ಮಹಾಕಾಯಿಲೆಗಳು ಯಾವೂ ಇರಲಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚೆಯೇ ರಾಜ್ಯದ ಬೆಂಗಳೂರಿನ ಹೆಬ್ಬಾಳು ಪ್ರದೇಶದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿತ್ತು. ಅಂದಿನಿಂದ ಇಂದಿನವರೆಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ / ಸ್ನಾತಕೋತ್ತರ ಪದವಿ ಪಡೆದವರಿಗೆ ಉಳಲು ಬರುವುದಿಲ್ಲ. ಏರು ಕಟ್ಟುವುದೂ ಗೊತ್ತಿಲ್ಲ. ಗಾಡಿ ಹೊಡೆಯುವುದು ಗೊತ್ತಿಲ್ಲ. ಕೃಷಿ ವಿಶ್ವವಿದ್ಯಾನಿಲಯಗಳು ನಮ್ಮ ಸಾಂಪ್ರದಾಯಿಕ ಜ್ಞಾನದ ಹಾದಿಯಲ್ಲಿ ಕೃಷಿಯನ್ನು ನೋಡಲು ಹೋಗಲಿಲ್ಲ. ಯಾಕೆಂದರೆ ಅವರ ಪಠ್ಯಗಳಲ್ಲಿ ಯುರೋಪು, ಅಮೇರಿಕಾದ ಮಾದರಿಗಳು ತುಂಬಿ ಹೋಗಿದ್ದವು. ಭಾರತ ಮತ್ತು ಭಾರತೀಯ ಕೃಷಿ ಪದ್ಧತಿಗಳು "ಸನಾತನಿ" ಗಳಾಗಿ ಕಂಡವು. ದೇಶದ ರೈತ ಅನಗತ್ಯವಾಗಿ ದುಡಿಯುತ್ತಾನೆ. ಮೂಢನಂಬಿಕೆಗಳು ಕಂದಾಚಾರಗಳಿಗೆ ಬಲಿಯಾಗಿದ್ದಾನೆ. ಅವನಿಂದ ವ್ಯವಸಾಯ ಕ್ಷೇತ್ರ ಉದ್ಧಾರವಾಗಿರುವುದಿಲ್ಲ. ಅವನು ಇದೇ ರೀತಿ ಮುಂದುವರಿದರೆ ದೇಶದ ಜನರೆಲ್ಲ ವಿದೇಶದವರ ಮುಂದೆ ಭಿಕ್ಷಾ ಪಾತ್ರೆ ಹಿಡಕೊಂಡು ಓಡಾಡಬೇಕಾಗುತ್ತದೆ. ಇದೊಂದು ಅವಮಾನಕಾರಿ ಸಂಗತಿ.

ರೈತ ವರ್ಣಧರ್ಮ ವ್ಯವಸ್ಥೆಯಲ್ಲಿ ಸಿಕ್ಕಿ ಕೊಂಡಿದ್ದಾನೆ. ದುಡಿಯುವವನು ಒಬ್ಬನಾದರೆ ಅವಲಂಬಿತರು ಹತ್ತಾರು ಜನ. ಉಪಯೋಗಕ್ಕೆ ಬಾರದ ಮಡಕೆ

ಕುಡುಕೆ ಮಾಡುವವರನ್ನು, ಪ್ರಯೋಜನಕ್ಕೆ ಬಾರದ ಆಚಾರಿಗಳು, ಬಡಗಿಗಳು, ಅಗಸರು, ಚಮ್ಮಾರರು ಎಲ್ಲರನ್ನೂ ಈತನೆ ಸಾಕಬೇಕು, ಅವಿಭಕ್ತ ಕುಟುಂಬಗಳು ಕೃಷಿಗೆ ಮಾರಕ, ಬಹುಬೆಳೆ ಪದ್ಧತಿಯಿಂದ ಮಾರುಕಟ್ಟೆ ಹಾಳು ಮಾಡಿಕೊಂಡಿದ್ದಾನೆ. ಕೆಲಸಕ್ಕೆ ಬಾರದ ಹಾಲು ಕೊಡದ ಗೊಡ್ಡು ದನಗಳನ್ನೆ ಹೆಚ್ಚು ಸಾಕಿಕೊಂಡಿದ್ದಾನೆ. ಈತನಿಗೆ ಮಾರುಕಟ್ಟೆ ಜ್ಞಾನ ಇಲ್ಲ. ಅಧಿಕ ಇಳುವರಿಯ ಬೀಜ ಗೊತ್ತಿಲ್ಲ. ಈತನಿಗೆ ಪ್ರಗತಿ ಬೇಕಾಗಿಲ್ಲ. ಸಾವಿರಾರು ವರ್ಷಗಳಿಂದ ಚಲಿಸದೆ ನಿಂತಲ್ಲೇ ನಿಂತು ನೀರಾಗಿದ್ದಾನೆ. ಇಂಥ ಚಲಿಸದೇ ನಿಂತ ಅಪ್ರಯೋಜಕ ಹಳ್ಳಿಗಳಿಂದ ದೇಶ ಉದ್ಧಾರ ಆಗಲ್ಲ. ಎದೆ ಸೀಳಿದರೂ ಒಂದು ಅಕ್ಷರ ಬರಲ್ಲ. ಹಳ್ಳಿಗಳೆಲ್ಲ ಅನಕ್ಷರಸ್ಥರ, ಕೆಲಸಕ್ಕೆ ಬಾರದವರ ಕೊಂಪೆಗಳಾಗಿವೆ. ಇಂಥವರನ್ನು ಕಟ್ಟಿಕೊಂಡು ವಿದ್ಯಾವಂತರು ಏಣಗಾಡ ಬೇಕಾಗಿದೆ. ಇಂಥ ಪರಿಸ್ಥಿತಿಯಿಂದ ಹೊರ ಬರಬೇಕಾದರೆ–ಅನಗತ್ಯವಾಗಿ ಸಾಕುತ್ತಿರುವ ಗೊಡ್ಡು ಹಸುಗಳನ್ನು ಕೃಷಿ ವಲಯದಿಂದ ಆಚೆ ಹಾಕಬೇಕು. ಸಣ್ಣ ಹಿಡುವಳಿ ದೊಡ್ಡ ದೊಡ್ಡ ಹಿಡುವಳಿ ಮಾಡಬೇಕು. ಹತ್ತಾರು ಎತ್ತುಗಳು, ಹತ್ತಾರು ಜನಗಳು ವಾರಗಟ್ಟಲೆ ಮಾಡುವ ಕೆಲಸವನ್ನು ಟ್ರಾಕ್ಟರ್ ಮುಂತಾದ ಯಂತ್ರೋಪಕರಣಗಳಿಂದ ಒಂದೇ ದಿನದಲ್ಲಿ ಮಾಡಬಹುದು. ಓಬಿರಾಯನ ಕಾಲದ ಕುಂಟೆ–ರಂಟೆಗಳನ್ನೆಲ್ಲ ಮುರಿದು ಸೌದೆ ಒಲೆಗೆ ಹಾಕಬೇಕು. ಸಂಪ್ರದಾಯಕ್ಕೆ ಜೋತು ಬಿದ್ದು ಸನಾತನ ನಾಟಿ ತಳಿಗಳನ್ನೆ ನೆಚ್ಚಿಕೊಂಡಿದ್ದಾನೆ. ಅವನ ಬುದ್ಧಿ ವಿಪರೀತ ಮಂಕಾಗಿದೆ. ಅಪ್ಪ ಹಾಕಿದ ಆಲದ ಮರ ಅಂತ ನೇಣು ಹಾಕಿಕೊಳ್ಳುವುದನ್ನು ಬಿಟ್ಟು ಸುಧಾರಿತ ಬೀಜಗಳನ್ನು, ಹೆಚ್ಚು ಇಳುವರಿಯ ಬೀಜಗಳನ್ನು ಅವನು ಶ್ರದ್ಧೆಯಿಂದ ತರಿಸಿಕೊಳ್ಳಬೇಕು. ಆಧುನಿಕ ಗೊಬ್ಬರಗಳನ್ನು ಔಷಧಗಳನ್ನು ಅವನು ಬಳಸುವುದನ್ನು ಕಲಿಯಬೇಕು. ಹಿಂದಿನಿಂದಲೂ ರೈತ ಸಾಲಕ್ಕೆ ಹೆದರಿಕೊಂಡು ಬಾಳುತ್ತಿದ್ದಾನೆ. ಅವನು ಸಾಹಸಿಯಾಗ ಬೇಕು. ಸಾಲ ಮಾಡಲು ಹಿಂದೆ ಬೀಳಬಾರದು. ಇಂದು ಬ್ಯಾಂಕುಗಳು ಅವನ ಏಳಿಗೆಗಾಗಿ ಸಾಲ ಕೊಡಲು ಮುಂದೆ ಬಂದಿವೆ. ಅವನು ಸಾಲ ಮಾಡಿ ಬಾವಿ ತೋಡಿಸಿ, ಪಂಪುಸೆಟ್ಟುಗಳನ್ನಿಟ್ಟು ಹೊಲಗಳಿಗೆ ನೀರಾವರಿ ಸೌಕರ್ಯ ಮಾಡಿಕೊಳ್ಳಬೇಕು. ಹತ್ತಿ, ಕಬ್ಬು, ರೇಷ್ಮೆ, ತಂಬಾಕು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು. ಒಂದು ಎಕರೆಯಲ್ಲಿ ಚೌಚೌ ತರ ಹತ್ತು ತರ ಬೆಳೆಯುವುದನ್ನು ಬಿಟ್ಟು ಒಂದೇ ತರದ ಬೆಳೆ ಬೆಳೆದರೆ ಮಾರುಕಟ್ಟೆಯೂ ಸಿಗುತ್ತದೆ, ಉತ್ತಮ ಬೆಲೆಯೂ ಸಿಗುತ್ತದೆ. ಒಂದೇ ತರ ಬೆಳೆ ಬೆಳೆದರೆ ಬೆಳೆ ನಿರ್ವಹಣೆ, ಕೀಟ ನಿರ್ವಹಣೆ, ಕಳೆ ನಿರ್ವಹಣೆ ಕೊಯ್ಲು, ಒಕ್ಕಣೆ ಸುಲಭವಾಗಿರುತ್ತದೆ. ರೈತ ಹೆಚ್ಚು ಹೆಚ್ಚು ನಾಗರಿಕನಾಗಬೇಕು, ಹೆಚ್ಚು ಹೆಚ್ಚು ಆಧುನಿಕವಾಗಬೇಕು; ಪಟ್ಟಣಕ್ಕೆ ಬಂದು ಹೆಚ್ಚು ಹೆಚ್ಚು ತಿಳುವಳಿಕೆ ಪಡೆಯಬೇಕು. ರೈತ ತನಗೆ ಮೋಸವಾದರೆ ಪ್ರತಿಭಟಿಸಬೇಕು. ನ್ಯಾಯ ಕೇಳಬೇಕು ಒಟ್ಟಿನಲ್ಲಿ ರೈತ ಎಚ್ಚೆತ್ತುಕೊಳ್ಳಬೇಕು.

ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು ತಮ್ಮ ವಿದ್ಯಾರ್ಥಿಗಳಿಗೆ ತುಂಬಿದ್ದು ಇದೇ ವಿಚಾರಗಳನ್ನು. ಪದವಿ ಪಡೆದು ಕೃಷಿ ವಿಜ್ಞಾನಿಗಳಾದವರು ರೈತರಿಗೆ ಹೇಳಿದ

ತಿಳುವಳಿಕೆ ಮಾತುಗಳು ಕೂಡ ಇಂಥವೇ ಆಗಿದ್ದವು. ಆರಂಭದಲ್ಲಿ ನಮ್ಮ ಕೃಷಿ ವಿಜ್ಞಾನಿಗಳಿಗೆ ಅಮೇರಿಕಾ ವ್ಯವಸಾಯವೇ ಆದರ್ಶ ಪ್ರಾಯವೂ ಮಾದರಿಯೂ ಆಗಿತ್ತು. ಅಲ್ಲಿನ ಸಾವಿರಾರು ಎಕರೆಯ ದೊಡ್ಡದೊಡ್ಡ ಭೂ ಹಿಡುವಳಿಗಳು; ಯಂತ್ರೋಪಕರಣಗಳ ಮೂಲಕವೇ ಬಿತ್ತನೆ, ಬೆಳೆ ನಿರ್ವಹಣೆ, ಕೊಯ್ಲು, ಒಕ್ಕಣೆ ಇತ್ಯಾದಿ. ಪಶು ಸಂಗೋಪನೆಯೂ ದೊಡ್ಡ ಮಟ್ಟದಲ್ಲಿ ಜರುಗಿ; ಯಾಂತ್ರೀಕರಣದ ಮೂಲಕವೆ ಹಾಲು ಕರೆದು – ಹಾಲಿನ ಹೊಳೆ – ಡಾಲರ್‌ಗಳ ಹೊಳೆ ಕಂಡವರಿಗೆ: ನಮ್ಮ ನಾಟಿ ಹಸುಗಳು ಅನುಪಯುಕ್ತ ಗೊಡ್ಡು ಹಸುಗಳಾಗಿ ಕಂಡಿರಬೇಕು. ಒಂದು ದೇಶಕ್ಕೆ ಅತ್ಯಗತ್ಯವಾಗಿರುವ ಮಾದರಿ – ಮತ್ತೊಂದು – ಅದರಲ್ಲೂ ತಮ್ಮ ದೇಶಕ್ಕೆ ಮುಳುವಾಗುತ್ತದೆ ಎಂಬ ಕಲ್ಪನೆಯೂ ನಮ್ಮ ಕೃಷಿ ವಿಜ್ಞಾನಿಗಳಿಗೆ ಇಲ್ಲವಾದದ್ದು ಆಶ್ಚರ್ಯಕರ. ಅಂದ ಹಾಗೆ ನಮ್ಮ ರಾಜ್ಯದ/ದೇಶದ ಕೃಷಿ ವಿಜ್ಞಾನಿಗಳು – ವಿದೇಶದಿಂದ ಬಂದವರಾಗಿರಲಿಲ್ಲ. ಅಥವ ಕೇವಲ ಬೆಂಗಳೂರು ನಗರದಲ್ಲೆ ಹುಟ್ಟಿ, ಬೆಂಗಳೂರು ನಗರದಲ್ಲೆ ಓದಿ ಕೃಷಿ ವಿಜ್ಞಾನಿ ಆದವರೂ ಅಲ್ಲ. ಇಲ್ಲಿ ಕೃಷಿ ವಿಜ್ಞಾನ ಓದಿದವರು, ಕೃಷಿ ವಿಜ್ಞಾನಿಗಳಾದವರು ಬಹುಪಾಲು ರೈತರ ಮಕ್ಕಳು ಕೂಡ ಆಗಿದ್ದರು.

ಕೇವಲ ಒಂದು ತಲೆಮಾರು; ಅದರಲ್ಲೂ ಕೇವಲ ಹತ್ತೇ ಹತ್ತು ವರ್ಷ ರೈತಾಪಿ ಕುಟುಂಬದಿಂದ ಓದಲು ತೆರಳಿದ ಮಕ್ಕಳು: ತಾನು ಹುಟ್ಟಿ ಬೆಳೆದ ರೈತಾಪಿ ವ್ಯವಸ್ಥೆಯನ್ನೆ ಧಿಕ್ಕರಿಸಿ ನೋಡುವ ಮಟ್ಟಿಗೆ ಬದಲಾಗುತ್ತಾರೆ ಎಂದ ಮೇಲೆ ಆ ಶಿಕ್ಷಣದ ಪ್ರಭಾವ ಮತ್ತು ತೀವ್ರತೆ ಎಷ್ಟರ ಮಟ್ಟಿಗೆ ಇರಬೇಕು? (ಅಧ್ಯಯನದ ಮುಂದಿನ ವಿವರಗಳಲ್ಲಿ ವಿಜ್ಞಾನಿ ರಾಗಿಲಕ್ಷ್ಮಣಯ್ಯನವರ ರಾಗಿ ಸಂಶೋಧನೆ ಕುರಿತ ಪ್ರಸ್ತಾಪಗಳು ಬರುತ್ತವೆ. ಅಲ್ಲಿ ಕೆಲವು ವಿಜ್ಞಾನಿಗಳು ತಮ್ಮ ಸಹ ವಿಜ್ಞಾನಿಗಳ ಕುರಿತು ವಿಮರ್ಶೆ ಮಾಡುವುದು ಈ ಅಧ್ಯಯನದ ಭಾಗವಾಗಿಯೇ ಸೇರಿಕೊಂಡಿರುವುದೊಂದು ವಿಶೇಷ) ಇಷ್ಟು ದೊಡ್ಡ ಪರಕಾಯ ಪ್ರವೇಶ ಬಹುಶ: ಹಿಂದಿನ ಯಾವ ಸಂದರ್ಭದಲ್ಲೂ ಜರುಗಿಲ್ಲ. ಪರಕಾಯ ಪ್ರವೇಶ ಅನ್ನುವುದನ್ನು ಸಿನಿಮಾ, ರಂಗಭೂಮಿ ಸನ್ನಿವೇಶಗಳಿಗೆ ಅನ್ವಯಿಸುತ್ತೇವೆ. ಆದರೆ ಜೀವನದ ಇಷ್ಟು ದೊಡ್ಡ ರಂಗದ ಮೇಲೆ ಖಾಯಂ ಪರಕಾಯ ಪ್ರವೇಶಕ್ಕೊಳಗಾದವರು ನಮ್ಮ ಕೃಷಿ ವಿಜ್ಞಾನಿಗಳೇ ಇರಬೇಕು.

ಇಲ್ಲಿ ಮುಖ್ಯ ರಂಗ ಸಜ್ಜಿಕೆಯ ವಿಷಯಕ್ಕೆ ಬರುವ ಮುಂಚೆ ಸೈಡ್‌ವಿಂಗ್‌ನಲ್ಲಿ ನಿಂತು ಗಮನ ಸೆಳೆಯುವವರತ್ತ ಒಮ್ಮೆ ಕಣ್ಣಾಡಿಸುವುದು ಒಳಿತು.

ನಮ್ಮ ಸಾಂಪ್ರದಾಯಕ ದೇಸೀ ಕೃಷಿ ಜ್ಞಾನ ಸಾರ ಸಾರಗಳೆಲ್ಲದರ 'ಸರ್ವಸಾರ' ಎಂದು ಈ ಮುಂಚೆ ಪ್ರಸ್ತಾಪಿಸಲ್ಪಟ್ಟಿದೆ. ಇದು ಸಹಸ್ರಾರು ವರ್ಷಗಳ ಅಖಂಡ ಜ್ಞಾನ ಧಾರೆಗಳ ಸಾರ. ಇಂದು ಇದನ್ನು ದೇಸೀ ಕೃಷಿ; ಸಾಂಪ್ರದಾಯಿಕ

ಕೃಷಿ, ಸನಾತನ ಕೃಷಿ, ಹಳಬರ ಕೃಷಿ, ಪ್ರಾಚೀನ ಕೃಷಿ ಎಂದೆಲ್ಲ ಪರ್ಯಾಯ ಕೃಷಿ ತಂತ್ರಗಳೆಂಬಂತೆ ನೋಡಲು, ಪ್ರತಿಬಿಂಬಿಸಲು ಮತ್ತು ಪ್ರತಿಪಾದಿಸಲು ಯತ್ನಿಸುತ್ತಿರುವ ವ್ಯವಸ್ಥಿತ ಜಾಲವೇ ಇದೆ.

ಆಧುನಿಕ ರಸಾಯನಿಕ ಕೃಷಿಯ ಭರಾಟೆ ಮುಗಿದ ಬಳಿಕ ಪರ್ಯಾಯ ಕೃಷಿ ಎಂಬಂತೆ ದೇಸೀ ಕೃಷಿಯನ್ನು ಪ್ರತಿಪಾದಿಸಲಾಗುತ್ತಿದೆ. ವಾಸ್ತವವಾಗಿ ದೇಸೀ ಕೃಷಿ ಸಂಸ್ಕೃತಿ ಪರ್ಯಾಯ ಕೃಷಿ ಅಲ್ಲ. ಅದು ಯಾವತ್ತಿಗು ಈ ದೇಶದ ಪ್ರಧಾನ ಕೃಷಿ ಸಂಸ್ಕೃತಿಯೇ ಆಗಿದೆ. ಅಷ್ಟು ಪ್ರಬಲವಾದ ವೈಜ್ಞಾನಿಕ ತಳಹದಿ ನಮ್ಮ ದೇಸೀ ಕೃಷಿ ಸಂಸ್ಕೃತಿಗೆ ಇದೆ. ಇದುವೆ ಪ್ರಧಾನಕೃಷಿ ಎಂಬುದು ಈ ಅಧ್ಯಯನದ ತಿರುಳಾಗಿದೆ. ಫಲಿತವೂ ಆಗಿದೆ.

ಸಾವಿರಾರು ವರ್ಷಗಳ ದೇಸೀ ಪಾರಂಪರಿಕ ಕೃಷಿಗೆ ಪರ್ಯಾಯವಾಗಿ ಬಂದು ಅಲ್ಪಾಯುಷಿಯಾಗಿ ಅಸುನೀಗುತ್ತಿರುವ ಆಧುನಿಕ ರಾಸಾಯನಿಕ ಕೃಷಿಗೆ ದೇಸೀ ಪಾರಂಪರಿಕ ಕೃಷಿಗೆ ಇರುವ ಪ್ರಬಲವಾದ ವೈಜ್ಞಾನಿಕ ತಳಹದಿ ಇಲ್ಲ ಎಂಬುದು ಕೂಡ ಈ ಅಧ್ಯಯನದ ಫಲಿತವಾಗಿದೆ.

ಇನ್ನುಳಿದಂತೆ ಪರ್ಯಾಯ ಕೃಷಿಗಳೆಂದು ಪ್ರಚಾರದಲ್ಲಿರುವ ಕೆಳಕಂಡ ಕೃಷಿಗಳು

ಸಾವಯವ ಕೃಷಿ

ಸಹಜ ಕೃಷಿ

ಪರಿಸರಸ್ನೇಹಿ ಕೃಷಿ

ಪರಾಸರ ಕೃಷಿ

ವೃಕ್ಷಾಯುರ್ವೇದ ಕೃಷಿ

ಜೀವ ಚೈತನ್ಯ ಕೃಷಿ

ಅಗ್ನಿಹೋತ್ರಿ ಕೃಷಿ

ಇವೆಲ್ಲವೂ ಪರ್ಯಾಯ ಕೃಷಿಯ ಮತ್ತಷ್ಟು ಹೆಸರುಗಳು. ಇವುಗಳನ್ನು ಪದ್ಧತಿಗಳೆಂದು ಕರೆಯಲು ವ್ಯಾಪಕ ಅನುಸರಣೆಗಳಿರಬೇಕು. ಕಾಲದ ಸವಾಲು ಮತ್ತು ಪರೀಕ್ಷೆಗಳಲ್ಲಿ ಪಾರಾಗಿ ಉಳಿದು ಬೆಳೆದು ಬಂದಿರಬೇಕು. ಬೇಸಾಯಜೀವನದ ಯಶಸ್ಸಿಗೆ ಸಹಕಾರಿಯಾಗಬೇಕು. ಜ್ಞಾನದ, ವಿಜ್ಞಾನದ ತಳಹದಿ ಇರಬೇಕು. ಈ

ಹಿನ್ನೆಲೆಯಲ್ಲಿ ಈ ಕೃಷಿ ವಿಧಾನಗಳನ್ನು ಅಧ್ಯಯನ ಮಾಡಲಾಗಿದೆ ಮತ್ತು ವೈಜ್ಞಾನಿಕವಾಗಿ ಪರಿಶೀಲಿಸಲಾಗಿದೆ.

ಮೊದಲಿಗೆ ಪ್ರಪಂಚದ ಸಮಸ್ತ ಕೃಷಿ ವಿಜ್ಞಾನಿಗಳಿಂದ ವೈಜ್ಞಾನಿಕ ಕೃಷಿಯೆಂದೂ, ಭವಿಷ್ಯದ ಸವಾಲುಗಳಿಗೆ ಉತ್ತರವಾಗುವ ಭವಿಷ್ಯತ್ತಿನ ಕೃಷಿ ಎಂದು ಹೆಸರಾಗಿದ್ದ ರಸಾಯನಿಕ ಕೃಷಿ ಅಥವಾ ಕೆಮಿಕಲ್ ಫಾರ್ಮಿಂಗ್‌ನ ಕೃಷಿ ವಿಧಾನದಲ್ಲಿ ಇರುವ ವೈಜ್ಞಾನಿಕತೆಯನ್ನು ಪರಿಶೀಲಿಸಲಾಗಿದೆ. ಜಗದ್ವಿಖ್ಯಾತ ವಿಜ್ಞಾನಿ ವಾನ್ ಲೀಬಿಗ್ ಅವರು ಬೆಳೆ ಬೆಳೆಯುವುದಕ್ಕೆ ಹೊರಗಿನಿಂದ ರಸಾಯನಿಕಗಳನ್ನು ಸುರಿಯಲೇಬೇಕು ಎಂದು ಪ್ರತಿಪಾದಿಸಿದವರು ಮತ್ತು ತಮ್ಮ ಪ್ರತಿಪಾದನೆಯನ್ನು ಇಡೀ ಜಗತ್ತು ಅನುಸರಿಸುವಂತೆ ಮಾಡಿದವರು.

೪.೧. ಬೆಳೆಗಳ ತಾಯಿ

ಈ ಪ್ರತಿಪಾದನೆ ಎಷ್ಟು ಸುಳ್ಳು ಮತ್ತು ಅವೈಜ್ಞಾನಿಕ ಎಂದು ತಿಳಿಯಲು ಈ ಕೆಳಗಿನ ವೈಜ್ಞಾನಿಕ ಸತ್ಯಗಳನ್ನು ಅರಿಯಲೇಬೇಕಾಗಿದೆ.

ನಿಜಕ್ಕೂ ಬೆಳೆ ಬೆಳೆಯಲು ಏನೆಲ್ಲಾ ಬೇಕು? 'ಏನೆಲ್ಲಾ ಬೇಕು? ಮತ್ತು ಬೇಕಾದ್ದೆಲ್ಲಾ ಸಿಗುವ ಮೂಲ ಯಾವುದು?'

ಯಾವುದೇ ಸಸ್ಯದ ಎಲೆಯ 'ಹಸಿರು'ಗೆ ಹರಿತ್ ದ್ರವ್ಯ ಕಾರಣ. ಪ್ರತಿ ಚದರಡಿ ಹಸಿರು ಎಲೆಯ ಮೇಲೆ ೧೨೫೦ ಕಿಲೊ ಕ್ಯಾಲರಿ ಸೂರ್ಯನ ಬೆಳಕು ಬೀಳುತ್ತದೆ. ಹೀಗೆ ಬಿದ್ದ ಎಲ್ಲ ಸೌರಶಕ್ತಿಯನ್ನು ಎಲೆ ಬಳಸಿಕೊಳ್ಳುವುದಿಲ್ಲ. ಈ ೧೨೫೦ ಕಿಲೊ ಕ್ಯಾಲರಿ ಸೌರಶಕ್ತಿಯ ಪೈಕಿ ಯಾವುದೇ ಒಂದು ಚದರಡಿಯ ಹಸಿರೆಲೆ ಶೇಕಡ ಒಂದರಷ್ಟನ್ನು ಅಂದರೆ ೧೨.೫ ಕಿಲೊ ಕ್ಯಾಲರಿ ಶಕ್ತಿಯನ್ನು ಮಾತ್ರ ಬಳಸಿಕೊಳ್ಳುವ ಸಾಮರ್ಥ್ಯನ್ನು ಹೊಂದಿರುತ್ತದೆ. ಹಸಿರೆಲೆಯಲ್ಲಿರುವ ಗ್ರೇನಾ ಕಣಗಳು ಸೌರಶಕ್ತಿಯನ್ನು ಸಂಗ್ರಹಿಸುತ್ತವೆ. ಹೀಗೆ ಸಂಗ್ರಹಿಸಿದ ಸೌರಶಕ್ತಿಯನ್ನು ಬಳಸಲು ಂಖಿಕ (ಂಆಇಓಔಖಖಓಇ ಖಖಖ ಕಊಔಖಕಊಂಖಇ) ನೆರವಾಗುತ್ತವೆ. ಸಸ್ಯದ ಎಲೆಗಳು ವಾತಾವರಣದಿಂದ ಕಾರ್ಬನ್ ಡೈ ಆಕ್ಸೈಡ್, ಗಿಡದ ಬೇರಿನ ಮೂಲಕ ನೀರು, ಸೂರ್ಯನಿಂದ ಬೆಳಕು ಸ್ವೀಕರಿಸಿ ಕಾರ್ಬೋಹೈಡ್ರೇಟ್(ಕಚ್ಚಾ ಸಕ್ಕರೆ) ತಯಾರಿಸುತ್ತವೆ. ಇಲ್ಲಿ ಪ್ರತಿ ಎಲೆಯೂ ಅಡಿಗೆ ಮನೆ ಇದ್ದಂತೆ.

ಒಂದು ಚದರ ಅಡಿ ಹಸಿರು ಎಲೆ ಸೂರ್ಯನಿಂದ ಸ್ವೀಕರಿಸುವ ೧೨.೫ ಕಿಲೊ ಕ್ಯಾಲರಿ ಶಕ್ತಿ ಮತ್ತು ವಾತಾವರಣದಿಂದ ಪಡೆಯುವ ಗಾಳಿ, ನೀರು ಬಳಸಿ ಒಂದು ದಿನಕ್ಕೆ ೪.೫ ಗ್ರಾಂ ಆಹಾರ ತಯಾರಿಸುತ್ತದೆ. ತಾನು ತಯಾರಿಸುವ ಈ ೪.೫ ಗ್ರಾಂ ಆಹಾರದಲ್ಲಿ ಭತ್ತ, ರಾಗಿ, ಗೋದಿ, ಜೋಳ, ಹೆಸರು, ಉದ್ದು, ಅವರೆ, ಹಲಸಂದೆ ಮುಂತಾದವು ಧಾನ್ಯದ ಬೆಳೆಗಳಾದರೆ – ಆ ಧಾನ್ಯಗಳ ನಿರ್ಮಾಣಕ್ಕಾಗಿ

೧.೫ ಗ್ರಾಂ ಆಹಾರ ವಿನಿಯೋಗಿಸುತ್ತದೆ. ಕಬ್ಬು, ಬಾಳೆ, ಗೆಡ್ಡೆ, ಗೆಣಸು, ಹಣ್ಣಿನ ಬೆಳೆಗಳಾದರೆ ಅವುಗಳ ಫಲ ನಿರ್ಮಾಣಕ್ಕೆ ೨.೨೫ ಗ್ರಾಂ ಆಹಾರ ವಿನಿಯೋಗಿಸುತ್ತದೆ. ಹೊರಗಿನ ಯಾವುದರಿಂದಲೂ ಇವನ್ನು ಹೆಚ್ಚಿಸಲು ಸಾಧ್ಯವಿಲ್ಲ. ಇದು ನಿಸರ್ಗ ನಿಯಮ. ನಾವೀಗ ಒಂದು ಗಿಡ, ಗಾಳಿ, ನೀರು ಬೆಳಕುಗಳಿಂದ ಪಡೆಯುವುದನ್ನು ನೋಡಿದ್ದೇವೆ. ಇನ್ನು ಮಣ್ಣಿನಿಂದ ಪಡೆಯುವುದನ್ನು ನೋಡೋಣ; ಬೆಳೆ ಬೆಳೆಯಲು ಗಾಳಿ, ನೀರು, ಬೆಳಕು ಎಷ್ಟು ಮುಖ್ಯವೋ ಮಣ್ಣು ಕೂಡ ಅಷ್ಟೇ ಮುಖ್ಯ. ಆದರೆ ಗಿಡ ಮಣ್ಣಿನಿಂದ ಪಡೆಯುವುದಾದರೂ ಎಷ್ಟು?

ಒಂದು ಪ್ರಯೋಗದ ಮೂಲಕ ಇದನ್ನು ತಿಳಿಯೋಣ. ಸರಿಯಾಗಿ ನೂರುಕೆ.ಜಿ. ತೂಗುವ ಹಸಿ ಮರದ ತುಂಡನ್ನು (ಮತ್ತಿ, ಹೊನ್ನೆ, ಹೊಂಗೆ, ಗೊಬ್ಬಳಿ, ತೇಗ, ಬೀಟೆ ಯವುದಾದರೂ ಆಗಬಹುದು) ತಂದು ಬಿಸಿಲಲ್ಲಿ ಹಾಕಬೇಕು. ಅದನ್ನು ಬಿಸಿಲಲ್ಲಿ ಒಣಗಲು ಬಿಡಬೇಕು. ಹೀಗೆ ಒಣಗಿದ ಮರದ ತುಂಡನ್ನು ತೂಕ ಮಾಡಿದರೆ – ಅದರ ಕರಾರುವಕ್ಕು ತೂಕ ಕೇವಲ ೨೨ಕೆ.ಜಿ. ಉಳಿದ ೭೮ ಕೆ.ಜಿ. ಏನಾಯ್ತು? ಏನಾಯಿತೆಂದರೆ ಆ ಮರದ ತುಂಡಿನಲ್ಲಿದ್ದ ನೀರೆಲ್ಲಾ ಆವಿಯಾಯಿತು. ಆ ನೀರು ವಾತಾವರಣದಿಂದ ಲಭಿಸಿದ್ದು. ಮತ್ತೆ ವಾತಾವರಣ ಸೇರಿತು. ಈಗ ಉಳಿದ ೨೨ಕೆ.ಜಿ. ಮರದ ತುಂಡಿಗೆ ಬೆಂಕಿ ಹಚ್ಚಿದರೆ ಉರಿದು ಬೂದಿಯಾಗುತ್ತದೆ. ಕಡೆಗೆ ಉಳಿದ ಆ ಬೂದಿಯ ತೂಕ ಕೇವಲ ೧.೫ ಕೆ.ಜಿ. ಮಾತ್ರ, ಅಂದರೆ ಆ ಇಡೀ ನೂರು ಕೆ.ಜಿ. ಮರದ ತುಂಡಿಗೆ ಭೂಮಿಯ ಕೊಡುಗೆ ಕೇವಲ ೧.೫ ಕೆ.ಜಿ. ಆ ೨೨ ಕೆ.ಜಿ. ಒಣ ಮರದ ತುಂಡಿಗೆ ಬೆಂಕಿಹಚ್ಚಿದಾಗ ಸೂರ್ಯನಿಂದ ಬಂದದ್ದು ಜ್ವಾಲೆಯ ರೂಪದಲ್ಲಿ ಹೋಯಿತು. ಕಾರ್ಬನ್ ಡೈ ಆಕ್ಸೈಡ್‌ನಿಂದ ಬಂದದ್ದು ಹೊಗೆಯ ರೂಪ ತಾಳಿತು. ಈ ಹಿನ್ನೆಲೆಯಲ್ಲಿ ನಾವು ಬೆಳೆಯ ವಿಷಯ ಗಮನಿಸಬೇಕು. ನಾವು ಬೆಳೆವ ಯಾವುದೇ ಬೆಳೆಯಿರಬಹುದು– ಅದು ಶೇಕಡ ೯೮.೫ರಷ್ಟನ್ನು ವಾತಾವರಣದಿಂದಲೇ ಪಡೆಯುತ್ತದೆ. ಉಳಿದ ಶೇ.೧.೫ರಷ್ಟನ್ನು ಭೂಮಿಯಿಂದ ಪಡೆಯುತ್ತದೆ. ಬೆಳೆಗೆ ಬೇಕಾದ ಈ ಶೇಕಡ ೧.೫ರ ವ್ಯವಸ್ಥೆಗಾಗಿ ನಮ್ಮಲ್ಲಿ ಎಷ್ಟೆಲ್ಲ ದೊಡ್ಡ ವ್ಯವಸ್ಥೆ?

ಸಸ್ಯದ ಬೆಳವಣಿಗೆಗೆ ಬೇಕಾದ ಎಲ್ಲ ಪೋಷಕಾಂಶಗಳು ಭೂಮಿಯಲ್ಲೇ ಇವೆ. ಬಂಜರು ಅಂತ ಭಾವಿಸುವ ಮಣ್ಣಿನಲ್ಲೂ ಹೇರಳವಾದ ಪೋಷಕಾಂಶಗಳಿವೆ. ೧೯೨೮ರಲ್ಲಿ ಅಮೇರಿಕಾದ ಡಾ॥ ಕ್ಲಾರ್ಕ್ ಮತ್ತು ಡಾ॥ ವಾಷಿಂಗ್ಟನ್ ಎಂಬ ಜಗದ್ವಿಖ್ಯಾತ ಭೂಗರ್ಭ ವಿಜ್ಞಾನಿಗಳು ಭಾರತಕ್ಕೆ ಬಂದಿದ್ದರು. ಬರ್ಮಾಸೇಲ್ ಎಂಬ ಕಂಪೆನಿಯ ಪರವಾಗಿ ಭಾರತದ ನಾನಾ ಭಾಗಗಳಲ್ಲಿ ತೈಲ ಹಾಗೂ ಖನಿಜ ನಿಕ್ಷೇಪಗಳನ್ನು ಪತ್ತೆ ಹಚ್ಚುವುದು ಅವರ ಉದ್ದೇಶವಾಗಿತ್ತು. ಆ ಹಿನ್ನೆಲೆಯಲ್ಲಿ ಅವರು ದೇಶದಾದ್ಯಂತ ನೂರಾರು ಸಂಖ್ಯೆಯಲ್ಲಿ ಸಹಸ್ರ ಅಡಿ ಆಳದವರೆಗೆ ಕೊಳವೆಬಾವಿಗಳನ್ನು ಕೊರೆಸಿದರು. ಪ್ರತಿ ಬಾರಿ ಕೊರೆಸುವಾಗಲೂ ವ್ಯವಸ್ಥಿತ

ರೀತಿಯಲ್ಲಿ ಮಣ್ಣಿನ ಸ್ಯಾಂಪಲ್‌ಗಳನ್ನು ಕಲೆಹಾಕಿದರು. ಪ್ರತಿ ಅರ್ಧ ಅಡಿ ಮಣ್ಣಿಗೂ ಒಂದೊಂದು ಬ್ಯಾಗ್ ಇಟ್ಟು; ಬ್ಯಾಗ್ ನಂ.–೧, ಬ್ಯಾಗ್ ನಂ.–೨ ಬ್ಯಾಗ್ ನಂ.–೩ ರೀತಿಯಲ್ಲಿ ಸಾವಿರ ಅಡಿ ಆಳದವರೆಗೆ ಎರಡು ಸಾವಿರ ಮಾದರಿಗಳನ್ನು ಸಂಗ್ರಹಿಸಿದರು. ಹಾಗೇ ಸಂಗ್ರಹಿಸಿದಮಣ್ಣಿನ ಮಾದರಿಗಳ ವಿಶ್ಲೇಷಣೆ ಇಂದಿಗೂ ಅಧಿಕೃತ ದಾಖಲೆಗಳಾಗಿ ಉಳಿದಿವೆ. ಕ್ಲಾರ್ಕ್ ಮತ್ತು ವಾಷಿಂಗ್ಟನ್‌ರ ಆ ವರದಿಗಳ ಪ್ರಕಾರ ಭಾರತದ ಪ್ರತಿ ಇಂಚಿಂಚು ಮಣ್ಣಿನಲ್ಲೂ ಸಸ್ಯಕ್ಕೆ ಬೇಕಾದ ಎಲ್ಲ ಬಗೆಯ ಪೋಷಕಾಂಶಗಳು ಅಡಗಿವೆ. ಸಾವಿರ ಅಡಿ ಆಳದಲ್ಲೂ ಆ ಪೋಷಕಾಂಶಗಳಿಗೆ ಕೊರತೆಯೆಂಬುದಿಲ್ಲ. ನಮ್ಮ ರಾಜ್ಯದ ಗುಲ್ಬರ್ಗದಲ್ಲಿರುವ ಕೇಂದ್ರಸರ್ಕಾರದ ಕೃಷಿ ಸಂಶೋಧನಾ ಕೇಂದ್ರದ ಅಧ್ಯಯನ ವರದಿಗಳು ಇದೇ ಮಾತನ್ನು ಹೇಳುತ್ತವೆ.

ಇಷ್ಟಾದರೂ ಪೋಷಕಾಂಶಗಳ ಕುರಿತು ಮತ್ತಷ್ಟು ವಿವರಣೆಗಳು ಅಗತ್ಯ: ಎಲ್ಲರೂ ಬಲ್ಲಂತೆ ಮತ್ತು ಹಿಂದೆ ನಮ್ಮ ದಾರ್ಶನಿಕರೂ ತಿಳಿಸಿರುವಂತೆ ಮಾನವ ದೇಹ ನೂರೆಂಟು ಧಾತುಗಳಿಂದ ನಿರ್ಮಾಣವಾಗುತ್ತವೆ. ಹಾಗೆಯೇ ಇಡೀ ಸೃಷ್ಟಿಯೂ ಈ ನೂರೆಂಟು ಧಾತುಗಳಿಂದಲೇ ನಿರ್ಮಾಣವಗಿರುವುದು. ಹೀಗಾಗಿಯೇ ಅಲ್ಲಮಪ್ರಭುಗಳು ಹೇಳಿರುವುದು "ಒಳಗೇನಿದೆಯೋ ಹೊರಗೂ ಅದೇ ಇದೆ ಹೊರಗೇನಿದೆಯೋ ಒಳಗೂ ಅದೇ ಇದೆ– ಎರಡೂ ಬೇರೆ ಬೇರೆ ಅಲ್ಲ" ಎಂಬುದಾಗಿ. (ಬಯಲು ಬಯಲಾಗಿ ಬಯಲಾಗಿ ಹೋಯಿತು)

ಅ ನೂರೆಂಟು ಧಾತುಗಳ ಮೂಲವನ್ನು ವೈಜ್ಞಾನಿಕವಾಗಿ ಹೀಗೆ ವರ್ಗೀಕರಿಸಬಹುದು.

ಭಾಗ–೧

ಇಂಗಾಲ (ಕಾರ್ಬನ್)

ಜಲಜನಕ (ಹೈಡ್ರೋಜನ್)

ಆಮ್ಲಜನಕ (ಆಕ್ಸಿಜನ್)

ಭಾಗ–೨

ನೈಟ್ರೋಜನ್ (ಸಾರಜನಕ)

ಫಾಸ್ಪರಸ್ (ರಂಜಕ)

ಪೊಟ್ಯಾಷಿಯಂ

ಭಾಗ–೩

ಕ್ಯಾಲ್ಸಿಯಂ (ಸುಣ್ಣ)

ಸಲ್ಫರ್ (ಗಂಧಕ)

ಮೆಗ್ನೀಷಿಯಂ

ಭಾಗ-೪

ಮೈಕ್ರೋ ನ್ಯೂಟ್ರಿಯೆಂಟ್ಸ್ -೯೯

(ಸೂಕ್ಷ್ಮ ಪೋಷಕಾಂಶಗಳು ಅಥವಾ ಸೂಕ್ಷ್ಮ ಅನ್ನ ದ್ರವ್ಯಗಳು/ಲಘು ಪೋಷಕಾಂಶಗಳು)

ಬೆಳೆಯ ಬೆಳವಣಿಗೆಯ ಹಿಂದೆ ಮೇಲಿನ ಮೊದಲ ಮೂರು ಭಾಗಗಳ ಒಂಭತ್ತು ಅಂಶಗಳು ಪ್ರಧಾನ ಪಾತ್ರವನ್ನು. ನಾಲ್ಕನೇ ಭಾಗದ ಉಳಿದ ೯೯ ಅಂಶಗಳು ಆಂಶಿಕ ಪಾತ್ರವನ್ನು ನಿರ್ವಹಿಸುತ್ತವೆ.

ಸೂಕ್ಷ್ಮ ಅನ್ನ ದ್ರವ್ಯಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೆಸರಿಸಬಹುದು.

ಕಬ್ಬಿಣ, ಮ್ಯಾಂಗನೀಸ್, ಬೋರಾನ್, ತಾಮ್ರ, ಸತು, ಕ್ಲೋರಿನ್, ಮಾಲಿಬ್ಡಿನಂ, ಸೆಲಿನಿಯಂ, ವೆನಡಿಯಂ, ಸಿಲಿಕಾನ್, ಐಯೋಡಿನ್, ಕ್ರೋಮಿಯಂ, ಫ್ಲೋರಿನ್, ಬ್ರೋಮೈನ್, ಲಿಥಿಯಂ, ಸೋಡಿಯಂ, ರುಬಿಡಿಯಂ, ಸೆಸಿಯಂ, ಸ್ಟ್ರಾಟಿಯಂ, ತವರ, ಕೋಬಾಲ್ಟ್ ಮುಂತಾದವು.

ಮೇಲೆ ತಿಳಿಸಿರುವ ಧಾತುಗಳಲ್ಲಿ ಇಂಗಾಲ, ಜಲಜನಕ ಮತ್ತು ಆಮ್ಲಜನಕ ವಾತಾವರಣದಿಂದ ಬೆಳೆಗೆ ಲಭ್ಯ. ನೈಟ್ರೋಜನ್ ಕೂಡ ವಾತಾವರಣದಲ್ಲಿದೆ. ಆದರೆ ಅದು ಎಲ್ಲ ಬೆಳೆಗಳಿಗೂ ನೇರವಾಗಿ ದೊರೆಯುವುದಿಲ್ಲ. ದ್ವಿದಳ ಧಾನ್ಯದ ಗಿಡಗಳ ಬೇರಿನ ಗಂಟುಗಳಲ್ಲಿರುವ ರೈಝೋಬಿಯಂ ಜೀವಾಣುಗಳು ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಬೆಳೆಗಳಿಗೆ ಪೂರೈಸುತ್ತವೆ, ಇನ್ನುಳಿದಂತೆ ರಂಜಕ, ಪೊಟ್ಯಾಷ್, ಸುಣ್ಣ ಇತ್ಯಾದಿ ಏನೇ ಇರಬಹುದು. ಅವೆಲ್ಲವನ್ನೂ ಭೂಮಿಯಲ್ಲಿರುವ ಜೀವಾಣುಗಳು ಸರಬರಾಜು ಮಾಡುತ್ತವೆ.

ಸಮಸ್ತ ಜೀವರಾಶಿಗಳ ಅಸ್ತಿತ್ವಕ್ಕೆ ಸೂರ್ಯನೇ ಕಾರಣ. ವಾತಾವರಣದಲ್ಲಿರುವ ಕಾರ್ಬನ್, ಆಕ್ಸಿಜನ್ ಮತ್ತು ಹೈಡ್ರೋಜನ್‌ಗಳನ್ನು ಗಿಡ ತಾನಾಗಿಯೇ ಪಡೆಯುತ್ತದೆ. ಅದಕ್ಕಾಗಿ ಹೊರಗಿನ ಸಹಾಯ, ಸಹಕಾರಗಳು ಬೇಕಾಗಿಲ್ಲ. ಈ ಕ್ರಿಯೆಗೆ ಸೂರ್ಯನ ಕೃಪೆ ಇದ್ದೇ ಇದೆ.

ಇನ್ನು ನೈಟ್ರೋಜನ್. ನಮ್ಮ ವಾತಾವರಣವನ್ನು ನೈಟ್ರೋಜನ್ನಿನ ಮಹಾಸಾಗರವೆಂದೇ ಕರೆಯಬಹುದು. ವಾತಾವರಣದಲ್ಲಿರುವ ನೈಟ್ರೋಜನ್‌ನ

ಪ್ರಮಾಣ ಶೇಕಡ. ೭೮.೬ ಈ ಭೂಮಿಯ ಮೇಲೆ ೪೮ ಸಾವಿರ ಜಾತಿ, ಉಪಜಾತಿಗಳ ಸಸ್ಯ ಪ್ರಭೇದಗಳಿವೆ. ಇವುಗಳಲ್ಲಿ ದ್ವಿದಳ ಧಾನ್ಯಗಳ ಸಸ್ಯಗಳು ಮಾತ್ರ ವಾತಾವರಣದಲ್ಲಿರುವ ಸಾರಜನಕವನ್ನು ಪಡೆದುಕೊಳ್ಳುವ ಸೌಭಾಗ್ಯವನ್ನು ಹೊಂದಿವೆ. ಉಳಿದ ಬಹುತೇಕ ಸಸ್ಯಗಳಿಗೆ ಈ ಸೌಭಾಗ್ಯವಿಲ್ಲ. ಪೂರ್ವಮುಂಗಾರಿನ ಮಿಂಚು, ಗುಡುಗಳಾರ್ಭಟದ ಮಳೆಯಲ್ಲಿ ಶೇಕಡ ೨೫ರಷ್ಟು ಸಾರಜನಕ ಸಸ್ಯಸಂಕುಲಕ್ಕೆ ಲಭ್ಯ. ಈ ಸಾರಜನಕ ಕೂಡ ಮಣ್ಣಿನಿಂದಲೇ ಹವಾಗೋಳಕ್ಕೆ(ವಾತಾವರಣಕ್ಕೆ) ಹೋದದ್ದು! ಬೇಸಿಗೆಯ ಸುಂಟರಗಾಳಿ ಧೂಳಿನೊಂದಿಗೆ ಮಣ್ಣಿನ ಮೇಲ್ಮೈಗಳಲ್ಲಿರುವ ಜೀವಾಣುಮಣ್ಣನ್ನು ಹೊತ್ತೊಯ್ಯುತ್ತದೆ. ಗುಡುಗು ಮಿಂಚುಗಳಲ್ಲಿ $C_6H_{12}O_6 + N_2$ ಇದು ಅಮಿನೋ ಆಮ್ಲವಾಗಿ ಮತ್ತೆ ಭೂಮಿಗೆ ಹಿಂತಿರುಗುತ್ತದೆ. ಈ ಅಮಿನೋ ಆಮ್ಲ ತಾರತಮ್ಯವಿರದೆ ಜಗದೆಲ್ಲೆಡೆಗೂ ಮಳೆಯ ಜೊತೆಗೆ ಸುರಿಯುತ್ತದೆ. ಇದು ಪ್ರೋಟೀನ್ ತಯಾರಿಸಿ ಸಸ್ಯದ ಬೆಳವಣಿಗೆಗೆ ನೆರವಾಗುತ್ತದೆ. ಇನ್ನುಳಿದಂತೆ ಒಂದು ಎಕರೆಯಲ್ಲಿ ಬೆಳೆ ಬೆಳೆಯಲು ಸಾರಜನಕ ಸಾಕು. ಇದನ್ನೂ ಕೂಡ ಹೊರಗಿನಿಂದ ತರುವ ಅಗತ್ಯವಿಲ್ಲ. ಬೆಳೆ ಬೆಳೆವಾಗ ಏಕದಳ ಧಾನ್ಯಗಳೊಂದಿಗೆ ದ್ವಿದಳ ಧಾನ್ಯಗಳ ಬೆಳೆಯನ್ನೂ ಸಂಯೋಜಿಸಿದರೆ ಅಲ್ಲಿಗೆ ಸಾರಜನಕವನ್ನು ಹೊರಗಿನಿಂದ ಸುರಿಯುವ ಅಗತ್ಯ ಬರುವುದಿಲ್ಲ.

ಉದ್ದು, ಹೆಸರು, ತೊಗರಿ, ಅಲಸಂದೆ, ಕಡ್ಲೆ, ನೆಲಗಡಲೆ, ಬಟಾಣಿ, ಗೋರಿಕಾಯಿ, ಮೆಂತ್ಯ...ಹೀಗೆ ಯಾವುದೇ ದ್ವಿದಳ ಧಾನ್ಯದ ಬೇರುಗಳಲ್ಲಿ ಗಂಟುಗಳಿರುತ್ತವೆ. ಆ ಗಂಟುಗಳಲ್ಲಿರುವ ರೈಜೋಬಿಯಂ ಜೀವಾಣುಗಳು ವಾತಾವರಣದಲ್ಲಿರುವ ಸಾರಜನಕವನ್ನು ಹೀರಿಕೊಳ್ಳುತ್ತವೆ. ಇಂಥ ರೈಜೋಬಿಯಂ ಜೀವಾಣುಗಳಿಗೆ ಪ್ರಕೃತಿ ಮೂರು ಪ್ರಮುಖ ಜವಬ್ದಾರಿಗಳನ್ನು ವಹಿಸಿದೆ:

೧. ಯಾವುದೇ ದ್ವಿದಳ ಧಾನ್ಯದ ಗಿಡ ತನ್ನ ಬೆಳವಣಿಗೆಗೆ ಬೇಕಾದ ಸಾರಜನಕವನ್ನು ತಾನೇ ಬಳಸಿಕೊಳ್ಳುವಂತೆ ಮಾಡುವುದು.
೨. ತನ್ನ ಸುತ್ತಲೂ ಇರುವ ಇತರ ಗಿಡಗಳಿಗೆ ಅಗತ್ಯವೆನಿಸುವ ಸಾರಜನಕವನ್ನು ಒದಗಿಸುವುದು.
೩. ಮತ್ತು ಮುಂದಿನ ಫಸಲುಗಳ ಅಗತ್ಯಕ್ಕಾಗಿ ಉಳಿದ ಸಾರಜನಕವನ್ನು ಮಣ್ಣಿನಲ್ಲಿ ಸ್ಥಿರೀಕರಿಸುವುದು.

ನಮ್ಮ ಭತ್ತ, ರಾಗಿ ಫಸಲುಗಳಿಗೂ ಹೊರಗಿನಿಂದ ಸಾರಜನಕ ಬೇಕಾಗಿಲ್ಲ. ಯಾಕೆಂದರೆ ಈ ಬೆಳೆಗಳಿಗೆ ಯೂರಿಯ ಸರಬರಾಜು ಮಾಡುವ ಕೆಲವು ಸೂಕ್ಷ್ಮ ಜೀವಾಣುಗಳಿವೆ.

೧. ACETO BACTER (ಅಸಿಟೋ ಬ್ಯಾಕ್ಟರ್).
೨. AZOTO BACTER (ಅಜಿಟೋ ಬ್ಯಾಕ್ಟರ್).

೩. AZOSPIRILLUM (ಅಜೊಸ್ಪೈರಿಲಮ್).

೪. BIEGERINKIA (ಬೈಜೆರಿಂಕಿಯಾ).

ಈ ನಾಲ್ಕು ಜೀವಾಣುಗಳು ನಮ್ಮ ದೇಸೀ ಆಕಳ ಸಗಣಿ/ಗಂಜಳಗಳಲ್ಲಿ ಯಥೇಚ್ಛವಾಗಿರುತ್ತವೆ.

ಈ ಕಾರಣಕ್ಕೆ ಯಾವುದೇ ಬೆಳೆ ಬೆಳೆಯಲು ನೈಸರ್ಗಿಕ ಸಾರಜನಕಕ್ಕೆ ಬದಲಿಯಾಗಿ ಕೃತಕ ಯೂರಿಯ ಹಾಕುವ ಅಗತ್ಯವಿಲ್ಲ.

ರಂಜಕ (ಸೂಪರ್ ಫಾಸ್ಫೇಟ್)

ಬೆಳೆಗಳಿಗೆ ಮುಖ್ಯವಾಗಿ ಬೇಕಾದ ರಂಜಕ ಕೂಡ ನಮ್ಮ ಭೂಮಿಯಲ್ಲಿದೆ. ಆದರೆ ಅದು ಬೆಳೆಗಳಿಗೆ ನೇರವಾಗಿ ಸಿಗುವುದಿಲ್ಲ. ಯಾಕೆಂದರೆ ಅದು ದ್ವಿದಳ, ತ್ರಿದಳ ರೂಪದಲ್ಲಿರುತ್ತದೆ.

ಅವುಗಳ ಸ್ವರೂಪ:

1. ಏಕದಳ: o-One GRAMULE-MONO VALENT ORTO PHOSPHATE
2. ದ್ವಿದಳ: oo - DIVALENT ORTHO PHOSPHATE
3. ತ್ರಿದಳ:– $o^{o}o$ –TRI VALENT ORTHO PHOSPHATE

ದ್ವಿದಳ, ತ್ರಿದಳದಲ್ಲಿರುವ ರಂಜಕದ ಕಣಗಳು ಏಕ ಕಣವಾದಾಗ ಮಾತ್ರ ಬೆಳೆಗೆ ಲಭ್ಯವಾಗುತ್ತದೆ. ನೈಸರ್ಗಿಕ ಪರಿಸರದಲ್ಲಿ ದ್ವಿದಳ, ತ್ರಿದಳ ರೂಪದಲ್ಲಿರುವ ರಂಜಕದ ಕಣಗಳನ್ನು ಏಕಕಣವಾಗಿಸುವ ಬ್ಯಾಕ್ಟೀರಿಯಗಳಿರುತ್ತವೆ. ರಸಾಯನಿಕ ಕೃಷಿ ಮಾಡುವೆಡೆ ಇವು ಹತ್ಯೆಗೀಡಾಗಿರುತ್ತವೆ. ರಂಜಕದ ಕಣಗಳನ್ನು ವಿಭಜಿಸಿ ಸಸ್ಯಗಳಿಗೆ ಸರಬರಾಜು ಮಾಡುವ ಶಕ್ತಿ ಸಗಣಿಯಲ್ಲಿರುವ ಪಿಎಸ್‌ಬಿ (ಪಾಸ್ಫರಸ್ ಸಾಲ್ಯುಬಲೈಜಿಂಗ್ ಬ್ಯಾಕ್ಟೀರಿಯಾ) ಜೀವಾಣುಗಳಿಗಿದೆ. ಈ ಜೀವಾಣುಗಳು ದೇಸೀ ಜಾನುವಾರುಗಳ ಕರುಳಲ್ಲಿ ಜನಿಸುತ್ತವೆ. ಸಗಣಿ ಮೂಲಕ ಹೊರಬರುತ್ತವೆ. ಒಂದು ಗ್ರಾಂ ಸಗಣಿಯಲ್ಲಿ ೩೦೦ರಿಂದ ೫೦೦ಕೋಟಿ ಜೀವಾಣುಗಳಿರುತ್ತವೆ ಮತ್ತು ಪ್ರತಿ ೨೦ ಸೆಕೆಂಡುಗಳಿಗೊಮ್ಮೆ ದ್ವಿಗುಣಗೊಳ್ಳುತ್ತವೆ. ಬೆಳೆ ಬೆಳೆವ ಭೂಮಿಗೆ ಸಗಣಿ ಬಿದ್ದಕೂಡಲೇ ಅದರ ಆತಂರಿಕ ಸ್ವರೂಪವೆ ಬದಲಾಗುತ್ತದೆ. ಜೀವಾಣುಗಳಿಲ್ಲದೆ ನಿರ್ಜೀವವಾಗಿದ್ದ ಮಣ್ಣು ಕೂಡ ಮತ್ತೆ ಜೀವ ಪಡೆಯುತ್ತದೆ.

ಆಹಾರ ತಯಾರಿಕೆಗೆ ರಂಜಕದ ಅಗತ್ಯ ಬಿದ್ದಾಗಲೆಲ್ಲ ಗಿಡದ ಎಲೆಗಳು ಬೇರಿಗೆ ಸಂದೇಶ ಕಳುಹಿಸುತ್ತವೆ ರಂಜಕ ಪೂರೈಸುವಂತೆ! ಇಲ್ಲಿ ಗಿಡದ ರೂಟ್ ಕ್ಯಾಪ್‌ಗಳು ರಿಮೋಟ್ ಕಂಟ್ರೋಲ್ ಥರ ವ್ಯವಹರಿಸುತ್ತವೆ. ಎಲೆಗಳಿಂದ ಸೂಚನೆ

ಬರುತ್ತಿದ್ದಂತೆ ರೂಟ್‌ಕ್ಯಾಪ್‌ಗಳು ಒಂದು ಬಗೆಯ ವಿಶಿಷ್ಟ ಗಂಧವನ್ನು ಹೊರ ಸೂಸುತ್ತವೆ. ಈ ವಿಶೇಷ ಗಂಧದ ಸೂಚನೆ ಅರಿಯುವ ಪಿ.ಎಸ್.ಬ್ಯಾಕ್ಟೀರಿಯಾಗಳು ಕೂಡಲೇ ರಂಜಕದ ಕಣಗಳನ್ನು ಸುತ್ತುವರಿದು ೧೬ ಬಗೆಯ ರಾಸಾಯನಿಕ ದ್ರವ್ಯಗಳನ್ನು ಸ್ರವಿಸುವ ಮೂಲಕ ದ್ವಿದಳ, ತ್ರಿದಳ ರೂಪಗಳಲ್ಲಿರುವ ರಂಜಕದ ಕಣಗಳನ್ನು ವಿಭಜಿಸಿ ಬೇರಿನೆಡೆಗೆ ರವಾನಿಸುತ್ತವೆ. ಪಿ.ಎಸ್.ಬ್ಯಾಕ್ಟೀರಿಯಗಳಿದ್ದೆಡೆ ಅಥವಾ ಕೊಟ್ಟಿಗೆ ಗೊಬ್ಬರವಿದ್ದೆಡೆ ಯಾವ ಗಿಡ, ಮರಗಳಿಗೂ ರಂಜಕದ ಕೊರತೆ ಇರುವುದಿಲ್ಲ.

ಹೀಗಿರುವಾಗ ಕೃತಕ ರಂಜಕದ ಅಗತ್ಯವಿರುವುದಿಲ್ಲ.

ಪೊಟ್ಯಾಷ್:

ಪೊಟ್ಯಾಷ್ ಕೂಡ ಭೂಮಿಯಲ್ಲಿ ಹೇರಳವಾಗಿದೆ. ಆದರೆ ಅದು ಸಿಲಿಕೇಟಾ ಅನ್ನುವ ಲಕ್ಷಣಗಳಿಂದ ಆವರಿಸಿಕೊಂಡಿರುತ್ತದೆ. ನೈಸರ್ಗಿಕ ಪರಿಸರದಲ್ಲಿ ಬ್ಯಾಸಿಲೆಸ್ ಸಿಲಿಕೆಸಸ್ ಎಂಬ ಜೀವಾಣು ಪೊಟ್ಯಾಶ್‌ನಲ್ಲಿರುವ ಸಿಲಿಕೇಟಾ ಸಂಯುಕ್ತಗಳನ್ನು ವಿಭಜಿಸಿ ಬೆಳೆಗೆ ಸರಬರಾಜು ಮಾಡುತ್ತದೆ. ರಸಾಯನಿಕ ಕೃಷಿ ಪರಿಸರದಲ್ಲಿ ಈ ಜೀವಿಗಳು ಹತ್ಯೆಗೊಳಗಾಗಿರುತ್ತವೆ. ದೇಸೀ ಕೃಷಿ ಪದ್ಧತಿಯಲ್ಲಿ ಈ ಜೀವಾಣುಗಳು ಸದಾ ಸಮೃದ್ಧ ಸ್ಥಿತಿಯಲ್ಲಿರುತ್ತವೆ. ಬ್ಯಾಸಿಲೆಸ್ ಸಿಲಿಕೆಸಸ್ ಜೀವಾಣುಗಳು ಕೂಡ ದೇಸೀ ಜಾನುವಾರುಗಳಲ್ಲಿ ಜನಿಸಿ ಸಗಣಿ ಮೂಲಕ ಹೊರಬರುತ್ತವೆ. ಹೀಗಾಗಿ ಕೊಟ್ಟಿಗೆ ಗೊಬ್ಬರವಿರುವೆಡೆ ಕೃತಕ ರಸಾಯನಿಕ ಪೊಟ್ಯಾಷ್‌ಗಳ ಅಗತ್ಯವಿರುವುದಿಲ್ಲ.

ಉಳಿದೆಲ್ಲ ಲಘು ಪೋಷಕಾಂಶಗಳನ್ನು ಕೂಡ ಸಗಣಿಯಲ್ಲಿರುವ ಥಿಯೋ ಆಕ್ಸಿಡೆಂಟ್ಸ್, ಫೆರೋಸ್ ಬ್ಯಾಕ್ಟೀರಿಯಾ, ಮೈಕೋರೈಜಾ ಫಂಗಸ್ ಅಥವಾ ಬ್ರೂಸಿ ಇತ್ಯಾದಿ ಅಸಂಖ್ಯಾತ ಜೀವಾಣುಗಳು ಬೆಳೆಗಳಿಗೆ ಒದಗಿಸುತ್ತವೆ. ವಾಸ್ತವವಾಗಿ ಸಗಣಿ ಗೊಬ್ಬರವಲ್ಲ. ಅದು ನೇರವಾಗಿ ಬೆಳೆಗಳಿಗೆ ಅನ್ನವೂ ಅಲ್ಲ. ಅದರೊಳಗಿರುವ ಜೀವಾಣುಗಳು ಎಲ್ಲ ಬಗೆಯ ಚಮತ್ಕಾರಗಳನ್ನು ನಡೆಸುತ್ತವೆ. ನಮ್ಮ ಜನ ತಮ್ಮ ಅನುಭವಗಳ ಮೂಲಕ ಸಗಣಿ ಇದ್ದರೆ ಬೆಳೆ ಚೆನ್ನಾಗಿ ಬರುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಂಡಿದ್ದರು. ಅನರಕ್ಷರಸ್ಥ ರೈತರು ಮನದಟ್ಟು ಮಾಡಿಕೊಂಡಿದ್ದ ಈ ಸತ್ಯವನ್ನು ಕೃಷಿ ವಿಜ್ಞಾನಿಗಳು ನಿರಾಕರಿಸಿದರು. "ನಿಮ್ಮ ಗೊಬ್ಬರವನ್ನೂ ಕೊಡಿ, ಆದರೆ ರಸಗೊಬ್ಬರಗಳನ್ನು ಮರೆಯಬೇಡಿ" ಎಂಬುದು ಅವರ ನಿಲುವಾಗಿತ್ತು.

ಬೆಳೆಗಳ ಬಹುಮುಖ್ಯ ಪೋಷಕಾಂಶಗಳು ೯೮.೫% ವಾತಾವರಣದ ಕೊಡುಗೆ–ಈ ವಿಷಯದಲ್ಲಿ ವಿಜ್ಞಾನಿಗಳು ಯಾವ ಆಟವನ್ನು ಆಡಲಾಗಲಿಲ್ಲ. ಆದರೆ ೧.೫% ರಷ್ಟು ಭೂಮಿಯ ಕೊಡುಗೆಗೆ ಆಟವಾಡಿದ್ದರ ಪರಿಣಾಮ ಏನಾಯ್ತು ನೋಡಿ. ದೊಡ್ಡ ದೊಡ್ಡ ರಾಸಾಯನಿಕ ಕಾರ್ಖಾನೆಗಳು, ಮಾರಾಟ ಕೇಂದ್ರಗಳು, ದೊಡ್ಡ ದೊಡ್ಡ ಕೃಷಿ ವಿಶ್ವವಿದ್ಯಾನಿಲಯಗಳು, ಅಧ್ಯಾಪಕರು, ಸಂಶೋಧಕರು,

ವಿಜ್ಞಾನಿಗಳು, ವಿದ್ಯಾರ್ಥಿಗಳು, ಸರಕಾರಿ ಇಲಾಖೆಗಳು, ಅಧಿಕಾರಿಗಳು, ರೈತ ಸಂಪರ್ಕ ಕೇಂದ್ರಗಳು; ಬ್ಯಾಂಕುಗಳು, ಸಾಲಗಳು, ಸಬ್ಸಿಡಿಗಳು, ಜಾಗತಿಕ ತಾಪಮಾನಗಳು ಕಡೆಗೆ ರೈತರ ಆತ್ಮಹತ್ಯೆಗಳು! ಇಷ್ಟು ದೊಡ್ಡ ಭಾರೀ ವ್ಯವಸ್ಥೆ ಕೇವಲ **NPK** ಬಲದ ಮೇಲೆ ನಿಂತಿವೆ. ಇಷ್ಟು ದೊಡ್ಡ ಅನಾಹುತಕ್ಕೆ ಕಾರಣವಾಗಿದೆ.

ಹಸಿರು ಕ್ರಾಂತಿಯ ಆಧುನಿಕ ಕೃಷಿ ವಿಜ್ಞಾನದ ಈ ಸಾಧನೆಯನ್ನು ಬಹು ದೊಡ್ಡ ಕಪಟ, ಮೋಸ, ವಂಚನೆ ಎಂತಲೇ ಕರೆಯಬೇಕಾಗಿದೆ. ಇವರು ಸೃಷ್ಟಿಸಿದ್ದು ವೈಜ್ಞಾನಿಕ ರಸಗೊಬ್ಬರ ಮತ್ತು ವೈಜ್ಞಾನಿಕ ವಿಷ ಮಾತ್ರ. ದ್ವಿದಳ ಧಾನ್ಯದ ವಿಷಯಕ್ಕೆ ಬಂದಾಗಲಂತೂ ಇದೊಂದು ನಾಗರಿಕ ಜಗತ್ತಿನ ಅತಿದೊಡ್ಡ ಘೋರವಾಗಿಯೆ ತೋರುತ್ತದೆ.

ಯಾವುದೇ ದ್ವಿದಳ ಧಾನ್ಯದ ಬೇರುಗಳಲ್ಲಿ ಗಂಟುಗಳಿವೆ, ಆ ಗಂಟುಗಳಲ್ಲಿ ನೈಸರ್ಗಿಕವಾಗಿ ರೈಜೋಬಿಯಂ ಜೀವಾಣುಗಳಿವೆ; ಆ ಜೀವಾಣುಗಳು ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಬೆಳೆಗಳಿಗೆ ನೀಡುತ್ತವೆ. ಇಷ್ಟು ಸತ್ಯ ಸಂಗತಿ, ಪಾರದರ್ಶಕ ಸಂಗತಿ ವಿಜ್ಞಾನಿಗಳಿಗೂ ಗೊತ್ತು, ಗೊತ್ತಿದ್ದೂ-ನೈಟ್ರೋಜನ್ ತಯಾರು ಮಾಡುವ ಕಾರ್ಖಾನೆಗಳಾದ ದ್ವಿದಳ ಧಾನ್ಯಗಳ ಬೆಳೆಗಳಿಗೂ ಮೇಲಿನಿಂದ ನೈಟ್ರೋಜನ್‌ಸುರಿಯಲೇ ಬೇಕೆಂದು ಯಾಕೆ ಶಿಫಾರಸ್ಸು ಮಾಡಿದರು? ಯಾಕೆ ತಮ್ಮೆಲ್ಲ ಕೃಷಿ ಪಠ್ಯಗಳಲ್ಲಿ, ತಮ್ಮೆಲ್ಲ ಪ್ಯಾಕೇಜ್ ಆಫ್ ಪ್ರಾಕ್ಟೀಸ್‌ಗಳಲ್ಲಿ, ತಮ್ಮ ಪ್ರಾತ್ಯಕ್ಷಿಕೆಗಳಲ್ಲಿ ನೈಟ್ರೋಜನ್ ಇರಲೇಬೇಕೆಂದು ತಪ್ಪುದಾರಿಗೆ ಎಳೆದರು. ಮತ್ತು ಆ ಮೂಲಕ ಘೋರ ವಿಪತ್ತುಗಳನ್ನು ಸೃಷ್ಟಿಸಿದರು. ಅಗತ್ಯವೇ ಇಲ್ಲದೆ ಕೃತಕ ರಸಾಯನಿಕ ನೈಟ್ರೋಜನ್ ಸುರಿದ ಪರಿಣಾಮ ಏನಾಯಿತೆಂದರೆ.

೧. ಚಾರ್ಲ್ಸ್ ಡಾರ್ವಿನ್ ವಿಕಾಸವಾದದ ಪ್ರಕಾರ ಬಳಸದ ವಸ್ತು ಅಥವಾ ಅಂಗ ಕ್ರಮೇಣ ನಶಿಸಿ ಹೋಗುತ್ತದೆ. ಈ ಪ್ರಕಾರ ದ್ವಿದಳ ಧಾನ್ಯದ ಬೆಳೆಗಳಿಗೂ ನೈಟ್ರೋಜನ್ ಸುರಿದೂ ಸುರಿದು ಬೆಳೆ ಬೆಳೆದ ಪರಿಣಾಮ-ಬೇರುಗಳ ಗಂಟಿನಲ್ಲಿದ್ದ ರೈಜೋಬಿಯಂಗಳಿಗೆ ಕೆಲಸ ಇಲ್ಲದಂತಾಯಿತು.

೨. ೬-೭ ವರ್ಷ ನಿರಂತರ ಕೆಲಸವಿಲ್ಲದಂತಾದ ಮೇಲೆ ಕ್ರಮೇಣ ರೈಜೋಬಿಯಂ ಜೀವಾಣುಗಳು ಕಾಣೆಯಾದವು.

೩. ರೈಜೋಬಿಯಂ ಕಾಣೆಯಾದ ೬-೭ ವರ್ಷಗಳ ತರುವಾಯ ಬೇರುಗಳ ಗಂಟುಗಳು ಕರಗಲು ಶುರುವಾಗಿ ಕ್ರಮೇಣ ಗಂಟುಗಳೇ ಇಲ್ಲವಾದವು.

೪. ಈ ಗಂಟುಗಳೇ ಇಲ್ಲವಾದ ಮೇಲೆ ದ್ವಿದಳ ಧಾನ್ಯದ (ಯೂರಿಯ ಹಾಕಿ ಬೆಳೆಯಲ್ಪಟ್ಟ) ಗಿಡಗಳು ತಮ್ಮ ನೈಟ್ರೋಜನ್ ಹೀರುವ, ತಾವು ಬಳಸುವ

ಮತ್ತು ಮುಂದಿನ ಬೆಳೆಗಾಗಿ ಮಣ್ಣಲ್ಲಿ ಸ್ಥಿರೀಕರಿಸುವ ಮೂಲಗುಣಗಳನ್ನೆ ಕಳೆದು ಕೊಂಡವು.

೫. ಇಂಥ ದ್ವಿದಳ ಧಾನ್ಯದ ಗಿಡಗಳಲ್ಲಿ ಬೆಳೆದ ಕಾಳುಗಳು ಮತ್ತು ಬೇಳೆಗಳು ತೀವ್ರ ಮತ್ತು ದೀರ್ಘ ಕಾಲೀನ ಉದರ ಸಂಬಂಧಿ ಕಾಯಿಲೆಗಳಿಗೆ ಮತ್ತು ಸಂದು ನೋವುಗಳಿಗೆ ಕಾರಣ ಎಂಬುದನ್ನು ಆಹಾರ ವಿಜ್ಞಾನ ಮತ್ತು ಔಷಧ ವಿಜ್ಞಾನ ಕಂಡುಕೊಂಡಿದೆ. ಹೀಗಾಗಿ ಇಂದು ಎಲ್ಲ ವಯೋ ಮಾನದವರಲ್ಲೂ ಅಸಿಡಿಟಿ ಮತ್ತು ಗ್ಯಾಸ್ಟ್ರಿಕ್ ಸಾಮಾನ್ಯ ಸಮಸ್ಯೆಗಳಾಗಿವೆ. ಹೀಗಾಗಿ ಪ್ರಕೃತಿ ಚಿಕಿತ್ಸಾ ವೈದ್ಯರು ಬೇಳೆ ಕಾಳುಗಳನ್ನು ತಿನ್ನ ಬೇಡಿ ಎಂಬ ಸಲಹೆ ನೀಡುತ್ತಾರೆ. ಇದರ ಆಳದಲ್ಲಿ ಹಸಿರುಕ್ರಾಂತಿ ಮತ್ತು ಕೃಷಿ ವಿಜ್ಞಾನಿಗಳ ಯೂರಿಯ ಕಣ್ಣಿಗೆ ಕಾಣದಂತಾಗಿದೆ.

೬. ಈ ಎಲ್ಲಕ್ಕೂ ಮೀರಿದ ಘನ ಘೋರ ವಿಪತ್ತನ್ನು ಕೃತಕ ಯೂರಿಯಾ ನಿರ್ಮಿಸಿದೆ. ಕೃಷಿ ಭೂಮಿಯು ಕಾಂಕ್ರಿಟ್ ನೆಲದಂತೆ ಪರಿವರ್ತನೆ ಆಗುವುದು. ಕೃತಕ ರಸಾಯನಿಕ ಯೂರಿಯಾವು ಮಣ್ಣಿನ ಕಣ–ಕಣಗಳ ನಡುವೆ ಬಂಧನ ಏರ್ಪಡಿಸುತ್ತದೆ. ಹೀಗಾಗಿ ಮಣ್ಣಿನಲ್ಲಿ ಗಾಳಿ ಆಡುವುದಿಲ್ಲ. ಈ ಪರಿಣಾಮ ಗಿಡಗಳು ತಮ್ಮ ಬೇರುಗಳ ಮೂಲಕ ನೀರಾವಿ ಪಡೆಯುವುದು ಕಷ್ಟವಾಗಿದೆ. ಮೂಲ ಕಾರಣ ಇದೇ ಆಗುವುದರಿಂದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಬೆಳವಣಿಗೆ ಕುಂಠಿತಗೊಳ್ಳುವುದರಿಂದ ಗಿಡ ಅಶಕ್ತವಾಗಿ ರೋಗಗಳಿಗೆ ಗುರಿಯಾಗುತ್ತವೆ. ಇದರ ಒಟ್ಟು ಪರಿಣಾಮದಿಂದಾಗಿ ಇಳುವರಿ ಕುಸಿಯುತ್ತದೆ. (ರಸಾಯನಿಕ ಕೃಷಿಯಲ್ಲಿ ಸಾರ್ವತ್ರಿಕ ಇಳುವರಿ ಕಡಿತವನ್ನೂ ಈಗಾಗಲೆ ನೋಡುತ್ತಿದ್ದೇವೆ)

೭. ಮಣ್ಣಿನ ಕಣ ಕಣಗಳ ನಡುವೆ ಬಂಧನ ಏರ್ಪಡುವುದರಿಂದ ಜೀವಾಣುಗಳು ಬದುಕಿ ಉಳಿಯಲು ಆಸ್ಪದವಾಗದು. ಜೊತೆಗೆ ಮರದ ನೇಗಿಲಿನಲ್ಲಿ ಉಳಲು ಆಗದು. ಕಬ್ಬಿಣದ ನೇಗಿಲಿಗೂ ಇದು ಕಠಿಣ ತರವಾಗಿದೆ. ಆಧುನಿಕ ರಸಾಯನಿಕ ಕೃಷಿಯ ರೈತರು ಈ ಸಮಸ್ಯೆಗಳನ್ನು ಇನ್ನೂ ಮನದಟ್ಟು ಮಾಡಿಕೊಂಡಂತೆ ಕಾಣುವುದಿಲ್ಲ.

೮. ಮಣ್ಣಿನ ಕಣ ಕಣಗಳ ನಡುವೆ ಬಂಧನ ಏರ್ಪಡುವುದರಿಂದ ಬಿದ್ದ ಮಳೆ ನೀರು ನಿಲ್ಲುವುದಿಲ್ಲ. ಹರಿದುಕೊಂಡು ಇಳಿಜಾರುಗಳಲ್ಲಿ ಜಾಗ ಮಾಡಿಕೊಂಡು ಓಡುತ್ತದೆ.

೯. ಯಾವಾಗ ಬಿದ್ದ ಮಳೆನೀರು ಇಂಗುವುದಿಲ್ಲವೊ ಆವಾಗ ಅಂತರ್‌ಜಲ ಮರುಪೂರಣ ಆಗುವುದಿಲ್ಲ.

೧೦. ಯಾವಾಗ ಅಂತರ್‌ಜಲ ಮರುಪೂರಣ ಆಗುವುದಿಲ್ಲವೋ ಆವಾಗ ತೋಡಿದ ಬಾವಿಗಳಿಗೆ ನೀರು ಬರುವುದಿಲ್ಲ. ಕೊಳವೆ ಬಾವಿಗಳಲ್ಲೂ ನೀರು ಸಿಗುವುದಿಲ್ಲ. ೫೦೦-೬೦೦-೭೦೦ ಅಡಿ ಆಳಕ್ಕೆ ಕೊಳವೆ ಬಾವಿ ತೋಡಿ ನೀರು ಬಂದರೂ ಕ್ರಮೇಣ ನೀರು ಕಡಿಮೆಯಾಗುತ್ತಾ, ಕಡೆಗೆ ಕಾಣೆಯಾಗುತ್ತದೆ.

೧೧. ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಅಂದರೆ: ಜಗತ್ತು ಸೃಷ್ಟಿಯಾದಂದಿನಿಂದ ಇಂದಿನವರೆಗೆ ನೀರಿನ ಪ್ರಮಾಣ ಒಂದೆ. ನೀರಿನ ಪ್ರಮಾಣದಲ್ಲಿ ಅಂದಿನಿಂದ ಇಂದಿನವರೆಗೂ ಯಾವ ವ್ಯತ್ಯಾಸವೂ ಆಗಿಲ್ಲ. ಮತ್ತು ನೀರಿಗೆ ಭೂಮಿಯ ಆಳದಲ್ಲೂ ನಿಲ್ಲುವ, ಮಹಾನ್ ಹಿಮಾಲಯವೂ, ಮಂಜುಗಡ್ಡೆಯೂ ಆಗುವ ಸಮುದ್ರದಲ್ಲೂ ಇರುವ ಮತ್ತು ಅಂತರಿಕ್ಷದಲ್ಲೂ ತೇಲಾಡುವ ನೆಲೆಗಳಿವೆ. 'ಇಲ್ಲಿರಬೇಕು ಅಥವಾ ಅಲ್ಲಿರಬೇಕು' ನೀರಿಗಿರುವ ದಾರಿ ಈ ಎರಡೇ ನೀರಿನ ಒಂದೇ ಒಂದು ಕಣವನ್ನು ಸೃಷ್ಟಿಸುವ ಶಕ್ತಿಯನ್ನು ಮತ್ತು ನೀರಿನ ಒಂದೇ ಒಂದು ಕಣವನ್ನು ನಾಪತ್ತೆಮಾಡುವ ಅಥವಾ ನಾಶ ಮಾಡುವ ವಿದ್ಯೆಯನ್ನು ಸೃಷ್ಟಿ ಈ ವರೆಗೆ ಯಾರ ಕೈಯಲ್ಲೂ ಕೊಟ್ಟಿಲ್ಲ.

೧೨. ಮಳೆಯ ಪ್ರಮಾಣ ಸ್ಥಳದಿಂದ ಸ್ಥಳಕ್ಕೆ, ಋತುವಿನಿಂದ ಋತುವಿಗೆ ವ್ಯತ್ಯಾಸವಾಗಬಹುದೇ ಹೊರತು ಶಾಶ್ವತವಾಗಿ ನೀರೆ ನಾಪತ್ತೆಯಾಗುವ ಪರಿಸ್ಥಿತಿ ಎಂದೂ ಬಂದಿಲ್ಲ.

೧೩. ಅತಿಯಾದ ಕೊಳವೆ ಬಾವಿಗಳಿಂದ ಮತ್ತು ಅತಿಯಾದ ನೀರಿನ ಬಳಕೆಯಿಂದ ಮತ್ತು ಅತಿಯಾದ ನೀರಿನ ಶೋಷಣೆಯಿಂದ ಅಂತರ್‌ಜಲ ಬರಿದಾಗಿದೆ. ಇದರಿಂದ ಜಲಕ್ಷಾಮ ತಲೆದೋರಿದೆ ಎಂಬುದು ಅಪ್ಪಟ ಸುಳ್ಳು, ಮತ್ತು ತಪ್ಪು ಕಲ್ಪನೆ. ಹೆಚ್ಚು-ಹೆಚ್ಚು ಬಾವಿಗಳನ್ನು, ಕೊಳವೆ ಬಾವಿಗಳನ್ನು ತೋಡುವುದರಿಂದಾಗಲಿ, ಹೆಚ್ಚು ಹೆಚ್ಚು ನೀರು ಬಳಸುವುದರಿಂದಾಗಲಿ ಇಲ್ಲಿ ನೀರಿನ ಕೊರತೆಗೆ ಕಾರಣ ಎಂಬುದು ಕೂಡ ತಪ್ಪು ತಿಳುವಳಿಕೆ.

೧೪. ನೀರು ಸಂಗ್ರಹಣೆಗಾಗಿ ದುಬಾರಿ ವೆಚ್ಚದ ಯೋಜನೆಗಳನ್ನು ಮಾಡುತ್ತ ವ್ಯರ್ಥ ಸರ್ಕಸ್‌ಗಳನ್ನು ಮಾಡಲಾಗುತ್ತಿದೆ. ಇಂಗು ಗುಂಡಿ ತೋಡಿದರೆ ನೀರು ಇಂಗುತ್ತದೆಂದೂ, ಇಂಗು ಗುಂಡಿ ತೋಡದಿದ್ದರೆ ನೀರು ಇಂಗುವುದಿಲ್ಲವೆಂದು ತಿಳಿಯುವುದು ಮೂರ್ಖತನ. ಯಾಕೆಂದರೆ ಅಪ್ರವೇಶ ಜಲಶಿಲೆಗಳು ಇರುವ ಕಡೆ ಎಷ್ಟೇ ಇಂಗು ಗುಂಡಿಗಳನ್ನು ಮಾಡಿದರೂ ಅಲ್ಲಿ ನೀರು ಇಂಗುವ ಸಾಧ್ಯತೆಗಳೇ ಇಲ್ಲ. (ಅಲ್ಲಿ ಕೇವಲ ಆವಿ ಆಗಬೇಕು ಅಷ್ಟೇ)

ಮತ್ತೊಂದೆಡೆ ಪ್ರವೇಶ ಜಲಶಿಲೆ ಇರುವೆಡೆ ಇಂಗು ಗುಂಡಿ ತೋಡುವ ಅಗತ್ಯವಿರುವುದಿಲ್ಲ. ಏಕೆಂದರೆ ಅಲ್ಲಿ ಇಂಗುಗುಂಡಿ ತೋಡದಿದ್ದರೂ ಸಹಜವಾಗಿ ತಂಗುವ ಮಾರ್ಗಗಳಲ್ಲಿ ತಂಗುತ್ತದೆ.

೧೫. ಸಮಸ್ಯೆಗೆ ಮೂಲವಾಗಿರುವ ಕಾರಣವನ್ನು ಕಾಣದೆ ಇಂಗುಗುಂಡಿ, ಕೃಷಿಹೊಂಡ, ಬೋರ್ವೆಲ್ ಮರುಪೂರಣ, ಮಳೆಕೊಯ್ಲು ಈ ಬಗೆಯ ತಜ್ಞರು ಹುಟ್ಟಿಕೊಂಡಿದ್ದಾರೆಯೇ ಹೊರತು ನಿಸರ್ಗ ಅರಿತು ಸಮಸ್ಯೆ ಅರಿಯುವವರು ಕಾಣೆಯಾಗಿದ್ದಾರೆ.

೧೬. ನೀರು ತನ್ನ ಅಂತರ್ ನೆಲೆಗಳಲ್ಲಿ ನಿವಾಸಿಯಾಗದೆ ಅನಿವಾಸಿಯಾಗಿರುವುದಕ್ಕೆ ಏಕೈಕ ಕಾರಣ ಯೂರಿಯಾ. ಯೂರಿಯಾ ಬಳಸದ ಪ್ರದೇಶಗಳಲ್ಲಿ ಸುಭಿಕ್ಷವಾದ ಜಲ ತಂಗುದಾಣಗಳಿವೆ. ಅಲ್ಲಿ ನೀರಿನ ಸಮಸ್ಯೆಗಳಿಲ್ಲದ ಕಾರಣಕ್ಕೆ ಮಳೆಕೊಯ್ಲು ತಜ್ಞರ, ಬೋರ್ವೆಲ್ ಮರು ಪೂರಣ ತಜ್ಞರ ಗಮನ ಅತ್ತ ಹರಿದಿಲ್ಲ. ಯೂರಿಯ ಬಳಕೆಯಿಂದಾಗಿ ಮಣ್ಣಿನ ಕಣ ಕಣಗಳಲ್ಲೂ ಬಂಧನ ಏರ್ಪಟ್ಟು-ಬೇಸಾಯ ಭೂಮಿಗಳ ಕಣ್ಣುಗಳು ಮುಚ್ಚಿವೆ. ಯೂರಿಯ ಬಳಸದಿದ್ದರೆ ಕೇವಲ ಆರು ತಿಂಗಳಲ್ಲಿ ಈ ಸಮಸ್ಯೆ ನಿವಾರಣೆ ಆಗುತ್ತದೆ. ಯೂರಿಯ ಇಲ್ಲದೆ ಬೆಳೆಯದಂತಾಗಿರುವ ದ್ವಿದಳ ಧಾನ್ಯಗಳನ್ನು ಭಿತ್ತನೆ ಮಾಡದೆ; ಯೂರಿಯ ರಹಿತ ಜಮೀನುಗಳಲ್ಲಿ ಬೆಳೆದ ದ್ವಿದಳ ಧಾನ್ಯಗಳ ಭಿತ್ತನೆಯನ್ನು ಬಳಸಿದರೆ-ಆ ಫಸಲಿಗೆ ಯೂರಿಯಾದ ಅಗತ್ಯ ಬೀಳುವುದಿಲ್ಲ.

ಹೀಗಾಗಿ ಸದ್ಯದ ಬೇಸಾಯ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಎಲ್ಲ ಸಮಸ್ಯೆಗಳಿಗೆ ಆಧುನಿಕ ಕೃಷಿಯ ರಸಗೊಬ್ಬರಗಳು, ಕೀಟನಾಶಕಗಳು, ಕಳೆ ನಾಶಕಗಳು ಕಾರಣವಾಗಿವೆ. ಮಾನವನನ್ನು ವಿನಾಶದೆಡೆಗೆ ನಡೆಸುತ್ತಿರುವ ಈ ಬಗೆಯ ಕೃಷಿ ವಿಜ್ಞಾನಿ ಪ್ರಣೀತ ಕೃಷಿಗೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ ಎಂಬುದನ್ನು ಮೇಲ್ಕಾಣಿಸಿದ ವಾಸ್ತವ ಸಂಗತಿಗಳು ಮನದಟ್ಟು ಮಾಡುತ್ತವೆ. ಹೀಗಾಗಿ ರಸಾಯನಿಕ ಕೃಷಿ ಯಾವ ಕಾರಣಕ್ಕೂ ಮುಖ್ಯವಾಹಿನಿಯ ಕೃಷಿಯಾಗುವ ಯೋಗ್ಯತೆ ಸಂಪಾದಿಸಿಲ್ಲ. ಪಾರಂಪರಿಕ ಕೃಷಿಯಿಂದ ರಾಸಯನಿಕ ಕೃಷಿಯ ಪ್ರಭಾವಕ್ಕೆ ಒಳಗಾಗಿದ್ದ ರೈತರುಗಳಿಗೆಲ್ಲ ಈ ಗೋಳುಗಳು ಅರ್ಥವಾಗಿವೆ.

೪.೨. ಉದ್ದೇಶ ಪೂರ್ವಕ ತಪ್ಪು ತಿಳುವಳಿಕೆ:

ನಮ್ಮ ದೇಶದ ಕೃಷಿ ವಿಜ್ಞಾನಿಗಳು, ಅಭಿವೃದ್ಧಿ ಅರ್ಥಶಾಸ್ತ್ರಜ್ಞರು, ರಾಜಕಾರಣಿಗಳು, ಆಡಳಿತಗಾರರು, ಅಂಕಿ ಅಂಶ ತಜ್ಞರು, ಶಿಕ್ಷಣ ತಜ್ಞರು,

ಪರಿಸರ ತಜ್ಞರಲ್ಲಿ ಒಂದು ಸಾಮೂಹಿಕ ನಂಬಿಕೆ ಇದೆ. ಅದು ಏನೆಂದರೆ "ಬೆಳೆಯುತ್ತಿರುವ ಜನಸಂಖ್ಯೆಗೆ (ಜನ ಸಂಖ್ಯಾ ಸ್ಫೋಟ ಎಂಬ ಸಿದ್ಧಾಂತವೂ ಇದೆ) ಆಹಾರ ಉತ್ಪತ್ತಿ ಮಾಡುವ ಸಾಮರ್ಥ್ಯ ದೇಸೀ ಕೃಷಿ ಜ್ಞಾನ ತಂತ್ರಕ್ಕೆ ಇಲ್ಲ. ಅಧಿಕ ಇಳುವರಿಯ ಹೈಬ್ರೀಡ್ ಬೀಜಗಳು, ಹೈನುಗಾರಿಕಾ ತಳಿಗಳು, ಬೃಹತ್ ನೀರಾವರಿ ಯೋಜನೆಗಳು, ಸಮಗ್ರ ಪೀಡೆ ನಾಶಕಗಳು ಕಳೆ ನಾಶಕಗಳು ರಸಾಯನಿಕ ಗೊಬ್ಬರಗಳು ಬರದೇ ಹೋಗಿದ್ದರೆ–ಜನ ಹೊಟ್ಟೆಗಿಲ್ಲದೆ ಸಾಯುತ್ತಿದ್ದರು ಮತ್ತು ನಾವು ಸದಾಕಾಲ ಅಮೇರಿಕಾದವರ ಮುಂದೆ ಭಿಕ್ಷೆ ಬೇಡಬೇಕಾಗುತ್ತಿತ್ತು. ಅವಮಾನ ತಾಳಲಾರದ ಇಂದಿರಾ ಗಾಂಧಿಯವರು ಹಸಿರು ಕ್ರಾಂತಿಗೆ ಚಾಲನೆ ನೀಡಿ ದೇಶವನ್ನು ಬಡತನದಿಂದ ಹಸಿವಿನಿಂದ ಪಾರು ಮಾಡಿದರು" ಎಂಬುದು.

ಪ್ರಕೃತಿಗೆ ವಿರುದ್ಧವಾದ, ಸೃಷ್ಟಿನಿಯಮಕ್ಕೆ ವಿರುದ್ಧವಾದ ತಿಳುವಳಿಕೆ ಇದು. ಮಗು ಹುಟ್ಟುವ ಮುಂಚೆಯೇ ಮಗುವಿಗೆ ಬೇಕಾದ ಆಹಾರವನ್ನು ನಿಸರ್ಗವೇ ಸೃಷ್ಟಿಸಿರುತ್ತದೆ. ನಿಸರ್ಗಕ್ಕೆ ವಿರುದ್ಧವಾಗಿ ಯಾರಿಂದಲೂ ಜನ ಸಂಖ್ಯೆಯ ಹೆಚ್ಚಳ ಮಾಡಲು ಸಾಧ್ಯವಿಲ್ಲ. ಮತ್ತು ನಿಸರ್ಗವು ಸ್ವತಃ ಕಂಟ್ರೋಲ್ ಮಾಡಲು ನಿಂತರೆ ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ನಿಸರ್ಗವೇ ನೀಡಿರುವ ಜ್ಞಾನ ತಿಳುವಳಿಕೆಗಳನ್ನು ನಿಸರ್ಗಕ್ಕೆ ಪೂರಕವಾಗಿರಲು ಬಳಸಬೇಕೇ ಹೊರತು–ನಿಸರ್ಗ ವಿರೋಧಿಯಾಗಲು ಅಲ್ಲ. ಹಾಗೆ ನಿಸರ್ಗ ವಿರೋಧಿಯಾದ ಕಾರಣಕ್ಕೆ ರಸಾಯನಿಕ ಕೃಷಿ ವಿಕಾರಗಳನ್ನೇ ಬೆಳೆದಿದೆ.

ಹೈಬ್ರಿಡೈಜೇಶನ್ ಎಂಬುದು ನಿಸರ್ಗದಲ್ಲೇ ಇದೆ. ಅದು ಪ್ರತಿ ಕ್ಷಣ ಕ್ಷಣವೂ ಹೊಸದನ್ನು ಸೃಷ್ಟಿಸುತ್ತದೆ ಮತ್ತು ತನಗೆ ಬೇಡವಾದ ಎಲ್ಲವನ್ನು ತನ್ನಲ್ಲೆ ಲೀನಗೊಳಿಸಿಕೊಳ್ಳುತ್ತದೆ.

ನಿಸರ್ಗದ ನಿಜವನ್ನೇ ಅರಿಯದವರು, ಕೃಷಿಯ ಗಂಧ–ಗಾಳಿಯ ಸ್ಪರ್ಶವೇ ಇಲ್ಲದವರು ಕಳೆದ ೪೦–೫೦ ವರ್ಷಗಳಿಂದ ಸುಳ್ಳುಗಳನ್ನೇ ಹೇಳುತ್ತ ಸುಳ್ಳುಗಳಲ್ಲೇ ಜೀವಿಸಿದರು. ಈಗಲೂ ಇಷ್ಟೆಲ್ಲ ಅನಾಹುತಗಳ ನಡುವೆಯೂ ಅವರು ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ 'ಅದೂ ಇರಲಿ (ದೇಸೀ ಕೃಷಿ) ಇದೂ ಇರಲಿ (ರಸಾಯನಿಕ ಕೃಷಿ)' ಎನ್ನುತ್ತಿದ್ದಾರೆ.

ಭೂಮಿಯಲ್ಲೆ ಸತ್ವ ಪೋಷಣೆಗಾಗಿ ಬೇಕಾದ ಎಲ್ಲವೂ ಇರುವಾಗ ಯಾಕೆ ಬೇಕು ವಿಷ?.

"ದೀಪವೂ ನಿನ್ನದೆ ಗಾಳಿಯೂ ನಿನ್ನದೆ" [೩]

೪.೩. ಕೃಷಿ ಪ್ರಯೋಗ ಪರಿವಾರದವರ ಕೃಷಿ:

ಆಧುನಿಕ ಅಕ್ಷರ ಜ್ಞಾನ ಪಡೆದವರು–ನಮ್ಮ ಸಾಂಪ್ರದಾಯಿಕ ದೇಸಿ ಕೃಷಿ ಜ್ಞಾನವನ್ನು ಯಾವ ಕಾರಣಕ್ಕೆ ಮೈಲಿಗೆಯಾಗಿ ಕಂಡರೋ ಗೊತ್ತಿಲ್ಲ. ಪ್ರಾಚೀನ ಕೃಷಿ ವಿಧಾನಗಳು, ವೃಕ್ಷಾಯುರ್ವೇದದ ಕೃಷಿ ವಿಧಾನಗಳು, ಮನು, ಕೌಟಿಲ್ಯರ ಕಾಲದ ವಿಧಾನಗಳು, ಪರಾಸರ ಮುನಿಯ ಕೃಷಿ ವಿಧಾನಗಳ... ಹಂತಗಳನ್ನೆಲ್ಲ ದಾಟಿ; ತಮಗೆ ಬೇಡದ ಎಲ್ಲವನ್ನು ಆಯಾಯ ಕಾಲದಲ್ಲೇ ಬಿಟ್ಟು ಬೇಕಾದುದನ್ನೆಲ್ಲ ಘನೀಕರಿಸಿಕೊಳ್ಳುತ್ತ ಸಾರರೂಪದಲ್ಲಿ ನಿಂತ ಕೃಷಿ ಸಂಸ್ಕೃತಿ ನಮ್ಮದು. ಹೀಗಿರುವಾಗ ಸಾವಿರಾರು ವರ್ಷ ಹಿಂದೆ ಚಲಿಸಿ; ಆ ಕಾಲದ ಹಂದಿಮಾಂಸ, ದನದಮಾಂಸ, ಕುದುರೆಮಾಂಸದ ನೀರುಗಳನ್ನು ತೊಳೆದು ಮಾಡುವ ಕೃಷಿಗೆ ಮರಳಿ, ಯಾಕೆ ಕೈ ಸುಟ್ಟು ಕೊಳ್ಳುತ್ತಾರೋ ತಿಳಿಯದು. ಅಲ್ಲಲ್ಲಿ ಈ ಬಗೆಯ ಪ್ರಯೋಗ ಮಾಡುತ್ತಾ ಪತ್ರಿಕೆಗಳಲ್ಲಿ ಸುದ್ದಿ ಆಗುವವರನ್ನು ನಾವು ನೋಡಿದ್ದೇವೆ. ವ್ಯಕ್ತಿ ತನ್ನನ್ನು ಸಾಮಾಜಿಕವಾಗಿ ಗುರುತಿಸಿಕೊಳ್ಳುವ ಕಾರಣಕ್ಕಾಗಿ, ಇತರರಿಗಿಂತ ತಾನು ವಿಶಿಷ್ಟ ಎಂಬುದನ್ನು ತೋರ್ಪಡಿಸುವ ಕಾರಣಕ್ಕಾಗಿ ಮತ್ತು ಪ್ರಚಾರಕ್ಕಾಗಿ ಈ ತರದ ವಿಶೇಷಗಳನ್ನು ಮಾಡಲು ಯತ್ನಿಸುತ್ತಾನೆ ಮತ್ತು ಉಳಿದವರನ್ನು ಗೊಂದಲಕ್ಕೂ ಸಿಲುಕಿಸುತ್ತಾನೆ. ಪ್ರಾಚೀನ ಕೃಷಿ ಪದ್ಧತಿಯ ಅನುಕರಣೆಯಲ್ಲಿ ಆಗಿರುವುದೆಲ್ಲ ಇದೇ ಆಗಿದೆ. ಆ ಹೆಸರಲ್ಲಿ ಯಾವೊಂದು ವಿಶೇಷವೂ ಇಲ್ಲಿ ಸೃಷ್ಟಿಯಾಗಿರುವ ಉದಾಹರಣೆಗಳಿಲ್ಲ.

'ಕೃಷಿ' ಅನ್ನುವ ಪದವನ್ನು 'ಸೃಜನಶೀಲತೆ' ಎಂಬ ಪದಕ್ಕೂ ಸಂವಾದಿಯಾಗಿಸಿಕೊಳ್ಳಬಹುದು. ನಿಜವಾದ ಸೃಜನಶೀಲತೆ ಇರುವುದು ಕೂಡ ಕೃಷಿಯಲ್ಲೇ. ಇಲ್ಲಿ ಒಂದೇ ರೀತಿಯನ್ನು ಯಾರು ಅನುಸರಿಸಬೇಕಾಗಿಲ್ಲ. ಕಲ್ಪನೆಗಳ, ಯೋಜನೆಗಳ, ಯೋಚನೆಗಳ ದರ್ಶನಕ್ಕಾಗಿ ಪ್ರಯೋಗ ನಡೆಸುವುದು ಸೃಜನಶೀಲತೆಯ ಭಾಗವೆ. ಆದರೆ ಫಲಿತಾಂಶ ಗೊತ್ತಿದ್ದೂ ಪ್ರಯೋಗ ನಡೆಸುವ ವ್ಯವಹಾರದ ಹಿಂದೆ ಒಂದು ರಹಸ್ಯವಿರುತ್ತದೆ. ಆ ರಹಸ್ಯದ ಹೆಸರೇ "ಕೃಷಿ ಪ್ರಯೋಗ ಪರಿವಾರ".

ಭಾರತೀಯ ಕಿಸಾನ್ ಸಂಘದ ಪುರುಷೋತ್ತಮರಾಯರು ತಮ್ಮ ತೀರ್ಥಹಳ್ಳಿಯ (ಶಿವಮೊಗ್ಗ ಜಿಲ್ಲೆ) ಜಮೀನಿನಲ್ಲಿ ಕೃಷಿ ಪ್ರಯೋಗ ಪರಿವಾರದ ಕೃಷಿ ಪದ್ಧತಿ ಶುರುಮಾಡಿದರು. ೧೯೮೦ರ ದಶಕದಲ್ಲಿ ಆರಂಭವಾದಾಗ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಉಡುಪಿ, ಕುಂದಾಪುರ ಭಾಗದ ರೈತರೂ ಈ ಪ್ರಯೋಗ ಪರಿವಾರ ಸೇರಿ ಪ್ರಾಚೀನ ಪರಂಪರೆಯ ಕೃಷಿ ಅನುಸರಿಸುತ್ತ ಸುಮಾರು ೨೫ ವರ್ಷಗಳ ಕಾಲ ಸುದ್ದಿಯಲ್ಲಿದ್ದರು. ಕೃಷಿ ಭೂಮಿಯಲ್ಲಿ ಹೋಮ, ಹವನ, ಅಗ್ನಿಹೋತ್ರ ಯಾಗಗಳೆಲ್ಲ

ಜರುಗಿದವು. ಅದರ ಹಿನ್ನೆಲೆಯಲ್ಲಿದ್ದ ರಾಜಕೀಯ ಬೆಳೆಯಿತೇ ಹೊರತು; ಬೆಳೆ ಬೆಳೆವ ವಿಷಯದಲ್ಲಿ ಸಮೃದ್ಧಿ ಕಾಣಲಿಲ್ಲ. ಪುರುಷೋತ್ತಮ ರಾಯರು ದಿವಂಗತರಾದ ತರುವಾಯ ಪ್ರಯೋಗ ಪರಿವಾರದ ಪ್ರಾತ್ಯಕ್ಷಿಕೆಗಳೂ ಕಣ್ಮರೆಯಾದವು. ಇಷ್ಟಾದರೂ ಕರ್ನಾಟಕ ಸರಕಾರ ರೂಪಿಸಿರುವ ಸಾವಯವ ಕೃಷಿ ನೀತಿಯಲ್ಲಿ-ಕೃಷಿ ಪ್ರಯೋಗ ಪರಿವಾರ ಪದ್ಧತಿಗೂ ಒಂದು ಸ್ಥಾನ ಕಲ್ಪಿಸಲಾಗಿದೆ. ನಿಸರ್ಗವೇ ಕಣ್ಮರೆ ಮಾಡಿರುವ ಪದ್ಧತಿಗಳಿಗೆ ಮತ್ತೆಲ್ಲಿದೆ ಅಸ್ತಿತ್ವ?

೪.೪. ಸಹಜ ಕೃಷಿ:

ಜಾಗತಿಕ ಕೃಷಿ ಇತಿಹಾಸದಲ್ಲಿ ಜಪಾನ್ ದೇಶದ ಮಸನೊಬು ಫುಕುವೋಕಾರಿಗೆ ದೊಡ್ಡ ಹೆಸರು ಇದೆ. ಅವರನ್ನು ಸಹಜ ಕೃಷಿಯ ಹರಿಕಾರ ಎಂತಲೂ ಕರೆಯುತ್ತಾರೆ. 'ಕೃಷಿ ಋಷಿ', 'ಕೃಷಿ ದಾರ್ಶನಿಕ' ಎಂತಲೂ ಕರೆಯುತ್ತಾರೆ. ದಕ್ಷಿಣ ಜಪಾನಿನ ಶಿಕೋಕು ದ್ವೀಪದ ಒಂದು ಪುಟ್ಟ ಹಳ್ಳಿ ಅವರದು. ಅವರು ಓದಿದ್ದೂ ಆಧುನಿಕ ಕೃಷಿ ವಿಜ್ಞಾನವನ್ನೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ತಾವು ಓದಿದ ಆ ವಿಜ್ಞಾನದ ಬಗ್ಗೆ ಅವರು ಹೇಳುವುದು 'ವಿಜ್ಞಾನ ತನ್ನ ವೈಜ್ಞಾನಿಕ ಜ್ಞಾನದ ಮೂಲಕ ಅರಿತಿರುವುದು ಮೃತ ಪ್ರಕೃತಿಯನ್ನಷ್ಟೆ; ಆತ್ಮವಿಲ್ಲದ ದೇಹದಲ್ಲಿರುವ ಭೂತವನ್ನಷ್ಟೆ'[1] ಕೃಷಿ ವಿಜ್ಞಾನಿಯಾಗಿ ಯುಕೋಹಾಮಾದ ಸುಂಕದ ಕಟ್ಟೆಯಲ್ಲಿ ಅವರು ಅಧಿಕಾರಿಯಾಗಿದ್ದರು. ಯುಕೋಹಾಮಾದ ಬಳಿ ಬರುವ ಮತ್ತು ಹೊರ ಹೋಗುವ ಸಸ್ಯಗಳಲ್ಲಿರಬಹುದಾದ ರೋಗ ಪರಿಶೀಲಿಸುವ ಜವಾಬ್ಧಾರಿ ಅವರದಾಗಿತ್ತು.

ಜಪಾನ್ ದೇಶ ತನ್ನ ಸಾಂಪ್ರದಾಯಕ ಜ್ಞಾನ ತೊರೆದು ಅಮೆರಿಕಾ ದೇಶದ ಆರ್ಥಿಕ ಮತ್ತು ಕೃಷಿ ಮಾದರಿಗಳನ್ನು ಅನುಸರಿಸಲು ಹೋಗಿ ಮುಗ್ಗರಿಸಿತು. ಇಲ್ಲಿಯ ಹಾಗೆಯೇ ರಸಾಯನಿಕ ಕೃಷಿ ದುಷ್ಪರಿಣಾಮಗಳನ್ನು ಅಲ್ಲಿಯೂ ಬೆಳೆಯಿತು. ಇಂಥ ಕಾಲದಲ್ಲಿ ಎಚ್ಚೆತ್ತುಕೊಂಡು 'ಸಹಜ ಕೃಷಿ' ಯತ್ತ ಮುಖ ಮಾಡಿದವರು ಮಸನೊಬುಫುಕುವೊಕ. "ಕೃಷಿಯ ಅಂತಿಮ ಗುರಿ ಬೆಳೆ ಬೆಳೆಯುವುದಲ್ಲ. ಬದಲು ಮನುಷ್ಯನ ಬೆಳವಣಿಗೆ. ಕೃಷಿ ಅದಕ್ಕೆ ಒಂದು ಸಾಧನ, ಒಂದು ಮಾರ್ಗ" ಅಂದವರು ಫುಕುವೋಕ.

ತಮ್ಮ ಕೃಷಿಯ ಕುರಿತು ಅವರು ಹೇಳುವ ಜ್ಞಾನ ಇಂತಿದೆ.

"ಇಲ್ಲಿ ಕಾಣುವ ನನ್ನ ಹೊಲದಲ್ಲಿನ ಎಲೆಗಳನ್ನು ಸ್ವಲ್ಪ ಸರಿಸಿನೋಡಿ, ಆ ಎಲೆಯ ಮರೆಯ ತಂಪಿನಲ್ಲಿ ಅನೇಕ ಜೀವ-ಜಂತುಗಳು ಆಸರೆ ಪಡೆದಿವೆ. ಆ ಮಣ್ಣಿನಲ್ಲಿ ಕಪ್ಪೆ, ಇಲಿ, ಎರೆಹುಳು ಮುಂತಾದವು ಮನೆ ಮಾಡಿವೆ. ಇದು ಎಲ್ಲ ದೃಷ್ಟಿಯಿಂದಲೂ ಸಮತೋಲನದಲ್ಲಿರುವ ಭೂಮಿ. ಇಲ್ಲಿ ಕೀಟಗಳು ಹಾಗೂ

ಬೆಳೆಗಳು ಪಾರಸ್ಪರಿಕವಾಗಿ ಒಂದು ದೃಢವಾದ ಸಂಬಂಧವನ್ನು ಹೊಂದಿವೆ. ಈ ಪ್ರದೇಶದಲ್ಲಿ ಈ ಭೂಮಿಯ ಬೆಳೆಗಳನ್ನು ಬಿಟ್ಟು ಮಿಕ್ಕೆಲ್ಲ ಭುಮಿಯ ಬೆಳೆಗಳು ರೋಗಕ್ಕೆ ತುತ್ತಾಗುವುದು ಸರ್ವೆ ಸಾಮಾನ್ಯ.

ಆ ಪಕ್ಕದ ರೈತನ ಭೂಮಿಯನ್ನೊಮ್ಮೆ ನೋಡಿ. ಆ ಹೊಲದಲ್ಲಿನ ಎಲ್ಲ ಕಳೆಯನ್ನು ಕಳೆ ನಾಶಕ ಹಾಕಿಯೋ ಅಥವಾ ತೀವ್ರವಾದ ಕೃಷಿ ನಡೆಸಿಯೋ ನಿರ್ಮೂಲನ ಮಾಡಲಾಗಿದೆ. ಆ ಭೂಮಿಯ ಎಲ್ಲ ಜಂತುಗಳೂ ಅಲ್ಲಿಯ ವಿಷ ತಿಂದು ನಿರ್ನಾಮ ಹೊಂದಿವೆ. ರಾಸಾಯನಿಕ ಗೊಬ್ಬರಗಳ ಸೇರ್ಪಡೆಯಿಂದಾಗಿ ಆ ಭೂಮಿಯಲ್ಲಿನ ಎಲ್ಲ ಸಾವಯವ ವಸ್ತುಗಳು ಹಾಗೂ ಸೂಕ್ಷ್ಮ ಜೀವಿಗಳು ನಶಿಸಿಹೋಗಿವೆ. ಬೇಸಿಗೆಯಲ್ಲಿ ರೈತರು ಆ ಹೊಲಗಳಲ್ಲಿ ಮುಖ ಕವಚಗಳನ್ನು ಕೈ ಚೀಲಗಳನ್ನೂ ಧರಿಸಿ ಕೆಲಸದಲ್ಲಿ ತೊಡಗುತ್ತಾರೆ. ಸಾವಿರದ ಐದು ನೂರು ವರ್ಷಗಳಿಂದ ಸತತವಾಗಿ ಅನ್ನ ನೀಡುತ್ತಿದ್ದ ಆ ಭೂಮಿ ಈ ಒಂದು ತಲೆಮಾರು ಮಾಡಿದ ಅತ್ಯಾಚಾರದಿಂದಾಗಿ ಬರಡಾಗಿ ನಿಂತಿದೆ.

ನಾಲ್ಕು ತತ್ವಗಳು:

ಸಹಜ ಕೃಷಿಯ ನಾಲ್ಕು ತತ್ವಗಳಲ್ಲಿ ಮೊದಲನೆಯದು ಸಾಗುವಳಿ ಮಾಡದಿರುವುದು. ಅಂದರೆ ಉಳುಮೆ ಮಾಡದಿರುವುದು. ಉಳುಮೆ ಶತ ಶತಮಾನಗಳಿಂದಲೂ ವ್ಯವಸಾಯದ ಅತ್ಯಂತ ಪ್ರಮುಖ ಚಟುವಟಿಕೆಯಾಗಿದೆ. "ಉಳುಮೆಯಿಲ್ಲದೆ ಬೆಳೆಯಿಲ್ಲ" ಎಂಬ ತತ್ವಕ್ಕೆ ರೈತರು ಅಂಟಿಕೊಂಡಿದ್ದಾರೆ. ಆದರೆ ಈ ಸಹಜ ಕೃಷಿ ಪದ್ಧತಿಯಲ್ಲಿ ಉಳುಮೆ ಮಾಡದಿರುವುದೇ ಅದರ ಮೂಲ ತತ್ವಗಳಲ್ಲಿ ಒಂದು. ಭೂಮಿಯಲ್ಲಿ ಸ್ವಾಭಾವಿಕವಾಗಿಯೇ ಗಿಡಗಳ ಬೇರುಗಳ ಮೂಲಕ, ಸೂಕ್ಷ್ಮ ಜೀವಿಗಳ ಮೂಲಕ ಹಾಗೂ ಎರೆಹುಳುವಿನ ಮೂಲಕ ಉಳುಮೆ ನಡೆಯುತ್ತಲೇ ಇರುತ್ತದೆ.

ಎರಡನೆಯ ತತ್ವ: ಕಾಂಪೋಸ್ಟು ಗೊಬ್ಬರವನ್ನಾಗಲೀ ಅಥವಾ ರಾಸಾಯನಿಕ ಗೊಬ್ಬರವನ್ನಾಗಲೀ ಉಪಯೋಗಿಸದಿರುವುದು. ಮನುಷ್ಯರು ಪ್ರಕೃತಿಯಲ್ಲಿ ತಾನೇ ತಾನಾಗಿ ನಡೆಯುತ್ತಿರುವ ಕ್ರಿಯೆಗಳಲ್ಲಿ ತಲೆಹಾಕಿ ಅಳಿಸಲು ಸಾಧ್ಯವಾಗದಂತಹ ಕಲೆಯನ್ನುಂಟು ಮಾಡುತ್ತಾರೆ. ಅವರ ಬೇಜವಬ್ದಾರಿ ವರ್ತನೆಯಿಂದಾಗಿ ಭೂಮಿಯಲ್ಲಿನ ಪೌಷ್ಠಿಕಾಂಶ ಕ್ಷೀಣಿಸುತ್ತಾ ಹೋಗಿ ವರ್ಷದಿಂದ ವರ್ಷಕ್ಕೆ ಭೂ ತಾಯಿ ಬಂಜೆಯಾಗುತ್ತಾ ಹೋಗುತ್ತಾಳೆ. ಆದರೆ ಅವಳ ಪಾಡಿಗೆ ಅವಳನ್ನೇ ಬಿಟ್ಟರೆ ಗಿಡ ಹಾಗೂ ಪ್ರಾಣಿಗಳ ಜೀವನ ಚಕ್ರದಿಂದಾಗಿ ಆಕೆ ವರ್ಷದಿಂದ ವರ್ಷಕ್ಕೆ ಹೆಚ್ಚು ಸಮೃದ್ಧಳಾಗುತ್ತಾ ಹೋಗುತ್ತಾಳೆ.

ಮೂರನೆಯ ತತ್ವ: ಕಳೆ ತೆಗೆಯದಿರುವುದು ಹಾಗೂ ಕಳೆ ನಾಶಕಗಳನ್ನು ಉಪಯೋಗಿಸದಿರುವುದು. ಕಳೆಗಳು ಭೂಮಿಯ ಸತ್ವವನ್ನು ಅಭಿವೃದ್ಧಿ ಪಡಿಸುವಲ್ಲೂ

ಮತ್ತು ಅಲ್ಲಿಯ ಜೀವರಾಶಿಗಳ ನಡುವಿನ ಸಮತೋಲನವನ್ನು ಕಾಯುವುದರಲ್ಲೂ ದೊಡ್ಡ ಪಾತ್ರವನ್ನು ವಹಿಸುತ್ತವೆ. ಮೂಲಭೂತವಾಗಿ ಕಳೆಗಳನ್ನು ನಿಯಂತ್ರಿಸಬೇಕೆ ಹೊರತು ಕಳೆಗಳನ್ನು ನಿರ್ಮೂಲನೆ ಮಾಡಿಬಿಡಬೇಕು ಎಂಬ ತಪ್ಪು ಯೋಜನೆ ಇರಬಾರದು. ಭೂಮಿಯನ್ನು ಹುಲ್ಲಿನಿಂದ ಮುಚ್ಚುವುದರಿಂದ, ತಾತ್ಕಾಲಿಕವಾಗಿ ಹೊಲಗಳಲ್ಲಿ ನೀರು ಕಟ್ಟುವುದರಿಂದ ಕಳೆಗಳನ್ನು ನಿಯಂತ್ರಿಸಬಹುದು.

ನಾಲ್ಕನೇಯ ತತ್ವ: ರಾಸಾಯನಿಕ ವಸ್ತುಗಳ ಮೇಲಿನ ಅವಲಂಬನೆಯಿಂದ ದೂರ ಉಳಿಯುವುದು. ಅಸಹಜ ವ್ಯವಸಾಯ ಪದ್ಧತಿ ಹಾಗೂ ಭೂಮಿಯ ಸತ್ವ ಅಭಿವೃದ್ಧಿ ಎಂಬುದು ಎಂದು ಪ್ರಾರಂಭವಾಯತೋ ಅಂದೇ ಅಶಕ್ತ ಗಿಡಗಳು ಬೆಳೆಯಲು ಪ್ರಾರಂಭಿಸಿದವು. ಇದರಿಂದಾಗಿ ಸಸ್ಯರೋಗ ಹಾಗೂ ಕೀಟ ಅಸಮತೋಲನಗಳು ವ್ಯವಸಾಯದಲ್ಲಿ ಬೃಹತ್ ಸಮಸ್ಯೆಗಳಾದವು. ಪ್ರಕೃತಿ ಸ್ವತಃ ಪೂರ್ಣ ಸಮತೋಲನದಲ್ಲಿದೆ. ಹೀಗೆಂದ ಮಾತ್ರಕ್ಕೆ ಹಾನಿಕಾರಕ ಕ್ರಿಮಿಗಳು ಮತ್ತು ರೋಗಗಳು ಇಲ್ಲವೆಂದಲ್ಲ. ಕೀಟಗಳನ್ನು ಹಾಗೂ ರೋಗಗಳನ್ನು ದೂರವಿಡಲು ಮಾಡಬೇಕಾದ ಬುದ್ಧಿವಂತಿಕೆಯ ಕೆಲಸವೆಂದರೆ ಆರೋಗ್ಯಕರವಾದ ಪರಿಸರದಲ್ಲಿ ಗಟ್ಟಿಯಾದ ಜಾತಿಯ ಬೆಳೆ ಬೆಳೆಯುವುದು.

ಈ ನಾಲ್ಕು ಮುಖ್ಯ ತತ್ವಗಳು ಮಸನೊಬು ಫುಕುವೋಕರ ಸಹಜ ಕೃಷಿಯ ಆಧಾರ ಸ್ತಂಭಗಳು ಭಾರತದ ಕೃಷಿಕರಿಗೆ ಇದು ಹೊಸದಲ್ಲ. ರಾಸಾಯನಿಕ ಕೃಷಿ ಪಾದ ಊರುವುದಕ್ಕೆ ಮುಂಚೆ ಇಂಡಿಯಾದ ಪ್ರತಿಯೊಬ್ಬ ಕೃಷಿಕನೂ ಮಸನೊಬು ಫುಕುವೊಕ ಆಗಿದ್ದ ಅಂದರೆ ತಪ್ಪಲ್ಲ. ಈಗಲೂ ನಮ್ಮ ಬುಡಕಟ್ಟು ಸಂಸ್ಕೃತಿಯವರು ನಡೆಸುವ ಕೃಷಿಯನ್ನು ಸಹಜ ಕೃಷಿ ಎಂತಲೇ ಕರೆಯಬಹುದು. ನಮ್ಮ ಎಲ್ಲ ನಿತ್ಯ ಹರಿದ್ವರ್ಣ ಕಾಡುಗಳು ಸಹಜ ಕೃಷಿಯಮಾದರಿಗಳು. ಮೂಲತಃ ಸೃಷ್ಟಿಯ ನಿರ್ಮಾಣವೇ ಅತ್ಯಂತ ಸಹಜ. ಅದನ್ನು ಅರಿತು ಅನುಸರಿಸಿದರೆ ಸಹಜ ವಿಕಾಸ ಜರುಗುತ್ತದೆ. ನಮ್ಮ ದೇಸೀ ಕೃಷಿ, ಸಹಜ ಕೃಷಿಯ ವಿಸ್ತರಣೆಯೇ ಹೊರತು ಬೇರೇನಲ್ಲ.

ಮಸನೊಬು ಫುಕುವೊಕರನ್ನು ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಲು ಮತ್ತು ವಿವರವಾಗಿ ನೋಡಲು ಕಾರಣವಿದೆ. ನಮ್ಮ ನಾಡಿನ ದೇಸೀ ಕೃಷಿಕರ ರೀತಿ ಆತ ಕೂಡ ಒಬ್ಬ ಬಹಳ ದೊಡ್ಡ ಅನುಭಾವಿ. ನಮ್ಮ ಜನರಿಗೆ ಬರೆಯಲು ಬರುತ್ತಿರಲಿಲ್ಲ. ಅದನ್ನು ಅವರು ಬಾಳುವ ಮೂಲಕ ಪ್ರತಿಫಲಿಸುತ್ತಿದ್ದರು. ಫುಕುವೋಕ ಓದಬಲ್ಲವರು ಕೃಷಿ ವಿಜ್ಞಾನಿ, ಬರಹ ಬಲ್ಲವರು. ಅವರು ಬರೆದಿರುವ ಅನುಭವ–ನಮ್ಮ ಜನ ಬರೆಯದಿರುವ ಅನುಭವ ಎರಡೂ ಬೇರೆ ಬೇರೆ ಅಲ್ಲ. ಹೀಗಾಗಿ ಅವರ ಕೃಷಿ ಮೂಲದಿಂದ ಬಂದ ಅನುಭಾವವನ್ನು ಅವರದೇ ಮಾತುಗಳಲ್ಲಿ ಇಲ್ಲಿ ನೀಡಲಾಗಿದೆ.

"ಇಲ್ಲಿಗೆ ಅನೇಕರು ಬರುತ್ತಾರೆ. ಅವರಲ್ಲಿ ಬಹು ಜನರು ಅವರ ಭೇಟಿಯ ಉದ್ದೇಶವನ್ನು ಸರಿಯಾಗಿ ಸ್ಪಷ್ಟಪಡಿಸುವುದಿಲ್ಲ. ಏಕೆಂದರೆ ಅವರಿಗೆ ತಮ್ಮ ಭೇಟಿಯ ಉದ್ದೇಶವೇ ಗೊತ್ತಿಲ್ಲ. ಅವರು ಸುಮ್ಮನೆ ಬರುತ್ತಾರೆ. ಅದು ಕೇವಲ ಸ್ವಾಭಾವಿಕ. ಮೊದಲಿನಿಂದಲೂ ಹೀಗೆಯೇ. ಮನುಷ್ಯನಿಗೆ ತಾನೆಲ್ಲಿಂದ ಬರುತ್ತಿದ್ದೇನೆ. ಎಲ್ಲಿಗೆ ಹೋಗುತ್ತೇನೆ ಎಂಬುದು ಗೊತ್ತಿಲ್ಲ. ಜೀವಶಾಸ್ತ್ರ ನೀಡುವ ವ್ಯಾಖ್ಯೆಯಷ್ಟೆ ಅವನಿಗೆ ತಿಳಿಯುವುದು. ಆದರೆ ಹುಟ್ಟಿಗೆ ಮುಂಚೆ, ಸಾವಿನ ನಂತರ ಏನು ಎಂಬುದು ಅವನಿಗೆ ಗೊತ್ತಿಲ್ಲ.

ಹುಟ್ಟಿನ ಕಾರಣ ತಿಳಿಯದೆ ಕಡೆಗೊಮ್ಮೆ ಕಣ್ಣು ಮುಚ್ಚಿ ಅರಿಯದ ಅನಂತದಲ್ಲಿ ವಿಲೀನವಾಗುವುದಷ್ಟೇ ನಮಗೆ ಗೊತ್ತು. ಮನುಷ್ಯ ಎಂತಹ ದುರಂತವುಳ್ಳ ಪ್ರಾಣಿ! ಎಂದೋ ಒಮ್ಮೆ ಓದಿದ ನೆನಪು. "ಮೂಲ ಭೂತವಾಗಿ ಇರುವುದು ಬರೀ ಪೂರ್ವ–ಪಶ್ಚಿಮಗಳಲ್ಲ, ಹತ್ತು ಅನಂತ ದಿಕ್ಕುಗಳು". ಹೌದು, ಮೂಡಣ–ಪಡುವಣ ಎಲ್ಲವೂ ಭ್ರಮೆ. ಮೂಡಣ ಪಡುವಣ ಅರಿಯದಿರುವುದು ಸತ್ಯಕ್ಕೆ ಹೆಚ್ಚು ಹತ್ತಿರವಾದದ್ದು, ವಾಸ್ತವದಲ್ಲಿ ಯಾರಿಗೂ ಸೂರ್ಯ ಎಲ್ಲಿಂದ ಬರುತ್ತಾನೆ ಎಂಬುದು ತಿಳಿದಿಲ್ಲ. 'ಸಾಕಾರವೇ ನಿರಾಕಾರ, ನಿರಾಕಾರವೇ ಸಾಕಾರ'[ಿ] ಎಂಬ ಬುದ್ಧನ ಬೋಧನೆ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಸ್ಥಾವರ, ಜಂಗಮ ಎಲ್ಲವೂ ಒಂದೇ. ಆದರೆ ಎಲ್ಲವೂ ಶೂನ್ಯ. ಮನುಷ್ಯನು ಜೀವಿಯೂ ಅಲ್ಲ, ನಿರ್ಜೀವಿಯೂ ಅಲ್ಲ. ಆತ ಜನಿಸಿಯೂ ಇಲ್ಲ. ಗತಿಸುವುದೂ ಇಲ್ಲ. ಆದಿನ ಭತ್ತದ ಕುಯಿಲು ಮಾಡುತ್ತಿದ್ದಾಗ ಯುವಜನರಿಗೆ ಹೇಳಿದೆ, ವಸಂತದಲ್ಲಿ ಈ ಭತ್ತವನ್ನು ನಾಟಿ ಮಾಡಿದಾಗ ಅದು ಮೊಳಕೆಯೊಡೆದು ಜೀವ ಪಡೆಯಿತು. ಈಗ ಅದು ಹಣ್ಣಾಗಿದೆ. ಸತ್ತಂತೆ ಕಾಣುತ್ತಿದೆ. ಈ ಹುಟ್ಟು–ಸಾವಿನಾಟ ನಿರಂತರ.

ಮನುಷ್ಯನು ಬದುಕು ಮತ್ತು ಸಾವನ್ನು ಬಹಳ ಅಲ್ಪ ದೃಷ್ಟಿಯಿಂದ ದೃಷ್ಟಿಸುತ್ತಾನೆ. ಈ ತೃಣಕ್ಕೆ ಶರದೃತುವಿನ ಅಂತ್ಯವೂ, ವಸಂತದ ಉದಯವೂ ಏನು ಹೇಳಲಿದೆ? ಬದುಕು ಆನಂದ, ಸಾವು ದುಃಖ ಎಂಬ ಕಲ್ಪನೆ ಸರಿಯಿಲ್ಲ. ಅದು ಭತ್ತದ ಜೀವನ ಚಕ್ರದಷ್ಟೇ ಸಹಜ. ಮಣ್ಣಿನಲ್ಲಿ ಬಿದ್ದ ಭತ್ತ ವಸಂತದಲ್ಲಿ ಮೊಳಕೆಯೊಡೆಯುತ್ತದೆ. ಚಳಿಗಾಲದಲ್ಲಿ ಅಂತ್ಯ ಕಾಣುತ್ತದೆ. ಆದರೂ ಒಂದು ಸಣ್ಣ ಕಣದಲ್ಲಿ ತನ್ನ ಜೀವ ಉಳಿಸಿಕೊಂಡಿರುತ್ತದೆ. ಹಾಗೆಯೇ ಜೀವನದ ಸಂತೋಷ ಸಾವಿನೊಂದಿಗೆ ಮಾಯವಾಗಿ ಬಿಡುವುದಿಲ್ಲ. ಸಾವು ಕ್ಷಣಿಕ. ಆ ಭತ್ತ ಬದುಕಿನ ಸುಖ ಸಂತೋಷಗಳನ್ನು ತನ್ನಲ್ಲಿ ಹುದುಗಿಸಿ ಕೊಂಡಿರುವುದರಿಂದ ಅದಕ್ಕೆ ಸಾವಿನ ಭಯವಿಲ್ಲ. ಭತ್ತದ ಜೀವನ ಚಕ್ರವಿದ್ದಂತೆಯೇ ಮನುಷ್ಯನದೂ ಕೂಡ. ಪ್ರತಿದಿನ ದೇಹದ ಅನೇಕ ರೋಮಗಳು ಉದುರುತ್ತವೆ. ಉಗುರುಗಳು ಬೆಳೆಯುತ್ತವೆ. ಜೀವಕೋಶಗಳು ಸಾಯುತ್ತವೆ, ಮತ್ತಷ್ಟು ಹುಟ್ಟುತ್ತವೆ. ಹಾಗೆಯೇ ಈ ನಿಮಿಷದಲ್ಲಿ ದೇಹದಲ್ಲಿರುವ ರಕ್ತ ಕೆಲ ತಿಂಗಳುಗಳ ಹಿಂದೆ ಇದ್ದಿರಲಿಲ್ಲ. ನಿಮ್ಮ ಎಲ್ಲ ಗುಣಗಳೂ

ಮುಂದೆ ನಿಮ್ಮ ಮಕ್ಕಳ, ಮೊಮಕ್ಕಳ ದೇಹದಲ್ಲಿ ಸಿಗುತ್ತವೆ ಎಂಬುದನ್ನು ಯೋಚಿಸಿದರೆ ನೀವು ಪ್ರತಿದಿನ ಸಾಯುತ್ತಿರುವುದೂ, ಹೊಸ ಜನ್ಮ ಪಡೆಯುತ್ತಿರುವುದೂ ಅರಿವಾಗುತ್ತದೆ.

ಈ ಬದುಕಿನ ಚಕ್ರವನ್ನು ಅರ್ಥಮಾಡಿಕೊಂಡು ಸಂತೋಷದಿಂದ ತಿರುಗಿದರೆ ಮತ್ತಿನ್ನೇನೂ ಬೇಡ. ಆದರೆ ಅನೇಕರು ಜೀವನ ಚಕ್ರ ಉರುಳಿದಂತೆ ಆಗುವ ಬದಲಾವಣೆಗಳನ್ನು ಸಂತೋಷದಿಂದ ಅನುಭವಿಸದವರಾಗುತ್ತಾರೆ. ಅವರು ಹಿಂದೆ ಅನುಭವಿಸಿದ ಜೀವನ ಪದ್ಧತಿಗೆ ಅಂಟಿಕೊಳ್ಳಲು ಹವಣಿಸುತ್ತಾರೆ. ಈ ಅಭ್ಯಾಸ ಸಾವಿನ ಭಯವನ್ನು ಕಲಿಸಿ ಬಿಡುತ್ತದೆ. ಅವರು ಅವಾಸ್ತವದೊಂದಿಗೆ ಸೆಣೆಸಾಡುತ್ತಿರುವಾಗಲೇ ಅವರ ಬದುಕು ಕನಸಿನಂತೆ ಜಾರಿ ಹೋಗುವುದನ್ನು ಅವರೇ ನೋಡುತ್ತಾರೆ. ಬದುಕು-ಸಾವುಗಳೇ ನಿಜವಾದರೆ ಮನುಷ್ಯನಿಗೆ ವೇದನೆಗಳಿಂದ ಮುಕ್ತಿಯುಂಟೆ?

ಬದುಕು-ಸಾವು ಎಂಬುದಿಲ್ಲ. ಅನುಭವ ಪ್ರವಾಹದಲ್ಲಿ ಪ್ರಪಂಚ ಪೂರ್ಣವಾದ ವಸ್ತು. ಆದರೆ ಮನುಜನ ಮನಸ್ಸು ಪ್ರಪಂಚದ ಈ ಚಮತ್ಕಾರವನ್ನು ಸಾವು-ಬದುಕು ಎಂದು ವಿಭಾಗಿಸುತ್ತದೆ. ಪಂಚೇಂದ್ರಿಯಗಳು ಅನುಭವಿಸಿ ಕೊಟ್ಟ ತೀರ್ಪನ್ನೇ ಮನಸ್ಸು ಅನುಮೋದಿಸುತ್ತದೆ. ಆಗ ಎಲ್ಲ ಭೌತದ್ರವ್ಯಗಳೂ ಮನುಷ್ಯ ಭಾವಿಸಿದ ವಸ್ತುಗಳಾಗಿ ಮಾರ್ಪಡುತ್ತವೆ. ಲೌಕಿಕ ಬದುಕಿನ ರೂಪ, ಸಾವು-ಬದುಕು, ಆರೋಗ್ಯ-ಅನಾರೋಗ್ಯ, ಸುಖ-ದುಃಖ ಇವೆಲ್ಲವೂ ಮನುಷ್ಯನ ಮನದಲ್ಲಿ ಜನ್ಮ ತಾಳುತ್ತವೆ. ಬುದ್ಧ ಎಲ್ಲವೂ ಶೂನ್ಯ ಎಂದಾಗ ಅವನು ವಾಸ್ತವಿಕ ಸತ್ಯಗಳನ್ನು ಮಾತ್ರ ನಿರಾಕರಿಸುತ್ತಿಲ್ಲ, ಮನುಷ್ಯನ ಭಾವನೆಗಳೂ ಕೂಡ ಕಣ್ಣು ಕಟ್ಟು ಎನ್ನುತ್ತಾನೆ. ಎಲ್ಲವೂ ಭ್ರಮೆಯೇ ಉಳಿದಿದ್ದು ಮತ್ತಿನ್ನೇನು?

ಶೂನ್ಯತೆಯ ಕಲ್ಪನೆ ಮನದಲ್ಲಿ ಸ್ಪಷ್ಟವಾಗಿರುತ್ತದೆ. ನೀನು ಎಲ್ಲಿಂದ ಬಂದೆ, ಎಲ್ಲಿಗೆ ಹೋಗುತ್ತಿದ್ದೇಯೆ ಎಂಬುದು ಗೊತ್ತಿಲ್ಲದ ಮೇಲೆ ನೀನು ಇಲ್ಲಿ ನಿಂತಿರುವುದು ಎಷ್ಟು ದಿಟ? ಬದುಕು ಅರ್ಥ ವಿಲ್ಲದ್ದು ಅಲ್ಲವೇ ?

ಅಂದು ಆ ಮಗು ಅದರ ತಾಯಿಯನ್ನು ಕೇಳುತ್ತಿತ್ತು, "ನಾನು ಹುಟ್ಟಿರುವುದು ಏತಕ್ಕೆ? ಶಿಶುವಿಹಾರಕ್ಕೆ ಹೋಗಲೆಂದೆ?" ಎಂದು. ಹೌದು, ಇಂದಿನ ದಿನಗಳಲ್ಲಿ ಮನುಷ್ಯ ಹುಟ್ಟಿರುವುದು ಶಿಶುವಿಹಾರಕ್ಕೆ ಹೋಗಲೆಂದೇ!

ಕಾಲೇಜಿನವರೆಗೂ ಅವರು ಶ್ರಮವಹಿಸಿ ಹೋಗಿ ಕಲಿಯುವುದು ತಾವು ಏತಕ್ಕಾಗಿ ಹುಟ್ಟಿದ್ದೇವೆಂದು ಅರಿಯಲು. ವಿದ್ವಾಂಸರು, ತತ್ವ ಜ್ಞಾನಿಗಳು ತಮ್ಮ ಜೀವನವನ್ನು ಪಣಕ್ಕಿಟ್ಟು ಇದನ್ನು ಅರಿಯಲು ಪ್ರಯತ್ನಿಸುತ್ತಾರೆ. ನಿಜವಾಗಿ ಮನುಷ್ಯನ ಬದುಕಿಗೆ ಉದ್ದೇಶವಿಲ್ಲ. ನಾವು ಏನೇನೋ ಕನಸು ಹೆಣೆದು ಅದಕ್ಕೊಂದು ಉದ್ದೇಶ ಕಲ್ಪಿಸಿದ್ದೇವೆ. ಅದಕ್ಕಾಗಿ ಹೋರಾಡುತ್ತೇವೆ. ಇದು ಗಾಳಿ

ಗುದ್ದುವ ಕೆಲಸ, ಶಿಶುವಿಹಾರಕ್ಕೆ ಸೇರಿದ ಘಳಿಗೆಯಲ್ಲೇ ಮನುಷ್ಯನಿಗೆ ದುಃಖ ಪ್ರಾರಂಭವಾಗುತ್ತದೆ. ಮನುಷ್ಯ ಒಂದಾನೊಂದು ಕಾಲದಲ್ಲಿ ಸಂತೋಷವುಳ್ಳ ಜೀವಿಯಾಗಿದ್ದ. ಇಂದು ತನ್ನ ಸುತ್ತ ತಾನೇ ಕಠಿಣವಾದ ಗೋಡೆ ನಿರ್ಮಿಸಿ ಕೊಂಡಿದ್ದಾನೆ. ಈಗ ಅದರಿಂದ ಹೊರ ಬರಲು ಪ್ರಯತ್ನಿಸುತ್ತಿದ್ದಾನೆ. ಪ್ರಕೃತಿಯಲ್ಲಿ ಸಾವು- ಬುದುಕು ಎರಡೂ ಇವೆ. ಆದರೆ ಅದು ಆನಂದಮಯವಾಗಿದೆ. ಮಾನವ ಸಮಾಜದಲ್ಲಿಯೂ ಸಾವು-ಬದುಕು ಎರಡೂ ಇವೆ. ಆದರೆ ಅದು ದುಃಖಮಯವಾಗಿದೆ. ಆ ತಣ್ಣನೆಯ ನದಿಯ ದಡದ ಮೇಲೆ ಚಾಚಿ ನಿಂತಿರುವ ಮರ, ಆ ಮರದ ಕೆಂಪು ಎಲೆ, ಮೇಲಿನ ಶುಭ್ರ ನೀಲ ಆಕಾಶ, ಎಂತಹ ದೃಶ್ಯ! ನಾನು ಅದಕ್ಕೆ ಮಾರು ಹೋಗಿದ್ದೇನೆ. ಈ ಪ್ರಪಂಚದ ಎಲ್ಲ ಅನುಭವಗಳೂ ಸೂಕ್ಷ್ಮವಾಗಿ, ಸಾಂಕೇತಿಕವಾಗಿ ಮೌನವಾದ ಪ್ರಕೃತಿಯ ಈ ಪವಿತ್ರ ಗ್ರಂಥದಲ್ಲಿ ಮೂಡಿ ಬಂದಿವೆ. ಹರಿಯುತ್ತಿರುವ ನೀರು ಕಳೆಯುತ್ತಿರುವ ಸಮಯವನ್ನು ಪ್ರತಿನಿಧಿಸಿದರೆ ಆ ನದಿಯ ಎಡ-ಬಲ ದಂಡೆಗಳು, ಆ ಕೆಂಪು ಎಲೆಗಳು, ನೀಲ ಆಕಾಶ ಏನನ್ನೋ ಹೇಳುತ್ತಿವೆ, ಪ್ರತಿನಿಧಿಸುತ್ತಿವೆ. ಮನುಷ್ಯನ ಪ್ರಕೃತಿ ಎಂದರೆ 'ಏನು' ಎಂದು ಪ್ರಶ್ನಿಸಿದರೆ, 'ಏನು' ಎಂದರೆ ಏನೆಂದು ಅವನೇ ಕೇಳಬೇಕಾಗುತ್ತದೆ. ನಂತರ ಏನೆಂದು ಕೇಳುವ ಮನಷ್ಯನಾದರೂ ಏನು ಎಂದು ತಾನೇ ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಹೀಗೆ ಪ್ರಶ್ನಿಸುತ್ತಾ ಅವನು ಹೊರಟರೆ ಕಡೆಗವನು ಪ್ರಶ್ನೆಗಳ ಸಾಗರದಲ್ಲಿ ಮುಳುಗಿ ತೇಲಬೇಕಾಗುತ್ತದೆ. ನಮ್ಮನ್ನು ವಿಸ್ಮಯ ಲೋಕಕ್ಕೆ ತಳ್ಳುವ, ಭ್ರಮನಿರಸರನ್ನಾಗಿ ಮಾಡುವ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಎರಡು ಪಥಗಳುಂಟು. ಒಂದನೆಯದು, ಪ್ರಕೃತಿ ಎಂದರೆ ಏನೆಂದು ಪ್ರಶ್ನಿಸುವವನು ತನ್ನನ್ನೇ ತಾನು ಆಳವಾಗಿ ಕಂಡುಕೊಳ್ಳಲು ಪ್ರಯತ್ನಿಸುವುದು; ಎರಡನೆಯದು, ಪ್ರಕೃತಿಯನ್ನು ತನ್ನಿಂದ ಬೇರೆ ಮಾಡಿಕೊಂಡು ಪರೀಕ್ಷಿಸುವುದು. ಮೊದಲನೆಯ ಪಥವು ನಿಮ್ಮನ್ನು ವೇದಾಂತ ಹಾಗೂ ಧರ್ಮದ ಸಾಮ್ರಾಜ್ಯಕ್ಕೆ ಕರೆದೊಯ್ದರೆ, ಎರಡನೆಯ ಪಥವು ಪ್ರಕೃತಿಯನ್ನು ಛಿದ್ರ ಛಿದ್ರ ಮಾಡುತ್ತದೆ. ನೀರು, ಅದರ ವೇಗದ ಅಲೆಗಳು, ಗಾಳಿ, ಮೋಡ ಎಲ್ಲವೂ ಒಂದಕ್ಕೊಂದು ಸಂಬಂಧವಿಲ್ಲದಂತಾಗಿ ಅವೆಲ್ಲವೂ ಸಂಶೋಧನೆಯ ವಸ್ತುಗಳಾಗಿ ಮತ್ತಷ್ಟು ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತವೆ. ಈ ದಾರಿ ಅಂತ್ಯವಿಲ್ಲದ್ದಾಗುತ್ತದೆ. ಇದೇ ವಿಜ್ಞಾನದ ಪಥ.

ಪ್ರಪಂಚ ಬಹಳ ಸರಳವಾಗಿತ್ತು. ಹಿಂದೆ ಹುಲ್ಲಿನ ಮೇಲೆ ಬಿದ್ದಿರುವ ನೀರಿನ ಹನಿಯನ್ನು ನೋಡಿ ಅದು ಇಬ್ಬನಿ ಎಂದು ಸುಮ್ಮನಿರುತ್ತಿದ್ದಿರಿ. ಆದರೆ ಇಂದು ಆ ಇಬ್ಬನಿಯನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತೀರಿ. ಕಡೆಗೆ ಅಂತ್ಯವಿಲ್ಲದ ಬೌದ್ಧಿಕ ಕರಸತ್ತಿನ ನರಕದಲ್ಲಿ ಸಿಲುಕಿ ಬೀಳುತ್ತೀರಿ.

ಹಿಂದೆ ನಾವು ಅತ್ಯಂತ ಸಣ್ಣದು ಎಂದರೆ ಅಣು ಎಂದು ಭಾವಿಸಿದ್ದೆವು. ಆ ನಂತರ ಆ ಅಣುವಿನಲ್ಲಿ ಬೀಜಕೋಶವಿರುವುದು ಕಣ್ಣಿಗೆ ಬಿತ್ತು. ಆ ಮೇಲೆ

ಅದರಲ್ಲೂ ಭಾಗಗಳಿರುವುದು ತಿಳಿಯಿತು. ಹೀಗೆ ಈ ಕ್ಷಣಿಕ ಪ್ರಪಂಚದಲ್ಲಿ ಪ್ರಶ್ನೆಗಳ ಸರಮಾಲೆಗೆ ಅಂತ್ಯವೇ ಇಲ್ಲ. ಬೀಜ ಕೇಂದ್ರದ ಸುತ್ತಲೂ ತಿರುಗುವ ಇಲೆಕ್ಟ್ರಾನುಗಳ ವೇಗವನ್ನು ಧೂಮಕೇತುವಿನ ವೇಗಕ್ಕೆ ಹೋಲಿಸುತ್ತಾರೆ. ಒಬ್ಬ ಅಣು ವಿಜ್ಞಾನಿಗೆ ಆ ಅಣು ಜಗತ್ತಿನ ವಿಶಾಲತೆ, ಈ ಬ್ರಹ್ಮಾಂಡದ ವಿಶಾಲತೆ ಇಷ್ಟೇ ಕಾಣುತ್ತದೆ. ಇದರಿಂದ ನಮಗೆ ಗೊತ್ತಿರುವ ಸೌರವ್ಯೂಹದೊಂದಿಗೆ ಇನ್ನೂ ಅನೇಕ ಸೌರವ್ಯೂಹಗಳಿವೆ ಎಂದು ಗೊತ್ತಾಗುತ್ತದೆ. ಅಂತರಿಕ್ಷವನ್ನು ಅಭ್ಯಸಿಸುವ ವಿಜ್ಞಾನಿಗೆ ನಮ್ಮ ಇಡೀ ಸೌರ ಸಮೂಹವೇ ಅತ್ಯಂತ ಕಿರಿದಾಗಿ ಕಾಣುತ್ತದೆ.

ನೀರಿನ ಹನಿಗಳನ್ನು ಕೇವಲ ಹನಿಗಳೆಂದು ಪರಿಗಣಿಸುವವರು ಅಥವಾ ಬಂಡೆಯು ಜಡತ್ವವನ್ನು ಹೊಂದಿದೆ ಎಂದು ತಿಳಿದಿರುವವರು ಸಂತೋಷವುಳ್ಳವರೂ, ಮುಗ್ಧರೂ ಆಗಿದ್ದಾರೆ. ನೀರಿನ ಹನಿಯೂ ಬ್ರಹ್ಮಾಂಡವೆಂದು ಭಾವಿಸಿರುವವರು ಮತ್ತು ಜಡವಾಗಿ ನಿಂತಿರುವ ಬಂಡೆಯ ಅಣು ಅಣುವಿನಲ್ಲೂ ಚಲನೆ ಇದೆ ಎಂದು ತಿಳಿದಿರುವ ವಿಜ್ಞಾನಿಗಳು ಜಾಣ ಮೂರ್ಖರು. ಪ್ರಪಂಚವನ್ನು ಸರಳ ದೃಷ್ಟಿಯಿಂದ ನೋಡಿದರೆ ಗಾಬರಿ ಬರಿಸುವಷ್ಟು ಗಹನವಾಗಿಯೂ ದೂರವಾಗಿಯೂ ಕಾಣುತ್ತದೆ. ಮನೆಯ ತೊಟ್ಟಿಯಲ್ಲಿ ಕಾಣುವ ಹುಣ್ಣಿಮೆಯ ಚಂದ್ರನ ದುಂಡು ಮುಖವನ್ನು ಕಂಡು ಬಾ, ಬಾ, ಚಂದಮಾಮ ಎಂದು ಕುಣಿಯುವ ಮಕ್ಕಳು ಪ್ರಕೃತಿಯ ಚಮತ್ಕಾರವನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರಿಗೆ ಚಂದ್ರಲೋಕದ ಕಲ್ಲನ್ನು ಮುಟ್ಟಿ ಪರೀಕ್ಷಿಸಿರುವ ನಮ್ಮ ವಿಜ್ಞಾನಿಗಳಿಗಿಂತ ಹೆಚ್ಚಿನ ಅರಿವಿದೆ. ವಿಜ್ಞಾನಿಗಳು ಚಂದ್ರಲೋಕದ ಮೇಲೆ ತಮ್ಮ ಕಾಲನ್ನಿಟ್ಟು ಅದರ ಶೋಭೆಗೆ ಕಳಂಕ ತಂದಿದ್ದಾರೆ.

ಕೃಷಿ ಕ್ಷೇತ್ರದಲ್ಲಿಯೂ ಹೀಗೆಯೆ. ಮೃದುವಾದ ಹಾಗೂ ದಪ್ಪದಾದ ತಳಿಯ ಭತ್ತವನ್ನು ನೀರು ತುಂಬಿದ ಗದ್ದೆಗಳಲ್ಲಿ ಬೆಳೆದಾಗ ಕ್ರಿಮಿಗಳು, ರೋಗಗಳು ಬರುತ್ತವೆ. 'ಸುಧಾರಿತ' ಭಿತ್ತನೆ ಬಳಸಿದರೆ ರಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳಿಗೆ ಶರಣು ಹೋಗಬೇಕಾಗುತ್ತದೆ. ಅದರ ಬದಲಿಗೆ ಚಿಕ್ಕದಾದ ಗಟ್ಟಿಯಾದ ಭತ್ತವನ್ನು ಆರೋಗ್ಯಕರವಾದ ವಾತಾವರಣದಲ್ಲಿ ಬೆಳೆಸಿದರೆ ಈ ರಾಸಾಯನಿಕಗಳು ಅನಗತ್ಯ. ನನ್ನ ಭೂಮಿಯಲ್ಲಿ ನಾನು ಸ್ವಾಭಾವಿಕ ವ್ಯವಸಾಯದಿಂದ ಆಧುನಿಕ ವೈಜ್ಞಾನಿಕ ವ್ಯವಸಾಯದಷ್ಟೇ ಇಳುವರಿ ತೆಗೆಯಬಹುದೆಂದು ತೋರಿಸಿದ್ದೇನೆ. ಈ ಪದ್ಧತಿಯನ್ನು ವೈಜ್ಞಾನಿಕ ಪದ್ಧತಿಗೆ ಹೋಲಿಸಿದರೆ ಇದು ಕಡಿಮೆ ಬಂಡವಾಳ, ಶ್ರಮ ಮತ್ತು ಸಂಪನ್ಮೂಲಗಳನ್ನು ಬೇಡುತ್ತದೆ. ಹೀಗಿರುವಾಗ ವೈಜ್ಞಾನಿಕ ತಂತ್ರಜ್ಞಾನದ ಪ್ರಯೋಜನವಾದರೂ ಏನು?

ಇಲ್ಲಿ ನಿಂತು ಸುತ್ತಲೂ ಕಣ್ಣು ಹಾಯಿಸಿದರೆ ನನ್ನ ಗದ್ದೆಗಳನ್ನು ಬಿಟ್ಟು ಮಿಕ್ಕೆಲ್ಲ ಗದ್ದೆಗಳಲ್ಲಿ ಭತ್ತದ ಕುಯಿಲು ಮಾಡುವ ಯಂತ್ರಗಳು ಓಡಾಡುತ್ತಿರುವುದು ಕಣ್ಣಿಗೆ ಕಾಣುತ್ತದೆ. ಗುರುತೇ ಸಿಗದಷ್ಟು ಈ ಹಳ್ಳಿ ಬದಲಾಗಿ ಹೋಗಿದೆ. ಆದರೆ ನನ್ನೊಡನಿರುವ ಯುವಕರು ಯಾಂತ್ರೀಕರಣಕ್ಕೆ ಮಾರು ಹೋಗುವುದಿಲ್ಲ.

ಸರಳವಾದ, ಶಾಂತಿಯುತವಾದ ಹಳೆ ರೀತಿಯ ಕುಯಿಲಿನ ಪದ್ಧತಿಯಲ್ಲೇ ಅವರು ಸಂತೋಷ ಪಡುತ್ತಾರೆ.

ಹಿಂದೆ ರೈತರು ಭೂಮಿಯನ್ನು ತಾವೇ ಅಗೆಯುತ್ತಿದ್ದರು. ಆನಂತರ ಯಾವನೋ ಒಬ್ಬ ಎತ್ತುಗಳ ಬಳಕೆಯನ್ನು ಕಂಡು ಹಿಡಿದ. ಇದರಿಂದ ಉಳುಮೆ ಕೆಲಸ ಸಾಕಷ್ಟು ಹಗುರಾಯಿತು. ಇಪ್ಪತ್ತು ವರ್ಷಗಳ ಹಿಂದೆ ಉಳುಮೆ ಮಾಡುವ ಮೊದಲ ಯಂತ್ರಗಳೊಂದಿಗೆ ಹೋಲಿಸತೊಡಗಿದರು. ಅನುಕೂಲ, ಅನಾನುಕೂಲಗಳ ಬಗ್ಗೆ ಚರ್ಚೆ ನಡೆಸಿದರು. ಕಡೆಗೆ ಈ ಯಂತ್ರಕ್ಕೆ ಮತ ನೀಡಿದರು. ಪ್ರಾಣಿಗಳನ್ನು ದೂರ ಮಾಡಿದರು. ಪಕ್ಕದ ರೈತನಿಗಿಂತ ತಾನು ಶೀಘ್ರವಾಗಿ ಕೆಲಸ ಮಾಡಿ ಮುಗಿಸಬೇಕೆಂಬುದೇ ರೈತರ ಅಭಿಲಾಷೆಯಾಗಿತ್ತು ವೈಜ್ಞಾನಿಕ ಕೃಷಿಯು ವೇಗ ಮತ್ತು ಕಾರ್ಯ ಸಮರ್ಥತೆಯ ಬಗೆಗೆ ಹೇಳುತ್ತದೆ ಅದರ ಸಮೀಕರಣದಲ್ಲಿ ರೈತನೂ ಕೂಡ ಒಂದು ಯಂತ್ರ, ಯಂತ್ರಗಳ ತಯಾರಕ ಹಾಗೂ ಮಾರಾಟಗಾರನ ಕೈಗೊಂಬೆಯಾಗಿದ್ದಾನೆ ಅವನು."

೧೯೭೫ರಲ್ಲಿ ಮಸನೊಬು ಫುಕುವೊಕರ 'ONE STRAW REVOLUTION' ಕೃತಿ ಪ್ರಕಟವಾಯಿತು. ಜಗತ್ತಿನೆಲ್ಲೆಡೆ ಯುವ ಓದುಗ ರೈತರು ಇದರ ಮೋಡಿಗೆ ಒಳಗಾದರು. ಬೇಸಾಯ ಗೊತ್ತಿಲ್ಲದವರು ಕೂಡ ಬೇಸಾಯದೆಡೆಗೆ ಆಸಕ್ತಿ ಬೆಳೆಸಿಕೊಂಡರು. ೧೯೮೯–೧೯೯೦ರಲ್ಲಿ ಕನ್ನಡದಲ್ಲೂ ಈ ಕೃತಿ "ಒಂದು ಹುಲ್ಲಿನ ಕ್ರಾಂತಿ" ಬೆಳಕು ಕಂಡಿತು. ಪೂರ್ಣಚಂದ್ರ ತೇಜಸ್ವಿಯವರು, ಲಂಕೇಶರು 'ಲಂಕೇಶ್ ಪತ್ರಿಕೆಯಲ್ಲಿ' ನಾಡಿನ ತರುಣರ ಗಮನ ಸೆಳೆದರು. ಮೇಲುಕೋಟೆಯ ಸಂತೋಷ ಕೌಲಗಿ ಕೂಡ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ಈ ಕುರಿತು ಹೆಚ್ಚು ಹೆಚ್ಚು ಚರ್ಚೆಗಳಾದವು. ನಾಡಿನ ಮೂಲೆ ಮೂಲೆಯಲ್ಲು ಇದನ್ನು ಅನುಷ್ಠಾಕ್ಕೆ ತರುವ ಪ್ರಯತ್ನಗಳು ಸಾಗಿದವು. ಮುಖ್ಯವಾಗಿ ಈ ಹಾದಿಯಲ್ಲಿ ಚಿಕ್ಕನಾಯ್ಕನಹಳ್ಳಿಯ ಬಾಳೆಕಾಯಿ ಶಿವನಂಜಯ್ಯ; ಕೊಳ್ಳೇಗಾಲದ ಕೈಲಾಸಮೂರ್ತಿ ಶಿವಮೊಗ್ಗ ಜಿಲ್ಲೆಯ ಚರ್ಚಿಗುಂಡಿಯ ನಂದೀಶ್ ಮತ್ತು ಈ ಅಧ್ಯಯನದ ಸಂಶೋಧನಾ ವಿದ್ಯಾರ್ಥಿ ಆದ ನಾನೂ, ನಾವೆಲ್ಲ ನಿಸರ್ಗ ಅರಿಯುವ ಹಾದಿಯಲ್ಲಿ ಕ್ರಮಿಸಿದ್ದೇವೆ.

೪.೫. ಸಾವಯವ ಕೃಷಿ:

ನಮ್ಮ ಹಿರಿಕರು ತಮ್ಮ ಕೃಷಿಯನ್ನು "ಸಾವಯವ ಕೃಷಿ" ಎಂಬುದಾಗಿ ಕರೆದಿರಲಿಲ್ಲ. ಪಾರಂಪರಿಕ ಕೃಷಿ, ಸಾಂಪ್ರದಾಯಿಕ ಕೃಷಿ, ಪೂರ್ವಿಕರ ಕೃಷಿ, ಸೇಂದ್ರೀಯ ಕೃಷಿ–ಇವು ದೇಸೀಯ ಕೃಷಿಗಳಿಗಿದ್ದ ಹೆಸರುಗಳು. ಬಹಳ ಜನ ದೇಸೀ ಕೃಷಿಯನ್ನೇ ಸಾವಯವ ಕೃಷಿ ಅಂದುಕೊಂಡಿದ್ದಾರೆ. ಮತ್ತೆ ಕೆಲವರು

ರಸಾಯನಿಕೇತರವಾದ ಎಲ್ಲಾ ಬಗೆಯ ಕೃಷಿಗಳೂ ಸಾವಯವ ಕೃಷಿಯೇ ಅಂದುಕೊಂಡಿದ್ದಾರೆ. ಮೇಲ್ನೋಟಕ್ಕೆ ಇದು ಹೀಗೆಯೇ ಕಾಣುತ್ತದೆ.

ವಾಸ್ತವವಾಗಿ ಸಾವಯವ ಕೃಷಿಯ ಮೂಲ ತತ್ವಗಳು, ಆಶಯಗಳು; ಭಾರತದ ದೇಶೀ ಕೃಷಿ ಜ್ಞಾನದ ಮೂಲಕವೇ ಹೊಮ್ಮಿದಂಥವು. ದೇಶದ ಬೇಸಾಯ ಪದ್ಧತಿಯನ್ನು 'ORGANIC FARMING METHODS' ಅಂತ ಕರೆದವರು ಇಂದು ಜಾಗತಿಕ ಮಟ್ಟದಲ್ಲಿ ಸಾವಯವ ಕೃಷಿಯ ಪಿತಾಮಹ ಎನಿಸಿಕೊಂಡಿರುವ ಸರ್ ಆಲ್ಬರ್ಟ್ ಹೋವರ್ಡ್‌ರವರು. ಅವರು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬರೆದ ಪುಸ್ತಕದ ಹೆಸರು "ORGANIC FARMING METHODS IN INDIA" ಅಮೇರಿಕಾ ಸೇರಿದಂತೆ ಬೇರೆ ಬೇರೆ ದೇಶದವರಿಗೆ ಈ ಪುಸ್ತಕದ ಮೂಲಕ ಭಾರತದ ಕೃಷಿಯ ಚಿತ್ರಣ ದೊರೆಯಿತು. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಪರಿಷ್ಕರಣೆಗೊಳಗಾಗುತ್ತ ಬಂದ ಕೃಷಿ-ಹೈನುಗಾರಿಕೆ, ಸತತವಾಗಿ ಅನಾವೃಷ್ಟಿ, ಅತಿವೃಷ್ಟಿಗಳ ಮಧ್ಯೆಯೂ ಭೀಕರ ಬರಗಾಲವನ್ನು ಎದುರಿಸುವ ಚೈತನ್ಯವುಳ್ಳದ್ದಾಗಿದೆಯೆಂದು ತಿಳಿದು ಅಲ್ಲಲ್ಲಿ ಇದರ ಪ್ರಯೋಗಗಳನ್ನು ಆರಂಭಿಸಿದರು. ಅಮೆರಿಕದಲ್ಲಿ ಈ ಪುಸ್ತಕದಿಂದ ಪ್ರಭಾವಗೊಂಡ ಜೀರೊಂಐ. ರೋಡೇಲ್‌ರವರು (JEROME I RODALE) ೧೯೪೨ರಲ್ಲಿ ಪೆನ್‌ಸಿಲ್ವೇನಿಯಾದ ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡು 'ಆರ್ಗ್ಯಾನಿಕ್ ಫಾರ್ಮಿಂಗ್ ಅಂಡ್ ಗಾರ್ಡನಿಂಗ್' ಮ್ಯಾಗಜೈನ್ ಮೂಲಕ ತಮ್ಮ ಅನುಭವಗಳನ್ನು ಪ್ರಕಟಿಸುತ್ತಾ ಬಂದರು. ೧೯೪೭ರಲ್ಲಿ ರೋಡೇಲ್ ರವರು 'SOIL AND HEALTH FOUNDATION' ಹೆಸರಿನಲ್ಲಿ ಒಂದು ದತ್ತಿಯನ್ನೂ ಸ್ಥಾಪಿಸಿದರು. ಅದರ ಮೂಲ ಧ್ಯೇಯ "HEALTHY SOIL, HEALTHY FOOD, HEALTHY PEOPLE" ಎಂಬುದಾಗಿತ್ತು. ೧೯೭೧ರಲ್ಲಿ ರೋಡೇಲ್‌ರವರು ನಿಧನರಾದ ಬಳಿಕ ಅವರ ಮಗ ಬಾಟ್ ರೋಡೇಲ್ ಮತ್ತೆ ೩೩೩ ಎಕರೆ ಜಾಗವನ್ನು ಇದಕ್ಕೆ ಸೇರಿಸಿದರು.

೧೯೯೦ರ ಹೊತ್ತಿಗೆ ಭಾರತದ ದೇಸೀ ಕೃಷಿ ಪ್ರಪಂಚದಾದ್ಯಂತ ಸಂಚರಿಸಿ ಮತ್ತೆ ನಮ್ಮ ದೇಶಕ್ಕೆ "ಸಾವಯವ ಕೃಷಿ"ಯಾಗಿ ಪ್ರವೇಶಿಸಿತು. ಇಷ್ಟೊತ್ತಿಗೆ ಇದು ತನ್ನ ದೇಸೀತನಗಳನ್ನೆಲ್ಲ ಕಳೆದು ಸುಸ್ಥಿರ ಆರೋಗ್ಯ, ಸುಸ್ಥಿರ ಕೃಷಿ, ಸುಸ್ಥಿರ ಮಣ್ಣು, ಸುಸ್ಥಿರ ಆದಾಯ ಎಂಬ ಫಲಕಗಳನ್ನು ನೇತು ಹಾಕಿಕೊಂಡಿತ್ತು. ಇದರ ಜೊತೆಗೆ ವರ್ಮಿಕಾಂಪೋಸ್ಟ್, ಪಂಚಗವ್ಯ, ಬಯೋಕೆಮಿಕಲ್ಸ್, ಬಯೋ ಫರ್ಟಿಲೈಸರ್ಸ್‌ನಂಥ ದೊಡ್ಡ ದೊಡ್ಡ ಜ್ಞಾನ ರಾಶಿಯನ್ನೆ ಹೊತ್ತು ತಂದಿತ್ತು.

ಹೀಗಾಗಿ ನಮ್ಮ ದೇಶದಲ್ಲಿ ಈಗ ಪ್ರಚಾರದಲ್ಲಿರುವ ಸಾವಯವ ಕೃಷಿ ದೇಸೀ ಸಾವಯವ ಕೃಷಿ ಅಲ್ಲ. ನಮ್ಮ ದೇಶದ ದೇಸೀ ಸಾವಯವ ಕೃಷಿ

ಮೂಗುದಾರವಿರುವ ನಾಟಿ ಹಸುವಾದರೆ; ಈಗ ಬಂದಿರುವ ಸಾವಯವ ಕೃಷಿ ಗೆಯ್ಮೆಗೇಯದ ಮೂಗುದಾರವಿಲ್ಲದ ಕೊಬ್ಬಿದ ಹೈಬ್ರಿಡ್ ಬಸವ. ಇದನ್ನು ಸಾಕುವುದೇ ದೊಡ್ಡ ಸಮಸ್ಯೆ ಆಗಿದೆ. ಇದು ರಸಾಯನಿಕ ಕೃಷಿಗಿಂತ ದುಬಾರಿಯದಾದ, ಇಳುವರಿಯಲ್ಲೂ ಖೋತಾ ಇರುವ ಅವೈಜ್ಞಾನಿಕ ಕೃಷಿ ಪದ್ಧತಿಯಾಗಿದೆ. ಕಳೆದ ೨೫ ವರ್ಷಗಳಿಂದ ಈ ಕೃಷಿ ಅನುಸರಿಸುವವರ ಸಂಖ್ಯೆ ೨೫೦ರ ಗಡಿದಾಟಿರಲಿಲ್ಲ "ಇಳುವರಿ ಕಡಿಮೆ, ಖರ್ಚು ಜಾಸ್ತಿ, ಭೂಮಿ ರೆಡಿಯಾಗಲು ಕನಿಷ್ಠ ೨೫ ವರ್ಷವಾದರು ಬೇಕು" ಎಂದು ಇದರ ವಕ್ತಾರರು ನಾಡಿನಾದ್ಯಂತ ಭಜನೆ ಮಾಡುತ್ತಿದ್ದರು. ಇವರ ನಿರುತ್ಸಾಹದ ಮಾತು ಕೇಳಿ ಕೇಳಿ ಈ ಸಾವಯವದ ತಂಟೆಯೇ ಬೇಡವೆಂದು ಜನ ಸುಮ್ಮನಾಗಿಬಿಟ್ಟಿದ್ದರು. ಯಾವಾಗ ಸುಭಾಷ್ ಪಾಳೇಕರರು ಬಂದು ದೇಸೀ ಕೃಷಿ ಜ್ಞಾನಕ್ಕೆ ನೈಸರ್ಗಿಕ ಕೃಷಿಯ ಸ್ಪರ್ಶ ನೀಡಿದರೊ–ಆಗ ರಸಾಯನಿಕ ಕೃಷಿಯಿಂದ ಜಿಗುಪ್ಸೆಗೊಂಡಿದ್ದವರಿಗೆ ಬಿಡುಗಡೆಯ ಹಾದಿ ದೊರೆತಂತಾಯಿತು.

ಮಣ್ಣಿನ ಶ್ರೀಮಂತಿಕೆ ಹೆಚ್ಚಿಸುವಲ್ಲಿ ಎರೆಹುಳುವಿನ ಪಾತ್ರ ಬಹಳ ದೊಡ್ಡದು. ದೇಸೀ ಕೃಷಿ ಮಾಡುವ ಯಾರೂ ಎರೆ ಹುಳು ಸಾಕುತ್ತಿರಲಿಲ್ಲ. ಯಾಕೆಂದರೆ ಎರೆಹುಳುಗಳು ಸ್ವಾಭಾವಿಕವಾಗಿ ಎಲ್ಲೆಡೆಯೂ ಇದ್ದವು. ಅವುಗಳನ್ನು ಸಾಕುವ ಅಗತ್ಯ ಇರಲಿಲ್ಲ. ಅಮೇರಿಕಾದ ಪ್ರಯೋಗಗಳು ಸಾವಯವ ಕೃಷಿಗೆ ಎರೆಹುಳು ಗೊಬ್ಬರವನ್ನು ಸಂಯೋಜಿಸಿದವು. ನಮ್ಮ ಕರ್ನಾಟಕದ ಎಲ್.ನಾರಾಯಣರೆಡ್ಡಿ, ಎ.ಪಿ.ಚಂದ್ರಶೇಖರ್, ಭರಮಗೌಡರೆಲ್ಲರೂ ಜೀವನ ಪೂರ್ತಿ ಎರೆಹುಳು ಸಾಕಿ, ಸಾಕಿ (ಅದರಲ್ಲೂ ವಿದೇಶಿ ಎರೆ ಹುಳುಗಳು) ಕೃಷಿ ಮಾಡಿದ್ದೇ ಮಾಡಿದ್ದು. ಇವರ ಈ ಬಗೆಯ ಕೃಷಿಯಿಂದಾಗಿ "ಸುಸ್ಥಿರ ಕೃಷಿಯ" ಮಾತು ಹಾಗಿರಲಿ–ಬಿಡಬೇಕಾದ ಫಲವೂ ಸರಿಯಾಗಿ ಬಿಡುತ್ತಿರಲಿಲ್ಲ. ಕೆಲವರು ವರ್ಮಿಕಾಂಪೋಸ್ಟ್ ಹೆಸರಲ್ಲಿ ದೊಡ್ಡ ದಂಧೆಯನ್ನೆ ಶುರು ಮಾಡಿಕೊಂಡಿದ್ದರು. ಸರಕಾರದ ತೋಟಗಾರಿಕಾ ಮತ್ತು ಕೃಷಿ ಇಲಾಖೆಗಳು ಸಾವಯವ ಕೃಷಿ ಪ್ರೋತ್ಸಾಹಿಸಲು ರೈತರಿಗೆ ಎರೆಹುಳು ಗೊಬ್ಬರವನ್ನು ಉಚಿತವಾಗಿ ಸರಬರಾಜು ಮಾಡುತ್ತಿದ್ದವು.

೪.೬. ಎರೆಗೊಬ್ಬರ: ಅವೈಜಾನಿಕ ಮತ್ತು ಅನೈಸರ್ಗಿಕ:

ಭಾರತದ ಬೇಸಾಯದ ಭೂಮಿಯಲ್ಲಷ್ಟೇ ಅಲ್ಲ: ಸಹಜವಾದ ಎಲ್ಲ ಪರಿಸರದಲ್ಲೂ ಎರೆಹುಳುಗಳು ವಾಸಿಸುತ್ತವೆ. ರಸಾಯನಿಕ ಕೃಷಿಯಿಂದಾಗಿ ನಮ್ಮ ಎರೆ ಹುಳುಗಳು ಕೃಷಿ ಭೂಮಿಯನ್ನು ತೊರೆದು ಹೋಗಲಿಲ್ಲ. ಆದರೆ ಅವು ಭೂಮಿಯ ನಿಗಧಿತ ಆಳದಲ್ಲಿ ನಿಷ್ಕ್ರಿಯವಾಗಿ ಉಳಿದು ಬಿಟ್ಟವು. ಹೊಲಗಳಲ್ಲಿ, ದೇಸೀ ಆಕಳ ಸಗಣಿ ಗೊಬ್ಬರಗಳು ಲಭ್ಯವಿರುವೆಡೆ ಎರೆ ಹುಳುಗಳಿಗೆ ಯಾವಾಗಲೂ ಕೊರತೆ ಇರಲಿಲ್ಲ. ಈಗಲೂ ರಸಾಯನಿಕ ಕೃಷಿ ನಿಲ್ಲಿಸಿ ಭೂಮಿ ಎಷ್ಟೇ

ಸಾರಹೀನವಾಗಿದೆ ಅಂತ ಅನ್ನಿಸಿದರೂ-ಕೊಟ್ಟಿಗೆ ಗೊಬ್ಬರ ಹಾಕಿ ಬೇಸಾಯ ಶುರುಮಾಡಿದರೆ ಎರೆ ಹುಳುಗಳು ಪ್ರತ್ಯಕ್ಷಗೊಳ್ಳುತ್ತವೆ. ಭೂಮಿಗೆ ಎಷ್ಟೇ ವಿಷ ಉಣಿಸಿದ್ದರೂ ಅವಿನ್ನೂ ರೈತನ ಕೈ ಬಿಡಲಿಲ್ಲ. ಹೀಗಾಗಿಯೇ ಎರೆಹುಳುಗಳನ್ನು 'ರೈತನ ಮಿತ್ರ' ಎನ್ನುವುದು.

ಆದರೆ ಅವಕ್ಕೆ ಈ ಎಲ್ಲಕ್ಕೂ ಮೀರಿದ ಒಗ್ಗದ ವಿಷಯವೊಂದಿದೆ. ಅದು ತನ್ನ ಮಲವನ್ನೇ ತಾನು ತಿನ್ನಬೇಕಾದ ಪ್ರಸಂಗ ಬಂದೊದಗಿದಾಗ! ಅದು ತಾನು ಅಲ್ಲಿರುವುದಿಲ್ಲ. ಇದು ವರ್ಮಿ ಕಾಂಪೋಸ್ಟ್ ಬಳಸಿ ಸಾವಯವ ಕೃಷಿ ಮಾಡುತ್ತಿದ್ದ ನಮ್ಮ ಯಾವ ಕೃಷಿ ಪಂಡಿತರಿಗೂ ಅರ್ಥವಾಗಲಿಲ್ಲ.

ನಮ್ಮ ದೇಸೀ ಎರೆಹುಳುಗಳು ದಿನದ ೨೪ ಗಂಟೆಯೂ ದುಡಿಯುತ್ತವೆ. ಕಸ ತಿಂದು ರಸ ಕೊಡುತ್ತವೆ. ೧೫ರಿಂದ ೨೫ ಅಡಿ ಆಳಕ್ಕೆ ಹೋಗುತ್ತವೆ ಮತ್ತೆ ಮೇಲೆ ಬರುತ್ತವೆ. ಹಾಗೆ ಹೋಗುವಾಗ ಮತ್ತು ಮೇಲೆ ಬರುವಾಗ ಒಮ್ಮೆ ಬಳಸಿದ ದಾರಿಯನ್ನು ಮತ್ತೊಮ್ಮೆ ಬಳಸುವುದಿಲ್ಲ. ವಿದೇಶಿ ಎರೆಹುಳುಗಳು ೨.೫ ಅಡಿ ಆಳಕ್ಕಿಂತ ಹೆಚ್ಚು ಆಳಕ್ಕೆ ಹೋಗುವುದಿಲ್ಲ. ನಮ್ಮ ಎರೆಹುಳುಗಳು ಸಗಣಿ, ಕಸಕಡ್ಡಿ, ಜಿಂಕ್, ಬೂಸ್ಟ್, ಸೂಕ್ಷ್ಮ ಜೀವಾಣುಗಳು.. ಇತ್ಯಾದಿಗಳನ್ನೆಲ್ಲ ತಿಂದು ಬೆಳೆಗಳಿಗೆ ಸಹಕಾರಿಯಾಗುತ್ತವೆ. ಪ್ರತಿಬಾರಿಯೂ ಭೂಮಿಯ ಮೇಲ್ಪದರಕ್ಕೆ ಬಂದು ವಿಸರ್ಜಿಸುತ್ತವೆ. ಅವುಗಳ ಉದರ ಬಾಯ್ಲರ್ ಇದ್ದ ಹಾಗೆ! ಅಲ್ಲಿ ಕಬ್ಬಿಣವೂ ಕರಗುತ್ತದೆ.

ಎರೆ ಹುಳುಗಳು ಮೇಲೆ-ಕೆಳಗೆ ಹೋಗಿ ಬಂದು ಮಾಡುವಾಗ ರಂಧ್ರಗಳು ಏರ್ಪಡುತ್ತವೆ. ಆ ರಂಧ್ರಗಳು ಮುಚ್ಚುವುದಿಲ್ಲ ಹಾಗೆ ಮೇಲೆ-ಕೆಳಗೆ ಹೋಗಿ ಬರುವಾಗ ಎರೆಹುಳುಗಳ ಶರೀರದಿಂದ ಕೆಲವು ರಾಸಾಯನಿಕಗಳು ಹೊರ ಬಂದು ರಂಧ್ರದ ಗೋಡೆಗಳಿಗೆ ಲೇಪನಗೊಳ್ಳುತ್ತವೆ. ಎರೆಹುಳು ಸ್ರವಿಸುವ ರಾಸಾಯನಿಕಗಳಲ್ಲಿ ಎಲ್ಲ ಬಗೆಯ ಆಲ್ಕಲೈನ್‌ಗಳು, ಎಲ್ಲ ಬಗೆಯ ಗ್ರೋತ್ ಹಾರ್ಮೋನ್‌ಗಳು, ಎಲ್ಲ ಬಗೆಯ ಅಮಿನೊ ಆಮ್ಲಗಳು ಇರುತ್ತವೆ. ಇವು ಗಿಡದ ಬೆಳವಣಿಗೆಗೆ ನೆರವಾಗುತ್ತವೆ. ಸಸ್ಯ ಈ ರಂಧ್ರಗಳಲ್ಲಿ ಬೇರು ಬಿಟ್ಟಾಗ-ಆ ಬೇರುಗಳಿಗೆ ಬೇಕಾದ ಪೋಷಕಾಂಶಗಳು, ಸೂಕ್ಷ್ಮ ಅನ್ನ ದ್ರವ್ಯಗಳು ಸಲೀಸಾಗಿ ಸಿಗುತ್ತವೆ. ಎರೆ ಹುಳುಗಳು ಅವಿಶ್ರಾಂತವಾಗಿ ಚಲನೆಯಲ್ಲಿರುವುದರಿಂದ ಭೂಮಿಗೆ ಉಳುಮೆಯ ಅಗತ್ಯವಿರುವುದಿಲ್ಲ. ಗಿಡದ ಬೆಳವಣಿಗೆಯ ಹಿನ್ನೆಲೆಯಲ್ಲಿ ಭೂಮಿಯು ನಿರಂತರವಾಗಿ ಉಳುಮೆಗೊಳಗಾಗುತ್ತಲೇ ಇರುತ್ತದೆ. ಸಾಂಪ್ರದಾಯಿಕ ಕೃಷಿಯ ವಾತಾವರಣದಲ್ಲಿ ಎಷ್ಟೇ ರಭಸದ ಮಳೆ ಬಂದರೂ ಮಣ್ಣು ಕೊಚ್ಚಿ ಹೋಗುವುದಿಲ್ಲ. ಮೇಲ್ಮೈ ಬಿದ್ದ ಮಳೆ ನೀರೆಲ್ಲ ರಂಧ್ರಗಳ ಮೂಲಕ ಸರಾಗವಾಗಿ ಸಾಗಿ ಅಂತರ್ಜಲ ವಲಯವನ್ನು ಪ್ರವೇಶಿಸುತ್ತದೆ. ಸಾವಯವ/ರಸಾಯನಿಕ ಕೃಷಿಗಳಲ್ಲಾದರೆ ಮಣ್ಣೆಲ್ಲ ಕೊಚ್ಚಿ ಹೋಗಿ-ಹರಿವ ನೀರು ರಾಡಿಯಾಗುವುದನ್ನೂ ನಾವು ಗಮನಿಸಬಹುದು. ಸಾಂಪ್ರದಾಯಿಕ ಕೃಷಿಯಲ್ಲಿ

ಮಣ್ಣು ಸವಕಳಿಯಾಗುವುದಿಲ್ಲ. ಯಾಕೆಂದರೆ ಮಳೆ ನೀರಿಗೆ ಎರೆ ಹುಳುಗಳ ವಿಸರ್ಜನೆ ಕರಗುವುದಿಲ್ಲ. ಬದಲಾಗಿ ವರ್ಷ ವರ್ಷವೂ ಮೇಲ್ಮಣ್ಣು ವೃದ್ಧಿಯಾಗುತ್ತಾ ಹೋಗುತ್ತದೆ.

ದೇಸೀ ಎರೆಹುಳು ವಿಸರ್ಜನೆಯಲ್ಲಿ ಇತರ ಎರೆಹುಳುಗಳ ವಿಸರ್ಜನೆಗಿಂತ ಹೆಚ್ಚಿನ ಅಂದರೆ ಹನ್ನೊಂದು ಪಟ್ಟು ಪೊಟ್ಯಾಶ್, ಒಂಭತ್ತು ಪಟ್ಟು ರಂಜಕ, ಏಳು ಪಟ್ಟು ನೈಟ್ರೋಜನ್, ಒಂಭತ್ತು ಪಟ್ಟು ಗಂಧಕ, ಹತ್ತು ಪಟ್ಟು ಮ್ಯಾಗ್ನೇಷಿಯಂ, ಎಂಟು ಪಟ್ಟು ಸುಣ್ಣ, ಹತ್ತು ಪಟ್ಟು ಇನ್ನಿತರ ಪೋಷಕಾಂಶಗಳು ಇರುತ್ತವೆ.

ಎರೆಹುಳುಗಳು ಬೆಳಕಿನಲ್ಲಿ ಕೆಲಸ ಮಾಡುವುದಿಲ್ಲ ಅಂತೆಯೇ ಜೀವಾಣುಗಳು ಕೂಡ. ಎರೆಹುಳುಗಳಾಗಲಿ; ಜೀವಾಣುಗಳಾಗಿರಲಿ–ಅವೆಲ್ಲವೂ ಕ್ರಿಯಾಶೀಲವಾಗಿರಲು ಒಂದು ನಿರ್ಧಿಷ್ಟ ಬಗೆಯ ವಾತಾವರಣವಿರಬೇಕು. ಉದಾಹರಣೆಗೆ ಕಬ್ಬಿನ ಸಾಲುಗಳ ನಡುವೆ ಗಾಳಿ ಆಡುವಂತಿರಬೇಕು. ಆ ಬೆಳೆಯ ಒಳ ಆವರಣದ ಉಷ್ಣಾಂಶ ೨೫□ ಯಿಂದ ೩೨□ ಇರಬೇಕು. ಅಲ್ಲಿ ಶೇಕಡ ೬೫ ರಿಂದ ೭೨ ರಷ್ಟು HUMIDITY ಇರಬೇಕು. ಮೇಲ್ಮಣ್ಣು ಸಾಧ್ಯವಾದಷ್ಟು ನೆರಳಿನಿಂದ ಆವರಿಸಿಕೊಂಡಿರಬೇಕು. ಈ ನೆರಳು ಧೈರ್ಯ, ವಿಶ್ವಾಸ, ಭರವಸೆಗಳ ಪ್ರತೀಕವಾಗಿರಬೇಕು.., ಇಂಥಲ್ಲಿ; ತಾಯಿ ಮಡಿಲಲ್ಲಿ ನಿಶ್ಚಿಂತ ಕಂದಮ್ಮನಿರುವ ಹಾಗೆ ಈ ಎರೆಹುಳುಗಳು, ಸೂಕ್ಷ್ಮ ಜೀವಾಣುಗಳು ಸಮೃದ್ಧ ಸ್ಥಿತಿಯಲ್ಲಿರುತ್ತವೆ.

ದೇಸೀ ಕೃಷಿಯಲ್ಲಿ ವೈವಿಧ್ಯಮಯ ಬೆಳೆಗಳು ಇರುತ್ತಿದ್ದವು. ಉದಾಹರಣೆಗೆ ರಾಗಿ ಹೊಲದಲ್ಲಿ ಹಬ್ಬುವ ಅಲಸಂದೆ, ಅವರೆ ಸಾಲುಗಳು. ಇವು ಭೂಮಿಗೆ ಮುಚ್ಚಿಗೆಯಾಗಿಯು ಕೆಲಸ ಮಾಡುತ್ತಿದ್ದವು. ಬೆಳೆಗಳಿಗೆ ಸಾರಜನಕವನ್ನು ಪೂರೈಸುತ್ತಿದ್ದವು. ಇಂಥ ವಾತಾವರಣದಲ್ಲಿ ಎರೆಹುಳುಗಳು ನಿಶ್ಚಿಂತೆಯಿಂದ ಕೆಲಸ ಮಾಡುತ್ತಿದ್ದವು.

ಎರೆಗೊಬ್ಬರದ ಅನಾಹುತ:

ಆಧುನಿಕ ಸಾವಯವ ಕೃಷಿಕರು ಎರೆಹುಳುಗಳನ್ನೂ ಕೃತಕವಾಗಿ ಸಾಕುತ್ತಾರೆ. ಎರಡರಿಂದ ನಾಲ್ಕು ಅಡಿ ಎತ್ತರದ, ಆರರಿಂದ ಎಂಟು ಅಡಿ ಉದ್ದದ (ಕೆಲವರು ಇದರ ಉದ್ದ, ಅಗಲ, ಎತ್ತರಗಳನ್ನು ವಿಸ್ತರಿಸಿಕೊಳ್ಳುತ್ತಾರೆ) ಸೀಮೆಂಟು ತೊಟ್ಟಿಗಳನ್ನು ಕಟ್ಟಿಕೊಳ್ಳುತ್ತಾರೆ [ಈ ಎರೆಹುಳು ತೊಟ್ಟಿ ನಿರ್ಮಾಣಕ್ಕೆ ಸರಕಾರ ಇಪ್ಪತ್ತೈದು ಸಾವಿರ ರೂಗಳವರೆಗೆ ಪ್ರೋತ್ಸಾಹಧನ ಕೂಡ ನೀಡುತ್ತಿದೆ) ತಮ್ಮ ಜಮೀನುಗಳಲ್ಲಿರುವ ಎಲ್ಲ ಬಗೆಯ ಕೃಷಿ ತ್ಯಾಜ್ಯಗಳನ್ನು ಒಂದೆಡೆ ಗುಡ್ಡೆ ಹಾಕಿಕೊಂಡಿರುತ್ತಾರೆ: ಜಾನುವಾರುಗಳ ಗೊಬ್ಬರವನ್ನು ಕೂಡ ಸಿದ್ಧಮಾಡಿಕೊಂಡಿರುತ್ತಾರೆ: ಬೇಲಿಯಲ್ಲಿ ಬೆಳೆದ ಸೊಪ್ಪು, ಗಿಡಗಂಟಿಗಳನ್ನೆಲ್ಲ ತಂದು ಒಂದೆಡೆ ಗುಡ್ಡೆ ಹಾಕಿಕೊಳ್ಳುತ್ತಾರೆ.

ಇನ್ನು ಇವರು ಸಾಕುವ ಎರೆಹುಳುಗಳು:

೧. ಐಸೀನಿಯಾ ಫೀಟಿಡಾ.

೨. ಯೂಡ್ರಿಲಸ್ ಯುಜೀನಿಯಾ.

೩. ಪೆರಿಯೋನಿಕ್ಸ್ ಎಕ್ಸ್‌ಕವೇಟಸ್.

೪. ಪೆರಿಯೋನಿಕ್ಸ್ ಸ್ಯಾಂಸಿಬ್ಯಾರಿಕಸ್..

ಮುಂತಾಗಿ ಈ ಎರೆಹುಳುಗಳನ್ನು ಸರ್ಫೇಸ್ ಫೀಡರ್ ವರ್ಮ್ಸ್ ಅಂತಲೂ ಕರೆಯುತ್ತಾರೆ. ಅಂದರೆ ಈ ಎರೆಹುಳುಗಳು ಭೂ ಮೇಲ್ಮೈಯಲ್ಲಿರುವ ಕೃಷಿ ತ್ಯಾಜ್ಯಗಳನ್ನು ಮಾತ್ರ ತಿನ್ನುತ್ತವೆ. ಅಲ್ಲಿ ಕೃಷಿ ತ್ಯಾಜ್ಯವಿಲ್ಲದಿದ್ದರೆ–ಬೇರೆಡೆಗೆ ಸಂಚರಿಸುತ್ತವೆ.

ಎರೆಹುಳು ಗೊಬ್ಬರ ತಯಾರು ಮಾಡಲು ಒಂದೂವರೆ ತಿಂಗಳಿನಿಂದ ಮೂರು ತಿಂಗಳ ಅವಧಿ ಬೇಕು. ಒಂದು ಪ್ರಮಾಣದಲ್ಲಿ ಕೃಷಿ ತ್ಯಾಜ್ಯಗಳನ್ನು ಹಾಕಿ ನಂತರ ಒಂದು ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ ಹಾಕಿ ಪುನಃ ಒಂದು ಪ್ರಮಾಣದಲ್ಲಿ ಕೃಷಿ ತ್ಯಾಜ್ಯ ಮತ್ತು ಗೊಬ್ಬರಗಳನ್ನು ತುಂಬಿ ನಂತರ ೨ರಿಂದ ೩ಕೆ.ಜಿ ಎರೆಹುಳು ಬಿಡಲಾಗುತ್ತದೆ. ತೊಟ್ಟಿಯ ಸುತ್ತ ಇರುವೆಗಳು ಹಾದು ಬಾರದ ಹಾಗೆ ನೀರಿನ ಕಟ್ಟೆ ನಿರ್ಮಿಸಿ–ತೊಟ್ಟಿಯ ಮೇಲ್ಭಾಗದಿಂದ ಹೆಗ್ಗಣ ಮತ್ತು ಬೆಕ್ಕುಗಳು ಬಾರದ ಹಾಗೆ ಮುಳ್ಳು ಕಡ್ಡಿಗಳನ್ನು ತುಂಬಲಾಗುತ್ತದೆ. ಪ್ರತಿ ಹದಿನೈದು ದಿನಕೊಮ್ಮೆ ತೊಟ್ಟಿಯನ್ನು ಕೆದಕಿ ಉಷ್ಣಾಂಶ ಸಾಮಾನ್ಯವಾಗಿರುವಂತೆ ನೋಡಿಕೊಳ್ಳಬೇಕಾಗಿರುತ್ತದೆ. ಮತ್ತು ಉಷ್ಣಾಂಶ, ತೇವಾಂಶಗಳನ್ನು ನಿರ್ಧಿಷ್ಟ ಮಟ್ಟದಲ್ಲಿ ಕಾಪಾಡಲು ಆಗ್ಗಾಗೆ ನೀರು ಸಿಂಪಡಿಸಬೇಕಾಗುತ್ತದೆ. ಇದು ಎರೆಗೊಬ್ಬರ ತಯಾರು ಮಾಡುವ ವಿಧಾನ.

ಅರವತ್ತರಿಂದ ೯೦ ದಿವಸಗಳಲ್ಲಿ ಎರೆಗೊಬ್ಬರ ಬಳಸಲು ಸಿದ್ಧವಾಗುತ್ತದೆ. ಸಾವಯವ ಕೃಷಿಕರು ಒಂದು ಎಕರೆ ಭೂಮಿಗೆ ೨ ರಿಂದ ೪ಟನ್ ಎರೆಗೊಬ್ಬರ ನೀಡುತ್ತಾರೆ. ಈ ಎರೆಗೊಬ್ಬರದ ಮಾರುಕಟ್ಟೆಯ ಬೆಲೆ ಇಪ್ಪತ್ತು ಸಾವಿರ ರೂಪಾಯಿಯಿಂದ ನಲವತ್ತು ಸಾವಿರ ರೂಪಾಯಿಯವರೆಗೂ ಇರುತ್ತದೆ.

ಈ ಎರೆಗೊಬ್ಬರದ ಪರಿಣಾಮ ಗಮನಿಸೋಣ:

೧. ಪ್ರಪಂಚದ ಯಾವ ಜೀವಿಯೂ ತನ್ನ ಮಲವನ್ನು ತಾನೇ ತಿನ್ನುವುದಿಲ್ಲ.

೨. ಬೇರೆ ದೇಶಗಳಿಂದ ಎರೆಹುಳು ತಂದು, ಅವುಗಳ ಸಂತತಿ ಅಭಿವೃದ್ಧಿ ಮಾಡಿ: ಅವುಗಳ ವಿಸರ್ಜನೆಯನ್ನು ನಮ್ಮ ಜಮೀನಿಗೆ ಹಾಕಿದರೆ ನಮ್ಮ

ಜಮೀನ ಎರೆಹುಳುಗಳು ಕೆಲಸ ಮಾಡುವುದಿಲ್ಲ. ಅವು ಭೂಮಿಯ ೨೫ ಅಡಿ ಆಳದಲ್ಲಿ ಹೋಗಿ ನಿಷ್ಕ್ರಿಯವಾಗಿ ಇದ್ದು ಬಿಡುತ್ತವೆ.

೩. ಹೀಗೆ ದೇಸಿ ಎರೆಹುಳುಗಳು ನಿಷ್ಕ್ರಿಯವಾದರೆ, ಮಣ್ಣುಗಳಲ್ಲಿ ರಂಧ್ರಗಳೇರ್ಪಡುವುದಿಲ್ಲ. ರಂಧ್ರಗಳೇರ್ಪಡದಿದ್ದರೆ ಬಿದ್ದ ನೀರು ಇಂಗುವುದಿಲ್ಲ. ಬಿದ್ದ ನೀರು ಇಂಗದಿದ್ದರೆ ಜಲದ ಮರು ಪೂರಣ ಆಗುವುದಿಲ್ಲ. ಜಲದ ಮರುಪೂರಣ ಆಗದಿದ್ದರೆ: ಭೂ ಮೇಲ್ಭಾಗದಲ್ಲಿ ತೇವಾಂಶ ಹೆಚ್ಚಾದಾಗ-ಭೂಮಿಯ ತಳ ಭಾಗದಿಂದ ತೇವಾಂಶ ಒದಗಿ ಬರುವುದಿಲ್ಲ. ಹೀಗಾದಾಗ ಬೆಳೆಗಳು ಒಣಗುತ್ತವೆ, ಇಳುವರಿ ಕುಸಿಯುತ್ತದೆ ಜೀವಾಣುಗಳು ಬಾಧೆಗೊಳಗಾಗುತ್ತವೆ.

೪. ಬೇಸಾಯ ಭೂಮಿಯ ಕೃಷಿ ತ್ಯಾಜ್ಯಗಳು ಅಲ್ಲಲ್ಲಿಯೇ ಉಳಿಯುವುದರಿಂದ ಭೂಮಿಗೆ ಮುಚ್ಚಿಗೆಯಾಗಿ ಕೆಲಸ ಮಾಡುತ್ತವೆ. ಯಾವಾಗ ಭುಮಿಗೆ ಸಾಕಷ್ಟು ತ್ಯಾಜ್ಯಗಳ ಮುಚ್ಚಿಗೆ ಲಭ್ಯವಿರುವುದೊ ಅಲ್ಲಿಯವರೆಗೆ ಮಣ್ಣಿನ ಜೀವಾಣುಗಳು, ಎರೆಹುಳುಗಳು ಕೆಲಸಮಾಡುವ ವಾತಾವರಣ ನಿರ್ಮಾಣವಾಗುತ್ತದೆ. ಒಂದು ವೇಳೆ ಕೃಷಿ ತ್ಯಾಜ್ಯಗಳೆಲ್ಲವನ್ನು ತಂದು ಎರೆ ಗೊಬ್ಬರದ ತೊಟ್ಟಿಗೆ ಹಾಕಿದರೆ-ಆ ಕ್ಷಣವೆ ಭೂಮಿಯ ಕುತ್ತಿಗೆ ಹಿಂಡೋ ಕೆಲಸ ಜಾರಿಯಾಯಿತು ಎಂತಲೇ ಅರ್ಥ. ಮತ್ತು ಯಾವಾಗ ನಾವು ಸಿದ್ಧವಾದ ಎರೆಗೊಬ್ಬರವನ್ನು ಬೆಳೆ ಬೆಳೆವ ಜಮೀನಿಗೆ ಹಾಕಿದೆವೊ ಆಗ ಭೂಮಿಯನ್ನು ಉಸಿರು ಕಟ್ಟುವಂತೆ ಮಾಡಿದೆವೆಂದೇ ಅರ್ಥ.

೫. ಎರೆಹುಳು ಗೊಬ್ಬರ ಹಾಕಿದ್ದರಿಂದಾಗಿ ಇಳುವರಿ ಹೆಚ್ಚಾಯಿತು ಅನ್ನುವ ಉದಾಹರಣೆ ನಮ್ಮ ದೇಶದಲ್ಲಿ ಈವರೆಗೂ ಸಿಕ್ಕಿಲ್ಲ.

೬. ಎರೆಹುಳು ಗೊಬ್ಬರ ಬಳಸದೆ; ಕೆವಲ ಕೊಟ್ಟಿಗೆ ಗೊಬ್ಬರ ಬಳಸುವೆಡೆ ಇಳುವರಿ ಉತ್ತಮವಾಗಿದೆ.

೭. ಎರೆ ಗೊಬ್ಬರದಿಂದಾಗಿ ಅನಗತ್ಯ ಖರ್ಚು, ಅನಗತ್ಯ ಶ್ರಮ, ಅನಗತ್ಯ ಸಮಯದ ವ್ಯರ್ಥ, ಭೂಮಿಯ ಜೀವಂತಿಕೆಯ ನಾಶ, ಇಳುವರಿ ಕಡಿಮೆ, ಅಂತರ್ಜಲ ನಾಶ, ತಾಪಮಾನದಲ್ಲಿ ವ್ಯತ್ಯಾಸ ಇಷ್ಟೆಲ್ಲದರ ನಡುವೆ ರೋಗಗಳ ಹೆಚ್ಚಳ.

ಅಂತಿಮವಾಗಿ ಎರೆಗೊಬ್ಬರದ ದುಷ್ಪರಿಣಾಮದ ಬಗ್ಗೆ ಇರುವ ವೈಜ್ಞಾನಿಕ ಮಾಹಿತಿಯನ್ನು ಗಮನಿಸೋಣ. ಎರೆಹುಳಗಳ ಜೀವನವನ್ನು ಅಧ್ಯಯನ ಮಾಡಿರುವ ಡಾ॥ರಾಧಾ.ಡಿ. ಕಾಳೆ-ಪ್ರಾಧ್ಯಾಪಕರು (ಕೀಟಶಾಸ್ತ್ರ ವಿಭಾಗ) ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ-ಬೆಂಗಳೂರು-ಅವರ ಪ್ರಕಾರ ಐಸೀನಿಯಾಫೀಟಿಡಾ, ಯೂಡ್ರಿಲಸ್

ಯುಜೀನಿಯಾ, ಪೆರಿಯೋನಿಕ್ಸ್ ಎಕ್ಸ್‌ಕವೇಟಸ್ ಮತ್ತು ಪೆರಿಯೋನಿಕ್ಸ್ ಸ್ಯಾಂಸಿಬ್ಯಾರಿಕಸ್ ಎರೆಹುಳುಗಳು. ಕೀಟನಾಶಕವಾಗಿ, ಕಳೆನಾಶಕವಾಗಿ ಬಳಸುವ ಔಷಧಗಳು (ಕೃಷಿ ವಿಶ್ವವಿದ್ಯಾನಿಲಯದ ಎಲ್ಲ ವಿಜ್ಞಾನಿಗಳು ವಿಷಗಳಿಗೆ ಔಷಧ ಎಂತಲೇ ಕರೆಯುವುದು. ಜೀವವುಳಿಸಲು ಇರುವವುಗಳನ್ನು ಔಷಧ ಎಂತಲೂ: ಜೀವ ತೆಗೆಯುವಂಥವನ್ನು ವಿಷವೆಂತಲೂ ಕರೆಯುವುದು ಸಾಮಾನ್ಯ ರೂಢಿ. ಆದರೆ ಹಸಿರು ಕ್ರಾಂತಿಯ ಆರಂಭದಿಂದಲೂ. ಕೃಷಿ ವಿಜ್ಞಾನಿಗಳು ವಿಷಗಳನ್ನು ಔಷಧಿ ಎಂಬುದಾಗಿ ಕರೆದೂ, ಕರೆದೂ–ರೈತರೂ ಅವನ್ನು ಔಷಧಿ ಎಂದು ಕರೆಯುವುದು ರೂಢಿಯಾಗಿದೆ) ಈ ಎರೆಹುಳುಗಳ ದೇಹ ಪ್ರವೇಶಿಸಿದಾಗ ಅವುಗಳ ವಿಷದ ಪ್ರಭಾವ ಕುಂದುತ್ತದೆ. ಹಾಗೆಯೇ ತಾಮ್ರ, ಸತು, ಮ್ಯಾಂಗನೀಸ್, ಸೀಸ, ಕಬ್ಬಿಣ ಮತ್ತು ಕ್ಯಾಡ್ಮಿಯಂ ನಂತಹ ಮತ್ತಿತರ ಘನ ಖನಿಜಾಂಶವನ್ನು ತನ್ನ ಕರುಳಿನ ಸುತ್ತಲೂ ಹರಡಿರುವ ಕೋಶಗಳಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಈ ಎರೆಹುಳುಗಳು ಹೊಂದಿವೆ. ಎರೆಹುಳುಗಳ ಈ ಶಕ್ತಿ ಕ್ಯಾಡ್ಮಿಯಂ ನಂತಹ ಖನಿಜಾಂಶಗಳು ನೀರು ಮತ್ತು ಮಣ್ಣಿನಲ್ಲಿ ಸೇರುವುವನ್ನು ತಡೆಗಟ್ಟಲು ತುಂಬಾ ಉಪಯೋಗವಾಗುತ್ತದೆ. ಆದರೆ ಇವುಗಳನ್ನು ಬೇರೆ ಮೃಗ ಪಕ್ಷಿಗಳು ತಿಂದರೂ ಅಪಾಯಕರ. ಆದುದರಿಂದ ಇವುಗಳನ್ನು ನಾಶಮಾಡಬೇಕಾಗುವುದು ಎನ್ನುತ್ತಾರೆ.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ ಏನೆಂದರೆ: ಸಾವಯವ ರೈತರಿಗೆ ಸೀಸ ಯಾವುದು? ಕ್ಯಾಡ್ಮಿಯಂ ಯಾವುದು ಎಂದು ಹೇಗೆ ಗೊತ್ತಾಗುತ್ತದೆ? ಸೀಸ ಮತ್ತು ಕ್ಯಾಡ್ಮಿಯಂ ಎರೆಹುಳು ವಿಷರ್ಜನೆಯಿಂದಾಗಿ ಅದು ಬೆಳೆಯುವ ಬೆಳೆಯಲ್ಲಿ ಪ್ರವೇಶ ಪಡೆಯುತ್ತದೆ, ಅಂತಿಮವಾಗಿ ಫಲದಲ್ಲಿ ತುಂಬಿ ಕಡೆಗೆ ಊಟದ ತಟ್ಟೆಯನ್ನೂ ಪ್ರವೇಶಿಸುತ್ತದೆ–ಕ್ಯಾಡ್ಮಿಯಂ–ಸೀಸ ಮಿಶ್ರಿತ ಊಟ ಉಂಡವರಲ್ಲಿ ಕ್ಯಾನ್ಸರ್ ಕಟ್ಟಿಟ್ಟ ಬುತ್ತಿ ಸರ್ಟಿಫೈಡ್ ಸಾವಯವ ಪದ್ಧತಿಯಲ್ಲಿ ಬೆಳೆದ ಆಹಾರ ತಿಂದರೂ ಕ್ಯಾನ್ಸರ್ ಬಂತು ಅಂದರೆ–ಅದಕ್ಕೆ ನೇರ ಕಾರಣ ಎರೆಗೊಬ್ಬರ!

ಹೆಚ್ಚಿನ ಮಾಹಿತಿಗೆ ಡಾ॥ ರಾಧಾ.ಡಿ. ಕಾಳೆ ಅವರ "ಎರೆಗೊಬ್ಬರ –ಖರೇ ಗೊಬ್ಬರ" ಕೃತಿಯನ್ನು ಗಮನಿಸಬಹುದು. ಇದೇ ಕೃತಿಯಲ್ಲಿ ಇರುವೆಗಳ ತಜ್ಞ ಪ್ರೊ॥ ಮುಶ್ತಾಖ್ ಅಲಿಯವರ ಹೇಳಿಕೆಯೂ ಒಂದಿದೆ. ಅದು ಇಂತಿದೆ.[9] 'ಕೆಲವು ಎರೆಹುಳು ಸಾಕಾಣಿಕಾ ಕೇಂದ್ರಗಳಲ್ಲಿ ಇರುವೆಗಳ ಹಾವಳಿಯು ಕಂಡು ಬಂದಿದೆ. ಇವು ಸೇನಾ ಇರುವೆಗಳು (ARMY ANTS) ಇವು ಭೂಮಿಯಲ್ಲಿ ಅತಿ ಆಳದಲ್ಲಿರುವುದರಿಂದ ಇವುಗಳ ಗೂಡು ಎಲ್ಲಿರುವುದು ಎಂಬುದು ಇಲ್ಲಿಯವರೆಗೆ ತಿಳಿದು ಬಂದಿಲ್ಲ. ಇವು ಸಾವಿರಾರು ಸಂಖ್ಯೆಯಲ್ಲಿ ಹೊರ ಬರುವವು ಮತ್ತು ಗುಂಪಿನಲ್ಲಿರುವವು. ತೊಟ್ಟಿಯಲ್ಲಿ ಎಲ್ಲಾದರೂ ಇರುವ, ಎರಡು ಮಿ.ಮೀ. ನಷ್ಟು ಸಂದಿನಲ್ಲಿಯೂ ಕೂಡ ಈ ಇರುವೆಗಳು ತೂರಿ ಬರಬಹುದು. ಎರೆಹುಳುಗಳು ಇರುವ ತೊಟ್ಟಿಯಲ್ಲಿ ಇಂಥ ರಂಧ್ರ ಇದ್ದ ಪಕ್ಷದಲ್ಲಿ ಇವು ಸುಲಭವಾಗಿ ತೊಟ್ಟಿಯಲ್ಲಿ

ಸೇರಿ ಎರೆಹುಳುಗಳನ್ನು ತಿನ್ನಲಾರಂಭಿಸುವವು. ಇವು ತೊಟ್ಟಿಯ ತಳ ಭಾಗದಿಂದ ಒಳ ಹೊಕ್ಕುವುದರಿಂದ ಮೊದ ಮೊದಲು ಇವುಗಳ ದಾಳಿ ತಿಳಿಯುವುದಿಲ್ಲ. ಕ್ರಮೇಣ ಎರೆಹುಳುಗಳ ಸಂಖ್ಯೆ ಕ್ಷೀಣಿಸಿದಂತೆ ಈ ಶತ್ರುಗಳು ಕಣ್ಣಿಗೆ ಬೀಳುವವು. ಇವುಗಳನ್ನು ತಡೆಗಟ್ಟಲೂ ಸಧ್ಯಕ್ಕೆ ಇರುವುದೊಂದೇ ಮಾರ್ಗ–ತೊಟ್ಟಿಗಳ ಸುತ್ತಲೂ ಒಂದು ಅಡಿ ಬಿಟ್ಟು ಸುಮಾರು ಒಂಭತ್ತು ಅಂಗುಲ ಅಗಲ ಮತ್ತು ಒಂಭತ್ತು ಅಂಗುಲ ಆಳದ ಕಾಲುವೆಯನ್ನು ಮಾಡಬೇಕು. ಮತ್ತೆ ಈ ಕಾಲುವೆಯಲ್ಲಿ ಅಲ್ಲಲ್ಲಿ ಹಾರೆಯಿಂದ ೬ ರಿಂದ ೧೫ ಅಂಗುಲ ಆಳದ ಸುಮಾರು ಮೂರು/ನಾಲ್ಕು ಅಂಗುಲ ವ್ಯಾಸದ ರಂಧ್ರಗಳನ್ನು ಅಗೆಯಬೇಕು. ಕ್ಲೋರೋ ಪೈರಿಫಾಸ್–೨೦ (CHLORPYREPHOS - 20) ಎಂಬ ಔಷಧಿಯನ್ನು [ಇವರು ಕೂಡ ಕೃಷಿ ವಿಜ್ಞಾನಿ. ಕ್ಲೋರೋ ಪೈರಿ ಫಾಸ್‌ನಂತ ತೀಕ್ಷ್ಣ ವಿಷಕ್ಕೆ "ಔಷಧಿ" ಎಂದೇ ಕರೆದಿದ್ದಾರೆ] ಒಂದು ಲೀಟರ್ ನೀರಿಗೆ ೧೫ ಮಿ.ಲೀ. ಪ್ರಮಾಣದಲ್ಲಿ ಬೆರೆಸಿ, ಒಂದು ರೋಸ್ ಕ್ಯಾನ್‌ನಲ್ಲಿ ತುಂಬಿಸಿಕೊಂಡು ಸುತ್ತಲೂ ಕಾಲುವೆಯಲ್ಲಿ ಮಾಡಿರುವ ರಂಧ್ರಗಳಲ್ಲಿ ಸುರಿದು ನಂತರ ಕಾಲುವೆಯನ್ನು ಮಣ್ಣಿನಿಂದ ಮುಚ್ಚಿಡಬೇಕು. ಈ ಇರುವೆಗಳು ಎಲ್ಲಿ ಗೂಡು ರಚಿಸಿರುವವು ಎಂಬುದರ ಅರಿವಾಗದ ಕಾರಣ ಈ ವಿಧವಾದ ಸಂಸ್ಕರಣೆಯನ್ನು ಅನುಸರಿಸ ಬೇಕಾಗುವುದು. ಸಾವಯವವಾಗಿ ಹತೋಟಿಯ ಮಾರ್ಗ ದೊರಕಿಲ್ಲದ ಕಾರಣ ಔಷಧಿಯ ನೆರವು ಸಧ್ಯಕ್ಕೆ ಪಡೆಯಬೇಕಾಗಿರುವುದು."

ಅಂದರೆ ಇವರ ಒಂದು ಸಾವಯವ ವಿಧಾನದ ರಕ್ಷಣೆಗೂ ರಸಾಯನಿಕ ವಿಷದ ಮೊರೆ ಹೋಗುವುದು ಇವರ ಮಾರ್ಗ. ಎಷ್ಟೋ ಕಡೆ ARMY ANTS ಇವೆ ಅಂತ ಗೊತ್ತಾಗುವುದೇ ಅವು ಎರೆಹುಳುಗಳನ್ನು ಸಂಪೂರ್ಣವಾಗಿ ಭಕ್ಷಿಸಿದ ಮೇಲೆಯೆ. ಇಷ್ಟಾದರೂ ಭೂಮಿಯ ಆಳದಲ್ಲಿ ಅವುಗಳ ಗೂಡು ಎಲ್ಲಿದೆ ಅಂತ ಈವರೆಗೂ ಪತ್ತೆ ಆಗಿಲ್ಲ. ಅಂದರೆ ಇದರ ನಿಗೂಢ ವಾಸ್ತವದ ಅರ್ಥ ವಾದರೂ ಏನು? ಇದರ ಅರ್ಥವನ್ನು ಸರಳವಾಗಿ ಹೀಗೆ ಹೇಳಬಹುದು. ಎರೆಹುಳು ಸಾಕಾಣಿಕೆಯ ಸಾವಯವ ಕೃಷಿ–ನಿಸರ್ಗ ವಿರೋಧವಾದದ್ದು. ಸೃಷ್ಟಿಗೆ ವಿರುದ್ಧವಾದ ಯಾವುದನ್ನೂ ಸೃಷ್ಟಿ ಉಳಿಸಗೊಡುವುದಿಲ್ಲ. ಸೃಷ್ಟಿಯ ಈ ಕೌಶಲ್ಯವನ್ನು ನಮ್ಮ ವಿಜ್ಞಾನಿ ಪ್ರೊ.ಮುಶ್ತಾಖ್ ಅಲಿಯವರು ಕ್ಲೋರೋಪೈರಿಫಾಸ್–೨೦ರ ಮೂಲಕ ಹಣಿಯಲು ಹೊರಟಿದ್ದಾರೆ. ಆದರೆ ಕ್ಲೋರೋ ಪೈರಿಫಾಸ್ – ೨೦ ಎಂಬ ತೀಕ್ಷ್ಣ ವಿಷ ಹಾಕುವವರನ್ನೆ ಬಲಿ ತೆಗೆದುಕೊಳ್ಳುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಯಾವಾಗ?

ಎರಡು ಸಾವಿರ ವರ್ಷಗಳ ಹಿಂದೆ ಅರಿಸ್ಟಾಟಲ್ ಎರೆಹುಳುಗಳನ್ನು Intestine of the earth ಎಂದು ಕರೆದಿದ್ದಾರೆ (ಭೂಮಿಯ ಕರುಳು) ೧೮೮೧ರ

ಚಾರ್ಲ್ಸ್ ಡಾರ್ವಿನ್‌ರ ವಿಶ್ವವಿಖ್ಯಾತ ಕೃತಿ "THE FORMATION OF VEGETABLE MOULD THROUGH THE ACTION OF WORMS" ಕೃತಿಯಲ್ಲಿ ಎರೆಹುಳುಗಳ ಮಹತ್ವ ಸಾರಿದ್ದಾರೆ. ಅವನ್ನು "ರೈತನ ಬಂಧು" "ನಿಸರ್ಗದ ನೇಗಿಲಯೋಗಿ" ಎಂದು ಕರೆದಿದ್ದಾರೆ. ಅಂಥ ಎರೆಹುಳುಗಳನ್ನು ನಮ್ಮ ದೇಸೀ ಕೃಷಿಯ ರೈತರು ತಮ್ಮ ಜಮೀನುಗಳಲ್ಲಿ ಸಮೃದ್ಧವಾಗಿರುವಂತೆ ನೋಡಿಕೊಂಡಿದ್ದರು. ಆದರೆ ಸಾವಯವ ಕೃಷಿ ರೈತರು ಅದನ್ನು ವ್ಯಾಪಾರಿ ದಂಧೆಯಾಗಿಸಲು ಅನೈಸರ್ಗಿಕ ವಿಧಾನಕ್ಕೆ ಶರಣಾದರು. ಆ ಮೂಲಕ ಕೃಷಿ ಭೂಮಿಗಳನ್ನು ಹಾಳು ಮಾಡಿದರು.

೪.೭. ಅಗ್ನಿಹೋತ್ರ:

ಅಗ್ನಿ ಹೋತ್ರ ಕೃಷಿ ಕುರಿತು ಸಾಕಷ್ಟು ಪುಸ್ತಕಗಳು ಬಂದಿವೆ. ಆದರೆ ಅದಕ್ಕೆ ಪೂರಕವಾಗಿ ಯಾವ ಬೆಳೆಯೂ ಬಂದಿಲ್ಲ. ಆದರೂ ನಮ್ಮ ಸಾವಯವ ಕೃಷಿಕರು ಇದನ್ನು ದಾಟಿ ಮುಂದೆ ಹೋಗುತ್ತಿಲ್ಲ.

"ಅಗ್ನಿಹೋತ್ರ" ಇದೊಂದು ಪುರಾತನ ವೈದಿಕ ಪದ್ಧತಿ. ವೇದಗಳ ಕಾಲದಲ್ಲಿ ಇದು ಬಳಕೆಯಲ್ಲಿತ್ತು. ಮೂಲತಃ ಅದೊಂದು ಯಾಗಕ್ಕೆ ಸಂಬಂಧಪಟ್ಟ ಆಚರಣೆ. ನಮ್ಮ ಆಧುನಿಕ ಸಾವಯವ ಕೃಷಿಯವರು ನಾವು ದೇಸೀ ಕೃಷಿಕರಿಂದ ಭಿನ್ನವೆಂದು ತೋರ್ಪಡಿಸಿಕೊಳ್ಳಲೆಂಬಂತೆ–ಅಗ್ನಿ ಹೋತ್ರವನ್ನು ಸಂಕ್ಷಿಪ್ತಮಾಡಿ ಆಚರಿಸುತ್ತಾರೆ.

ಬೆಳಿಗ್ಗೆ ಸೂರ್ಯೋದಯವಾಗುವಾಗ ಒಂದು ತಾಮ್ರದ ಪಾತ್ರೆಯಲ್ಲಿ ಐದು ಬೆರಣಿಗಳನ್ನಿಟ್ಟು ಬೆಂಕಿಹತ್ತಿಸಿ ಅದು ಉರಿಯುವಾಗ ಒಂದಿಷ್ಟು ಅಕ್ಕಿಕಾಳು ಮತ್ತು ೨ ಚಮಚ ತುಪ್ಪ ಹಾಕಿ ೨ ಸಂಸ್ಕೃತ ಶ್ಲೋಕ ಹೇಳಿದರೆ ಅಲ್ಲಿಗೆ ಬೆಳಗ್ಗಿನ ಅಗ್ನಿಹೋತ್ರ ಮುಗಿಯಿತು. ಮತ್ತೆ ಸಂಜೆ ಸೂರ್ಯ ಮುಳುಗುವ ಮುನ್ನ ಇದು ಪುನಾಃರವರ್ತನೆಯಾಗುತ್ತದೆ. ಇದನ್ನು ಒಂದು ದಿನವೂ ಬಿಡದೆ ಚಾಚೂ ತಪ್ಪದೆ ವರ್ಷ ಪೂರ್ತಿ ನಡೆಸುತ್ತಾರೆ ಈ ಅಗ್ನಿಹೋತ್ರದ ಬೂದಿಯನ್ನೂ ಜಮೀನಿಗೆ ಎರಚಲಾಗುತ್ತದೆ. ಬರಿಗಣ್ಣಿಗೆ ಮತ್ತು ಮೇಲ್ನೋಟಕ್ಕೆ ಇದರಿಂದ ಆಗಿರುವ ಪ್ರಯೋಜನ ಏನು ಎಂಬುದು ಇದನ್ನು ಹಾಲಿ ಕರ್ನಾಟಕದಲ್ಲಿ ಮಾಡುತ್ತಿರುವ ಯಾರಿಗೂ ಗೊತ್ತಿಲ್ಲ. ಇದರ ಉಪಯುಕ್ತತೆಯನ್ನು ತಿಳಿಯುವ ಯಾವ ವೈಜ್ಞಾನಿಕ ಪ್ರಯೋಗವೂ ಈವರೆಗೆ ಜರುಗಿಲ್ಲ. ಇನ್ನುಳಿದಂತೆ ಬಗೆ ಬಗೆಯ ಕಾಂಪೋಸ್ಟ್ ವಿಧಾನಗಳು ಆಧುನಿಕ ಸಾವಯವ ಕೃಷಿಕರ ಬತ್ತಳಿಕೆಯಲ್ಲಿವೆ. ಈ ಯಾವ ವಿಧಾನವೂ ನಮ್ಮ ಸಾಂಪ್ರದಾಯಿಕ ದೇಸೀ ಕೃಷಿಯಲ್ಲಿ ಆಚರಣೆಯಲ್ಲಿ ಇಲ್ಲ. ಇಂಧೂರ್ ವಿಧಾನ, ಬೆಂಗಳೂರು ವಿಧಾನ, ನೆಡಪ್ ವಿಧಾನ... ಈ ಎಲ್ಲ ವಿಧಾನಗಳು ಆಯಾಯ ಕಾಲಘಟ್ಟದಲ್ಲೆ ಕೃಷಿಕರಿಂದ ತಿರಸ್ಕರಿಸಲ್ಪಟ್ಟಿವೆ. ದೇಸೀ

ಜ್ಞಾನಿಗಳ ಪ್ರಯೋಗ ಶಾಲೆಗಳಲ್ಲಿ ನಿಷ್ಪ್ರಯೋಜಕವೆಂದು ಸಾಬೀತಾದವೆಲ್ಲವನ್ನು ಸಾವಯವ ಕೃಷಿಕರು ತಮ್ಮ ಪ್ಯಾಕೇಜ್ ಆಫ್ ಪ್ರಾಕ್ಟೀಸಸ್‌ನಲ್ಲಿ ಸೇರಿಸಿ ಕೊಂಡಿದ್ದಾರೆ.

ಸಾವಯವ ಕೃಷಿ ಚಳವಳಿಯಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿರುವ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ವಿಶ್ರಾಂತ ಉಪಕುಲಪತಿಗಳೂ ಆಗಿರುವ ಡಾ॥ ಜಿ.ಕೆ.ವೀರೇಶ್‌ರವರು "ಸಾವಯವ ಕೃಷಿ ಏಕೆ? ಹೇಗೆ?" ೨೦೦ ಪುಟಗಳ ಕೃತಿ ರಚಿಸಿದ್ದಾರೆ (ಪ್ರಕಾಶಕರು: ಸಾವಯವ ಕೃಷಿ ಉತ್ತೇಜಕ ಸಂಘ, ಬಳ್ಳಾರಿ ರಸ್ತೆ, ಬೆಂಗಳೂರು-೨೪) ಸದರಿ ಕೃತಿಯಲ್ಲಿ ಮೇಲ್ಕಾಣಿಸಿದ ಕಾಂಪೋಸ್ಟ್ ಗೊಬ್ಬರಗಳ ಕುರಿತಾಗಿ ಏನು ಹೇಳಿದ್ದಾರೆ ಎಂಬುದು ಇಲ್ಲಿ ಮುಖ್ಯ. ಈ ವಿಷಯದಲ್ಲಿ ಅವರು ಅಧಿಕೃತವಾಗಿಯೂ ತಜ್ಞ ವಿಜ್ಞಾನಿ "ಮಣ್ಣಿನ ಫಲವತ್ತತೆಯನ್ನು ವೃದ್ಧಿ ಮಾಡುವಲ್ಲಿ ಕೊಟ್ಟಿಗೆ ಗೊಬ್ಬರ, ಹಟ್ಟಿ ಗೊಬ್ಬರ, ಹಸಿರೆಲೆಗೊಬ್ಬರಗಳನ್ನು ನೇರವಾಗಿ ಭೂಮಿಗೆ ಹಾಕಿದಾಗ ಆಗುವ ಪರಿಣಾಮ ಕಾಂಪೋಸ್ಟಿಗಿಂತ ಉತ್ತಮವೆಂದು ತಿಳಿದಿದೆ. ಮಣ್ಣಿನ ಕಣಗಳ ರಚನೆ, ಅದಕ್ಕೆ ಬೇಕಾಗುವ ಅಂಟು, ಕಾಂಪೋಸ್ಟಿನಿಂದ ದೊರೆಯಲಾರದು. ಕೆಲವು ಪೋಷಕಾಂಶಗಳು ಕೆಲವು ಬೆಳೆಗಳಿಗೆ ನೇರವಾದ ಗೊಬ್ಬರದಿಂದ ದೊರೆಯುವಷ್ಟು ಕಾಂಪೋಸ್ಟ್‌ನಿಂದ ದೊರೆಯಲಾರದೆಂದು ತಿಳಿದಿದೆ. ಎಲ್ಲದಕ್ಕಿಂತಲೂ ಬಹುಮುಖ್ಯವಾದ ತೊಂದರೆ ಎಂದರೆ ಕಾಂಪೋಸ್ಟ್ ಮಾಡುವಾಗ ಬೇಕಾಗಿರುವ ಶ್ರಮ, ಅದಕ್ಕೆ ಬೇಕಾಗಿರುವ ಸಾಮಗ್ರಿಗಳ ಸಂಗ್ರಹಣೆ, ಅವೆಲ್ಲವೂ ಸರಿಯಾಗಿ ಕೊಳೆತು, ಕಳಿತು 'ಹ್ಯೂಮಸ್' ಆಗಬೇಕಾದರೆ ನಿರ್ವಹಿಸಬೇಕಾದ ಗಮನ, ಅಂದರೆ ಜೈವಿಕ ಕ್ರಿಯೆಗೆ ಅಗತ್ಯವಿರುವ ಇಂಗಾಲ-ಆಮ್ಲಜನಕದ ಪ್ರಮಾಣವನ್ನು ಸಮತೋಲನ ಮಾಡಲು ಬೇಕಾಗಿರುವ ಹಸಿರೆಲೆ ಗೊಬ್ಬರ, ತೇವಾಂಶ ಶೇಕಡ ೪೦-೬೦ರ ಮಟ್ಟದಲ್ಲಿ ಕಾಪಾಡುವುದು ಕಾಂಪೋಸ್ಟ್ ಗುಂಡಿಯಲ್ಲಿ ನಿಗದಿತ ಪ್ರಮಾಣದಲ್ಲಿ ಶಾಖವನ್ನು ಕಾಪಾಡುವುದು, ಇದೆಲ್ಲ ಶ್ರಮ ಜೀವಿಗಳಿಗೆ ಸಾಧ್ಯ ಶ್ರಮಕ್ಕೆ ತಕ್ಕಂತೆ ಪ್ರತಿಫಲ "ಕೈ ಕೆಸರಾದರೆ ಬಾಯಿ ಮೊಸರಾಗುವುದು" ಎನ್ನುತ್ತಾರೆ ಜಿ.ಕೆ.ವಿರೇಶ್.

ಇಲ್ಲಿ ಸಹಜವಾದ – ಅಂದರೆ ಸಾಂಪ್ರದಾಯಿಕವಾಗಿ ಬಳಸುತ್ತಿದ್ದ ಕೊಟ್ಟಿಗೆ ಗೊಬ್ಬರ, ಹಟ್ಟಿ ಗೊಬ್ಬರ, ಹಸಿರೆಲೆ ಗೊಬ್ಬರಗಳು ಕಾಂಪೋಸ್ಟ್ ಗೊಬ್ಬರ ಉತ್ತಮ ಎಂದು ಹೇಳುತ್ತಲೇ ಇವರು ಜನ ಬಳಕೆಯಿಂದ ದೂರವಾದ ಪರ್ಯಾಯ ಗೊಬ್ಬರಗಳ ಕುರಿತು ೨೦೦ ಪುಟಗಳ ಪುಸ್ತಕ ಬರೆಯುತ್ತಾರೆ. ಸಮಾಜ ಕೊಟ್ಟ ಅನ್ನ ಮತ್ತು ಜ್ಞಾನವನ್ನು ಸಮಾಜಕ್ಕೆ ವಿರುದ್ಧವಾಗಿ ಮತ್ತು ನಿಸರ್ಗಕ್ಕೆ ವಿರುದ್ಧವಾಗಿ ಬಳಸುವುದು ಅಂದರೆ-ಅದು ಡಾ॥ ಜಿ.ಕೆ.ವಿರೇಶ್‌ರವರೇ ಇರಬೇಕು. ಈ ಕಾರಣಕ್ಕಾಗಿಯೇ ದೇಸೀ ಕೃಷಿಗೆ; ಆ ನಂತರ ರಸಾಯನಿಕ ಕೃಷಿಗೆ ಪರ್ಯಾಯವಾಗಿ ಬಂದ ಸಾವಯವ ಕೃಷಿ ಇಲ್ಲಿ ಅಭಿವೃದ್ಧಿಯಾಗಲೇ ಇಲ್ಲ.

೪.೮. ಬಯೋ ಡೈನಾಮಿಕ್ ವಿಧಾನ:

ಈ ಹಿಂದೆ ಸುರಪಾಲರ ವೃಕ್ಷಾಯುರ್ವೇದವನ್ನು ವಿವರವಾಗಿ ಪರಿಶೀಲಿಸಲಾಗಿದೆ. ದೇಸೀ ಕೃಷಿ ಜ್ಞಾನ ಅರಿಯದವರು ರಾಸಾಯನಿಕ ಕೃಷಿಯಿಂದ ಕಂಗೆಟ್ಟವರು. ಅದರಲ್ಲೂ ಆಧುನಿಕ ಶಿಕ್ಷಣ ಪಡೆದ ವಿದ್ಯಾವಂತರು ಪುನಃ ಪುನಃ ಹಿಂದಿರುಗಿ ನೋಡುವುದು ವೃಕ್ಷಾಯುರ್ವೇದವನ್ನೆ. ಇವರಿಗೆ ಪ್ರಾಯೋಗಿಕ ಜ್ಞಾನ ಇರುವುದಿಲ್ಲ. ಋಷಿಗಳ ಕಾಲ, ವೇದಗಳ ಕಾಲ, ವೃಕ್ಷಾಯುರ್ವೇದ ಎಂದರೆ ಸೆಳೆತ ಹೀಗಾಗಿ ಪ್ರಯೋಗ ಮಾಡಿ, ಮಾಡಿ, ಪತ್ರಿಕೆಗಳಲ್ಲಿ ಬರೆದು ಪ್ರಚಾರ ಪಡೆದು ಕೊಟ್ಟು ಸಾಕಾಗಿ ಹೋಗಿದ್ದಾರೆ.

ಆಸ್ಟ್ರೇಲಿಯಾದ ಆಯುರ್ವೇದ ವೈದ್ಯ ರುಡಾಲ್ಫ್ ಸ್ಟೈನರ್ (Rudalf Steiner) ವೃಕ್ಷಾಯುರ್ವೇದ ಸೇರಿದಂತೆ ನಮ್ಮ ಪ್ರಾಚೀನ ಕೃಷಿ ತಂತ್ರಗಳನ್ನು ಮುಂದೆ ಇಟ್ಟುಕೊಂಡು ರೂಪಿಸಿದ್ದು "ಬಯೋಡೈನಮಿಕ್" (BIO DYNAMIC) ವಿಧಾನ. ಅವರು ಒಂಭತ್ತು ಬಗೆಯ BIODYNAMIC ವಿಧಾನಗಳನ್ನು ಆವಿಷ್ಕರಿಸಿದ್ದಾರೆ. BD 500, BD 501, BD 502, BD 503..... ಹೀಗೆ BD 508 ರವರೆಗೆ.

ವಾತಾವರಣದಲ್ಲಿರುವ ಕಾಸ್ಮಿಕ್ ಎನರ್ಜಿಯನ್ನು ಸೆಳೆದು–ಹಾಗೆ ಸೆಳೆಯಲ್ಪಟ್ಟ BIO ಕಾಸ್ಮಿಕ್ ಎನರ್ಜಿಯನ್ನು ಸಸ್ಯಗಳ ಬೆಳವಣಿಗೆ ಪ್ರಚೋದಿಸುವುದಕ್ಕಾಗಿ ಬಳಸುವುದು. ಹಾಲು ಕರೆಯುವ ನಾಟಿ ಹಸುವಿನ ಕೊಂಬು ಕಾಸ್ಮಿಕ್ ಎನರ್ಜಿಯನ್ನು ಯಥೇಚ್ಚವಾಗಿ ಆಕರ್ಷಿಸಲ್ಪಡುವುದಂತೆ. ಈ ಹಾಲು ಕರೆಯುವ ನಾಟಿ ಹಸುವಿನ ಹಸಿ ಸಗಣಿಯನ್ನು ಒಂದು ಹಳೆಯ ದನದ ಕೊಂಬಿಗೆ ತುಂಬಿ, ಅದನ್ನು ಒಂದೂವರೆ ಅಡಿ ಆಳದ ಮಣ್ಣಿನಲ್ಲಿ ಕೊಂಬಿನ ತುದಿ ಮೇಲ್ಮುಖವಾಗಿ ಹೂಳಬೇಕು. ಇದನ್ನು ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಹೂತು ಸೆಪ್ಟೆಂಬರ್–ಆಕ್ಟೋಬರ್ ತಿಂಗಳಿನಲ್ಲಿ ಹೊರ ತೆಗೆಯಬೇಕು. ಆ ಕೊಂಬಿನ ತುಂಬಾ ಸುವಾಸನೆಯುಕ್ತ ಪುಡಿ ಇರುತ್ತದೆ. ಇದಕ್ಕೆ 'BD 500' ಎಂದು ಹೆಸರು.ಇದರಲ್ಲಿ ೨೫ ಗ್ರಾಂ ಪುಡಿಯನ್ನು ೧೩ ಲೀಟರ್ ನೀರಿನಲ್ಲಿ ಬೆರೆಸಿ ಸಂಜೆ ೪ ಗಂಟೆ ವೇಳೆ ಒಂದು ಎಕರೆ ವಿಸ್ತೀರ್ಣ ಫಸಲಿನ ಮೇಲೆ ಸಿಂಪಡಿಸಬೇಕು. ಪುಡಿಯಲ್ಲಿದ್ದ ಕಾಸ್ಮಿಕ್ ಎನರ್ಜಿಯ ಪವರ್‌ನಿಂದಾಗಿ ಬೆಳೆ ಸಮೃದ್ಧಿಯಾಗಿ ಬೆಳೆಯುವುದಂತೆ. ಇದನ್ನು ಪ್ರಪಂಚದ ನಾನಾ ಕಡೆ ಪ್ರಯೋಗ ಮಾಡುತ್ತಿದ್ದಾರೆ. ಕಳೆದ ೨೫–೩೦ ವರ್ಷಗಳಿಂದ ಕರ್ನಾಟಕದ ಸಾವಯವ ಕೃಷಿಕರು ಮಾಡುತ್ತಿದ್ದಾರೆ. ರುಡಾಲ್ಫ್ ಸ್ಟೈನರ್ ಪ್ರತಿಪಾದಿಸುವಂತೆ ಇಲ್ಲಿ ಯಾವ ಚಮತ್ಕಾರವು ನಡೆದಿಲ್ಲ.

ಆ ನಂತರ BD 501 : ಇದರಲ್ಲಿ ಸಗಣಿಗೆ ಬದಲಾಗಿ ಅವಶಿಷ್ಟ (FOSSILIZED) ಸಿಲಿಕವನ್ನು ಮಣ್ಣಿಗೆ ಪುಡಿ ಮಾಡಿ ಕೊಂಬಿನೊಳಗೆ ತುಂಬಿ ಮಾರ್ಚ್ ತಿಂಗಳಲ್ಲಿ ಹೂತು, ಆಗಸ್ಟ್ ತಿಂಗಳಿನಲ್ಲಿ ತೆಗೆದು, ಒಂದು ಗ್ರಾಂ ಪುಡಿಯನ್ನು ೧೩ ಲೀಟರ್ ನೀರಿನಲ್ಲಿ ಬೆರೆಸಿ, ಒಂದು ಎಕರೆ ಪ್ರದೇಶದ ಬೆಳೆಗೆ, ಸೂರ್ಯ ಹುಟ್ಟಿದ ನಂತರ ಸಿಂಪಡಿಸಬೇಕು. ಇದರಿಂದಲೂ ಈ ವರೆಗಿನವರೆಗೂ ಯಾವ ಮ್ಯಾಜಿಕ್ಕೂ ಸಂಭವಿಸಿಲ್ಲ. ಈ ಬಯೋಡೈನಾಮಿಕ್ ಪದ್ಧತಿಗೂ – ಯಾವ ವೈಜ್ಞಾನಿಕ ತಳಹದಿಯೂ ಇಲ್ಲ. ಬೇಸಾಯದ ದಿಕ್ಕು ದೆಸೆಗಳ ಗುರಿತಪ್ಪಿಸಲು ಇಂಥವುಗಳು ಹುಟ್ಟಿ ಕೊಳ್ಳುತ್ತಲಿರುತ್ತವೆ.

೪.೯. ಪಂಚಗವ್ಯ

ಡಾ॥ ಕೆ.ನಟರಾಜನ್ ತಮಿಳು ನಾಡಿನ ಈರೋಡು ಜಿಲ್ಲೆಯ ಕೊಡುಮುಡಿ ಸಮೀಪದ ಪಪ್ಪವಲಸು ಗ್ರಾಮದವರು. ವೃತ್ತಿಯಲ್ಲಿ ವೈದ್ಯರು: ಕನ್ನಡದಲ್ಲಿ ಇವರ ಕೃತಿ 'ಪಂಚಗವ್ಯ; (–ಸಹಜ ಸಮೃದ್ಧ ಪ್ರಕಾಶನ, ಅನಂತ ನಿಲಯ, ನಾಲ್ಕನೇ 'ಎ' ಮೇನ್, ಹೆಬ್ಬಾಳ ಬಡಾವಣೆ – ಬೆಂಗಳೂರು–೨೪) ಪ್ರಕಾರ 'ಪಂಚಗವ್ಯ' ತಯಾರಿಸಲು ಈ ಕೆಳಕಂಡ ಪರಿಕರಗಳು ಬೇಕು.

೧) ಹಸುವಿನ ತಾಜಾ ಸಗಣಿ	೫ ಕೆ.ಜಿ
೨) ಹಸುವಿನ ಗಂಜಳ	೩ ಲೀಟರ್
೩) ಹಸುವಿನ ಹಾಲು	೨ ಲೀಟರ್
೪) ಹಸುವಿನ ಮೊಸರು	೨ ಲೀಟರ್
೫) ಹಸುವಿನ ತುಪ್ಪ	೧/೨ ಕೆ.ಜಿ
೬) ಕಬ್ಬಿನ ಹಾಲು	೩ ಲೀಟರ್
೭) ಎಳನೀರು	೩ ಲೀಟರ್
೮) ಬಾಳೆಹಣ್ಣು	೧೨
೯) ಹೆಂಡ/ನೀರಾ	೨ ಲೀಟರ್

ಈ ಎಲ್ಲವನ್ನು ಒಂದು ಪ್ಲಾಸ್ಟಿಕ್ ಡ್ರಮ್‌ನಲ್ಲಿ ಮಿಶ್ರ ಮಾಡಿ ಹಾಕಬೇಕು. ಬೆಳಿಗ್ಗೆ ಮತ್ತು ಸಂಜೆ ಕೋಲಿನಲ್ಲಿ ತಿರುಗಿಸಬೇಕು ೧೮ ದಿನಗಳ ತರುವಾಯ–೩ ಕೆ.ಜಿ ಮಿಶ್ರಣವನ್ನು ೧೦೦ ಲೀಟರ್‌ನಲ್ಲಿ ಬೆರೆಸಿ ಒಂದು ಎಕರೆಗೆ ಕೊಡಬೇಕು–ಬೆಳೆ ಸಮೃದ್ಧಿಯಾಗಿ ಬರುತ್ತದೆ... ಎಂಬುದು ಪಂಚಗವ್ಯದ ಒಟ್ಟು ಸಾರ ಈಗಾಗಲೇ ತಿಳಿಸಿರುವಂತೆ ಬೆಳೆ ಬೆಳೆಯಲೆಂದು ಬಳಸಲಾಗುತ್ತಿರುವ ಈ ಯಾವ ಸಾವಯವ ಪೋಷಣಾ ತಂತ್ರಜ್ಞಾನಗಳು ಯಶಸ್ವಿಯಾಗಿಲ್ಲ. ಕೊಟ್ಟಿಗೆ ಗೊಬ್ಬರ ಹಾಕಿದರೆ ಬೆಳೆ ಚೆನ್ನಾಗಿ ಬರುತ್ತೆ ಅಂತ ಗೊತ್ತಿದ್ದರೂ – ಬೆಳೆ ಬೆಳೆಯಲು ಕೊಂಕಣ ಸುತ್ತಿ ಮೈಲಾರಕ್ಕೆ ಬರುವ ಅಗತ್ಯ ವೇನಿದೆಯೊ ತಿಳಿಯದು.

'ಪಂಚಗವ್ಯ' ಕೃತಿಯ ಆರಂಭದಲ್ಲಿ ಲೇಖಕರೂ/ವೈದ್ಯರೂ ರೈತರೂ ಆಗಿರುವ ನಟರಾಜನ್‌ರವರು: ರುಡಾಲ್ಫ್ ಸ್ಟೈನರ್, ಮಸನೊಬು ಫುಕುವೋಕ, Silent Spring ಖ್ಯಾತಿಯ ರಾಶೆಲ್ ಕರ್ಸನ್‌ರವರನ್ನು ತಮ್ಮ ಆದರ್ಶ ಎನ್ನುತ್ತಾರೆ. ಏನೂ ಮಾಡದ ಸಹಜ ಕೃಷಿಯ ಮಸನೊಬು ಫುಕುವೋಕರೇ ಇವರ ಆದರ್ಶವಾದ ಮೇಲೆ ಇವರು "ಪಂಚಗವ್ಯ" ಕಂಡು ಹಿಡಿದದ್ದರೂ ಏಕೆ? ಸಗಣಿ ಮತ್ತು ಗಂಜಳ ಈಗಾಲೆ ಬೇಸಾಯ ಭೂಮಿಯಲ್ಲಿ ಬಳಕೆಯಲ್ಲಿವೆ. ಈ ಸಗಣಿ-ಗಂಜಳಕ್ಕೆ ತುಪ್ಪ ಮಿಶ್ರ ಮಾಡಿದ ಕೂಡಲೆ ಗಾಳಿ ಸಂಚಾರ ನಡೆಯುವುದಿಲ್ಲ. ಹೀಗಿರುವಾಗ ಸಗಣಿ-ಗಂಜಳದಲ್ಲಿರುವ ಜೀವಾಣುಗಳು ಸಾಯುತ್ತವೆ. ಇನ್ನು ಹಾಲು, ಮೊಸರು, ಎಳನೀರು, ಹೆಂಡ, ಕಬ್ಬಿನಹಾಲು, ಬಾಳೆಹಣ್ಣು-ಇವು ಒದಗಿ ಬಂದಿರುವ ಮಾನವ ಆಹಾರ. ಇವುಗಳನ್ನೆಲ್ಲ ಅದೇ ರೂಪದಲ್ಲಿಯೇ ಏಕೆ ಜಮೀನಿಗೆ ಕೊಡಬೇಕು? ಮಲ-ಮೂತ್ರ ರೂಪಗಳಲ್ಲಿ ಜಮೀನುಗಳಿಗೆ ಸೇರುತ್ತಿಲ್ಲವೆ.?

ಕರ್ನಾಟಕದಲ್ಲಿ ಸಾವಯವ ಕೃಷಿ ಮಿಷನ್ ಮೂಲಕ ಸೇವೆಗಾಗಿ ಬಂದಿರುವ ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ – ಈ ಅವೈಜ್ಞಾನಿಕವಾದ, ಅನಗತ್ಯ ಶ್ರಮದ, ಅನಗತ್ಯ ಖರ್ಚಿನ ಸಾವಯವ ತಂತ್ರಜ್ಞಾನಗಳನ್ನು ಕಳೆದ ೭ ವರ್ಷಗಳಿಂದ ನಿರಂತರವಾಗಿ ಹಂಚುತ್ತಲೆ ಬಂದಿದ್ದಾರೆ. ಫಲಿತಾಂಶ ಇರದಿದ್ದರೂ ಕೂಡ!

೪.೧೦. ಒಂದು ದೇಸೀ ಕೃಷಿ ಅನುಭವ

ಶ್ರೀ ಸೋಗಳ್ಳಿ ನಿಂಗನಾಯಕ್, ಹೆಗ್ಗಡದೇವನಕೋಟೆ ತಾಲ್ಲೂಕಿನ ಸೋಗಳ್ಳಿ ಗ್ರಾಮದವರು ಕಬಿನಿ ಜಲಾಶಯ ನಿರ್ಮಾಣದ ಹಿನ್ನೆಲೆಯಲ್ಲಿ ಮುಳುಗಡೆಯಾದ ೩೩ ಹಳ್ಳಿಗಳ ಪೈಕಿ ಅವರದೂ ಒಂದು. ಅವರ ಹಳ್ಳಿಗೆ ಅಂತರಸಂತೆಯ ಬಳಿ ಪುನರ್ ವಸತಿ ಕಲ್ಪಿಸಲಾಯಿತು. ಇಲ್ಲಿ ನಿಂಗನಾಯಕ್ ತಮ್ಮ ಹಳೆ ಊರು ಸೋಗಳ್ಳಿಯ ತಮ್ಮ ಪೂರ್ವಿಕರ ಕೃಷಿ ಮತ್ತು ಈಗಿನ ಹೊಸ ಊರು ಸೋಗಳ್ಳಿಯ ತಮ್ಮ ದೇಸಿ ಕೃಷಿ ಅನುಭವಗಳನ್ನು ಅದರ ಎಲ್ಲಾ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಹೇಳಿಕೊಂಡಿದ್ದಾರೆ ಅದನ್ನು ಇಲ್ಲಿ ದಾಖಲಿಸಲಾಗಿದೆ.

೧೯೭೦ ರ ಕಾಲದಲ್ಲಿ ನಮ್ಮೂರಿನ ಜನಸಂಖ್ಯೆಗಿಂತ ಜಾನುವಾರು ಸಂಖ್ಯೆಯೇ ದುಪ್ಪಟ್ಟು, ೧೫೦೦ ರಷ್ಟು ಜನರಿದ್ದರೆ, ನಾಲ್ಕೈದು ಸಾವಿರದಷ್ಟು ದನಕರುಗಳು, ೨೦೦ ಕ್ಕೂ ಅಧಿಕ ನಾಡಹೆಂಚಿನ ಹಟ್ಟಿಗಳಲ್ಲಿ ಐದಾರು ಮಂಗಳೂರು ಹೆಂಚಿನ ಮನೆಗಳು. ಊರ ತುಂಬಾ ದನದ ಕೊಟ್ಟಿಗೆಗಳು. ಬೆರಳೆಣಿಕೆಯಷ್ಟು ಕೂಲಿಗಾರರು, ಐದಾರು ಶೆಟ್ಟರ ಚಿಲ್ಲರೆ ಅಂಗಡಿಗಳ ಹೊರತಾಗಿ ಇಡೀ ಊರಿಗೆ ಊರೇ ವ್ಯವಸಾಯಗಾರರು.

ಒಂದು ಏರಿನ ಆರಂಭದವರು ಎರಡು, ಮೂರು ಹೀಗೆ ಆರು ಏರುಗಳ ಆರಂಭ ಮಾಡುವಷ್ಟು ಜಮೀನುದಾರರು. ಪರಿವಾರನಾಯ್ಕರು, ಹರಿಜನರೇ ಮಿಗಿಲಾಗಿದ್ದ ನಮ್ಮೂರಿನಲ್ಲಿ ಹತ್ತಾರು ಲಿಂಗಾಯ್ತರೂ, ಬೋವಿಗಳೂ ಸೇರಿದಂತೆ ಎಲ್ಲ ಕೋಮಿನವರೂ ವ್ಯವಸಾಯಭೂಮಿ ಹೊಂದಿದ್ದ ರೈತ ಸಾಮಾನ್ಯರು. ಮರಮಟ್ಟು ಕಬ್ಬಿಣ ಕೆಲಸದ ಆಚಾರಿಗಳ ಮೂರು ಕುಟುಂಬಗಳೂ ಸಹ ಭಾಗಶ: ರೈತರು. ಈ ಕುಶಲಕರ್ಮಿಗಳು ತಯಾರಿಸುತ್ತಿದ್ದ ವಿವಿಧ ವಿನ್ಯಾಸದ ಮರದ ಗಾಡಿಗಳು ನೂರಾರು. ಗೊಬ್ಬರದ ರಾಶಿಗಳನ್ನು ಹೊಲಗಳಿಗೆ ಹೂಡಲು, ಧವಸ ಧಾನ್ಯಗಳ ಸಾಕಾಣಿಕೆಗೆ, ಸೌದೆ ಸರಂಜಾಮುಗಳಿಗೆ, ನೆಂಟರಿಷ್ಟರ ಪ್ರಯಾಣದಿಂದ ಹಿಡಿದು ದೂರದ ಮೈಸೂರು ನಗರಕ್ಕೆ ಉರುವಲು ಸೌದೆಯ ಸಾಗಾಟಕ್ಕೆ ಇದ್ದ ಏಕೈಕ ಸಂಚಾರಿ ಸಾಧನ ಈ ಸರಳ ಸುಂದರ ಮರದ ಗಾಡಿಗಳು. ಬಹು ದೂರದ ವಯನಾಡಿನಿಂದ ಹೊರಟು, ವಿಖ್ಯಾತ ಕಾಕನಕೋಟೆ ಕಾಡನ್ನು ಇಬ್ಭಾಗಿಸಿ ಹರಿದು ಬರುವ ತಾಯಿ ಕಪಿಲಾ ನದಿಯು ಸೃಜಿಸಿದ ಬಹು ವಿಸ್ತಾರ ಮರಳುಧರೆನಾಡಿನ ನೂರಾರು ಹಳ್ಳಿಗಳ ಪೈಕಿ ನಮ್ಮೂರು ಸೋಗಳ್ಳಿ. ಇದು ರಾಗಿಯ ಸಾಮ್ರಾಜ್ಯ. ಇಲ್ಲಿ ಶ್ರೀಮದ್ ರಾಗಿಯೇ ರಾಜ. ಅವನದೇ ದರ್ಬಾರು. ಆ ಜನಪದರ ಸಕಲಕೆಲ್ಲಕು ಸಲ್ಲುತ್ತಿದ್ದುದೇ ಈ ಸರ್ವಜನ ಪ್ರೀತಿಯ ರಾಗಿ. ಅಲ್ಲಿ ಆರು ಖಂಡುಗದಿಂದ ನೂರಾರು ಪಲ್ಲಗಳವರೆಗೆ ರಾಗಿ ಬೆಳೆವ ರೈತರು. (ಖಂಡುಗ: ೬೦ ಸೇರು, ಪಲ್ಲ: ನೂರು ಸೇರು)

ಊರ ದೇವತೆ ಸೋಗಲಮ್ಮ, ಜಾಗಮ್ಮ, ಪಗೋದಮ್ಮಗಳ ಜಾತ್ರೆಯ ವೈಭವ ಹೇಳತೀರದು. ಆ ಊರವರು ಈ ಮಹಾ ಮೇರುಹಬ್ಬಗಳಿಗಾಗಿಯೇ ಬದುಕಿ ಬಾಳುತ್ತಿದ್ದರೇನೊ!....ಇರಲಿ; ತಲೆ ತಲಾಂತರಗಳಿಂದ ಬಂದ ಸಂಪ್ರದಾಯದಂತೆ ಯುಗಾದಿಯ ಮಾರನೇ ದಿವಸ ಅಲ್ಲೊಂದು ಕೌತುಕದ ಆಟ ನಡೆಯುತ್ತಿತ್ತು.

ಅಂದು ಊರ ಮುಂದಲ ಮಾರುಗುಡಿಯ ಮುಂದೆ ಊರಿಗೂರೇ ಸೇರುತ್ತಿತ್ತು. ಹುಡುಗರು, ಮುದುಕರು, ಮಕ್ಕಳು ಮರಿಗಳು, ಬಸುರಿ ಬಾಣಂತಿಯರು,...ಅಲ್ಲಿ...ಏಕವ್ಯಕ್ತಿ ಪ್ರದರ್ಶನ ನಾಟಕದ ಬಯಲು ರಂಗಸ್ಥಳವೇ ಆಗಿ; ಸುತ್ತಲೂ ಪ್ರೇಕ್ಷಕರು ನಡುಮಧ್ಯ ಪಾತ್ರಧಾರಿ ಪುಟ್ಟಯ್ಯ. ಎಂಭತ್ತಕ್ಕೂ ಹೆಚ್ಚು ಮಳೆಗಾಲಗಳನ್ನು ಕಂಡಿರುವ, ಸಾವಿರ ಗಾದೆಗಳನ್ನಾಡುವ ಈ ಉತ್ಸಾಹಿ ಮುದುಕ ಪರಿವಾರದವನು. ನಮ್ಮೂರ ಮಾರಮ್ಮನ ಅಧಿಕೃತ ಸೇವಕ. ಅದರಿಂದಾಗಿ ಈತ 'ಕೇಲಿಗ' ಕಾಯಕದ ಪುಟ್ಟಯ್ಯ. ಕರ್ಣನು ವಜ್ರಕವಚವನ್ನು ಹರಿದುಕೊಟ್ಟಂತೆ, ಈತ ಕಾಡು ಕುರುಬರಿಗೆ ತಾನು ಉಟ್ಟಿದ್ದ ದಟ್ಟಿಯನ್ನೇ ಅರ್ಧ ಹರಿದು ಕೊಟ್ಟ ದಯಾಳು. ಈತ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರನು. ಪುಟ್ಟಯ್ಯ ಮುಖಕ್ಕೆ ಕಟ್ಟಿಕೊಂಡಿರುವ ಆ ಮುಖವಾಡವು ಒಂದು ಅಡಿ ಅಗಲ ಒಂದೂವರೆ ಅಡಿ ಉದ್ದವಾಗಿದ್ದು, ಇದನ್ನು ಪೂರ್ವಿಕರು, ಕಣಗಿಲೆ ಮರದ ಕೆಚ್ಚಿನಿಂದ ತಯಾರಿಸಿದರೆಂದು ಪ್ರತೀತಿ. ಆ

ಮುಖವಾಡವು ಮತ್ತು ಆತನ ಎಡಗೈಲಿರುವ ಮಾರುದ್ದದ ಸೋರೆಬುರುಡೆ ಮತ್ತು ಬಲಗೈಲಿ ಹಿಡಿದಿರುವ ಬೆತ್ತವು ಯಾವ ಕಾಲದ್ದೋ...ಯಾರಿಗೂ ತಿಳಿಯದು. ಆ ಮರದ ಮುಖವಾಡದ ಹೆಸರು 'ತಲೆ ಪೊಟರಾಯ'. ಈ ತಲೆ ಪೊಟರಾಯ ಮತ್ತು ಆತನ ಬುರುಡೆ, ಬೆತ್ತಗಳೆಲ್ಲಾ ಸದಾ ನಮ್ಮೂರ ಮಾರಮ್ಮನ ಅಕ್ಕ ಪಕ್ಕದಲ್ಲೇ ಖಾಯಂ. ಯಾವೂರ ಮಾರಮ್ಮದೀರೂ ಯಾರನ್ನೂ ಹತ್ತಿರ ಸುಳಿಯಗೊಡದಿರುವಾಗ ಈ ತಲೆಪೊಟರಾಯನು ನಮ್ಮೂರ ಮಾರಮ್ಮನಿಗೆ ಹೇಗೆ ಗಂಟುಬಿದ್ದನೋ? ಈತನೇನು ಈಕೆಯ ಕಾವಲುಗಾರನೋ? ಸಖನೋ? ಸೇವಕನೋ? ಅಥವಾ ನಮ್ಮೂರ ಮಾರಮ್ಮನನ್ನು ಹಂಬಲಿಸಿ ಹಿಂಬಾಲಿಸಿ ಬಂದು ಇದುವರೆವಿಗೂ ಕಾದೇ ಕುಳಿತಿರುವ ಪ್ರೇಮ ತಪಸ್ವಿಯೋ? ಅಥವಾ ತರಗು ಗುಡಿಸಿ ಮನೆ ಮಾಡಿ ಈ ಊರ ಸ್ಥಾಪಿಸಿದ ನಮ್ಮೂರ ಹಿರೀಕನೋ? ಅಂತೂ ತಲೆಪೊಟರಾಯನು ಊರವರ ಭಕ್ತಿ ಭಾವ ಪೂಜ್ಯತೆಗೆ ಪಾತ್ರನಾಗಿರುವನು. ಮಾರಿಹಬ್ಬದಂದು ತಲೆಪೊಟರಾಯನಿಗೂ ಪೂಜೆ. ತಲೆಪೊಟರಾಯನಾಗಿ ಪರಿವರ್ತಿತನಾದ ಕೇಲಿಗನು ಬುರುಡೆ, ಬೆತ್ತ ಭೂಷಿತನಾಗಿ ರಂಗ ಮಧ್ಯದಲ್ಲಿ ಕಂಡುಬರುತ್ತಾ ಸೇವಕನೊಬ್ಬನನ್ನು ಗುರುತಿಸಿಕೊಳ್ಳುತ್ತಾನೆ. ಈ ಸೇವಕನು ಕೇಲಿಗನ ಮಾತುಗಳಿಗೆ 'ಹ್ಞೂ'ಗುಟ್ಟುತ್ತಾ, ಆತನ ಆದೇಶಗಳನ್ನು ಪಾಲಿಸುವವನಂತೆ, ಉತ್ತರಿಸುತ್ತಿರಬೇಕು. ಮುಖವಾಡದವನು ಶುರುಮಾಡುವುದು ಸಾಮೂಹಿಕವಾಗಿ ಬೇಸಾಯ ಮಾಡುವ ಆಟ. ವ್ಯವಸಾಯದ ಎಲ್ಲ ಹಂತದ ಕಾರ್ಯಗಳನ್ನು ಅಂದರೆ ಭೂಮಿಯನ್ನು ಆಬದು ಮಾಡಿ, ಉಳುಮೆ ಮಾಡುವುದು, ಹೊಲಕ್ಕೆ ಗೊಬ್ಬರ ಹೂಡಿ ಚೆಲ್ಲುವುದು, ಉಳುಮೆಯ ರೀತಿ ರಿವಾಜುಗಳು, ನೇಗಿಲು ಹೂಡುವ ಕ್ರಮ, ಎತ್ತುಗಳನ್ನು ಅಣಿಗೊಳಿಸುವುದು, ಬಿತ್ತನೆ, ನಾಟಿ, ಕಳೆ ಕೀಳುವ, ಕೊಯ್ಲು ಮಾಡುವ, ಮೆದೆ ಹಾಕಿ ಕಣ ನಿರ್ಮಿಸಿ ಒಕ್ಕುವವರೆಗಿನ ಎಲ್ಲಾ ಕೆಲಸ ಕಾರ್ಯಗಳನ್ನು ಹಂತ ಹಂತವಾಗಿ ಮಾತಿನ ಮೂಲಕವೇ ಪರಸ್ಪರ ಸಂಭಾಷಣಾ ತಂತ್ರದಲ್ಲಿ ಹೇಳುತ್ತಾ ತನ್ನ ಚಮತ್ಕಾರಿಕೆಯ ಮಾತುಗಳಿಂದ ವ್ಯವಸಾಯ ಮಾಡುವ ಎಲ್ಲ ಕ್ರಮಬದ್ಧತೆಗಳ ಚಿತ್ರಣಗಳನ್ನು ಕಟ್ಟಿಕೊಡುತ್ತಾನೆ. ಆತನ ಜಾಣಮಾತಿನ ಚಿತ್ರಗಳು ಹಾಸ್ಯಮಯವಾಗಿ ರಂಜನೀಯವಾಗಿ ನಾಟಕೀಯವಾಗುತ್ತಾ ಪ್ರೇಕ್ಷಕರು ನಗೆಗಡಲಲ್ಲಿ ಮಿಂದೇಳುವಂತಾಗುತ್ತದೆ. ಆತನು ತನ್ನ ಆಟದಲ್ಲಿ ಜನರನ್ನು ಜಾನುವಾರುಗಳಾಗಿ ಕಲ್ಪಿಸಿ ಪರಿವರ್ತಿಸಿಬಿಡುತ್ತಾನೆ. ಹೆಂಗಸರನ್ನು ಹಸು, ಕಡಸುಗಳಾಗಿ, ಗಂಡಸರನ್ನು ಎತ್ತು ಕರುಗಳಾಗಿ ಮಾರ್ಪಡಿಸಿಬಿಡುತ್ತಾನೆ. ಮೈಗಳ್ಳರನ್ನು ಎಚ್ಚರಿಸುತ್ತಾನೆ. ಮಂದಮತಿಗಳನ್ನು ಛೇಡಿಸುತ್ತಾನೆ. ಕಳ್ಳಾಟ ಮಳ್ಳಾಟ, ಅನೈತಿಕ ನಡೆಯವರನ್ನು ಬೆಚ್ಚಿಸುತ್ತಾನೆ. ಊರ ದ್ರೋಹಿಗಳನ್ನು ಮಾತಿನಲ್ಲೇ ಶಿಕ್ಷಿಸುತ್ತಾನೆ. ಪ್ರಾಮಾಣಿಕರನ್ನು ಪ್ರೋತ್ಸಾಹಿಸುತ್ತಾನೆ. ದಕ್ಷರನ್ನು ಮೆಚ್ಚುತ್ತಾನೆ. ಎಲ್ಲವೂ ಪರಿಪೂರ್ಣ ನಿಷ್ಕಳಂಕ ಹಾಸ್ಯದಲ್ಲೇ ಇಡೀ ಆಟವನ್ನು ನಡೆಸಿಕೊಟ್ಟು ಕಣದಲ್ಲಿನ ಧಾನ್ಯಗಳ ರಾಶಿಪೂಜೆಯ ನಂತರ ರೈತರು ತಮ್ಮ ಬೆಳಸನ್ನು ಯಾರ್ಯಾರಿಗೆ ಎಷ್ಟೆಷ್ಟು ಪಾಲು ವಿತರಿಸಬೇಕೆಂದು

ಸೂಚಿಸುತ್ತಾನೆ. ದಾಸಯ್ಯ, ಜೋಗಯ್ಯ, ಮಡಿವಾಳ, ಕ್ಷೌರಿಕ, ಆಚಾರಿ, ದೇವರ ಪೂಜಾರಿ ಮುಂತಾದವರ ಪಾಲನ್ನು ನಿರ್ಧರಿಸುತ್ತಾನೆ. ಜಾನುವಾರುಗಳ ಉಸಾಬರಿ, ಬಿತ್ತುವ ಬೀಜ ಧಾನ್ಯಗಳ ಆಯ್ಕೆ, ನಿರ್ವಹಣೆ ಇತ್ಯಾದಿಗಳೆಲ್ಲವನ್ನೂ ತಿಳಿಸುತ್ತಾನೆ. ಮಾತಿನ ಮಧ್ಯೆ ಊರಿನ ರಗಳೆಗಳು, ಪಂಚಾಯ್ತಿಗಳು, ಮದುವೆ, ಕೊಡುಕೊಳ್ಳುವಿಕೆಯ ವ್ಯವಹಾರಗಳು, ನಂಟು ನಡವಳಿಕೆ ಇತ್ಯಾದಿಗಳನ್ನೆಲ್ಲಾ ಪ್ರಸ್ತಾಪಿಸುತ್ತಾ, ವೈಯಕ್ತಿಕವಾಗಿ ಯಾರನ್ನೂ ದೂಷಿಸದೆ, ನೋಯಿಸದೆ, ಶುದ್ಧ ಹಾಸ್ಯಮಯವಾಗಿ, ರಂಜಕವಾಗಿ ಒಪ್ಪಿತ ಜೀವನ ಮೌಲ್ಯಗಳನ್ನು ಪರೋಕ್ಷವಾಗಿ ಬೋಧಿಸುತ್ತಾ ದೇವರುಗಳಿಗೆ, ಸಭಿಕರಿಗೆ ಶರಣು ಹೇಳಿ ಕೈಮುಗಿದು ನಿರ್ಗಮಿಸುತ್ತಾನೆ. ಈ ಪ್ರದರ್ಶನದಾಟವು ಬೇಸಾಯ ಲೋಕಕ್ಕೆ ಹೊಸದಾಗಿ ಸೇರ್ಪಡೆಗೊಳ್ಳುವ ಯುವಜನರಿಗೆ ಪಾಠವಾಗಿಯೂ ಹಳಬರಿಗೆ ಹೆಚ್ಚಿನ ತಿಳುವಳಿಕೆ, ವಿಮರ್ಶೆಯಾಗಿಯೂ ಪರಿಭಾವಿಸಲ್ಪಟ್ಟು ಮುಖ್ಯವಾಗಿ ಆತನು ಪ್ರಸ್ತಾಪಿಸುವ ಹಲವಾರು ರಸಮಯ ಪ್ರಸಂಗಗಳನ್ನು ಮೆಲುಕುಹಾಕುತ್ತಾ ಹೊಸ ವರ್ಷದ ನಿಜ ಆರಂಭಕಾರ್ಯಕ್ಕೆ ಅಣಿಯಾಗುತ್ತಾರೆ.

ಆಟದ ಮಧ್ಯೆ ಪುಟ್ಟಯ್ಯ ಹಾಡುತ್ತಿದ್ದ ಹತ್ತಾರು ಹಾಡುಗಳಲ್ಲಿ ಎರಡು, ಮುಂಗಾರಿನ ಮುಂಜಾವಿನಲ್ಲಿ ಸುತ್ತಮುತ್ತಲ ಹತ್ತಾರು ಹೊಲಗಳಲ್ಲಿ ಉಳುವಾಗ –

"ಎತ್ತು ಯಮ್ಮರಗಾಲ

ಕಲಗಚ್ಚು ಕಂದೇಗಾಲ

ಎತ್ತಮ್ಮಿ ನಿನ್ನ ಎಡಗಾಲ"

ಹಿಂಗಾರಿನ ಹುರುಳಿ ಫಸಲು ಕೊಯ್ಯುವಾಗ. ..

ಉಳ್ಳಿ ಹೊಲವಲ್ಲೋ

ಉಚ್ಚೆಳ್ಳು ಕಡುವಲ್ಲೋ

ಕರಿಮೀನು ತಿನ್ನೋ ಬಡ್ಡೀ ದೇವ್ರು

ಕರೆದರೆ ಬರಲೊಲ್ಲೋ.... ೩

ಭರಣಿ ಮಳೆಗೆ ಮುಂಗಾರಿನ ಬಿತ್ತನೆಕಾರ್ಯ ಮುಗಿಸಿದ ಪ್ರಯುಕ್ತ ಮೊದಲ ಸೋಮವಾರದಂದು ತನ್ನೆಲ್ಲ ದನಕರು, ಎತ್ತು ಏರುಗಳನ್ನು ಮೀಯಿಸಿ, ಅಲಂಕರಿಸಿ, ಅನ್ನ ಪಾಯಸದ ಎಡೆ ತಿನ್ನಿಸಿ–ಬಂಧುಗಳೊಡಗೂಡಿ "ಬೆದುಗ" ಎಂಬ ಮೊದಲ ಹಬ್ಬ ಮಾಡುವರು. ಗೌರಿ ಹಬ್ಬದಲ್ಲಿ ಹೆಣ್ಣು ಮಕ್ಕಳನ್ನು ತವರಿಗೆ ಕರೆಸಿಕೊಂಡು ತವರಿನ ಹೊಸ ಉಡುಗೆಯ ಸಂಭ್ರಮದಲ್ಲಿ ಮಳೆ ದೇವತೆಗಳಾದ

'ಗುಡುಗಂಜಮ್ಮ' "ಸಿಳ್ಳು ಬೊಮ್ಮರಾಯ" ಮತ್ತು ಬೇಸಾಯದ ಉಪಕರಣದೈವಗಳಾದ ನೇಗಿಲು, ಕುಂಟೆ, ಕುಡ, ಹಲುಬೆ, ಏರುಕಡ್ಡಿ, ಮೆರೆಕಡ್ಡಿ, ಕಡುಕತ್ತಿ, ಕೊಡಲಿ, ಕಳಾರಿ, ಕುಡುಗೋಲು, ಬಿತ್ತನೆಕುಕ್ಕೆ, ಕೊಂಗ, ಮೊರ, ಹಾರೆ, ಗುದ್ದಲಿ, ಪಿಕಾಸಿ, ದೊಡ್ಡ ವಂದ್ರಿ, ಜೊತ್ಗೆಗೂಟಗಳು, ಮೇಟಿಕಂಭ, ರಾಗಿ ಬೀಸುವ ಕಲ್ಲು, ಒರಳು ಒನಕೆ, ಉಳುವ ಉರ್ಜೆ (ಹಗ್ಗ) ಎಲ್ಲವನ್ನೂ ಸಮಾನ ಸ್ಥಾನದಲ್ಲಿ ಪೂಜಿಸಿ, ಆ ವರ್ಷ ಬೆಳೆದಿರುವ ಹೊಸ ರಾಗಿ, ಭತ್ತ, ನವಣೆಯ ತೆನೆಗಳನ್ನು, ಸೀತಾಫಲ, ಗೌರಿಮುಡಿ ಹೂವುಗಳೊಂದಿಗೆ ವಿಶೇಷ ರೀತಿಯಿಂದ ಜೋಡಿಸಿ (ಬೊಕೆ ರೀತಿ) ನಡುಮನೆಯ ದೇವರ ಗೂಡಿನೆದುರು ತೀರಿಗೆ 'ಫಲಸ್ತಿಗೆ' ಎಂಬ ಹೆಸರಿನಲ್ಲಿ ಕಟ್ಟಿ ನೇತಾಕುವರು. ಅಂದು ಶ್ಯಾವಿಗೆ ಪಾಯಸದ ಸಡಗರ. ರಾಗಿ, ಭತ್ತದ ಫಸಲು ಕೊಯ್ಲಿಗೆ ಬಂದಾಗ – "ಹೆಚ್ಚು" ಆಚರಿಸಿ ಹಾಲು, ಮೊಸರು, ಬೆಲ್ಲ, ಎಳನೀರು ಬೆರೆಸಿದ ಮೃಷ್ಟಾನ್ನ ಪೂಜೆಯೊಡನೆ ಹೊಲಕ್ಕೆ ಬಂದು ಐದು ಹಿಡಿ ಹೊಸರಾಗಿ ಕುಯ್ದು ಪೂಜೆ ಮಾಡಿ, ಅಂದು ಹಸಿರು ರಾಗಿ ತೆನೆಗಳ ವಿಶೇಷ ರುಚಿಕರವಾದ ಕಾಚಕ್ಕಿ ಮಾಡಿಕೊಂಡು ಉರಿದ ಎಳ್ಳು ಮತ್ತು ಬೆಲ್ಲದ ಹದವಾದ ಬೆರಕೆಯೊಡನೆ ಸವಿಯುವರು. ಮಾರ್ಲಮಿಯಲ್ಲಿ ಕೆಲವರು, ಮಖೆ ಮತ್ತು ಸಗ್ಗದ ಬಾಗಿಲು ತೆಗೆಯುವ ಸಂಕ್ರಾಂತಿಯಂದು ಹಲವರು ತಮ್ಮ ತಮ್ಮ ಪಿತೃಗಳ ಸ್ಮರಣಾರ್ಥ ಸಕಲ ಭೋಜ್ಯಗಳ ಎಡೆ ಮಾಡಿ ಪೂಜಿಸುವರು. ನಮ್ಮೂರ ನೂರಾರು ರಾಗಿ ಮೆದೆಗಳು ೩ ಮಾದರಿಯವು.

ಒಂದು ಕುಟುಮಿಯ ಮೆದೆ (ಬುಂಡು ಮೆದೆ) ಆಳೆತ್ತರವರೆಗೆ ಚೌಕಾಕಾರವಾಗಿ ಮೇಲೆ ಮೇಲೆ ಹೋದಂತೆ ಆ ನಾಲ್ಕು ಬದಿಗಳು ಬಾಗಿ ಕೂಡಿಕೊಂಡು ಮುಕ್ತಾಯವಾಗುವ ಕಳಸದ ಕೇಂದ್ರದಲ್ಲಿ ತೆಂಗಿನ ಕಾಯಿ ಗಾತ್ರದ, ಕೆಂಪು ಹಳದಿ ಚೆಂಡು ಹೂಗಳಿಂದ ಶೃಂಗರಿಸಿದ ರಾಗಿ ತೆನೆಗಳ ಗುಚ್ಛ, (ರೈತರು ಇದನ್ನು ವಿಶೇಷವಾಗಿ ತಯಾರಿಸಿ ಇದನ್ನು 'ಕುಟುಮಿ' ಎಂದು ಕರೆಯುವರು) ಎರಡು ಕುಟುಮಿಗಳ ಮೆದೆ. ಇದು ಆಯತಾಕಾರದಲ್ಲಿ ಎರಡು ಬುಂಡು ಮೆದೆಗಳನ್ನು ಒಟ್ಟಿಗೆ ಸೇರಿಸಿದಂತೆ ಉದ್ದ ೮ ರಿಂದ ೧೦, ೧೨, ೧೪ ಮೊಳ ದೂರ.

ಮೂರು ಕುಟುಮಿಗಳ ಮೆದೆ ಹೆಸರೇ ಹೇಳುವಂತೆ ಆಕಡೆ ಈಕಡೆ ಮತ್ತು ನಟ್ಟ ನಡುಮಧ್ಯದಂತೆ ಒಟ್ಟು ೩ ಕುಟುಮಿಗಳು. ಉದ್ದ:೨೦ ರಿಂದ ೩೦ ಅಥವಾ ೪೦ ಮೊಳದವರೆಗೆ ಮೆದೆ ಹಾಕಲು ೧೦ ರಿಂದ ೩೦, ೪೦ ಮಂದಿ ಕಣದಲ್ಲಿ, ಒಟ್ಟಿಗೆ ಸೇರಿ ಗಲಗು ಗದ್ದಲಗಳ ನಡುವೆ ಹೊಸ ಬೆಳೆ ಬೆಳೆದ ಸಂಭ್ರಮದಲ್ಲಿ.....ಅದೊಂದು ಪಂದ್ಯಾಟವೋ ಎಂಬಂತೆ. ಅಂದು ಮೆದೆ ಹಾಕಿಸುವವರ ಮನೆಯಲ್ಲಿ ಸಡಗರದ ಓಡಾಟ. ಅವರೆ, ಹಲಸಂದೆ ಕಾಳಿನೊಡನೆ ಆ ವರ್ಷ ಹೊಸದಾಗಿ ಬೆಳೆದ ಕುಂಬಳ, ಈರೆ, ಬದನೆ, ತಮಾಟಿ ಮುಂತಾದ ಎಲ್ಲ ತರಕಾರಿಗಳು ಬೆರೆತ ಘಮಘಮ ಗಟ್ಟಿ ಎಸರು, ನವಣಕ್ಕಿ ಅನ್ನ, ಅಂದು ಊರವರಿಗೆ

ಊಟ, ಮುಂದೆ ಇದೇ ಕಣದಲ್ಲಿ ಜರುಗುವ ರಾಶಿ ಪೂಜೆಯ, ಹಲಸಿನ ಕಾಯಿ, ಅವರೆ ಕಾಳಿನ ಊಟವಂತೂ.....ಅದರ ಬಗ್ಗೆ ಹೇಳುವುದೇ ಬೇಡ. ಅದಿರಲಿ, ನಮ್ಮೂರಿನವರು ಬೆಳೆಯುತ್ತಿದ್ದ ಬೆಳೆಗಳು. ಮುಂಗಾರಿನಲ್ಲಿ ರಾಗಿ, (ಬೆಳಿ ಮುದ್ಗ, ಕರಿ ಮುದ್ಗ, ಚಿಪ್ಪರುಕ, ಕಾರ್‍ರಾಗಿ, ಕ್ವಾಟಿ ಕರಿಯ ಮಂಡಿಯುದ್ದ ಮಾತ್ರ ಬೆಳೆದು ೩ ತಿಂಗಳಿಗೆ ಕೊಯ್ಲಿಗೆ ಬರುವ 'ಕುಳ್‌ಮಾವನ'ರಾಗಿ, ಐನ್‌ರಾಗಿ ಇತ್ಯಾದಿ) ಭತ್ತ, ಕನ್ನಾಲು, ದೊಡ್ಡಿ ಎಳ್ಳು, ನವಣೆ, ಶ್ಯಾಮೆ, ಬಕ್ ಸೆಣಬು, ಜೋಳ, ನೆಲಗಡಲೆ, ಉಚ್ಚೆಳ್ಳು, ಅಲಸಂದೆ, ಮೆಣಸಿ.

ಹಿಂಗಾರಿಗೆ : ಅವರೆ, ತೊಗರಿ, ಹುರುಳಿ, ಹೆಸರು, ಉದ್ದು, ಕೊತ್ತಂಬರಿ ಸೊಪ್ಪಿನ ಕಡಲೆ ಮುಂತಾಗಿ

ಪ್ರತಿ ರೈತರು ತಮ್ಮ ದೊಡ್ಡ ದೊಡ್ಡ ಗಾಡಿ ಎತ್ತುಗಳು ಮತ್ತು ಹೋರಿಗರುಗಳಿಗೆ ತಮ್ಮ ಹೊಲಗಳಲ್ಲಿ ತಮ್ಮ ಶಕ್ತ್ಯಾನುಸಾರ ವಿಸ್ತೀರ್ಣವನ್ನು ಮೇವಿಗಾಗಿ ಖಾಲಿ ಬಿಟ್ಟುಕೊಂಡು ಆ ಸ್ಥಳವನ್ನು ಮುತುವರ್ಜಿಯಿಂದ ನಿರ್ವಹಿಸಿ ಸಮೃದ್ಧ ಹುಲ್ಲು ಬೆಳೆಸುತ್ತಿದ್ದರು. ಉಳಿದ ಸಾವಿರಾರು ಸಂಖ್ಯೆಯ ದನಗಳನ್ನು ಊರಿನ ಹತ್ತಾರು ಜನ ಬೆಳಿಗ್ಗೆ ಕಾಡಂಚು, ಗೋಮಾಳಗಳಿಗೆ ಮೇಯಿಸಲು ಹೋಗುತ್ತಿದ್ದರು. ಸಂಜೆ ಮನೆಗೆ ಹಿಂದಿರುಗುವಾಗ ಎಸರಿಗೆ ಕಳಲೆ, ಕಾಡುಬಳ್ಳಿಕಾಯಿಗಳ ಸಮೃದ್ಧಿ. ಬೇಸಗೆಯಲ್ಲಿ ಬೇಟೆಯ ಬಾಡು, ಮಳೆಗಾಲದಲ್ಲಿ ಕಪಿಲೆಯ ಮೀನಿನ ಘಮಲು, (ಬೆಳ್ಚಿ, ಗೆಂಡೆ, ಕೊಚ್ಚಲು, ಮರಳು ಮೀನು, ಸೀಗಡಿ, ಇತ್ಯಾದಿ) ಚಳಿಗಾಲದಲ್ಲೋ ಅವರೆಯ ಸೊನೆಯ ಅಮಲು. ಊರಲ್ಲಿ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಸಮೃದ್ಧಿ ಹೆಂಗಸು ಗಂಡಸಾದಿಯಾಗಿ ಹೊಸ ಚಿಗುರು, ಹಳೇ ಬೇರು ಕೂಡಿದ ದಣಿವರಿಯದ ದುಡಿಮೆಯಲ್ಲಿ ಖಾಯಿಲೆ ಕಸಾಲೆಗಳ ಹೆಸರೇ ತಿಳಿಯದು. ಅಂದಹಾಗೆ ನೆಗಡಿ, ಕೆಮ್ಮು, ಶೀತ, ಜ್ವರ ಇವಿಷ್ಟು ಅವರಿಗೆ ಖಾಯಿಲೆಗಳೇ ಅಲ್ಲ. ಬರೀ 'ಕೊಂಕು' ಅಷ್ಟೆ. ಕೋಟೆ ಪಟ್ಟಣದಲ್ಲಿ ಆಸ್ಪತ್ರೆ ಇರುವುದೆಂದೂ, ಅಲ್ಲಿ ದಾಕುಟ್ರು ಎಂಬುವರು ಔಷಧಿಯನ್ನು ಮೈಗೆ ಚುಚ್ಚುವರೆಂದೂ, ಭಯ ಕುತೂಹಲಗಳಿಂದ ಕೇಳುತ್ತಿದ್ದರು. ಪೈಸೆಗಳ ಲೆಕ್ಕದ ಆ ಕಾಲದಲ್ಲಿ ತಮ್ಮ ದಿನನಿತ್ಯದ ಅಂಗಡಿ ಅಗತ್ಯ ವಸ್ತುಗಳನ್ನು ರಾಗಿಯನ್ನೋ ಹುರುಳಿಯನ್ನೋ ವಿನಿಮಯಿಸಿ ಕೊಳ್ಳುತ್ತಿದ್ದರು. ಐದಾರು ಅಂಗಡಿಗಳವರೂ ಸಹ ಸರಗೂರಿನಿಂದ ಸಾಮಾನು ತರಲು ಊರಿನ ರಾಗಿಯನ್ನೂ ಗಾಡಿಗಟ್ಟಲೆ ಸಾಗಿಸುತ್ತಿದ್ದರು. ಸೀಸನ್‌ನಲ್ಲಿ ರಾಗಿ, ಹುರುಳಿ, ಎಳ್ಳು, ಕಡ್ಲೆಕಾಯಿಗಳನ್ನು ಮಾರಿದಾಗ ಅಥವಾ ದೂರದ ಮೈಸೂರಿಗೆ ಕಮಾನುಗಾಡಿಯಲ್ಲಿ ಉರುವಲು ಮರಗಳನ್ನು ಮಾರಿದಾಗ ನೋಟಿನ ಮುಖ ನೋಡುತ್ತಿದ್ದರು. 'ಟೀ' ಎಂಬ ಪೇಯವು ಆಗತಾನೆ ಊರಿಗೆ ಆಗಮಿಸಿತ್ತು. ದೊಡ್ಡ ಆರಂಭ ಮಾಡಿಸುತ್ತಿದ್ದ, ದೊಡ್ಡ ಮನುಷ್ಯರಾದ ಮಳಲಿ ಶಿವಪ್ಪನೋರು "ಟ್ಯಾಟ್ರ" (ಟ್ರಾಕ್ಟರ್) ಎಂಬ ಲಾರಿ ಗಾತ್ರದ ಹೊಲ ಉಳುವ

ಮಿಶಿನ್ ತಂದಿರುವುದಾಗಿ, ಅದು ಒಂದೇ ಬಾರಿಗೆ ಎಂಟು ಏರುಗಳ ಉಳುಮೆ ಮಾಡುತ್ತದೆಂದು ಹೊಸ ಸುದ್ದಿ ಹಬ್ಬಿತ್ತು. ಅದನ್ನು ನೋಡಿದ್ದವನೊಬ್ಬ 'ಅದ ನಾನೂ ನೋಡಿನಿ ತಕ್ಕಾ, ಅದೇನು ಬಾಚಣ್ಗೆ ಇಲ್ದೆ ಬರಿ ಕೈ ಬೆರಳಲ್ಲಿ ಹೆಂಗುಸ್ರು ತಲೆ ಬಾಚ್ದಂಗೆ, ಅದು ಮಾಡೋ ಉಳುಮೆ' ಎಂದದ್ದು....... ಈಗಿನ ನೆನಪು. ಅದಿರಲಿ, ನಮ್ಮ ಕೇಲಿಗ ಪಾತ್ರಧಾರಿ ಪುಟ್ಟಯ್ಯ...ಕಪಿಲಾ ನದಿ ದಡದ ಸಮಾಧಿಯೊಳಗೆ ನನ್ನೂರ ಮಣ್ಣಿನಲ್ಲಿ ಮಣ್ಣಾಗಿ ಮಲಗಿದ್ದಾನೆ. ಅವನೊಂದಿಗೆ ಮುಖವಾಡ ಕಟ್ಟುವ ಸಂಪ್ರದಾಯವೂ ಮಣ್ಣಿನೊಳಕ್ಕೆ ಸೇರಿಕೊಂಡಿದೆ. ಅದಿರಲಿ, ನಮ್ಮ ಊರನ್ನು ಸಲಹಿದ ತಾಯಿ ಕಪಿಲೆಯು ಆ ಊರನ್ನೇ ಮುಳುಗಿಸಿಬಿಟ್ಟಿದೆ, ಕಾರಣ "ಕಪಿಲಾ ಜಲಾಶಯ ಯೋಜನೆ" ಆ ಊರಿನ ಜನ ಹೊಳೆಯಿಂದ ಐದು ಮೈಲಿ ಹಿಂದಕ್ಕೆ ಬಂದು ಕಾಡು ಕಡಿದು ನಾಡು ಮಾಡಿಕೊಂಡಿದ್ದಾರೆ. ಈ ಹೊಸ ಊರಿಗೆ ಕೋಟೆ, ಮೈಸೂರುಗಳು ಒಪ್ಪೊತ್ತಿನೊಳಗೆ ಹೋಗಿ ಬರಬಹುದಾದಷ್ಟು ಹತ್ತಿರಾಗಿವೆ. ಆ ಊರು ಇಂದು, ನಿಮ್ಮಗಳ ಊರಿನಂತೆಯೇ ಇದೆ.

******

ಕೊನೆ ಟಿಪ್ಪಣಿ:–

೧) 'ಜನಪದ ಮಹಾ ಸಂಪುಟ'– ದೇ.ಜ.ಗೌ. ಹಿರೇಕೂರು ಪ್ರಕಾಶನ, ಮೈಸೂರು ೨೦೧೦
೨) 'ಜನಪದ ಮಹಾ ಸಂಪುಟ'– ದೇ.ಜ.ಗೌ. ಹಿರೇಕೂರು ಪ್ರಕಾಶನ, ಮೈಸೂರು ೨೦೧೦
೩) ಸೋಗಳ್ಳಿ ಜನಪದರ ಅನುಭವದ ಹಾಡು

ಅಧ್ಯಾಯ-೫

ಸನಾತನ ತಳಿಗೆ ವಿಜ್ಞಾನದ ಸ್ಪರ್ಶ

ಬೇಸಾಯ ಜ್ಞಾನ ಇರುವ ವ್ಯಕ್ತಿಗೆ ವಿಜ್ಞಾನ ಜ್ಞಾನವೂ ಇದ್ದರೆ ಸಮಾಜಕ್ಕೆ ಎಷ್ಟೆಲ್ಲಾ ಬಗೆಯಲ್ಲಿ ಒಳಿತಾಗುತ್ತದೆ ಎಂಬುದಕ್ಕೆ ಡಾ. ರಾಗಿ ಲಕ್ಷ್ಮಣಯ್ಯನವರೇ ಸಾಕ್ಷಿ. ದಿವಂಗತ ಡಾ. ಎಚ್.ಸಿ. ರಾಗಿ ಲಕ್ಷ್ಮಣಯ್ಯನವರು ಮೈಸೂರು ತಾಲ್ಲೂಕಿನ ಹಾರೋಹಳ್ಳಿ, ಗ್ರಾಮದವರು, ಹುಟ್ಟಿದ್ದು ದಲಿತ ಕುಟುಂಬದಲ್ಲಿ. ಮೂಲಕಸುಬು ಬೇಸಾಯ. ನಮ್ಮ ಹಳ್ಳಿ ಗಾಡಿನ ಶೇಕಡಾ ೮೦ ರಷ್ಟು ಪರಿಶಿಷ್ಟ ಜಾತಿ/ ಪಂಗಡದವರಿಗೆ ಸ್ವಂತ ಜಮೀನಿಲ್ಲ. ಆದರೆ ಹಳ್ಳಿಗಾಡಿನ ಬೇಸಾಯದ ಭಾಗವೇ ಆಗಿರುವ ಅವರಲ್ಲಿ ಬೇಸಾಯ ಜ್ಞಾನವೆಂಬುದೆ ಅಖಿಲಾಂಡ ಕೋಟಿ ಸಂಪತ್ತು. ದಿವಂಗತ ಡಿ. ದೇವರಾಜ ಅರಸರು ಕರ್ನಾಟಕ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ "ಕರ್ನಾಟಕ ಭೂಸುಧಾರಣೆ ಕಾಯ್ದೆ" ತಂದರು. ಈ ಕಾಯ್ದೆ ಗೇಣಿ ಪದ್ಧತಿಯನ್ನು ರದ್ದು ಮಾಡಿತು. **Absenty Land Lordship** ಅಮಾನ್ಯ ಆಯಿತು. ಉಳುವವರೆ ಭೂಒಡೆಯರು ಎಂಬ ಘೋಷಣೆಯ ಪ್ರಕಾರ ಗೇಣಿದಾರರಾಗಿದ್ದ ದಲಿತರೆಲ್ಲ ಭೂ ಒಡೆಯರಾಗುವ ಅವಕಾಶ ಪ್ರಾಪ್ತವಾಯಿತು. ಜಮೀನುಧಾರಿಕೆ, ದಬ್ಬಾಳಿಕೆ ಇರುವೆಡೆಗಳಲ್ಲಿ ಹಕ್ಕನ್ನು ದಕ್ಕಿಸಿಕೊಳ್ಳಲು ಪ್ರಯಾಸ ಪಡಬೇಕಾಯಿತು. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಾಲೀಕರು ಮತ್ತು ಗೇಣಿದಾರರ ನಡುವೆ ೭೦ರ ದಶಕದಲ್ಲಿ ಘರ್ಷಣೆಗಳೇ ಜರುಗಿದವು. ಇಷ್ಟೆಲ್ಲದರ ನಡುವೆ ಬಹುಪಾಲು ಗೇಣಿದಾರರು ಭೂಮಾಲೀಕರಾಗುವಲ್ಲಿ ಯಶಸ್ವಿಯಾದರು. ಇಷ್ಟಲ್ಲದೆ ಬಗರ್ ಹುಕುಂ ಮಂಜೂರಾತಿ ಪ್ರಕರಣಗಳಲ್ಲೂ ದಲಿತರು ಭೂಮಿ ಪಡೆದರು. ಹೀಗೆ ಭೂಮಿ ಪಡೆದ ದಲಿತರು ಭೂಮಿ ಮಾರಿ ಭೂಮಾಲೀಕತ್ವ ಕಳೆದುಕೊಳ್ಳಬಾರದೆಂಬ ಉದಾರ ಆಶಯದಿಂದ ಕರ್ನಾಟಕದಲ್ಲಿ ಹರಿ ಗಿರಿಜನರ ಭೂಪರಭಾರೆ ನಿಷೇಧ ಕಾಯ್ದೆಯೂ ಜಾರಿಗೆ ಬಂದದ್ದರ ಪರಿಣಾಮ ಶತಶತಮಾನಗಳಿಂದ ಭೂವಂಚಿತವಾಗಿದ್ದ ದಲಿತ ಕುಟುಂಬಗಳು ಖಾಯಂ ಭೂಮಾಲಿಕರಾಗುವಂತೆ ಆಯಿತು.

ರಾಗಿಲಕ್ಷ್ಮಣಯ್ಯನವರ ಗ್ರಾಮ ಮೈಸೂರಿನಿಂದ ಹೆಗ್ಗಡದೇವನಕೋಟೆಗೆ ಹೋಗುವ ಮಾರ್ಗದ ಮಧ್ಯದಲ್ಲಿದೆ. ಅವರದು ಮಳೆ ಆಶ್ರಯದ ಹೊಲದ ಜಮೀನು. ಅವರ ಮತ್ತು ಸುತ್ತಲಿನವರ ಮುಖ್ಯ ಬೆಳೆ ರಾಗಿ ಆಗಿತ್ತು. ರಾಗಿ ಜೊತೆ ಅಕ್ಕಡಿ ಸಾಲುಗಳಲ್ಲಿ ಯಳ್ಳು, ಹುಚ್ಚೆಳ್ಳು, ತೊಗರಿ, ಅವರೆ, ಅಲಸಂದೆ, ಮೆಣಸಿನಕಾಯಿ, ಈರುಳ್ಳಿ ಬೆಳೆಯುತ್ತಿದ್ದರು. ರಾಗಿ, ಹುಲ್ಲು ಜಾತಿಯ ಸಸ್ಯ ೧೯೩೦ರ ದಶಕದಲ್ಲಿ ಅವರು ಕಡ್ಡಿರಾಗಿ, ಮಾದಯ್ಯನ ರಾಗಿ ಬೆಳೆಯುತ್ತಿದ್ದರು. ಆಗಿನ ಇಳುವರಿ ಎಕರೆಗೆ ೫ ಕ್ವಿಂಟಾಲ್ ವರೆಗೆ ಇರುತ್ತಿತ್ತು.

೧೯೧೩ರಲ್ಲಿ ಮೈಸೂರು ವ್ಯವಸಾಯ ಇಲಾಖೆಯ ಮೊದಲ ನಿರ್ದೇಶಕರಾಗಿದ್ದವರು ಎಲ್.ಸಿ.ಕೋಲ್ಮನ್ ಇವರು ಮೂಲತಃ ಕೆನಡಾದವರು. ಕುದುರೆ ಏರಿ ಬೇಸಾಯ ಪ್ರದೇಶ ಸುತ್ತುತ್ತಿದ್ದ ಲೆಸ್ಲಿ ಕೋಲ್ಮನ್‌ರವರಿಗೆ ಮಳೆಯ ಅಭಾವ, ಬರದ ಸಂದರ್ಭದಲ್ಲಿ ಹಾಗೂ ಹೀಗೂ ರಾಗಿ ಮಾತ್ರವೇ ಬೆಳೆದಿರುವುದನ್ನು ಕನ್ನಂಬಾಡಿ ಗ್ರಾಮದ ಬಳಿ ಕಂಡು ಆಶ್ಚರ್ಯ ಚಕಿತರಾದರು. ಮೈಸೂರು ಪ್ರದೇಶದ ಬಹುಮುಖ್ಯ ಆಹಾರವಾದ ರಾಗಿಯ ಕುರಿತು ಅದರ ತಳಿ ವೈವಿಧ್ಯದ ಕುರಿತು ವಿಸ್ತರಣೆ ಕುರಿತು ಯೋಜನೆ ರೂಪಿಸಲು ಮುಂದಾದರು. ಅವರ ಪ್ರಕಾರ ೧೯೧೩ರ ಸಂದರ್ಭದಲ್ಲಿ ಕರಿಕಡ್ಡಿ ರಾಗಿ, ಗಿಡ್ಡರಾಗಿ, ಹಸಿರು ಕೊಂಬು ರಾಗಿ, ಮಾದಯ್ಯನ ಗಿರಿ –೧, ಮಾದಯ್ಯನ ಗಿರಿ–೨, ದೊಡ್ಡರಾಗಿ, ಗೌಬಿಲ್ಲೆ ರಾಗಿ, ಮಜ್ಜಿಗೆ ರಾಗಿ ಕಾರ್‌ರಾಗಿ, ಜೇನು ಮುದ್ದೆ ರಾಗಿ ರುದ್ರ ಜಡೆಗಾಗಿ, ಜಡೆಸಂಗ ರಾಗಿ ಎಂಬ ತಳಿಗಳಿದ್ದವು. ಅವು ಎಕರೆಗೆ ಸರಾಸರಿ ೫ರಿಂದ ೧೦ ಕ್ವಿಂಟಾಲ್‌ವರೆಗೆ ಇಳುವರಿ ನೀಡುತ್ತಿದ್ದವು.

ಮಳೆಯ ಅಭಾವದ ಕಾಲದಲ್ಲೂ, ಎಲ್ಲೆಡೆ ಬರ ಅನ್ನಿಸಿದ ಸಂದರ್ಭದಲ್ಲೂ ಬಯಲು ಸೀಮೆಯವರೆಲ್ಲರ ಪ್ರಧಾನ ಆಹಾರವಾಗಿದ್ದ ಕಾರಣದಿಂದಲೂ ರೋಗ ಬಾಧೆ, ಕೀಟ ಬಾಧೆಗಳನ್ನು ಜಯಿಸುವ ಆಹಾರ ಬೆಳೆ ಆದ ಕಾರಣದಿಂದಲೂ, ಜಾನುವಾರುಗಳ ಮೇವಿನ ಅಭಾವ ನೀಗಿಸುವ ಕಾರಣದಿಂದಲೂ ರಾಗಿ ಬೆಳೆಯ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಲೇ ಬೇಕೆಂದು ಎಲ್.ಸಿ. ಕೋಲಮನ್ ತೀರ್ಮಾನಿಸುತ್ತಾರೆ.

COLEMAN . L.C. 1920

THE CULTIVATION OF RAGI IN

MYSORE BULLETIN OF

DEPARTMENT OF AGRICULTURE

MYSORE, GENERAL SERIES – 11

ಆದರೆ ರಾಗಿ ತನ್ನ ಸಾಂಪ್ರದಾಯಕವಾದ ಯಾವುದೇ ಗುಣವನ್ನು ಕಳೆದುಕೊಳ್ಳಲು ಮತ್ತು ಸಂಪ್ರದಾಯಕ್ಕೆ ವಿರುದ್ಧವಾದ ಯಾವುದನ್ನೂ ಸ್ವೀಕರಿಸಿದ, ಸ್ವಕೀಯ ಪರಾಗಸ್ಪರ್ಶದ ಅದರ ಗುಣವನ್ನು ಕಂಡು, ಅದರ ಅಧಿಕ ಇಳುವರಿ ಆಶೆಯನ್ನು ಕೈಬಿಡುತ್ತಾರೆ.

ಮುಂದೆ ಎಲ್.ಸಿ.ಕೋಲ್ಮನ್ ಮತ್ತು ಇತರ ವ್ಯವಸಾಯ ಇಲಾಖೆಯ ಅದಿಕಾರಿಗಳಿಂದಲೂ ಮತ್ತು ೧೯೧೩ ರಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ ಸ್ಥಾಪನೆಯಾದ "ಮೈಸೂರು ಅಗ್ರಿಕಲ್ಚರ್ ಸ್ಕೂಲ್" ನಿಂದಲೂ ಸಾಧ್ಯವಾಗದೆ ಹೋದದನ್ನು ೧೯೪೮ ರಲ್ಲಿ ರಾಗಿ ಲಕ್ಷ್ಮಣಯ್ಯನವರು ಕೈಗೆತ್ತಿಕೊಳ್ಳುತ್ತಾರೆ.

೫.೧. ಇಂಡಾಫ್ ರಾಗಿಯ ಅರುಣೋದಯ

೧೯೨೧ ಮೇ ೧೫ ರಂದು ಹಾರೋಹಳ್ಳಿಗ್ರಾಮದಲ್ಲಿ ಜನಿಸಿದ ಲಕ್ಷ್ಮಣಯ್ಯನವರು ಇಂಟರ್ ಮೀಡಿಯಟ್ ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಮತ್ತು ಬಿ.ಎಸ್.ಸಿ ಪದವಿಯನ್ನುಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪಡೆಯುತ್ತಾರೆ. ಹುಟ್ಟಿನಿಂದ ಕೃಷಿ ಜ್ಞಾನಿಯಾಗಿದ್ದ ಲಕ್ಷ್ಮಣಯ್ಯ – ವ್ಯಾಸಂಗದ ಅವಧಿಯಲ್ಲಿ ಕೃಷಿ ವಿಜ್ಞಾನ ಪದವಿ ಪಡೆದವರಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ಬಿಎಸ್‌ಸಿಯಲ್ಲಿ ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಅವರ ಅಧ್ಯಯನದ ವಿಷಯಗಳಾಗಿದ್ದವು. ೧೯೪೯ ರಲ್ಲಿ ಮಂಡ್ಯದ ವಿ.ಸಿ. ಫಾರಂ ನಲ್ಲಿ ಕಿರಿಯ ಸಹಾಯಕ ಸಸ್ಯ ಶಾಸ್ತ್ರಜ್ಞ ಹುದ್ದೆಗೆ ನೇಮಕವಾದರು.

ರಾಗಿಯ ಮೂಲ ಸ್ವಭಾವ ಕುರಿತಂತೆ ಕೃಷಿ ಪದವಿಧರರೂ, ಬೇಸಾಯ ಕುಟುಂಬದ ಹಿನ್ನೆಲೆಯಿಂದ ಬಂದ ಬರಹಗಾರರೂಆದ ಡಾ. ಕೆ. ಪುಟ್ಟಸ್ವಾಮಿಯವರು ರಾಗಿ ಕುರಿತಂತೆ ಆಡುವ ಮಾತುಗಳು ಇಲ್ಲಿ ಉಲ್ಲೇಖನೀಯ "ರಾಗಿ ಹಸುವಿನಷ್ಟೇ ಸಾತ್ವಿಕವಾದ, ಮನುಷ್ಯನಷ್ಟೇ ಸಂಕೀರ್ಣವಾದ ಮತ್ತು ಸಾಂಪ್ರದಾಯವಾದಿಯಾದ ಬೆಳೆ. ಪರಕೀಯ ಪರಾಗಸ್ಪರ್ಶಕ್ಕೆ ತೆರೆದುಕೊಳ್ಳದ ಈ ಸನಾತನ ಗುಣದ ಬೆಳೆಯನ್ನು ಅಭಿವೃದ್ಧಿ ಪಡಿಸುವುದು ಕಷ್ಟಸಾಧ್ಯ. ಆದರೆ ಮಣ್ಣಿನೊಂದಿಗೆ ನೇರ ಸಂಪರ್ಕ ಪಡೆದಿದ್ದ ಲಕ್ಷ್ಮಣಯ್ಯನವರಿಗೆ ರಾಗಿ ಅಭಿವೃದ್ಧಿ ಬಗ್ಗೆ ಸಹಜ ಆಸಕ್ತಿ ಬಂದಿದ್ದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಪ್ರಪಂಚದ ಅನೇಕ ಸಂಶೋಧನೆಗಳು ಅಚಾನಕ್ಕಾಗಿ ಘಟಿಸಿದಂಥವು. ಲಕ್ಷ್ಮಣಯ್ಯ ಅದನ್ನು ಅಭಿವೃದ್ಧಿಪಡಿಸಲು ವಿಶೇಷ ಸಂಪರ್ಕ ತಂತ್ರ (ಸ್ಪೆಷಲ್ ಕಾಂಟ್ಯಾಕ್ಟ್ ಟೆಕ್ನಿಕ್) ವೊಂದನ್ನು ರೂಪಿಸಿ ಅದರ ಸಾಂಪ್ರದಾಯಕ ಗುಣಗಳನ್ನು ಮುರಿದರು. ಅವರ ಪ್ರಯತ್ನ ತಕ್ಷಣ ಫಲಕೊಟ್ಟಿತು. ಹಾಗೆ ನೋಡಿದರೆ ಪ್ರಥಮ ಪ್ರಯತ್ನದಲ್ಲೇ ಫಲಕಂಡ ಲಕ್ಷ್ಮಣಯ್ಯ ತಳಿ ವಿಜ್ಞಾನದ ಜನಕನೆಂದು ಹೆಸರಾದ ಗ್ರೆಗರ್ ಮೆಂಡಲ್‌ನಷ್ಟೇ ಅದೃಷ್ಟಶಾಲಿ.:"

ಲಕ್ಷ್ಮಣಯ್ಯನವರು ರಾಗಿಯ ಮೂಲ ಸ್ವಭಾವಕ್ಕೆ ಧಕ್ಕೆ ತಾರದಂತೆ ಅಂದರೆ ಅದು ಅಲ್ಪ ಮಳೆ ಆಶ್ರಯದಲ್ಲೂ ಬರಗಾಲ ಸಹಿಷ್ಣುವೂ ಆಗಿ ರೈತಸ್ನೇಹಿಯಾಗಿದ್ದ ಅದರ ಸ್ವಭಾವಕ್ಕೆ ಭಂಗ ಬಾರದಂತೆ ಅಧಿಕ ಇಳುವರಿಯ ದೇಸಿ ತಳಿಗಳ ಸಂವರ್ಧನೆಯತ್ತ ಸಂಶೋಧನೆಗಿಳಿದರು. ಮೊದ ಮೊದಲು ಮೈಸೂರು ಭಾಗದ ರಾಗಿಗೂ ತಮಿಳು ನಾಡಿನ ಕೊಯಮತ್ತೂರಿನ ರಾಗಿಗೂ ನಡುವೆ ಸಂಬಂಧ

ಬೆಸೆದರು. ಅಂದರೆ ಮಂಡ್ಯ ಜಿಲ್ಲೆಯ ಮೇಲುಕೋಟೆ ರಾಗಿಯ ಪಕ್ಕದಲ್ಲಿ ಕೊಯಮತ್ತೂರಿನ ಈರೋಡು ರಾಗಿಯನ್ನು ನೆಟ್ಟು, ರಾಗಿ ವಡೆ ಕಡೆದಾಗ ಎರಡು ತೆನೆಗಳನ್ನು ಒಟ್ಟಾಗಿ ಸೇರಿಸಿ ಬಟ್ಟೆ ಸುತ್ತಿದರು. ಸ್ವಕೀಯ ಪರಾಗ ಸ್ಪರ್ಷದಿಂದ ಎರಡು ಭಾಗದ ವಿಶೇಷ ಇಳುವರಿಯ ತೆನೆಗಳನ್ನು ಪರಸ್ಪರ ತೆರೆದುಕೊಳ್ಳುವಂತೆ ಮಾಡಿದರು. ಈ ಎರಡು ತಳಿಗಳಿಂದ ಬಂದ ಸಂಕರಣ ಬೀಜವನ್ನು ಆಯ್ಕೆ ಮಾಡಿ ಮುಂದಿನ ವರ್ಷದ ಬಿತ್ತನೆಗೆ ಜೋಪಾನ ಮಾಡಿದರು.

೧೯೫೧ ರಲ್ಲಿ ಅವರ ಮೇಲುಕೋಟೆ ಮತ್ತು ಈರೋಡ್ ತಳಿಗಳ ಸಮಾಗಮದ ಸಂಕೇತವಾಗಿ ಅಧಿಕ ಇಳುವರಿಯ "ಅರುಣರಾಗಿ" ಉದಯವಾಯಿತು. ನಂತರ ೧೯೫೪ ರವರೆಗೆ ಉದಯ, ಕಾವೇರಿ, ಅನ್ನಪೂರ್ಣ, ಶಕ್ತಿ ಮುಂತಾಗಿ ಅಭಿವೃದ್ಧಿ ಪಡಿಸಿದ ದೇಸೀ ತಳಿಗಳು ಲಕ್ಷ್ಮಣಯ್ಯನವರ ಟಂಕಸಾಲೆಯಿಂದ ಹೊರಬಂದವು. ಇದರಿಂದ ರಾಗಿಯ ಇಳುವರಿ ಎಕರೆಗೆ ಸರಾಸರಿ ೨೦ ಕ್ವಿಂಟಾಲ್ ಆಯಿತು. ನಾಲ್ಕು ಎಕರೆಯಲ್ಲಿ ಬೆಳೆಯಬಹುದಾಗಿದ್ದ ರಾಗಿಯನ್ನು ಒಂದೇ ಎಕರೆಯಲ್ಲಿ ಬೆಳೆಯುವಂತಾದಾಗ ರಾಗಿಗಾಗಿ ಮೀಸಲಿಡುತ್ತಿದ್ದ ಉಳಿದ ಮೂರು ಎಕರೆಯಲ್ಲಿ ಬೇರೆ ಬೇರೆ ಅಗತ್ಯದ ಬೆಳೆ ಬೆಳೆಯಲು ರೈತರಿಗೆ ಅನುಕೂಲವಾಯಿತು. ಆ ಕಾಲದ ರೈತರು ಮತ್ತು ಹಳ್ಳಿಗಳು ತಮ್ಮ ಮನೆಗಳಿಗೆ ಮತ್ತು ಇಡೀ ಹಳ್ಳಿಗೆ ಅಗತ್ಯವಾದ ಎಲ್ಲವನ್ನು ಬೆಳೆಯುತ್ತಿದ್ದರು. ಹೆಚ್ಚುವರಿಯಾದವುಗಳನ್ನು ಸಂತೆಯಲ್ಲಿ ಮಾರುತ್ತಿದ್ದರು. ದೇಶೀ ರಾಗಿಯ ಉತ್ಪಾದನೆ ಹೆಚ್ಚಾದ ಪರಿಣಾಮ ರಾಗಿಗಾಗಿ ಮೀಸಲಿದ್ದ ಹೆಚ್ಚುವರಿ ಜಮೀನು ಇತರ ಬೆಳೆಗಳನ್ನು ಬೆಳೆಯಲು ಉಪಯುಕ್ತವಾಯಿತು.

ರಾಗಿಯ ದೇಶೀ ತಳಿ ಅಭಿವೃದ್ಧಿಯ ಬಳಿಕ ರಾಗಿಯ ಮೂಲ ಆಫ್ರಿಕಾ ಎಂಬುದು ಲಕ್ಷ್ಮಣಯ್ಯನವರಿಗೆ ತಿಳಿಯಿತು. ಆಫ್ರಿಕಾದ ನಾನಾಭಾಗಗಳಿಂದ ರಾಕ್‌ಫೆಲ್ಲರ್ ಫೌಂಡೇಶನ್ ಮೂಲಕ ರಾಗಿತರಿಸಿದರು. ಇಂಡಿಯಾ ಮತ್ತು ಆಫ್ರಿಕಾ ದೇಶದ ಎರಡೂ ತಳಿಗಳನ್ನು ಸಂಯೋಜಿಸಿ ತಳಿ ರೂಪಿಸಿ ೧೯೬೪ ರಲ್ಲಿ 'ಇಂಡಾಫ್' ತಳಿ ಬಿಡುಗಡೆ ಮಾಡಿದರು. ಈಗಲೂ ಕೂಡ ಇಂಡಾಫ್ ೧ ರಿಂದ ೯ರವರೆಗಿನ ಒಂಭತ್ತು ತಳಿಗಳ ಅಧಿಕ ಇಳುವರಿಯ ತಳಿಗಳಾಗಿ ರೈತರ ಮನೆ ಮಾತಾಗಿವೆ. ಋತುವಿಗೊಂದು ತಳಿಯಂತೆ ವರ್ಷದ ಎಲ್ಲಾ ಋತುಗಳಲ್ಲೂ ಬೆಳೆಯಬಹುದಾದ ತಳಿ ವಿಶೇಷಗಳನ್ನು ರಾಗಿ ಲಕ್ಷ್ಮಣಯ್ಯನವರು ಅಭಿವೃದ್ಧಿ ಪಡಿಸಿದರು. ಅವರ ಈ ಪ್ರಯತ್ನದಿಂದಾಗಿ ಎಕರೆಗೆ ೨೦ರಿಂದ ೩೦ ಕ್ವಿಂಟಾಲ್ ರಾಗಿ ಬೆಳೆಯುವಂತಾಯಿತು.

ಮುಂಗಾರು, ಹಿಂಗಾರುಗಳಲ್ಲಿ ಮಳೆ ವ್ಯತ್ಯಾಸ ಆದರೆ ಚಳಿಗಾಲದಲ್ಲಿ ಬೆಳೆಯುವ ಇಂಡಾಫ್–೮ ರ ತಳಿ ಅಭಿವೃದ್ಧಿ ಪಡಿಸಿ ರಾಗಿ ಯಾವ ಕಾಲಕ್ಕೂ ರೈತರ ಕೈಬಿಡದಂತೆ ಲಕ್ಷ್ಮಣಯ್ಯ ನೋಡಿಕೊಂಡರು. ೧೯೭೯ ರಲ್ಲಿ 'ಬಿಳಿ' ಬಣ್ಣದ

ಗೋಧಿ 'ಹಸಿರು ಕ್ರಾಂತಿಯಾಗಿ' ಗುರುತಿಸಿಕೊಂಡಿತು. ಡಾ. ನಾರ್ಮನ್ ಬೋರ್ಲಾಗ್ ಮತ್ತು ಡಾ॥ ಎಂ.ಎಸ್. ಸ್ವಾಮಿನಾಥನ್‌ರ ಹಸಿರು ಕ್ರಾಂತಿ ಕ್ರಮೇಣ ಇಳುವರಿ ಕುಸಿತಕ್ಕೆ ಕಾರಣವಾಗಿ ರೈತರ ಆತ್ಮಹತ್ಯೆಗೆ ದಾರಿಯಾಯಿತು. ಆದರೆ ರಾಗಿ ಲಕ್ಷ್ಮಣಯ್ಯರವರ "ಕಪ್ಪು" ರಾಗಿಕ್ರಾಂತಿ ಅಪೂರ್ವ ಯಶಸ್ಸು ಕಂಡು ದುಡಿವ ಸಂಸ್ಕೃತಿಯ ಜನರ ತಲೆಕಾಯಿತು.

ಫಲಿತಾಂಶದಲ್ಲಿ ಹಸಿರು ಕ್ರಾಂತಿಗೂ ಮೀರಿದ ಯಶಸ್ಸು ಲಕ್ಷ್ಮಣಯ್ಯನವರ ರಾಗಿ ಕ್ರಾಂತಿಯಲ್ಲಿದೆ. ಆದರೆ ಅವರ ಕ್ರಾಂತಿಯನ್ನು ವಿಜ್ಞಾನ ಲೋಕ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳು ಕೇವಲ ಎಂಬಂತೆ ಕಡೆಗಣಿಸಿದವು. ಹೀಗೆ ಕಡೆಗಣಿಸಲ್ಪಡಲು ಲಕ್ಷ್ಮಣಯ್ಯ 'ದಲಿತರು' ಎಂಬುದು ಒಂದು ಕಾರಣ. ರಾಗಿ – ಬಡವರ, ದಲಿತರ, ರೈತರ, ಕಾರ್ಮಿಕರ ಆಹಾರ ಎಂಬುದು ಎರಡನೇ ಕಾರಣ. ಜೊತೆಗೆ ರಾಗಿ ಅಪ್ಪಟ ದ್ರಾವಿಡ ಪದ್ಧತಿಗೆ ಸೇರಿದ ಆಹಾರ ಎಂಬುದು ಮೂರನೇ ಕಾರಣ.

೫.೨. ಕೃಷಿ ವಿಜ್ಞಾನಿಗಳ ಅನಿಸಿಕೆ

ಈ ಸಂದರ್ಭದಲ್ಲಿ ಲಕ್ಷ್ಮಣಯ್ಯನವರ ಸಮಕಾಲೀನರಾದ ಕೃಷಿ ವಿಜ್ಞಾನಿ ಎಂ. ಶಿವಲಿಂಗಯ್ಯನವರ ಅಭಿಪ್ರಾಯ ಗಮನಿಸುವುದು ಸೂಕ್ತ. "ಶ್ರೀ ಲಕ್ಷ್ಮಣಯ್ಯನವರ ಇಂಡಾಫ್ ಸರಣಿಯ ರಾಗಿ ಬರದೆ ಹೋಗಿದ್ದರೆ ಬಡವರಿಗೆ ರಾಗಿ ಗಂಜಿ ಸಿಗುವುದು ಕೂಡ ಕಷ್ಟ ಆಗಿರುತ್ತಿತ್ತು. ಬಿ.ಎಸ್ಸಿ. ಪದವಿ ಪಡೆದು ಸಂಶೋಧನಾ ಸಹಾಯಕನಾಗಿ ಕೃಷಿ ಇಲಾಖೆಗೆ ಬಂದು, ಇಂಡಾಫ್ ಕೊಟ್ಟ ಲಕ್ಷ್ಮಣಯ್ಯ ಕರ್ನಾಟಕದ ನಾರ್ಮನ್ ಬೋರ್ಲಾಗ್ ಇದ್ದಂತೆ. ನಾನು ಕೂಡ ಕೃಷಿ ವಿಜ್ಞಾನದಲ್ಲಿ ಪದವಿ ಪಡೆದವನು. ನಮ್ಮ ಅದೇ ಕೃಷಿ ವಿಜ್ಞಾನಿಗಳು ಏನು ಮಾಡಿದ್ದಾರೆ ಅಂತ ಕೂಡ ಗೊತ್ತು. ವಿದೇಶಗಳಿಗೆ ಹೋಗುವ ನಮ್ಮ ಅನೇಕ ವಿಜ್ಞಾನಿಗಳು ಅಲ್ಲಿಂದ ಕೆಲವು ತಳಿಗಳನ್ನು ಕದ್ದು ಇಲ್ಲಿ ತಂದುಬೆಳೆದು, ನಾವೇ ಕಂಡುಹಿಡಿದ ಹೊಸ ವೆರೈಟಿ ಎಂದುಹೆಸರು ಮಾಡಿಕೊಂಡವರು ನಮಗೆ ಗೊತ್ತು. ಆದರೆ ಲಕ್ಷ್ಮಣಯ್ಯ ವಿಶ್ವವಿದ್ಯಾನಿಲಯದ ಬೆಂಬಲ, ಸಹಕಾರವಿಲ್ಲದೆ ಕಷ್ಟುಪಟ್ಟು ದುಡಿದು ರಾಗಿಗೆ ಸುರಕ್ಷಿತವಾದ ಸ್ಥಾನ ಕಲ್ಪಿಸಿದರು. ಅವರು ಕೃಷಿ ವಿಜ್ಞಾನ ಓದಿದವರಲ್ಲ ಅನ್ನುವ ಕಾರಣಕ್ಕೆ ದಲಿತರು ಎಂಬ ಕಾರಣಕ್ಕೆ ಸಿಗಲೇಬೇಕಾಗಿದ್ದ ಮಾನ್ಯತೆ ಸಿಗಲೇ ಇಲ್ಲ.

"ಶೂದ್ರರನ್ನು ಶೂದ್ರರು ಅರ್ಥ ಮಾಡಿಕೊಂಡ ಹಾಗೆ ಶೂದ್ರರನ್ನು ಅರ್ಥಮಾಡಿಕೊಳ್ಳುವುದು ಬೇರೆಯವರಿಗೆ ಕಷ್ಟವೇ ಆಗಬಹುದು. ಅದಕ್ಕೆ ಏನೋ ನನಗೆ ಕುವೆಂಪು, ದೇವನೂರು ಮಹಾದೇವ ಮೊಗಳ್ಳಿ ಗಣೇಶ್‌ರವರ ಸಾಹಿತ್ಯ ಇಷ್ಟವಾಗುತ್ತದೆ. ನನ್ನ ಹೃದಯದಲ್ಲಿ ಲಕ್ಷ್ಮಣಯ್ಯನವರಿದ್ದಾರೆ. ಲಕ್ಷ್ಮಣಯ್ಯನವರನ್ನು ಸ್ಮರಿಸಿ ಗೌರವಿಸುವುದು ನಮ್ಮ ಕರ್ತವ್ಯ"

ಪ್ರೊ॥ ಚಿಕ್ಕವೆಂಟೇಶಯ್ಯನವರ ಹೇಳಿಕೆ (ಕೃಷಿ ವಿಜ್ಞಾನಿಗಳು, ಜಿ.ಕೆ.ವಿ.ಕೆ. ಬೆಂಗಳೂರು)

"ನಮ್ಮ ಜಮೀನಿನಲ್ಲಿ ಕೆಲಸ ಮಾಡುವ ಕೂಲಿಗಳು ಹಬ್ಬ ಹರಿದಿನಗಳಲ್ಲಿ ಮಂಕರಿ ತಂದು ಊಟ ಹಾಕಿಸಿಕೊಂಡು ಹೋಗುತ್ತಿದ್ದರು. ಅವರಿಗೂ ಅರ್ಧ ಎಕರೆ, ಒಂದುಎಕರೆ ಜಮೀನು ಇದ್ದರೂ ಅದರಲ್ಲಿ ಬೆಳೆದದ್ದು ಸಾಕಾಗುತ್ತಿರಲಿಲ್ಲ. ಕಾರಣ ಬಡತನ, ಮಕ್ಕಳು ಜಾಸ್ತಿ, ಅಂದಿನ ದಿನಗಳಲ್ಲಿ ಕೂಲಿ ಸಾಕಾಗುತ್ತಿರಲಿಲ್ಲ. ಇವತ್ತು ಹೆಚ್ಚಿನವರಿಗೆ ಆ ಪರಿಸ್ಥಿತಿ ಇಲ್ಲ. ಕಾರಣ ಅಂದ್ರೆ ರಾಗಿ ಲಕ್ಷ್ಮಣಯ್ಯನವರು. ಹತ್ತು ಎಕರೆಗಳಲ್ಲಿ ಬೆಳೆಯುತ್ತಿದ್ದರನ್ನು ಒಂದೆರಡು ಎಕರೆಯಲ್ಲಿ ಬೆಳೆಯುವಂತೆ ಮಾಡಿ ರೈತರ ಬಾಳು ಹಸನಾಗುವಂತೆ ಮಾಡಿದರು. ಒಂದು ವರ್ಷ ರಾಗಿ ಬೆಳೆದರೆ ಮೂರು ವರ್ಷ ತಿನ್ನುವಂತಹ ತಳಿಗಳನ್ನು ಕೊಟ್ಟರು.

ರಾಗಿ ಸ್ವೆಲ್ಫ ಪಾಲಿನೇಟೆಡ್ ಕ್ರಾಪ್, ಆದ್ದರಿಂದ ಅದನ್ನು ಕ್ರಾಸ್ ಮಾಡುವುದಕ್ಕಾಗಿ ಅವರು ಕಾಂಟ್ಯಾಕ್ಟ್ ಮೆಥೆಡ್ ಒಂದನ್ನು ರೂಪಿಸಿದರು. ೧೧೦ ದಿನಕ್ಕೆ ಒಂದು ರಾಗಿ ತೆನೆ ಬಂದರೆ ಇನ್ನೊಂದು ೧೨೦ ದಿನಕ್ಕೆ ಬರುತ್ತದೆ. ಅದಕ್ಕೆ ಟೈಂ ಅಡ್ಜಸ್ಟ್ ಮಾಡುತ್ತಿದ್ದರು. ಹೇಗೆಂದರೆ ಹತ್ತು ದಿನ ಮೊದಲು ೧೨೦ ದಿನದ ಕ್ರಾಪನ್ನ ಬಿತ್ತನೆ ಮಾಡುವುದು ನಂತರ ೧೧೦ ದಿನದ ಕ್ರಾಪನ್ನು ಬಿತ್ತನೆ ಮಾಡುವುದು ಹಾಗೆ ಮಾಡಿದಾಗ ಎರಡೂ ೧೧೦ ದಿನಕ್ಕೆ ತೆನೆ ಬರುತ್ತವೆ. ಎರಡೂ ತೆನೆಗಳನ್ನು ಸೇರಿಸಿ ಬಟ್ಟೆಯಿಂದ ಮುಚ್ಚಿ ಕಟ್ಟಿಬಿಡುವುದು ಆಗ ಕ್ರಾಸ್ ಪಾಲಿನೇಷನ್ ಆಗಿಬಿಡುತ್ತಿತ್ತು. ಕ್ರಾಸ್ ಆಗಿರುವುದನ್ನು ಕಂಡು ಹಿಡಿಯುವುದು ಹೇಗೆ? ಅದಕ್ಕೂ ಒಂದು ವಿಧಾನ ಕಂಡು ಹಿಡಿದಿದ್ದರು. ಸೆಗ್ರಿಗೇಷನ್ ಮೆಥೆಡ್ ಅಂತ. ಆ ಕಾಳುಗಳನ್ನು ಸಂಗ್ರಹಿಸಿ ಬಿತ್ತನೆ ಮಾಡಿದರೆ ಒಂದೊಂದು ತೆನೆ ಮುಷ್ಟಿ ಗಾತ್ರ ಇರುತ್ತಿದ್ದವು. ಆ ಕಾಳುಗಳನ್ನು ಮತ್ತೆ ಮತ್ತೆ ಬಿತ್ತನೆ ಮಾಡಿ......ಮತ್ತೆ ಆಯ್ಕೆ ಮಾಡಿ ಹೀಗೆ ಮಾಡಿದ ೩–೪ ವರ್ಷಗಳ ನಂತರ ತಳಿಯನ್ನು ಬಿಡುಗಡೆ ಮಾಡುತ್ತಿದ್ದರು. ಬೇರೆ ವಿಜ್ಞಾನಿಗಳು ಹಾಗಲ್ಲ, ಇವತ್ತು ಹಾಕಿದರೆ ನಾಳೆ ಬಂದು ಬಿಡಬೇಕು, ಇಂಥವರನ್ನು ದೋಸೆ ವಿಜ್ಞಾನಿಗಳು ಎಂದು ಕರೆಯಬೇಕು. ನಮ್ಮ ಹಲವಾರು ಕೃಷಿ ವಿಜ್ಞಾನಿಗಳು – ಪದವಿ ಪಡೆದ ಕಾರಣವಾಗಿಯೇ ವಿಜ್ಞಾನಿಗಳೆನಿಸಿಕೊಂಡಿದ್ದರೆ ಹೊರತು ರಾಗಿ ಲಕ್ಷ್ಮಣಯ್ಯನವರ ಹಾಗೆ ನಿಜ ವಿಜ್ಞಾನಿಗಳಾಗಿರಲಿಲ್ಲ. ಆ ಕಾರಣದಿಂದಲೇ ಇವರು ಕಂಡು ಹಿಡಿದೆ ಎಂಬ ತಳಿಗಳೆಲ್ಲ ರೋಗಗ್ರಸ್ತ ತಳಿಗಳಾಗಿರುವುದು.

ಇವತ್ತು ಮಂಡ್ಯ ಜಿಲ್ಲೆಯ ರೈತರ ಮನೆಗಳಲ್ಲಿ ವಿಶ್ವೇಶ್ವರಯ್ಯನವರ ಫೋಟೋ ಹಾಕಿದ್ದಾರೆ. ಅದರ ಪಕ್ಕದಲ್ಲೆ ರಾಗಿಲಕ್ಷ್ಮಣಯ್ಯನವರ ಪೋಟೊನೂ ಇದೆ. ಕನ್ನಂಬಾಡಿ ಕಟ್ಟೆಯಿಂದ ಮಂಡ್ಯದ ರೈತರಿಗೆ ಎಷ್ಟು ಸಹಾಯ ಆಯ್ತೋ ಅದಕ್ಕಿಂತ ಹೆಚ್ಚಿನ ಸಹಾಯ ಲಕ್ಷ್ಮಣಯ್ಯನವರಿಂದ ರಾಗಿ ಬೆಳೆಯುವ ರೈತ ಸಮುದಾಯಕ್ಕೆ ಆಯಿತು."

೪.೨ ಪ್ರೊ। ಎಸ್.ಬಿಸಿಲಯ್ಯ – ರಾಗಿ ಕುರಿತು (ಮಾಜಿ ಕುಲಪತಿ ಜಿ.ಕೆ.ವಿ.ಕೆ. ಬೆಂಗಳೂರು).

"ಬೇರೆ ಯಾರು ಯಾರೋ ವಿದೇಶಿ ತಳಿಗಳನ್ನು ತಂದು ನಮ್ಮ ನೆಲದಲ್ಲಿ ಬೆಳೆದು ನಾನು ಕಂಡು ಹಿಡಿದದ್ದು ಎಂದರು. ಕೆಲವರು ಹಲವಾರು ವೆರೈಟಿ ಬಿಡುಗಡೆ ಮಾಡಿದರು. ಅವು ಸರ್ವೈವ್ ಆಗಲಿಲ್ಲ. ಒಂದು ಸನ್ಮಾನ, ಪ್ರಚಾರ, ಪ್ರೊಮೋಷನ್ ಅಷ್ಟಕ್ಕೆ ಅವು ಸೀಮಿತವಾದವು. ಇನ್ನೂ ಕೆಲವು ಕೃಷಿ ವಿಜ್ಞಾನಿಗಳಿದ್ದಾರೆ. ಬೇರಿಗೆ ಒಂದು, ತಾಯಿ ಬೇರಿಗೆ ಒಂದು, ಪ್ರತಿ ಎಲೆಗೊಂದೊಂದು ರೀಸರ್ಚ್ ಪೇಪರ್ ಪ್ರಕಟಮಾಡ್ತಾರೆ. ರಾಶಿ ರಾಶಿ ರೀಸರ್ಚ್ ಪೇಪರ್‌ಗಳು ಪ್ರಕಟವಾಗುತ್ತಲೇ ಇವೆ. ಇದರಿಂದ ರೈತರಿಗೆ ಏನೂ ಉಪಯೋಗ ಆಗಲಿಲ್ಲ. ಅದು ಬೇಸಿಕ್ ರೀಸರ್ಚ್. ಅದನ್ನು ನಾನು ಬೇಡ ಅನ್ನೋದಿಲ್ಲ. ಆದರೆ ಅದರಿಂದ ರೈತನಿಗಾದ ಅನುಕೂಲ ಏನು?

ಲಕ್ಷ್ಮಣಯ್ಯ ರೈತರಿಗಾಗಿ ಮಾಡಿದರು, ಧಾರವಾಡದಲ್ಲಿ ಕಾತರಕಿ ಅನ್ನುವ ವಿಜ್ಞಾನಿ ರೈತರಿಗಾಗಿ ಮಾಡಿದರು, ಇಂದು ವಿಶ್ವವಿದ್ಯಾನಿಲಯಗಳು ಇಂತಹವರನ್ನು ಮರೆತರೂ ರೈತರು ಇವರನ್ನು ಮರೆಯುವುದಿಲ್ಲ. ರಾಗಿ ಲಕ್ಷ್ಮಣಯ್ಯನವರು ಬಿಡುಗಡೆ ಮಾಡಿದ ರಾಗಿ ತಳಿಗಳ ಸಂಖ್ಯೆಗಿಂತ ಬೇರೆ ಬೇರೆ ಹವಾಗುಣ ಹಾಗೂ ಕಾಲಮಿತಿಯಲ್ಲಿ ಬೆಳೆಯಬಹುದಾದ ಇಂಡಾಫ್ ತಳಿಗಳ ಸರಣಿಗಿಂತ, ಅವರಿಗಿದ್ದ ಸಾಮಾಜಿಕ ಕಳಕಳಿಗಳೇ ಬಹಳ ಮುಖ್ಯವಾದದ್ದು. Ragi Lakshmannaiah will continue to live in the minds of the people and hearts of the peoples".

ಡಾ. ಅ. ಶೇಷಾದ್ರಿ ಅಯ್ಯರ್ ನೆನಪಲ್ಲಿ "೧೯೬೨ ರಲ್ಲಿ ಗ್ರಾಮ ಶಿಕ್ಷಣ ಕೇಂದ್ರ ಅಂತ ಇತ್ತು. ಅಲ್ಲಿ ಕೆಲಸ ಮಾಡುತ್ತಿದ್ದೆ. ಆಗ ರೈತರೊಟ್ಟಿಗೆ ಕೆಲಸ ಮಾಡಬೇಕಾಗಿತ್ತು. ಆ ಮೊದಲೇ ನಾನು ಲಕ್ಷ್ಮಣಯ್ಯನವರ ಹೆಸರು ಕೇಳಿದ್ದೆ. ಆಗ ಲಕ್ಷ್ಮಣಯ್ಯನವರನ್ನು ಭೇಟಿ ಮಾಡುತ್ತಿದ್ದೆ. ೧೯೬೬ ರಲ್ಲಿ ಕೃಷಿ ವಿಶ್ವವಿದ್ಯಾಲಯಕ್ಕೆ ಬಂದೆ, ಆದಾಗಿನಿಂದ ನನಗೆ ಲಕ್ಷ್ಮಣಯ್ಯನವರ ಸಂಪರ್ಕ ಜಾಸ್ತಿ ಆಯಿತು. ಅವರೂ ಬರ್ತಾ ಇದ್ದರು. ಇಬ್ಬರೂ ಮಾತನಾಡುತ್ತಿದ್ದೆವು. ಅವರು ಆ ಹೊತ್ತಿಗಾಗಲೇ ಇಂಡಾಫ್ ತಳಿಗಳ ಬಗ್ಗೆ ಕೆಲಸ ಮಾಡಿದ್ದರು. ಇದಕ್ಕಿಂತ ಮೊದಲು ಕಾವೇರಿ ರಾಗಿ ತಳಿ ಬಂದಿತ್ತು. ಖೋಡೇಸ್‌ರವರ ಜಮೀನಿನಲ್ಲಿ ಮಂಜಪ್ಪ ಅಂತ ಇದ್ದ. ಆತ ವ್ಯವಸಾಯದ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದನು. ಅವನಿಗೆ ಹೇಳಿ ಖೋಡೇಸ್‌ನವರ ಜಮೀನಿನಲ್ಲಿ ಕಾವೇರಿ ರಾಗಿ ತಳಿಯನ್ನು ಸುಮಾರು ೬೦೦ ರಿಂದ ೮೦೦ ಎಕರೆಗೆ ಹಾಕಿಸಿದೆವು. ಅದಕ್ಕೆ ಪ್ರಚಾರ ಜಾಸ್ತಿ ಸಿಕ್ಕಿತು. ಅದು ಬಂಪರ್ ಬೆಳೆ. ಆಗ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ "ಬೆಣಚು ಕಲ್ಲಿನಲ್ಲಿ ಬಂಗಾರದ ಬೆಳೆ" ಎಂಬ ಶೀರ್ಷಿಕೆಯಲ್ಲಿ ಲೇಖನ ಪ್ರಕಟವಾಯಿತು. ಕಟಾವಿನ ಸಮಯದಲ್ಲಿ ಲಕ್ಷ್ಮಣಯ್ಯನವರು ಬಂದಿದ್ದರು. ವಿಶಾಲವಾದ ಕಣ. ೧೦೦ ಉದ್ದ ೧೦೦ ಅಡಿ

ಅಗಲದ ದೊಡ್ಡ ಮೆದೆ. ಅದನ್ನು ನೋಡೋಕೆ ಎರಡು ಕಣ್ಣುಗಳು ಸಾಲುತ್ತಿರಲಿಲ್ಲ. ಮೆದೆಯ ಮೇಲೆ ಲಕ್ಷ್ಮಣಯ್ಯ ಹತ್ತಿ ಕುಳಿತುಕೊಂಡುಬಿಟ್ಟರು. ಫಸಲನ್ನು ನೋಡಿ ತುಂಬಾ ಸಂತೋಷ ಪಟ್ಟರು.

ಅನಂತರ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿ.ಕೆ.ವಿ.ಕೆ) ಕ್ಷೇತ್ರೋತ್ಸವವಾಯಿತು. ಅಲ್ಲಿ ಶ್ರೀಹರಿಖೋಡೆಯವರು ಲಕ್ಷ್ಮಣಯ್ಯನವರಿಗೆ ಎರಡು ಸಾವಿರದ ಐದು ನೂರು ರೂಪಾಯಿಗಳ ನಗದು ಬಹುಮಾನ ಕೊಟ್ಟರು. ಆ ಕಾಲಕ್ಕೆ ಅದು ದೊಡ್ಡ ಮೊತ್ತವೇ ಆಗಿತ್ತು.

ಲಕ್ಷ್ಮಣಯ್ಯನವರ ಮನಸ್ಸಿನಲ್ಲಿ ಏನಿತ್ತು ಅಂದರೆ, ರಾಗಿ ಹೆಚ್ಚು ಜನರ ಆಹಾರ, ಉತ್ಪಾದನೆ ಕಡಿಮೆ, ಬೇಡಿಕೆ ಹೆಚ್ಚು, ರಾಗಿ ಸಿಕ್ತಾ ಇರಲಿಲ್ಲ. ದನಗಳಿಗೆ ರಾಗಿ ಹುಲ್ಲು ಎಲ್ಲಾ ಹುಲ್ಲಿಗಿಂತಲೂ ಉತ್ಕೃಷ್ಟ ಆಹಾರ ಯಾವುದೇ ಸಂಶೋಧನೆ ಮಾಡಿಯಾದರೂ ಇತ್ತ ಕಾಳು ಅತ್ತ ಹುಲ್ಲು ಎರಡೂ ಜಾಸ್ತಿಯಾಗಬೇಕು. ಆ ದೃಷ್ಟಿ ಇಟ್ಟುಕೊಂಡು ಪ್ರಯೋಗ ಮಾಡುತ್ತಿದ್ದರು. ಆಫ್ರಿಕಾ ದೇಶದಿಂದ ಕೆಲವು ತಳಿಗಳನ್ನು ತರಿಸಿದರು. ಅದನ್ನು ಇಲ್ಲಿಯ ತಳಿಗಳ ಜೊತೆ ಕ್ರಾಸ್ ಮಾಡಿ ನೀರಾವರಿಗೆ ಯಾವುದು ಬರುತ್ತೆ ಕಡಿಮೆ ನೀರಿದ್ದರೆ ಯಾವ ತಳಿಯನ್ನು ಹಾಕಬಹುದು. ತಡವಾಗಿ ಯಾವುದನ್ನು ಬಿತ್ತನೆ ಮಾಡಬಹುದು ಎಂದು ಪ್ರತಿಯೊಂದನ್ನು ಪ್ರಯೋಗ ಮಾಡುತ್ತ ಹೋದರು. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಇದ್ದಿದ್ದರಿಂದ ಮಾಡಿದ್ದನ್ನು ನಾನು ರೈತರಿಗೆ ಕೊಡುತ್ತಾ ಹೋದೆ. ಅದಕ್ಕೆ ಮೊದಲು ಕರಿಕಡ್ಡಿ ರಾಗಿ, ಬಿಳಿಕಡ್ಡಿ ರಾಗಿ ಜೇನುಗೂಡು ಮತ್ತು ಕೋಣನ ಕೊಂಬು ಎನ್ನುವ ಬೇಕಾದಷ್ಟು ತಳಿಗಳಿದ್ದವು. ಅವ್ಯಾವು ಈಗ ಕಂಡು ಬರುವುದಿಲ್ಲ. ಇಂಡಾಫ್ ತಳಿಗಳು ಬಂದು ಸುಮಾರು ನಲವತ್ತು ವರ್ಷಗಳಾಗಿರಬಹುದು.

ಲಕ್ಷ್ಮಣಯ್ಯ (ರಾಗಿ ಲಕ್ಷ್ಮಣಯ್ಯ) ಅವರನ್ನು 'ಸುದ್ದಿಸಂಗಾತಿ'ಗಾಗಿ ಡಾ.ಕೆ. ಪುಟ್ಟಸ್ವಾಮಿ ಸಂದರ್ಶನ ಮಾಡುತ್ತಾರೆ.

ಅವರು ಕೇಳುವ ಒಂದು ಪ್ರಶ್ನೆ ಮತ್ತು ರಾಗಿ ಲಕ್ಷ್ಮಣಯ್ಯನವರ ಪ್ರತಿಕ್ರಿಯೆಯನ್ನು ಈ ಸಂದರ್ಭಕ್ಕೆ ಜೋಡಿಸಿ ಕೊಳ್ಳಬಹುದು.

(ಡಾ.ಕೆ. ಪುಟ್ಟಸ್ವಾಮಿ ಮೂಲತಃ ಕೃಷಿ ಪದವೀಧರರು, ಪತ್ರಕರ್ತರು, ಬರಹಗಾರರು, ಸರಕಾರಿ ಸೇವೆಯಲ್ಲಿಯೂ ಇರುವವರು).

ಡಾ. ಕೆ. ಪುಟ್ಟಸ್ವಾಮಿ: "ಜೀವ ಸಂಕುಲಗಳ ಸಮತೋಲನಕ್ಕಾಗಿ ಪ್ರಕೃತಿ ಕಂಡುಕೊಳ್ಳುವ ಸಾಧನಗಳೆಲ್ಲವನ್ನೂ ಮನುಷ್ಯನ ಅರಿವು ನಿರುಪಯುಕ್ತಗೊಳಿಸುತ್ತಿರುವಾಗ ಪ್ರಕೃತಿಯ ಮುಂದಿನ ಆಯ್ಕೆ ಯಾವುದಿರಬಹುದು. . . ಉದಾಹರಣೆಗೆ ಪ್ಲೇಗು, ಕಾಲರಾ, ಪ್ರಳಯ, ಇತ್ಯಾದಿ.. .ಹಿನ್ನೆಲೆಯಲ್ಲಿ"? ಇದಕ್ಕೆ

ರಾಗಿ ಲಕ್ಷ್ಮಣಯ್ಯನವರು ಕೊಡುವ ಉತ್ತರ ಹೀಗಿದೆ. "ಮನುಷ್ಯನ ಅರಿವು ಗೋಚರಕ್ಕೆ ಬರುವ ಎಲ್ಲವನ್ನೂ ಗೆದ್ದು ಬಿಡುವುದರಿಂದ ಮುಂದಿನ ಪ್ರಕೃತಿಯ ಆಯ್ಕೆ ಅವನ ಅರಿವಿಗೂ ಬಾರದಂತಹ ಸಾಧನಗಳ ಮೊರೆ ಹೋಗುವುದು, "ಸಂಕುಲ ಸಮತೋಲನ" ಯಾಕೆ. . . ಅವನದೇ ವಿನಾಶದ ಬೀಜಗಳನ್ನು ಅವನ ಅರಿವಿಗೆ ಬಾರದಂತೆ ಅವನ ಮಿದುಳಿನಲ್ಲೇ ಬಿತ್ತುವುದು." ಇದೆಂಥ ಕಾಣ್ಕೆ. ಅಪ್ಪಟ ದಾರ್ಶನಿಕ ಕಾಣ್ಕೆ.

೫.೩. ಬಹುಮುಖಿ ರಾಗಿ

ರಾಗಿ ಅತ್ಯಂತ ಸದೃಢ ಆಹಾರ. 'ರಾಗಿ ತಿಂದವನು ನಿರೋಗಿ' ಎಂಬ ಸರ್ವಕಾಲಿಕ ಮಾತೊಂದಿದೆ ನಮ್ಮಲ್ಲಿ. ಮೈಸೂರು, ಮಂಡ್ಯ, ಹಾಸನ, ರಾಮನಗರ, ಬೆಂಗಳೂರು, ಕೋಲಾರ, ದೊಡ್ಡಬಳ್ಳಾಪುರ, ತುಮಕೂರು, ಚಿತ್ರದುರ್ಗ, ಚಾಮರಾಜನಗರ ಜಿಲ್ಲೆಗಳ ಜನ ಪ್ರಮುಖವಾಗಿ ರಾಗಿಯನ್ನೇ ಮುಖ್ಯ ಆಹಾರವಾಗಿಸಿಕೊಂಡಿದ್ದಾರೆ. 'ಹಿಟ್ಟಂ ಉಂಡವಂ ಬೆಟ್ಟಂ ಕಿತ್ತಂ' ಎಂಬ ಆಡು ಮಾತಿದೆ. ರಾಗಿಮುದ್ದೆ ಮತ್ತು ರೊಟ್ಟಿ ಇಲ್ಲಿನ ಜನಪ್ರಿಯ ಆಹಾರ. ರಾಗಿ ಅಂಬಲಿ ಹೊಟ್ಟೆಗೆ ತಂಪು. ನಾವು ಬಾಲ್ಯದಲ್ಲಿದ್ದಾಗ ನಮ್ಮ ಹಳ್ಳಿಗಾಡಿನಲ್ಲಿ ಬೇಸಿಗೆಯ ವೇಳೆ ಅರವಟ್ಟಿಗೆಗಳಿದ್ದವು. ಅಲ್ಲಿ ದಾರಿ ಹೋಕರಿಗೆ ಅವರು ಯಾವುದೇ ಜಾತಿಯವರಿರಬಹುದು / ವಯಸ್ಸಿನವರಿರಬಹುದು ಬಡವರು, ಶ್ರೀಮಂತರು ಮಕ್ಕಳು ಎಂಬ ಭೇದವೆಣಿಸದೆ ಮುತ್ತುಗದ ಎಲೆಗಳಿಂದ ಮಾಡಿದ ದೊನ್ನೆಗಳಲ್ಲಿ ಮಜ್ಜಿಗೆ ಬೆರೆಸಿದ ರಾಗಿ ಅಂಬಲಿ/ಗಂಜಿ ನೀಡುತ್ತಿದ್ದರು. ಇದು ಆಯಾಸಗೊಂಡ ಪ್ರಯಾಣಿಕರಿಗೆ / ಯಾತ್ರಿಕರಿಗೆ ಹಸಿವು ತಣಿಸುತ್ತಿತ್ತು. ಸಂತೋಷ ನೀಡುತ್ತಿತ್ತು. ಈ ಬಗೆಯ ಅರವಟ್ಟಿಗೆಗಳು ನಮ್ಮ ಗ್ರಾಮೀಣ ಕರ್ನಾಟಕದಲ್ಲಿ ಇದ್ದವು. ಇದು ಹಳ್ಳಿಗಳ ಔದಾರ್ಯ ಮತ್ತು ಅವರ ಮಾನವೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

ನಮ್ಮ ದಾಸವರೇಣ್ಯರಾದ ಕನಕದಾಸರು ತಮ್ಮ 'ರಾಮಧಾನ್ಯ ಚರಿತೆ'ಯಲಿ ರಾಗಿಯ ಮಹಿಮೆಯನ್ನು ಕೊಂಡಾಡಿದ್ದಾರೆ. ಕೋಲಾರ ಜಿಲ್ಲೆಯ ದಾರ್ಶನಿಕ ಕೈವಾರ ನಾರಾಯಣ ತಾತಯ್ಯನವರು ತಮ್ಮ ತತ್ವ ಪದಗಳಲ್ಲಿ

ತೃಣಬೀಜಗಳಿಂದ – ನರರಿಗಾಧಾರ

ತೃಣವೇ ಆಧಾರ – ಪಶುಗಳಿಗೆಲ್ಲ

ಮಣ್ಣು ಆಧಾರ – ಎರೆಹುಳಕ್ಕೆ

ನಾದಬ್ರಹ್ಮಾನಂದ – ನಾರೇಯಣ ಕವಿ॥ ಎಂದಿದ್ದಾರೆ.

ರಾಗಿಯಲ್ಲಿ ಹೆಚ್ಚಿನ ನಾರಿನಾಂಶಗಳಿವೆ. ಸಕ್ಕರೆ ಕಾಯಿಲೆಯವರು ರಾಗಿಯನ್ನೇ ಹೆಚ್ಚು ಬಳಸುವುದರಿಂದ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಹತೋಟಿಯಲ್ಲಿಡುವುದು ಸಾಧ್ಯ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ರಾಗಿ ತೃಣ ಧಾನ್ಯ : ಇತರ ತೃಣ ಧಾನ್ಯಗಳಾದ ನವಣೆ, ಆರ್ಕ, ಸಾಮೆ, ಬರಗು, ಊದುಲುಗಳಂತೆ ಅನ್ನದಂತೆ ತಿನ್ನಲು ಆಗುವುದಿಲ್ಲ. ಅಥವಾ ನಮ್ಮ ಭತ್ತದ ಅಕ್ಕಿಯಲ್ಲಿ ಅನ್ನ ಮಾಡಿ ತಿನ್ನುವಂತೆ, ಉಣ್ಣುವಂತೆ ಆಗುವುದಿಲ್ಲ. ಇದನ್ನು ಮುದ್ದೆ ಮಾಡಿ ಪ್ರತಿ ಮುದ್ದೆಯನ್ನು ಮುರಿದು ಮಿದ್ದಿ ಹೆಬ್ಬೆರಳು ತೋರುಬೆರಳು ಮಧ್ಯದ ಬೆರಳುಗಳ ಸಹಾಯದಿಂದ ತುತ್ತು ಮಾಡಿ ಸಾರಿನಲ್ಲಿ ಹೊರಳಿಸಿ ನುಂಗಿದರೇನೆ ಹಿತ. ಉಪ್ಪುಸಾರು ರಾಗಿ ಮುದ್ದೆ ಬಹಳ ಒಳ್ಳೆಯ ಕಾಂಬಿನೇಷನ್, ಹಳ್ಳಿಗಳಲ್ಲಿ ಮಾಡುವ ಕೋಳಿಸಾರು, ಬಾಡಿನೆಸರುಗಳಲ್ಲಿ ಒಂದು ಮುದ್ದೆ ಉಣ್ಣುವವರು ಎರಡು, ಮೂರು ಮುದ್ದೆ ಉಣ್ಣುತ್ತಾರೆ.

ಉಪ್ಪಿನೆಸರಲ್ಲಿ ಮೊಳಕೆ ಕಟ್ಟಿದ ಹುರುಳಿಕಾಳು, ಅದಕ್ಕೆ ಹದವಾದ ಕೀರೆ ಅಥವಾ ಕಿಲಕೀರೆ ಸೊಪ್ಪು ಒಳ್ಳೆ ಕಾಂಬಿನೇಷನ್, ಸೊಪ್ಪು ಮತ್ತು ಮೊಳೆ ಹುರುಳಿ ಬೇಯಿಸಿ ಉಪ್ಪೆಸರು ಮಾಡಿ ಅದಕ್ಕೆ ತಕ್ಕ ನಾದ ಖಾರ ಅರೆಯುವುದರಲ್ಲಿ ನಮ್ಮ ಹಳ್ಳಿಗಾಡಿನ ಎಲ್ಲ ಹೆಂಗಸರು ಪರಿಣಿತರು. ಉಪಿನೆಸರಿಗೆ ಖಾರ ಅಂದರೆ ಅಮೋಘವಾದ ರುಚಿ, ಪರಿಮಳವಿರುತ್ತದೆ. ಒಣಮೆಣಸಿನಕಾಯಿ, ಸ್ವಲ್ಪ ಮೆಣಸು, ಜೀರಿಗೆ, ಬೆಳ್ಳುಳ್ಳಿ, ಹುಣಸೇ ಹಣ್ಣು, ಉಪ್ಪು ಇಷ್ಟಿದ್ದರೆ ಉಪ್ಪಿನೆಸರ ಖಾರ ಪರಮಾನಂದ, ಒಣ ಮೆಣಸಿ ಕಾಯಿಯನ್ನು ಹಿಂದೆ ಕೆಂಡದ ಮೇಲಿಟ್ಟು ಸ್ವಲ್ಪ ಮಟ್ಟಿಗೆ ಸುಟ್ಟು ಕೊಳ್ಳುತ್ತಿದ್ದರು. ಆ ಮೇಲೆ ಒಳಕಲ್ಲಿಗೆ ಹಾಕಿ ಆಡಿಸುತ್ತಿದ್ದರು. ಇಲ್ಲವೆ ಅರೆಯುವ ಕಲ್ಲಿನ ಮೇಲೆ ಖಾರ ಅರೆಯುತ್ತಿದ್ದರು.

ಉಪ್ಪಿನೆಸರಲ್ಲಿ ಮೊಳಕೆ ಕಟ್ಟಿದ ಹುರುಳಿಕಾಳು, ಅದಕ್ಕೆ ಹದವಾದ ಕೀರೆ ಅಥವಾ ಕೀಲಕೀರೆ ಸೊಪ್ಪು ಒಳ್ಳೆ ಕಾಂಬಿನೇಷನ್, ಸೊಪ್ಪು ಮತ್ತು ಮೊಳೆ ಹುರುಳಿ ಬೇಯಿಸಿ ಉಪ್ಪೆಸರು ಮಾಡಿ ಅದಕ್ಕೆ ತಕ್ಕ ನಾದ ಖಾರ ಅರೆಯುವುದರಲ್ಲಿ ನಮ್ಮ ಹಳ್ಳಿಗಾಡಿನ ಎಲ್ಲ ಹೆಂಗಸರು ಪರಿಣಿತರು. ಉಪಿನೆಸರಿಗೆ ಖಾರ ಅಂದರೆ ಅಮೋಘವಾದ ರುಚಿ, ಪರಿಮಳವಿರುತ್ತದೆ. ಒಣಮೆಣಸಿನಕಾಯಿ, ಸ್ವಲ್ಪ ಮೆಣಸು, ಜೀರಿಗೆ, ಬೆಳ್ಳುಳ್ಳಿ, ಹುಣಸೇ ಹಣ್ಣು, ಉಪ್ಪು ಇಷ್ಟಿದ್ದರೆ ಉಪ್ಪಿನೆಸರ ಖಾರ ಪರಮಾನಂದ, ಒಣ ಮೆಣಸಿ ಕಾಯಿಯನ್ನು ಹಿಂದೆ ಕೆಂಡದ ಮೇಲಿಟ್ಟು ಸ್ವಲ್ಪ ಮಟ್ಟಿಗೆ ಸುಟ್ಟು ಕೊಳ್ಳುತ್ತಿದ್ದರು. ಆ ಮೇಲೆ ಒಳಕಲ್ಲಿಗೆ ಹಾಕಿ ಆಡಿಸುತ್ತಿದ್ದರು. ಇಲ್ಲವೆ ಅರೆಯುವ ಕಲ್ಲಿನ ಮೇಲೆ ಖಾರ ಅರೆಯುತ್ತಿದ್ದರು.

ಬಿಸಿ ಬಿಸಿ ಉಪ್ಪಿನೆಸರು, ಖಾರ, ಮೇಲೊಂದಿಷ್ಟು ನಾಟಿ ಹಸುವಿನ ತುಪ್ಪ – ರಾಗಿಮುದ್ದೆ ಇವಿಷ್ಟಿದ್ದರೆ ಕಾಯಿಲೆ ಬಂದು ಹಾಸಿಗೆ ಹಿಡಿದವರು ಕೂಡ ಬಾಯಲ್ಲಿ

ಜೊಲ್ಲು ಸುರಿಸುತ್ತ ಎದ್ದು ಬಿಡುತ್ತಿದ್ದರು. ಹಳ್ಳಿಗಳಲ್ಲಿ ಬೆರಕೆಸೊಪ್ಪಿನಲ್ಲಿ ಮೊಸಪ್ಪು ಮಾಡಿ (ಮಸೆದ ಸೊಪ್ಪು) ಬಿಸಿ ಬಿಸಿ ಮೊಸಪ್ಪನ ಮೇಲೆ ಹೆಬ್ಬೆಟ್ಟಿನ ಗಾತ್ರದ ಎರಡು ಬೆಣ್ಣೆ ಉಂಡೆಗಳನ್ನು ಹಾಕಿ ಮುದ್ದೆ ಮಡಗಿದರೆ ಖಾಲಿ! ನುಗ್ಗೆ ಸೊಪ್ಪು – ಬೇಳೆ, ಹಸಿ ಅಲಸಂದೆ, ಅವರೆಕಾಳು, ತೊಗರಿಕಾಳುಗಳ ಉಪ್ಪೆಸರುಗಳು ನಮ್ಮ ಹಳ್ಳಿಗಳ ಪಾಲಿನ ಆಪ್ತ ಮತ್ತು ರುಚಿ ಕಟ್ಟಾದ ಊಟ, ಇದರ ಜೊತೆಗೆ ಒಣ ಸೀಗಡಿಯ ಉಪ್ಪೆಸರಿನ ಘಮತ್ತೆ ಘಮತ್ತು, ಬಾಣಂತಿಯರ ಮನೆಗಳಲ್ಲಂತೂ ಸೀಗಡಿ ಉಪ್ಪೆಸರು, ಕರಿಮೀನ್ ಸಾರು ಮತ್ತು ಮುದ್ದೆ ವಾರಕ್ಕೆರಡು ದಿನ ಖಾಯಂ, ಬೇಳೆ ಮತ್ತು ಈರೇಕಾಯಿ, ಬೇಳೆ ಮತ್ತು ಬದನೆಕಾಯಿ, ಬೇಳೆ ಮತ್ತು ವಿವಿಧ ತರಕಾರಿಗಳು; ಎಲ್ಲ ಬಗೆಯ ಒಣಕಾಳುಗಳ ಉಪ್ಪುಸಾರುಗಳು. ರುಚಿ ಮತ್ತು ಸೊಗಡುಗಳಲ್ಲಿ ವೈವಿಧ್ಯ ಸಾರುತ್ತವೆ.

ಹಾಗೆಯೇ ದಿಢೀರ್ ಸಾರುಗಳಲ್ಲಿ ಉಪ್ಪುಗೊಜ್ಜುವಿನ ಪಾತ್ರ ಮಹತ್ವದ್ದು. ಅಚಾನಕ್ಕಾಗಿ ಹಸಿದು ಬಂದವರಿಗೆ, ಮಕ್ಕಳಿಗೆ ತಕ್ಷಣವೇ ಬೇಕೆಂದಾದಾಗ ಉಪ್ಪುಗೊಜ್ಜು ಮಾಡುವುದು ಸರ್ವೆ ಸಾಮಾನ್ಯವಾಗಿತ್ತು.

ಈ ಉಪ್ಪುಗೊಜ್ಜು ಮಾಡುವುದು ಅತ್ಯಂತ ಸರಳ ರೀತಿಯದಾಗಿತ್ತು. ಉಪ್ಪು, ತಣ್ಣೀರು, ಹಸಿ ಮೆಣಸಿನಕಾಯಿ ಬೆಳ್ಳುಳ್ಳಿ, ಹುಣಸೇಹಣ್ಣು, ಅಥವಾ ಖಾರದ ಪುಡಿ, ಹುಣಸೇಹಣ್ಣು, ಉಪ್ಪು ಮತ್ತು ನೀರು ಅಥವಾ ತಣ್ಣೀರು, ಟೊಮೋಟೊ, ಖಾರದ ಪುಡಿ, ಉಪ್ಪು, ಇವುಗಳನ್ನು ಚೆನ್ನಾಗಿ ಕಿವುಚಿದರೆ ಮೇಲಿನ ಮೂರು ಬಗೆಯ ಉಪ್ಪುಗೊಜ್ಜು ಸಿದ್ಧವಾಗುತ್ತದೆ.

ಈಗ ಬೊಜ್ಜು ಎಂದು ನರಳುವವರು, ಉಪ್ಪು ಗೊಜ್ಜು – ರಾಗಿಮುದ್ದೆ, ಉಪ್ಪು ಸಾರು – ರಾಗಿ ಮುದ್ದೆ, ಸೀಗಡಿ ಉಪ್ಪೆಸರು – ರಾಗಿಮುದ್ದೆ, ಮಿದ್ದಿಟ್ಟು ಅಥವಾ ರಾಗಿರೊಟ್ಟಿ,

ಈ ಆಹಾರ ಕ್ರಮವನ್ನು ಮೂರು ತಿಂಗಳು ಅನುಸರಿಸಿದರೆ ದೊಡ್ಡ ಹೊಟ್ಟೆ ಕರಗುತ್ತದೆ. ಬಿ.ಪಿ.ಇರುವವರಿಗೆ ಬಿ.ಪಿ. ನಾರ್ಮಲ್‌ಗೆ ಬರುತ್ತದೆ.

ಸಕ್ಕರೆ ಕಾಯಿಲೆಯವರಿಗೂ ಕಾಯಿಲೆ ಹತೋಟಿಗೆ ಬರುತ್ತದೆ. ರಾಗಿಯ ಕಾರಣವಾಗಿಯೇ ನಮ್ಮ ಹಳ್ಳಿಗಾಡಿನ ಜನ ಡೊಳ್ಳು ಹೊಟ್ಟೆಯವರಾಗದೆ ನಿರೋಗಿಗಳಾಗಿದ್ದರು ಎಂಬುದು ಇಲ್ಲಿ ಉಲ್ಲೇಖನೀಯ.

ಇಷ್ಟಲ್ಲದೆ ತಂಗಳು ರಾಗಿಮುದ್ದೆಯನ್ನು ನೀರಿನಲ್ಲಿ ಕಲಸಿ ಹೊಟ್ಟೆ ತುಂಬ ಕುಡಿಯುವ ಪದ್ಧತಿ ಹಳ್ಳಿಗಳಲ್ಲಿದೆ. ನಾವೆಲ್ಲ ಬಾಲ್ಯದಲ್ಲಿದ್ದಾಗ ತಂಗಳು ಮುದ್ದೆಯನ್ನು ಚೆನ್ನಾಗಿ ಮಿದ್ದಿ ಅದಕ್ಕೆ ಮೆಣಸು, ಬೆಳ್ಳುಳ್ಳಿ, ಉಪ್ಪು ಮೆಣಸಿನಕಾಯಿ ಪುಡಿಯನ್ನು ಜೊತೆಗೂಡಿಸಿ 'ಮಿದ್ದಿಟ್ಟು' ಎಂದು ಒಂದು ಮುದ್ದೆಯನ್ನು ಅಂಗೈ ಮೇಲೆ

ಇಡುತ್ತಿದ್ದರು. ಮಿದ್ದಿಟ್ಟನ್ನು ಚಪ್ಪರಿಸಿ ತಿಂದರೇನೆ ಮಜ. ಹೀಗಾಗಿ ಮಿದ್ದಿಟ್ಟನ್ನು ಯಾರೂ ನುಂಗುತ್ತಿರಲಿಲ್ಲ. ಬದಲಾಗಿ ಚಪ್ಪರಿಸಿ ಕೊಂಡು ಆಡಾಡಿಕೊಂಡು ಓಡಾಡಿ ಕೊಂಡು ತಿಂದು ಮುಗಿಸುತ್ತಿದ್ದೆವು. ಹಳ್ಳಿಗಾಡಿನ ಮಕ್ಕಳ ದಿಢೀರ್ ಹಸಿವಿನ ತತ್‌ಕ್ಷಣದ ಪರಿಹಾರ ಮಿದ್ದಿಟ್ಟು, ನಗರದಲ್ಲಿ ಎಷ್ಟೋ ಹೆಣ್ಣು ಮಕ್ಕಳಿಗೆ ರಾಗಿಯಲ್ಲಿ ಮುದ್ದೆಮಾಡಲಾಗಲಿ, ರೊಟ್ಟಿ ಮಾಡಲಾಗಲಿ ಬರುವುದಿಲ್ಲ. ಕಡೆಗೆ ಅಂಬಲಿ ಮಾಡುವುದು ಕೂಡ, ಮೊದಲು ಹಿಟ್ಟಿನೆಸರು ತೆಗೆದು, ಅದು ಕುದಿಗೆ ಬಂದ ಮೇಲೆ ಹಿಟ್ಟಿನೆಸರ ಪ್ರಮಾಣಕ್ಕೆ ಅಸಿಟ್ಟನ್ನು (ರಾಗಿಹಿಟ್ಟು) ಸುರಿದು ನಿಧಾನಕ್ಕೆ ಹಿಟ್ಟಿನ ಕೋಲಿನಿಂದ ತಿರುವುತ್ತ, ಹಾಗೆ ತಿರುವುತ್ತ ಮುದ್ದೆ ಮಾಡುವುದೊಂದು ಕಲೆ ಇದನ್ನು ನಮ್ಮ ಹಳ್ಳಿಗಾಡಿನ ಹೆಣ್ಣು ಮಕ್ಕಳು ನಿರಾಯಸವಾಗಿ, ಸಲೀಸಾಗಿ ಮಾಡಿ ಮುಗಿಸುತ್ತಾರೆ.

ಹಿಟ್ಟು ಮಾಡಲು ಆಗ ಮಡಕೆಗಳನ್ನುಬಳಸುತ್ತಿದ್ದರು. ವರ್ಷಕ್ಕೊಂದು ಬಾರಿ ಹೊಸ ಮಡಕೆ ಕೊಳ್ಳುತ್ತಿದ್ದರು. ನಮ್ಮ ಹಳ್ಳಿಗಾಡಿನ ನಾರಿಯರ ನೈಪುಣ್ಯ ಎಷ್ಟೊಂದು ಪರಿಪೂರ್ಣತೆಯಿಂದ ಕೂಡಿತ್ತೆಂದರೆ ಸಾಧಾರಣವಾಗಿ ಅಡಿಗೆ ಮಾಡುವ ಮಡಕೆಗಳು ಒಡೆಯುತ್ತಿರಲಿಲ್ಲ. ಅವರ ಕೈಚಳಕದಿಂದ ಹತ್ತಾರು ವರ್ಷ ಬಾಳಿಕೆ ಬರುವಂತ ಮಡಕೆಗಳಾಗಿದ್ದರೂ ಕೂಡ ಪ್ರತಿವರ್ಷ ಹೊಸ ಮಡಕೆ ತಂದುಕೊಳ್ಳುತ್ತಿದ್ದರು.

ಸಾಧಾರಣವಾಗಿ ಹಳ್ಳಿಗಳಲ್ಲಿ ಮಣ್ಣಿನಿಂದ ಮಾಡಿದ ಒಲೆಗಳಿರುತ್ತಿದ್ದವು. ಒಲೆಗಳೆಂದರೆ ಒಂದು ಮುಖ್ಯ ಒಲೆ. ಆ ಮುಖ್ಯ ಒಲೆಯಲ್ಲಿ ಎರಡು ವಾಗೊಲೆ, ವಾಗೊಲೆ ಎಂದರೆ ಮಧ್ಯದ ಒಲೆಯ ಎರಡು ಬದಿಗಳಲ್ಲಿರುತ್ತಿದ್ದ ಒಲೆಗಳು. ಇವಕ್ಕೆ ಮುಖ್ಯ ಒಲೆಯಿಂದಲೆ ಕಾವು ಸರಬರಾಜಾಗುವ ವ್ಯವಸ್ಥೆ ಇತ್ತು. ಮುಖ್ಯೊಲೆಯ ಮೇಲೆ ಪ್ರಧಾನವಾಗಿ ಆಗಬೇಕಾದುದನ್ನು ಮಾಡಿದರೆ ಬದಿಯ ಎರಡು ಒಲೆಗಳ ಮೇಲೆ ಒಂದು ಸಾರು ಮಾಡಲು ಮತ್ತೊಂದು ಬಿಸಿನೀರಿಗಾಗಿ ಇಡುತ್ತಿದ್ದರು. ಹಳ್ಳಿಗಳಲ್ಲಿ ಸಾಧಾರಣವಾಗಿ ಪೂರ್ವದಿಕ್ಕಿಗೆ ಅಡುಗೆ ಮನೆಗಳನ್ನು ಇಡುತ್ತಿದ್ದರು. ಗುಡಿಸಲುಗಳಲ್ಲೂ ಪೂರ್ವ ದಿಕ್ಕಿಗೆ ಮುಖ ಮಾಡುತ್ತಿದ್ದರು. ಅಥವಾ ಜಾಗವಿದ್ದೆಡೆ ಅನುವು ಮಾಡಿಕೊಳ್ಳುತ್ತಿದ್ದರು.

ರಾಗಿ ರೊಟ್ಟಿ ಮೈಸೂರು ಭಾಗದ ಅಥವಾ ಸಾಂಪ್ರದಾಯಿಕವಾಗಿ ರಾಗಿ ಬೆಳೆಯುವ ಎಲ್ಲಾ ಪ್ರದೇಶಗಳ ಬೆಳಗಿನ ಆಹಾರ ಅಥವಾ ಸಮಯಾನುಸಾರ ಯಾವಾಗ ಅವಕಾಶವಾಗಬಹುದೋ ಆವಾಗ, ಉತ್ತರ ಕರ್ನಾಟಕದವರ ಜೋಳದ ಮತ್ತು ಸಜ್ಜೆಯ ರೊಟ್ಟಿ ತಟ್ಟುವುದರಲ್ಲಿ ಮಹಾಪರಿಣಿತರು. ಆ ಬಗೆಯ ರೊಟ್ಟಿ ತಟ್ಟುವುದನ್ನು ರಾಗಿ ಪ್ರಾಂತ್ಯದವರು ತಿಳಿಯರು. ಹೀಗಾಗಿ ಉತ್ತರ ಕರ್ನಾಟಕದವರ ತರ ಜೋಳದ ರೊಟ್ಟಿ / ಸಜ್ಜೆ ರೊಟ್ಟಿಗಳನ್ನು ಮಾಡಲು ಇಲ್ಲಿಯವರು ಕಲಿಯಲೇ ಇಲ್ಲ.

ಜೋಳದ ರೊಟ್ಟಿಗಳನ್ನು ಮೈಸೂರು ಭಾಗದ ಮಹಿಳೆಯರು ಮಾಡಬಲ್ಲರಾದರೂ ಅದನ್ನು ಕೂಡ ರಾಗಿ ರೊಟ್ಟಿಯ ಹಾಗೆ ಮಾಡುತ್ತಾರೆ. ರಾಗಿ ರೊಟ್ಟಿಯ ಹಾಗೆಯೇ ಅಕ್ಕಿ ರೊಟ್ಟಿ ಕೂಡ ಇಲ್ಲಿ ಪ್ರಾಮುಖ್ಯತೆ ಪಡೆದಿದೆ. ಅಚ್ಚು ಕಟ್ಟಾದ ರುಚಿಯಾದ ಅಕ್ಕಿರೊಟ್ಟಿ ರಾಗಿಯಷ್ಟೇ ಮಂದವಾಗಿ ತಿನ್ನಲು ಆಪ್ತವಾಗಿರುತ್ತದೆ.

ಹಾಗೇಯೇ ಉತ್ತರ ಕರ್ನಾಟಕದ ಜೋಳದ ರೊಟ್ಟಿ/ಸಜ್ಜೆ ರೊಟ್ಟಿ ತಟ್ಟುವ ನಿಸ್ಸೀಮ ಮಹಿಳೆಯರಿಗೆ ರಾಗಿ ರೊಟ್ಟಿ ತಟ್ಟುವ ಕೌಶಲ್ಯಬಾರದು.

ಅತ್ತ ಉತ್ತರ ಕರ್ನಾಟಕದಲ್ಲಿ ಇತ್ತ ದಕ್ಷಿಣ ಕರ್ನಾಟಕದ ರಾಗಿ ಬೆಳೆಯುವ ಪ್ರಾಂತ್ಯರೂ ಅಲ್ಲದ ವಿಶೇಷ ಅಕ್ಕಿರೊಟ್ಟಿ ಕೊಡಗು, ಮತ್ತು ಶಿವಮೊಗ್ಗ, ಶಿರಸಿ ಭಾಗದವರದ್ದು, ಕೊಡಗಿನಲ್ಲಿ ಪಂದಿಕರಿ ಅಕ್ಕಿರೊಟ್ಟಿ ಅಲ್ಲಿನವರಿಗೆ ಹೆಚ್ಚು ಆಪ್ತ. ದಕ್ಷಿಣ ಕನ್ನಡದಲ್ಲಿ ಬಟ್ಟೆಗಿಂತಲೂ ತೆಳುವಾದ ಕೋರಿ ರೊಟ್ಟಿ ಮತ್ತು ಕೋಳಿ ಸಾರು ಹೆಚ್ಚು ಇಷ್ಟ. ಹಾಗೆಯೇ ಅಲ್ಲಿನವರಿಗೆ ನೀರ್‌ದೋಸೆ ಮೀನ್ ಸಾರು. ಕುಚಲಕ್ಕಿ ಗಂಜಿಯಷ್ಟೇ ದೋಸ್ತು.

ನಮ್ಮಲ್ಲಿ ರಾಗಿರೊಟ್ಟಿಗೆ ಭರ್ಜರಿ ಜೋಡಣೆ ಅಂದರೆ ಹುಚ್ಚೆಳ್ಳು ಚಟ್ನಿ, ಇದರ ಜೊತೆಗೆ ಒಂದಿಷ್ಟು ಬೆಣ್ಣೆ ಬಿದ್ದರೆ ಸ್ವರ್ಗಕ್ಕೆ ಕಿಚ್ಚು ಪ್ಲೈನ್ ರಾಗಿರೊಟ್ಟಿ ಮತ್ತು ಮೊಸರು ಜೊತೆಗೆ ಉಪ್‌ಸಾರ್ ಖಾರ ಯಾವತ್ತಿಗೂ ಅದ್ವಿತೀಯ. ರಾಗಿರೊಟ್ಟಿ ಬರೇ ತೆಂಗಿನಕಾಯಿ ನೆಂಜಿಕೊಂಡು ತಿನ್ನಬಹುದು. ಹಾಗೆಯೇ ತಿನ್ನಬಹುದು. ಬೆಲ್ಲ ಮತ್ತು ಚಟ್ನಿ, ಕಡ್ಲೆಕಾಯಿ ಚಟ್ನಿಯೂ ರಾಗಿ ರೊಟ್ಟಿ ಜೊತೆಗೆ ನಾಲಗೆಯ ರಂಗೇರಿಸುತ್ತದೆ.

ರಾಗಿ ಸಂಸ್ಕೃತಿಯ ನಮ್ಮ ಮಾನ್ಯ ಶ್ರೀ ಎಚ್.ಡಿ. ದೇವೇಗೌಡರು ದೇಶದ ಪ್ರಧಾನಿಯಾದಾಗ ಅವರ ಬಯಕೆಯ 'ರಾಗಿಮುದ್ದೆ ಸೊಪ್ಪಿನ ಸಾರು' ದೇಶದೆಲ್ಲೆಡೆ ಅಲ್ಲದೆ ಜಗತ್ತಿನೆಲ್ಲೆಡೆ ಸುದ್ದಿಯಾಯಿತು. ನಮ್ಮ ರಾಗಿಗೂ ಬೆಲೆ ಬಂತು. ರಾಗಿ ಪ್ರಪ್ರಥಮ ಬಾರಿಗೆ ಗ್ಲೂಟನ್ ಫ್ರೀಯಾಗಿ ಜಾಗತಿಕ ಮಾರುಕಟ್ಟೆಗೂ ಪದಾರ್ಪಣೆ ಮಾಡಿತು. ಹೀಗಾಗಿ ರಾಗಿಯನ್ನು ನೇರವಾಗಿ ಮುದ್ದೆ, ರೊಟ್ಟಿ ತುಪ್ಪದಲ್ಲಿ ತಿನ್ನದ ಜನ ಅದನ್ನು ತಮ್ಮ ಆಹಾರ ಮನುವಾಗಿಸಿಕೊಳ್ಳಲು ನಾನಾ ಬಗೆಯ ಪ್ರಯತ್ನ ಮಾಡಿದರು. ಈ ಕಾರಣವಾಗಿ ರಾಗಿಯ ನ್ಯೂಡಲ್ಸ್, ರಾಗಿ ನರ್ಜಜೈಜರ್, ರಾಗಿ ಇಡ್ಲಿ, ರಾಗಿದೋಸೆ, ರಾಗಿ ಬಿಸ್ಕತ್ ರಾಗಿ ಚಾಕ್ಲೆಟ್, ರಾಗಿ ಸೂಪ್ ಇತ್ಯಾದಿಗಳು ಪ್ರಚಲಿತಕ್ಕೆ ಬಂದವು. ಹೀಗಾಗಿ ರಾಗಿ ಬೆಲೆ ಸಾಧಾರಣ ಮಾರುಕಟ್ಟೆಯಲ್ಲಿ ೩೦ರವರೆಗೆ ಏರಿತು. ಸಾವಯವ ಬ್ರಾಂಡಿನ ರಾಗಿ ೭೦–೮೦ ರೂ.ವರೆಗೆ ದಾಟಿತು. ಯಾವತ್ತಿಗೂ ಯಾವ ಮುತುವರ್ಜಿಯನ್ನು ಬೇಡದ ರಾಗಿ ಇವತ್ತಿಗೂ ಸಾಂಪ್ರದಾಯಿಕ ಕೃಷಿಯಲ್ಲೇ ಹೆಚ್ಚು ಬೆಳೆಯುವುದು ಮೂಲತಃ ರಾಗಿಗೆ ಹೆಚ್ಚಿನ ಕೀಟಗಳ ರೋಗಗಳ ಬಾಧೆ ಇಲ್ಲ. ನೀರವರಿಯಲ್ಲೇ ಬೆಳೆಯಲಿ, ಮಳೆಯಾಶ್ರಯದಲ್ಲೆ

ಬೆಳೆಯಲಿ ರಾಗಿಯನ್ನುಸುಮಾರು ೫೦ ವರ್ಷಗಳ ಕಾಲ ಸಂರಕ್ಷಿಸಿ ಇಡಬಹುದು ಎಂಬುದನ್ನು ಸಂಶೋಧನೆಗಳು ಹೇಳುತ್ತವೆ. ಹಾಗೆಯೇ ಭವಿಷ್ಯದ ಆಹಾರ ಭದ್ರತೆಯ ಮಹಾ ಭರವಸೆಯಾಗಿ ರಾಗಿ ಭರವಸೆ ಮೂಡಿಸಿದೆ.

ವಿಶೇಷವಾಗಿ ರಾಗಿ ಪೂರ್ಣ ಬಳಕೆಯ ಗಿಡ, ಬರಗಾಲಗಳಲ್ಲಿ ವಡೆ ಒಡೆದು ಫಲಕಚ್ಚದಿದ್ದರೂ ದನ ಕರುಗಳಿಗೆ ಮೇವಾಗಿ ಎಷ್ಟು ಪರಿಣಾಮಕಾರಿಯಾಗಿದೆಯೋ ಒಣಗಿದ ಮೇಲೆಯೂ ಅಷ್ಟೇ ಪರಿಣಾಮಕಾರಿ. ರಾಗಿಮುದ್ದೆ ಹೇಗೆ ಹೊಟ್ಟೆ ದಿಂಡಾಗಿಡಲು ಕಾರಣವೊ ಹಾಗೆಯೇ ದನ ಕರುಗಳ ಹೊಟ್ಟೆ ದಿಂಡಾಗಿಡಲು ರಾಗಿ ಮೇವು ಕಾರಣ.

ರಾಗಿ ಒಡೆ ಕಡೆದು ೨೦ ದಿನಗಳ ತರುವಾಯ ಹಾಲುದುಂಬುತ್ತದೆ. ಹಸಿ ರಾಗಿ ತೆನೆಗಳನ್ನು ಕಾಚಕ್ಕಿ ಎಂದು ಕರೆಯುತ್ತಾರೆ. ಹಾಲು ದುಂಬಿದ ಕಾಚಕ್ಕಿಗಳನ್ನು ಕಿತ್ತು, ಚೆನ್ನಾಗಿ ಉಜ್ಜಿ ಕಾಳು ತೆಗೆದರೆ ಆ ಕಾಳುಗಳನ್ನು ಹಾಗೆಯೇ ಮುಕ್ಕಿ ತಿನ್ನಬಹುದು. ಕಾಚಕ್ಕಿಯ ಕಾಳುಗಳು ಹಾಲುದುಂಬಿ ಸಿಹಿಯಾಗಿರುತ್ತವೆ. ಹಳ್ಳಿಗಾಡಿನ ಪ್ರತಿಯೊಬ್ಬರು ಈ ಕಾಚಕ್ಕಿಯ ಸಮಯದಲ್ಲಿ ಕಾಚಕ್ಕಿ ಸವಿಯನ್ನು ಸವಿದೆ ಸವಿಯುತ್ತಾರೆ. ಈ ಕಾಚಕ್ಕಿಯ ಕಾಳುಗಳನ್ನು ಒಳಕಲ್ಲಿನಲ್ಲಿ ಆಡಿಸಿ ಹಾಲು ತೆಗೆದು ಬೆಲ್ಲ ಹಾಕಿ ಕುಡಿದರೆ ವಿಶೇಷ ರುಚಿ ಸಿಗುತ್ತದೆ. ರಾಗಿ ಹಾಲಿನಲ್ಲಿ ಟೀ ಕೂಡ ಮಾಡಬಹುದು. ಹಸಿ ರಾಗಿ ಹಾಲು ಸಮೃದ್ಧ ಪೋಷಕಾಂಶಗಳ ಆಗರ; ಹಸು ಮಕ್ಕಳ ಮೂಳೆ ಗಟ್ಟಿಗೊಳ್ಳಲು ಮಗುವಿಗೆ ಆರು ತಿಂಗಳ ಬಳಿಕ ಸಿಹಿಯಾದ ರಾಗಿ ಹಾಲು ಕುಡಿಸುವುದು ಒಳ್ಳೆಯದು.

೫.೪. ಸೃಷ್ಟಿಯ ಚಿದಂಬರ ರಹಸ್ಯ

ನಿರ್ಮಾಣಗಳೆಲ್ಲದರ ನಿರ್ಮಾತೃವೆನಿಸಿಕೊಂಡ ನಿಸರ್ಗದ ಮೇಲೆ ಮಾನವನೇನೊ ದಿಗ್ವಿಜಯದ ಹಂಬಲವೆತ್ತಿ ಹುಟ್ಟಿರಬಹುದು. ಆದರೆ ನಿಸರ್ಗ ಸೃಷ್ಟಿಯಮಟ್ಟಿಗೆ ತಾನು ಸೃಷ್ಟಿಸಿದ ಪ್ರತಿಯೊಂದರ ಕುರಿತು ಕಾಳಜಿ ಇದೆ ಎನ್ನುವುದು ನಿಸರ್ಗ ವಿದ್ಯಮಾನಗಳನ್ನು ಗಮನಿಸಿದರೆ ತಿಳಿಯುತ್ತದೆ. ರೈತ ಬೆಳೆದ ಬೆಳೆಗಳು ಹಾಗೆ ಬೆಳೆದ ಮಾತ್ರಕ್ಕೆ ಅವುಗಳ ಮೇಲೆ ಅವನಿಗೆ ಅಧಿಕಾರ ಇರಬಹುದು. ಆದರೆ ನಿಸರ್ಗದ ಮಟ್ಟಿಗೆ ಅದನ್ನು ಅವಲಂಬಿಸಿರುವ ಎಲ್ಲರಿಗೂ ಪಾಲಿದೆ. ಒಂದು ಬೆಳೆಗೆ ರೋಗವಾಗಿ ತಗಲುವ ಕ್ರಿಮಿಕೀಟಗಳಿವೆ. ಹಾಗೆಯೇ ಆ ಬೆಳೆಯನ್ನು ಆ ಕ್ರಿಮಿಕೀಟಗಳಿಂದ ಪಾರು ಮಾಡುವ ಇತರ ಕೀಟಗಳಿವೆ. ನಾವು ನಮ್ಮ ಬೆಳೆಯನ್ನು ರಕ್ಷಿಸಿಕೊಳ್ಳುವ ಕಾರಣಕ್ಕೆ ಈ ಕೀಟಗಳಿಗೆ ಶತ್ರು ಕೀಟಗಳು ಮತ್ತು ಮಿತ್ರ ಕೀಟಗಳು ಎಂದು ಹೆಸರಿಟ್ಟು ಕೊಳ್ಳುತ್ತೇವೆ. ನಿಸರ್ಗದ ದೃಷ್ಟಿಯಲ್ಲಿ ಶತ್ರು ಕೀಟದ ಕಾರ್ಯಾಚರಣೆ ಹಾನಿಕಾರಕವಾಗಲಿ, ಮಾರಕವಾಗಲಿ ಅಲ್ಲ; ಒಳಿತಿನ ಹಿಂದೆ ಒಂದು ಕೆಡಕು ಇದೆ, ಕೆಡಕಿನ ಹಿಂದೆ ಒಂದು ಒಳಿತು ಇದೆ" ಎಂಬುದನ್ನು ನಮ್ಮ

ಪೂರ್ವಿಕರು ಅನುಭವದಿಂದ ಅರ್ಥಮಾಡಿಕೊಂಡಿದ್ದರು. ಉದಾಹರಣೆಗೆ ಈ ಬಾರಿ ಮಾವಿನ ಫಸಲಿಗೆ ಹಾರುವ ಕಂದು ಜಿಗಿಹುಳುಗಳ ಕಾಟ ಜಾಸ್ತಿ ಇದೆ ಅಂತಾದರೆ ಅದರಿಂದ ಮಾವಿನ ಫಸಲಿಗೆ ಹಾನಿಹೆಚ್ಚು; ಹಾಗೆ ಅವುಗಳಿಂದ ಮಾವಿನ ಫಸಲನ್ನು ಕಾಪಾಡಲು ಆಧುನಿಕ ಕೃಷಿ ವಿಜ್ಞಾನ ಅವುಗಳನ್ನು ಹತೋಟಿಯಲ್ಲಿಡಲು ಯತ್ನಿಸುತ್ತದೆ. ಆದರೆ ನಮ್ಮ ಹಿರೀಕರ ಕೈಗಳಲ್ಲಿ ಆಧುನಿಕರ ಕೈಯಲ್ಲಿದ್ದ ವಿಷಾಸ್ತ್ರಗಳು ಇರಲಿಲ್ಲ. ಅವರು ಇದ್ದಕ್ಕಿದ್ದ ಹಾಗೆ ಹಾರುವ ಕಂದು ಜಿಗಿಹುಳುಗಳ ಸಂಖ್ಯೆ ಹೆಚ್ಚಾದುದನ್ನು ಕಾತರದಿಂದ ಗಮನಿಸುತ್ತಾರೆ. ಅವುಗಳ ವಿರುದ್ಧ ಯಾವುದೇ ಅಸ್ತ್ರವನ್ನು ಅವರು ಹೂಡುವುದಿಲ್ಲ. ಬದಲಾಗಿ ಇದ್ದಕ್ಕಿದ್ದಂತೆ ಮಾವಿನ ಫಸಲಿಗೆ ಮುತ್ತಿಗೆ ಹಾಕಿದ ಹಾರುವ ಕಂದು ಜಿಗಿ ಹುಳುಗಳ ಕಾರ್ಯಾಚರಣೆಯಿಂದ ಘಟಿಸಬಹುದಾದ ಪರಿಣಾಮವನ್ನು ಅವಲೋಕಿಸುತ್ತಾರೆ. ಮತ್ತು ಅವುಗಳ ಕಾರ್ಯಾಚರಣೆಯ ಹಿಂದಿನ ರಹಸ್ಯವನ್ನು ಅರಿಯಲು ಯತ್ನಿಸುತ್ತಾರೆ.

ಹಾರುವ ಕಂದು ಜಿಗಿ ಹುಳುಗಳ ಆರ್ಭಟ ಜೋರಾಗಿಯೇ ಸಾಗುತ್ತದೆ. ಅವುಗಳ ಸಂಖ್ಯೆಯಲ್ಲೂ ಹೆಚ್ಚಳ ಕಾಣುತ್ತದೆ. ಮಾನವ ಹಸ್ತಕ್ಷೇಪವಿಲ್ಲದಾಗ ಇದ್ದಕ್ಕಿದ್ದಂತೆ ಅವುಗಳ ಸಂಖ್ಯೆಯಲ್ಲಿ ಇಳಿಕೆ ಕಾಣುತ್ತವೆ. ಕ್ರಮೇಣ ಅವುಗಳು ಪರಿಪೂರ್ಣ ಕಣ್ಮರೆ ಆದ ಹಾಗೆ ಅನ್ನಿಸುತ್ತದೆ. ಮಾವಿನ ಫಸಲು ಉಳಿಸುವುದು ಕೂಡ ನಿಸರ್ಗದ ಜವಾಬ್ದಾರಿಯೇ ಆಗಿರುತ್ತದೆ.

ಈ ಚಮತ್ಕಾರದ ಹಿಂದೆ ಅಡಗಿರುವ ರಹಸ್ಯವನ್ನು ದರ್ಶಿಸೋಣ. ನಮ್ಮ ಹಿರೀಕರು ಈ ರಹಸ್ಯವನ್ನು ಅರ್ಥಮಾಡಿಕೊಂಡಿದ್ದರು.

ಉದಾಹರಣೆಗೆ ನಮ್ಮ ಹಳ್ಳಿಗಳಲ್ಲಿ ಮನೆಯ ಮುಂದೆ ಅಥವಾ ಹಿತ್ತಲುಗಳಲ್ಲಿ ಮಲ್ಲಿಗೆ ಗಿಡ/ಬಳ್ಳಿಗಳನ್ನು ನೆಡುತ್ತಿದ್ದರು. ನೀರು, ಗೊಬ್ಬರ ಹಾಕಿ ಮುತುವರ್ಜಿ ಕೂಡ ಮಾಡುತ್ತಿದ್ದರು. ಹೆಣ್ಣು ಮಕ್ಕಳ ಅತಿಯಾದ ಮುತುವರ್ಜಿಯಿಂದ ಕೆಲ ಗಿಡಗಳು ಬೆಳವಣಿಗೆಯಲ್ಲಿ ಹಿಂದೇಟು ಹಾಕುತ್ತಿದ್ದವು. ಕೆಲವು ಚೆನ್ನಾಗಿ ಬೆಳೆದು ಹೂ ಬಿಡದೆ ಬಂಜೆತನ ತೋರುತ್ತಿದ್ದವು. ಇದು ಯಾಕೆ ಹೀಗೆ? ಹಳ್ಳಿಯ ಹಿರಿಯ ಹೆಂಗಸರಿಗೆ ಇದರ ಮರ್ಮ ಗೊತ್ತಾಗುತ್ತಿತ್ತು. ಕೂಡಲೇ ಬೆಳೆಯದೇ ನಿಂತ ಮಲ್ಲಿಗೆ ಬಳ್ಳಿಯನ್ನು ಬೇರು ಸಹಿತ ಕಿತ್ತು ಬಿಸಿಲಿಗೆ ಹಾಕುತ್ತಿದ್ದರು. ಒಂದೆರಡು ಗಂಟೆ ಬಿಸಿಲಲ್ಲಿ ಒಣಗಿಸಿ ಬಾಡಿದ ಮಲ್ಲಿಗೆ ಬಳ್ಳಿಯನ್ನು ಪುನಃ ಅದೇ ಜಾಗದಲ್ಲಿ ಮತ್ತೆ ನೆಡುತ್ತಿದ್ದರು. ಪವಾಡವೆಂಬಂತೆ ಬೆಳವಣಿಗೆಗೆ ಆಸಕ್ತಿಯೇ ತೋರದಿದ್ದ ಮಲ್ಲಿಗೆ ಬಳ್ಳಿ ವಾರ, ತಿಂಗಳು ಕಳೆಯುತ್ತಿದ್ದಂತೆ ಜಿಗಿಯುವ ಉತ್ಸಾಹ ತೋರಿ ಅದಮ್ಯ ಸಂಭ್ರಮದಿಂದ ಹುಲುಸಾಗಿ ಬೆಳೆದು ಹೂಬಿಡುತ್ತಿತ್ತು.

ಹಾಗೆಯೇ ಸಮೃದ್ಧ ನೀರು, ಗೊಬ್ಬರವಿದ್ದು ಹೂಬಿಡದೆ ಬಂಜೆತನ ತೋರುತ್ತಿದ್ದ ಮಲ್ಲಿಗೆ ಬಳ್ಳಿಗೆ ನೀರು ತಪ್ಪಿಸಿ ಒಣಗಲು ಬಾಡಲು ಬಿಟ್ಟು ಮತ್ತೆ ನೀರು

ಕೊಟ್ಟ ಕೂಡಲೆ ಛಲದಿಂದ ಎಂಬಂತೆ ಮತ್ತೆ ದಾಂಗುಡಿಸಿ ಬೆಳೆಯುತ್ತ ಪುಷ್ಪ ವೃಷ್ಟಿಯನ್ನೆ ಸುರಿಯುತ್ತಿತ್ತು.

ಈ ಎರಡು ಮಲ್ಲಿಗೆ ಬಳ್ಳಿಗಳ ಉದಾಹರಣೆಯಲ್ಲಿ ಪ್ರತಿಗಿಡಕ್ಕೂ ಕ್ರಿಯೆ ಪ್ರತಿಕ್ರಿಯೆ ಅಭಿವ್ಯಕ್ತವಾಗುವ ಮನಸ್ಸೊಂದಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಸಸ್ಯಗಳೂ ಉಸಿರಾಡುತ್ತವೆ. ಸಸ್ಯಗಳೂ ಮಾತನಾಡುತ್ತವೆ, ಸಂಗೀತಕ್ಕೆ ಸಸ್ಯಗಳು ಮಾರುಹೋಗುತ್ತವೆ... ಎಂಬ ಮಾತುಗಳು ಆಗಾಗ ಕೇಳಿಬರುತ್ತಿರುತ್ತವೆ. ಈ ಕುರಿತು ಅಧ್ಯಯನಗಳೂ ನಡೆದಿವೆ. ಆದರೆ ನಮ್ಮ ಹಿರೀಕರು ಗಿಡ ಮರಗಳೊಂದಿಗೆ ಮಾತನಾಡುವಷ್ಟು ಮಟ್ಟಗಿನ ತನ್ಮಯತೆಯನ್ನು ಇಟ್ಟುಕೊಳ್ಳುತ್ತಿದ್ದರು.

ಮಲ್ಲಿಗೆ ಗಿಡ/ಬಳ್ಳಿಗೆ ಯಾವಾಗ ಸಮೃದ್ಧವಾದ ಗೊಬ್ಬರ / ನೀರು ಕೊಟ್ಟು ಮುತುವರ್ಜಿ ವಹಿಸಿದರೊ ಆಗ ಆ ಗಿಡ/ಬಳ್ಳಿಗೆ ಸುಖ ಹೆಚ್ಚಾಗಿ ತನ್ನ ಮುಂದಿನ ಫಲದ ಬಯಕೆ ಕಡಿಮೆ ಆಯಿತು. 'ಸುಖ ಜಾಸ್ತಿಯಾಯಿತು ಕನ್ಲ ಮಗ ಸೋಂಬೇರಿಯಾಯಿತು. ಈಗ ನೋಡು ಅದಕ್ಕೆ ಗೊಬ್ಬರ ನೀರು ನೆಡಿ ಕಮ್ಮಿ ಮಾಡುದ್ರೆ ಹೆಂಗ್ ಉಚ್ಚರ್ಕೆ ತಗತದೆ" ನೋಡು ಅನ್ನುತ್ತಿದ್ದರು ನಮ್ಮ ಅಜ್ಜಿ ಕಾಡಮ್ಮ, ಮಲ್ಲಿಗೆ ಬಳ್ಳಿಯನ್ನು ಬೇರು ಸಹಿತ ಕಿತ್ತು ಬಿಸಿಲಿಗೆ ಹಾಕಿದ ಕೂಡಲೆ ಆ ಗಿಡಕ್ಕೆ ತಾನು ಸತ್ತೆ ಹೋಗುವೆನೆಂಬ ಆತಂಕ ಸೃಷ್ಟಿಯಾಗುತ್ತದೆ. ಅಯ್ಯೋ ನನ್ನ ಕತೆ ಮುಗಿಯಿತು. ನನಗೆ ಸಂತಾನ ಇಲ್ಲದ ಹಾಗೆ ಆಯಿತು, ನನ್ನ ವಂಶ ಮುಂದುವರಿಯುವುದಿಲ್ಲ, ಇಲ್ಲಿಗೆ ಕೊನೆ ಎಂಬುದು ಗಿಡಕ್ಕೆ ಮನವರಿಕೆಯಾಗುತ್ತದೆ. ಇದಾದ ಮೇಲೆ ಮತ್ತೆ ನೆಟ್ಟ ಮೇಲೆ ಬದುಕುವ, ಚೆನ್ನಾಗಿ ಬಾಳುವ ಆಶೆ ನೂರ್ಮಡಿಯಾಗಿ ಅದು ಇತರ ಎಲ್ಲ ಗಿಡಗಳನ್ನು ಮೀರಿ ನಿಂತು ಬೆಳೆದು ಅಸಂಖ್ಯಾತ ಮೊಗ್ಗು ಹೂಗಳೊಂದಿಗೆ ಕಂಗೊಳಿಸುತ್ತದೆ.

ಹಾಗೆಯೇ ಮೊಗ್ಗು, ಹೂ ನೀಡದೆ ಸುಪುಷ್ಪವಾಗಿ ಬೆಳೆದಿದ್ದ ಗಿಡವೂ ನೀರು ನಿಲ್ಲಿಸಿ ಬಾಡಿಸಲು ಶುರುವಾದ ಮೇಲೆ ಅದು ಕೂಡ ತಲ್ಲಣಿಸುತ್ತದೆ. ಮತ್ತೆ ಅದಕ್ಕೆ ನೀರು ಕೊಡಲು ಶುರುವಾದ ಮೇಲೆ ತನ್ನ ಬಾಳುವ, ಬೆಳೆಯುವ ಆಶೆಯನ್ನು ಪ್ರಕಟಿಸುತ್ತ ಮೊಗ್ಗುಗಳನ್ನು ಅರಳಿಸುತ್ತ ಕಂಪು ಸೂಸುತ್ತದೆ. ಇದು ನಮ್ಮ ಹಿರೀಕರು ಸಸ್ಯಗಳೊಂದಿಗೆ ಹೊಂದಿದ್ದ ಹೃದಯಸ್ಪರ್ಷ ಬಾಂಧವ್ಯಕ್ಕೆ ದ್ಯೋತಕವಾಗಿದೆ. ಪ್ರಕೃತಿ ಅರಿತು ಬಾಳಿದ ಈ ತಿಳುವಳಿಕೆ ಮುಂದಿನ ಪೀಳಿಗೆಗೆ ಜ್ಞಾನವಾಗುತ್ತದೆ.

ಹಾಗೆಯೇ ಮಾವಿನ ಫಸಲಿಗೆ ಅಮರಿಕೊಂಡ ಕಂದು ಜಿಗಿ ಹುಳುಗಳು ಯಥೇಚ್ಚವಾಗಿ ಸಿಕ್ಕ ಆಹಾರದಿಂದ ಸಂಖ್ಯೆ ವೃದ್ಧಿಸಿಕೊಂಡು ಹಾವಳಿ ನೀಡುವಷ್ಟರ ಮಟ್ಟಿಗೆ ಬೆಳೆಯುತ್ತವೆ. ಹಾಗೆ ಬೆಳೆದು ಒಂದು ಹಂತ ತಲುಪಿದ ಮೇಲೆ ಕ್ಷೀಣಿಸಲು ಶುರುವಾಗುತ್ತಿತ್ತು. ಯಾಕೆಂದರೆ, ಯಾರ ಹಸ್ತಕ್ಷೇಪವು ಇರದ ಹುಲುಸಾದ ಮೇವು ಮತ್ತು ಅನಿರ್ಬಂಧಿತ ಸ್ವಾತಂತ್ರ್ಯ ಜಿಗಿ ಹುಳುಗಳ ಸುಖಕ್ಕೆ ದಾರಿಮಾಡಿಕೊಡುತ್ತದೆ.

ಅಪರಿಮಿತ ಸುಖ ಸಂತಾನೋತ್ಪತ್ತಿಯೆಡೆಗಿನ ಆಸಕ್ತಿಯನ್ನು ಕುಂಠಿಸುತ್ತದೆ. ಹೀಗೆ ಆಸಕ್ತಿ ಕುಂದುವುದರ ಪರಿಣಾಮ ಅವುಗಳ ಸಂಖ್ಯೆಯಲ್ಲಿ ಇಳಿಮುಖ ಕಾಣಲು ಕಾರಣವಾಗುತ್ತದೆ.

ಒಂದು ವೇಳೆ ಅವುಗಳ ಹಾವಳಿಗೆ ಕಡಿವಾಣ ಹಾಕಲು ಪ್ರಯತ್ನಿಸಿದ್ದರೆ, ಅಥವಾ ಅವುಗಳ ಮೇಲೆ ದಾಳಿ ಮಾಡಿ ಆತಂಕ ಸೃಷ್ಟಿಸಿದ್ದರೆ ಸಹಜವಾಗಿ ಅವು ತಮ್ಮ ಸಂಖ್ಯೆಯನ್ನು ವೃದ್ಧಿಸುವ ಸಲುವಾಗಿ ಸಂತಾನೋತ್ಪತ್ತಿಯೆಡೆಗೆ ಗಮನ ಹರಿಸುತ್ತಿದ್ದವು. ಪ್ರತಿಬಂಧಕಗಳು ಹೆಚ್ಚಾದಷ್ಟು ಅಳಿವು-ಉಳಿವಿನ ಸಂದರ್ಭ ನಿರ್ಣಾಯಕ ಹಂತಕ್ಕೆ ಬಂದಾಗ; ಅವು ತಮ್ಮ ಸಮಸ್ತ ಶಕ್ತಿಯನ್ನು ಉಳಿವಿಗಾಗಿಯೇ ಬಳಸುತ್ತವೆ.

ನಮ್ಮ ಎರೆಹುಳುಗಳು, ಕೆಲವು ಮೃದ್ವಂಗಿಗಳು, ಕೋಟ್ಯಾನು ಕೋಟಿ ಜೀವಾಣುಗಳು, ಕೆಲವು ಬೀಜಗಳು ಪ್ರತಿಕೂಲ ಸಂದರ್ಭದಲ್ಲಿ ತಮ್ಮ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಿ ಬಿಡುತ್ತವೆ. ಮೂವತ್ತು ನಲವತ್ತು ವರ್ಷಗಳಿಂದ ರಾಸಾಯನಿಕ ಗೊಬ್ಬರಗಳು ಕೀಟ ಹಾಗೂ ಕಳೆ ನಾಶಕಗಳನ್ನು ಬಳಸಿದ ಕಡೆ ನಮ್ಮ ಎರೆ ಹುಳುಗಳು ಕೆಲಸ ಮಾಡುವುದಿಲ್ಲ. ಮತ್ತು ಆ ಪರಿಸರದಲ್ಲಿ ಅವು ಕಾಣಸಿಗುವುದಿಲ್ಲ. ಎರೆಹುಳುಗಳು ಪ್ರತಿಕೂಲ ಸನ್ನಿವೇಶಗಳಲ್ಲಿ ಭೂಮಿಯ ಆಳದಲ್ಲಿ ಸಮಾಧಿ ಸ್ಥಿತಿಯಲ್ಲಿ ಇದ್ದು ಬಿಡುತ್ತವೆ. ಉಳಿದ ಜೀವಾಣುಗಳ ಕೋಶಾವಸ್ಥೆಯಲ್ಲಿ ಇದ್ದುಬಿಡುತ್ತವೆ.

ಬೇಸಾಯ ಭೂಮಿಗೆ ರಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಬಳಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿ, ಅಲ್ಲಿ ನಮ್ಮ ದೇಸಿ ಸಂಪ್ರದಾಯದಂತೆ ಸಗಣಿ ಗೊಬ್ಬರ ಹಾಕಿ ಬೇಸಾಯ ಮಾಡಲು ಶುರುವಾಗುತ್ತಿದ್ದಂತೆ ಎರೆಹುಳುಗಳು ಮತ್ತೆ ಮರಳಿ ತಮ್ಮ ಕಾರ್ಯಾಚರಣೆಯನ್ನು ಶುರುಮಾಡುತ್ತವೆ. ಹಾಗೆಯೇ ಕೋಶಾವಸ್ಥೆಯಲ್ಲಿದ್ದ ಜೀವಾಣುಗಳು ಸೂಕ್ತವಾತಾವರಣ ನಿರ್ಮಾಣವಾಗುತ್ತಿದ್ದಂತೆ ಕೋಶಾವಸ್ಥೆಯಿಂದ ಹೊರಬಂದು ಕ್ರಿಯಾಶೀಲಗೊಳ್ಳುತ್ತವೆ. ಪ್ರಕೃತಿ ಇಷ್ಟೊಂದು ಸುಸಂಬಂಧವಾದ ಸಾವಯವ ಸಂಬಂಧವನ್ನು ತಾನು ಸೃಷ್ಟಿಸಿದ ಜೀವ ಸಂಕುಲದೊಂದಿಗೆ ಇರಿಸಿಕೊಂಡು ಬಂದಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ದೊಡ್ಡ ಇಂದುವಾಡಿ ಗ್ರಾಮದ ಎಂ.ಕೆ. ಕೈಲಾಸ ಮೂರ್ತಿ ತಮ್ಮ ಸಹಜ ಕೃಷಿ ತೋಟದಲ್ಲಿ ಗಮನಿಸಿದ ನಿಸರ್ಗ ವಿದ್ಯಮಾನ ಇಂತಿದೆ.

"ನನ್ನ ಆರು ಎಕರೆ ತೋಟ ಜೈವಿಕವಾಗಿ ವೈವಿಧ್ಯಮಯವಾಗಿದೆ, ಅಡಕೆ, ತೆಂಗು, ಬಾಳೆ, ಮಾವು ನನ್ನ ಮುಖ್ಯ ಬೆಳೆ, ಆದರೆ ಉಳಿದ ಬೆಳೆಗಳು ಕೂಡ ಮುಖ್ಯ ಬೆಳೆಯಷ್ಟೇ ಪ್ರಾಮುಖ್ಯತೆ ಪಡೆಯುತ್ತವೆ. ಯಾವುದು ಮುಖ್ಯವೋ ಅದು

ಮುಖ್ಯ ಆಗಿರುವುದಿಲ್ಲ. ಹಾಗೆಯೇ ಯಾವುದು ಅಮುಖ್ಯವೋ ಅವು ಅಮುಖ್ಯವಾಗಿರುವುದಿಲ್ಲ. ಪ್ರತಿಯೊಂದು ತನ್ನ ಪರಿಧಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಲೇ ಇರುತ್ತವೆ. ಒಮ್ಮೆ ನಾನು ಅಲ್ಲಲ್ಲಿ ಮೂಲಂಗಿ ಹಾಕಿದ್ದೆ. ಆ ಬಾರಿ ಮೂಲಂಗಿಗೆ ಹುಳ ಮತ್ತು ಕೀಟಗಳ ಕಾಟ ಹೆಚ್ಚು. ಹಾಗೂ ಹೀಗೂ ಅವಧಿಗೆ ಅನುಗುಣವಾಗಿ ಶೇಕಡ ೩೦ ರಷ್ಟು ಮೂಲಂಗಿ ಫಸಲು ಬಂತು. ಒಂದಷ್ಟು ಬಲಿತಿರಲಿಲ್ಲ ಕೆಲವನ್ನು ಬಿತ್ತನೆ ಬೀಜಕ್ಕಾಗಿ ಬಿಟ್ಟು ಕೊಂಡಿದ್ದೆ. ಹುಳುಗಳ ಸಮಸ್ಯೆ ತಗ್ಗಿರಲಿಲ್ಲ. ಬಹುತೇಕ ಬಿತ್ತನೆಗಾಗಿ ಬೆಳೆದು ನಿಂತ ಎಲೆಗಳನ್ನೆಲ್ಲಾ ಹುಳುಗಳು ತಿಂದು ಹಾಕತೊಡಗಿದವು. ಕಡೆಗೆ ಒಂದೇ ಒಂದು ಮೂಲಂಗಿ – ಅದರ ಎಲೆಗಳು ಮುದುರಿಕೊಂಡಿದ್ದವು. ಅದು ಆಸ್ಥಿತಿಯಲ್ಲೇ ಇತ್ತು. ಮೂಲಂಗಿ ಕಬಳಿಸುವ ಹುಳುಗಳು ಇದ್ದರೂ ಆ ಒಂದು ಮೂಲಂಗಿ ಗಿಡವನ್ನು ಮುಗಿಸಿ ಹಾಕಲು ಮುಂದಾಗಲಿಲ್ಲ. ಅದು ನನ್ನಲ್ಲಿ ಆಶ್ಚರ್ಯ ಮೂಡಿಸಿತು. ಸಾಮಾನ್ಯವಾಗಿ ೪೩ ರಿಂದ ೬೦ ದಿನಗಳ ಬೆಳೆ ಮೂಲಂಗಿ, ೭೦-೮೦ ದಿವಸಗಳಾದರೂ ಮೂಲಂಗಿ ಬೆಳವಣಿಗೆಯಲ್ಲಿ ಮಾರ್ಪಾಡುಗಳಾಗಲಿಲ್ಲ. ೧೨೦-೧೩೦ ದಿನಗಳಾದವು, ಇದ್ದಕ್ಕಿದ್ದಂತೆ ಹುಳುಗಳು ಕಾಣೆಯಾದವು. ಯಾವಾಗ ಹುಳುಗಳು ಕಾಣೆಯಾದವೋ ಮುದುಡಿ ನಿಂತಿದ್ದ ಮೂಲಂಗಿ ಎಲೆಗಳು ಚಿಗುರತೊಡಗಿದವು. ಮುಂದಿನ ೫ ದಿನಗಳಲ್ಲಿ ಮೂಲಂಗಿ ಸುಳಿಯಿಂದ ಮಾತೆ ಹೊರಬಂದಿತು. ಮುಂದಿನ ಹದಿನೈದು ದಿನಗಳಲ್ಲಿ ಹೂಬಿಟ್ಟು ಕಾಯಿಕಚ್ಚಿ ತಳ್ಳುಗಳಾದವು. ತಳ್ಳುಗಳನ್ನು ಬಿಡಿಸಿದರೆ ಒಣಗಿದ ಗಟ್ಟಿ ಬೀಜಗಳು ಅಂದರೆ ಮೂಲಂಗಿ ಹುಳುಗಳ ಹಾವಳಿಯ ನಡುವೆಯೂ ಏಕಾಂಗಿಯಾಗಿ ಉಳಿದುಕೊಂಡು ಅವಧಿ ಮೀರಿದರೂ ಸಂಯಮದಿಂದ ಕಾದು ಫಲ ಕಚ್ಚುವವರೆಗೂ ಸಾಯದೆ ನಿಂತು ಬೆರಗು ಮೂಡಿಸಿತು.

ಈ ಬಾರಿ ಮಾನ್ಸೂನ್ ಜೋರಾಗಿತ್ತು. ಅಕ್ಟೋಬರ್ ತಿಂಗಳಲ್ಲೂ ತೋಟದಲ್ಲಿ ತೇವಾಂಶ ಜಾಸ್ತಿ ಇತ್ತು. ವೆನಿಲಾ ಬೆಳೆಗೆ ಧಾರಣೆ ಇಲ್ಲದ್ದರಿಂದ ಅದರ ಪರಾಗಸ್ಪರ್ಶ ನಿಲ್ಲಿಸಿದ್ದೆ. ತೋಟದಲ್ಲಿ ಸುಮಾರು ಅರ್ಧ ಎಕರೆಯಲ್ಲಿ ತೆಳ್ಳಗೆ ಅಲ್ಲಲ್ಲಿ ವೆನಿಲಾ ಬಳ್ಳಿಗಳಿದ್ದವು. ವೆನಿಲಾಗೆ ಪ್ರತಿ ಹೂವಿನಿಂದ ಹೂವಿಗೆ ನಾವೇ ಖುದ್ದು ನಿಂತು ಪರಾಗಸ್ಪರ್ಶ ಮಾಡದೇ ಹೋದರೆ ಅದು ಕಾಯಿ ಬಿಡುವುದಿಲ್ಲ. ತೇವಾಂಶ ಮತ್ತು ನೆರಳು ಜಾಸ್ತಿ ಇದ್ದುದರಿಂದ ಮೃದ್ವಂಗಿಗಳಾದ ಬಸವನಹುಳುಗಳು ಜಾಸ್ತಿ ಸಂಖ್ಯೆಯಲ್ಲಿ ಉದ್ಭವವಾದವು. ಶಂಖದ ಚಿಪ್ಪಿರುವ ಈ ಬಸವನಹುಳುಗಳು ತೋಟದಲ್ಲಿ ಬೆಳೆದು ನಿಂತ ಸೊಪ್ಪುಗಳನ್ನು ರೇಷ್ಮೆ ಹುಳದಂತೆ ಅಚ್ಚುಕಟ್ಟಾಗಿ ಮೆಯ್ದು ಬಿಡುತ್ತವೆ. ಇವು ವೆನಿಲಾ ಬಳ್ಳಿಗಳ ಮೇಲೆ ದಾಳಿಯಿಟ್ಟು ಅದರ ಮಂದವಾದ ಎಲೆಗಳನ್ನೆಲ್ಲಾ ತಿನ್ನತೊಡಗಿದವು. ಕೆಲವು ಗಿಡಗಳಲ್ಲಿ ಕಾಂಡದ ರಸ ಹೀರತೊಡಗಿದವು. ಸಹಜ ಕೃಷಿ ಆದ್ದರಿಂದ ಕೈಯ್ಯಾರೆ ವೆನಿಲಾ ಬೆಳೆ ಕಾಪಾಡಿಕೊಳ್ಳುವ ಯಾವ ಉಪಾಯವನ್ನು ಮಾಡಲಿಲ್ಲ. ನಿಸರ್ಗ ಯಾವರೀತಿ ನನ್ನ ವೆನಿಲಾ ಬೆಳೆಯನ್ನು ಕಾಪಾಡುತ್ತೆ. ಬಸವನಹುಳುವನ್ನು ಯಾವ ರೀತಿ ನಿಯಂತ್ರಣ

ಮಾಡುತ್ತೆ ನೋಡೋಣ ಅಂತ ಸುಮ್ಮನಾದೆ. ಕೇವಲ ಎರಡು ವಾರಗಳಲ್ಲಿ ಬಹುತೇಕ ವೆನಿಲಾ ಬಳ್ಳಿಗಳನ್ನು ತಿಂದು ಮುಗಿಸಿದವು. ಕಟ್ಟಕಡೆಗೆ ಒಂದೇ ಒಂದು ವೆನಿಲಾ ಬಳ್ಳಿ ಉಳಿದುಕೊಂಡಿತು. ಆ ಒಂದು ಗಿಡದ ತಂಟೆಗೆ ಈ ವೃದ್ದಂಗಿಗಳು ಹೋಗಲಿಲ್ಲ. ನಾನು ಗಮನಿಸುತ್ತಲೇ ಇದ್ದೆ. ಇತರ ಗಿಡಗಳ ಸೊಪ್ಪುಗಳನ್ನು ತಿನ್ನುತ್ತಿದ್ದವೆ ಹೊರತು ಕಡೆಯದಾಗಿ ಉಳಿಸಿದ ಆ ವೆನಿಲಾ ಬಳ್ಳಿಗೆ ಈ ಮೃದ್ವಂಗಿಗಳು ಬಾಯಿ ಹಾಕಲಿಲ್ಲ.

ಕಡೆಗೆ ನನಗೆ ಮನದಟ್ಟಾಗಿದ್ದಿಷ್ಟು. ತೋಟದಲ್ಲಿ ಅಸಡ್ಡೆಗೆ ಒಳಗಾಗಿದ್ದ ವೆನಿಲಾ ಬಳ್ಳಿಗಳನ್ನೆಲ್ಲ ತಿಂದು – "ಆ ಒಂದೇ ಒಂದು ವೆನಿಲಾ ಬಳ್ಳಿಯನ್ನು ತಿನ್ನದೇ ಉಳಿಸಿದ್ದು ಏಕೆ? ಏಕೆಂದರೆ ಇರುವೊಂದು ಬಳ್ಳಿಯನ್ನು ಮುಗಿಸಿ ಹಾಕಿದರೆ – ಮುಂದೆ ವೆನಿಲಾಬಳ್ಳಿಗಳೇ ಇರೋದಿಲ್ಲ. ಮೂಲಂಗಿ ಗಿಡ ತೋರಿದ ಚಮತ್ಕಾರ, ವೆನಿಲಾ ಬಳ್ಳಿಯ ವಿಷಯವಾಗಿ ಈ ಮೃದ್ವಂಗಿಗಳು ತಳೆದ ನಿಲುವು ಎರಡರ ಹಿಂದೆಯೂ ಒಂದು ಅಗೋಚರ ಪ್ರಜ್ಞೆ ಅಡಗಿದೆ. ನಿಸರ್ಗದಲ್ಲಿ ನಾನಾ ಬಗೆಯ ವ್ಯಾಪಾರಗಳು ಜರುಗುತ್ತಿರುತ್ತವೆ. ಗಮನವಿಟ್ಟು ನೋಡಿದರೆ ಇಂಥವುಗಳು ಅರಿವಿಗೆ ಬರುತ್ತವೆ" ಎನ್ನುತ್ತಾರೆ ಕೈಲಾಸಮೂರ್ತಿ.

ಅಳಿವಿನಂಚಿಗೆ ಬಂದಿರುವ ಎಷ್ಟೋ ಜೀವಸಂಕುಲವನ್ನು ನಾವು ಉಳಿಸಲು ಎಣಗಾಡುತ್ತೇವೆ. ಯಾವುದೋ ಅಪರೂಪದ ಬೀಜವನ್ನು ಎಲ್ಲೆಲ್ಲೋ ಹುಡುಕಿ ತಂದು ಅದನ್ನು ಉಳಿಸುವ ಸಲವಾಗಿಯೇ ಬಿತ್ತಿ ಬೆಳೆಸುತ್ತೇವೆ. ಆದರೂ ಅದು ನಿರೀಕ್ಷೆಯಂತೆ ಬೆಳೆಯಲು ಉತ್ಸಾಹ ತೋರುವುದಿಲ್ಲ. ಜೀವ ಪರಿಸರದ ಲಕ್ಷಾಂತರ ವರ್ಷಗಳ ಯಾತ್ರೆಯಲ್ಲಿ ಡೈನೋಸಾರಸ್‌ನಂತ ಮಹಾ ದೈತ್ಯ ಪ್ರಾಣಿಗಳು ಇಂದು ಇಲ್ಲ. ಈ ಭೂಮಿ ಮೇಲೆ ಮೊಟ್ಟ ಮೊದಲ ಬಾರಿಗೆ ಕಾಣಿಸಿಕೊಂಡ ಸಸ್ಯ 'ಪಾಚಿ' (ಆಲ್ಗೆ) ಕೊಟ್ಯಾನು ಕೋಟಿ ವರ್ಷಗಳಿಂದ ಅದು ಯಾತ್ರಿಸುತ್ತಲೇ ಬಂದಿದೆ. ಅದರ ಅವಿನಾಶಿನಿಗುಣಕ್ಕೆ 'ಸಂಜೀವಿನಿ' ಎಂದೇ ಕರೆಯುತ್ತಾರೆ. ಅದು ಹಿಂದೆಯೂ ಇತ್ತು ಈಗಲೂ ಇದೆ ಮತ್ತು ಮುಂದೂ ಮುಂದುವರಿಯುವ ಗುಣ–ಲಕ್ಷಣಗಳನ್ನು ಹುಟ್ಟತ್ತಲೆ ಪಡೆದುಕೊಂಡು ಬಂದಿವೆ. ಇವತ್ತು ಪ್ರಪಂಚದಾದ್ಯಂತ ಪ್ರತಿ ರಾಷ್ಟ್ರವೂ ಅಣುಬಾಂಬುಗಳನ್ನು ಸೃಷ್ಟಿಸಿಕೊಂಡು ನಾನೇ ಸರ್ವಶಕ್ತ ಎಂದು ಬೀಗುತ್ತಿವೆ. ಯಾರೋ ಅವಿವೇಕಿ ಬಾಂಬ್ ಹಿಡಿದು ಯುದ್ಧ ಸಾರಿದರೆ ಸರ್ವನಾಶ. ಇಂಥ ಸರ್ವನಾಶದ ಸಂದರ್ಭದಲ್ಲೂ ಅದು ಹೇಗಾದರೂ ಮಾಡಿ ಉಳಿಯಬಲ್ಲ ಸಸ್ಯ ಪಾಚಿ. ಪಾಚಿಯಿಂದ ಮತ್ತೆ ಜೀವ ಸಂಕುಲದ ಉದಯ – ಮತ್ತದೇ ಪುನಃರ್ ಸೃಷ್ಟಿಯ ಯಾತ್ರೆ.

ಸೃಷ್ಟಿ ಕ್ರಿಯೆ ಇಲ್ಲಿ ನಿತ್ಯ ನಿರಂತರ. ಪ್ರತಿ ಕ್ಷಣವೂ ಸೃಷ್ಟಿ ಹೊಸದೊಂದು ನಿರ್ಮಾಣ ಮಾಡುತ್ತಲೇ ಹೋಗುತ್ತದೆ ಮತ್ತು ತನಗೆ ಬೇಡವಾದ ಎಲ್ಲವನ್ನು

ಇಲ್ಲವಾಗಿಸುತ್ತದೆ. ಅದು ಬೆಳೆ ಇರಬಹುದು, ಪ್ರಾಣಿ ಇರಬಹುದು. ಮಾನವ ಇರಬಹುದು, ಮಾನವರನ್ನೇ ಉದಾಹರಣೆಗೆ ತೆಗೆದುಕೊಂಡರೆ, ಆದಿಯಲ್ಲಿ ಉದಯಿಸಿದ ಆದಿಮಾನವ ಸಂತತಿ ಇಂದು ಇಲ್ಲ. ಈಗ ಇರುವಂತದು ಎಷ್ಟಿದೆಯೋ ಅಷ್ಟೇ ಪ್ರಮಾಣದಲ್ಲಿ ಇದ್ದದ್ದೆಲ್ಲ ಇಲ್ಲವಾಗಿದೆ. ಈ ಅರಿವನ್ನು ಯಾವುದೇ ಶಿಕ್ಷಣ ತರಬೇತಿಗಳಿಲ್ಲದೆಯೂ ಅನಕ್ಷರಸ್ಥ ಹಳ್ಳಿಯ ಜನರಲ್ಲಿ ನಾವು ಇಂದಿಗೂ ಕಾಣಬಹುದು.

ನಮಗೆ ಬೇಡದ ಕಳೆಗಿಡಗಳನ್ನು ಮತ್ತು ನಾವು ಬೆಳೆಯುವ ಬೆಳೆಗಳಿಗೆ ಅಡ್ಡಿಯಾಗುವ ಗಿಡಗಳನ್ನು ಶುದ್ಧ ಬೇಸಾಯ ಜೀವನ ಕ್ರಮ ಶುರುವಾದ ಮೇಲೆ ಕಿತ್ತು ಬಿಸಾಡಲು ಅಥವಾ ನಾಶಮಾಡಲು ಯತ್ನಿಸುತ್ತಲೆ ಬಂದಿದ್ದೇವೆ. ಬೇಡದ ಗಿಡಗಳಿಗೆ ಯಾರ ಆಸರೆಯೂ ಇಲ್ಲ. ಅವು ತಬ್ಬಲಿಗಳ ತರ, ನಮ್ಮ ದೇಶದಲ್ಲಿ ತುಳಿತಕ್ಕೊಳಗಾದ ದಲಿತರ ತರ. ಆದರೆ ಅವನ್ನು ಸರ್ವನಾಶಮಾಡಲು ಯತ್ನಿಸಿದಷ್ಟು ಅವು ಎಲ್ಲ ಬಗೆಯ ಪ್ರತಿರೋಧಗಳನ್ನು ಮೆಟ್ಟಿ ನಿಂತು ದಾಂಗುಡಿಸಿ ಬೆಳೆಯುತ್ತವೆ. ಇದು ನಿಜಕ್ಕೂ ನಿಸರ್ಗದ ಸೊಬಗು.

ಮತ್ತು ನಾವು ಕೆಲವನ್ನು ಬೇಕೆಂದೇ, ಅಮೂಲ್ಯವೆಂದೇ ಉಳಿಸಿಕೊಳ್ಳಲು ಯತ್ನಿಸುತ್ತೇವೆ. ಅಪಾರವಾದ ಪರಿಶ್ರಮವನ್ನು ವಿನಿಯೋಗಿಸುತ್ತೇವೆ. ಇಷ್ಟಾದರೂ ಉಳಿಸಿಕೊಳ್ಳಲು ಆಗುವುದಿಲ್ಲ. ಅಳಿವಿನಂಚಿನಲ್ಲಿರುವ ಎಲ್ಲದಕ್ಕೂ ಇದು ಅನ್ವಯವಾಗುತ್ತದೆ.

ನಿಸರ್ಗ ವ್ಯವಸ್ಥೆಯಲ್ಲಿ ಸಜೀವ ಇಂದ್ರಿಯಗಳು ಮತ್ತು ನಿರ್ಜೀವ ಅವಯವ ಅವಶೇಷಗಳು ಬೆಳೆಯ ಅನ್ನಚಕ್ರದ ಕೊಂಡಿ. ನಮ್ಮ ದನ, ಕರು, ಎತ್ತುಗಳು ವ್ಯವಸಾಯಕ್ಕೆ ಪೂರಕ, ಅವುಗಳ ತೊಪ್ಪೆ ಮತ್ತು ಗಂಜಲಗಳನ್ನು ಮತ್ತೆ ನಾವು ಗೊಬ್ಬರದ ರೂಪದಲ್ಲಿ ವ್ಯವಸಾಯ ಭೂಮಿಗೆ ಹಿಂದಿರುಗಿಸುತ್ತೇವೆ. ಮಣ್ಣಿನಿಂದ ಪಡೆದದ್ದು ಮತ್ತೆ ಮಣ್ಣಿಗೆ ಹಿಂದಿರುಗುತ್ತದೆ. ಬೆಳೆದ ಬೆಳೆಯನ್ನು ಆಹಾರವಾಗಿ ಪಡೆದು ಮತ್ತೆ ಅದನ್ನು ಬೆಳೆದಲ್ಲಿಗೆ ವಿಸರ್ಜಿಸಿದರೆ ಒಂದು ಅನ್ನಚಕ್ರ ಪೂರ್ಣಗೊಳ್ಳುತ್ತದೆ.

ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಗೂ ಅನ್ನದ ವ್ಯವಸ್ಥೆಯನ್ನು ನಿಸರ್ಗವೇ ಕಲ್ಪಿಸಿದೆ. ಹಾಗೆಯೇ ಸೃಷ್ಟಿಯ ಪ್ರತಿಯೊಂದು ಜೀವಿಯ ಅಳಿವು ನಿಸರ್ಗಕ್ಕೆ ಅನ್ನವಾಗಿದೆ. ಭೂಮಿಯ ಮೇಲೆ ಸಹಜವಾಗಿ ಬೆಳೆಯುವ ಪ್ರತಿ ಗಿಡ, ಮರ ತನ್ನ ಅವಯವ, ಅಂದರೆ ಎಲೆ, ಹೂ, ಹಣ್ಣು, ಕಾಯಿ ಕಾಂಡ, ಬೇರುಗಳ ಸಮೇತ ಆಯುಷ್ಯ ಇರುವವರೆಗೂ ಮತ್ತು ಆಯುಷ್ಯ ಪೂರ್ತಿಯಾದ ಬಳಿಕ ಭೂಮಿಗೆ ಹಿಂದಿರುಗುತ್ತಾ ಹೋಗುತ್ತದೆ. ಮಣ್ಣಿನ ಮೇಲ್ಪದರದಲ್ಲಿ ಮತ್ತು ಆಳದಲ್ಲಿ ಕಣ್ಣಿಗೆ ಕಾಣುವ–ಕಾಣದ ಕೋಟ್ಯಂತರ ಜೀವಿಗಳಿಗೆ. ಇವೆಲ್ಲವೂ ನಿಸರ್ಗಕ್ಕೆ ಪೂರಕವಾಗಿ

ಒಂದನೊಂದು ಅವಲಂಬಿಸಿವೆ. ಗಿಡ–ಮರಗಳ ಅವಶೇಷಗಳನ್ನು ತಿಂದು ಬಾಳುವ ಜೀವಿಗಳು ಸತ್ತ ಬಳಿಕೆ ಅವೇ ಗಿಡ–ಮರಗಳಿಗೆ ಪೋಷಕಾಂಶವಾಗಿ ಲಭಿಸುತ್ತವೆ. ಈ ಜೀವಿಗಳನ್ನು ಮತ್ತು ಬೆಳೆದ ಫಸಲನ್ನು ತಿಂದು ಬದುಕುವ ಕಪ್ಪೆ, ಇಲಿ, ಇರುವೆ, ಹಾವು, ಹಕ್ಕಿ ಇತ್ಯಾದಿ ಕೋಟ್ಯಾನುಕೋಟಿ ಜೀವಿಗಳು ಇಡೀ ನಿಸರ್ಗ ವ್ಯವಹಾದಲ್ಲಿ ತಮ್ಮ ಪ್ರಾಮುಖ್ಯತೆ ಸಾರಿ ಮತ್ತೆ ಮರಳಿ ಮಣ್ಣಾಗುತ್ತವೆ. ಹಾಗೆಯೇ ಮನುಷ್ಯ ಕೂಡ, ಋತುಮಾನಗಳಿಗನಗುಣವಾಗಿ ಭೂಮಿ ತನ್ನ ಮೇಲಿನ ಸಕಲ ಜೀವರಾಶಿಗಳಿಗೂ ಒಂದು ಅಸ್ತಿತ್ವ ಕಲ್ಪಿಸಿಕೊಟ್ಟಿದೆ.

ಹೇಮಂತ ಋತುವಿನಲ್ಲಿ ಗಿಡ–ಮರಗಳು ಫಲಿತವಾಗುತ್ತವೆ. ಶಿಶಿರನ ಕಾಲಕ್ಕೆ ಎಲೆಗಳು ಉದುರಗೊಡಗುತ್ತವೆ. ಎಲೆ ಉದುರುವ ಮುನ್ನ ಮರ ಆ ಎಲೆಯ ಸಾರವನ್ನೆಲ್ಲ ಮುಂದಿನ ತನ್ನ ಚಿಗುರುಗಳಿಗಾಗಿ ಹಿರಿಕೊಂಡಿರುತ್ತದೆ. ಉದುರಿದ ಎಲೆ, ಕಡ್ಡಿ, ಕಾಯಿಗಳು ಆ ಮರದ ಬುಡದಲ್ಲಿ ಹರಡಿಕೊಳ್ಳುತ್ತವೆ. ಆ ಮರದ ಬೇರುಗಳು ತನ್ನ ಆಹಾರ ಸಂಗ್ರಹಕ್ಕಾಗಿ ತನ್ನದೇ ಆದ ಜಾಲ ರೂಪಿಸುತ್ತವೆ. ಅಲ್ಲಿ ಗೆದ್ದಲು, ಇರುವೆ, ಇಲಿ ಆ ಬೇರುಗಳಿಗೆ ಪೂರಕವಾದ ಕಾರ್ಯನಿರ್ವಹಿಸುತ್ತಿರುತ್ತವೆ. ಜೊತೆಗೆ ಅದೇ ಆವರಣದಲ್ಲಿ ಕಣ್ಣಿಗೆ ಕಾಣದ ಕೋಟ್ಯಾನುಕೋಟಿ ಜೀವಿಗಳು ಹುಟ್ಟುತ್ತಾ, ಸಾಯುತ್ತ ಮಣ್ಣಿನ ಕಣ ಕಣಗಳ ನಡುವೆ ಸೂಕ್ಷ್ಮ ರಂಧ್ರ ಕೊರೆಯುತ್ತ ಮಣ್ಣಿನ ಮೇಲ್ಪದರನ್ನು ಹೂವಿನಂತೆ, ಸ್ಪಂಜಿನಂತೆ ಮೃದುಗೊಳಿಸುತ್ತವೆ.

ಮಾನ್ಸೂನ್ ನಮ್ಮಲ್ಲಿ ರಭಸದ ಮಳೆ, ನೈಸರ್ಗಿಕ ವಾತಾವರಣದಲ್ಲಿ ಈ ಮಳೆ ಎಷ್ಟೇ ಆರ್ಭಟಿಸಿದರೂ ಮಣ್ಣಿನ ಸವಕಳಿ ಉಂಟಾಗುವುದಿಲ್ಲ. ಬಿದ್ದ ಮಳೆ ನೀರೆಲ್ಲ ಆ ಹೂವಿನಂಥ, ಸ್ಪಂಜಿನಂಥ ಮಣ್ಣು ಹೀರಿಕೊಂಡು ತನ್ನ ಕೋಟ್ಯಾನುಕೋಟಿ ರಂಧ್ರಗಳ ಮೂಲಕ ನೆಲದಾಳಕ್ಕೆ ಸರಾಗವಾಗಿ ಕಳುಹಿಸುತ್ತದೆ. ನಿಸರ್ಗದ ನಿಜವಾದ ಸೊಬಗು ಅಡಗಿರುವುದು ಇಲ್ಲಿಯೇ.

ಮಳೆಗೂ ಮುಂಚಿನ ಬೇಸಿಗೆಯಲ್ಲಿ ಕಪ್ಪೆಗಳು ಕಣ್ಮರೆಯಾಗಿರುತ್ತವೆ. ಎರೆ ಹುಳುಗಳು ಭೂಮಿಯ ಆಳದಲ್ಲಿರುತ್ತವೆ. ಇರುವೆಗಳು, ಗೆದ್ದಲುಗಳು, ಕಪ್ಪೆಗಳು, ಎರೆಹುಳುಗಳು ಸೇರಿದಂತೆ ಲಕ್ಷಾಂತರ ಜೀವಿಗಳು ನಿಸರ್ಗ ವ್ಯವಸ್ಥೆಯಲ್ಲಿ ತಮ್ಮದೆ ಆದ ಬಗೆಯಲ್ಲಿ ಭೂಮಿಯನ್ನು ಉತ್ತು ಹದಗೊಳಿಸಿರುತ್ತವೆ. ಮಳೆ ಬೀಳುತ್ತಿದ್ದಂತೆ ಭೂಮಿಯ ಉಷ್ಣಾಂಶ ತಗ್ಗಿ ಬಿಲಗಳಿಂದ ಹೊರ ಬರುತ್ತವೆ. ಹೀಗೆ ಹೊರಬಂದವುಗಳು ಬೆಳೆಗಳಿಗೆ ಪೂರಕವಾದ ಕೆಲಸದಲ್ಲಿ ತೊಡಗುತ್ತವೆ.

ಮಳೆ ಆಶ್ರಿತ ನೆಲಗಳಲ್ಲಿ ತೋಟಗಾರಿಕಾ ಬೆಳೆ ಯಶಸ್ವಿ ಆಗುವ ಹಾಗೆ ನೀರಾವರಿ ಭೂಮಿಯಲ್ಲೂ ಆಗುವುದಿಲ್ಲ. ನಮ್ಮ ಸಾಂಪ್ರದಾಯಕ ವ್ಯವಸ್ಥೆಯಲ್ಲಿ ಬೆಳೆಗಳ ಮೇಲೆ ಕೀಟಗಳು ಸಮರವನ್ನೇ ಸಾರಲಿ, ಕಳೆಗಳು ಬೆಳೆದು ನಿಲ್ಲಲಿ, ಇಲಿಗಳ ಉಪಟಳ ಮೇರೆ ಮೀರಲಿ, ಹಾವುಗಳು ಹಕ್ಕಿಗಳು, ಪತಂಗಗಳು ಬೇಕಾದ್ದು

ಮಾಡಲಿ. ಆದರೆ ಆ ಎಲ್ಲವುಗಳು ಇದ್ದಾಗಲೆ ಬೆಳೆಗೆ ಸಮೃದ್ಧಿ! ಈ ಬಾರಿ ಇಲಿಗಳ ಕಾಟ ಹೆಚ್ಚಾಯಿತು ಎಂದುಕೊಳ್ಳಿ. ಶೇಕಡ ಐದರಷ್ಟು ಫಸಲು ಕೂಡ ನಷ್ಟವಾಯಿತು ಅಂದುಕೊಳ್ಳಿ. ಆದರೆ ಅದರ ಮರುವರ್ಷ ನಷ್ಟದ ಹತ್ತು ಪಟ್ಟನ್ನು ನಾವು ಜಪ್ತಿ ಮಾಡಬಹುದು. ಯಾಕೆಂದರೆ ಇಲಿಗಳ ವಿಸರ್ಜನೆ, ಕಾರ್ಯಾಚಾರಣೆಗೆ ಅಂಥ ಶಕ್ತಿ ಇದೆ. ಕಳೆ ಬೆಳೆದರೆ ಮತ್ತೆ ಅದು ಬೆಳೆದಲ್ಲಿಗೇ ಸೇರುತ್ತದೆ. ಬೆಳೆಯುತ್ತಿರುವ ಬೆಳೆಯ ಮೇಲೆ ಪೈಪೋಟಿಗೆ ನಿಲ್ಲುವ ಕಳೆಯನ್ನು ನಿಯಂತ್ರಿಸಿ, ಅದನ್ನೇ ಭೂಮಿಗೆ ಹೊದಿಕೆ ಮಾಡಬೇಕು. ನಮ್ಮ ರಾಸಾಯನಿಕ ಬೇಸಾಯ ಹಾವು, ಇಲಿ, ಎರೆಹುಳು, ಗೆದ್ದಲು, ಕಪ್ಪೆ, ಜೇಡ, ದುಂಬಿ, ಜೇನು, ಪತಂಗ, ಹಕ್ಕಿ ಎಲ್ಲವನ್ನೂ ಕೊಲ್ಲುತ್ತಾ ಹೋಗುತ್ತದೆ; ಹಾಗೆಯೇ ಭೂಮಿ ಮೇಲಿನ ಕೋಟ್ಯಾನುಕೋಟಿ ಜೀವಾಣುಗಳನ್ನು ಕೂಡ. ಭೂಮಿಯಲ್ಲಿ ಬೆಳೆ ತೆಗೆಯಲು ಈ ಬಗೆಯಲ್ಲಿ ಕಸರತ್ತು ನಡೆಸುವ ನಾವು ಸದಾ ಕಾಲ ಬದುಕುಳಿಯಲು ಆಸ್ಪತ್ರೆ, ಔಷಧಿ, ಡಾಕ್ಟರುಗಳ ಮೊರೆ ಹೋಗಬೇಕಾಗುತ್ತದೆ. ನಾವೀಗ ಮೊದಲು ರೋಗದ ಮೂಲ ಪತ್ತೆ ಹಚ್ಚಬೇಕು. ರೋಗದ ಮೂಲವಿರುವುದೇ ನಮ್ಮ ಬೇಸಾಯ ಕ್ರಮದಲ್ಲಿ ! ಅದನ್ನು ಸರಿಪಡಿಸಿಕೊಂಡರೆ ಈ ಆಸ್ಪತ್ರೆಗಳು, ಔಷಧಿಗಳು, ಡಾಕ್ಟರುಗಳು–ಈ ಯಾರಿಗೂ ವಿಳಾಸವೇ ಇರುವುದಿಲ್ಲ.

ಅಧ್ಯಾಯ-೬

ಹವಾಮಾನಾಧಾರಿತ ವ್ಯವಸಾಯ ಜ್ಞಾನ

೬.೧. ಪೂರ್ವ ಮುಂಗಾರು:

ಮಳೆಗಳಿಗೂ ಭೌಗೋಳಿಕ ಲಕ್ಷಣಗಳಿಗೂ ಆಳವಾದ ಸಂಬಂಧಗಳಿವೆ. ಮಳೆಯ ಅನಿಶ್ಚಯತೆಗಳು ಜನಜೀವನದ ಮೇಲೆ ಗಾಢವಾದ ಪರಿಣಾಮಗಳನ್ನುಂಟು ಮಾಡುತ್ತವೆ. ಭಾರತೀಯ ರೈತ ಸದಾ ಕಾಲ ಮಳೆಗಾಗಿ ಮೊರೆಹೋಗುವ ಅಥವಾ ಅಧಿಕ ಮಳೆಯಿಂದ ತತ್ತರಿಸುವ ಈ ಎರಡೂ ಸ್ವಭಾವಗಳ ಜೊತೆಗೇ ಬಾಳಬೇಕಾಗಿದೆ. ಕಾಲ ಕಾಲಕ್ಕೆ ಮಳೆ-ಬೆಳೆಗಳಾದರೆ, ಅದೇ ಬಹುದೊಡ್ಡ ಸುಭಿಕ್ಷಾ ಕಾಲ. ಪೂರ್ವ ಮುಂಗಾರು ಮಳೆಗೆ ಇಳೆಯನ್ನು ತಣಿಸುವ ಇಲ್ಲವೆ ದಹಿಸುವ ಎರಡೂ ಬಗೆಯ ಸಾಮರ್ಥ್ಯವೂ ಇದೆ.

ಉಗಾದಿಯ ಬೇವು-ಬೆಲ್ಲಗಳೊಂದಿಗೆ ಬಿಸಿಲ ಝಳದೊಳಗೆ ಮಳೆ ಅರಸುವ ತವಕ ನಮ್ಮ ರೈತರಲ್ಲಿ ಶುರುವಾಗುತ್ತದೆ. ದನ ಕರುಗಳ ಮೇವು, ನೀರು ರೈತರ ಆದ್ಯತೆಯಾಗಿರುತ್ತವೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳ ಮಳೆಗಾಲದ ಅವಧಿಯೇ ಪೂರ್ವ ಮಾನ್ಸೂನ್. ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಕಾಲ ಮಾನ್ಸೂನ್ ಮಾರುತಗಳ ಅವಧಿ. ಆನಂತರದ್ದು ಹಿಂಗಾರು ಮತ್ತು ಬೇ ಆಫ್ ಬೆಂಗಾಲ್‌ನಲ್ಲಿ ಜರುಗುವ ತಲ್ಲಣಗಳ ಸರದಿ.

ಮುಖ್ಯವಾಗಿ ಇವಿಷ್ಟು ಭಾರತೀಯ ಬೇಸಾಯ ಜೀವನವನ್ನು, ಅದರ ವೈವಿಧ್ಯ ಮತ್ತು ಲಾಲಿತ್ಯವನ್ನು ನಿರ್ಧರಿಸುವ ಅಂಶಗಳಾಗಿವೆ. ಭಾರತದ ಬೇಸಾಯ ಮಾನ್ಸೂನ್ ಜೊತೆಗಿನ ಜೂಜಾಟ ಎಂದೇ ಪರಿಗಣಿಸಲ್ಪಟ್ಟಿದೆ.

ಪೂರ್ವ ಮಾನ್ಸೂನ್‌ಗೆ ಅರಬ್ಬಿ ಕಡಲಿನ ಮಾರುತಗಳ ಬೆಂಬಲವಿರುವುದಿಲ್ಲ. ನಮ್ಮ ನಾಡಿನ ಸ್ಥಳೀಯ ತಾಪಮಾನಗಳು ಮಳೆಯ ಮೋಡಗಳನ್ನು ನಿರ್ಧರಿಸುತ್ತವೆ. ನಮ್ಮ ರೈತರು ಈ ತಾಪಮಾನಗಳನ್ನನುಸರಿಸಿಯೇ ಮಳೆಗಳನ್ನು ನಿರ್ಧರಿಸುತ್ತಿದ್ದರು. (೧) ಪೂರ್ವಭಾದ್ರ (ಮಾರ್ಚ್ ೪ ರಿಂದ ಮಾರ್ಚ್ ೧೬) (೨) ಉತ್ತರಭಾದ್ರ (ಮಾರ್ಚ್ ೧೭ ರಿಂದ ೨೯) (೩) ರೇವತಿ (ಮಾರ್ಚ್ ೩೦ ರಿಂದ ಏಪ್ರಿಲ್ ೧೨) (೪) ಅಶ್ವಿನಿ (ಏಪ್ರಿಲ್ ೧೩ ರಿಂದ ಏಪ್ರಿಲ್ ೨೬) (೫) ಭರಣಿ (ಏಪ್ರಿಲ್ ೨೭ ರಿಂದ ಮೇ ೧೦) (೬) ಕೃತ್ತಿಕಾ (ಮೇ ೧೧ ರಿಂದ ಮೇ ೨೩) (೭) ರೋಹಿಣಿ ಮೇ-೨೪ ರಿಂದ ಜೂನ್ ೬) ಇವು ಪೂರ್ವ ಮಾನ್ಸೂನಿನ ಮಳೆಗಳು.

ಪೂರ್ವ ಮುಂಗಾರಿನಲ್ಲಿ ದಟ್ಟೈಸುವ ಮೋಡಗಳು ಎಲ್ಲೆಡೆಗೂ ಒಂದೇ ಸಮನೆ ಮಳೆ ತರುವುದಿಲ್ಲ. ಮಾನ್ಸೂನ್ ಮಾರುತವಾದರೆ ಕೇರಳ ರಾಜ್ಯವನ್ನು ದಾಟಿದ ತರುವಾಯ ಕರಾವಳಿ ಸೇರಿದಂತೆ ಕರ್ನಾಟಕದ ಉದ್ದಗಲಕ್ಕೂ ಮಳೆ ತರುತ್ತದೆ. ಮಾನ್ಸೂನ್‌ನಲ್ಲಿ ಗುಡುಗು, ಮಿಂಚುಗಳ, ಮೋಡಗಳ ಆರ್ಭಟಗಳಿರುವುದಿಲ್ಲ. ಪೂರ್ವ ಮುಂಗಾರಿನಲ್ಲಿ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿರುತ್ತವೆ. ಗಾಳಿಯ ವೇಗ ವೃದ್ಧಿಸುತ್ತದೆ. ಭೂಮಿಯಿಂದ ೫ ಕಿ.ಮೀ. ದೂರದಲ್ಲಿದ್ದ ಮೋಡಗಳು – ಭಾರಗೊಂಡು ಕೆಳಗಿಳಿಯತೊಡಗುತ್ತವೆ. ಭೂಮಿಗೆ ಸುಮಾರು ಎರಡು ಕಿ.ಮೀ. ಸಮೀಪ ಬಂದಾಗ ಘರ್ಷಣೆಗಳು ಸಂಭವಿಸಿ ಮಳೆ ಸುರಿಸುತ್ತವೆ.

ಪೂರ್ವ ಮುಂಗಾರಿನಲ್ಲಿ ಬೇಸಾಯ ಚಟುವಟಿಕೆಗಳು ಶುರುವಾಗುತ್ತವೆ. ಆದರೆ ಇಡೀ ರಾಜ್ಯಾದ್ಯಂತ ಈ ಚಟುವಟಿಕೆಗಳು ಒಂದೇ ತೆರನಾಗಿರುವುದಿಲ್ಲ. ಕರ್ನಾಟಕದ ಆಗ್ರೋ ಕ್ಲೈಮ್ಯಾಟಿಕ್ ಜೋನ್ ೭ ರ ಪ್ರದೇಶಗಳಲ್ಲಿ ಪೂರ್ವ ಮುಂಗಾರು ಭರವಸೆಯ ಮಳೆಯಾಗಿರುತ್ತದೆ. ರಾಜ್ಯದ ಚನ್ನಗಿರಿ, ಶಿಕಾರಿಪುರ, ಹೊನ್ನಾಳಿ, ಶಿವಮೊಗ್ಗ, ಭದ್ರಾವತಿ, ತರೀಕೆರೆ, ಅರಕಲಗೂಡು, ಆಲೂರು, ಹೊಳೆನರಸೀಪುರ, ಪಿರಿಯಾಪಟ್ಟಣ, ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕುಗಳ ಭೌಗೋಳಿಕ ಸನ್ನಿವೇಶಗಳು ಪರಸ್ಪರ ಒಂದನ್ನೊಂದು ಹೋಲುತ್ತವೆ. ಹಾಗೆಯೇ ಉತ್ತರ ಕರ್ನಾಟಕದ ಅಳಂದ, ಬಾಲ್ಕಿ, ಬಸವಕಲ್ಯಾಣ, ಬೀದರ್, ಚಿಂಚೋಳಿ, ಹುಮ್ನಾಬಾದ್ ಮತ್ತು ಔರಾದ್ ತಾಲ್ಲೂಕುಗಳಿಗೂ ಪೂರ್ವ ಮುಂಗಾರು ಆಶಾದಾಯಕವಾಗಿರುತ್ತದೆ. ಇದರ ಜೊತೆಗೆ ಬೆಳಗಾಂ ಜಿಲ್ಲೆಯ ಬೆಳಗಾಂ, ಹುಕ್ಕೇರಿ, ಚಿಕ್ಕೋಡಿ, ಬೈಲಹೊಂಗಲ ತಾಲ್ಲೂಕುಗಳು; ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕು, ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಧಾರವಾಡ, ಕುಂದಗೋಳ ತಾಲ್ಲೂಕುಗಳು; ಹಾವೇರಿ ಜಿಲ್ಲೆಯ ಹಾವೇರಿ, ಸವಣೂರು, ಶಿಗ್ಗಾಂವ್, ಹಿರೆಕೆರೂರು, ರಾಣಿಬೆನ್ನೂರು ತಾಲ್ಲೂಕುಗಳ ಬಹುಪಾಲು ಪ್ರದೇಶಗಳು ಅರೆಮಲೆನಾಡು ಸ್ವಭಾವವನ್ನು ಹೊಂದಿವೆ. ಈ ಪ್ರದೇಶಗಳು ಪೂರ್ವಮುಂಗಾರು ಮಳೆಯ ಬಹುಮುಖ್ಯ ಫಲಾನುಭವಿಗಳಾಗಿವೆ. ಮಳೆಯ ಅಭಾವ ಮತ್ತು ಬರಗಾಲದ ವರ್ಷಗಳನ್ನು ಹೊರತುಪಡಿಸಿದರೆ ರೇವತಿ, ಅಶ್ವಿನಿ, ಭರಣಿ, ಕೃತ್ತಿಕಾ ಮತ್ತು ರೋಹಿಣಿ ಈ ಭಾಗದ ರೈತರ ನೆಚ್ಚಿನ ಮಳೆಗಳಾಗಿವೆ. ಹೀಗಾಗಿ ಈ ಭಾಗದ ರೈತರು ಬೆಳೆ ಹಾಕಲು ಮಾನ್ಸೂನ್ ಮಳೆವರೆಗೆ ಕಾಯುವುದಿಲ್ಲ. ರೋಹಿಣಿ ಮಳೆಯ ಕೊನೆಯ ಚರಣದ ಹೊತ್ತಿಗೆ ಈ ಭಾಗದ ಬೆಳೆಗಳು ೪ ಇಂದ ೫ ಮಳೆ ನಕ್ಷತ್ರಗಳ ಅವಧಿಯನ್ನು ಪೂರೈಸಿರುತ್ತವೆ.

ಘಟ್ಟ ಶ್ರೇಣಿಯ ಶಿರಸಿ, ಸಿದ್ದಾಪುರ, ಯಲ್ಲಾಪುರ, ಸೂಪ, ಹೊಸನಗರ, ಸಾಗರ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಮೂಡಿಗೆರೆ, ನರಸಿಂಹರಾಜಪುರ,

ಚಿಕ್ಕಮಗಳೂರು, ಕಲಘಟಗಿ, ಹಾನಗಲ್, ಸಕಲೇಶಪುರ, ವಿರಾಜಪೇಟೆ, ಸೋಮವಾರ ಪೇಟೆ, ಮಡಿಕೇರಿ ಈ ತಾಲ್ಲೂಕುಗಳಿಗೆ ಪೂರ್ವ ಮುಂಗಾರು ಖಾಯಂ ಮಳೆಯಾಗಿರುತ್ತದೆ. ರಾಜ್ಯದಲ್ಲಿ ಮಳೆಯ ಅಭಾವ ವ್ಯಾಪಕವಾಗಿದ್ದರೂ ಈ ಭಾಗಗಳಿಗೆ ಹದವಾಗಿ ಮಳೆಯಾಗುವುದು ತಪ್ಪುವುದಿಲ್ಲ.

ಇನ್ನು ಕರಾವಳಿ ಸೆರಗಿನ ಕಾರವಾರ, ಕುಮಟ, ಹೊನ್ನಾವರ, ಭಟ್ಕಳ, ಅಂಕೋಲ, ಬಂಟ್ವಾಳ, ಉಡುಪಿ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ, ಮಂಗಳೂರು, ಪುತ್ತೂರು, ಸುಳ್ಯ ತಾಲ್ಲೂಕುಗಳಿಗೂ ಗುಡುಗು, ಮಿಂಚುಗಳಾರ್ಭಟದ ಭಾರೀ ಮಳೆ. ಸಮುದ್ರವೂ ಸೇರಿದಂತೆ ಈ ಪ್ರದೇಶದ ಉಷ್ಣಾಂಶ ಮಳೆಯ ಮೋಡಗಳನ್ನು ಬಹು ತೀಕ್ಷ್ಣವಾಗಿ ಸೆಳೆಯುತ್ತವೆ. ಇನ್ನುಳಿದಂತೆ ಕರ್ನಾಟಕದ ಇತರ ಭಾಗಗಳಿಗೆ ಈ ಮಳೆಗಾಲ ಖಾಯಂ ಅಲ್ಲದಿದ್ದರೂ ಸ್ಥಳೀಯ ಉಷ್ಣಾಂಶದ ಪ್ರಭಾವ, ನೀರ ಆವಿ ಘನೀಕರಣಗೊಳ್ಳುವ ಅವಕಾಶಗಳು ಮತ್ತು ಗಾಳಿಯ ವೇಗಗಳು ಸಂಯುಕ್ತಗೊಂಡಾಗ ಮೋಡಗಳು ಮಳೆಗರೆಯಲೇಬೇಕಾಗುತ್ತದೆ. ಬೇಸಿಗೆಯ ಧಗೆಯಿಂದ ಸುಸ್ತಾದ ಕರ್ನಾಟಕ ಪೂರ್ವ ಮುಂಗಾರುವಿನಲ್ಲಿ ದಣಿವಾರಿಸಿಕೊಳ್ಳುವ ಚಿತ್ರಣಗಳನ್ನು ಕೊಡುತ್ತದೆ. ಎದ್ದ ಧೂಳನ್ನು ಹಿಮ್ಮೆಟ್ಟಿಸಿ, ಕಾದು ಬಾಯಾರಿದ ಇಳೆಯನ್ನು ತಣಿಸಿ, ಹೊಸ ಮೇವು, ಹೊಸ ನೀರು, ಹೊಸ ಭರವಸೆಗಳನ್ನೆ ಬೆಳೆವ ಪೂರ್ವ ಮುಂಗಾರು ರೈತರ ಪಾಲಿಗೆ ವರುಣ ದೇವ.

ವಾಸ್ತವವಾಗಿ ಸುಗ್ಗಿಗೂ ಮಿಗಿಲಾದ ಹಿಗ್ಗು ತರುವುದು ಪೂರ್ವ ಮುಂಗಾರು ಮಳೆಯೆ. ಸ್ಥಳೀಯ ಭೌಗೋಳಿಕ ಹಿನ್ನೆಲೆಗಳನ್ನು ಕಾಯ್ದುಕೊಂಡು ಬರುವ ಸಾಮರ್ಥ್ಯ ಇರುವುದು ಕೂಡ ಈ ಅವಧಿಯ ವರ್ಷಧಾರೆ ಗಳಿಗೇನೆ. ಗುಡುಗು ಮಿಂಚುಗಳ ಬೆರಗು ಸೃಷ್ಟಿಸುವ, ರೊಯ್ಯನೆ ಬೀಸುವ ಗಾಳಿಯ ನಡುವೆ ತೂರಿ ಬಂದು ಮಕ್ಕಳೊಳಗೆ ಭಯ, ವಿಸ್ಮಯಗಳನ್ನು ಕಾಣಿಸುವ ಮಳೆ, ಅಶ್ವಿನಿ, ಭರಣಿ, ಕೃತ್ತಿಕಾ ಮಳೆಗಳು ಯಶಸ್ವಿಯಾದರೆ, ರೋಹಿಣಿ ಬಂದು ರೈತರ ಪಾದಗಳನ್ನು ತೊಳೆಯುತ್ತಾಳೆ. ಇದು ಮಾನ್ಸೂನ್ ಮಳೆಯ ಮೊದಲ ಚರಣ. ಈ ನಾಲ್ಕು ಮಳೆಗಳ ಯಶಸ್ಸನ್ನು ಮೃಗಶಿರ, ಆರಿದ್ರಾ, ಪುನರ್ವಸುಗಳು, ಪುಷ್ಯ, ಆಶ್ಲೇಷಗಳು ಮುಂದುವರಿಸಿದರೆ –ಅಲ್ಲಿಗೆ ರೈತನ ಜೀವನ ಸಾರ್ಥಕವಾದಂತೆ.

೬.೨. ಮಾನ್ಸೂನ್

ವಾಸ್ತವವಾಗಿ ಮಾನ್ಸೂನ್ ಪ್ರವೇಶ ಪಡೆಯುವುದು ಜೂನ್ ತಿಂಗಳ ಆರಂಭದಲ್ಲಿ. ಇಷ್ಟೊತ್ತಿಗೆ ಸ್ಥಳೀಯ ಮೋಡಗಳು ಶಾಂತ ಸ್ಥಿತಿಗೆ ಬಂದು ಮುಂದಿನ ಜವಾಬ್ಧಾರಿಯನ್ನು ಮಾನ್ಸೂನ್‌ಗೆ ವರ್ಗಾಯಿಸುತ್ತವೆ. ಕೇರಳದ ಕೊಚ್ಚಿನ್‌ನಿಂದ ಆಚೆಗೆ ಅರಬ್ಬಿ ಕಡಲು ಮತ್ತು ಆಕಾಶದ ನಡುವೆ ನಡೆಯುವ ವಿದ್ಯಮಾನಗಳು ದೇಶದ ದಕ್ಷಿಣ ಭಾಗಕ್ಕೆ ಮಳೆಯನ್ನು ಪ್ರಾಪ್ತಗೊಳಿಸುತ್ತವೆ. ಮಾನ್ಸೂನ್ ಮಾರುತದ

ವೇಗ ಹೆಚ್ಚಾದಷ್ಟು ಮಳೆಯಲ್ಲಿ ರಭಸ ಹೆಚ್ಚಾಗಿರುತ್ತದೆ. ಕೇರಳದ ಮಾನಂದವಾಡಿ ದಾಟಿ ಮೈಸೂರಿಗೆ ಪಾದ ಊರುವಷ್ಟೊತ್ತಿಗಾಗಲೇ ಹೆಗ್ಗಡದೇವನಕೋಟೆ ಕಬಿನಿ ಜಲಾಶಯಕ್ಕೆ ನೀರು ಬಂದಿರುತ್ತದೆ. ರಾಜ್ಯದಲ್ಲೆ ಮೊಟ್ಟ ಮೊದಲೇ ತುಂಬುವ ಜಲಾಶಯವೆಂದರೆ ಕಬಿನಿ. ಆನಂತರ ಉಳಿದವುಗಳ ಸರದಿ. ಬಹುಪಾಲು ಜುಲೈ ತಿಂಗಳ ಅಂತ್ಯದ ವೇಳೆಗೆ ರಾಜ್ಯದ ಎಲ್ಲ ಕೆರೆ, ಕಟ್ಟೆ, ಜಲಾಶಯಗಳು ತುಂಬಿ ಹರಿಯುತ್ತವೆ. ಪೂರ್ವ ಮುಂಗಾರು ಮತ್ತು ಮಾನ್ಸೂನ್ ಎರಡರ ಯಶಸ್ಸನ್ನು ನಾವು ಜಲಾಶಯಗಳ, ಕೆರೆ, ಕಟ್ಟೆಗಳ ನೀರಿನ ಮಟ್ಟವನ್ನು ನೋಡಿ ಅಂದಾಜಿಸಬಹುದು. ಗುಡುಗು, ಮಿಂಚುಗಳು ಇಲ್ಲದಿರುವುದು, ತನ್ನ ವಿಶಾಲ ಪಥದುದ್ದಕ್ಕೂ ಸಾರ್ವತ್ರಿಕವಾಗಿ ಸುರಿಯುವುದು, ಹಾನಿಕಾರಕ ರೀತಿಯಲ್ಲಿ ವ್ಯವಹರಿಸದಿರುವುದು, ಋತುಮಾನ ಪೂರ್ತಿ ಹಂತ ಹಂತವಾಗಿ ಮಳೆಯನ್ನು ಬಿತ್ತರಿಸುವುದು ಮಾನ್ಸೂನ್ ಮಳೆಯ ಮುಖ್ಯ ಲಕ್ಷಣಗಳು. ಜೂನ್ ತಿಂಗಳ ಆರಂಭದಲ್ಲಿ ಶುರುವಾಗಿ ಸೆಪ್ಟೆಂಬರ್ ತಿಂಗಳ ಕೊನೆಯ ಚರಣದಲ್ಲಿ ಕರಾರುವಕ್ಕಾಗಿ ಸ್ಥಗಿತಗೊಳ್ಳುವುದು ಇದರ ಮತ್ತೊಂದು ಲಕ್ಷಣ.

ಮಳೆಯ ನಕ್ಷತ್ರಗಳನ್ನು ಗುರುತು ಹಾಕಿಕೊಂಡು, ಅವುಗಳ ಆಧಾರದ ಮೇಲೆಯೇ ಬೆಳೆಗಳ ವಿನ್ಯಾಸ ಮಾಡಿಕೊಳ್ಳುತ್ತಾ (ಬಿತ್ತನೆ, ನಾಟಿ, ಕಳೆ, ಕುಂಟೆ, ಕೊಯ್ಲು ಇತ್ಯಾದಿ) ಕೃಷಿ ಚಟುವಟಿಕೆಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದು ನಮ್ಮ ರೈತರ ಲಕ್ಷಣವಾಗಿತ್ತು.

೬.೩. ಹಿಂಗಾರು:

ಮಾನ್ಸೂನ್ ಹಿಂದೆಗೆಯುತ್ತಿದ್ದಂತೆ ಮಳೆಯ ಜವಾಬ್ದಾರಿ ಸ್ಥಳೀಯ ವಾತಾವರಣಕ್ಕೆ ವರ್ಗಾವಣೆಯಾಗುತ್ತದೆ. ಆಶ್ಲೇಷ ನಂತರ ಹುಬ್ಬೆ ಹೊರತುಪಡಿಸಿದರೆ ಮಗೆ, ಉತ್ತರೆ ಮತ್ತು ಹಸ್ತದ ಮೊದಲ ಚರಣ ರೈತರ ವಿಶ್ವಾಸಿಗ ಮಳೆಗಳು. ಮಾನ್ಸೂನ್ ನಿರ್ಗಮಿಸುತ್ತಿದ್ದಂತೆ ಹಸ್ತ ಮಳೆಯ ಅವಧಿಯ ಉತ್ತರಾರ್ಧದಲ್ಲಿ ಬಿಸಿಲು ಚುರುಕು ಮುಟ್ಟಿಸುತ್ತದೆ. ಜೂನ್ ನಿಂದ ಸೆಪ್ಟೆಂಬರ್ ಅಂತ್ಯದವರೆಗೆ ಸೌಮ್ಯವೂ, ಶಾಂತವಾಗಿದ್ದ ವಾತಾವರಣ ಇದ್ದಕ್ಕಿದ್ದಂತೆ ಕಾವೇರತೊಡಗುತ್ತದೆ. ಉತ್ತರ ಕರ್ನಾಟಕದ ರೈತರು ಇದನ್ನು ಬೆದೆ ಬಿಸಿಲ ಕಾಲ ಎನ್ನುತ್ತಾರೆ.

ಈ ಬಿಸಿಲು ಕಾವೇರುವಾಗ ನಿಸರ್ಗದೊಳಗೊಂದು ವಿದ್ಯಮಾನ ಸದ್ದಿಲ್ಲದೆ ಜರುಗುತ್ತಿರುತ್ತದೆ. ಅದೇನೆಂದರೆ ಭೂಮಿಯ ಮೇಲ್ಮೈನಲ್ಲಿ ಉಷ್ಣಾಂಶ ಹೆಚ್ಚಾದಂತೆ ಗಿಡಗಳಲ್ಲಿ ಬಳಲಿಕೆ ಕಾಣಿಸಿಕೊಳ್ಳುತ್ತದೆ. ವರ್ಷಋತು ಮತ್ತು ಶರತ್‌ಋತುಗಳ ನಡುವಿನ ಸಂದಿಗ್ಧ ಕಾಲ ಇದು. ಆಗ ಕೇಶಾಕರ್ಷಣ ಬಲ (ಕ್ಯಾಪಿಲರಿ ಫೋರ್ಸ್) ಜಾಗೃತಗೊಳ್ಳುತ್ತದೆ. ಈ ಕೇಶಾಕರ್ಷಣ ಬಲ ಭೂಮಿಯ ಆಳದಲ್ಲಿರುವ ನೀರನ್ನು ಮೇಲ್ಪದರಕ್ಕೆ ತರುತ್ತದೆ. ಭೂಮಿಯ ಆಳದಿಂದ ತೇವಾಂಶವನ್ನು ತರುವಾಗ ಆ

ತೇವಾಂಶದೊಂದಿಗೆ ಬೆಳೆಗೆ ಬೇಕಾದ ಎಲ್ಲ ಬಗೆಯ ಖನಿಜ-ಲವಣಾಂಶಗಳನ್ನು ಕೂಡ ತರುತ್ತದೆ. ಒಂದು ರೀತಿಯಲ್ಲಿ ಉತ್ತರ ನಕ್ಷತ್ರದ ಕೊನೆಯ ಚರಣದ ಹೊತ್ತಿಗೆ ಸಸ್ಯಗಳು ಭೂಮಿಯ ಮೇಲ್ಪದರದಲ್ಲಿರುವ ಬಹುತೇಕ ಪೋಷಕಾಂಶಗಳನ್ನು ಹೀರಿಕೊಂಡಿರುತ್ತದೆ. ಈ ಸಂದರ್ಭದಲ್ಲಿ ಜರುಗುವ ಕೇಶಾಕರ್ಷಣ ಶಕ್ತಿಯಿಂದಾಗಿ ಆಳದಲ್ಲಿರುವ ಪೋಷಕಾಂಶಗಳು ಭೂಮಿಯ ಮೇಲ್ಪದರಕ್ಕೆ ಬಂದು ಗಿಡಗಳಿಗೆ ಲಭ್ಯವಾಗುತ್ತವೆ. ನೀರು ಮತ್ತು ತೇವಾಂಶದ ಜೊತೆ ಜೊತೆಗೆ ಮೇಲೆ ಬರುವ ಖನಿಜ-ಲವಣಾದಿಗಳು ಮೇಲ್ಪದರದಲ್ಲೇ ಉಳಿದು; ಹೆಚ್ಚುವರಿ ತೇವಾಂಶ ಮತ್ತು ನೀರು ವಾತಾವರಣದಲ್ಲಿ ಆವಿಯಾಗುತ್ತದೆ. ಹೀಗಾದಾಗ ವಾತಾವರಣವೂ ತಂಪಾಗುತ್ತದೆ. ಈ ಕ್ರಿಯೆ ನಿಸರ್ಗದತ್ತವಾಗಿ ಸಂಭವಿಸುವ ಕ್ರಿಯೆ. ಈ ಮೊದಲೇ ತಿಳಿಸಿದಂತೆ ಭೂಮಿಯ ಆಳಕ್ಕೆ ಹೋದಂತೆಲ್ಲ ಸಸ್ಯಕ್ಕೆ ಬೇಕಾದ ಪೋಷಕಾಂಶಗಳು ಹೆಚ್ಚಾಗುತ್ತ ಹೋಗಿರುತ್ತವೆ. ಮಾನ್ಸೂನ್ ಮಳೆಯ ದಿನಗಳಲ್ಲಿ ಗುರುತ್ವಾಕರ್ಷಣ ಬಲದಿಂದಾಗಿ ಮೇಲಿನಿಂದ ಕೆಳಕ್ಕಿಳಿಯುವ ಪೋಷಕಾಂಶಗಳು; ಕೇಶಾಕರ್ಷಣ ಶಕ್ತಿ ಕಾರ್ಯಾಚರಣೆ ಶುರುಮಾಡಿದ ಕೂಡಲೆ ಮೇಲ್ಪದರಕ್ಕೆ ಬರುತ್ತವೆ. ನಿಸರ್ಗದಲ್ಲಿ ಸಸ್ಯಗಳಿಗೆ ಅಗತ್ಯವಿರುವ ಪೋಷಕಾಂಶಗಳನ್ನು ಈ ಗುರುತ್ವಾಕರ್ಷಣ ಮತ್ತು ಕೇಶಾಕರ್ಷಣ ಬಲಗಳು ಕಾಲಾನುಕಾಲಕ್ಕೆ ನಿಯಮ ಬದ್ಧವಾಗಿ ಜರುಗುವ ತಮ್ಮ ಕ್ರಿಯೆಗಳ ಮೂಲಕ ಅತ್ಯಂತ ಸುಸಂಬದ್ಧ ರೀತಿಯಲ್ಲಿ ನಿಯೋಜಿಸುತ್ತವೆ. ಈ ಕ್ರಿಯೆಯೇ ಬೆಟ್ಟದ ತುದಿಯಲ್ಲಿ ಕಲ್ಲು ಬಂಡೆಯ ಮೇಲೆ ನಿಂತ ಸಸ್ಯವನ್ನೂ ಸಂರಕ್ಷಿಸುತ್ತದೆ.

ನೈಋತ್ಯದಲ್ಲಿ ಆವಿರ್ಭವಿಸಿದ ಮಾನ್ಸೂನ್ ಮುಂಗಾರು, ಕನ್ನಡದ ದೇಸೀ ಕೃಷಿ ರಂಗ ಭೂಮಿಯ ಮೇಲೆ ಸತತ ನಾಲ್ಕು ತಿಂಗಳು ಲಾಸ್ಯವಾಡಿ ಹಿಂದಿರುಗಿದ ಬಳಿಕ, ಕನ್ನಡದ ಭೂರಮೆಯ ಮೇಲೆ ಈ ಬಗೆಯ ಅಪೂರ್ವವೂ, ರೋಚಕವೂ ಆದ ವಿದ್ಯಮಾನಗಳು ಘಟಿಸತೊಡಗುತ್ತವೆ. ಹೀಗಾದಾಗ ಸೃಷ್ಟಿ ತನ್ನ ಲೀಲಾ ವಿನೋದ ಪ್ರದರ್ಶಿಸಲು ಮತ್ತೊಂದು ವೇದಿಕೆಯನ್ನು ಸಜ್ಜುಗೊಳಿಸುತ್ತದೆ. ಉತ್ತರ ಕರ್ನಾಟಕದ ಭೌಗೋಳಿಕ ಹವಾಮಾನದಲ್ಲಿ ತಾಪಮಾನ ಹೆಚ್ಚಾದಂತೆ ಸುಂಟರಗಾಳಿಗಳು ಎದ್ದು ಮೋಡಗಳನ್ನು ಚುಂಬಿಸಿ ಮಳೆ ತರುತ್ತವೆ. ಅತ್ತ ಬಂಗಾಳ ಕೊಲ್ಲಿಯಲ್ಲಿ ಘಟಿಸುವ ವಿದ್ಯಮಾನಗಳು ಚಂಡ ಮಾರುತಗಳನ್ನು ಸೃಷ್ಟಿಸಿದರೆ ಅದರ ಗರಿಷ್ಠ ಲಾಭ ದೊರೆಯುವುದು ನಮ್ಮ ಉತ್ತರ ಕನ್ನಡದ ಜಿಲ್ಲೆಗಳಿಗೇನೆ. ಬೇ ಆಫ್ ಬೆಂಗಾಲ್‌ನಲ್ಲಿ ಸಂಭವಿಸುವ ವಾಯುಭಾರ ಕುಸಿತದ ಪರಿಣಾಮ ಕರಾವಳಿ ಜನ ಜೀವನವನ್ನು ಅಸ್ತವ್ಯಸ್ತಗೊಳಿಸಿದರೆ, ಉತ್ತರ ಕರ್ನಾಟಕವನ್ನು ಮಳೆಗರೆದು ಸಂತೃಪ್ತಗೊಳಿಸುತ್ತದೆ. ಮುಂಗಾರಿನಲ್ಲಿ ತುಂಬದ ಕೆರೆ ಕಟ್ಟೆಗಳು ಹಿಂಗಾರಿನ ಮಳೆಗಳಲ್ಲಿ ತುಂಬಿಕೊಳ್ಳುತ್ತವೆ. ನೆರಳು-ಬೆಳಕಿನ ನಡುವೆ ಕಣ್ಣಾಮುಚ್ಚಾಲೆ ಆಡುತ್ತ ಮಹಾನವಮಿಯ ವೇಳೆಗೆ ಜನ ಮನವನ್ನು ತಣಿಸುವ ಮಳೆಗಳು ರಾಜ್ಯದ ಉದ್ದಗಲದಲ್ಲೂ ಭರವಸೆ ಮೂಡಿಸುತ್ತವೆ.

ಡಿಸೆಂಬರ್ ತಿಂಗಳ ಜೇಷ್ಠ, ಮೂಲ, ಜನವರಿ ತಿಂಗಳ ಪೂರ್ವಾಷಾಢ, ಉತ್ತರಾಷಾಢ, ಫೆಬ್ರವರಿಯ ಶ್ರಾವಣ, ಧನಿಷ್ಠ ಈ ಮಳೆಗಳ ಮೇಲೆ ರೈತರಲ್ಲಿ ಪೂರ್ಣ ವಿಶ್ವಾಸವಿಲ್ಲ. ಈ ಅವಧಿಯಲ್ಲಿ ಬಂಗಾಳಕೊಲ್ಲಿಯ ವಾಯುಭಾರ ಕುಸಿತಗಳು ಅಥವಾ ಚಂಡಮಾರುತಗಳು ಈ ಭಾಗಕ್ಕೆ ಮಳೆಗಳನ್ನು ತರುತ್ತವೆ. ವಾಡಿಕೆಯಲ್ಲಿಲ್ಲದ ಕಾಲದಲ್ಲಿ ಮಳೆ ಆದರೆ 'ಅಕಾಲ ಮಳೆ' ಅನ್ನುವುದು ರೂಢಿಯಲ್ಲಿದೆ.

ತುಮಕೂರು ಜಿಲ್ಲೆಯ ಪಾವಗಡ ರಾಜ್ಯದಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶ. ಆ ನಂತರದ ಸ್ಥಾನ ಕೋಲಾರ ಜಿಲ್ಲೆಗೆ. ಕಡಿಮೆ ಮಳೆ ಬೀಳುವ ಪಾವಗಡದಲ್ಲಿ ಆ ಮಳೆಗೆ ಹೊಂದಿಕೆಯಾಗುವ ಬೆಳೆಗಳನ್ನು ಬೆಳೆಯುತ್ತಾರೆ. ನಮ್ಮಲ್ಲಿ ಇಡೀ ಮಳೆಯ ಇತಿಹಾಸ ಗಮನಿಸಿದರೆ ಅತ್ಯಂತ ಕಡಿಮೆ ಮಳೆ ಎಂದರೆ ೪೫೫.೫ ಮಿಲಿ ಮೀಟರ್. ರಾಗಿಯ ಒಂದು ಬೆಳೆಗೆ ಬೇಕಾಗಿರುವ ಮಳೆಯ ಪ್ರಮಾಣ ೨೦೦ ಮಿಲಿ ಮೀಟರ್ ಮಾತ್ರ, ಅರ್ಥಾತ್ ೮ ಇಂಚು ಮಳೆ. ಆದರೆ ಈ ಮಳೆ ಕಾಲಕ್ಕೆ ಅನುಗುಣವಾಗಿ ಅಂದರೆ ಭಿತ್ತನೆಯ ಸಂದರ್ಭದಲ್ಲಿ, ನಾಟಿಯ ಸಂದರ್ಭದಲ್ಲಿ, ಒಡೆ ಕಚ್ಚುವ, ಹೂ ಬಿಡುವ ಮತ್ತು ಹಾಲುದುಂಬುವ ಸಂದರ್ಭಗಳಲ್ಲಿ ಸುರಿದರೆ ರಾಗಿಯನ್ನು ಸಮೃದ್ಧವಾಗಿ ಬೆಳೆಯಬಹುದು.

ಕೋಲಾರ ಜಿಲ್ಲೆಯಲ್ಲಿ ೨೦೦೪ ರಿಂದ ೨೦೧೪ ರವರೆಗೆ ೭೯೫೪ ಮಿ.ಮೀಟರ್ ಮಳೆ ಸುರಿದಿದೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೭೩೦ ಮಿ.ಮೀಟರ್ ಆಗಿದೆ. ಇಷ್ಟು ಪ್ರಮಾಣದ ಮಳೆಯಲ್ಲಿ ಕೋಲಾರ ಜಿಲ್ಲೆಯ ಕೃಷಿಕರು ವೈವಿಧ್ಯಮಯವೂ, ಸಮೃದ್ಧವೂ ಆದ ಬೆಳೆಗಳನ್ನು ಬೆಳೆದಿದ್ದಾರೆ. ಅನಾದಿ ಕಾಲದಿಂದಲೂ ಇಲ್ಲಿನ ಕೃಷಿಕರು ಶ್ರಮಿಕರು, ಭೌಗೋಳಿಕವಾಗಿ ಇಲ್ಲಿನ ಮಣ್ಣು ಎಲ್ಲ ಬಗೆಯ ಪೋಷಕಾಂಶಗಳಿಂದ ಸಂಪದ್ಭರಿತವಾಗಿದೆ. ಒಣ ಹವೆಯಲ್ಲಿ ಮತ್ತು ನೀರಾವರಿಯಲ್ಲಿ ಬೆಳೆಯಬಹುದಾದ ಎಲ್ಲ ಬಗೆಯ ಬೆಳೆಗಳನ್ನು ಇಲ್ಲಿ ಬೆಳೆಯಬಹುದು. ಈ ಜಿಲ್ಲೆಯಲ್ಲಿ ಬೆಳೆಯುವಷ್ಟು ಹಣ್ಣು, ತರಕಾರಿ, ಸೊಪ್ಪುಗಳನ್ನು ಕರ್ನಾಟಕದ ಇತರ ಯಾವ ಜಿಲ್ಲೆಗಳಲ್ಲಿಯೂ ಬೆಳೆಯುವುದಿಲ್ಲ. ಬಹುತೇಕ ಮಳೆ ಆಶ್ರಯ ಪ್ರದೇಶವಾದ ಈ ಜಿಲ್ಲೆ ನಮ್ಮ ದೇಸೀ ಜ್ಞಾನ ಪರಂಪರೆಗಳ ಆಗರವೂ ಆಗಿದೆ. ಕೋಲಾರ ಜಿಲ್ಲೆಯ ಬಂಗಾರಪೇಟೆ, ಮಾಲೂರು, ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳ ರೀತಿಯ ಕೃಷಿ ಹವಾಮಾನ ವೈಶಿಷ್ಟ್ಯ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ, ಗುಡಿಬಂಡೆ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಹಾಗೂ ಇತರ ಜಿಲ್ಲೆಗಳ ಗುಬ್ಬಿ, ತುಮಕೂರು, ಆನೇಕಲ್, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚನ್ನಪಟ್ಟಣ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಕನಕಪುರ, ಮಾಗಡಿ, ನೆಲಮಂಗಲ ತಾಲ್ಲೂಕುಗಳಲ್ಲಿಯೂ ಕಾಣಿಸುತ್ತದೆ. ಕರ್ನಾಟಕದ ಈ ೨೪ ತಾಲ್ಲೂಕುಗಳ

ವಾರ್ಷಿಕ ಮಳೆಯ ಸರಾಸರಿ ೬೭೯.೧ ರಿಂದ ೮೮೮.೯ ಮಿ.ಮೀಟರ್‌ವರೆಗೆ ಇರುತ್ತದೆ. ಪರಸ್ಪರ ಒಂದೇ ಮಟ್ಟದ ಹವಾಮಾನ, ಒಂದೇ ಮಟ್ಟದ ಮಳೆ, ಒಂದೇ ಮಟ್ಟದ ಭೌಗೋಳಿಕ ಸನ್ನಿವೇಶಗಳನ್ನು ಇಲ್ಲಿ ಕಾಣಬಹುದಾಗಿದೆ. ಹೀಗಾಗಿ ಕೋಲಾರ ಜಿಲ್ಲೆಯಲ್ಲಿ ಬೆಳೆಯಬಹುದಾದ (ದ್ರಾಕ್ಷಿಯೂ ಸೇರಿದಂತೆ) ಬಹು ವೈವಿಧ್ಯಮಯವಾದ ಎಲ್ಲ ಬೆಳೆಗಳನ್ನು ಚನ್ನಪಟ್ಟಣ, ಮಾಗಡಿ, ನೆಲಮಂಗಲ, ಗುಬ್ಬಿ, ತುಮಕೂರು, ಕನಕಪುರ ತಾಲ್ಲೂಕುಗಳಲ್ಲಿಯೂ ಬೆಳೆಯಬಹುದು. ಹಾಗೆಯೇ ಗುಬ್ಬಿ ತಾಲ್ಲೂಕಿನಲ್ಲಿ ಬೆಳೆಯುವ ಅಡಿಕೆ, ತೆಂಗು, ಕೋಕೊ, ಬಾಳೆ, ಭತ್ತಗಳನ್ನು ಕೋಲಾರ ಸೇರಿದಂತೆ ಈ ಲಕ್ಷಣ ಇರುವ ಎಲ್ಲೆಡೆಯೂ ಬೆಳೆಯಬಹುದು. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಅಭಿವೃದ್ಧಿಯಾದ ಪುಟ್ಟಬಾಳೆ ತಳಿ ಕನಕಪುರ ತಾಲ್ಲೂಕಿಗೂ ಒಗ್ಗುತ್ತದೆ. ಮುಳಬಾಗಿಲು ನೆಲಮಂಗಲಕ್ಕೂ ಒಗ್ಗುತ್ತದೆ.

ಹೆಚ್ಚು ಮಳೆ ಸುರಿಯುವ ಕಡೆ ನಿಸರ್ಗ ಕೆಂಪು ಜೆಂಬಿಟ್ಟಿಗೆಯ ಮಣ್ಣು ಸೃಷ್ಟಿಸಿದೆ. ಇಲ್ಲಿಯ ವಾರ್ಷಿಕ ಮಳೆಯ ಸರಾಸರಿ ೩೦೧೦.೯ ಮಿ.ಮೀಟರ್‌ನಿಂದ ೪೬೯೪.೪೦ ಮಿಲಿ ಮೀಟರ್ ಆಗಿರುತ್ತದೆ. ಕೆಲವು ಬಾರಿ ಉಡುಪಿ ಜಿಲ್ಲೆಯಲ್ಲಿ ೫೦೦೦ ಮಿ.ಮೀಟರ್‌ಗೆ ಮೀರಿ ಮಳೆ ಆಗಿರುವುದುಂಟು. ಈ ಭಾಗದ ಕಾರವಾರ, ಕುಮಟ, ಹೊನ್ನಾವರ, ಭಟ್ಕಳ, ಅಂಕೋಲ, ಬಂಟ್ವಾಳ, ಉಡುಪಿ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ, ಮಂಗಳೂರು, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳ ಕರಾವಳಿ ದಂಡೆಯ ಘಟ್ಟದ ಕೆಳಗಿನ ಭೌಗೋಳಿಕ ಸನ್ನಿವೇಶದಲ್ಲಿ ರಭಸವಾಗಿ ಸುರಿವ ಮಳೆಯನ್ನು ಸಹಿಸುವ ಕೃಷಿ ಸಮೃದ್ಧಿಯನ್ನು ಕಾಣುತ್ತೇವೆ. ಯಾವುದೇ ಬಗೆಯ ಆಧುನಿಕ ಹೈಬ್ರೀಡ್ ಸಂಕೀರ್ಣ ತಳಿಗಳು ಇಲ್ಲಿ ಯಶಸ್ವಿಯಾಗುತ್ತಿಲ್ಲ. ರಭಸವಾಗಿ ಮತ್ತು ಬಲಯುತವಾಗಿ ಬೆಳೆಯುವ ತಳಿಗಳು ಇಲ್ಲಿ ಉಳಿದು ಬೆಳೆದುಕೊಂಡು ಬಂದಿವೆ.

ಇಲ್ಲಿಗೆ ಕೋಲಾರ–ಚಿಕ್ಕಬಳ್ಳಾಪುರ ಭೌಗೋಳಿಕ ಸನ್ನಿವೇಶದ ಬೆಳೆಗಳನ್ನು ಅಳವಡಿಸಲು ಆಗುವುದಿಲ್ಲ; ಬೆಂಗಳೂರು ಸಂಪ್ರದಾಯದ 'ಬೆಂಗಳೂರು ನೀಲಿ ದ್ರಾಕ್ಷಿ' ಕರಾವಳಿ ಜಿಲ್ಲೆಗಳ ವಾತಾವರಣದಲ್ಲಿ ಬೆಳೆಯಲಾರದು. ಹಾಗೆಯೇ ಕೋಲಾರದ ಮಾವು, ಹಲಸು ಕೂಡ. ಪುತ್ತೂರು, ಸುಳ್ಯ, ಬಂಟ್ವಾಳದ ಹಲಸು, ಮಾವು, ವೆರೈಟಿಗಳನ್ನು ಕೋಲಾರದ ಭೌಗೋಳಿಕ ವೈಶಿಷ್ಟ್ಯ ಒಪ್ಪುವುದಿಲ್ಲ. ಅಷ್ಟೇ ಏಕೆ ತರಕಾರಿಗಳ ಪೈಕಿ ಉಡುಪಿ ಗುಳ್ಳು ಬದನೆ ಆ ಜಾಗ ಬಿಟ್ಟು ಮಡಿಕೇರಿಯಲ್ಲೊ, ಮೈಸೂರಿನಲ್ಲೊ ಬೆಳೆಯುವುದಿಲ್ಲ. ನಮ್ಮ ಬಹುಪಾಲು ಬಯಲು ಸೀಮೆಯ ಬೆಳೆಗಳು ಹೆಸರು, ಉದ್ದು, ಕಡಲೆ, ಈರುಳ್ಳಿ, ಆಲೂಗೆಡ್ಡೆ, ಸೂರ್ಯಕಾಂತಿ, ಹುಚ್ಚೆಳ್ಳು, ರಾಗಿ, ಹುರುಳಿ, ಜೋಳ, ಸಾಮೆ, ನವಣೆ ಮುಂತಾಗಿ ಕರಾವಳಿ ದಂಡೆಗೆ ಅಪಥ್ಯ. ಆಯಾಯ ಭಾಗದ ಭೂವೈಶಿಷ್ಟ್ಯದ ಭಾವನೆಗಳು ನಮ್ಮ ಸಾಂಪ್ರದಾಯಿಕ ಕೃಷಿಯ ರೈತರಲ್ಲಿ ಇತ್ತು. ದಕ್ಷಿಣ ಕನ್ನಡ ಜಿಲ್ಲೆಯ ಕಜೆಕಾಯಮೆ, ಬಿಳಿ ಕಾಯಮೆ, ಗುಡ್ಡುಕಜೆ,

ಮುಂತಾದ ಕಜೆ ಭತ್ತಗಳನ್ನು ಹೊಸಪೇಟೆಯಲ್ಲೋ, ಗಂಗಾವತಿಯಲ್ಲೊ ಬೆಳೆಯಲಾಗದು. ಮಂಡ್ಯ ಜಿಲ್ಲೆಯಲ್ಲಿ ಬೆಳೆಯುವ ಅಣ್ಣೆ ಸೊಪ್ಪು, ತರಗುಣಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುವುದಿಲ್ಲ.

ಕಪ್ಪು ಎರೆ ಮಣ್ಣು, ಸಾಧಾರಣ ಕಪ್ಪು ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣುಗಳಿರುವ ಉತ್ತರ ಒಣ ವಲಯದಲ್ಲಿ ೪೬೪.೫ ರಿಂದ ೭೮೫.೭ ಮಿಲಿ ಮೀಟರ್‌ವರೆಗೆ ಮಳೆಯಾಗುತ್ತದೆ. ಇದು ಕರ್ನಾಟಕದ ಸಾಧಾರಣ ಮಳೆಯ ಪ್ರದೇಶ. ಈ ಭಾಗದಲ್ಲಿ ಹೆಚ್ಚು ಬೆಳೆ ವೈವಿಧ್ಯತೆಯನ್ನು ಕಾಣಬಹುದು.

ಯಲಬುರ್ಗ, ಸಿಂಧನೂರು, ಗಂಗಾವತಿ, ಕೊಪ್ಪಳ, ಕುಷ್ಟಗಿ, ಲಿಂಗಸಗೂರು, ಬಾದಾಮಿ, ಬಾಗಲಕೋಟೆ, ಬಾಗೇವಾಡಿ, ಬೀಳಗಿ, ವಿಜಯಪುರ, ಹುನಗುಂದ, ಇಂಡಿ, ಜಮಖಂಡಿ, ಮುಧೋಳ್, ಮುದ್ದೇಬಿಹಾಳ, ಸಿಂಧಗಿ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹಡಗಲಿ, ಹೊಸಪೇಟೆ, ಕೂಡಲಗಿ, ಸಂಡೂರು, ಶಿರಗುಪ್ಪ, ರೋಣ, ನವಲಗುಂದ, ನರಗುಂದ, ಗದಗ, ಮುಂಡರಗಿ, ರಾಮದುರ್ಗ, ಗೋಕಾಕ, ರಾಯಬಾಗ್, ಸವದತ್ತಿ ಮತ್ತು ಅಥಣಿ ಈ ೩೫ ತಾಲ್ಲೂಕುಗಳು ಉತ್ತರ ಒಣ ವಲಯದ ಕೃಷಿ ಹವಾಮಾನ ಭೌಗೋಳಿಕ ವೈವಿಧ್ಯದ ವ್ಯಾಪ್ತಿಗೆ ಸೇರುತ್ತವೆ.

ಈ ಭಾಗದ ಮುಖ್ಯ ಬೆಳೆಗಳು ಭತ್ತ, ಕಬ್ಬು, ಸಜ್ಜೆ, ಜೋಳ, ಮುಸುಕಿನ ಜೋಳ, ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ, ಟೊಮೋಟೊ, ಮೆಣಸಿನಕಾಯಿ, ಈರುಳ್ಳಿ, ಬದನೆ, ಬೀನ್ಸ್, ಬಾಳೆ, ಮಾವು, ನಿಂಬೆ, ತೆಂಗು, ಸೀಬೆ, ದ್ರಾಕ್ಷಿ, ಸಪೋಟ, ದಾಳಿಂಬೆ, ಪಪ್ಪಾಯ, ಸೊಪ್ಪಿನ ತರಕಾರಿಗಳು, ಕುಂಬಳ ಜಾತಿಯ ತರಕಾರಿಗಳು, ಹತ್ತಿ, ಶೇಂಗಾ, ಅಗಸೆ, ಯಳ್ಳು, ಹರಳು, ಕುಸುಬೆ, ಸೂರ್ಯಕಾಂತಿ ಮುಂತಾದವು. ಇಲ್ಲಿನ ಮಳೆ ಆಶ್ರಿತ ಕೃಷಿಕರು ಇಂದಿಗೂ ಸಾಂಪ್ರದಾಯಿಕ ಕೃಷಿಜ್ಞಾನವನ್ನು ಉಳಿಸಿಕೊಂಡವರಾಗಿದ್ದಾರೆ.

ನಮ್ಮ ದೇಶದಲ್ಲಿ ಸುಮಾರು ನೂರ ಇಪ್ಪತ್ತು ಆಗ್ರೋ ಕ್ಲೈಮ್ಯಾಟಿಕ್ ಜೋನ್‌ಗಳಿವೆ. ಹಲವು ಬಗೆಯ ಮಣ್ಣಿನ ಸ್ವರೂಪಗಳು, ಫಲವತ್ತತೆಯ ನಾನಾ ಮಟ್ಟಗಳು, ಕಡಲ ತೀರಗಳು, ಗುಡ್ಡಗಾಡು, ಕಣಿವೆ, ಅರಣ್ಯ ಹೀಗೆ ಭೌಗೋಳಿಕವಾಗಿ ಭಿನ್ನ, ಭಿನ್ನ ಸನ್ನಿವೇಶಗಳಿರುವೆಡೆಯಲ್ಲಿ ಸಾಗುವಳಿಯ ವಿಧಾನಗಳು ಕೂಡ ಭಿನ್ನವಾಗಿರುತ್ತವೆ. ಈ ಭಿನ್ನತೆಯೇ ನಮ್ಮ ಬೇಸಾಯವನ್ನು ಬೇಸಾಯ ಜೀವನವನ್ನು ವೈವಿಧ್ಯಮಯಗೊಳಿಸಿದೆ.

ನಮ್ಮ ರಾಜ್ಯದ ಬಹುತೇಕ ಬೇಸಾಯ ಮಳೆಯನ್ನೆ ಅವಲಂಬಿಸಿದೆ. ಪೂರ್ವ ಮುಂಗಾರು, ಮುಂಗಾರು ಮತ್ತು ಹಿಂಗಾರು ಈ ಮೂರು ಹವಾಮಾನಗಳು ನಮ್ಮ ರಾಜ್ಯದ ಪ್ರಮುಖ ಬೇಸಾಯದ ಹಂತಗಳು. ಈ ಸಮಯಗಳಲ್ಲಿ ಬರುವ ಮಳೆಗಳು ನಮ್ಮ ಬೇಸಾಯವನ್ನು ಮತ್ತು ಬೆಳೆಯನ್ನು ನಿರ್ಧರಿಸುತ್ತವೆ.

ದೇಸಿ ಕೃಷಿ ಜ್ಞಾನ ಪರಂಪರೆಯಲ್ಲಿ ಪ್ರಮುಖವಾಗಿ ಮೂರು ಬಗೆಯ ವ್ಯವಸಾಯ ಕ್ರಮಗಳು ನಮ್ಮಲ್ಲಿ ಇವೆ.

೧. ಖುಷ್ಕಿ : ಮಳೆ ಆಧಾರಿತ ಬೇಸಾಯ.

೨. ತರಿ : ನೀರಾವರಿ ಸೌಕರ್ಯದ ಬೆಳೆ ಪ್ರದೇಶ.

೩. ಬಾಗಾಯ್ತು : ತೋಟದ ಫಸಲಿನ ಪ್ರದೇಶ/ದೀರ್ಘಾವಧಿ ಬೆಳೆಗಳು.

೬.೪. ಖುಷ್ಕಿ ಬೇಸಾಯ ಸಂಸ್ಕೃತಿ

ಸಾಮಾನ್ಯವಾಗಿ ಮಳೆ ಆಶ್ರಯದ ಜಮೀನುಗಳನ್ನು ಹೊಲಗಳು ಎಂದು ಕರೆಯುವುದು ವಾಡಿಕೆ. ಹೊಲ ಅಂದ ಕೂಡಲೆ ತಟ್ಟನೆ ಮನಸ್ಸಿಗೆ ಬರುವ ಬೆಳೆಗಳೆಂದರೆ ರಾಗಿ, ಜೋಳ, ಯಳ್ಳು, ಹುಚ್ಚೆಳ್ಳು, ನೆಲಗಡಲೆ, ಸೂರ್ಯಕಾಂತಿ, ಕುಸುಬೆ, ಅಲಸಂದೆ, ಅವರೆ, ತೊಗರಿ, ಹೆಸರು, ಉದ್ದು, ಬಟಾಣಿ, ಹಾರಕ, ಸಾಮೆ, ನವಣೆ, ಸಜ್ಜೆ ಊದಲು, ಬರಗು, ಸೆಣಬು, ಹತ್ತಿ, ತಂಬಾಕು, ಮಡಕಿ, ಮುಸುಕಿನ ಜೋಳ, ಹೊಲದ ಭತ್ತಗಳು ಇತ್ಯಾದಿ. ಇದರಲ್ಲಿ ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳು ಸೇರಿವೆ. ಸಾಮಾನ್ಯವಾಗಿ ಹೊಲದ ಬೆಳೆಗಳಲ್ಲಿ ವೈವಿಧ್ಯತೆಗಳು ಹೆಚ್ಚು. ಜೊತೆಗೆ ಧೀರ್ಘಕಾಲೀನ ಫಸಲು/ಮರ ಮುಟ್ಟುಗಳಿಗೆ ಹೊಲವೇ ಆಧಾರ. ಆಲ, ಅರಳಿ, ಬಸರಿ, ಹೊಂಗೆ, ಹಿಪ್ಪೆ, ನೇರಳೆ, ಮಾವು, ಹುಣಸೆ, ಬೇವು, ತೇಗ, ಹೊನ್ನೆ, ಗೊಬ್ಬಳಿ ಮುಂತಾದವು ಹೊಲಗಳಿಗೆ ನೆರಳಾಗಲು, ಸೌದೆಗಳಿಗಾಗಿ, ಮನೆ ಕಟ್ಟುವ ಮರ ಮುಟ್ಟುಗಳಿಗಾಗಿ ಇವು ನಿಗಧಿಯಾಗಿದ್ದವು.

ರೈತರು ಹೊಲದ ಬದುಗಳಲ್ಲಿ, ಎಲ್ಲೆಗಳಲ್ಲಿ ಮರಗಳನ್ನು ಸಂರಕ್ಷಿಸುತ್ತಾರೆ. ತಗ್ಗಿನ ಜಮೀನುಗಳಿರುವೆಡೆ ಬಿದಿರು ತಾನಾಗಿಯೇ ಬೆಳೆಯುತ್ತದೆ. ಮರ ಗಿಡಗಳಿರುವಲ್ಲಿ ಹಕ್ಕಿ–ಪಕ್ಷಿಗಳು ನೆಲೆ ಮಾಡಿಕೊಳ್ಳುವುದು ಸಹಜ. ಮರಗಳು ಹೆಚ್ಚು ಇದ್ದೆಡೆ ಹಕ್ಕಿಗಳು ಹೆಚ್ಚು ಇರುವುದು ವಾಡಿಕೆ. ಹಕ್ಕಿಗಳಿಗೆ ಅಗತ್ಯವಾದ ಆಹಾರ ಈ ಮರಗಿಡಗಳಲ್ಲಿ ಸಿಗುವ ಫಲಗಳು: ಹೊಲದ ಫಸಲಿನ ಕಾಲದಲ್ಲಿ ಮತ್ತು ಆನಂತರವು ಪ್ರಮುಖವಾಗಿ ಬೆಳೆಗೆ ಹಾನಿ ಮಾಡುವಂಥ ಕೀಟಗಳು, ಹುಳುಗಳನ್ನು ಹಕ್ಕಿಗಳು ತಿನ್ನುತ್ತಿದ್ದವು. ಇದರಿಂದ ರೈತನಿಗೆ ಇಳುವರಿ ಹೆಚ್ಚು ಸಿಗುತ್ತಿತ್ತು.

ರೈತರು ತಮ್ಮ ಜಮೀನುಗಳಿಗೆ ಬೇಲಿ ಹಾಕುವಾಗಲು ಕೂಡ ಮರಗಳಿಗೆ ಆದ್ಯತೆ ನೀಡುತ್ತಿದ್ದರು. ಕನಿಷ್ಟ ೪೦ ರಿಂದ ೫೦ ಅಡಿ ದೂರದಲ್ಲಿ ಗೊಬ್ಬಳಿ, ಹಿಪ್ಪೆ, ಬೇವು, ಹೊನ್ನೆ, ತೇಗ, ಬಸರಿ ಇಂಥ ಮರಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಫಸಲನ್ನು ಕೊಯ್ಲು ಮಾಡಿ ಒಕ್ಕಣೆ ನಂತರ ಮೆದೆ ಹಾಕಲು ಮೆದೆಯ ಕೆಳಗಿನ

ಸರಗಳಿಗಾಗಿ ಬೇಲಿಯಂಚಿನಲ್ಲೊ, ಜಮೀನಿನಂಚಿನಲ್ಲೊ ಬೆಳೆದ ಮರದ ಉದ್ದನೆಯ ರೆಂಬೆಗಳನ್ನು ಕಡಿದು ಬಳಸುತ್ತಿದ್ದರು.

ಇಡೀ ಕರ್ನಾಟಕದ ಗ್ರಾಮೀಣ ಹಾಗೂ ನಗರದ ಉರುವಲುಗಳ ಬೇಡಿಕೆಯನ್ನು ಪೂರೈಸುತ್ತಿದ್ದವು ಕೂಡ ನಮ್ಮ ಹೊಲಗಳೆ. ನಮ್ಮ ಅರಣ್ಯಗಳು ವನ್ಯಜೀವಿ, ರಾಷ್ಟ್ರೀಯ ಉದ್ಯಾನವನ, ಕಾಯ್ದಿಟ್ಟ ಅರಣ್ಯಗಳಾದ ಮೇಲೆ-ಅಡುಗೆ ಸಿಲಿಂಡರ್‌ಗಳು ಬರುವವರೆಗೂ ಉರುವಲುಗಳನ್ನು ನಮ್ಮ ಹೊಲಗಳು ಪೂರೈಸುತ್ತಿದ್ದವು. ಎಲ್ಲ ಬಗೆಯ ಡೊಮೆಸ್ಟಿಕ್ ಉದ್ದೇಶಗಳಿಗೂ ಹೊಲದ ಮರಗಳೇ ಬಳಕೆಯಾಗುತ್ತಿದ್ದವು. ಹಿಂಗಾರಿ ಕೊಯ್ಲು ಆದ ತರುವಾಯ ಮತ್ತೆ ಮುಂದಿನ ಮಳೆವರೆಗೆ ಗೋಮಾಳವಾಗಿ ಪರಿವರ್ತನೆ ಆಗುತ್ತಿದ್ದವು ಕೂಡ ಹೊಲಗಳೆ.

ನಮ್ಮ ರೈತರು ಹೊಲಗಳಲ್ಲಿ ಶ್ರಮ ವಹಿಸಿ ದುಡಿಯುತ್ತಿದ್ದರು. ಬೆಳಿಗ್ಗೆ ಹೊಲಕ್ಕೆ ಹೋದವರು ಸಂಜೆವರೆಗೂ ಅಲ್ಲೆ ಇರುತ್ತಿದ್ದರು. ಅಲ್ಲೆ ಉಣ್ಣುತ್ತಿದ್ದರು. ಪ್ರತಿ ಇಂಚು ಮಣ್ಣು ಕೂಡ ರೈತನ ಸ್ಪರ್ಶಕ್ಕೊಳಗಾಗುತ್ತಿತ್ತು. ಹೀಗಾಗಿ ನಮ್ಮ ರೈತನಿಗೆ ಹೊಲಗಳ ಕುರಿತು ಅಪಾರ ಧನ್ಯತಾ ಭಾವನೆ. ಕಷ್ಟದ ದುಡಿಮೆ ಆದ್ದರಿಂದ ಕಷ್ಟಗಳನ್ನು ಜಯಿಸುವುದನ್ನು ಹೊಲಗಳು ಕಲಿಸುತ್ತಿದ್ದವು. ಒಟ್ಟು ಆರಂಭ ಒಬ್ಬನ ಕೆಲಸ ಅಲ್ಲವಾದ್ದರಿಂದ ಅಲ್ಲಿ ಸಾಂಘಿಕ ಶ್ರಮ ಅನಿವಾರ್ಯವಾಗಿತ್ತು. ಸಾಂಘಿಕ ಶ್ರಮದಿಂದಾಗಿ ಸಾಂಘಿಕ ಭಾವವು ಅಲ್ಲಿ ಬೆಳೆಯುತ್ತಿತ್ತು ಅನಿಶ್ಚಯದ ಮಳೆಗಳು ಮತ್ತು ಅನಿಶ್ಚಯದ ಬೆಳೆಗಳಿಗೆ ರೈತನು ಒಗ್ಗಿ ಹೋಗಿದ್ದನು. ಆದರೂ ರಾಗಿ ನಾಟಿ ನೆಟು ನಾಲ್ಕುದಿನ ಮಳೆ ಬರದಿದ್ದರೆ ಅವನ ಸ್ಥಿತಿ ಚಿಂತಾಜನಕ, ನಾಲ್ಕು ಹನಿ ಮಳೆ ಬಿದ್ದ ಕೂಡಲೆ ಅವನ ಹರ್ಷ ಹೇಳ ತೀರದು. ಬೆಳೆಯನ್ನು ಅವನೊಬ್ಬನೆ ನಂಬಿಲ್ಲ. ಅವನು, ಅವನ ದನಕರುಗಳು ಅವನ ಜೊತೆ ದುಡಿಯುವ ಆಳುಗಳು, ಅವನನ್ನು ನಂಬಿರುವ ಇತರರು... ಎಲ್ಲರೂ ಈ ಅವಲಂಬನೆಯ ಜೊತೆಗೂಡುತ್ತಾರೆ.

೧೯೭೦ಕ್ಕೂ ಮುಂಚಿನ ನಮ್ಮ ಹೊಲಗಳ ಪರಿಸರ ಜೀವಂತಿಕೆಯ ಬನಿಯಾಗಿತ್ತು. ಅಲ್ಲಿಯವರೆಗೂ ಹೊಲಗಳಿಗೆ ಟ್ರ್ಯಾಕ್ಟರ್‌ಗಳು ಪ್ರವೇಶಿಸಿರಲಿಲ್ಲ. [ಉತ್ತರ ಕರ್ನಟಕದ ಕೆಲವು ದೊಡ್ಡ ದೊಡ್ಡ ಹಿಡುವಳಿಗಳನ್ನು ಹೊರತುಪಡಿಸಿ] ಹಳ್ಳಿ-ಗ್ರಾಮಗಳ ತುಂಬ ನಾಟಿ ಹಸುಗಳಿದ್ದವು, ಎತ್ತು, ಎಮ್ಮೆ, ಆಡು, ಕುರಿ, ಕೋಳಿಗಳಿಗೆ ಕೊರತೆ ಇರಲಿಲ್ಲ. ಪಕ್ಷಿಗಳು ಸಮೃದ್ಧವಾಗಿದ್ದವು. ಕಾಗೆ, ಗುಬ್ಬಚ್ಚಿ, ಗಿಳಿ, ಪಾರಿವಾಳಗಳು ಮಾನವ ವಾಸಿ ನೆಲೆಗಳಿಗೆ ಆಪ್ತವಾಗಿದ್ದವು. ಬೇಸಾಯ ಕುಟುಂಬದ ಎಲ್ಲ ಮಕ್ಕಳು ಕಡ್ಡಾಯವಾಗಿ ಶಾಲೆಗಳಿಗೆ ಹೋಗಲೇ ಬೇಕಾಗಿರಲಿಲ್ಲ. ನಗರಗಳೆಡೆಗೆ ವಲಸೆ ಶುರುವಾಗಿರಲಿಲ್ಲ. ನಗರಗಳ ಮೇಲೆ ಹೆಚ್ಚಿನ ಅವಲಂಬನೆಗಳಿರಲಿಲ್ಲ. ಶೇಕಡ ೯೦ಕ್ಕಿಂತ ಹೆಚ್ಚಿನ ಮನೆಗಳಿಗೆ ವಿದ್ಯುತ್ ಬಂದಿರಲಿಲ್ಲ. ಅನುಕೂಲ ಇದ್ದವರಲ್ಲಿ ರೇಡಿಯೋಗಳಿದ್ದವು. ಫೋನ್‌ಗಳು ಇರಲಿಲ್ಲ, ಟಿ.ವಿ.ಗಳು ಕಾಲಿಟ್ಟಿರಲಿಲ್ಲ. ವೃತ್ತ ಪತ್ರಿಕೆಗಳ ಭರಾಟೆ ಇರಲಿಲ್ಲ. ಅವಿಭಕ್ತ ಕುಟುಂಬಗಳಿದ್ದವು, ಹಿರಿಯರಿಗೆ, ವೃದ್ಧರಿಗೆ

ಗೌರವವಿತ್ತು. ಅನಗತ್ಯ ಮಾಹಿತಿಗಳಿರಲಿಲ್ಲ, ಗೊಂದಲ, ಜಿಜ್ಞಾಸೆಗಳಿಗೆ ಹೆಚ್ಚಿನ ಆಸ್ಪದ ಇರಲಿಲ್ಲ. ವಾಹನಗಳಂತೂ ತೀರಾ ವಿರಳ. ಬೀಡಿ ಸೇದುವವರ ಸಂಖ್ಯೆ ಈಗಿನಷ್ಟು ಇರಲಿಲ್ಲ. ಕುಡಿಯುವವರ ಸಂಖ್ಯೆಯೂ ಈಗಿನಷ್ಟು ಇರಲಿಲ್ಲ.

ರಾತ್ರಿ ಎಂಟರ ವೇಳೆಗೆಲ್ಲ ಹಳ್ಳಿಗಳು ನಿದ್ರೆಗೆ ಸಜ್ಜಾಗುತ್ತಿದ್ದವು. ಬೆಳಿಗ್ಗೆ ೪-೫ ಗಂಟೆಗೆಲ್ಲ ಎಚ್ಚರಗೊಳ್ಳುತ್ತಿದ್ದವು. ಪ್ರಥಮ ಜಾವದ ಕೋಳಿ ೪ ಗಂಟೆಗೆ ಕೂಗಿತೆಂದರೆ ಮುಗಿಯಿತು. ಅದರ ಹಿಂದೆಂಯೇ ಒಂದಾದ ನಂತರ ಒಂದರಂತೆ ಕೂಗುತ್ತ ಬೆಳಕು ಹರಿಸಿಬಿಡುತ್ತಿದ್ದವು. ಇಷ್ಟರ ನಡುವೆಯೂ ಆಟ, ರಂಜನೆ, ಜಗಳ ಇವುಗಳಿಗೆ ಹಳ್ಳಿಗಳಲ್ಲಿ ಕೊರತೆ ಇರಲಿಲ್ಲ. ಸಾಮಾನ್ಯವಾಗಿ ಚೌಕಬಾರ, ಹುಲಿಕುರಿ ಇತ್ಯಾದಿ ನೈಪುಣ್ಯದ ಉಲ್ಲಾಸಭರಿತ ಜಾಣ ಆಟಗಳನ್ನು ಹಟ್ಟಿಯ ಜಗುಲಿ ಮತ್ತು ಒಳಗೆ ಆಡಿ ಕೊಳ್ಳುತ್ತಿದ್ದರು. ಜೂಟಾಟ, ಕಬ್ಬಡ್ಡಿ, ಕಣ್ಣಮುಚ್ಚಾಲೆ, ಕೋಲಾಟ ಇವೆಲ್ಲ ಹೊರಾಂಗಣ ಕ್ರೀಡೆಗಳಾಗಿದ್ದವು. ವರ್ಷಕ್ಕೊಂದು ಪೌರಾಣಿಕ ನಾಟಕ ಆಡುವುದು, ಆಗಾಗ್ಗೆ ಹರಿ-ಕತೆ ಕೇಳುವುದು ವಾಡಿಕೆಯಾಗಿತ್ತು. ಉಗಾದಿ, ಮಹಾನವಮಿ, ಗೌರಿ, ಶಿವರಾತ್ರಿ, ಗ್ರಾಮದೇವರು, ಗ್ರಾಮದೇವತೆ ಹಬ್ಬಗಳು ಹಳ್ಳಿಗಳಿಗೆ ಯಾವತ್ತಿಗೂ ದೊಡ್ಡ ಹಬ್ಬಗಳು. ಮಾರಿಹಬ್ಬ, ಪಟ್ಟಲದಮ್ಮನ ಹಬ್ಬ, ಬೋರೇದೇವರ ಹಬ್ಬ, ಜಾತ್ರೆ, ಸಿಡಿಗಳು ಯಾವಾಗಲೂ ವೈಭವದೊಂದಿಗೆ ರಂಗೇರುತ್ತಿದ್ದವು. ದೀಪಾವಳಿ, ಸಂಕ್ರಾತಿ ಸೇರಿದಂತೆ ಎಲ್ಲ ಹಬ್ಬಗಳು ಕೃಷಿ ಸಂಸ್ಕೃತಿಗೆ ಕಳಶವಿಟ್ಟಂತೆ ನಡೆಯುತ್ತಿದ್ದವು.

ಹಳ್ಳಿಗಳ ಹಟ್ಟಿ, ಮನೆ, ಗುಡಿಸಲುಗಳ ಇಕ್ಕೆಲಗಳಲ್ಲಿ ಒಂದು ಕಡೆ ದನಗಳು ಮತ್ತೊಂದು ಕಡೆ ಮರ, ಮುಟ್ಟು ಸೌದೆಗಳ ರಾಶಿಗಳು ಸಾಮಾನ್ಯ ದೃಶ್ಯಗಳಾಗಿದ್ದವು. ಕರ್ನಾಟಕಕ್ಕೆ ೧೯೬೯ನೇ ವರ್ಷ ತೀವ್ರ ಬರಗಾಲದ ವರ್ಷ. ಮರು ವರ್ಷ ೧೯೭೦ರ ಚಿತ್ರಣವೇ ಬೇರೆ ಆಗಿತ್ತು. ಮೇ ತಿಂಗಳ ಮೊದಲ ವಾರವೇ ನೈಋತ್ಯ ಮಾನ್ಸೂನ್ ಸಮೃದ್ಧ ಮುಂಗಾರು ಮಳೆಯನ್ನು ಹೊತ್ತು ತಂದಿತ್ತು. ಜೂನ್ ವೇಳೆಗೆಲ್ಲ ಕೆರೆ ಕಟ್ಟೆಗಳು ಭರ್ತಿಯಾಗಿದ್ದವು. ಸಣ್ಣ-ಪುಟ್ಟ ಕಟ್ಟೆಗಳು, ಕೆರೆಗಳಿಂದ ದೊಡ್ಡ ದೊಡ್ಡ ಕೆರೆಗೆ ಹಳ್ಳ, ತೊರೆಗಳ ಮೂಲಕ ನೀರು ತುಂಬಿ ಹರಿಯುವುದು ವಾಡಿಕೆ. ಆಗ ದೊಡ್ಡ ಕೆರೆಯಿಂದ ಹೊಸ ನೀರಿನೆಡೆಗೆ ಬರುವ ಮೀನು ಶಿಕಾರಿಯದೇ ಸಡಗರ. ಪಂಜು ಹಿಡಿದು ರಾತ್ರಿಯ ವೇಳೆಯೂ ರೈತರು ಹಳ್ಳಗಳಿಗೆ ಇಳಿದು ಮೀನು ಬೇಟೆಯಾಡುತ್ತಿದ್ದರು.

ಕರ್ನಾಟಕದ ಖುಷ್ಕಿ ಜಮೀನಿನ ಪೈಕಿ ಶೇಕಡ ೫೦ ರಷ್ಟು ಸಾಗುವಳಿಗಳಲ್ಲಿ ಮುಂಗಾರಿನಲ್ಲಿ ಮಾತ್ರ ಬೆಳೆ. ಅಂದರೆ ವರ್ಷಕ್ಕೆ ಒಂದೇ ಬೆಳೆ. ಉಳಿದ ಜಮೀನುಗಳಲ್ಲಿ ಮುಂಗಾರು ಬೆಳೆಯ ನಂತರ ಹಿಂಗಾರು ಬೆಳೆಗಳನ್ನು ಹಾಕುತ್ತಿದ್ದರು. ಸಾಮಾನ್ಯವಾಗಿ ಇವುಗಳ ಫಲ ಡಿಸೆಂಬರ್ ಜನವರಿಯ ಚಳಿಗಾಲದಲ್ಲಿ ಕೈ ಸೇರುತ್ತಿದ್ದವು. ಹಿಂಗಾರಿನಲ್ಲಿ ಕಡ್ಲೆ, ಕೊತ್ತಂಬರಿ ಬೆಳೆಗಳಿಗೆ ಮುಂಗಡದ ಆದ್ಯತೆ ನೀಡಲಾಗುತ್ತಿತ್ತು. ತನುವಾಗಿರುವ ಹೊಲಗಳಲ್ಲಿ ಬರ ಭತ್ತಗಳನ್ನು ಬೆಳೆಯುತ್ತಿದ್ದರು.

ಭತ್ತ, ದೊಡ್ಡಿಭತ್ತ... ಇತ್ಯಾದಿ ದಪ್ಪ ಅಕ್ಕಿ ಕಾಳುಗಳಾಗುವ ತಳಿಗಳು ಹೊಲಗಳಲ್ಲಿ ಸೊಗಸಾಗಿ ಬೆಳೆಯುತ್ತಿದ್ದವು.

ಆಗ ಯಾವ ಹೊಲದ ಬೆಳೆಗಳಿಗೂ ರಸಗೊಬ್ಬರಗಳ ಕೀಟ ಹಾಗೂ ಕಳೆ ನಾಶಕಗಳ ಪರಿಚಯವೇ ಇರಲಿಲ್ಲ. ರೈತರು ತಮ್ಮ ತಿಪ್ಪೆಗಳಲ್ಲಿ ಸಂಗ್ರಹವಾಗಿರುತ್ತಿದ್ದ ಕೊಟ್ಟಿಗೆ ಗೊಬ್ಬರವನ್ನು ಬಿತ್ತನೆಗೆ ಮುಂಚೆ ಉಳುವಾಗ, ಮತ್ತು ಬಿತ್ತನೆಯ ನಂತರವು ಎರಚುತ್ತಿದ್ದರು/ಚೆಲ್ಲುತ್ತಿದ್ದರು. ಕೆರೆಗೆ ಹತ್ತಿರವಿರುವವರು ಬೇಸಿಗೆಯ ವೇಳೆ ಎತ್ತಿನ ಗಾಡಿಗಳಲ್ಲಿ ಕೆರೆಯ ಗೋಡುಮಣ್ಣನ್ನು ತಂದು ಹಾಕುತ್ತಿದ್ದರು.

೬.೫. ತರಿ ಬೇಸಾಯ ಸಂಸ್ಕೃತಿ

ನೀರಾವರಿ ಜಮೀನುಗಳಿಗೆ 'ತರಿ ಭೂಮಿ' ಅಂತ ಹೆಸರಿದ್ದರೂ ನಮ್ಮ ರೈತರ ಆಡುಮಾತಿನಲ್ಲಿ 'ಗದ್ದೆ'ಯಾಗಿ ಬಹಳ ಕಾಲವಾಯ್ತು. ಪೂರ್ಣ ನೀರಾವರಿ ಗದ್ದೆಗಳಲ್ಲಿ ರೈತರ ಆದ್ಯತೆ ಭತ್ತ ಮತ್ತು ಕಬ್ಬು ಹೆಚ್ಚು ತೇವಾಂಶವಿರುವೆಡೆ ಇತರೆ ಬೆಳೆಗಳನ್ನು ಬೆಳೆಯಲಾಗದು. ನಿರಂತರ ನೀರು ನಿಂತರೆ ಕಬ್ಬಿನ ಫಸಲು ಕೂಡ ಬರುವುದಿಲ್ಲ.

ದೇಸಿ ಭತ್ತ:

ಭತ್ತ ಜಗತ್ತಿನ ಪ್ರಮುಖ ಆಹಾರ ಬೆಳೆಗಳಲ್ಲೊಂದು. ಜಗತ್ತಿನ ಅರ್ಧಕ್ಕಿಂತಲೂ ಹೆಚ್ಚು ಜನ ತಮ್ಮ ಆಹಾರಕ್ಕಾಗಿ ಭತ್ತವನ್ನೇ ಅವಲಂಬಿಸಿದ್ದಾರೆ. ಭತ್ತ ತಳಿ ವಿಕಾಸವಾದದ್ದು ಮೊದಲು ಭಾರತದಲ್ಲಿ. ಆನಂತರ ಜಪಾನ್‌ನಲ್ಲಿ, ಹೀಗಾಗಿ ಭತ್ತದ ಮೂಲವನ್ನನುಸರಿಸಿ 'ಇಂಡಿಕಾ' ಮತ್ತು 'ಜಪಾನಿಕಾ' ಎಂಬುದಾಗಿ ವಿಭಾಗೀಕರಿಸಲಾಗಿದೆ.

ಭಾರತದ ಖ್ಯಾತ ಕೃಷಿ ವಿಜ್ಞಾನಿ, ಭತ್ತದ ತಜ್ಞ ಡಾ.ರಿಚಾರಿಯಾ ಅವರ ಪ್ರಕಾರ ವೇದಗಳ ಕಾಲದಲ್ಲಿ ನಾಲ್ಕು ಲಕ್ಷಕ್ಕೂ ಮೀರಿದ ಭತ್ತದ ತಳಿಗಳಿದ್ದವು ! ಹಸಿರು ಕ್ರಾಂತಿಗೂ ಮುಂಚೆ ನಮ್ಮಲ್ಲಿ ಎರಡು ಲಕ್ಷಕ್ಕೂ ಮೀರಿದ ಭತ್ತದ ತಳಿಗಳಿದ್ದವು. ಆಧುನಿಕ ಬೇಸಾಯಕ್ರಮ, ರಾಸಾಯನಿಕ ಗೊಬ್ಬರ, ಕೀಟ ಹಾಗೂ ಕಳೆ ನಾಶಕಗಳು ಕ್ರಮೇಣ ನಮ್ಮ ಅಮೂಲ್ಯ ಭತ್ತದ ತಳಿಗಳನ್ನು ನಾಶ ಮಾಡುತ್ತಾ ಬಂದವು. ಅಧಿಕ ಇಳುವರಿ, ಅಧಿಕ ಲಾಭಗಳ ವ್ಯಾಮೋಹದಲ್ಲಿ ಪಾರಂಪರಿಕವಾಗಿ ಕಾಯ್ದಿಟ್ಟುಕೊಂಡು ಬಂದಿದ್ದ ಎಷ್ಟೋ ತಳಿಗಳನ್ನು ನಮ್ಮ ರೈತರು ಕಳೆದುಕೊಂಡರು. ಇಷ್ಟಾದರೂ ನಮ್ಮ ದೇಶದ ಮಟ್ಟಿಗೆ ೭೦ ರಿಂದ ೭೫ ಸಾವಿರ ಸಾಂಪ್ರದಾಯಿಕ ದೇಸೀ ಭತ್ತದ ತಳಿಗಳು ಉಳಿದುಕೊಂಡು ಬಂದಿರುವುದು ಆಶ್ಚರ್ಯದ ಸಂಗತಿ.

'ಭತ್ತ' ಅಪೂರ್ವ ಸಾಮರ್ಥ್ಯ ಹೊಂದಿರುವ ಬೀಜ, ನಮ್ಮ ದೇಶದ ಯಾವುದೇ ಭಾಗದಲ್ಲೂ, ಹವಾಗುಣದಲ್ಲೂ ಅದು ಬೆಳೆಯುತ್ತದೆ. ನಡು ನೀರಿನಲ್ಲಿ, ಕೆಸರುಗದ್ದೆಯಲ್ಲಿ, ಹೊಲದಲ್ಲಿ, ತೋಟದಲ್ಲಿ, ಗುಡ್ಡ-ಬೆಟ್ಟಗಳಲ್ಲಿ, ಕಡೆಗೆ ಸಮುದ್ರದ ಉಪ್ಪು ನೀರಿನಲ್ಲೂ ಬೆಳೆಯುವ ಸಾಮರ್ಥ್ಯ, ತಳಿ ವೈಶಿಷ್ಟ್ಯಗಳು ಭತ್ತದಲ್ಲಿ ಇವೆ. ಭತ್ತವನ್ನು 'ಅನ್ನ ದೇವರು' ಎಂದು ಪೂಜಿಸುವ ಸಂಪ್ರದಾಯ ಅನಾದಿ ಕಾಲದಿಂದಲೂ ಇದೆ. ಛತ್ತೀಸ್‌ಘಡದ ಅಕ್ಕಿ ಹಬ್ಬ, ಋತುಪಂಚಮಿ, ನೂಲ ಹುಣ್ಣಿಮೆ, ಯುಗಾದಿ, ಅಕ್ಷಯ ತೃತೀಯ, ನಾಗಪಂಚಮಿ, ನವರಾತ್ರಿ ಮುಂತಾದ ಹಬ್ಬಗಳೆಲ್ಲ ಸುಗ್ಗಿ ಮತ್ತು ಧಾನ್ಯ ಸಂರಕ್ಷಣೆಗೆ ಸಂಬಂಧಿಸಿದ ಆಚರಣೆಗಳು. ಒರಿಸ್ಸಾದ ಪುರಿ ಜಗನ್ನಾಥ ದೇವಾಲಯದಲ್ಲಿ ದೇಶದ ಪ್ರತಿ ಮೂಲೆಗಳಿಂದಲೂ ದೇಸೀ ಭತ್ತಗಳನ್ನು ತರಿಸಿ ಪ್ರತಿ ಭತ್ತದಿಂದಲೂ ಅಕ್ಕಿ ಮಾಡಿ; ಅನ್ನವನ್ನು ನೈವೇದ್ಯವಾಗಿಟ್ಟು ಪೂಜಿಸುವ ಆಚರಣೆ ಎಂದಿನಿಂದಲೂ ಇದೆ. ನಮ್ಮ ರೈತರು ತೀವ್ರ ಬರಗಾಲಗಳ ಸಂದರ್ಭದಲ್ಲೂ ಅವಕ್ಕೂ ಮೀರಿದ ಕಠಿಣ ಸಂದರ್ಭಗಳಲ್ಲೂ ಭತ್ತದ ಬಿತ್ತನೆ ಬೀಜಗಳನ್ನು ಸಂರಕ್ಷಿಸಿಕೊಂಡು ಬಂದುದಕ್ಕೆ ಇತಿಹಾಸದಲ್ಲಿ ಉದಾಹರಣೆಗಳಿವೆ. ಸರಿ ಸುಮಾರು ೨೦ ಲಕ್ಷ ಜನರನ್ನು ಬಲಿ ತೆಗೆದುಕೊಂಡ ೧೯೪೨ ರ ಭೀಕರ ಬರಗಾಲದ ನಂತರವೂ ಬಂಗಾಳದ ರೈತ ಸಮುದಾಯ ತನ್ನ ಭತ್ತದ ತಂಟೆಗೆ ಬ್ರಿಟೀಷರು ಬಾರದಂತೆ ತಡೆಯಿತು. 'ಜೀವ ಕೊಟ್ಟೇವು ಆದರೆ ಭತ್ತವನ್ನಲ್ಲ' ಎಂದರು ನಮ್ಮ ರೈತರು. ಈ ಹಿನ್ನೆಲೆಯಲ್ಲಿ ಹುಟ್ಟಿದ್ದು ತ್ರಿಭಾಗ ಬಂಡಾಯ!

ಆದರೆ ಈಗ ಏನಾಗಿದೆ? ಒರ್ರೈಝೂಸಟೈವಾ ೧೯೬೮ ರಲ್ಲಿ ಹಸಿರು ಕ್ರಾಂತಿಗೆ ನಾಂದಿ ಹಾಡಿದ ಭತ್ತದ ತಳಿ. ಇದೀಗ ಈ ತಳಿಯನ್ನು ಸ್ವಿಟ್ಜರ್‌ಲೆಂಡ್‌ನ ಸಿಂಜೆಂಟಾ ಕಂಪೆನಿ ಪೇಟೆಂಟ್ ಮಾಡಿಕೊಂಡಿದೆ. ಛತ್ತೀಸ್‌ಘಡದ ರಾಯಪುರದ ಇಂದಿರಾಗಾಂಧಿ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಇಂಥದ್ದೇ ಪ್ರಯತ್ನ ನಡೆಸಿದ್ದರು. ಹೇಳಿ-ಕೇಳಿ ಛತ್ತೀಸ್‌ಘಡ ಇಂಡಿಯಾದ 'ಇಂಡಿಕಾ' ಭತ್ತದ ಪ್ರಭೇದಗಳ ಬಹುದೊಡ್ಡ ಕಣಜ. ಈ ಕಣಜವನ್ನೇ ಸಿಂಜೆಂಟ ಕಂಪನಿ ಕೊಳ್ಳಲು ಹವಣಿಸಿತ್ತು.

ಆಧುನಿಕ ಹೈಬ್ರಿಡ್ ತಳಿ, ರಸಗೊಬ್ಬರಗಳ ಬಳಕೆಯ ತರುವಾಯ ಎಲ್ಲೆಡೆಯಂತೆ ಛತ್ತೀಸ್‌ಘಡದಲ್ಲೂ ಉತ್ಪಾದನೆ ಕುಂಠಿತಗೊಳ್ಳುತ್ತಿರುವುದನ್ನು ಮನಗಂಡ ಡಾ.ರಿಚಾರಿಯಾ ೧೯೭೧ ರಲ್ಲಿ ಸ್ಥಳೀಯ ಭತ್ತದ ತಳಿಗಳ ದಾಖಲೀಕರಣ ಹಾಗೂ ಮೌಲ್ಯೀಕರಣಕ್ಕಾಗಿ ಸಂಶೋಧನೆಯನ್ನು ಆರಂಭಿಸಿದರು.

ರೈತರ ತಳಿಗಳನ್ನು ಅಭಿವೃದ್ಧಿಪಡಿಸಿ ಮತ್ತೆ ಅವರಿಗೇ ಹಿಂದಿರುಗಿಸುವ ಒಪ್ಪಂದದೊಂದಿಗೆ ಶುರುವಾದ ಈ ಯೋಜನೆಯು ಕಡೆಗೆ ತಳಿ ಸಂಗ್ರಹಕ್ಕಷ್ಟೇ ಸೀಮಿತವಾಗಿ ಹೋಯಿತು. ಈ ಹಿನ್ನೆಲೆಯಲ್ಲಿ ಡಾ.ರಿಚಾರಿಯಾ ಇಂದಿರಾಗಾಂಧಿ ಕೃಷಿ ವಿಶ್ವವಿದ್ಯಾಲಯದ ಸಂಶೋಧನೆಗಾಗಿ ಸಂಗ್ರಹಿಸಿಟ್ಟಿದ್ದ ಒಟ್ಟು ತಳಿ ೨೨,೯೭೨ ಇದು ಜಗತ್ತಿನಲ್ಲೇ ಎರಡನೆ ಅತಿ ದೊಡ್ಡ ಸಂಗ್ರಹ. ಛತ್ತೀಸ್‌ಘಡದಲ್ಲಿ ತನ್ನ

ಮೂಲವುಳ್ಳ ಪ್ರಭೇದಗಳಲ್ಲದೆ, ಇತರೆಡೆ ಬೆಳೆಯುವ ಛತ್ತೀಸ್‌ಘಡದ ಮೂಲದ ೧೯,೦೦೦ ಭತ್ತದ ತಳಿಗಳೂ ಇಲ್ಲಿ ಸಂರಕ್ಷಿಸಲ್ಪಟ್ಟಿದ್ದವು.

ಆಧುನಿಕ ತಳಿ ಮತ್ತು ರಸಗೊಬ್ಬರಗಳ ಬಳಕೆಯಿಂದಾಗಿ ಇಡೀ ಛತ್ತೀಸ್‌ಘಡ ತತ್ತರಿಸುತ್ತಿರುವಾಗಲೂ ಇಂದಿರಾಗಾಂಧಿ ಕೃಷಿ ವಿಶ್ವವಿದ್ಯಾಲಯ ರೈತರೆಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ರೈತರ ಅಂಥ ಬಿಕ್ಕಟ್ಟಿನ ಸಂದರ್ಭದಲ್ಲೂ ಅವರನ್ನು ಪುನಃರುಜ್ಜೀವನಗೊಳಿಸಬಹುದಾಗಿದ್ದ ತಳಿಗಳನ್ನು ಒಪ್ಪಂದದಂತೆ ರೈತರಿಗೆ ಹಿಂದಿರುಗಿಸುವ ಪ್ರಯತ್ನವನ್ನೂ ಮಾಡಲಿಲ್ಲ. ಬದಲಿಗೆ ೨೦೦೩ ರಲ್ಲಿ ತನ್ನ ಸಂಗ್ರಹದಲ್ಲಿದ್ದ ಎಲ್ಲ ೨೨,೯೭೨ ಬಗೆಯ ಭತ್ತದ ಜೀವದ್ರವ್ಯವನ್ನು ಸಿಂಜೆಂಟಾ ಕಂಪೆನಿಗೆ ಮಾರಿಕೊಳ್ಳಲು ಪ್ರಯತ್ನಿಸಿತು. ಈ ಸಂದರ್ಭದಲ್ಲಿ ಬೀಜ ಸಂರಕ್ಷಣೆಯ ವಿಷಯವಾಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪೇಟೆಂಟ್ ವಿಷಯವಾಗಿ ಜರುಗಿದ ಛತ್ತೀಸ್‌ಘಡದ ಸತ್ಯಾಗ್ರಹ ಇಡೀ ಜಗತ್ತಿನ ಗಮನ ಸೆಳೆಯಿತು.

ಬಾಸ್ಮತಿ ಅಕ್ಕಿ ಸಂಬಂಧದಲ್ಲೂ ನಮ್ಮ ವಿಜ್ಞಾನಿಗಳ ವಂಚನೆ ಎದ್ದು ಕಾಣುವಂಥದ್ದು. ಆಯಾಯ ಕ್ಷೇತ್ರಗಳಲ್ಲಿ ನುರಿತವರು ಬಹುರಾಷ್ಟ್ರೀಯ ಕಂಪೆನಿಗಳಿಗೆ ತಮ್ಮನ್ನು ಮಾರಿಕೊಂಡ ಕಾರಣವಾಗಿಯೇ ನಮ್ಮ ಅದೆಷ್ಟೋ ಸಂಪನ್ಮೂಲಗಳ ಮೇಲೆ ಸ್ವಾಮ್ಯತೆ ಸಾಧಿಸಲಾಗಿಲ್ಲ. ಬಾಸ್ಮತಿ ಬೆಳೆಯಲ್ಲೂ ಜಗತ್ತಿನಲ್ಲೇ ಅತಿ ದೊಡ್ಡ ಸ್ಥಾನ ಭಾರತದ್ದು, ಇಲ್ಲಿ ೨೭ ಬಗೆಯ ತಳಿಗಳಿವೆ. ೧೯೯೭ ರ ಸೆಪ್ಟೆಂಬರ್ ಎರಡರಂದು ಟೆಕ್ಸಾಸ್ ಮೂಲದ ರೈಸ್‌ಟೆಕ್ ಇಂಕ್ ಭಾರತದ ಬಾಸ್ಮತಿ ತಳಿಯೊಂದರ ಮೇಲೆ ಪೇಟೆಂಟ್ ಪಡೆಯಿತು. ಬಾಸ್ಮತಿಯ ವಂಶವಾಹಿಯಲ್ಲದೆ, ರೈತರು ಅಭಿವೃದ್ಧಿಪಡಿಸಿದ ಬಾಸ್ಮತಿಯ ಮೇಲೂ ರೈಸ್‌ಟೆಕ್‌ಗೆ ಹಕ್ಕು ನೀಡಲಾಗಿದೆ. ಈ ರೈಸ್‌ಟೆಕ್ ಇಂಕ್ ರಾಸ್ಮತಿ, ಟೆಕ್ಸ್‌ಮತಿ, ಜಾಸ್ಮತಿ ಹೆಸರುಗಳಲ್ಲಿ ಬಾಸ್ಮತಿ ಅಕ್ಕಿಯನ್ನು ಮಾರುಕಟ್ಟೆಗೆ ತಂದಿದೆ. ಭಾರತದ ವಾರ್ಷಿಕ ಬಾಸ್ಮತಿ ಅಕ್ಕಿ ಉತ್ಪಾದನೆ ೬,೫೦,೦೦೦ ಟನ್‌ಗಳಷ್ಟು, ನಮ್ಮ ಭತ್ತ ಕೃಷಿ ಕ್ಷೇತ್ರದಲ್ಲಿ ಶೇಕಡ ೧೦ ರಿಂದ ೧೫ ಭಾಗದಲ್ಲಿ ಬಾಸ್ಮತಿ ರಫ್ತಾಗುತ್ತಿದೆ. ಉದ್ದಕಾಳು, ವಿಶಿಷ್ಟ ಸುಗಂಧ ನಮ್ಮ ಬಾಸ್ಮತಿಯ ವೈಶಿಷ್ಟ್ಯ.

ಕರ್ನಾಟಕದಲ್ಲಿ ಭತ್ತದ ದೇಸೀ ಬೇಸಾಯ ವಿಧಾನ:

ರಾಗಿ, ಜೋಳ, ನವಣೆ ಸಜ್ಜೆಗಳನ್ನು ನಮ್ಮವರು ಬಡವರ ಆಧಾರಿ ಎನ್ನುತ್ತಾರೆ. ಅನ್ನ ಒಂದು ಕಾಲದಲ್ಲಿ ಭತ್ತ ಬೆಳೆಯುವವರ ಮತ್ತು ಶ್ರೀಮಂತರ ತಟ್ಟೆಗಳಲ್ಲಿ ಕಾಣಿಸುತ್ತಿತ್ತು. ನಮ್ಮ ಹಳ್ಳಿಗಳ ಕಡೆ 'ಹೊಟ್ಟೆ ತುಂಬ ಹಿಟ್ಟು ಬಾಯ್ತುಂಬ ಅನ್ನ' ಎಂಬ ಮಾತು ಚಾಲ್ತಿಯಲ್ಲಿತ್ತು. ಈಗಂತೂ ಅನ್ನಂ ಸರ್ವಮಯ ಎಂಬಂತಾಗಿದೆ.

ಕರ್ನಾಟಕ ಸರಕಾರ ಕೆ.ಜಿ.ಗೆ ೧ ರೂ.ನಂತೆ ತಿಂಗಳಿಗೆ ೩೦ ಕೆ.ಜಿ. ಅಕ್ಕಿಯನ್ನು ಬಡ ರೈತರು, ಕೃಷಿ ಕಾರ್ಮಿಕರು ಹಾಗೂ ಇತರೆ ಆರ್ಥಿಕವಾಗಿ ಹಿಂದುಳಿದವರಿಗೆ ಪಡಿತರ ಚೀಟಿಯ ಮೂಲಕ ವಿತರಿಸುತ್ತಿದೆ. ಇದಕ್ಕೆ ಅಧಿಕೃತವಾಗಿ 'ಅನ್ನ ಭಾಗ್ಯ' ಯೋಜನೆ ಎಂದೇ ಹೆಸರು.

ಪ್ರತಿ ಜೀವಿಗಳು ನೇರವಾಗಿ ಉಸಿರಾಡುತ್ತವೆ. ಸಸ್ಯಗಳೂ ಕೂಡ. ಆದರೆ ಭತ್ತದ ವಿಶೇಷತೆಯೇ ಬೇರೆ. ಅದು ಬೇರಿನ ಮೂಲಕ ಉಸಿರಾಡುತ್ತದೆ. ನೀರಿನಲ್ಲೂ ಉಸಿರಾಡುವ ವಿಶೇಷ ಕ್ಷಮತೆ ಮತ್ತು ತಂತ್ರ ಭತ್ತಕ್ಕಿದೆ. ಗದ್ದೆಯಲ್ಲಿ ನೀರಿಲ್ಲದಿದ್ದರೆ ವಾತಾವರಣದಿಂದಲೇ ನೀರು ಸ್ವೀಕರಿಸುವ ವಿಶೇಷ ಸಾಮರ್ಥ್ಯ ಭತ್ತದ ಬೆಳೆಗಿದೆ. ಗದ್ದೆಯಲ್ಲಿ ನೀರಿದ್ದರೆ ಮಾತ್ರ ಭತ್ತ ಬೆಳೆಯಲು ಸಾಧ್ಯ ಎಂಬುದು ತಪ್ಪು ತಿಳುವಳಿಕೆ. ಈ ತಪ್ಪು ತಿಳುವಳಿಕೆ ನಮ್ಮ ದೇಸೀ ಕೃಷಿಯ ರೈತರಲ್ಲಿ ಇರಲಿಲ್ಲ.

ನಮ್ಮಲ್ಲಿ ಎರಡು ತಿಂಗಳ ಅವಧಿಯಿಂದ ೬ ತಿಂಗಳ ಅವಧಿಯವರೆಗೂ ಬೆಳೆಯುವ ತಳಿಗಳಿವೆ. ಗಂಧಸಾಲೆ, ಜೀರಿಗೆಸಣ್ಣ ಇವು ನಮ್ಮ ರಾಜ್ಯದ ಸ್ಥಳೀಯ ಸುವಾಸನೆಯುಕ್ತ ತಳಿಗಳು. ಮಳೆ ಆಶ್ರಯದಲ್ಲಿ ಭತ್ತ ಬೆಳೆಯುವವರು ಪೂರ್ವ ಮುಂಗಾರಿನಿಂದಲೆ ಬೆಳೆಯಲು ಶುರು ಮಾಡುತ್ತಿದ್ದರು. ಭತ್ತವನ್ನು ಚೆಲ್ಲಿ ಬೇಸಾಯ ಮಾಡುವವರು ಎಕರೆಗೆ ಎರಡು ಕೊಳಗ (ಇಪ್ಪತ್ತು ಸೇರು) ಬೀಜ ಬಳಸುತ್ತಿದ್ದರು. ಬೀಜದ ಭತ್ತಗಳನ್ನು ಹಳಗೆಗಳಲ್ಲಿ, ಗುಡಾಣಗಳಲ್ಲಿ, ಮುಡಿಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಉತ್ತು ಹದ ಮಾಡಿದ ಜಮೀನಿಗೆ ಮಳೆ ಆದ ಮರುದಿನ ಮುಂಜಾನೆ ಭತ್ತವನ್ನು ಎರಚಿ ಹದವಾಗಿ ಚೆಲ್ಲುತ್ತಿದ್ದರು. ಆನಂತರ ಒಂದು ಸಲ ಉಳುಮೆ ಮಾಡಿದರೆ ಅಲ್ಲಿಗೆ ಭತ್ತದ ಬಿತ್ತನೆ ಕಾರ್ಯ ಸಂಪೂರ್ಣವಾಗುತ್ತಿತ್ತು. ಭತ್ತವನ್ನು ಸಾಲುಗಳಲ್ಲಿ ಬಿಡುವ ಪದ್ಧತಿಯೂ ಇತ್ತು. ಕೊಟ್ಟಿಗೆ ಗೊಬ್ಬರ ಹಾಕಿ ಉಳುಮೆ ಮಾಡಿದ ಜಾಗಕ್ಕೆ, ಮಳೆ ಹುಯ್ದ ಮರುದಿನ ಮುಂಜಾನೆ ಹದ ನೋಡಿ ನೇಗಿಲ ಹಿಂದೆ ಕೂರಿಗೆ ಕಟ್ಟಿ ಕೂರಿಗೆಯ ಬಾಯಿಂದ ಭತ್ತಗಳನ್ನು ಬಿಡುತ್ತಿದ್ದರು. ಸಾಲು ಭತ್ತ ಬಿತ್ತುವುದರಿಂದ, ಮುಂದೆ ಕಳೆ ನಿಯಂತ್ರಿಸಲು ಕುಂಟೆ ಹೊಡೆಯಲು ಅನುಕೂಲವಾಗುತ್ತಿತ್ತು. ಹೊಲದ ಫಸಲಿನಲ್ಲಿ ಈ ಎರಡು ಕ್ರಮಗಳು ಜಾರಿಯಲ್ಲಿದ್ದವು. ಭತ್ತ ಎರಚಿ ಚೆಲ್ಲಿದ ಜಮೀನುಗಳಲ್ಲಿ ಇಪ್ಪತ್ತು ದಿನಗಳ ತರುವಾಯ ಪೈರುಗಳು ಒತ್ತೊತ್ತಾಗಿ ಬೆಳೆದಿರುವೆಡೆಯಿಂದ, ವಿರಳವಾಗಿ ಬೆಳೆದಿರುವೆಡೆಗೆ ಕಿತ್ತು ತಂದು ನಾಟಿ ಮಾಡುತ್ತಿದ್ದರು. ಮಳೆ ಹುಯ್ದು, ಜಮೀನಿನಲ್ಲಿ ತೇವ ಇದ್ದರೆ ಮಾತ್ರ ಪೈರು ಕಿತ್ತು ನೆಡುವ ಕೆಲಸ ಇರುತ್ತಿತ್ತು. ಮೇ ತಿಂಗಳಲ್ಲಿ ಬಿತ್ತನೆಯಾದ ಭತ್ತ ಸೆಪ್ಟೆಂಬರ್‌ನಿಂದ ಅಕ್ಟೋಬರ್ ನಡುವೆ ಕಟಾವಿಗೆ ಬರುತ್ತಿತ್ತು. ಕೆರೆ, ಹಳ್ಳ, ಹೊಂಡ, ತೊರೆಗಳ ನೀರಾವರಿ ರೈತರು ಕೆಸರು ಗದ್ದೆ ಪದ್ಧತಿಯನ್ನು ಅನುಸರಿಸುತ್ತಿದ್ದರು. ಮೊದಲು ಬರಗದ್ದೆಯನ್ನು ಎರಡು ಸಾರಿ ನೇಗಿಲಿನಿಂದ ಉಳುಮೆ ಮಾಡಿ, ನಂತರ ಗದ್ದೆಗಳಿಗೆ ನೀರು ಬಿಟ್ಟುಕೊಳ್ಳುತ್ತಿದ್ದರು. ಜೂನ್ ತಿಂಗಳಲ್ಲಿ

ಭತ್ತದ ಒಟ್ಟಲು ಮಡಿಯನ್ನು ಅಣಿಗೊಳಿಸಿ ಎಕರೆಗೆ ೨೦ ರಿಂದ ೨೫ ಸೇರು ಪ್ರಮಾಣದಲ್ಲಿ ಭತ್ತ ಚೆಲ್ಲುತ್ತಿದ್ದರು. ಇಪ್ಪತ್ತರಿಂದ ೩೦ ದಿವಸದ ಒಳಗೆ ಭತ್ತದ ಸಸಿಮಡಿ (ಒಟ್ಟಲು) ಯಿಂದ ಪೈರುಗಳನ್ನು ಕಿತ್ತು ಗದ್ದೆಗೆ ನಾಟಿ ಮಾಡುತ್ತಿದ್ದರು. ನಾಟಿ ಮಾಡುವವರು ಹೆಂಗಸರೇ ಆಗಿರುತ್ತಿದ್ದರು.

ಅಣೆಕಟ್ಟು ವ್ಯಾಪ್ತಿಯ ಅಚ್ಚುಕಟ್ಟುದಾರರು ಜಲಾಶಯದಿಂದ ನೀರು ಹೊರ ಬರುವುದನ್ನು ಕಾಯಬೇಕಾಗಿತ್ತು. ಮೇ ತಿಂಗಳಿನಿಂದ ಶುರುವಾಗುತ್ತಿದ್ದ ಭತ್ತದ ಬೇಸಾಯ ಜುಲೈ ತಿಂಗಳ ಅಂತ್ಯದವರೆಗೂ ಕೆಲವೊಮ್ಮೆ ಆಗಸ್ಟ್ ತಿಂಗಳ ಮೊದಲ ವಾರದವರೆಗೆ ನಡೆಯುತ್ತಿತ್ತು. ಸಾಮಾನ್ಯವಾಗಿ ಆಗಸ್ಟ್ ಎರಡನೇ ವಾರದಿಂದ ಭತ್ತದ ಭಿತ್ತನೆ ಕಾರ್ಯವನ್ನು ಯಾರೂ ಮುಂದುವರಿಸುತ್ತಿರಲಿಲ್ಲ. ಭತ್ತದ ಬೆಳವಣಿಗೆಯು ನವೆಂಬರ್–ಡಿಸೆಂಬರ್‌ನ ಚಳಿಗೆ ಸಿಲುಕಿದರೆ ಕುಂಠಿತವಾಗುತ್ತಿತ್ತು ಮತ್ತು ಇಳುವರಿಯೂ ಕಡಿತಗೊಳ್ಳುತ್ತಿತ್ತು. ನವೆಂಬರ್–ಡಿಸೆಂಬರ್ ತಿಂಗಳೊಳಗೆ ಭತ್ತ ಕಟಾವು ಮಾಡಬಹುದಿತ್ತು. ವರ್ಷ ಪೂರ್ತಿ ನೀರಿರುವವರು ಮುಂಗಾರು, ಹಿಂಗಾರು, ಕಾರು ಫಸಲುಗಳೆಂದು ಮೂರು ಅವಧಿಯಲ್ಲಿ ಬೆಳೆ ಬೆಳೆಯುವ ಅವಕಾಶಗಳಿದ್ದವು. ಆಗ ೫ ರಿಂದ ೬ ತಿಂಗಳಿಗೆ ಬರುವ ಭತ್ತಗಳನ್ನು ಹಾಕದೆ 3½ ತಿಂಗಳಿನಿಂದ ನಾಲ್ಕು ತಿಂಗಳೊಳಗೆ ಒಕ್ಕಣೆಗೆ ಸಿದ್ಧವಾಗುವ ತಳಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.

ರಾಜ್ಯದ ದೇಸೀ ತಳಿಯ ಭತ್ತಗಳು:

ನಮ್ಮಲ್ಲಿ ರಾಜಮುಡಿ, ರಾಜಭೋಗ ತಳಿಗಳು ಮೈಸೂರು ಭಾಗದ ಹೆಸರಾಂತ ತಳಿಗಳು. ಇವು ನಾಲ್ಕೂವರೆ ತಿಂಗಳಿನಿಂದ ಐದು ತಿಂಗಳ ನಡುವಿನ ಅವಧಿಗೆ ಕೊಯ್ಲಿಗೆ ಬರುವಂಥವು. ವಿಶೇಷವಾಗಿ ರಾಜಮುಡಿ, ರಾಜಭೋಗಗಳು ತಮ್ಮದೇ ಆದ ರುಚಿ, ಸ್ವಾದ, ಪರಿಮಳಕ್ಕೆ ಹೆಸರಾದ ಅಕ್ಕಿಗಳು. ರಾಜಮುಡಿ ಎಂದರೆ ಮೈಸೂರು ರಾಜರಿಗಾಗಿ ಮೀಸಲಾದದ್ದು, ರಾಜಭೋಗ ಎಂದರೆ ರಾಜರೂ, ಶ್ರೀಮಂತರೇ ಉಣ್ಣುವ ವಿಲಾಸಿ ಅಕ್ಕಿ; ಈಗಲೂ ರೈತರು ಇದನ್ನು ಸ್ಮರಿಸುತ್ತಾರೆ. ಅಕ್ಕಿಗಳಲ್ಲಿ ರಾಜಮುಡಿ–ರಾಜಭೋಗ ಅಭ್ಯಾಸವಾದವರಿಗಂತೂ ಇತರೆ ಯಾವ ಅಕ್ಕಿಗಳೂ ಇಷ್ಟವಾಗುವುದಿಲ್ಲ. ಈ ಎರಡೂ ತಳಿಗಳು ಕೆ.ಆರ್.ನಗರ, ಕೆ.ಆರ್.ಪೇಟೆ, ಹೊಳೆನರಸೀಪುರ, ಹಾಸನ ತಾಲ್ಲೂಕುಗಳನ್ನು ಹೊರತುಪಡಿಸಿದರೆ ಉಳಿದೆಡೆ ಅಷ್ಟಾಗಿ ಬೆಳೆಯುವುದಿಲ್ಲ. ಬಹಳ ಹಿಂದೆಯೇ ಕರ್ನಾಟಕದ ಬೇರೆ ಬೇರೆ ಭಾಗದ ರೈತರು ತಮ್ಮ ಗದ್ದೆಗಳಿಗೆ ರಾಜಮುಡಿ–ರಾಜಭೋಗಗಳನ್ನು ಒಗ್ಗಿಸಲು ಯತ್ನಿಸಿದ್ದಾರೆ ಆದರೆ ಯಶಸ್ವಿ ಆಗಲಿಲ್ಲ.

ಈ ಎರಡೂ ತಳಿಗಳ ಮತ್ತೊಂದು ಮಹಾ ವಿಶೇಷವೆಂದರೆ, ಮೂಲತಃ ಇವು ರೋಗ ನಿರೋಧಕ ತಳಿಗಳು, ಸಾಧಾರಣ ತೇವಾಂಶದಲ್ಲೂ ಒಳ್ಳೆಯ ಇಳುವರಿ

ನೀಡುತ್ತವೆ. ರಸಗೊಬ್ಬರಗಳ ನೆರವಿಲ್ಲದೆಯೇ ಬೆಳೆಯುತ್ತವೆ. ಕೊಟ್ಟಿಗೆ ಗೊಬ್ಬರ, ಉಳುಮೆ, ನಾಟಿ, ಕಳೆ ನಿರ್ವಹಣೆ ಮತ್ತು ಕೊಯ್ಲು ಈ ಸಂಬಂಧದಲ್ಲಿ ಇವಿಷ್ಟೇ ಕೆಲಸ. ಹೀಗಾಗಿ ಇದು ಇಂದಿಗೂ ಸಂಪೂರ್ಣ ವಿಷಮುಕ್ತ ಬೆಳೆಯಾಗಿಯೇ ರೈತರ ಕೈ ಹಿಡಿದಿದೆ.

ಹೀಗೆಯೇ ಆಯಾಯ ಪ್ರದೇಶದ ವೈಶಿಷ್ಟ್ಯತೆಯೊಂದಿಗೆ ಬೆರೆತುಹೋಗಿರುವ ಅನೇಕ ಭತ್ತದ ತಳಿಗಳು ನಮ್ಮಲ್ಲಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೊಂದುರು, ಗುಡ್ಡುಕಜೆ, ಗುಡ್ಡುಬಿಳಿ, ಕಜೆಕಾಯಮೆ, ಬಿಳಿಕಾಯಮೆ, ಸಣ್ಣಬೊಳ್ಳೆರಿ, ಗಂಧಸಾಲೆ, ಸುಗ್ಗಿಕಾಯಮೆ, ಅತಿಕಾರ, ರಾಜಕಾಯಮೆ ಮುಂತಾದ ಭತ್ತ ವೈವಿಧ್ಯ. ಇಲ್ಲಿನ ಬಹುಪಾಲು ಭತ್ತಗಳು ಬೇಯಿಸಿ, ಒಣಗಿಸಿ ಬಳಸುವಂಥವು. ಬೆಳ್ತಕ್ಕಿಗೂ ಇಲ್ಲಿ ತಳಿಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಬಹುಪಾಲು ತಳಿಗಳು ಕೆಂಪು ಅಕ್ಕಿಯ ತಳಿಗಳು. ಇಲ್ಲಿನ ಬಹುಮುಖ್ಯ ಆಹಾರ ಸಂಸ್ಕೃತಿ ಕುಚಲಕ್ಕಿ, ಮೀನು ಮತ್ತು ಬಸಳೆ ಸೊಪ್ಪುಗಳಿಂದ ಆವೃತವಾಗಿದೆ.

ತಿಂಗಳ್‌ನೆಲ್ ಅಥವಾ ದಬ್ಬಣ ಸಾಲೆ, ಕಟ್ಮುಂಡಾ, ಹೆಗ್ಗೆ, ಕಣಾಲ್‌ಕುಟ್ಟಿ ಅಥವಾ ಕಂಡೇಲ್‌ಕುಟ್ಟಿ, ಕರ್‌ದಡಿ ಅಥವಾ ಕಜೆನೆಲ್, ಕುಟ್ಟಿಕಾಯಮೆ......ಇವು ಉಡುಪಿ ಜಿಲ್ಲೆಯ ಭತ್ತದ ತಳಿಗಳು.

ಅನ್ನ ಸಂಸ್ಕೃತಿಯ ಶಿಖರ ಪ್ರಾಯವೆಂದೇ ಪರಿಗಣಿಸಲ್ಪಟ್ಟ ಹುತ್ತರಿ ಹಬ್ಬದ ನಾಡು ಕೊಡಗು. ಭತ್ತದ ಪಾರಂಪರಿಕ ಸಂಸ್ಕೃತಿಯ ಆಚರಣೆಗಾಗಿಯೇ ಮೀಸಲಾದದ್ದು ಹುತ್ತರಿ ಹಬ್ಬ. ಕೊಡಗಿನ ಮಳೆದೇವರಾದ ಇಗ್ಗುತಪ್ಪ ಮತ್ತು ಹುತ್ತರಿ ಎರಡನ್ನೂ ಸಮನ್ವಯಗೊಳಿಸಿ ಭತ್ತದ ಗದ್ದೆ ಕೊಯ್ಲಿಗೂ ಮುಂಚಿನ ಆಚರಣೆಯಾಗಿ – ಹೊಸ ಅಕ್ಕಿಯ ಸ್ವಾಗತವೂ ಆಗಿ ಮಿಳಿತ ಆಚರಣೆಯಾಗಿ – ಹೊಸ ಅಕ್ಕಿಯ ಸ್ವಾಗತವೂ ಆಗಿ ಮಿಳಿತಗೊಂಡಿದೆ. ಕೊಡಗಿನ ಭತ್ತದ ಹಿಡುವಳಿದಾರರು ಕೊಟ್ಟಿಗೆ ಗೊಬ್ಬರವನ್ನು ಬಳಸಿ ಭತ್ತ ಬೆಳೆಯುತ್ತಾರೆ. ಅನ್ನ, ಅಕ್ಕಿರೊಟ್ಟಿ, ಕಡುಂಬಟ್ಟು (ಕಡಬು), ಪಾಯಸ, ತಂಬಿಟ್ಟುಗಳಿಗೆಲ್ಲ ಅಗತ್ಯವಾದ ತಳಿಗಳು ಕೊಡಗಿನಲ್ಲಿ ಇವೆ. ಗಮನ ಸಣ್ಣ ಭತ್ತವನ್ನು ತುಪ್ಪದ ಅನ್ನಕ್ಕಾಗಿಯೆ ಬೆಳೆಯುತ್ತಾರೆ. ಗನ್ನ, ಓಟುಪಾಳಿ, ಮಾನಿಗದ್ದೆ, ಮುಟ್ಲುಗದ್ದೆ, ಅಗಾಡಿ....ಇವು ಕೊಡಗಿನ ನಾನಾ ವಿನ್ಯಾಸದ ಗದ್ದೆಗಳು. ಕಿಗ್ಗಟ್ಟು, ಬಿಳಿಯ, ಜೀರಿಗೆ ಸಣ್ಣ, ಕರಿ ಸಣ್ಣ, ಬಿ.ಕೆ.ಬಿ. ಇವು ಕೊಡಗಿನ ಗದ್ದೆಗಳಲ್ಲಿ ಬೆಳೆಯುವ ಸಾಂಪ್ರದಾಯಿಕ ತಳಿಗಳು. ಬಿ.ಕೆ.ಬಿ. ಎಂಬುದು ಮಡಿಕೇರಿ ತಾಲ್ಲೂಕಿನ ಮೂರ್ನಾಡು ಗ್ರಾಮದ ಬಡುವಂಡ್ರ ಕೆ ಬೆಳ್ಳಿಯಪ್ಪ ಅವರು ೧೯೬೦ ರಲ್ಲಿ ಅನ್ವೇಷಿಸಿದ ತಳಿ. ಹೀಗಾಗಿ ಆ ಭತ್ತಕ್ಕೆ ಅವರ ಹೆಸರನ್ನೇ ಇಡಲಾಗಿದೆ.

ನೆರೆನೆಲ್ಲು, ರತ್ನಚೂಡಿ, ಸಣ್ಣವಾಳ್ಯ, ಸೋಮಸಾಲಿ, ಜೀರಿಗೆಸಾಲಿ, ದೊಡ್ಡಭತ್ತ, ಸಣಭತ್ತ, ಸಕಲಾತಿ ಸಣ್ಣ, ಬಿಳಿಭತ್ತ, ಪುಟ್ಟಸಣ್ಣ, ಕೆಂಪುಸಣ್ಣ, ನೇರ್ಳಗಿರಿಸಣ್ಣ, ಬಂಗಾರಕಡ್ಡಿ, ಕೇಸರಿ, ಕೆಂಪುಕೇಸರಿ, ಹಸಿರುಕೇಸರಿ, ಹುದ್ರಿ, ಬಿಳಿಹಸದಿ, ಮರಹಸದಿ, ಕಾರ್‌ಭತ್ತ.....ಹೀಗೆ ಅನೇಕ ಭತ್ತದ ತಳಿ ವೈಶಿಷ್ಟ್ಯ ಶಿವಮೊಗ್ಗ ಜಿಲ್ಲೆಯದು.

ನಮ್ಮ ನಾಡಿನ ಮಲೆನಾಡು ಭಾಗಗಳಲ್ಲಿ, ಕರಾವಳಿ ಭಾಗಗಳಲ್ಲಿ, ಮಳೆ ಆಶ್ರಯದಲ್ಲಿ ಭತ್ತ ಬೆಳೆಯುವಲ್ಲಿ ದೇಸಿ ಭತ್ತದ ತಳಿಗಳು ಉಳಿದುಕೊಂಡಿವೆ. ಸ್ಥಳೀಯವಾಗಿ ಹೆಚ್ಚು ಹುಲ್ಲು ಮತ್ತು ಇಳುವರಿ ನೀಡುವ ಭತ್ತಗಳೂ ಉಳಿದುಕೊಂಡಿವೆ. ಅಣೆಕಟ್ಟುಗಳ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಶೇಕಡ ೮೦ ರಷ್ಟು ಹೈಬ್ರೀಡ್ ತಳಿಗಳು ಬಳಕೆಯಲ್ಲಿವೆ. ಆದರೆ ಈ ತಳಿಗಳಿಗೆ ದೇಸೀ ಭತ್ತದ ತಳಿಯ –ದೀರ್ಘ ಬಾಳಿಕೆಯ ಗುಣಗಳಿಲ್ಲ.

ನಮ್ಮ ನಾಡಿನ ಇತರ ಪ್ರಮುಖ ದೇಸಿ ಭತ್ತದ ತಳಿಗಳ ಪಟ್ಟಿ ಕೆಳಕಂಡಂತಿದೆ.

೧) ಕಾಗೆಪಾಳಿ
೨) ಬಿಳಿಮುಂಡಗ
೩) ಕರಿಮುಂಡುಗ
೪) ದೇವಮಲ್ಲಿಗೆ
೫) ಮೈಸೂರು ಸಣ್ಣ
೬) ತುಳಸಿ ಸಣ್ಣ
೭) ಜೇನುಗೂಡು
೮) ಬೈರ ನೆಲ್ಲು
೯) ದೊಡ್ಡಬೈರ ನೆಲ್ಲು
೧೦) ರಾಜಮುಡಿ
೧೧) ರಾಜ ಭೋಗ
೧೨) ಮರನೆಲ್ಲು
೧೩) ಕರಿನೆಲ್ಲು
೧೪) ದೊಡ್ಡಿಬತ್ತ
೧೫) ಸಣ್ಣಮುಂಡುಗ
೧೬) ಗಂಧಸಾಲೆ
೧೭) ಜೀರಿಗೆಸಣ್ಣ
೧೮) ಮಾರಿಗ ಬತ್ತ
೧೯) ಆಲೂರು ಸಣ್ಣ
೨೦) ಸೇಲಂ ಸಣ್ಣ
೨೧) ಹಾಲು ದುಬ್ಬಲು
೨೨) ಹಾಲು ಹಂಸ
೨೩) ಸುಕವಾಸ್
೨೪) ನವರ
೨೫) ಅಕ್ಕಾಳು
೨೬) ಕಾಮದಾರಿ
೨೭) ಕಿಚಡಿಸಾಂಬ
೨೮) ಕೊಯಮತ್ತೂರುಸಣ್ಣ
೨೯) ಕೃಷ್ಣಲೀಲಾ
೩೦) ಗುಜಗುಂಡ
೩೧) ಗಿಡ್ಡಗೌರಿ
೩೨) ಘಮ್‌ಗಾಳಿ
೩೩) ಜೋಳಗ
೩೪) ತೊಗರಿ
೩೫) ದಪ್ಪವಾಳ್ಯ
೩೬) ಪದ್ಮರೇಖಾ
೩೭) ಪರಿಮಳಸಣ್ಣ
೩೮) ಬಾಸುಮತಿ
೩೯) ಬಿಳಿಕಣ್‌ಹೆಗ್ಗೆ
೪೦) ಬೆಟ್ಟಸಣ್ಣ
೪೧) ಭೀಮಸಾಲೆ
೪೨) ಮದ್ರಾಸ್‌ಸಣ್ಣ

೪೩) ಮುಸಳ್ಳಿ
೪೪) ಸಿದ್ಧಸಾಲೆ
೪೫) ಸೇಲಂ ಸಣ್ಣ
೪೬) ಹಸೂಡಿ
೪೭) ಹೊನಸು
೪೮) ಹೊಲಭತ್ತ

೬.೬. ಬಾಗಾಯ್ತು ಬೇಸಾಯ ಸಂಸ್ಕೃತಿ

ತೋಟದ ಕೃಷಿಯನ್ನು ನಮ್ಮ ಜನ ಬಾಗಾಯ್ತು ಅನ್ನುತ್ತಿದ್ದರು. ಹೊಲಗಳಲ್ಲಿ ಹಿಪ್ಪೆ, ಹೊಂಗೆ, ಬೇವು, ಆಲ, ತೇಗ, ಅರಳಿ, ನೇರಳೆ ಇತ್ಯಾದಿ ಮರಗಳು ಬೆಳೆದರೂ ಅವನ್ನು ತೋಟ ಎಂದು ಕರೆಯುತ್ತಿರಲಿಲ್ಲ. "ಹೊಲ ತೋಪು" ಎನ್ನುತ್ತಿದ್ದರು. ಸಾಮಾನ್ಯವಾಗಿ 'ತೆಂಗು' ಮಾತ್ರವಿದ್ದರೂ ಅದಕ್ಕೆ ತೋಟ ಎನ್ನುತ್ತಿದ್ದರು. ಅಡಿಕೆ ಮಾತ್ರ ಇದ್ದರೂ ಅದಕ್ಕೆ 'ಅಡಿಕೆ ತೋಟ' ಎನ್ನುತ್ತಿದ್ದರು. ಬಾಳೆಗೆ –ಬಾಳೆ ತೋಟ ಎನ್ನುತ್ತಿದ್ದರು. ಆದರೆ ಬರೇ ಮಾವಿನ ಮರಗಳೇ ಇದ್ದರೆ ಅದಕ್ಕೆ ಮಾವಿನ ತೋಟ ಎನ್ನುತ್ತಿರಲಿಲ್ಲ. ಮಾವಿನ ತೋಪು ಎನ್ನುತ್ತಿದ್ದರು. ಪ್ರಧಾನವಾಗಿ ಮಾವು ಇದ್ದು, ಆಂಶಿಕವಾಗಿ ತೆಂಗು, ಪಪ್ಪಾಯ, ನಿಂಬೆ, ನೇರಳೆ ಇತ್ಯಾದಿಗಳಿದ್ದಾಗ 'ಮಾವಿನ ತೋಟ' ಎನ್ನುತ್ತಿದ್ದರು. ಮಂಡ್ಯದ ಕಡೆ ಕಬ್ಬಿನ ಗದ್ದೆಗೂ ಕಬ್ಬಿನ ತೋಟ ಅನ್ನುವುದು ರೂಢಿಯಲ್ಲಿದೆ. ಬಾಳೆಗದ್ದೆಗಳಿಗೂ ಬಾಳೆ ತೋಟ ಅನ್ನುವುದು ಕೂಡ ರೂಢಿಯಲ್ಲಿದೆ. ಬಿಜಾಪುರ, ಬೆಳಗಾಂ, ಕೋಲಾರಗಳಲ್ಲಿ ದ್ರಾಕ್ಷಿ ಬೆಳೆ ಇರುವವರು ತಮ್ಮದು ದ್ರಾಕ್ಷಿ ತೋಟವೆಂತಲೇ ಕರೆಯುವುದು.

ನಮ್ಮ ದೇಸೀ ಕೃಷಿಕರು ಹಿಂದಿನಿಂದಲೂ ತೋಟಗಳ ಬಗೆಗೆ ವಿಶೇಷ ಆಸ್ಥೆ ವಹಿಸುತ್ತಾ ಬಂದವರು. ತೋಟ ಮಾಡಲು ಇದ್ದ ಪ್ರಮುಖ ಕಾರಣಗಳನ್ನು ಹೀಗೆ ಹೇಳಬಹುದು.

(೧) ತೋಟ ಸದಾ ಕಾಲ ಹಸಿರಿನಿಂದ ಕೂಡಿರುತ್ತದೆ. ಮನಸ್ಸಿಗೆ ಆನಂದ ನೀಡುತ್ತದೆ.

(೨) ತೋಟ ಮುಂದಿನ ತಲೆಮಾರಿನ ತಲೆ ಕಾಯುತ್ತದೆ. ನಿಶ್ಚಿಂತೆಯಿಂದ ಕುಳಿತು ಉಣ್ಣಬಹುದು.

(೩) ಒಮ್ಮೆ ತೋಟ ಮಾಡಿ ಗಿಡಗಳು ಫಸಲು ಶುರುಮಾಡಿದ ಮೇಲೆ ಆದಾಯ ಬರುತ್ತದೆ. ನಂತರ ಖರ್ಚು ಕಡಿಮೆಯಾಗುತ್ತದೆ.

(೪) ತೋಟ ದೂರದೃಷ್ಟಿಯನ್ನು ಹೆಚ್ಚಿಸುತ್ತದೆ. ಹೊಸ, ಹೊಸ ಅನುಭವಗಳನ್ನು ನೀಡುತ್ತದೆ. ಬೇಸಾಯಗಾರರ ಸೃಜನಶೀಲತೆಯನ್ನು ಅಭಿವ್ಯಕ್ತಗೊಳಿಸಲು ನೆರವಾಗುತ್ತದೆ.

(೫) ಬೆಳೆದ ಮರಗಳು, ತುಂಬಿದ ಫಸಲುಗಳು ಬೇಸಾಯಗಾರನಲ್ಲಿ ಧೈರ್ಯ ಮತ್ತು ಭರವಸೆಯನ್ನು ಹೆಚ್ಚಿಸುತ್ತವೆ. ಹೊಸ, ಹೊಸ ಗಿಡಗಳನ್ನು ನೆಡಲು, ಹೊಸ ಹೊಸ ಪ್ರಯೋಗಗಳನ್ನು ನಡೆಸಲು ಇದರಿಂದ ನೆರವಾಗುತ್ತದೆ......ಹೀಗೆ

ನಮ್ಮ ನಾಡಿನ ಪ್ರಮುಖ ತೋಟಗಾರಿಕಾ ಬೆಳೆಗಳು.

(೧) ದ್ರಾಕ್ಷಿ
(೨) ಕಾಫಿ
(೩) ಚಹಾ
(೪) ತೆಂಗು
(೫) ಅಡಿಕೆ
(೬) ಬಾಳೆ
(೭) ಮೆಣಸು
(೮) ಏಲಕ್ಕಿ
(೯) ವೀಳ್ಯದೆಲೆ
(೧೦) ರಬ್ಬರ್
(೧೧) ಮಾವು
(೧೨) ಸೀಬೆ
(೧೩) ಪಪ್ಪಾಯ
(೧೪) ಸಪೋಟ
(೧೫) ಕಿತ್ತಳೆ
(೧೬) ಮೊಸಂಬಿ
(೧೭) ನಿಂಬೆ/ಲಿಂಬೆ
(೧೮) ಹಲಸು
(೧೯) ನೇರಳೆ
(೨೦) ಸೀತಾಫಲ
(೨೧) ರಾಮಫಲ
(೨೨) ಲಕ್ಷ್ಮಣಫಲ
(೨೩) ಮರಸೇಬು
(೨೪) ಬೇಲ
(೨೫) ದಾಳಿಂಬೆ
(೨೬) ಕೋಕೋ
(೨೭) ಗೇರು
(೨೮) ಚಕೋತ
(೨೯) ನುಗ್ಗೆ
(೩೦) ಲವಂಗ
(೩೧) ಅಗಸೆ
(೩೨) ದಾಲ್ಚಿನ್ನಿ
(೩೩) ಜಾಯಿಕಾಯಿ
(೩೪) ಹಾಲುವಾಣ

ತೋಟದಲ್ಲಿ ಈಚಲು ಮರ ಸ್ವಾಭಾವಿಕವಾಗಿ ಬೆಳೆದರೆ ಒಂದೋ, ಎರಡೋ ಉಳಿಸಿಕೊಳ್ಳುತ್ತಿದ್ದರು. ಸ್ವಾಭಾವಿಕವಾಗಿ ಈಚಲು ವನಗಳು ಹಿಂದೆ ಇದ್ದವು. ಅವುಗಳಿಂದ ಹೆಂಡ ಇಳಿಸಲಾಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೈನೆ ಮರಗಳು ಸ್ವಾಭಾವಿಕವಾಗಿ ಬೆಳೆಯುತ್ತಿದ್ದವು. ತೀರ ಅಪರೂಪಕ್ಕೆ ಕೆಲವು ತೋಟಗಳಲ್ಲಿ ವಾಲೆ ಮರಗಳೂ ಇರುತ್ತಿದ್ದವು.

ಜಮೀನಿನ ತಗ್ಗಿನ ಜಾಗಗಳಲ್ಲಿ, ತನುವಾಗಿರುವ ಜಾಗಗಳಲ್ಲಿ, ಬಾವಿ ನೀರಿನ ಸೌಕರ್ಯವಿರುವೆಡೆ, ಕೆರೆಯ ಹೊರ ಅಂಗಳದಲ್ಲಿ, ಕೆರೆ ಅಚ್ಚುಕಟ್ಟಿನಲ್ಲಿ ನೀರು ಹತ್ತದ ಕಡೆ ಅಥವಾ ಶೀತ/ವಸ್ತಿ ಆಗದ ಕಡೆ ತೋಟ ಮಾಡಲಿರುವ ಜಾಗಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಕಾಫಿ ಮತ್ತು ಚಹಾ ತೋಟಗಳು ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ ಮತ್ತು ಹಾಸನ ಜಿಲ್ಲೆಯ ಬೇಲೂರು, ಸಕಲೇಶಪುರ ತಾಲ್ಲೂಕುಗಳಿಗೆ ಸೀಮಿತವಾಗಿದ್ದವು.

ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶಗಳಲ್ಲಿ ರೈತರು ಅಡಿಕೆ ಬೆಳೆಗೆ ಪ್ರಾಧಾನ್ಯತೆ ನೀಡುತ್ತಿದ್ದರು. ತೆಂಗು ಕೂಡ ಅಲ್ಲಿ ಬೆಳೆಯಬಹುದಾಗಿದ್ದರೂ ತೆಂಗು ಹೆಚ್ಚು ಎತ್ತರ ಬೆಳೆದು ಅಡಿಕೆಗೆ ನೆರಳಾಗುತ್ತದೆ ಅನ್ನುವ ಕಾರಣಕ್ಕೆ ತೆಂಗನ್ನು ವಿರಳವಾಗಿಸುತ್ತಿದ್ದರು. ಅಡಿಕೆಯ ಒಳಗೆ ಬಾಳೆ, ಶುಂಠಿ, ಅರಿಷಿಣ ಇವು ಉಪ ಬೆಳೆಯಾಗುತ್ತಿದ್ದವು. ಬಹುಸ್ತರದ ಬೆಳೆ ಪದ್ಧತಿ ನಮ್ಮ ಸಾಂಪ್ರದಾಯಿಕ ಕೃಷಿಕರಲ್ಲಿ ರೂಢಿಯಾಗಿತ್ತು. ಎತ್ತರದ ದೀರ್ಘಕಾಲೀನ ಬೆಳೆಗಳ ನಡುವೆ ದ್ವಿತೀಯ ಸ್ತರವಾಗಿ ಅರಿಶಿಣ, ಶುಂಠಿ, ಗಾಂಧಾರಿ ಮೆಣಸಿನಕಾಯಿ, ಕೆಸುವಿನಗೆಡ್ಡೆ, ಇತ್ಯಾದಿಗಳಿದ್ದರೆ, ಭೂ ಮೇಲ್ಮೈಯ ಹೊದಿಕೆಯ ಬೆಳೆಯಾಗಿ ಸಿಹಿಗೆಣಸು,

ಸಿಹಿಗುಂಬಳ, ಬೂದುಗುಂಬಳ, ಸೌತೆಕಾಯಿ, ಮಂಗಳೂರು ಸೌತೆ, ಕಲ್ಲಂಗಡಿ, ಕರಬೂಜ (ಮಿಣಕೆಹಣ್ಣು) ಇತ್ಯಾದಿ ಬೆಳೆಗಳು ಆಯೋಜನೆಗೊಳ್ಳುತ್ತಿದ್ದವು. ತೃತೀಯ ಸ್ಥರದಲ್ಲಿ ಬಾಳೆ, ಏಲಕ್ಕಿ, ಕೋಕೋ, ಹಾಲವಾಣ, ಅಗಸೆ, ನುಗ್ಗೆ ಬೆಳೆಗಳು ಇರುತ್ತಿದ್ದವು. ಹಾಲವಾಣ, ಅಗಸೆ, ನುಗ್ಗೆಯ ಆಸರೆಯಲ್ಲಿ ಹಬ್ಬುವ ಬಳ್ಳಿಗಳಾಗಿ ಕಾಳು ಮೆಣಸು, ವೀಳ್ಯದೆಲೆಗಳು ಸ್ಥಾನ ಪಡೆಯುತ್ತಿದ್ದವು. ನಾಲ್ಕನೇ ಸ್ಥರದಲ್ಲಿ ಅಡಕೆ ಮರಗಳು ತಲೆ ಎತ್ತಿ ನಿಂತಿರುತ್ತಿದ್ದವು. ಐದನೇ ಸ್ಥರದಲ್ಲಿ ತೆಂಗು ಮತ್ತು ಆಯಾಯ ವಾತಾವರಣಕ್ಕೆ ಒಗ್ಗುವ ಮರಗಳು ಇರುತ್ತಿದ್ದವು. ತೋಟದ ಸುತ್ತ ಎತ್ತರವಾಗಿ ಬೆಳೆಯುವ ಮರಗಳಿಗೆ ಸ್ಥಾನ ಕಲ್ಪಿಸುತ್ತಿದ್ದರು. ಆ ಮರಗಳು ಮಾವು, ನೇರಳೆ, ಬೇಲ, ತೆಂಗು ಹಾಗೂ ಇತರೆ ತೇಗ, ಹೊನ್ನೆ, ಬೀಟೆ, ಬೇವು ಜಾತಿಯವು ಆಗಿರುತ್ತಿದ್ದವು. ಇವು ತೋಟಕ್ಕೆ ಬೇಲಿಯಾಗಿಯೂ, ಅಡ್ಡ-ದಿಡ್ಡಿ ಬೀಸುವ ಗಾಳಿಗೆ ತಡೆಯಾಗಿಯೂ ಬಳಕೆಯ ದೃಷ್ಟಿಯಿಂದ ಉಪಯುಕ್ತವೂ ಆಗಿರುತ್ತಿದ್ದವು. ಬೇಲಿಯ ಮರಗಳ ಸಾಲಿನಲ್ಲಿ ಬೂತಾಳೆ, ಲಕ್ಕಿ, ಲಂಟಾನ, ಸೀಗೆಮೆಳೆ, ಕಾರೆಹಣ್ಣಿನ ಗಿಡ, ಬಾರೆ ಹಣ್ಣಿನ ಗಿಡ, ಅಂಕೋಲೆ, ಪುನ:ರ್ಪುಳಿ ಇತ್ಯಾದಿಗಳಿರುತ್ತಿದ್ದವು. ಆಡು-ಕುರಿ ಸಾಕುವವರು ಬೇಲಿಗಳಲ್ಲಿ ಅವುಗಳ ಮೇವಿಗೂ ಪ್ರಾಮುಖ್ಯತೆ ಕೊಡುತ್ತಿದ್ದರು. ತೋಟದ ಸೌದೆಗಳು ಉರುವಲಿಗೆ ಬಳಕೆಯಾಗುತ್ತಿದ್ದವು.

'ಬಹುಮಹಡಿ ಬೆಳೆ' ಪದ್ಧತಿ ಅಥವಾ ಬಹುಸ್ತರದ ಬೆಳೆ ಪದ್ಧತಿ ಕುರಿತು ಇಂದಿನ ಕೃಷಿ ವಿಜ್ಞಾನಿಗಳು ಹೆಚ್ಚು ಮಾತಾಡುತ್ತಿದ್ದಾರೆ. ಹಾಗೆಯೇ ಆಗ್ರೋ ಫಾರೆಸ್ಟ್ರಿ (ಕೃಷಿ ಅರಣ್ಯ) ಕುರಿತಾಗಿ ಕೂಡ. ಇಂದು ಆದರ್ಶ ಎಂದು ಕಾಣಲ್ಪಡುತ್ತಿರುವ - ಬಹುಮಹಡಿ ಬೆಳೆ ಪದ್ಧತಿಗಳು ಮತ್ತು ಆಗ್ರೋ ಫಾರೆಸ್ಟ್ರಿಗಳು - ಸಾವಿರಾರು ವರ್ಷಗಳಿಂದಲೂ ಪದ್ಧತಿಗಳಾಗಿ ಬೆಳೆದು ಬಂದಿದ್ದವು. ದೇಸೀ ಕೃಷಿಕರು ಅಂಥ ಪದ್ಧತಿಗಳ ಮಹತ್ವವನ್ನು ನಿರಂತರವಾಗಿ ಅರಿಯುತ್ತಲೇ ಬಂದಿದ್ದರು. ವೈವಿಧ್ಯಮಯ ಬೆಳೆಯಿಂದಾಗಿಯೇ ಕೀಟಗಳ ಹಾವಳಿ ಬೆಳೆಗಳನ್ನು ಬಾಧಿಸಿರಲಿಲ್ಲ. ವೈವಿಧ್ಯತೆಯ ಕಾರಣವಾಗಿ ಮತ್ತು ಹೊದಿಕೆಯ ಬೆಳೆಗಳ ಕಾರಣವಾಗಿ ಭೂಮಿಯಲ್ಲಿ ತೇವಾಂಶ ಕಾಯ್ದುಕೊಳ್ಳಲಾಗಿದ್ದಿತು. ಈ ಹಿನ್ನೆಲೆಯಲ್ಲಿ ಭೂಮಿ ಕೋಟ್ಯಾನುಕೋಟಿ ಜೀವಾಣುಗಳಿಂದ ಸದಾ ಜೀವಂತವಾಗಿದ್ದು ರೋಗ ನಿರೋಧಕ ಶಕ್ತಿಯನ್ನು ಬೆಳೆಗಳಲ್ಲಿ ತುಂಬುತ್ತಿತ್ತು.

ಆಯಾಯ ಭೌಗೋಳಿಕ ಹವಾಮಾನಗಳ ವ್ಯಾಪ್ತಿಯಲ್ಲಿ ಕರ್ನಾಟಕದಾದ್ಯಂತ ವೈವಿಧ್ಯಮಯ ತೋಟಗಳಿದ್ದವು. ಬ್ರಿಟೀಷರು ಪ್ರವರ್ಧಮಾನಕ್ಕೆ ಬಂದ ತರುವಾಯ ಇಲ್ಲಿ ಕಾಫಿ ಮತ್ತು ಚಹ ತೋಟಗಳು ವ್ಯವಸ್ಥಿತವಾಗಿ ರೂಪುಗೊಂಡವು. ಸಾವಿರಾರು ಎಕರೆ ಮಟ್ಟದ ಕಾಫಿ-ಚಹಾ ಎಸ್ಟೇಟ್‌ಗಳಿಗೆ ಬ್ರಿಟೀಷರೇ ಮಾಲೀಕರಾಗಿದ್ದರು. ಆಗ ಮಲೆಗಳಲ್ಲಿ ದಟ್ಟವಾಗಿ ಬೆಳೆದಿದ್ದ ಹೆಮ್ಮರಗಳನ್ನೆಲ್ಲ ಕಡಿದು ನಾಟಾ ಮಾಡಿ ತಮ್ಮ ದೇಶಗಳಿಗೆ ಸಾಗಿಸಿದರು. ಕಾಡು ಕಡಿದು ಹಸನು ಮಾಡಿದ ಜಾಗಗಳಿಗೆ ಕಾಫಿ ನೆಟ್ಟು ನೆರಳಿಗಾಗಿ ಸಿಲ್ವರ್ ಓಕ್ ಮತ್ತು ಇತರ ಕಾಡು ಜಾತಿಯ ಮರಗಳ ಬೆಳವಣಿಗೆಗೆ ಕಾರಣರಾದರು. ನಮ್ಮ ದೇಸೀ ಕಾಫಿ ಕೃಷಿಕರು ತಮ್ಮ ಕಾಫಿ ತೋಟಗಳಿಗೆ ನೆರಳಿಗಾಗಿ ಹಾಲವಾಣದ ಗಿಡಗಳನ್ನು ನೆಟ್ಟರು. ಬ್ರಿಟೀಷರು ಬಿಟ್ಟು ಹೋದ ತರುವಾಯ ಸಿಲ್ವರ್, ಓಕ್ ಜೊತೆಗೆ ಇತರ ಕಾಡು ಮರಗಳನ್ನು ಉಳಿಸಿಕೊಂಡು ಬೇಗ ಬೆಳೆದು ನೆರಳು ಕೊಡುವ ಮತ್ತು ಸಾರಜನಕ ಸ್ಥಿರೀಕರಿಸುವ ಹಾಲವಾಣದ ಗಿಡಗಳಿಗೆ ಆದ್ಯತೆ ನೀಡಿದರು.

ವಾರ್ಷಿಕ ಸರಾಸರಿ ೮೫೦ ಮಿ.ಮೀಟರ್ ಮಳೆ ಬೀಳುವ ಅಳಂದ, ಬಾಲ್ಕಿ, ಬಸವಕಲ್ಯಾಣ, ಬೀದರ್, ಚಿಂಚೋಳಿ, ಹುಮ್ನಾಬಾದ್, ಔರಾದ್ ಪ್ರದೇಶಗಳಲ್ಲಿ ಅಡಿಕೆ ಹೊರತುಪಡಿಸಿದ ತೋಟ ವೈವಿಧ್ಯತೆಗಳಿದ್ದವು. ಇಲ್ಲಿ ಗೇರು ಕೂಡ ಬೆಳೆಯುತ್ತಿದ್ದರು. ತೆಂಗು, ಬಾಳೆ, ಮಾವು, ಸೀಬೆ, ದ್ರಾಕ್ಷಿ, ಪಪ್ಪಾಯ, ನಿಂಬೆ, ನುಗ್ಗೆ ಇಲ್ಲಿನ ಮುಖ್ಯ ಬೆಳೆಗಳು. ಮಳೆಯಾಶ್ರಿತ ಹೊಲಗಳ ತೋಟಗಾರಿಕೆ ಇಲ್ಲಿನವರ ಹೆಚ್ಚುಗಾರಿಕೆ. ಇನ್ನುಳಿದಂತೆ ಹೊಲ-ಗದ್ದೆಗಳು ಕೂಡ ಅಪೂರ್ವ ವೈವಿಧ್ಯಮಯ ಬೆಳೆಗಳ ಆಗರವಾಗಿದ್ದವು. ತೊಗರಿ, ಉದ್ದು, ಹೆಸರು, ಅವರೆ, ಅಲಸಂದೆ, ಹುರುಳಿ, ಕಡಲೆ, ಶೇಂಗಾ, ಸೂರ್ಯಕಾಂತಿ, ಕುಸುಬೆ, ಯಳ್ಳು, ಅಗಸೆ, ಹುಚ್ಚೆಳ್ಳು, ಭತ್ತ, ಜೋಳ, ಗೋಧಿ, ಸಜ್ಜೆ, ನವಣೆ, ಕಬ್ಬು, ಆಲುಗಡ್ಡೆ, ಟಮೋಟೊ, ಬದನೆ, ಹುರುಳಿಕಾಯಿ, ಈರುಳ್ಳಿ, ಬೆಳ್ಳುಳ್ಳಿ.....ಹೀಗೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ಕರಾವಳಿ ಭಾಗದಲ್ಲಿ ಗೇರು ಸ್ವಾಭಾವಿಕ ಬೆಳೆ, ಹೆಚ್ಚು ನೀರು ಬಸಿದು ಹೋಗುವ ಲ್ಯಾಟರೈಟ್ ಮಣ್ಣಿಗೆ ಗೇರು ನೈಸರ್ಗಿಕವಾಗಿ ಒಗ್ಗಿ ಹೋಗಿರುವ ಬೆಳೆ. ಸ್ವಾಭಾವಿಕ ರೋಗ ನಿರೋಧಕ ಶಕ್ತಿಯಿರುವ ಗೇರು ವನಗಳಿಗೆ ಸಾಂಪ್ರದಾಯಿಕ ಕೃಷಿಯ ರೈತರು ಯಾವ ಬಗೆಯ ಮುತುವರ್ಜಿಯನ್ನು ವಹಿಸಿರಲಿಲ್ಲ. ಗೇರು ಮುಖ್ಯ ಆಹಾರ ಬೆಳೆ ಆಗಿರಲಿಲ್ಲ. ಆದರೆ ಅದು ಬ್ರಿಟೀಷಕರಿಗೆ 'ಕ್ಯಾಷ್-ಕ್ರಾಪ್' ಶ್ರೀಮಂತ ಬೆಳೆ ಆಗಿತ್ತು. ನಮ್ಮ ಸಾಂಪ್ರದಾಯಿಕ ಕೃಷಿಕರು ಅದರ ವಾಣಿಜ್ಯ ಮಹತ್ವವನ್ನು ಅರಿಯದವರಾಗಿದ್ದರು. ಬ್ರಿಟೀಷರು ಗೇರು ವನಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಆದರೆ ಗೇರು ಸಂರಕ್ಷಣೆಗೆ ವಿಷಗಳನ್ನು ಸಿಂಪಡಿಸುವ ಕಾರ್ಯಸೂಚಿ ಅವರಲ್ಲಿ ಇರಲಿಲ್ಲ. ಆಧುನಿಕ ಬೇಸಾಯ ಕ್ರಮ ಮತ್ತು ನಮ್ಮ ಕೃಷಿ ವಿಶ್ವ ವಿದ್ಯಾನಿಲಯಗಳ ಶಿಫಾರಸ್ಸಿಗನುಗುಣವಾಗಿ ಅನಗತ್ಯ ವಿಷಗಳಲ್ಲಿ ನಮ್ಮ ಗೇರು ವನಗಳು ತೊಯ್ಯಬೇಕಾಯಿತು. ಹೀಗಾಗಿ ಕರಾವಳಿ ಜಿಲ್ಲೆಯ ವಿಶಾಲ ಗೇರು ವನಗಳು ಮತ್ತು ಕಾಸರಗೋಡಿನ ಗೇರು ವನಗಳ ಪ್ರದೇಶದ ಜನ-ಜಾನುವಾರು ಪರಿಸರ ವಿಷದ ಪರಿಣಾಮಗಳನ್ನು ಅನುಭವಿಸಬೇಕಾಯಿತು.

ಕರಾವಳಿ ಪ್ರದೇಶದ ಮುಖ್ಯ ತೋಟಗಾರಿಕಾ ಬೆಳೆಗಳು ತೆಂಗು, ಅಡಿಕೆ, ಬಾಳೆ, ಕೋಕೋ, ರಬ್ಬರ್ ಮತ್ತು ಗೇರು. ಗೇರನ್ನು ಹೊರತುಪಡಿಸಿ ಇತರ ತೋಟಗಳಲ್ಲಿ ಹೊದಿಕೆಯ ಬೆಳೆಯಾಗಿ ಕೆಸವಿನಗಡ್ಡೆ, ಸುವರ್ಣಗಡ್ಡೆ, ಮಂಗಳೂರು ಸೌತೆ, ತೊಂಡೆಕಾಯಿ, ಬೂದುಗುಂಬಳ, ಕುಂಬಳ, ಸಿಹಿಗೆಣಸು, ಮೆಣಸು, ಚೊಟ್ಟು ಇತ್ಯಾದಿ ಬೆಳೆಗಳಿರುತ್ತಿದ್ದವು. ನೈಸರ್ಗಿಕ ಬೀಜ ಪ್ರಸರಣದಿಂದಾಗಿ ಕಾಡು ಜಾತಿಯ ಅನೇಕ ಮರಗಳು ಇಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದವು. ಕಾಡು ಜಾತಿಯ ವೈವಿಧ್ಯಮಯ ಮಾವು, ಅಮಟೆಕಾಯಿ, ಹುಣಸೆ, ತಾಳೆ ಮತ್ತು ತಾಳೆ ಜಾತಿಯ ಬಿದಿರು ಹಿಂಡಿಲುಗಳು ಕೂಡ ಇಲ್ಲಿ ಸ್ವಾಭಾವಿಕ. ನೇಂದ್ರ, ಪುಟ್ಟಬಾಳೆ, ಮರಬಾಳೆ, ಬೂದುಬಾಳೆ ಸೇರಿದಂತೆ ಅನೇಕ ಬಗೆಯ ಸ್ಥಳೀಯ ಬಾಳೆಗಳು ತೋಟದಲ್ಲಿ ಜಾಗ ಪಡೆಯುತ್ತಿದ್ದವು.

ಬಹು ಬೆಳೆಯಲ್ಲಿ ದೇಸೀ ಕೃಷಿಕರ ವಿಜ್ಞಾನ

ಮಳೆ ಆಶ್ರಯದಲ್ಲಿ, ಹೊಲಗಳಲ್ಲಿ ತೋಟ ಮಾಡುವ ಪ್ರದೇಶಗಳನ್ನು ನಮ್ಮ ಜನ ಖುಷ್ಕಿ ಬಾಗಾಯ್ತು ಎನ್ನುತ್ತಿದ್ದರು. ಮಳೆಯ ಅಭಾವದಲ್ಲಿ, ಬರಗಾಲದಲ್ಲಿ ಹೆಚ್ಚು ಬಿಸಿಲು ತಾಳದ ಗಿಡಗಳು ಕಮರಿ ಹೋಗುತ್ತಿದ್ದವು. ಉದಾಹರಣೆಗೆ ಬಾಳೆ, ಪಪ್ಪಾಯ, ಅಡಿಕೆ, ನುಗ್ಗೆ ಇತ್ಯಾದಿ. ಖುಷ್ಕಿ ಬಾಗಾಯ್ತುವಿನಲ್ಲಿ ಕರ್ನಾಟಕದ ಎಲ್ಲೆಡೆ ಸಾಮಾನ್ಯವಾಗಿ ಮಾವು, ನೇರಳೆ, ಸೀತಾಫಲ ಇತ್ಯಾದಿ ಹಣ್ಣಿನ ಮರಗಿಡಗಳೊಂದಿಗೆ ಹೊಂಗೆ, ಬೇವು ಇತ್ಯಾದಿ ಬಳಕೆಯ ಮರಗಳನ್ನು ಹೆಚ್ಚು ಬೆಳೆಯುತ್ತಿದ್ದರು. ತನುವಾದ ಭೂಮಿಗಳು, ಬಾವಿಗಳು ಮತ್ತು ನೀರಾವರಿ ಮೂಲ ಇರುವೆಡೆಗಳಲ್ಲಿ ವರ್ಷಪೂರ್ತಿ ಫಲ ನೀಡುವ ವೈವಿಧ್ಯಮಯ ಬೆಳೆಗಳಿಗೆ ಒತ್ತು ನೀಡುತ್ತಿದ್ದರು. ಅಂದಿನ ತೋಟಗಳ ವಿನ್ಯಾಸಗಳು ಇಂದಿನ ಅಗ್ರಿ ಇಂಜಿನಿಯರಿಂಗ್‌ಗೆ ಮಾದರಿ ಪಾಠಗಳು. ದೇಸೀ ಜ್ಞಾನ ಕೌಶಲ್ಯಗಳು ಯಾವ ದೃಷ್ಟಿಯಿಂದ ಗಮನಿಸಿದರು ಪಕ್ಕಾ ವೈಜ್ಞಾನಿಕತೆಯನ್ನೆ ಮೈಗೂಡಿಸಿಕೊಂಡಿದ್ದರು ಎಂಬುದನ್ನು ಈ ಕೆಳಕಂಡ ವಿಶ್ಲೇಷಣೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಬಹುವಿಧದ ಬೆಳೆಯ ಸಂದರ್ಭದಲ್ಲಿ ನಮ್ಮ ಸಾಂಪ್ರದಾಯಿಕ ಕೃಷಿಕರು ಅಡಿಕೆಯ ಕೆಳಗೆ ಬಾಳೆಯ ಗಿಡ ನೆಡುತ್ತಿದ್ದರು. ಅಡಿಕೆಯ ತೋಟದಲ್ಲಿ ಅಲ್ಲಲ್ಲಿ ಹಾಲವಾಣ ಮತ್ತು ನುಗ್ಗೆ ಗಿಡಗಳನ್ನು ಕೂಡ ನೆಡುತ್ತಿದ್ದರು. ಬಾಳೆ ಗಿಡ, ನೆರಳು ಮತ್ತು ಬೆಳಕಿನ ವಿನ್ಯಾಸದಲ್ಲಿ ಸಮೃದ್ಧವಾಗಿ ಬೆಳೆಯುವ ಬೆಳೆ, ಬಿಸಿಲು ಹೆಚ್ಚು ಇರುವ ಪರಿಸರದಲ್ಲಿ ಬಾಳೆ ಸಮೃದ್ಧಿಯಾಗಿ ಬೆಳೆಯದು. ಬಿಸಿಲಲ್ಲಿ ಬೆಳೆಯುವ ಬಾಳೆ ಬೆಳಗ್ಗಿನ ೯ ಗಂಟೆಯ ನಂತರದ ಸಂಜೆ ೫ ಗಂಟೆ ಒಳಗಿನ ಬಿಸಿಲನ್ನು ಸಹನೆ ಮಾಡಿಕೊಳ್ಳಲಾರದು. ಈ ಹಿಂದೆ ಸಸ್ಯಗಳ ಹಸಿರುಗೆ ಹರಿತ್‌ದ್ರವ್ಯ ಕಾರಣ ಎಂದು ಹೇಳಲಾಗಿದೆ. ಎಲೆಗಳು ಧ್ಯುತಿಸಂಶ್ಲೇಷಣಾ ಕಾರ್ಯದ ಮೂಲಕ ಆಹಾರ ತಯಾರಿಸುತ್ತವೆ.

ಮರ–ಗಿಡಗಳ ಬೆಳವಣಿಗೆಯಲ್ಲಿ ಬಿಸಿಲಿನ ಪಾತ್ರ ಬಹಳ ಮಹತ್ವದ್ದು. ಸೂರ್ಯನ ಸೌಮ್ಯತೆ, ಪ್ರಖರತೆಗಳನ್ನಾಧರಿಸಿ ನಮ್ಮ ಹಿರೀಕರು ಬೆಳೆಗಳನ್ನು ನಿರ್ಧರಿಸುತ್ತಿದ್ದರು. ಈಗಿನ ವಿಜ್ಞಾನ ಬೆಳಕಿನ ಪ್ರಖರತೆಯನ್ನು ಫೂಟ್ ಕ್ಯಾಂಡಲ್ ಮೂಲಕ ಅಳೆಯುತ್ತದೆ. ಫೂಟ್ ಕ್ಯಾಂಡಲ್ ಎಂದರೆ, ಒಂದು ಮೇಣದ ಬತ್ತಿಯನ್ನು ಹಚ್ಚಿಟ್ಟರೆ, ಆ ಮೇಣದ ಬತ್ತಿಯ ಸುತ್ತಲ ಒಂದು ಅಡಿ ವ್ಯಾಪ್ತಿಯ ಬೆಳಕಿನ ಪ್ರಖರತೆಗೆ ಒಂದು ಫೂಟ್ ಕ್ಯಾಂಡಲ್ (ft) ಎಂದು ಕರೆಯಲಾಗುತ್ತದೆ. ನಮ್ಮ ರಾಜ್ಯದ ನಡು ಮಧ್ಯಾಹ್ನದ ಬೆಳಕಿನ ಪ್ರಖರತೆ ಸುಮಾರು ೧೦,೦೦೦ ಫೂಟ್ ಕ್ಯಾಂಡಲ್‌ನಿಂದ ೧೨ ಸಾವಿರ ಫೂಟ್ ಕ್ಯಾಂಡಲ್‌ವರೆಗೆ ಇರುತ್ತದೆ. ಮಳೆಗಾಲದಲ್ಲಿ ಸರಾಸರಿ ೭೦೦೦ ಫೂಟ್ ಕ್ಯಾಂಡಲ್ ಬೆಳಕಿನ ಪ್ರಖರತೆ ಇರುತ್ತದೆ. ಇಲ್ಲಿ ೧೨೦೦೦ ಫೂಟ್ ಕ್ಯಾಂಡಲ್ ಎಂದರೆ ೧೨ ಸಾವಿರ ಮೇಣದ ಬತ್ತಿಗಳನ್ನು ಒಂದೇ ಬಾರಿಗೆ ಹಚ್ಚಿದಾಗ ಅದರ ಸುತ್ತಲ ಒಂದು ಅಡಿಯ ಬೆಳಕಿನ ಪ್ರಖರತೆ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಳಕಿನ ಪ್ರಖರತೆಗಳನ್ನು ಲೆಕ್ಕ ಹಾಕಬಹುದು. ಮುಂಜಾನೆ ಸೂರ್ಯನ ಬೆಳಕಿನ ಪ್ರಖರತೆ ೩೦೦೦ ಫೂಟ್‌ಕ್ಯಾಂಡಲ್ ಆಗಿರುತ್ತದೆ. ಬೆಳಗಿನ ೯ ಗಂಟೆ ಪ್ರಖರತೆ ೫೦೦೦ ಫೂಟ್ ಕ್ಯಾಂಡಲ್ ಆಗಿರುತ್ತದೆ. ಬಾಳೆ ಗಿಡಗಳಿಗೆ ೪೫೦೦ ಫೂಟ್ ಕ್ಯಾಂಡಲ್‌ವರೆಗೆ ಬೆಳಕು ಬೇಕಾಗುತ್ತದೆ. ಉಪ್ಪು ನೇರಳೆ ಗಿಡಕ್ಕೆ (ಮಲ್ಬರಿ, ರೇಷ್ಮೆ) ೪೭೦೦ ಫೂಟ್ ಕ್ಯಾಂಡಲ್ ಬೆಳಕು ಸಾಕು. ಶುಂಠಿ, ಅರಿಶಿಣ,

ಮೆಣಸಿನಕಾಯಿ, ಟಮೋಟೊ, ಕಾಳು ಮೆಣಸುಗಳಿಗೆ ೧೮೦೦ ಫೂಟ್ ಕ್ಯಾಂಡಲ್ ಬೆಳಕು ಸಾಕು. ವೆನಿಲಾ ಬೆಳೆಗೆ ೮೦೦ ಫೂಟ್ ಕ್ಯಾಂಡಲ್ ಸಾಕು. ವೈಜ್ಞಾನಿಕವಾಗಿ ನಿರ್ಧರಿಸುವ ಈ ಬೆಳಕಿನ ಲೆಕ್ಕಚಾರ ನಮ್ಮ ಹಿರೀಕರಿಗೆ ತಿಳಿದಿರಲಿಲ್ಲ. ಆದರೆ ಅವರ ಅನುಭವ ಮತ್ತು ತಿಳುವಳಿಕೆ ಅತ್ಯಂತ ವೈಜ್ಞಾನಿಕವಾಗಿ ಕೂಡಿತ್ತು ಎಂಬುದನ್ನು ಅವರ ಬೆಳೆಗಳ ವಿನ್ಯಾಸ ಕ್ರಮದಿಂದಲೆ ನಾವು ತಿಳಿಯಬಹುದು.

ಬಾಳೆಯ ತೋಟದಲ್ಲಿ ನೆರಳಿಗಾಗಿ ನುಗ್ಗೆ ಮತ್ತು ಹಾಲವಾಣ ನೆಡುತ್ತಿದ್ದರು. ನುಗ್ಗೆ ಮತ್ತು ಹಾಲವಾಣ ಗಿಡಗಳು ಬಾಳೆಗಿಂತ ವೇಗವಾಗಿ ಬೆಳೆಯುತ್ತಿದ್ದವು ಮತ್ತು ಬಾಳೆಗೆ ಬೇಕಾದ ಸಾರಜನಕವನ್ನು ನೈಸರ್ಗಿಕವಾಗಿ ಪೂರೈಸುತ್ತಿದ್ದವು. ನುಗ್ಗೆ ಮತ್ತು ಹಾಲವಾಣ (ಪಾರಿವಾಳದ ಗಿಡ) ಈ ಎರಡೂ ಗಿಡಗಳು ಸಾರಜನಕವನ್ನು ಸರಬರಾಜು ಮಾಡುತ್ತವೆ ಅನ್ನುವ ವೈಜ್ಞಾನಿಕ ಜ್ಞಾನ ನೂರಕ್ಕೆ ನೂರರಷ್ಟು ಅಂದಿನವರಿಗೆ ಇಲ್ಲದಿರಬಹುದು. ಆದರೆ ಬಾಳೆ ಬೆಳೆ ಚೆನ್ನಾಗಿ ಬರಲು ಹಾಲವಾಣ ಮತ್ತು ನುಗ್ಗೆ ಗಿಡಗಳನ್ನು ಬೆಳೆಸಬೇಕು ಎಂಬುದು ಚೆನ್ನಾಗಿ ಗೊತ್ತಿತ್ತು. ಅಂತೆಯೇ ಅಗಸೆಗಿಡ; ಈ ಗಿಡಕ್ಕೆ ವೀಳ್ಯದೆಲೆ ಹಂಬು ಹಬ್ಬಿಸಿದರೆ ಇಳುವರಿ ಹೆಚ್ಚು ಅನ್ನುವುದನ್ನು ಕಂಡುಕೊಂಡಿದ್ದರು. ಅಗಸೆಗಿಡ ಮತ್ತು ವೀಳ್ಯದೆಲೆ ಗಿಡಗಳು ಸಹಜೀವಿ ಮತ್ತು ಸ್ನೇಹಮಯಿ ಬೆಳೆಗಳು. ಈ ಎರಡನ್ನು ಒಂದುಗೂಡಿಸಿದ ಜ್ಞಾನ ಅತ್ಯಂತ ಅಪರೂಪದ್ದು ಮತ್ತು ಅತ್ಯಂತ ವಿಶೇಷವಾದದ್ದು ಕೂಡ. ತಕ್ಷಣವೇ ವೀಳ್ಯದೆಲೆ ಬೆಳೆಯಬೇಕು ಅನ್ನುವವರು; ತೆಂಗು, ಅಡಿಕೆ ತೋಟಗಳ ಆಸರೆಗೆ ಹೋಗಬೇಕಾಗಿರಲಿಲ್ಲ. ವೇಗವಾಗಿ, ಸರಳವಾಗಿ, ನೇರವಾಗಿ ಬೆಳೆಯುವ ಅಗಸೆ ಗಿಡಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅಗಸೆ ಗಿಡ ನೆಟ್ಟ ಒಂಭತ್ತು ತಿಂಗಳಿಗೆ ಹಿಂದಿನಿಂದ ವೀಳ್ಯದೆಲೆ ಹಂಬುಗಳನ್ನು ನಾಟಿ ಮಾಡುತ್ತಿದ್ದರು. ಅಗಸೆಯು ವೀಳ್ಯದೆಲೆ ಬೆಳೆಗೆ ಬೇಕಾದ ನೆರಳನ್ನು, ಬೆಳೆಯಲು ಬೇಕಾದ ಆಸರವನ್ನು ಮತ್ತು ಬೇರಿನ ಮೂಲಕ ಸಾರಜನಕವನ್ನು ನೀಡಿ ವೀಳ್ಯದೆಲೆಯನ್ನು ತಾಯಿಯಂತೆ ಸಲಹುತ್ತಿತ್ತು. ಇಷ್ಟೆಲ್ಲ ಆಸರೆ ಕೊಟ್ಟ ಅಗಸೆಗಿಡ ತಾನು ಮಾತ್ರ ಸ್ವಯಂ ತಾಯಿಯಂತೆ ಗೌಣವಾಗಿ ತೋಟಕ್ಕೆ ಮಾತ್ರ 'ವೀಳ್ಯದೆಲೆ ತೋಟ' ಎಂಬ ಹೆಸರು ಬರುಂತೆ ಸಾರ್ಥಕ ಕೆಲಸ ಮಾಡುತ್ತಿತ್ತು. ಕನ್ನಡ ನಾಡಿಗೆ ವೆನಿಲಾ ಬೆಳೆ ತೀರ ಇತ್ತೀಚಿನದು. ಸಾಂಪ್ರದಾಯಿಕ ಕೃಷಿ ಜ್ಞಾನವಿದ್ದ ಮಲೆನಾಡ ರೈತರು ವೆನಿಲಾ ಬೆಳೆಗೆ ಅಗಸೆ, ನುಗ್ಗೆ, ಹಾಲವಾಣ, ಗ್ಲಿರಿಸೀಡಿಯಾಗಳ ಸಾಂಗತ್ಯ ಕಲ್ಪಿಸಿ ತಮ್ಮ ಹಿರೀಕರ ಜ್ಞಾನ ಶ್ರೀಮಂತಿಕೆಯನ್ನೇ ಮೆರೆದರು. ಹೊರ ದೇಶಗಳಲ್ಲಿ ಕೆಮಿಕಲ್ ಫಾರ್ಮಿಂಗ್‌ನಲ್ಲಿ ಬೆಳೆಯುತ್ತಿದ್ದ ವೆನಿಲಾ ಇಲ್ಲಿ ದೇಸೀಯ ಜ್ಞಾನದ ನೆರವು ಪಡೆದು ಅಪ್ಪಟ ನೈಸರ್ಗಿಕವಾಗಿ ಬೆಳೆಯಿತು. ಇದರ ನಡುವೆ ವೆನಿಲಾ ಸ್ವಯಂ ಪರಾಗಸ್ಪರ್ಶದ ಬೆಳೆಯಲ್ಲ. ಒಂದೇ ಬಳ್ಳಿಯ ಎರಡು ಹೂಗಳನ್ನು ಹತ್ತಿರ ತಂದು ಪರಸ್ಪರ ಚುಂಬಿಸುವಂತೆ ಮಾಡಿ ಪರಾಗ ಸ್ಪರ್ಶ ಮಾಡಿಸುತ್ತಿದ್ದರು ಮಲೆನಾಡ ರೈತರು. ವಾಣಿಜ್ಯ ಮಾರುಕಟ್ಟೆಯಲ್ಲಿ ವೆನಿಲಾ ಬೆಳೆಗೆ ಬೆಲೆ ಬಿದ್ದು ಹೋದಾಗ ನಿಜಕ್ಕೂ ವೆನಿಲಾ ತಬ್ಬಲಿಯಾಯಿತು. ರೈತರಿಂದ ಸಂಪೂರ್ಣ ಕಡೆಗಣಿಸಲ್ಪಟ್ಟ ವೆನಿಲಾ ಬೆಳೆ; ಗಾಳಿ ಬೀಸುವಾಗಲೆಲ್ಲ ಲಾಸ್ಯವಾಡಿ ಹೂವುಗಳು ಢಿಕ್ಕಿ ಹೊಡೆದಾಗ ಪರಾಗಸ್ಪರ್ಶವಾಗಿ ಬಳ್ಳಿ ತುಂಬ ಬೀನ್ಸ್ ಹೊತ್ತು ಅಚ್ಚರಿ ಮೂಡಿಸುತ್ತಿತ್ತು.

ಹುಲ್ಲುಜಾತಿಯ ಸಸ್ಯಗಳಿಗೆ ಪೂರ್ಣ ಮಟ್ಟದ ಬೆಳಕು ಬೇಕು ಎಂಬುದು ಕೂಡ ನಮ್ಮ ಹಿರೀಕರ ವಿಧಾನಗಳಿಂದಲೇ ನಮಗೆ ತಿಳಿದುಬರುತ್ತದೆ. ಭತ್ತ, ರಾಗಿ, ಸಜ್ಜೆ,

ಜೋಳ, ನವಣೆ, ಗೋಧಿ, ಸಾಮೆ, ಹಾರಕ, ಊದಲು, ಬರಗು, ಕೊರಲೆ, ಕಬ್ಬು.....ಇವೆಲ್ಲವೂ ಹುಲ್ಲು ಜಾತಿಯ ಸಸ್ಯಗಳು. ಏಕದಳ ವರ್ಗದ ಬೆಳೆಗಳು ಇವು ನೆರಳಿನಲ್ಲಿ ಬೆಳೆದರೂ ಕೂಡ ಸಮೃದ್ಧವಾಗಿ ಬೆಳೆಯಲಾರವು ಮತ್ತು ಫಲ ಕಚ್ಚಲಾರವು. ಹೀಗಾಗಿಯೇ ಹೊಲದ ಬೆಳೆಗಳು, ನೀರಾವರಿ ಬೆಳೆಗಳು, ತೋಟದ ಬೆಳೆಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿಕೊಂಡಿದ್ದರು. ನಿಯಂತ್ರಿತ ನೀರಿರುವೆಡೆ ಎಲ್ಲ ಬಗೆಯ ಬೆಳೆಗಳನ್ನು ಬೆಳೆಯಬಹುದು. ಆದರೆ ಅನಿಯಂತ್ರಿತ ನೀರು/ ವಸ್ತಿ ಇರುವೆಡೆ ಗದ್ದೆಯನ್ನೇ ಮಾಡಬೇಕು ಎಂಬುದನ್ನು ಕೂಡ ಖಚಿತ ಮಾಡಿಕೊಂಡಿದ್ದರು. ಹೊಲಗಳಲ್ಲಿ ಹುಲ್ಲುಜಾತಿಯ ಧಾನ್ಯಗಳನ್ನು ಬೆಳೆಯುವ ಯೋಜನೆ ಇದ್ದಾಗ ಹೊಲದ ನಡುವೆ ಪಾತಿಗಳ ಮಧ್ಯೆ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಮರದ ಜಾತಿಯ ಗಿಡಗಳನ್ನು ಗಿಡವಾಗಿರುವಾಗಲೆ ಕಿತ್ತು ಹಾಕುತ್ತಿದ್ದರು. ಉತ್ತರ ಕರ್ನಾಟಕದ ಹೊಲಗಳು ಹೆಚ್ಚಿನ ಮರಗಳಿಂದ ಕೂಡಿರುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಸಾವಿರಾರು ಎಕರೆ ಬೋಳು ಒಣ ಜಮೀನುಗಳನ್ನು ಕಾಣಬಹುದು. ಈ ಬೋಳು ಜಮೀನುಗಳಲ್ಲಿ ಗಾಳಿಯ ವೇಗ ರಭಸವಿರುವ ಕಾರಣಕ್ಕಾಗಿ ಸಹಜವಾಗಿ ಬೆಳೆಯುವ ಮರದ ಗಿಡಗಳು ಉಳಿಯಲಾರವು. ಯತೇಚ್ಛ ಬಿಸಿಲಿನ ಕಾರಣವಾಗಿ ಹುಲ್ಲುಜಾತಿಯ ಧಾನ್ಯಗಳಲ್ಲಿ ಇಲ್ಲಿ ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದರು. ಹುಲ್ಲು ಜಾತಿಯ ಧಾನ್ಯದ ಗಿಡಗಳ ನಡುವೆ ಅಕ್ಕಡಿ ಸಾಲುಗಳಲ್ಲಿ ದ್ವಿದಳ ಧಾನ್ಯ ಬೆಳೆಯುವುದೂ ಕೂಡ ನಮ್ಮ ರೈತರ ಖಾಯಂ ಪದ್ಧತಿಯೇ ಆಗಿತ್ತು. ಇದರಿಂದಾಗಿ ಏಕದಳ ಧಾನ್ಯದ ಬೆಳೆಗೆ ನೈಟ್ರೋಜನ್ ದೊರೆಯುತ್ತಿತ್ತು ಮತ್ತು ಅವರೆ, ಅಲಸಂದೆ ಬೆಳೆಗಳಿಗೆ ಅಗತ್ಯವಾದ ನೆರಳು ಕೂಡ ಲಭಿಸುತ್ತಿತ್ತು. ಮಿಶ್ರ ಬೆಳೆಯ ಆವರಣದಲ್ಲಿ ರೋಗಗಳ ಬಾಧೆ ಇರುತ್ತಿರಲಿಲ್ಲ. ಹೊಲದ ಬೆಳೆಗಳಲ್ಲಿ ತೇವಾಂಶ ಜಾಸ್ತಿ ಇದ್ದಾಗ ರೋಗ ಕಾಣುವುದಿತ್ತಾದರೂ ಒಂದಲ್ಲ ಒಂದು ಬೆಳೆ ರೈತನ ಕೈ ಹಿಡಿಯುತ್ತಿದ್ದವು. ಮಿಶ್ರ ಬೆಳೆ ಪದ್ಧತಿಯಲ್ಲೂ ಕೀಟ ಬಾಧೆ ಸಾಮಾನ್ಯ. ಆದರೆ ಅವುಗಳ ಹತೋಟಿಗೆ ಮಿತ್ರ ಕೀಟಗಳಿರುತ್ತಿದ್ದವು. ಹೊಲಗಳಲ್ಲಿ ರಾಜ ಈರುಳ್ಳಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿಗಳನ್ನು ಕೂಡ ಬೆಳೆಯುತ್ತಿದ್ದರು. ಆದರೆ ಯಾವ ಬೆಳೆಯನ್ನು ಎಲ್ಲಿ ಹಾಕಬೇಕು, ಹೇಗೆ ಹಾಕಬೇಕು? ಎನ್ನುವುದರ ಪೂರ್ಣ ಜ್ಞಾನ ಅವರಲ್ಲಿತ್ತು.

"ಅಡಕೆ ತೇಲಿಸಿ ನೆಡು; ತೆಂಗು ಬಗೆದು ನೆಡು" ಎಂಬುದು ರೈತರ ಅನುಭವದ ಮಾತು. ನಿಂಬೆಹಣ್ಣು ಗಾತ್ರದ ಸಿಪ್ಪೆಸಹಿತದ ಅಡಕೆ ಬೀಜವನ್ನು ನರ್ಸರಿಯಲ್ಲಿ ಸಸಿ ಮಾಡಿ ಒಂದೂವರೆ ಅಡಿ ಆಳ; ಒಂದೂವರೆ ಅಡಿ ಅಗಲದ ಗುಂಡಿಗಳನ್ನು ತೋಡಿ ನೆಡುವ ಕ್ರಮ ಇಂದಿನದು. ಆದರೆ ನಲವತ್ತು ವರ್ಷದ ಹಿಂದಿನವರೆಗೂ ಅಡಕೆಯನ್ನು ಗುಂಡಿ ತೋಡದೆ ಬೆಳೆಸುತ್ತಿದ್ದರು. ಸಸಿ ಮಾಡಿ ನೆಡುವ ಅಗತ್ಯ ಕೂಡ ಇರಲಿಲ್ಲ. ಅಡಕೆ ನೆಡಲು ನಿರ್ಧಿಷ್ಟ ಮಾಡಿದ ಜಾಗದಲ್ಲಿ ಅದು ಮುಚ್ಚುವಷ್ಟು ಆಳದಲ್ಲಿ ಇಟ್ಟು ಮೇಲೆ ಮಣ್ಣು ಮತ್ತು ಗೊಬ್ಬರ ಹಾಕಿ ನೀರು ಹಾಕುತ್ತಿದ್ದರು. ೨೧ ದಿನಗಳ ತರುವಾಯ ಅಡಿಕೆ ಪೈರು ಕಾಣಿಸಿಕೊಳ್ಳುವ ಮುಂಚೆಯೆ ಅಡಿಕೆ ಬೆಳೆ ಪ್ರದೇಶಕ್ಕೆ ಸೂಕ್ತ ನೆರಳಿನ ವ್ಯವಸ್ಥೆ ಮತ್ತು ಗಾಳಿ ತಡೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಿದ್ದರು. ಸಸಿ ಮಡಿಯಲ್ಲಿ ವರ್ಷದವರೆಗೆ ಬೆಳೆಸಿ ಆನಂತರ ನೆಡುವಾಗಲೂ ಕೂಡ ಒಂದೂವರೆ ಅಡಿ ಆಳದ ಗುಂಡಿಯ ಅಗತ್ಯವಿರುವುದಿಲ್ಲ. ಅಡಿಕೆ ಬೇರು ಎಷ್ಟು ಉದ್ದ ಬೆಳೆದಿರುತ್ತದೊ ಅಷ್ಟು ಉದ್ದದ ಗುಂಡಿ ತೋಡಿದರೆ ಸಾಕು.

ತೆಂಗಿನ ಸಸಿ ನೆಡುವವರು ಈಗ ೩ ಅಡಿ ಆಳ ೩ ಅಡಿ ಅಗಲದ ಗುಂಡಿಗಳನ್ನು ತೋಡಿ ನೆಡುತ್ತಾರೆ. ಇಷ್ಟು ದೊಡ್ಡ ಗುಂಡಿಯ ಅಗತ್ಯವಿರುವುದಿಲ್ಲ. ಆಳವಾದ ಗುಂಡಿಗಳನ್ನು ತೋಡಿ ತೆಂಗು ಮತ್ತು ಅಡಿಕೆ ಸಸಿಗಳನ್ನು ನೆಟ್ಟರೆ; ಬೇರುಗಳಿಗೆ ಗಾಳಿ ತಟ್ಟುವುದು ಕಷ್ಟ ಗಿಡಗಳ ಕುತ್ತಿಗೆ ಹಿಸುಕಿದಂತೆ ಅವುಗಳ ಬೆಳವಣಿಗೆ ನಿಧಾನವಾಗುತ್ತದೆ ಮತ್ತು ಅವುಗಳ ಸಮಸ್ತ ಚೈತನ್ಯವೂ ಗುಂಡಿಯಿಂದ ಹೊರ ಬರಲು ವಿನಿಯೋಗವಾಗುತ್ತಿರುತ್ತದೆ. ನಮ್ಮ ಸಾಂಪ್ರದಾಯಿಕ ಕೃಷಿಯ ರೈತರು ನೇರವಾಗಿ ನಿಸರ್ಗದಿಂದಲೇ ಪಾಠ ಕಲಿತವರಾದ್ದರಿಂದ ಅಡಿಕೆ, ತೆಂಗು, ಬಾಳೆ ಮುಂತಾದ ಗಿಡಗಳನ್ನು ಆಳದ ಗುಂಡಿ ತೆಗೆದು ನೆಡುತ್ತಿರಲಿಲ್ಲ. ಸ್ವಯಂ ನಿಸರ್ಗದಲ್ಲೆ ಎಂಥ ಹೆಮ್ಮರವಾಗಿ ಬೆಳೆಯುವ ಗಿಡಗಳಿಗೂ ಗುಂಡಿ ತೋಡಿ ನೆಡುವ ವ್ಯವಸ್ಥೆ ಇರಲಿಲ್ಲ. ಬದಲಾಗಿ ಬೀಜ ಬಿದ್ದಲ್ಲೇ ತಳವೂರಿ ಹದ ಬಂದಾಗ ಬೇರು ಬಿಟ್ಟು ಮೊಳಕೆ ಒಡೆಯುತ್ತಿತ್ತು. ಹೀಗಾಗಿಯೇ ನಿಸರ್ಗ ಅರಿತು ಬೇಸಾಯ ಮಾಡುತ್ತಿದ್ದವರು "ಅಡಿಕೆಯನ್ನು ತೇಲಿಸಿ ನೆಡು; ತೆಂಗನ್ನು ಬಗೆದು ನೆಡು" ಎಂದು ಮಾರ್ಗದರ್ಶನ ಮಾಡಿದ್ದು.

ಬೆಳೆಗಳು ಪರಸ್ಪರ ಪೂರಕವಾಗಿ ವರ್ತಿಸುವ ರೀತಿಯನ್ನು ನಮ್ಮ ಹಿರೀಕರು ಕಂಡುಕೊಂಡಿದ್ದರು. ಪರಿಸರದ ಕೊಡು-ಕೊಳ್ಳುವ ಸ್ವಭಾವವನ್ನು ಬೆಳೆಯೊಳಗೆ ಸಂಯೋಜಿಸಿ ಯಶಸ್ವಿಯಾಗಿದ್ದರ ಪರಿಣಾಮವಾಗಿ ಸಹಜೀವನ ನಡೆಸುವ ಬೆಳೆಗಳ ಆಯೋಜನೆ ರೂಢಿಗೆ ಬಂದಿತು. ಬೆಳೆಗಳೊಂದಿಗೆ ಕೀಟಗಳು, ರೋಗಗಳು, ಹಕ್ಕಿ, ಪಕ್ಷಿಗಳು ಎಲ್ಲವೂ ಇದ್ದ ಒಂದು ಸಮೃದ್ಧ ಬೇಸಾಯ ಸಂಸ್ಕೃತಿ ನಮ್ಮ ಹಿರೀಕರದ್ದಾಗಿತ್ತು.

ಕಳೆಗಳೊಂದಿಗೆ ಬೆಳೆ:

ಕಳೆಗಳು ರೈತರಿಗೆ ಎಂದೂ ಶತ್ರುವಾಗಿರಲಿಲ್ಲ. ಏಕಬೆಳೆ ಪದ್ಧತಿ ಮತ್ತು ವಾಣಿಜ್ಯ ಪ್ರಧಾನ ಆಲೋಚನೆಗಳು ಶುರುವಾದ ಮೇಲೆಯೆ ರೈತ ಕಳೆ ನಾಶಕ ವಿಷಗಳಿಗೆ ಮೊರೆ ಹೋದದ್ದು; ಸ್ವತ: ರೈತನೇ ಈ ಕಳೆನಾಶಕಗಳನ್ನು ಅನ್ವೇಷಿಸಿದವನಲ್ಲ. ಅದರ ಅಗತ್ಯವನ್ನು ಆತ ಮನಗಂಡಿರಲಿಲ್ಲ. ಆದರೆ ನಮ್ಮ ದೇಶದ ವಿಜ್ಞಾನಿಗಳು ತಮ್ಮ ರೈತಪರ ಕಾಳಜಿಯ ಕಾರಣವಾಗಿ ರೈತರಿಗಾಗಿ ನೀಡಿದ ವಿಶೇಷ ಬಳುವಳಿ ಈ ಕಳೆನಾಶಕ ವಿಷಗಳು. ನಮ್ಮ ಹಿಂದಿನ ರೈತರುಗಳು ಹೊಲಗಳಲ್ಲಿ ಬೆಳೆಯುವ ಗರಿಕೆಯನ್ನು ಜಯಿಸಲು ಬಹಳವಾಗಿ ದೇಹ ದಂಡಿಸಿದ್ದರು. ಉಳುವ ಎತ್ತುಗಳು ಕೂಡ ದಣಿದಿದ್ದವು. ಗರಿಕೆಯ ಮಹಿಮೆ ನಮ್ಮ ರೈತರಿಗೆ ತಿಳಿದಿತ್ತು. ಅದು ಹಸಿರು ಮೇವಾಗಿ ದನಕರುಗಳಿಗೆ ಅತ್ಯಂತ ಉತ್ಕೃಷ್ಟ ಬರಗಾಲದಲ್ಲೂ ಎಂಥ ಕಠಿಣ ಸಂದರ್ಭಗಳಲ್ಲೂ ಅದು ತಲೆ ಎತ್ತಿ ಹಸಿರುದುಂಬಿ ಬರುತ್ತಿತ್ತು. ಗರಿಕೆಯನ್ನು ನಮ್ಮ ರೈತರು ಪೂಜಿಸುತ್ತಿದ್ದರು ಕೂಡ. ದರ್ಬೆ ಅನಾದಿ ಕಾಲದಿಂದಲೂ ಹುಲ್ಲುಗಳ ರಾಜನಾಗಿಯೆ ಕಂಗೊಳಿಸಿದೆ.

ಕಡೆಗೂ ನಮ್ಮ ರೈತರು ದರ್ಬೆಯನ್ನು ಮಣಿಸುವುದನ್ನು ಕಲಿತರು. ಹೆಚ್ಚು ಬಿಸಿಲು ಬೇಡುವ ದರ್ಬೆ; ಬಿಸಿಲು ತಪ್ಪಿಸಿದರೆ ಕುಸಿಯುತ್ತದೆ. ಹಿಂದೆ ದರ್ಬೆ ಮಣಿಸಲೆಂದೇ ಗದ್ದೆಗಳಿಗೆ ಹೆಚ್ಚು ನೀರು ಕಟ್ಟುತ್ತಿದ್ದರು, ಭತ್ತದ ಪೈರುಗಳನ್ನು ನಾಟಿ ಮಾಡುವಾಗ ಒತ್ತೊತ್ತಾಗಿ ನೆಡುತ್ತಿದ್ದರು. ಗದ್ದೆ ಬೆಳೆದು ನೆರಳುಗಟ್ಟಿದ ಮೇಲೆ ನೀರು

ತಪ್ಪಿಸುತ್ತಿದ್ದರು. ಗರಿಕೆ ನಿರ್ವಹಣೆ ಮತ್ತು ಕಳೆ ನಿರ್ವಹಣೆಯಲ್ಲಿ ಸಾಂಪ್ರದಾಯಿಕ ಕೃಷಿಕರು ಅನುಸರಿಸುತ್ತಿದ್ದ ಅತ್ಯುತ್ಕೃಷ್ಟ ತಂತ್ರಜ್ಞಾನವಿದು. ಆದರೆ ಈಗ ಗರಿಕೆ ಇಲ್ಲದಿದ್ದರೂ ಭತ್ತದ ಗದ್ದೆಗಳಿಗೆ ಅನಾವಶ್ಯಕವಾಗಿ ನೀರು ಕಟ್ಟಿ ತುಂಬಿಸಿಡುತ್ತಾರೆ. ವಾಸ್ತವವಾಗಿ ಇದು ಅಜ್ಞಾನ ಮತ್ತು ಮೂಢನಂಬಿಕೆ. ಓದು ಬಾರದವರನ್ನು ಅನಕ್ಷರಸ್ಥರು, ಮೂಢರು ಎಂದೆಲ್ಲ ಇಂದಿನವರು ಜರೆಯುತ್ತಾರೆ. ಆದರೆ ಅಂದಿನವರ ವೈಜ್ಞಾನಿಕ ಮನೋಭಾವ ಇಂದಿನ ಅಕ್ಷರಸ್ಥ ಕೃಷಿಕರಲ್ಲಿ ಗೈರುಹಾಜರಾಗಿದೆ. ಗದ್ದೆಗಳಲ್ಲಿ ನೀರು ತುಂಬಿ; ನೆರಳುಗಟ್ಟಿದ ಮೇಲೆ ನೀರು ಬಸಿದು ಗರಿಕೆ ಮತ್ತು ಇತರ ಕಳೆಗಳನ್ನು ನಿಯಂತ್ರಿಸಿದರೆ; ಹೊಲಗಳಲ್ಲಿ ಅವರ ಜಾಣ್ಮೆ ಬಹು ಬೆಳೆ ಮತ್ತು ಸಹಜೀವಿ ಬೆಳೆಗಳ ಸಂಯೋಜನೆಗೆ ದಾರಿ ಮಾಡಿಕೊಟ್ಟಿತು.

ಹೆಚ್ಚು ಗರಿಕೆಯಿರುವ ಹೊಲಗಳನ್ನು ಬೇಸಿಗೆಯಲ್ಲೂ ಉಳುಮೆ ಮಾಡುತ್ತಿದ್ದರು. ಗರಿಕೆಯಿಲ್ಲದ ಹೊಲಗಳನ್ನು ಫಸಲು ಕೊಯ್ದು ನಂತರ ದನ–ಕರು, ಆಡು–ಕುರಿಗಳ ಚಿಗುರು ಮೇವಿಗಾಗಿ ಉಳದೆ ಉಳಿಸಿಕೊಳ್ಳುತ್ತಿದ್ದರು. ಚಳಿಗಾಲದ ಇಬ್ಬನಿಯಲ್ಲಿ ಕೂಳೆಗಳು ಚಿಗುರಿ ಬೇಸಿಗೆಯಲ್ಲಿ ದನಕರುಗಳಿಗೆ ಎರಡನೇ ಸುತ್ತಿನ ಹಸಿರು ಮೇವು ಸಿಗುತ್ತಿತ್ತು. ಪೂರ್ವ ಮುಂಗಾರಿನಲ್ಲಿ ಗರಿಕೆ ಇರುವ ಹೊಲಗಳನ್ನು ಮತ್ತೊಮ್ಮೆ ಉತ್ತು ಹುರುಳಿ ಜೊತೆಗೆ ಒತ್ತೊತ್ತಾಗಿ ಮೇವಿನ ಜೋಳ ಚೆಲ್ಲುತ್ತಿದ್ದರು. ಹುರುಳಿ ನೆಲಕ್ಕೆ ಹೊದಿಕೆಯಾಗಿಯೂ ಬೆಳೆದ ಜೋಳದ ಜೊತೆ ಸುರುಳಿ ಸುತ್ತಿಕೊಂಡು ಬಿಸಿಲಿಗಾಗಿ ಪೈಪೋಟಿ ನೀಡುತ್ತಿತ್ತು. ಬಿಸಿಲು ಸಾಲದ ಗರಿಕೆ ಬೆಳ್ಳಗೆ ಬಿಳಿಚಿಕೊಂಡು ನೆಲ ಹಿಡಿಯುತ್ತಿತ್ತು.

ಪೂರ್ವ ಮುಂಗಾರಿನಲ್ಲಿ ಗದ್ದೆ–ಹೊಲಗಳಿಗೆ ಡಯಂಚ (ಸೆಣಬು) ಚಗಚೆ ಗಿಡದ ಬೀಜಗಳನ್ನು ಒತ್ತೊತ್ತಾಗಿ ಚೆಲ್ಲಿ ಗರಿಕೆ ನಿಯಂತ್ರಿಸುತ್ತಿದ್ದರು. ಚಗಚೆ ಮತ್ತು ಅಕ್ಕಸೆಣಬು ಬೆಳೆಗಳು ಹೊಲ ಗದ್ದೆಗಳನ್ನು ಕತ್ತಲು ಗಟ್ಟಿಸುತ್ತಿದ್ದವು. ಗರಿಕೆ ಸೇರಿ ಇತರ ಯಾವ ಕಳೆಯು ಅಲ್ಲಿ ತಲೆ ಎತ್ತಲು ಆಗುತ್ತಿರಲಿಲ್ಲ. ಡಯಂಚ ಮತ್ತು ಚಗಚೆ ಗಿಡಗಳು ತಾವು ಬೆಳೆದಲ್ಲಿ ಹೇರಳವಾಗಿ ಸಾರಜನಕ ಸ್ಥಿರೀಕರಿಸುತ್ತಿದ್ದವು ಮತ್ತು ಮುಂದಿನ ದಿನಗಳಲ್ಲಿ ಗದ್ದೆ ಮಾಡಿದರೆ –ಕೆಸರು ಗದ್ದೆಗೆ ಹಸಿರೆಲೆ ಗೊಬ್ಬರವಾಗಿ ಲಭ್ಯವಾಗುತ್ತಿದ್ದವು. ಯಳ್ಳು, ಹುಚ್ಚೆಳ್ಳು, ಬೆಳೆಗಳನ್ನೂ ಕೂಡ ಅತೀವ ಕಳೆ ನಿಯಂತ್ರಣದ ಸಂದರ್ಭಗಳಲ್ಲಿ ಏಕ ಬೆಳೆಯಾಗಿ ಬೆಳೆದು ನೆಲವನ್ನು ಕತ್ತಲೆಗಟ್ಟಿಸಿ ಅದ್ಭುತವಾದ ಫಸಲು ಪಡೆಯುತ್ತಿದ್ದರು ಮತ್ತು ಮುಂದಿನ ಬೆಳೆಗೆ ಸಾರಜನಕವನ್ನು ದೊರಕಿಸಿಕೊಳ್ಳುತ್ತಿದ್ದರು.

ಹೊಲದ ಮಿಶ್ರ ಬೆಳೆಯ ಸಂದರ್ಭದಲ್ಲೂ ಕಳೆಗಳು ಬರುತ್ತಿದ್ದವು. ಫಸಲಿಗೆ ಹಾನಿ ಎನಿಸುವ, ಫಸಲನ್ನು ಮೀರಿ ಬೆಳೆಯುವ ಕಳೆಗಿಡಗಳನ್ನು ಕಿತ್ತು ದನ ಕರುಗಳಿಗೆ ಮೇವಾಗಿಸುತ್ತಿದ್ದರು. ಪೈರು ಬೆಳವಣಿಗೆಯ ಹಂತದಲ್ಲಿ ಬರುವ ಪುಡಿಗಳೆಗಳನ್ನು ಕಳೆ ಕುಡಲು (ಕಳಾರಿ) ಗಳಿಂದ ಒರೆದು ತೆಗೆಯುತ್ತಿದ್ದರು. ಫಸಲು ಬೆಳೆದ ನಂತರ ಕಳೆಗಳ ಕುರಿತು ಗಮನ ಹರಿಸುವ ಅಗತ್ಯ ಕಂಡುಬರುತ್ತಿಲಿಲ್ಲ. ಹೊಲಗಳಲ್ಲಿ ಬರುತ್ತಿದ್ದ ಮುಖ್ಯ ಕಳೆಗಳು ಕೊನ್ನಾರಿ, ಕನ್ನೆಗಿಡ, ತುಂಬೆಗಿಡ, ನೆಗ್ಗಿಲು ಮುಳ್ಳಿನ ಗಿಡ, ನೆಲದಲ್ಲೆ ಹಬ್ಬುವ ಮುಳ್ಳಿನ ಗಿಡಗಳು ಮತ್ತು ಅನೇಕ ಜಾತಿಯ ಮೂಲಿಕೆ ವಿಧದ ಕಳೆಗಳು ಸಾಮಾನ್ಯವಾಗಿ ಬರುತ್ತಿದ್ದವು. ಮಳೆ ಹೆಚ್ಚಾದಾಗ ಭೂಮಿಯಲ್ಲಿ ತೇವಾಂಶ ಜಾಸ್ತಿಯಾದಾಗ ಕೆಲವು

ಕಳೆಗಿಡಗಳು ಬರುತ್ತಿರಲಿಲ್ಲ. ಇನ್ನು ಕೆಲವು ಕಡ್ಡಾಯವಾಗಿ ಬರುತ್ತಿದ್ದವು. ಅವುಗಳಲ್ಲಿ ಪ್ರಮುಖವಾದದ್ದು ಕನ್ನೆಗಿಡ. ಈ ಕನ್ನೆಗಿಡ ತನ್ನ ದಂಟುಗಳಲ್ಲಿ ಮತ್ತು ಎಲೆಗಳಲ್ಲಿ ಪೂರ್ಣ ರಸ ತುಂಬಿಕೊಳ್ಳುತ್ತಿದ್ದವು. ಎಲೆಗಳು ಮಂದವಾಗಿರುತ್ತಿದ್ದವು. ವಿಶೇಷವಾಗಿ ತೇವಾಂಶ ಹೆಚ್ಚಾದಾಗ ಗಮನಕ್ಕೆ ಬರುವ ಇವು ಜಮೀನಿನಲ್ಲಿ ಅಧಿಕವಾಗಿರುವ ತೇವಾಂಶವನ್ನು ಹೀರಿ ವಾತಾವರಣಕ್ಕೆ ಸರಬರಾಜು ಮಾಡುತ್ತಿದ್ದವು. ನಮ್ಮ ಹಿಂದಿನ ರೈತರು ಇಂಥ ಸಂದರ್ಭಗಳಲ್ಲಿ ಈ ಕನ್ನೆಗಿಡಗಳನ್ನು ತೆಗೆಯದೆ ಹಾಗೆಯೇ ಉಳಿಸುತ್ತಿದ್ದರು. ಅಧಿಕ ಮಳೆ ಮತ್ತು ತೇವಾಂಶ ಹೆಚ್ಚು ಇಲ್ಲದಾಗ ಈ ಕಳೆಗಿಡ ಬೆಳೆಯುತ್ತಿರಲಿಲ್ಲ. ಒಂದೆರಡು ಹದದಲ್ಲೆ ಈ ಕಳೆಗಿಡ ಕಾಣಿಸಿಕೊಂಡರೆ ಈ ಬಾರಿ ಮಳೆ ಹೆಚ್ಚು ಎಂಬುದನ್ನು ನುರಿತ ರೈತರು ತಿಳಿಯುತ್ತಿದ್ದರು. ನಿಸರ್ಗ ಅರಿತವರಿಗೆ ಸುಭಿಕ್ಷದ/ ದುರ್ಭಿಕ್ಷದ ಸಂಕೇತಗಳನ್ನು ತಿಳಿಯುವುದು ತ್ರಾಸದಾಯಕ ಆಗಿರಲಿಲ್ಲ.

ವರ್ಷವೃಷ್ಠಿ ಮತ್ತು ಬರ ಈ ಎರಡನ್ನು ಮುನ್ಸೂಚನೆ ಮೂಲಕ ತಿಳಿಸುವ ವ್ಯವಸ್ಥೆ ನಿಸರ್ಗದಲ್ಲಿ ಎಂದಿನಿಂದಲೂ ಇದೆ. ಇಂದಿನ ವಿಜ್ಞಾನಿಗಳಿಗೆ/ ಅವರನ್ನು ನಂಬಿರುವ ರೈತರಿಗೆ ಇದು ತಿಳಿದಂತಿಲ್ಲ. ಅಧ್ಯಯನಕಾರ ಸ್ವತ: ಗಮನಿಸಿರುವ ಹಾಗೆ (ನಮ್ಮ ತೋಟದಲ್ಲಿ ತೇವಾಂಶ ಹೆಚ್ಚು ಮತ್ತು ಮಳೆಯೂ ಹೆಚ್ಚು ಅಂತ ಊಹಿಸಲು ಬಹಳ ಕಾಲ ಕಾಯಬೇಕಾಗಿಲ್ಲ; ನಾಲ್ಕೈದು ವರ್ಷದಿಂದ ಕಣ್ಮರೆಯಾಗಿದ್ದ ಕಳೆ ಗಿಡಗಳು – ತೋಟ ಕಾಡಿನಂತಿದ್ದು ನೆರಳೂ ಅಧಿಕವಾಗಿರುವಾಗಲೂ ಇದ್ದಕ್ಕಿದ್ದಂತೆ ಬೆಳೆಯಲು ಶುರುವಾಗುತ್ತವೆ. ಮೊದ ಮೊದಲು ಹೀಗೆ ಒಮ್ಮಿಂದೊಮ್ಮೆ ಅಪಾರ ಸಂಖ್ಯೆಯಲ್ಲಿ ಉದ್ಭವಿಸಿ ಬರುವ ಈ ಕಳೆಗಿಡಗಳ ಬಗೆಗೆ ಆಶ್ಚರ್ಯವಾಗುತ್ತಿತ್ತು. ಕ್ರಮೇಣ ಈ ಕಳೆಗಿಡಗಳು ಮಳೆ ಹೆಚ್ಚಾಗುವ, ಭೂಮಿಯಲ್ಲಿ ತೇವಾಂಶ ಹೆಚ್ಚಾಗುವ ವರ್ಷಗಳಲ್ಲಿ ಮಾತ್ರ ಬರುತ್ತವೆ ಮತ್ತು ಅಪಾರವಾಗಿ ರಸ ದುಂಬಿ ತೊಡೆಯವರೆಗೂ ಬೆಳೆಯುತ್ತವೆ. ಕ್ರಮೇಣ ಬಲಿತು ಹೂಬಿಟ್ಟು ನಿಂತಲ್ಲೆ ಕುಸಿಯುತ್ತವೆ. ಮೇ ತಿಂಗಳಲ್ಲಿ ಕಾಣಿಸಿಕೊಂಡ ಗಿಡಗಳು ಆಗಸ್ಟ್ ತಿಂಗಳೊಳಗೆ ಹೂ ಬಿಟ್ಟು ಬೀಜ ಬಲಿಸಿ ಭೂಮಿಗೆ ಹೊದಿಕೆಯಾಗಿ ಮಲಗಿ ಆಗಸ್ಟ್ ೩ನೇ ವಾರದಷ್ಟೊತ್ತಿಗೆ ಅವು ಅಲ್ಲಿ ಹುಟ್ಟಿ, ಬೆಳೆದು ಕಣ್ಮರೆಯಾದ ಕುರುಹು ಕೂಡ ಇರುವುದಿಲ್ಲ. ಈ ಗಿಡಗಳು ಹೆಚ್ಚು ತೇವಾಂಶವಿರುವ ಅರಣ್ಯಗಳಲ್ಲೂ, ಇತರೆ ತೋಟಗಳಲ್ಲಿ ಬೆಳೆದಿರುವುದನ್ನು ನಾನು ಗಮನಿಸಿದ್ದೇನೆ) ಈ ಕಳೆಗಿಡಗಳ ಮರ್ಮ ಅರಿಯದವರು ಅವುಗಳನ್ನು ಕಿತ್ತು ಹಾಕುತ್ತಾರೆ. ಆಗ ಸಹಜವಾಗಿ ನಿಸರ್ಗ ಸೃಷ್ಟಿಸಿರುವ ನೀರೆತ್ತುವ ಸಹಜ ಪಂಪ್‌ಸೆಟ್ಟಿನ ವ್ಯವಸ್ಥೆಯನ್ನು ನಾವೇ ಹಾಳು ಮಾಡಿದಂತಾಗುತ್ತದೆ. ನಮ್ಮ ಸಾಂಪ್ರದಾಯಿಕ ಕೃಷಿಕರೆಲ್ಲರೂ ನಿಸರ್ಗ ಅರಿತು ಬಾಳುವವರಾಗಿದ್ದರಿಂದ ಇಂಥ ವಿಸ್ಮಯಗಳನ್ನು ಗಣಿಸುವುದು ಸಹಜವಾಗಿತ್ತು.

ಕಳೆಗಳು ಅಂದು ನಿಸರ್ಗದ ಸಮತೋಲನ ಕಾಪಾಡುವವಾಗಿ, ದನ ಕರುಗಳ ಮೇವಾಗಿ; ಬೆಳೆಗಳಿಗೆ ಆಸರೆಯಾಗಿ ಮಣ್ಣಿಗೆ ಹೊದಿಕೆಯಾಗಿ ಮಣ್ಣು ಸವಕಳಿಗೆ ತಡೆಯಾಗಿ; ಭೂಮಿಯ ಜೀವಾಣುಗಳಿಗೆ ಆಸರೆಯಾಗಿ, ಅಡುಗೆ ಮನೆಯ ಮೊಸಪ್ಪು ಸಾರುಗಳಿಗೆ ಬೇಕಾದ ಬೆರಕೆ ಸೊಪ್ಪುಗಳಾಗಿ ತಮ್ಮ ಪ್ರಾತಿನಿಧ್ಯವನ್ನು ಗುರುತಿಸಿಕೊಂಡಿದ್ದವು.

ಇಂದಿನ ವೀಡಿಸೈಡರ್‌ಗಳು ಬುಲ್ಡೋಜ್ ಸಂಸ್ಕೃತಿಯವು ಆಗಿರುವುದರಿಂದ ನಿಸರ್ಗದಲ್ಲಿ ಯಾರ‍್ಯಾರ ಪಾತ್ರ ಎಷ್ಟೆಷ್ಟು ಎಂಬುದನ್ನು ನಿರ್ಣಯಿಸುವುದೆ ಕಷ್ಟಕರವಾಗಿದೆ.

ದೇಸಿ ಗೊಬ್ಬರಗಳು:

ಸರಿ ಸುಮಾರು ೬೦ ರ ದಶಕ (೧೯೬೦) ದ ವರೆಗೆ ಕೊಟ್ಟಿಗೆ ಗೊಬ್ಬರ/ ಹಟ್ಟಿ ಗೊಬ್ಬರ/ ತಿಪ್ಪೆ ಗೊಬ್ಬರ ಮತ್ತು ಕೆರೆಯ ಗೋಡು ಮಣ್ಣು ಹೊರತುಪಡಿಸಿ ಇತರ ಯಾವ ಗೊಬ್ಬರಗಳೂ ಪರಿಚಯವಿರಲಿಲ್ಲ. ಅಂದಿನ ಕಾಲದಲ್ಲಿ ಕೊಟ್ಟಿಗೆಯ ಗಂಜಳ ಶೇಖರಣೆಯಾಗಲು ಕೊಟ್ಟಿಗೆಯಲ್ಲೆ ಗಂಜಳದ ಗುಂಡಿಗಳನ್ನು ಮಾಡಿರುತ್ತಿದ್ದರು. ಮನೆ ಅಂಗಳದ ಶುದ್ಧಿಗೆ ಮತ್ತು ಮನೆ ಸಾರಿಸಲು ಬೇಕಾಗುವ ತಾಜಾ ಗಂಜಳವನ್ನು ನೇರವಾಗಿ ಹಸು ಬೆಳಗ್ಗಿನ ವಿಸರ್ಜನೆ ಮಾಡುವಾಗ ಚೊಂಬಿನಲ್ಲೊ, ಮಡಕೆಗಳಲ್ಲೊ ಹಿಡಿದಿಟ್ಟುಕೊಳ್ಳುತ್ತಿದ್ದರು. ಕೊಟ್ಟಿಗೆಯ ಗಂಜಳದ ಗುಂಡಿಗಳು ತುಂಬಿದ ತರುವಾಯ ಹರಬಿಗಳಲ್ಲಿ ತುಂಬಿ ತಿಪ್ಪೆಗುಂಡಿಗಳಿಗೆ ಸುರಿಯುತ್ತಿದ್ದರು. ಗಂಜಳವನ್ನು ಸಗಣಿಯ ಜೊತೆ ಮಿಶ್ರ ಮಾಡಿ ಮನೆಯ ಸುತ್ತ-ಮುತ್ತ ಬೆಳೆವ ಹೂವಿನ, ಸೊಪ್ಪಿನ, ತರಕಾರಿಯ, ಹಂಬಿನ ಗಿಡಗಳ ಮೇಲೆ ಸಿಂಪಡಿಸುತ್ತಿದ್ದರು. ಇಲ್ಲಿ ಸಗಣಿ ಮಿಶ್ರಿತ ಗಂಜಳಗಳನ್ನು ಗಿಡಗಳ ಮೇಲೆ ಸಿಂಪಡಿಸುವ ಮುಖ್ಯ ಉದ್ದೇಶ; ದನ ಕರುಗಳು ಬಾಯಿ ಹಾಕದಿರಲೆಂದು, ಕೆಲವು ಕೀಟಗಳು, ಸೊಳ್ಳೆಗಳು ಮತ್ತು ರೋಗಗಳ ನಿಯಂತ್ರಣಕ್ಕೂ ಗಂಜಳವನ್ನು ಸಂಗ್ರಹಿಸಿಡಲಾಗುತ್ತಿತ್ತು.

ಕೊಟ್ಟಿಗೆಯಲ್ಲಿ ಚೆಲ್ಲಾಡಿ ಬಿದ್ದ ಹುಲ್ಲಿನ ಸಮೇತ ಸಗಣಿಯನ್ನು ಕಸದ ಮಂಕರಿಯಲ್ಲಿ ತುಂಬಿ ತಿಪ್ಪೆಗೆ ಹಾಕುತ್ತಿದ್ದರು. ತಿಪ್ಪೆಗಳು ಸಾಮಾನ್ಯವಾಗಿ ಹಿತ್ತಲಲ್ಲಿ ಇರುತ್ತಿದ್ದವು. ಜಮೀನುಗಳಲ್ಲಿ ಹೊಲಗಳಲ್ಲಿ ಮನೆ ಮಾಡಿಕೊಂಡವರು ಕೊಟ್ಟಿಗೆಯಿಂದ ತುಸು ದೂರದಲ್ಲಿ ತಿಪ್ಪೆ ಗೊಬ್ಬರಗಳನ್ನು ಮಾಡಿಕೊಳ್ಳುತ್ತಿದ್ದರು. ತಿಪ್ಪೆ ಬೆಳೆದಷ್ಟು ಸಮೃದ್ಧಿ ಹೆಚ್ಚು ಎಂಬ ನಂಬಿಕೆ ರೈತರಲ್ಲಿತ್ತು. ತಿಪ್ಪೆಯ ಗಾತ್ರ/ ಎತ್ತರಗಳು ಕೂಡ ಅವರ ಸಾಮಾಜಿಕ ಅಂತಸ್ತುಗಳನ್ನು ಅಳೆಯುತ್ತಿದ್ದವು. ಮುಂಗಾರುಗಳಲ್ಲಿ ಬರಿದಾಗುತ್ತಿದ್ದ ತಿಪ್ಪೆಗುಂಡಿಗಳಿಗೆ 'ಹೊಸ ಕಸ' ತುಂಬಲು ಶುರು ಮಾಡುತ್ತಿದ್ದರು. ತಿಪ್ಪೆಯ ಬಗ್ಗೆ ನಮ್ಮ ರೈತರಲ್ಲಿ ಶ್ರದ್ಧೆಯ, ಗೌರವದ, ಪೂಜ್ಯನೀಯ ಭಾವನೆಗಳಿರುತ್ತಿದ್ದವು. ಬಳಸಿ ಉಳಿದ ಕಟ್ಟಿಗೆ ಚೂರುಗಳು, ಹಳೆಯ ಬಟ್ಟೆಗಳು, ಒಲೆಯ ಬೂದಿ ತಿಪ್ಪೆ ಸೇರುತ್ತಿದ್ದವು. ೯ ರಿಂದ ೧೦ ತಿಂಗಳವರೆಗೆ ಸುರಿದ ಗೊಬ್ಬರವೆಲ್ಲ ತಿಪ್ಪೆಯಲ್ಲಿ ಮಾಗಿ ಹದವಾಗಿ ಸುವಾಸನೆ ಬೀರುತ್ತಿರುತ್ತದೆ. ಗೊಬ್ಬರವನ್ನು ಎತ್ತಿನ ಗಾಡಿಗಳಿಗೆ ತುಂಬಿ ಮಳೆ ಬೀಳುವ ಮುಂಚೆಯೇ ಜಮೀನುಗಳಿಗೆ ಸಾಗಿಸಿ ಅಗತ್ಯವಿರುವೆಡೆ ಬೆಳೆಯ ಯೋಜನಾನುಸಾರ ಗುಡ್ಡೆ ಹಾಕಿಕೊಳ್ಳುತ್ತಿದ್ದರು. ಮಳೆಯ ಮುನ್ಸೂಚನೆ ದೊರೆಯುತ್ತಿದ್ದಂತೆ 'ಹೊನ್ನೇರು' ಕಟ್ಟುವ ಮುಂಚೆ ಗೊಬ್ಬರವನ್ನೆಲ್ಲ ಜಮೀನಿನಲ್ಲಿ ಹರಡುತ್ತಿದ್ದರು. ನಾಟಿ ಮಾಡುವ ಬೆಳೆಗಳಿಗಾಗಿಯೂ ಪ್ರತ್ಯೇಕವಾಗಿ ಉಳಿಸಿಕೊಳ್ಳುತ್ತಿದ್ದರು. ಬೆಳೆಯ ಹಂತಗಳನ್ನು ನಿರ್ಣಯಿಸಿ, ಗೊಬ್ಬರ ಕೊಡುವ ಪದ್ಧತಿಯೂ ರೂಢಿಯಲ್ಲಿತ್ತು. ವರ್ಷಪೂರ್ತಿ ತಾವು ಬೆಳೆಯುವ ಸೊಪ್ಪು, ತರಕಾರಿ ಮತ್ತು ಇತರೆ ಗಿಡಗಳಿಗೂ ಪ್ರತ್ಯೇಕವಾಗಿ ಸಂಗ್ರಹಿಸಿಡುತ್ತಿದ್ದರು.

ದೊಡ್ಡ ದೊಡ್ಡ ತೋಟ ಹಾಗೂ ಇತರ ದೊಡ್ಡ ಹಿಡುವಳಿದಾರರು, ಕೆರೆಗಳು ಸಮೀಪವಿದ್ದರೆ ಕೆರೆಗಳಿಂದ ಗೋಡು ತಂದು ಸಂಗ್ರಹಿಸಿಟ್ಟುಕೊಂಡು ಅಗತ್ಯ ಬಿದ್ದಾಗ ಹಾಕುತ್ತಿದ್ದರು. ಮಲೆನಾಡಿನ ಅಡಿಕೆ ತೋಟದ ಬೆಳೆಗಾರರು ತಾವು ನೀರು ಬಸಿದು ಹೋಗಲು ಮಾಡಿರುವ ಬಸಿ ಗಾಲುವೆಗಳಿಗೆ ಚಳಿಗಾಲಗಳಲ್ಲಿ ತಮ್ಮ ತೋಟದ ಕೃಷಿ ತ್ಯಾಜ್ಯಗಳನ್ನು ತುಂಬಿ, ಮೇಲೊಂದಿಷ್ಟು ಗೊಬ್ಬರ ಹಾಕಿ, ಮಾಗುವಂತೆ ಮಾಡುತ್ತಿದ್ದರು. ಇದರಿಂದ ಜೀವಾಣುಗಳ ಸಂಖ್ಯೆ ವೃದ್ಧಿಯಾಗಲು, ಎರೆಹುಳುಗಳು ಸಕ್ರಿಯವಾಗಿ ಕೆಲಸ ಮಾಡಲು, ಬೇರುಗಳಲ್ಲಿ ಗಾಳಿ ಆಡಲು ನೆರವಾಗುತ್ತಿತ್ತು. ರೈತರು ಸಗಣಿಗೆ ಎಷ್ಟೊಂದು ಮಹತ್ವ ಕೊಡುತ್ತಿದ್ದರೆಂದರೆ ರಸ್ತೆಯಲ್ಲಿ ಬಿದ್ದ ಸಗಣಿಯನ್ನು ಬಿಡದೆ ತಂದು ತಿಪ್ಪೆಗೆ ಹಾಕುತ್ತಿದ್ದರು. ಇಲ್ಲವೆ ಜಮೀನಿಗೆ ಹಾಕುತ್ತಿದ್ದರು. ಆರಂಭ ಜೀವನದ ಎಲ್ಲ ಆಚರಣೆಗಳಲ್ಲೂ ಸಗಣಿಗೆ ಪವಿತ್ರವಾದ ಸ್ಥಾನವಿತ್ತು. ಹೊನ್ನೇರು ಕಟ್ಟುವಾಗ, ಹೊಲ ಕೊಯ್ದು 'ಹರಿ' ಹಾಕುವಾಗ, ಕಣ ಪೂಜೆ ಮಾಡುವಾಗ ಸಗಣಿಯಲ್ಲಿ 'ಗಣಪ'ನನ್ನು ಮಾಡಿ ಸಮೃದ್ಧಿಯ ಸಂಕೇತವಾಗಿ ಆ ಗಣಪನಿಗೆ ಗರಿಕೆ ಹುಲ್ಲು ಸಿಕ್ಕಿಸಿ ಪೂಜೆ ಮಾಡುತ್ತಿದ್ದರು.

ಆಧುನಿಕ ಕೃಷಿ ವಿಜ್ಞಾನದ ನಿರ್ದಯಿ ಕಣ್ಣುಗಳು ನಮ್ಮ ತಿಪ್ಪೆ ಗೊಬ್ಬರವನ್ನು ಕನಿಷ್ಠವಾಗಿ ಕಂಡಿತು. ತಿಪ್ಪೆ ಇದ್ದರೆ ಹಳ್ಳಿಯೆಲ್ಲ ದುರ್ನಾತ, ತಿಪ್ಪೆ ಇದ್ದರೆ ಮಲಿನ ವಾತಾವರಣ, ಅದು ರೋಗಗಳ ಕಣಜ ಇತ್ಯಾದಿಯಾಗಿ ಅಪ ಪ್ರಚಾರ ನಡೆಸಿತು. ಈಗಲೂ ತಿಪ್ಪೆ ಗೊಬ್ಬರಕ್ಕೆ ಸೀಮಿತವಾಗಿ ಬೇಸಾಯ ಮಾಡುವ ಹಳ್ಳಿಗಳ ಆರೋಗ್ಯ, ಪರಿಸರಕ್ಕೂ; ರಸಗೊಬ್ಬರಗಳು ಮತ್ತು ಕಳೆನಾಶಕ, ಕೀಟನಾಶಕ ಇತ್ಯಾದಿ ಬಳಸಿ ಬೇಸಾಯ ಮಾಡುವ ಹಳ್ಳಿಗಳ ಆರೋಗ್ಯ, ಪರಿಸರಕ್ಕೂ ನಡುವಿನ ತೌಲನಿಕ ಅಧ್ಯಯನ ನಡೆಯಲಿ, ಯಾವುದು ಸತ್ಯ, ಯಾವುದು ಸುಳ್ಳು ಎಂಬುದು ಗೊತ್ತಾಗುತ್ತದೆ. ಆಧುನಿಕ ಕೃಷಿ ಮಾಡುತ್ತಿರುವ ರೈತರು ಯಾವಾಗಲೂ ಹೇಳುವ ಸಾರ್ವತ್ರಿಕ ಮಾತೊಂದು ಇದೆ "ಆಗಿನ ಕಾಲ ಈಗ ಇಲ್ಲ ಬಿಡಿ" ಆಗಿನ ಕಾಲದಲ್ಲಿ ಜನ ನೆಮ್ಮದಿಯಾಗಿದ್ದರು, ಆರೋಗ್ಯವಾಗಿದ್ದರು, ಹಳ್ಳಿಗಳು ಸ್ವಾವಲಂಬಿಯಾಗಿದ್ದವು ಎಂಬ ಮಾತುಗಳು ನಿರಂತರವಾಗಿ ಕೇಳಿ ಬರುತ್ತಿರುತ್ತವೆ.

೬.೭. ದೇಸೀ ಕೃಷಿ ಜ್ಞಾನ ಮತ್ತು ವಾಣಿಜ್ಯ ಬೆಳೆ ಆಯಾಮ

ಮೆಣಸು, ಏಲಕ್ಕಿ, ದಾಲ್ಚಿನ್ನಿ, ಜಾಕಾಯಿ, ಜಾಪತ್ರೆ, ಲವಂಗ, ಅರಿಶಿಣ, ಶುಂಠಿ, ಕಾಫಿ, ಚಹ, ಹತ್ತಿ, ರೇಷ್ಮೆ ಮುಂತಾದವುಗಳನ್ನು ನಾವು ವಾಣಿಜ್ಯ ಬೆಳೆಗಳು ಎಂದು ಕರೆಯುತ್ತೇವೆ. ನಿಜಕ್ಕೂ ಈ ಬೆಳೆಗಳಿಗೆ ವಾಣಿಜ್ಯ ಮುಖಗಳಿದ್ದವು. ಈ ಕಾರಣಕ್ಕೆ ಬ್ರಿಟೀಷರು ಮತ್ತು ಯೂರೋಪ್‌ನ ಇತರ ರಾಷ್ಟ್ರಗಳು ಈ ದೇಶಕ್ಕೆ ಬಂದವು. ಆದರೆ ಇವುಗಳನ್ನು ಬೆಳೆಯುತ್ತಿದ್ದ ಅಂದಿನ ನಮ್ಮ ರೈತರಲ್ಲಿ ವಾಣಿಜ್ಯ ಮುಖಗಳು ಇರಲಿಲ್ಲ. 'ಭೂಮಿ ತಾಯಿ ಕೊಟ್ಟಳು' ಎಂಬ ಧನ್ಯತೆಯ ಹಿಂದೆ ಅದನ್ನು ಮಾರಿ ಲಾಭ ಗಳಿಸುವ ಆಸೆ ಅವರಲ್ಲಿ ಎಂದೂ ಇರಲೇ ಇಲ್ಲ. ಜೊತೆಗೆ ನಮ್ಮ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರಾಗಿದ್ದ ರೈತರು – ಸಂಪೂರ್ಣ ಶರಣಾಗಿದ್ದು ಬೇಸಾಯಕ್ಕೆ. ಅನ್ನದ ಬೆಳೆಗಳಿಗೆ ಕೊಟ್ಟ ಪ್ರಾಮುಖ್ಯತೆಯನ್ನು ವಾಣಿಜ್ಯ ಬೆಳೆಗಳಿಗೆ ಕೊಡಲಿಲ್ಲ. ಏಲಕ್ಕಿ, ದಾಲ್ಚಿನ್ನಿ, ಜಾಕಾಯಿ, ಜಾಪತ್ರೆ, ಲವಂಗಗಳು ನೈಸರ್ಗಿಕ ಕಾಡುಗಳಲ್ಲಿ ಸ್ವಾಭಾವಿಕವಾಗಿ

ಬೆಳೆಯುತ್ತಿದ್ದವು. ಭಾರತಕ್ಕೆ ಬಂದ ವಿದೇಶಿ ವ್ಯಾಪಾರಿಗಳ್ಯಾರು ನೇರವಾಗಿ ನಮ್ಮ ರೈತರನ್ನು ಸಂಪರ್ಕಿಸುತ್ತಿರಲಿಲ್ಲ. ದೊರೆಗಳು, ಸಾಮ್ರಾಟರು, ಸಾಮಂತರು, ಪಾಳೇಗಾರರನ್ನು ಸಂಪರ್ಕಿಸುತ್ತಿದ್ದರು. ಇಲ್ಲಿನ ಸಾಮಂತರು, ದೊರೆಗಳು, ಸಾಮ್ರಾಟರುಗಳು ತಾವು ನೇರವಾಗಿಯೇ ವಿದೇಶಿ ವರ್ತಕರೊಂದಿಗೆ ಮಾರಾಟದ ಮಾತುಕತೆಯನ್ನು ಏರ್ಪಡಿಸಿಕೊಳ್ಳುತ್ತಿದ್ದರು.

ದೇಶ ಬ್ರಿಟೀಷರ ನೇರ ಅಧಿಪತ್ಯಕ್ಕೊಳಗಾದ ಮೇಲೆ; ರಾಜ್ಯದ ಕೊಡಗು, ಚಿಕ್ಕಮಗಳೂರು, ಹಾಸನ, ಚಾಮರಾಜನಗರ ಜಿಲ್ಲೆಗಳ ಕಾಡು ಮಲೆಗಳು ಬ್ರಿಟೀಷ್ ಪ್ಲಾಂಟರುಗಳ ಕೈಗೆ ಸಿಕ್ಕಿ ಕಾಫಿ ಎಸ್ಟೇಟ್‌ಗಳಾಗಿ ರೂಪಾಂತರಗೊಂಡವು. ನೀಲಗಿರಿ, ಮಲಬಾರ್‌ಗಳಲ್ಲಿ ಟೀ ಎಸ್ಟೇಟ್‌ಗಳಾದವು. ಬ್ರಿಟೀಷರು ತಮಗೆ ಒಗ್ಗುವ ವಾತಾವರಣಗಳಲ್ಲಿ ತಾವೇ ನೆಲೆ ನಿಂತು ಬೇಸಾಯ ಮಾಡಿದ್ದರ ಹಿಂದೆ ವಾಣಿಜ್ಯ ಮುಖ ಎದ್ದುಕಾಣುತ್ತದೆ.

ಕಾಫಿ ವೈಶಿಷ್ಟ್ಯ :

ಭಾರತದ ಕಾಫಿಯ ತವರು ಕರ್ನಾಟಕ. ಕ್ರಿ.ಶ.೧೬೭೦ ರಲ್ಲಿ ಮೊದಲು ಕಾಫಿ ಅಂಕುರವಾದದ್ದು ಬಾಬ ಬುಡನ್ ಗಿರಿ ಗಿರಿಧಾಮದಲ್ಲಿ. ಅಂದಿನ ಸಂತ ಬಾಬಾ ಬುಡನ್‌ರವರು ಮೆಕ್ಕಾ ಯಾತ್ರೆಗೆ ಹೋಗಿದ್ದರು. ಅರಬ್‌ರ ಯೆಮನ್‌ನಲ್ಲಿ ಸಮೃದ್ಧವಾಗಿ ಬೆಳೆದಿದ್ದ ಕಾಫಿ ನೋಡಿದರು. ಅದರ ಸ್ವಾಧ, ಸುಗಂಧಕ್ಕೆ ಮಾರುಹೋದ ಬಾಬಾ ಬುಡನ್ ಸಾಹೇಬರು ಅಲ್ಲಿಂದ ಕಾಫಿ ಬೀಜಗಳನ್ನು ತಂದು ತಾವಿದ್ದ ಗಿರಿಧಾಮದಲ್ಲಿ ನೆಟ್ಟಿ ಬೆಳೆಸಿ ವಿಸ್ತರಿಸುವಂತೆ ಮಾಡಿದರು. ಮುಂದೆ ಟಿಪ್ಪು ಸುಲ್ತಾನ್ ಮಡಿದ ಬಳಿಕ ಮೈಸೂರು ಸಂಸ್ಥಾನವು ಬ್ರಿಟೀಷರ ಅಧೀನಕ್ಕೊಳಗಾಯಿತು. ೧೮೨೦ ರ ಬಳಿಕ ಚಿಕ್ಕಮಗಳೂರು, ಸಕಲೇಶಪುರ, ಕೊಡಗುಗಳಿಗೆ ಅಧಿಕೃತ ಆಮಂತ್ರಣಗಳ ಮೂಲಕ ಬ್ರಿಟೀಷ್ ಪ್ಲಾಂಟರುಗಳು ಬಂದರು. ಹುಲಿಗಳು, ಕಾಡೆಮ್ಮೆಗಳು, ಆನೆಗಳು, ಜಿಂಕೆ, ಕಡವೆ ಇವೇ ಮುಂತಾದ ವನ್ಯ ಮೃಗಗಳ ದಟ್ಟಣೆಯಿಂದ, ದಟ್ಟಡವಿಗಳಿಂದ ಆವೃತವಾಗಿದ್ದ ಇಲ್ಲಿನ ಸುಂದರವೂ, ವೈವಿಧ್ಯಮಯವೂ ಆದ ಮಲೆಗಳ ಪ್ರದೇಶವನ್ನು ಸಾಹಸಿ ಪ್ರವೃತ್ತಿಯ ಬ್ರಿಟೀಷರಿಗೆ ಕೊಡಲಾಯಿತು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಎ.ಮಿಡ್ಲಟನ್‌ರವರು ಆ ಕಾಲದ ಬಗೆಗೆ ನೀಡಿದ ಒಂದು ಚಿತ್ರಣವನ್ನು ಇಲ್ಲಿ ನೀಡಲಾಗಿದೆ.

"ನಮ್ಮ ತಂದೆಯ ಹೆಸರು ಜೆ.ಎಸ್.ಮಿಡ್ಲ್‌ಟನ್ ಎಂದು, ಅವರು ಮೂರು ವರ್ಷಗಳ ಕಾಲ ಸಿಲೋನಿನಲ್ಲಿದ್ದು ಕಾಫಿ ಬೆಳೆಯುವ ಕ್ರಮವನ್ನು ಕಲಿತುಕೊಂಡರು. ಅಲ್ಲಿ ಕಾಫಿ ಗಿಡಗಳನ್ನು ಬಟ್ಟಬಯಲಿನಲ್ಲಿ ಬೆಳೆಯುತ್ತಿದ್ದರು; ಕಳೆ ಗಿಳೆ ಒಂದಿಷ್ಟೂ ಇರುತ್ತಿರಲಿಲ್ಲ. ಮೈಸೂರು ಸರಕಾರ ಒಂದು ಪ್ರಕಟಣೆ ಹೊರಡಿಸಿ 'ಕಾಫಿ ಬೆಳೆಯುವ ಜಮೀನು ಬೇಕಾದಷ್ಟಿದೆ; ಇಷ್ಟವುಳ್ಳವರು ಬಂದು ತೆಗೆದುಕೊಳ್ಳಬಹುದು' ಎಂದು ತಿಳಿಸಿದ್ದರು. 'ಕಂದಾಯ ಗಿಂದಾಯ ಯಾವುದೂ ಇಲ್ಲ' ಎಂದೂ ಪ್ರಕಟಣೆಯಲ್ಲಿ ಹೇಳಲಾಗಿತ್ತು. ನಮ್ಮ ತಂದೆ ಸಿಲೋನಿನಿಂದ ಬೆಂಗಳೂರಿಗೆ ಬಂದರು. ಅಲ್ಲಿಂದ ಒಬ್ಬ ಸರ್ಕಾರಿ ಅಧಿಕಾರಿಯೊಂದಿಗೆ ಸಕಲೇಶಪುರಕ್ಕೆ ಬಂದರು. ಆಗ ಎಲ್ಲೆಲ್ಲೂ ದಟ್ಟವಾದ ಕಾಡು, ಕಾಡಿನ ದಾರಿಯಲ್ಲಿ ಸಾಗಿ ಒಂದು ಕಮರಿಯ ಅಂಚಿಗೆ ಹೋದರು. ಅಲ್ಲಿ ನಿಂತು ಆ

ಅಧಿಕಾರಿ ಮೂರು ನಾಲ್ಕು ಗುಡ್ಡಗಳನ್ನು ತೋರಿಸಿ, 'ಆ ಗುಡ್ಡದಿಂದ ಈ ಗುಡ್ಡ, ಈ ಗುಡ್ಡದಿಂದ ಅಗೋ ಆ ಗುಡ್ಡ– ಇಷ್ಟರೊಳಗಿನ ಜಮೀನನ್ನು ನೀವು ಮಾಡಿಕೊಳ್ಳಬಹುದು' ಎಂದು ನಮ್ಮ ತಂದೆ ಹೇಳಿದರು. ಇದು ನಡೆದದ್ದು ಸಿಪಾಯಿ ದಂಗೆಗೆ (೧೮೫೭) ಮೂರು ನಾಲ್ಕು ವರ್ಷಗಳಿಗೆ ಹಿಂದೆ– ಅಂದರೆ ಸುಮಾರು ೧೮೫೪ ರಲ್ಲಿ. 'ಕಂದಾಯ ಕೊಡಬೇಕಾಗಿಲ್ಲ, ಆದ ಬೆಳೆಯಲ್ಲಿ ಕಾಲುಭಾಗ ಕೊಟ್ಟರೆ ಸಾಕು' ಎಂದೂ ಅವರು ಹೇಳಿದರು.

ಗುಡ್ಡಗಳೇ ಬಾಂದು ಕಲ್ಲುಗಳಾದ ಸುಮಾರು ಹನ್ನೊಂದು ಚದರ ಮೈಲಿ ವಿಸ್ತೀರ್ಣದ ಕಾಡನ್ನು ನಮ್ಮ ತಂದೆ ಪಡೆದು ಕಾಫಿ ಗಿಡ ನೆಡಲಾರಂಭಿಸಿದರು. ಈ ಕಾಫಿ ಗಿಡಗಳನ್ನು ಸಿಲೋನಿನಿಂದ ತಂದರು. ಆದಷ್ಟು ಸ್ಥಳದಲ್ಲಿ ಕಾಫಿ ಗಿಡ ನೆಟ್ಟು, ಕಾಫಿ ಬೆಳೆಸಿ, ಕೈ ತುಂಬ ಹಣ ಸಂಪಾದಿಸಿದರು. ಫಲವತ್ತಾದ ಹೊಸ ಭೂಮಿಯಾದ್ದರಿಂದ ಬೆಳೆ ಚೆನ್ನಾಗಿ ಬಂತು. ಆದರೆ ಕೆಲವು ವರ್ಷಗಳ ನಂತರ ಎಲೆ ರೋಗ ಆರಂಭವಾಯಿತು. ಆಗ ಆ ರೋಗಕ್ಕೆ ಔಷಧಿ ಇರಲಿಲ್ಲ. ಏನು ಮಾಡುವುದೆಂದು ನಮ್ಮ ತಂದೆ ಒದ್ದಾಡಿದರು.

ನಮ್ಮ ತಂದೆ ತಿರುಗಾಡುತ್ತಿದ್ದ ದಾರಿಗಳ ಬದಿ ಏನೋ ಒಂದು ತರಹ ಹುಲ್ಲಿನಂಥ ಬೆಳೆ ತಾನೇ ತಾನಾಗಿ ಬೆಳೆಯುತ್ತಿದ್ದುದನ್ನು ಕಂಡರು, ಅದೇ ಏಲಕ್ಕಿ! ಇಡೀ ಪ್ರದೇಶವೆಲ್ಲಾ ಅದರಿಂದ ತುಂಬಿಹೋಗಿದ್ದನ್ನು ಕಂಡ ಅವರು ಅದರ ಬೇಸಾಯವನ್ನು ಆರಂಭಿಸಿದರು. ಕಾಡಿನಲ್ಲಿ ಮೆಣಸೂರು ಅದೇ ಆಗಿ ಬೆಳೆಯುತ್ತಿತ್ತು. ನಮ್ಮ ತಂದೆ ಅದರ ಬೇಸಾಯವನ್ನು ಮಾಡಲಾರಂಭಿಸಿದರು. ಅವರು ಕಾಫಿ, ಏಲಕ್ಕಿ, ಮೆಣಸು– ಈ ಮೂರನ್ನೂ ಬೆಳೆಸಿದ ಸ್ಥಳ 'ಕಾಡುಮನೆ' ಎಂದು.

ಇಂಗ್ಲೆಂಡ್ ಬಿಟ್ಟು ಸಿಲೋನಿಗೆ ಹೋಗಿ, ಅಲ್ಲಿ ಕಾಫಿ ಬೆಳೆಯುವುದನ್ನು ಕಲಿತು ಕಾಡುಮನೆಯಲ್ಲಿ ತೋಟಮಾಡಿ ಹಣ ಸಂಪಾದಿಸುವವರೆಗೆ ನಮ್ಮ ತಂದೆ ಮದುವೆಯಾಗಲಿಲ್ಲ. ಆನಂತರ ಇಂಗ್ಲೆಂಡಿಗೆ ತೆರಳಿ ಅಲ್ಲಿ ಮದುವೆಯಾದರು. ನಮ್ಮ ತಾಯಿಯನ್ನು ಬೆಂಗಳೂರಿಗೆ ಕರೆದುಕೊಂಡು ಬಂದು, ಅಲ್ಲಿಂದ ಜೋಡೆತ್ತಿನ ಗಾಡಿಯ ಮೇಲೆ ಕಾಡುಮನೆಗೆ ಬಂದರು. ಆಗ ಪ್ರಯಾಣಕ್ಕೆ ಬಹಳ ಉತ್ತಮವಾದ ವ್ಯವಸ್ಥೆ ಇತ್ತು. ಅಮಲ್ದಾರರೂ ಅವರ ಕೆಳಗೆ ಕೊತ್ವಾಲರೂ ಇದ್ದರು. ಪಯಣಕ್ಕೆ ಎತ್ತಿನ ಗಾಡಿ ಏರ್ಪಾಡಾಗಬೇಕೆಂದು ಸರ್ಕಾರದ ಮೂಲಕ ಅವರಿಗೆ ತಿಳಿಸಿಬಿಟ್ಟರೆ ಸಾಕು, ಚಾಚೂ ತಪ್ಪದೆ ಅವರು ಅದರ ವ್ಯವಸ್ಥೆ ಮಾಡುತ್ತಿದ್ದರು. ಎತ್ತುಗಳಲ್ಲಿ ಎರಡು ತರಹ; ಕುಲುಕೋಟದ ಎತ್ತುಗಳು ಮತ್ತು ನಡೆಯುವ ಎತ್ತುಗಳು ಎಂದು. ಕುಲುಕೋಟದ ಎತ್ತುಗಳನ್ನು ಆರು ಮೈಲಿಗಳಿಗೊಂದು ಸಲ ಬದಲಾಯಿಸುತ್ತಿದ್ದರು. ಕುಲುಕೋಟದ ಎತ್ತುಗಳಿಗೆ ಮೈಲಿಗೆ ನಾಲ್ಕಾಣೆ ಬಾಡಿಗೆ; ನಡೆಯುವ ಎತ್ತುಗಳಿಗೆ ಮೈಲಿಗೆ ಎರಡಾಣೆ.

ನಮ್ಮಮ್ಮನ ಸಮೇತ ನಮ್ಮಪ್ಪ ಕಾಡುಮನೆ ತೋಟಕ್ಕೆ ಸಂಜೆಯ ಹೊತ್ತಿಗೆ ಬಂದರು. ಕೊನೆಯ ಪಯಣದಲ್ಲಿ ಕಾಡುಮನೆಗೆ ಬಂದ ಎತ್ತುಗಳನ್ನು ಹೊರಗೆ ಕಟ್ಟಿ ಹಾಕಿ ಬೆಳಗ್ಗೆ ಎದ್ದು ನೋಡಿದಾಗ ಅವುಗಳನ್ನು ಹುಲಿ ತಿಂದುಹಾಕಿತ್ತು! ಆಗ ಹುಲಿಗಳು ರಾಜಾರೋಷವಾಗಿ ಕಾಡಿನಲ್ಲಿ ತಿರುಗುತ್ತಿದ್ದವು. ಪ್ರತಿ ವರ್ಷ ಒಂದು ಹುಲಿ ಹೊಡೆಯುತ್ತಿದ್ದೆ

ಎಂದು ನಮ್ಮಪ್ಪ ಇಂಗ್ಲೆಂಡಿಗೆ ಬಂದಾಗ ಹೇಳುತ್ತಿದ್ದರು. ಇತರ ಪ್ರಾಣಿಗಳೂ ಕಾಡುಮನೆಯಲ್ಲಿ ಆಡ್ಡಾಡುತ್ತಿದ್ದವು.

ನಮ್ಮ ತಂದೆ ತೋಟ ಮಾಡುವ ಉದ್ದೇಶದಿಂದ ಕಾಡಿನಲ್ಲಿದ್ದ ದೇವವೃಂದ ಮರಗಳನ್ನು ಕಡಿಸಿದರಂತೆ, ಆ ಮರಗಳನ್ನು ಕಡಿಸಿದ್ದು ಸ್ಥಳದ ಜನರಿಗೆ ಹಿಡಿಸಲಿಲ್ಲವಂತೆ, ಆ ಮರ ಕಡಿದರೆ ದೇವರು ತೊಂದರೆ ಕೊಡುತ್ತಾನೆಂದು ಜನರಲ್ಲಿ ಮೂಢನಂಬಿಕೆಯಿತ್ತು. ಈ ಮೂಢ ನಂಬಿಕೆಗೆ ನಮ್ಮ ತಂದೆ ಕಿವಿಗೊಡಲಿಲ್ಲ.

ನಮ್ಮ ತಂದೆಯವರ ಜೊತೆಯಲ್ಲಿ ನಮ್ಮ ಚಿಕ್ಕಪ್ಪನೂ ಇದ್ದರು, ನಮ್ಮ ಚಿಕ್ಕಪ್ಪ ಅಜಾನುಬಾಹು. ನಾವು ಕಾಡುಮನೆಗೆ ಹೋದಮೇಲೆ ಅವನ ಶಕ್ತಿ ಎಷ್ಟೆಂಬುದನ್ನು ಅವನ ಜತೆ ಕೆಲಸ ಮಾಡುತ್ತಿದ್ದ ಆಳುಗಳು ಹೇಳುತ್ತಿದ್ದರು. ಮರದ ದಿಮ್ಮಿಯನ್ನು ಮರ ಕೊಯ್ಯುವ ಗುಂಡಿಯ ಮೇಲೆ ಎತ್ತಿಡುವಾಗ ಚಿಕ್ಕಪ್ಪನೇ ಒಂದು ಕಡೆ ಹನ್ನೆರಡು ಆಳುಗಳೇ ಒಂದು ಕಡೆ! ಈ ಚಿಕ್ಕಪ್ಪ ಕಾಡುಮನೆಯಲ್ಲಿಯೇ ತೀರಿಕೊಂಡರು. ಅವರನ್ನು ಅಲ್ಲಿಯೇ ಸಮಾಧಿಮಾಡಲಾಗಿದೆ.

ನಾನು ಇಂಗ್ಲೆಂಡಿನಿಂದ ಹೊರಡು ಬೊಂಬಾಯಿಯಲ್ಲಿ ಹಡಗು ಇಳಿದು, ರೈಲಿನಲ್ಲಿ ಬೆಂಗಳೂರಿಗೆ ಹೋಗಿ, ಅಲ್ಲಿಂದ ರೈಲಿನಲ್ಲಿ ಅರಸೀಕೆರೆಗೆ ಬಂದು, ಅರಸೀಕೆರೆಯಿಂದ ಸಕಲೇಶಪುರಕ್ಕೆ ಎತ್ತಿನಗಾಡಿಯ ಮೇಲೂ, ಅಲ್ಲಿಂದ ಕಾಡುಮನೆಗೆ ಕುದುರೆಯ ಮೇಲೂ ಬಂದೆ. ನಮ್ಮ ತಂದೆ ನನಗೆ ಏಲಕ್ಕಿ ಹದಮಾಡುವ ಕೆಲಸ ವಹಿಸಿದರು. ನಾನು ಆ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದೆ. ನಾನು ಹದ ಮಾಡಿದ ಏಲಕ್ಕಿ ಸಿಪ್ಪೆ ಬೆಳ್ಳಗಿರುತ್ತಿತ್ತು. ಅದಕ್ಕೆ ಒಳ್ಳೆಯ ಗಿರಾಕಿ. ಮರದ ಪೆಟ್ಟಿಗೆಗಳಲ್ಲಿ ಹಾಕಿ ಲಂಡನ್ನಿಗೆ ರವಾನಿಸುತ್ತಿದ್ದೆವು. ಅಲ್ಲಿ ಗಿರಾಕಿ ಕಡಿಮೆಯಾದರೆ ಕಲ್ಕತ್ತಾಕ್ಕೆ ಕಳುಹಿಸುತ್ತಿದ್ದೆವು. ಅಲ್ಲಿ ಅವುಗಳನ್ನು ಹಾರಕ್ಕಾಗಿ ಉಪಯೋಗಿಸುತ್ತಿದ್ದರು.

ಏಲಕ್ಕಿಯನ್ನು ಹದಮಾಡುವುದರ ಜತೆಗೆ ನಮ್ಮ ತಂದೆ ಮೆಣಸು ಹದ ಮಾಡುವುದನ್ನೂ ಕಲಿತಿದ್ದರು. ಹೀಗೆ ಹದ ಮಾಡಿದ ಮೆಣಸಿಗೆ ಮಲಬಾರಿನ ಮೆಣಸಿನ ಮೂರರಷ್ಟು ಬೆಲೆ ಸಿಗುತ್ತಿತ್ತು. ಅದು ಬೇರೆ ಮೆಣಸಿನಷ್ಟು ಖಾರವಾಗಿರಲಿಲ್ಲವಾದ್ದರಿಂದ ಯೂರೋಪಿನ ಮಾರುಕಟ್ಟೆಯಲ್ಲಿ ಒಳ್ಳೆ ಗಿರಾಕಿ ಇತ್ತು.

ಕಾಫಿ ಬೆಲೆ ಕಡಿಮೆಯಾಯಿತು. ಎಲೆ ರೋಗದ ಜೊತೆಗೆ ವಿಪರೀತ ಮಳೆಯೂ ಇದ್ದುದರಿಂದ ಕಾಫಿ ಬೆಳೆಯದೇ ಹೋಯಿತು. ಏಲಕ್ಕಿಯನ್ನು ಸುಲಭವಾಗಿ ಬೆಳೆದೆವು.

ನಾನು ತೋಟ ರೂಢಿಸಿಕೊಂಡು ಬಂದೆ. ಆದರೆ ಏಲಕ್ಕಿಗೆ ಕಂಬಳಿಹುಳದ ರೋಗ ತಗಲಿ ಅದು ಎರಡು ವರ್ಷಗಳಲ್ಲಿ ನಿರ್ನಾಮವಾಯಿತು; ಒಂದು ಗಿಡವೂ ಉಳಿಯಲಿಲ್ಲ.

ಈ ಮಧ್ಯೆ ೧೮೭೫ ರಲ್ಲಿ ಕಾಡುಮನೆ ಎಸ್ಟೇಟನ್ನು ಮೊದಲ ಬಾರಿಗೆ ಸರ್ವೆ ಮಾಡಲಾಯಿತು. ಸರ್ವೆ ಆಗಲು ನಾಲ್ಕು ತಿಂಗಳು ಹಿಡಿಯಿತಂತೆ! ಆಗ ನಮ್ಮ ತೋಟಕ್ಕೆ ಒಂದು ಎಕರೆಗೆ ಒಂದು ರೂಪಾಯಿ ಕಂದಾಯ ಹಾಕಿಬಿಟ್ಟರು. 'ಇದು ಜಾಸ್ತಿ, ಜಮೀನು ಒಂದೇ ತರಹ ಇರುವುದಿಲ್ಲ, ಕಡಿಮೆ ಮಾಡಬೇಕು' ಎಂದು ನಮ್ಮ ತಂದೆ ಕೇಳಿಕೊಂಡರು.

ಆಗಿನ ಮಹಾರಾಜರವರಾದ ಚಾಮರಾಜ ಒಡೆಯರವರು ದಿವಾನರಾದ ರಂಗಾಚಾರ್ಲು ಅವರ ಸಮೇತ ಕಾಡುಮನೆಗೆ ಬಂದು, ತೋಟ ನೋಡಿ ಎಕರೆಗೆ ಎಂಟಾಣೆ ಕಂದಾಯ ವಿಧಿಸಿದರು. ಈ ಕಂದಾಯ ಕೊಡುವುದೂ ಕಷ್ಟವಾಯಿತು ಏಲಕ್ಕಿಯನ್ನೆಲ್ಲಾ ಕಂಬಳಿಹುಳ ತಿಂದ ಮೇಲೆ. ಆದ್ದರಿಂದ ತೋಟ ಮಾರಬೇಕಾಯಿತು." ೧

ಬ್ರಿಟೀಷ್ ಪ್ಲಾಂಟರುಗಳು ಈ ಪ್ರದೇಶಗಳಲ್ಲಿ ಹೆಚ್ಚು ಬೆಳೆಯ ಬಯಸಿದ್ದು ಕಾಫಿ, ಏಲಕ್ಕಿ, ಮೆಣಸು ಇತ್ಯಾದಿಗಳನ್ನೆ. ಇಲ್ಲಿಯ ಪರಿಸರ, ಹವಾಮಾನ ಅವರಿಗೆ ಅತ್ಯಾಪ್ತವಾಗಿತ್ತು. ವನ್ಯ ಮೃಗಗಳ ಬೇಟೆ ಅವರಿಗೆ ಖುಷಿ ಕೊಡುತ್ತಿತ್ತು. ಇಲ್ಲಿನ ಮೆಣಸು, ಏಲಕ್ಕಿ, ಶ್ರೀಗಂಧ ಮತ್ತು ನಾಟಾಗಳು ಅವರಿಗೆ ಹೇರಳವಾಗಿ ಹಣ ಮಾಡಿಕೊಟ್ಟವು. ಇಷ್ಟಾದರೂ ಅವರಿಗೆ ಇಲ್ಲಿನ ಕೀಟ ವೈವಿಧ್ಯ, ಮಳೆ, ಬೆಳೆಗಳ ಸ್ವಭಾವದೊಂದಿಗೆ ಹೆಣಗಾಡುವುದು ಅಸಾಧ್ಯವಾಗಿಬಿಡುತ್ತಿತ್ತು. ಹೀಗಾಗಿ ಅವರ ಮಾಲೀಕತ್ವ ಪದೇ ಪದೇ ಬದಲಾಗುತ್ತಿತ್ತು. ಸ್ವಾತಂತ್ರ್ಯ ನಂತರ ಬ್ರಿಟೀಷ್ ಪ್ಲಾಂಟರುಗಳು ಬಿಡುಗಡೆ ಸಿಕ್ಕವರಂತೆ ಇಲ್ಲಿನ ಎಸ್ಟೇಟ್‌ಗಳನ್ನು ಅಗ್ಗದ ಬೆಲೆಗೆ ಮಾರಿದರು. ಕೆಲವರಿಗೆ ಉಚಿತವಾಗಿಯೂ ನೀಡಿ ಹೊರಟು ಹೋದರು.

ನಮ್ಮಲ್ಲಿ ಪೂರ್ವ ಮುಂಗಾರು ಕಾಫಿ ಬೆಳೆಯ ಭವಿಷ್ಯವನ್ನು ನಿರ್ಣಯಿಸುವ ಮಳೆ. ಆ ಮಳೆ ಮುಂಗಾರು ಮಳೆಯಂತೆ ಎಲ್ಲೆಡೆಯೂ ಒಂದೇ ಸಮನೆ ಸುರಿಯುವುದಿಲ್ಲ. ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಸ್ವಂತ ಅನುಭವವನ್ನು ಈ ಮಾತಿಗೆ ಹಿನ್ನೆಲೆಯಾಗಿ ಇಲ್ಲಿ ನೀಡಲಾಗಿದೆ.

"ಕಾಫಿ ತೋಟಗಳ ನಮ್ಮೂರಿಗೆ ಮಳೆ. ಅದೂ ಏಪ್ರಿಲ್‌ನಲ್ಲಿ ಬರುವ ಮಳೆ, ಕಾಫಿ ಬೆಳೆಗಾರರು ಉಸಿರು ಹಿಡಿದು ಪ್ರತೀಕ್ಷೆಯಿಂದ ನೋಡುವಂತೆ ಮಾಡುತ್ತದೆ. ಕಾಫಿಗೆ ಏಪ್ರಿಲ್‌ನ ಮಳೆ ಬೆಳೆಗಾರರ ಜೀವ ಉಳಿಸುವ ಅಥವಾ ಸಾಯಿಸುವ ಮಳೆ, ಈ ಕಾಫಿಗಿಡದ ಪ್ರಕೃತಿ ಅತಿ ವಿಚಿತ್ರ. ಬೇಸಿಗೆಯ ಉರಿಯಲ್ಲಿ ಗಿಡಗಳೆಲ್ಲಾ ಬಾಡಿ ಎಲೆಗಳೆಲ್ಲಾ ಜೋಲಿದಾಗ ಇದರಲ್ಲಿ ಮೊಗ್ಗು ಮೂಡತೊಡಗುತ್ತವೆ. ಆದರೆ ಮೂಡಿದ ಮೊಗ್ಗುಗಳು ಹೂವಾಗುವುದಿಲ್ಲ. ಹಾಗೆ ನಿಂತು ಮಳೆಗೆ ಕಾಯತೊಡಗುತ್ತವೆ. ಏಪ್ರಿಲ್ ಮಳೆಗಾಗಿ. ಏಪ್ರಿಲ್ ಮೊದಲಲ್ಲಿ ಸರಿಯಾಗಿ ಒಂದು ಇಂಚಾದರೂ ಮಳೆಯಾಗಲೇಬೇಕು. ಮಳೆ ಬಂದ ಒಂಭತ್ತು ದಿನಕ್ಕೆ ಸರಿಯಾಗಿ ಹೂವು ಮುಂದಕ್ಕೆ ಬಂದು ಇಡೀ ಕಾಫಿ ತೋಟ ಹಾಲು ಚೆಲ್ಲಿದಂತೆ ಬೆಳ್ಳಗಾಗುತ್ತದೆ. ಇಡೀ ಊರಿಗೆ ಊರೇ ಗಮಗಮ ವಾಸನೆ. ಬೆಳಗಾಗುವುದರೊಳಗೆ ತಂಬೂರಿಯ ನಾದದಂತೆ ಜೇನುಗಳ ಜೋಗುಳ. ಆದರೆ ನೆನಪಿರಲಿ. ಸರಿಯಾಗಿ ಒಂದಿಂಚು ಮಳೆಯಾಗಬೇಕು. ಇಲ್ಲದಿದ್ದರೆ ಕಾಫಿ ಕತೆ ಮುಗಿಯಿತು. ಮಳೆ ನಾಲ್ಕು ದಿನ ತಡವಾಗಿ ಬಂದರೂ ತೊಂದರೆ ಇಲ್ಲ. ಅರೆಬರೆ ಮಳೆ ಮಾತ್ರ ಆಗಕೂಡದು.

ಬೆಳ್ಳಿಯಪ್ಪ ಅಂತ ಒಬ್ಬರು ಇದ್ದರು. ತುಂಬಾ ದೊಡ್ಡ ತೋಟ ಅವರದ್ದು. ಮಳೆಯ ದೆಸೆಯಿಂದಾಗಿ ಅವರು ನೆಲಹಿಡಿದು ಕೊನೆಗೆ ತೋಟ ಮಾರಿ ದೇಶಾಂತರ ಹೋದುದು ನನಗೆ ನೆನಪಿದೆ. ಒಂದಲ್ಲ ಒಂದು ದಿನ ದುಡ್ಡು ಸಿಕ್ಕೆ ಸಿಗುತ್ತದೆ ಎಂದು ಸುಮಾರು ಸಾಲ ಮಾಡಿ ತೋಟಕ್ಕೆ ಹಾಕಿದ್ದರು. ಆದರೆ ಅವರಿಗೆ ಕೆಲವು ವರ್ಷ ಏಪ್ರಿಲ್

ಮಳೆ ಸರಿಯಾಗಿ ಬರಲೇ ಇಲ್ಲ. ಮಳೆ ಸರಿಯಾಗಿ ಬರದಿದ್ದರೆ ರೈತರಿಗೆ ತೊಂದರೆ ಎಂದು ಕೇಳಿದ್ದೇನಾದರೂ ಈ ರೀತಿ ತೋಟ ಮಾರಿ ಗುಳೆ ಹೋಗಬೇಕಾಗಿ ಬರುತ್ತದೆಂದು ನಾನು ತಿಳಿದಿರಲಿಲ್ಲ. ಎಲ್ಲ ಕಡೆ ಜೋರಾಗಿ ಮಳೆ ಬಂದಿತ್ತು. ನಾನು ಆಗಿನ್ನೂ, ಕಾಫಿ ತೋಟ ಮಾಡಿರಲಿಲ್ಲ. ಬೆಳ್ಳಿಯಪ್ಪನವರನ್ನು ಕಂಡಾಗ ಮಳೆ ಬಗ್ಗೆ ವಿಚಾರಿಸಿದೆ. ಮುಖ ಹಿಂಜಿಕೊಂಡು ಮಳೆ ಕೊಂಚವೇ ಉದುರಾಡಿ ಹೋಯ್ತೆಂದು ಗೊಣಗಿದರು. ಅವರ ತೋಟಕ್ಕೆ ಸ್ವಲ್ಪೇ ಸ್ವಲ್ಪ ಮಳೆಯಾಗಿತ್ತು. ಪರ್ವಾಗಿಲ್ಲ ನೆಲ ಅಷ್ಟೊಂದು ನೆನೆದಿಲ್ಲ. ಈ ಮಳೆಗೆ ಮೊಗ್ಗುಗಳೇನೂ ಮುಂದೆ ಬರುವುದಿಲ್ಲ. ಇವತ್ತು ನಾಳೆಯಲ್ಲಿ ಒಳ್ಳೆ ಮಳೆ ಖಂಡಿತ ಬರುತ್ತದೆಂದು ಸಮಾಧಾನ ಹೇಳಿದೆ.

ಒಳ್ಳೆ ಮಳೆ ಬಂದವರು ಖುಷಿಯಲ್ಲಿ ಓಡಾಡುತ್ತಾ ಇದ್ದರು. ಬ್ಯಾಂಕುಗಳಿಗೆ ಮುಂಗಡ ಹಣಕ್ಕೆ ಅರ್ಜಿ ಹಾಕುತ್ತಾ ಹೂವಿನ ದಿನ ಯಾವತ್ತೆಂದು ಲೆಕ್ಕ ಹಾಕುತ್ತಾ ಅವತ್ತಿನ ಡಿನ್ನರಿಗೆ ಏನೇನು ತಯಾರು ಮಾಡಬೇಕೆಂದು ಯೋಚಿಸುತ್ತಾ, ಬಂಧು ಮಿತ್ರರ ಪಟ್ಟಿ ರೆಡಿಮಾಡುತ್ತಿದ್ದರು. ಬೆಳ್ಳಿಯಪ್ಪ ಆಕಾಶದ ಕಡೆ ನೋಡಿ ನಿಟ್ಟುಸಿರು ಬಿಡುತ್ತಿದ್ದರು. ಮಳೆ ಎಷ್ಟು ಅನಿರೀಕ್ಷಿತವಾಗಿ ಬಂದಿತ್ತೋ ಅಷ್ಟೇ ಅನಿರೀಕ್ಷಿತವಾಗಿ ಜಾಗ ಖಾಲಿ ಮಾಡಿತ್ತು. ಮಳೆ ತೀರಾ ಕಡಿಮೆ ಬಂದದ್ದರಿಂದ ಅನಾಹುತ ಆಗಲಾರದೆಂಬ ನಮ್ಮ ನಂಬಿಕೆ ದಿನಗಳೆದಂತೆ ಹುಸಿಯಾಯ್ತು. ಮೊಗ್ಗುಗಳು ನಿಧಾನವಾಗಿ ದೊಡ್ಡವಾಗತೊಡಗಿದವು. ಸದ್ಯದಲ್ಲೇ ಇನ್ನೊಂದು ಮಳೆ ಬಾರದಿದ್ದರೆ ಆ ಮೊಗ್ಗುಗಳು ಉದುರುವುದರಲ್ಲಿ ಅನುಮಾನವೇ ಇರಲಿಲ್ಲ.

ಮೂರ್ನಾಲ್ಕು ದಿನಗಳಾದ ಮೇಲೆ ಮತ್ತೆ ಆಕಾಶದಲ್ಲಿ ಮೋಡ ಕಟ್ಟತೊಡಗಿತು. ಹಾಗಾದರೆ ಸದ್ಯ ಇನ್ನೊಂದು ಮಳೆ ಬರಬಹುದು ಎಂದು ಬೆಳ್ಳಿಯಪ್ಪ ಆಸೆಯಿಂದ ಕಾದರು. ಆದರೆ ಕಾಫಿ ತೋಟದಲ್ಲಿ ಕಾಲುಭಾಗ ಮೊಗ್ಗುಗಳಾಗಲೆ ಮುಂದೆ ಬಂದುಬಿಟ್ಟಿದ್ದವು. ಮುಂದಿನ ಮೂರುನಾಲ್ಕು ದಿನದೊಳಗೆ ಮಳೆ ಬಂದರೆ ಮಾತ್ರ ಅವು ಕಾಯಿಕಟ್ಟುತ್ತಿದ್ದವು, ಆದರೆ ಮಳೆ ಬರಲೇ ಇಲ್ಲ. ದಿನಾ ಗುಡುಗು ಮಿಂಚು ಸಿಡಿಲಿನ ಭರಾಟೆ ಆಗಸದಲ್ಲಿ. ಅವರ ಮನೆಯ ಮೇಲೇ ಕರಿಗಟ್ಟಿ ನಿಂತ ಮೋಡವೂ ನಿಧಾನವಾಗಿ ಜರುಗಿ ಬೇರೆಲ್ಲೋ ಧಾರಾಕಾರ ಮಳೆ ಸುರಿಸುತ್ತಿತ್ತು. ದಿನವೂ ಅಲ್ಲಿ ಆಯ್ತಂತೆ ಮಳೆ ಇಲ್ಲಿ ಆಯ್ತಂತೆ ಮಳೆ ಅನ್ನುವ ವರ್ತಮಾನ ಒಂದೇ ಬೆಳ್ಳಿಯಪ್ಪನವರ ಕಿವಿಗೆ. ಮಳೆ ಮಾತ್ರ ಬರಲೇ ಇಲ್ಲ. ಕಾಫಿ ಗಿಡದಲ್ಲಿ ಮುಂದಕ್ಕೆ ಬಂದಿದ್ದ ಕಾಲು ಭಾಗ ಮೊಗ್ಗುಗಳು ಮುಂದಕ್ಕೆ ಬಂದು ಬೆಳ್ಳಗಾದವು. ಆದರೆ ಅರಳಲು ತ್ರಾಣವೇ ಇಲ್ಲ. ದಳಗಳು ಮುಚ್ಚಿಕೊಂಡೇ ಕುಳಿತವು. ದುಂಬಿ ಕೂರಲೇ ಇಲ್ಲ. ಪರಾಗಸ್ಪರ್ಶಕ್ಕೆ ಆಸ್ಪದವೇ ಇಲ್ಲ. ಐದನೆಯ ದಿನಕ್ಕೆ ಮೊಗ್ಗುಗಳೆಲ್ಲಾ ಕೆಂಪಾದವು. ಅಲ್ಲಿಗೆ ಅದರ ಕತೆ ಮುಗಿಯಿತು. ಗಿಡಗಳನ್ನು ಅಲ್ಲಾಡಿಸಿದರೆ ಸಾಕು. ಭತ್ತದ ಕಾಳುಗಳಂತೆ ಸುಟ್ಟು ಕೆಂಚಾದ ಮೊಗ್ಗುಗಳು ಜಳಜಳನೆ ಉದುರುತ್ತಿದ್ದವು.

ಮುಂದಕ್ಕೆ ಬಂದ ಮೊಗ್ಗುಗಳೆಲ್ಲಾ ಉದುರಿ ನಾಶವಾದ ಮೇಲೆ ಮತ್ತೊಮ್ಮೆ ಭಯಂಕರ ಮೋಡ ಕಟ್ಟಿತು. ಆಕಾಶದಲ್ಲ ಅದರ ಗಲಭೆ ನೋಡಿದರೆ ದೊಡ್ಡ ಜಲಪ್ರಳಯದ ಮುನ್ನುಡಿಯಂತಿತ್ತು. ಭರೋ ಎಂದು ಮೋಡ ಮೊರೆಯುತ್ತಿತ್ತು. ನಾನು 'ಪರ್ವಾ ಇಲ್ಲ, ಬೆಳ್ಳಿಯಪ್ಪನವರಿಗೆ ಅದೃಷ್ಟ ಇದೆ'. ಎಂದುಕೊಂಡೆ. ಬೆಳಗ್ಗೆ ಎದ್ದಾಗ

ನೆಲವೆಲ್ಲಾ ಒದ್ದೆ, ಭೂಮಿ ಎಲ್ಲಾ ಕೆಸರೆದ್ದು ಹೋಗಿದೆ. ಸರಿ, ಬೆಳ್ಳಿಯಪ್ಪನವರಿಗೆ ಡಿನ್ನರಿಗೆ ಏರ್ಪಾಡು ಮಾಡಿರೆದು ಹೇಳಬೇಕೆಂದುಕೊಂಡೆ. ಆದರೆ ಆಶ್ಚರ್ಯ–ಬೆಳ್ಳಿಯಪ್ಪನವರ ತೋಟದ ಹತ್ತಿರ ಹತ್ತಿರವಾದಂತೆ ಮಳೆ ಕಡಿಮೆಯಾಗಿತ್ತು. ಅವರ ತೋಟದ ಗಿಡಗಳಂತೂ ಬಾಡಿದ ಮುಖದಲ್ಲೆ ನಿಂತಿದ್ದವು. ಬೆಳ್ಳಿಯಪ್ಪ ಹರಳೆಣ್ಣೆ ಕುಡಿದ ಮುಖ ಮಾಡಿಕೊಂಡು ನಿಂತಿದ್ದರು. ಕಳೆದ ಸಾರಿ ಆದಷ್ಟೆ ಅರೆಬರೆ ಮಳೆ ಬಿದ್ದಿತ್ತು. ಅವರಿಗೆ ಯಾವ ರೀತಿ ಸಮಾಧಾನ ಹೇಳಬೇಕೆಂದು ತೋಚಲಿಲ್ಲ. ನಾನು ಆಕಾಶದ ಕಡೆಗೆ ನಿಟ್ಟುಸಿರು ಬಿಟ್ಟು ಇವತ್ತಾದರೂ ಒಳ್ಳೆ ಮಳೆ ಬರಬಹುದೇನೋ ಎಂದು ಹಾರೈಸಿದೆ. ಆದರೆ ಬರಲೇ ಇಲ್ಲ. ಸುತ್ತಮುತ್ತೆಲ್ಲಾ ಬೀಳುತ್ತಿದ್ದ ಮಳೆಯೂ ಅವರ ತೋಟಕ್ಕೆ ಒಂದೆರಡು ಹನಿ ಚಿಮುಕಿಸಿ ಇದ್ದಬದ್ದ ಅಲ್ಪಸ್ವಲ್ಪ ಮೊಗ್ಗನ್ನೂ ಜಳ್ಳು ಮಾಡಿ ಹೋಗುತ್ತಿತ್ತು. ಗಿಡದ ಬುಡಕ್ಕೆ ಕಾಲಿನಲ್ಲಿ ಒದ್ದರೆ ಗಳಗಳ ಮೊಗ್ಗುಗಳು ಜಳ್ಳು ಬಿದ್ದು ಉದುರುತ್ತಿದ್ದವು. ಕಳೆದ ಒಂದೆರಡು ವರ್ಷಗಳಿಂದ ಹೀಗೆ ಆಗಿ ಮೈಮೇಲೆ ಸಾಲ ಏರಿಕುಳಿತಿದ್ದ ಬೆಳ್ಳಿಯಪ್ಪನವರು ಆ ವರ್ಷ ಸಂಪೂರ್ಣ ನೆಲ ಹಿಡಿದರು. ತೋಟ ಮಾರದೇ ವಿಧಿಯೇ ಇರಲಿಲ್ಲ.

ಮಳೆ ಬರುವುದನ್ನೇ ಕಾಯುತ್ತ ಮಳೆ ಬಂದ ತಕ್ಷಣ ಒಂಭತ್ತು ದಿನಗಳೊಳಗೆ ಹೂ ಬಿಡುವ ಕಾಫಿಗಿಡಗಳ ಈ ವಿಚಿತ್ರ ಪ್ರಕೃತಿ ನಾನು ತಿಳಿದಂತೆ ಬೇರಾವ ಕೃಷಿ ಸಸ್ಯಗಳಿಗೂ ಇರುವಂತೆ ಕಾಣಲಿಲ್ಲ. ಅದಕ್ಕೆ ಕಾಫಿ ಬೆಳೆಗಾರ ಎಂದರೆ ವರ್ಷಕ್ಕೊಮ್ಮೆ ಮಳೆಯ ಜೊತೆ ಜೂಜಾಡುವವನು ಎಂದೇ ಪ್ರತೀತಿ. ಮಳೆಗಾಲದಲ್ಲಿ ಮಳೆ ಹೆಚ್ಚು ಕಡಿಮೆಯಾದರೂ ಕಾಫಿ ಬೆಳೆಗಾರ ಯೋಚಿಸುವುದಿಲ್ಲ. ಆದರೆ ಏಪ್ರಿಲ್‌ನಲ್ಲಿ ಹೂವಿನ ಮಳೆ ಮಾತ್ರ ಸರಿಯಾಗಿ ಬರಲೇಬೇಕು. ಅದು ಒಂದು ಇಂಚು ಮೇಲ್ಪಟ್ಟು ಬಂತೋ ಗೆದ್ದ. ಅವನ ಸಂಭ್ರಮ ಸಂತೋಷ ಯಾಕೆ ಹೇಳುತ್ತೀರಿ? ನೆಂಟರಿಷ್ಟರಿಗೆಲ್ಲಾ ಊಟಕ್ಕೆ ಟೆಲಿಗ್ರಾಂಗಳೇ ಹೋಗುತ್ತವೆ. ಹಳೆ ಕಾರು ಮಾರಿ ಹೊಸ ಕಾರು ಕೊಳ್ಳುವ, ಮಗಳಿಗೆ ಅದ್ದೂರಿ ವಿವಾಹ ಮಾಡುವ, ಕ್ಲಬ್ಬಿನಲ್ಲಿ ಹೆಚ್ಚು ಹೊತ್ತು ಇಸ್ಪೀಟಾಡುವ ಎಲ್ಲ ಚಾಳಿಗಳೂ ನವೀಕರಿಸಲ್ಪಡುತ್ತವೆ.

ಏಪ್ರಿಲ್ ಆಕಾಶ ಬೆಳೆಗಾರರಿಗೆ ಕೊಂಚವಾದರೂ ರಕ್ತದ ಒತ್ತಡ ಹೆಚ್ಚಿಸದೇ ಬಿಡುವುದೇ ಇಲ್ಲ. ಆಗ ಬರುವ ರೇವತಿ ಮಳೆಯ ರೀತಿಯ ಹಾಗೆ. ಒಂದು ಕಡೆ ಬಂದರೆ ಇನ್ನೊಂದು ಕಡೆ ಇಲ್ಲ. ಎಷ್ಟೋ ಸಾರಿ ಮಳೆ ಭೋರ್ಗರೆಯುತ್ತ ಬಂದು ತೋಟದ ಬೇಲಿಯಾಚೆಯೇ ನಿಂತು ಬಿಟ್ಟಿದ್ದನ್ನೂ ನೋಡಿದ್ದೇನೆ. ತೋಟದ ಬೇಲಿ ದಾಟದೆ ಹಾಗೆ ಹೋದರೆ ಮಾತ್ರ ಅವನು ಸತ್ತ. ಬೆಳ್ಳಿಯಪ್ಪನವರಿಗಾದ ಗತಿಯೇ ಅವನಿಗೂ. ಈ ಮಳೆ ಪ್ರತಿ ವರ್ಷ ಎಲ್ಲಾದರೂ ಯಾರಿಗಾದರೂ ತೊಂದರೆ ಕೊಟ್ಟೇ ಕೊಡುತ್ತೆ. ಆದರೆ ಯಾವಾಗಲೋ ಒಮ್ಮೊಮ್ಮೆ ತೊಂದರೆಕೊಟ್ಟರೆ ಪರವಾಗಿಲ್ಲ. ಸತತವಾಗಿ ಮೂರ್‍ನಾಲ್ಕು ವರ್ಷ ಹಾಗಾಯ್ತೋ ತೋಟ ಮಾರದೆ ವಿಧಿಯೇ ಇರುವುದಿಲ್ಲ.

ಏಪ್ರಿಲ್ ಬಂತೆಂದರೆ ಆಕಾಶವಾಣಿಯ ಹವಾಮಾನ ಕೇಳುವವರೇನು? ಟೀವಿಯ ಇನ್ಸಾಟ್ ಫೋಟೋ ನೋಡಿ ಲೆಕ್ಕಾಚಾರ ಹಾಕುವವರೇನು? ಜಾತಕ ನೋಡಿಸುವವರೇನು? ಜೋಯಿಸರ ಹತ್ತಿರ ಪಂಚಾಂಗ ನೋಡಿಸುವವರೇನು? ರಾತ್ರಿ ಕಪ್ಪೆ ಕೂಗುತ್ತದೆಯೊ ಕಿವಿಗೊಟ್ಟು ಆಲಿಸುವವರೇನು?" ೨

ಇಷ್ಟಾಗಿಯೂ ನಮ್ಮ ದೇಸೀ ಕಾಫಿ ಬೆಳೆಗಾರರು ಈ ಎಲ್ಲ ವೈರುಧ್ಯಗಳಿಗೆ ಬೆನ್ನು ಮಾಡಿದವರೇನಲ್ಲ. ಭಗೀರಥ ಯತ್ನ ಮಾಡಿ ತಡಿಯಂಡಮೊಳ್ ಶಿಖರದವರೆಗೂ ನೀರು ಕೊಂಡೊಯ್ಯುತ್ತಾರೆ. ಸ್ಪಿಂಕ್ಲರ್ ಮೂಲಕ ಯತೇಚ್ಛೆ ನೀರು ಚೆಲ್ಲಿ ಕಾಫಿ ಗಿಡಗಳನ್ನು ತೊಯ್ಯುಸ್ತಾರೆ. ಇಡೀ ಕಾಫಿ ಎಸ್ಟೇಟಿಗೆ ಎಸ್ಟೇಟೇ ಸುಂದರವಾಗಿ ಮುಗಳ್ನಕ್ಕು ಹೂ ಬಿರಿದು ನಿಲ್ಲುತ್ತದೆ. ಈ ಸಂಭ್ರಮ ಸಾರುವ ಕುವೆಂಪುರವರ ಪಕ್ಷಿಕಾಶಿಯ ಗೀತೆ ಹೀಗಿದೆ.

ಮೊದಲ ಹದಮಳೆ ತಿರೆಯ ತೊಯ್ಯಲು ಮಿಂದ ಕಾಫಿಯ ತೋಟವು
ಇಂದ್ರನಂದನದಮರವೃಂದಕು ಬೆರಗನೀಯುವ ನೋಟವು!
ಬೆಟ್ಟದೋರೆಯು, ಕಣಿವೆ, ತಪ್ಪಲು, ಗಿರಿಯ ನೆತ್ತಿಯೊಳೆಲ್ಲಿಯು,
ಕಣ್ಣು ಹೋಹೆಡೆಯಲ್ಲಿ ಕಾಫಿಯ ಹೂವು, ಬೆಣ್ಣೆಯು, ಬೆಳ್ಳಿಯು!
ಗಗನ ಭದ್ರತೆ ಜಗದ ಶುಭ್ರತೆಯೆಲ್ಲ ಸುಂದರ ಶಾಪದಿ
ಕಾಫಿಕಾನಿಗೆ ಬಂದು ನಿಂದಿವೆ ಪುಣ್ಯಪುಷ್ಪದ ರೂಪದಿ!
ಕಣ್ಣು ತಣಿವುದು, ಮನವು ಮಣಿವುದು, ಹಾಲುಹೂವಿನ ಹೊಳೆಯಲಿ!
ಅಮೃತಸ್ನಾನವೊ ಮೇಣು ಪಾನವೊ ಬಿಳಿಯ ಮುತ್ತಿನ ಮಳೆಯಲಿ! [೩]

ಕೊನೆ ಟಿಪ್ಪಣಿ:-

೧) 'ಚಿದಂಬರ ರಹಸ್ಯ'–ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಮೈಸೂರು ೨೦೦೭
೨) 'ಹಾರುವ ಓಟ್ಟೆ' – ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಮೈಸೂರು ೨೦೦೭
೩) 'ಪಕ್ಷಿಕಾಶಿ'–ಕುವೆಂಪು, ಪುಸ್ತಕ ಪ್ರಕಾಶನ, ಮೈಸೂರು ೧೯೭೬
೪) 'ಬೆಳ್ದಿಂಗಳಪ್ಪನ ಪೂಜೆ'– ಡಾ. ಅಗ್ರಹಾರ ಕೃಷ್ಣಮೂರ್ತಿ

ಅಧ್ಯಾಯ-೭

ದೇಸಿ ಕೃಷಿ ಸಂಸ್ಕೃತಿ ಮತ್ತು ಮಹಿಳೆ

ಭೂಮಿಯನ್ನು ಭೂಮ್ತಾಯಿ ಅನ್ನುತ್ತಾರೆ ನಮ ಜನಪದರು. ಭೂಮಿಗೆ ತಾಯಿ ಸ್ಥಾನವನ್ನು; ಹೆತ್ತ ತಾಯಿಗೂ ಭೂಮ್ತಾಯಿ ಸ್ಥಾನವನ್ನು ಕೊಟ್ಟಿರುವ ಸಂಸ್ಕೃತಿ ನಮ್ಮದು. ಭೂಮಿಯನ್ನು ಅನ್ನಪೂರ್ಣೆ ಅನ್ನುತ್ತೇವೆ. ನಮ್ಮ ತಾಯಂದಿರನ್ನು ನಾವು ಅನ್ನಪೂರ್ಣೆ ಅನ್ನುತ್ತೇವೆ. ಬೇಸಾಯ ಜೀವನದಲ್ಲಿ ಗಂಡಸರಿಗಿಂತ ಹೆಚ್ಚಿನ ಜವಾಬ್ಧಾರಿಯನ್ನು ಹೆಂಗಸರು ನಿರ್ವಹಿಸುತ್ತಿದ್ದಾರೆ. ಒಂದು ವೇಳೆ ಗಂಡು ಇಲ್ಲದಿದ್ದರೆ ಬೇಸಾಯ ಜೀವನ ನಡೆಯಬಹುದು. ಆದರೆ ಹೆಣ್ಣು ಇಲ್ಲದಿದ್ದರೆ ಬೇಸಾಯ ಸಂಸ್ಕೃತಿಯನ್ನು ಕಲ್ಪಿಸಲಾಗದು. ಅಷ್ಟರಮಟ್ಟಿಗೆ ಹೆಣ್ಣಿನ ಪಾತ್ರ ಬೇಸಾಯ ಜೀವನದಲ್ಲಿ ಹಿರಿದು.

ನಮ್ಮ ಕೃಷಿ ವಿಶ್ವವಿದ್ಯಾಲಯಗಳು ವರ್ಷಕ್ಕೊಂದು ಬಾರಿ – ರಾಜ್ಯ ಮಟ್ಟದ ಕೃಷಿಮೇಳ ನಡೆಸಿ, ತಮ್ಮ ಮಾನದಂಡಗಳ ಪ್ರಕಾರ ಬೇಸಾಯದಲ್ಲಿ ಸಾಧನೆ ಮಾಡಿದವರಿಗೆ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸುತ್ತವೆ. ಆದರೆ ಬೇಸಾಯ ಒಬ್ಬರಿಂದ ಆಗುವ ಕೆಲಸ ಅಲ್ಲ. ಕೃಷಿ ತಂತ್ರಜ್ಞಾನ, ಕೌಶಲ್ಯಗಳ ಎಲ್ಲ ಮಟ್ಟದ ತಿಳುವಳಿಕೆ ಮಹಿಳೆಯರಿಗಿದ್ದರೂ, ಅವರನ್ನು ಈ ಪ್ರಶಸ್ತಿಗಳಿಗೆ ಪರಿಗಣಿಸಿದಂತೆ ಕಾಣುವುದಿಲ್ಲ. ವಾಸ್ತವವಾಗಿ ಕೃಷಿ ಪಂಡಿತ ಪ್ರಶಸ್ತಿಯನ್ನು ವ್ಯಕ್ತಿಗೆ ಕೊಡಲೇಬಾರದು, ಕುಟುಂಬಕ್ಕೆ ಕೊಡಬೇಕು ಮತ್ತು ಕುಟುಂಬದ ಯಜಮಾನನೊಂದಿಗೆ ಯಜಮಾನ್ತಿಗೂ ಸೇರಿಸಿ ಗೌರವ ಸಮರ್ಪಣೆ ಮಾಡಬೇಕು. ಜೊತೆಗೆ ಆ ಕೃಷಿಗಾಗಿ ದುಡಿದ ಕುಟುಂಬದ ಇತರರು ಮತ್ತು ಕೃಷಿ ಕಾರ್ಮಿಕರಿಗೂ ಆ ಗೌರವ, ಸನ್ಮಾನಗಳಲ್ಲಿ ಪಾಲು ಇರಲೇಬೇಕು. ದುಡಿದವರನ್ನೆಲ್ಲ ಕಡೆಗಣಿಸಿ ಏಕವ್ಯಕ್ತಿಯನ್ನು ಸನ್ಮಾನಿಸುವುದು ಕೃಷಿ ಸಂಸ್ಕೃತಿಯ ಲಕ್ಷಣವಲ್ಲ.

ಹಳ್ಳಿಗಳಲ್ಲಿ ಮುಂಜಾನೆಯೇ ಎದ್ದು ಕೊಟ್ಟಿಗೆಯ ಕಸ ಗುಡಿಸಿ, ಮನೆಯ ಕಸ ಗುಡಿಸಿ, ಅಂಗಳ ಗುಡಿಸಿ ಸಗಣಿಯಲ್ಲಿ ಸಾರಿಸಿ, ರಂಗೋಲಿ ಹಾಕಿ, ಹಾಲು ಕರೆಯುವವರು ಹೆಂಗಸರು, ಅಡಿಗೆ ಮಾಡುವವರು ಹೆಂಗಸರು. ಮನೆಯವರಿಗೆಲ್ಲ ಬಡಿಸಿ, ಹೊಲದವರಿಗೂ ಬುತ್ತಿ ಹೊತ್ತು, ತಾವೂ ಉಂಡು ಹೊಲದ ಕೆಲಸಕ್ಕೊ, ಕೂಲಿಗೋ ಹೋಗುವವರು ಹೆಂಗಸರು. ಗ್ರಾಮೀಣ ಬೇಸಾಯ ಜೀವನದಲ್ಲಿ ಬಾಲ್ಯದಿಂದ ಸಾಯುವವರೆಗೂ ನಿರಂತರವಾಗಿ ದುಡಿಯುವವರು ಹೆಣ್ಣುಮಕ್ಕಳು. ಅವರಿಗೆ ಬೇಸಾಯ ಜೀವನದಲ್ಲಿರುವಷ್ಟು ದುಡಿಮೆ ಬೇರಾವ ಕ್ಷೇತ್ರದಲ್ಲೂ ಇರಲು ಸಾಧ್ಯವಿಲ್ಲ. ಮುಂಜಾನೆ ಕೋಳಿ ಕೂಗುವಾಗ ಎದ್ದವರಿಗೆ ರಾತ್ರಿ ಮಲಗುವವರೆಗೂ ಅವಿಶ್ರಾಂತ ದುಡಿಮೆ. ಹೀಗಾಗಿ ಈ ಕೃಷಿ ಜೀವನ ಉಳಿದಿರುವುದು ಮತ್ತು ನಿಂತಿರುವುದು ಮಹಿಳೆಯರಿಂದಲೇ. ಆಕೆಯೇ ಕೃಷಿ ಜೀವನದ ಮೂಲ ಅಡಿಪಾಯ ಮತ್ತು ಆಧಾರಸ್ತಂಭ.

ಕೃಷಿ ಜೀವನದಲ್ಲಿ ಹೆಣ್ಣು ಕೇವಲ ಗಂಡಿನ ಹೆಗಲಿಗೆ ಹೆಗಲೆಣೆಯಾಗಿ ನಿಂತರಷ್ಟೆ ಸಾಲುವುದಿಲ್ಲ. ಅದಕ್ಕೂ ಮೀರಿದ ಹೆಗಲಾಗಿ ಸಮಸ್ತವನ್ನು ಆಕೆ ನಿಭಾಯಿಸಬೇಕು. ನಮ್ಮ ಕೃಷಿ ಜೀವಸದಲ್ಲಿ ಕುಡುಕ ಗಂಡ, ಬೇಜವಬ್ದಾರಿ ಗಂಡ, ದುಶ್ಚಟಗಳ ಗಂಡ, ಸೋಮಾರಿ

ಗಂಡ, ಅಲೆಮಾರಿ ಗಂಡ, ಪೇಟೆ ಪಟ್ಟಣಗಳ ತಿರುಗಾಟದ ಗಂಡ, ಸಾಲಗಾರ ಗಂಡ.....ಹೀಗೆ ನಾನಾ ತರದ ಗಂಡಗಳಿರಬಹುದು. ಆದರೆ ನಮ್ಮ ಹಳ್ಳಿಗಾಡಿನ ಹೆಣ್ಣು ಮಕ್ಕಳಲ್ಲಿ ಈ ಬಗೆಯ ಒಂದೇ ಒಂದು ಗುಣವನ್ನು ನಾವು ಕಾಣಲಾಗುವುದಿಲ್ಲ.

ಹತ್ತಾರು ಮಕ್ಕಳನ್ನು ಹಡೆಯುವ ಸಾಮರ್ಥ್ಯವಿದ್ದ ನಮ್ಮ ದೇಸಿ ಕೃಷಿ ಹೆಣ್ಣು ಮಕ್ಕಳಿಗೆ ಭೂಮಿಯ ಮೇಲಿನ ಜೀವ ವೈವಿಧ್ಯತೆಯ ಬೆಲೆ ಏನು ಎಂಬುದು ಗೊತ್ತಿತ್ತು. ಅವರಿಗೆ ಅಟ್ಟು ಉಣ್ಣಲು ಬೇಕಾದ ಸೊಪ್ಪು-ತರಕಾರಿಗಳ ಬಗೆಗೆ ಪರಿಜ್ಞಾನವಿತ್ತು. ಬಗೆ ಬಗೆಯ ಹೂವಿನ ಗಿಡಗಳ ಬೆಳೆಸುವ ಕುರಿತು ಆಸ್ಥೆ ಇತ್ತು. ಹಟ್ಟಿಯ ಹಿತ್ತಲುಗಳು ನಮ್ಮ ಹಳ್ಳಿ ಹೆಣ್ಣು ಮಕ್ಕಳ ಅಂತರಂಗದ ಕನ್ನಡಿಗಳಾಗಿದ್ದವು. ಅಲ್ಲಿ ಕೀರೆಸೊಪ್ಪಿನ ಮಡಿಗಳು, ದಂಟಿನ ಸೊಪ್ಪು, ವನಗೊನೆ, ಒಂದೆಲಗ; ಒಂದು ನುಗ್ಗೆ, ಒಂದು ಕರಿಬೇವಿನ ಮೆಳೆ, ಒಂದೆರಡು ಪಪ್ಪಾಯ, ಒಂದೆರಡು ಬಾಳೆ, ಸೀಬೆ, ದಾಳಿಂಬೆ, ನಾಲ್ಕು ಕನಕಾಂಬರ, ಕೊಣ ಮಾವಿನ ಗಿಡಕ್ಕೆ ಹಬ್ಬಿದ ಒಂದು ಮಲ್ಲಿಗೆ ಬಳ್ಳಿ, ಹಾಲವಾಣದ ಗಿಡಕ್ಕೊಂದು ವೀಳ್ಯೆದೆಲೆಯ ಬಳ್ಳಿ, ಒಂದು ಸಂಪಿಗೆ ಮರ, ಚೆಂಡು ಹೂ.....ಹೀಗೆ ಇರುವ ಜಾಗದಲ್ಲಿ ಹುಲ್ಲುಮೆದೆಗೂ ಅವಕಾಶವಿತ್ತು. ತಮ್ಮ ವ್ಯಕ್ತಿತ್ವದ ಘನತೆಯನ್ನು ರೂಪಿಸಿಕೊಳ್ಳುತ್ತಿದ್ದರು. ಈ ಗಿಡಗಳಿಗೆಲ್ಲ ಮನೆಯ ಬಚ್ಚಲಿನ ನೀರು, ಶ್ರಮ ವಹಿಸಿ ಬಾವಿಯ ನೀರು ತಂದು ಹಾಕುತ್ತಿದ್ದರು. ಹಟ್ಟಿಯ ಎಲ್ಲ ಕಾರ್ಯಗಳಿಗೆ ಬಾವಿಯಿಂದಲೇ ನೀರು ಸೇದಿ ತರಬೇಕಾಗಿತ್ತು. ಸೌದೆಗಳಲ್ಲಿ ಅಡಿಗೆ ಮಾಡಬೇಕಾಗಿತ್ತು. ನೀರು ಕಾಯಿಸುವ ಒಲೆಗಳು ಸೌದೆಯಲ್ಲೇ ಉರಿಯುತ್ತಿದ್ದವು. ರೇಷ್ಮೆ ಬೆಳೆಗಾರರ ಕುಟುಂಬಗಳಲ್ಲಂತೂ ಮಧ್ಯರಾತ್ರಿಯಲ್ಲೂ ಎದ್ದು ಸರ್ಹೊತ್ತಿನ ಸೊಪ್ಪು ಹಾಕಬೇಕಾಗಿತ್ತು. ರಾಗಿ ಕಲ್ಲಿನಿಂದ ರಾಗಿ ಬೀಸುವವರು, ಒಳ ಕಲ್ಲಿನ ಮೇಲೆ ಒನಕೆಯಿಂದ ಭತ್ತ ಕುಟ್ಟುವವರೂ ಮಹಿಳೆಯರೇ ಆಗಿದ್ದರು.

ಹೊಲ, ಗದ್ದೆ, ತೋಟಗಳಲ್ಲಿ ಗಂಡಸರಿಗೆ ಸರಿಸಾಟಿಯಾಗಿ ಗೆಯ್ಯುತ್ತಿದ್ದ ನಮ್ಮ ಮಹಿಳೆಯರು ಸಾಮಾನ್ಯವಾಗಿ ಏರು ಕಟ್ಟುತ್ತಿರಲಿಲ್ಲ ಮತ್ತು ಗಾಡಿ ಹೊಡೆಯುತ್ತಿರಲಿಲ್ಲ. ಆದರೆ ಕೆಲ ಹೆಣ್ಣು ಮಕ್ಕಳು ಉಳುಮೆಯನ್ನು ಮಾಡುತ್ತಿದ್ದರು, ಗಾಡಿಯನ್ನೂ ಹೊಡೆಯುತ್ತಿದ್ದರು. ಮರ ಕೂಡ ಹತ್ತುತ್ತಿದ್ದರು, ಎಮ್ಮೆ ದನಗಳನ್ನು ಮೇಯಿಸಲು ಹೋಗುತ್ತಿದ್ದರು. ಅನಾದಿ ಕಾಲದಿಂದಲೂ ಬೀಜ ಸಂರಕ್ಷಣೆಯ ಪಾತ್ರ ಮಹಿಳೆಯರದೇ ಆಗಿದೆ. ಮುಖ್ಯವಾಗಿ ತಮ್ಮ ಅಡುಗೆಗೆ ಬೇಕಾದ ಎಲ್ಲ ಬಗೆಯ ತರಕಾರಿ ಬೀಜಗಳು, ಕಾಳುಗಳ ಬೀಜಗಳು, ಎಣ್ಣೆ ಕಾಳುಗಳ ಬೀಜಗಳು, ಸೊಪ್ಪಿನ ಬೀಜಗಳು, ಮೆಣಸಿನಕಾಯಿ ಬೀಜಗಳು, ಧಾನ್ಯಗಳ ಬೀಜಗಳನ್ನು ತಾವೇ ಸಂಗ್ರಹಿಸಿಡುತ್ತಿದ್ದರು. ಮಡಕೆಗಳು, ಕುಡಿಕೆಗಳು, ಹಳಗೆ, ಗುಡಾಣಗಳು, ಸೋರೆಕಾಯಿ ಬರುಡೆಗಳು.....ಇವು ಸಾಧಾರಣವಾಗಿ ಇವರ ಬೀಜ ಬ್ಯಾಂಕುಗಳಾಗಿರುತ್ತಿದ್ದವು. ಮುಂದಿನ ಬಿತ್ತನೆಗಾಗಿ ಸಂಗ್ರಹಿಸಿಡುತ್ತಿದ್ದ ಎಲ್ಲವನ್ನು ಒಲೆಯ ಬೂದಿ ಸವರಿ, ಲಕ್ಕಿ ಸೊಪ್ಪು, ಬೇವಿನ ಸೊಪ್ಪು, ಒಣ ಮೆಣಸಿನಕಾಯಿ ಬೆರೆಸಿ ಇಡುತ್ತಿದ್ದರು. ಇವರ ಬೀಜ ಬ್ಯಾಂಕಿನಲ್ಲಿ ಇರುತ್ತಿದ್ದ ಬೀಜಗಳು ಇಂತಿವೆ.

ಸೊಪ್ಪಿನ ಬೀಜಗಳು: ಸಬಸಿಗೆ, ಕೀರೆ, ಕಿಲಕೀರೆ, ದಂಟು, ಒಂದೆಲಗ, ವನಗೊನೆ, ಮೆಂತ್ಯ, ಕೊತ್ತಂಬರಿ, ಪುಂಡಿ, ತರಕಾರಿ ಬೀಜಗಳು: ಸೌತೆಕಾಯಿ, ಕುಂಬಳಕಾಯಿ, ಹಾಗಲಕಾಯಿ, ಪಡವಲಕಾಯಿ, ಈರೆಕಾಯಿ, ಸೋರೆಕಾಯಿ, ಸೀಮೆ ಬದನೆಕಾಯಿ,

ಈರುಳ್ಳಿ, ಬದನೆಕಾಯಿ, ಗೋರಿಕಾಯಿ, ತಿಂಗಳ ಅವರೆ, ಚಪ್ಪರದವರೆ, ಮೂಲಂಗಿ, ಬೀನ್ಸ್, ಬಟಾಣಿ, ಮೆಣಸಿನಕಾಯಿ, ಟಮೋಟೊ, ಬೂದುಗುಂಬಳ, ಮಂಗಳೂರು ಸೌತೆ, ಬೆಂಡೆಕಾಯಿ, ನುಗ್ಗೆಕಾಯಿ. ಕಾಳುಗಳು: ತೊಗರಿಕಾಳು, ಅವರೆಕಾಳು, ಅಲಸಂದೆ ಕಾಳು, ಹೆಸರುಕಾಳು, ಉದ್ದಿನ ಕಾಳು, ಕಡ್ಲೆಕಾಳು, ಶೇಂಗ, ಮಡಕಿ, ಎಣ್ಣೆ ಕಾಳುಗಳು, ಹರಳು, ಸೂರ್ಯಕಾಂತಿ, ಕುಸುವೆ, ಯಳ್ಳು, ಹುಚ್ಚೆಳ್ಳು.

ಧಾನ್ಯಗಳು: ಭತ್ತ, ರಾಗಿ, ಸಜ್ಜೆ, ನವಣೆ, ಹಾರಕ, ಊದಲು, ಬರಗು, ಕೊರಲೆ, ಸಾಮೆ, ಜೋಳ, ಮುಸುಕಿನಜೋಳ, ಗೋಧಿ ಇತ್ಯಾದಿ.

ಇತರೆ: ಪಪ್ಪಾಯಿ, ಶುಂಠಿ, ಮೆಣಸು, ಅರಿಶಿಣ ಇತ್ಯಾದಿ. ಬಲಿತ ಹಂಬುಗಳನ್ನು ಕತ್ತರಿಸಿ ಬೇಕಾದಾಗ ನೆಡುತ್ತಿದ್ದರು.

ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲೂ ತೋಪುಗಳಿರುತ್ತಿದ್ದವು. ಈ ತೋಪುಗಳಲ್ಲಿ ಹಿಪ್ಪೆ, ಹೊಂಗೆ, ಬೇವು, ನೇರಳೆ, ಆಲ, ಅರಳಿ, ಮರಗಳಿರುತ್ತಿದ್ದವು. ಗ್ರಾಮದಿಂದ ಗ್ರಾಮಕ್ಕೆ ಹೋಗುವ ಪ್ರತಿ ರಸ್ತೆಯ ಇಕ್ಕೆಲಗಳಲ್ಲಿ ಬೇವು, ಹಿಪ್ಪೆ, ಹೊಂಗೆ, ಗೊಬ್ಬಳಿ, ನೇರಳೆ, ಆಲ ಮುಂತಾದ ಮರಗಳಿರುತ್ತಿದ್ದವು. ಈ ಮರಗಳನ್ನು ಕಾಪಾಡುವ ಸಾರ್ವಜನಿಕ ಕಾಳಜಿ ಎಲ್ಲರಲ್ಲೂ ಇತ್ತು. ಈ ಮರಗಳು ಹಕ್ಕಿ ಪಕ್ಷಿಗಳಿಗೆ ಆಹಾರ ಆಶ್ರಯ ಎರಡನ್ನೂ ನೀಡುತ್ತಿದ್ದವು. ಬೇಸಿಗೆಯಲ್ಲಿ ಹಳ್ಳಿಯ ಹೆಂಗಸರು-ಮಕ್ಕಳು ಮರದಿಂದ ಬಿದ್ದ ಹಿಪ್ಪೆ, ಹೊಂಗೆ, ಬೇವಿನ ಬೀಜಗಳನ್ನು ಆಯ್ದು ತರುತ್ತಿದ್ದರು.

ಈ ಬೀಜಗಳನ್ನು ಬಿಸಿಲಲ್ಲಿ ಒಣಗಿಸಿ ಸಿಪ್ಪೆ ತೆಗೆದು, ಕುಟ್ಟಿ ಪುಡಿ ಮಾಡಿ, ಬೇಯಿಸಿ, ಎಣ್ಣೆ ತೆಗೆಯುತ್ತಿದ್ದರು. ವಿದ್ಯುತ್ ದೀಪಗಳೂ, ಸೀಮೆಎಣ್ಣೆಗಳಿಲ್ಲದ ಹಳ್ಳಿಗಳ ಮನೆಗಳ ದೀಪ ಉರಿಯುತ್ತಿದ್ದುದ್ದೆ ಸಾರ್ವಜನಿಕವಾಗಿ ಬೆಳೆದ ಬೇವು, ಹಿಪ್ಪೆ, ಹೊಂಗೆ ಬೀಜಗಳಿಂದ ತೆಗೆದ ಎಣ್ಣೆಯಿಂದ. ತಲೆಗೆ ಹಾಕುವ ಹರಳೆಣ್ಣೆಯನ್ನು ಹಳ್ಳಿಯ ಹೆಂಗಸರು ತಾವೇ ಮಾಡಿಕೊಳ್ಳುತ್ತಿದ್ದರು. ಹರಳನ್ನು ಹದವಾಗಿ ಹುರಿದು, ಕುಟ್ಟಿ ಪುಡಿ ಮಾಡಿ ಬೇಯಿಸಿ ಎಣ್ಣೆ ತೆಗೆಯುತ್ತಿದ್ದರು. ಕರಾವಳಿಯ ರೈತ ಮಹಿಳೆಯರು ಕೊಬ್ಬರಿಯಿಂದ ತಾವೇ ಎಣ್ಣೆ ತೆಗೆಯುತ್ತಿದ್ದರು. ತೆಂಗಿನ ಕಾಯಿಯಿಂದ ಹಾಲು ತೆಗೆದು ಕುದಿಸಿಯೂ ಎಣ್ಣೆ ಮಾಡಿಕೊಳ್ಳುತ್ತಿದ್ದರು. ಅಡುಗೆಗಾಗಿ ಬಳಸುವ ಶೇಂಗಾ, ಕುಸುಬೆ, ಯಳ್ಳು, ಹುಚ್ಚೆಳ್ಳು, ಸೂರ್ಯಕಾಂತಿ ಎಣ್ಣೆಗಳನ್ನು ಹಳ್ಳಿಗಳಲ್ಲಿದ್ದ ಎಣ್ಣೆ ಗಾಣಗಳು ಆಡಿಸಿ ಕೊಡುತ್ತಿದ್ದವು. ಅಂಗಡಿಗಳು, ಪೇಟೆಗಳನ್ನು ಅವಲಂಬಿಸದ ಈ ಸ್ವಾವಲಂಬಿ ಬಾಳುವೆಗೆ ನಮ್ಮ ಹಳ್ಳಿಗಾಡು ಹೆಣ್ಣು ಮಕ್ಕಳ ಅವಿಶ್ರಾಂತ ದುಡಿಮೆಯೇ ಕಾರಣವಾಗಿದೆ.

ಹೀಗೆ ದುಡಿದು, ದುಡಿದು ತಮ್ಮ ದುಡಿಮೆಯ ಸಂಸ್ಕೃತಿಯನ್ನು ಹಾಡುಗಳ ಮೂಲಕ ಕಟ್ಟಿದರು. ತಮ್ಮ ಸುಖ-ದುಖ:ಗಳನ್ನು ರಾಗಿ ಕಲ್ಲಿನ ಮುಂದೆ ಕುಳಿತು ರಾಗಿ ಬೀಸುವಾಗ ಬಿನ್ನವಿಸಿಕೊಂಡರು. ಒರಳಿನಲ್ಲಿ ಒನಕೆಯಿಂದ ಭತ್ತ ಕುಟ್ಟುವಾಗ ತಾಳಕ್ಕೊಂದು, ಲಯಕ್ಕೊಂದು ರಾಗ ಕಟ್ಟಿದರು. ಭತ್ತ ರಾಗಿಗಳನ್ನು ನಾಟಿ ಮಾಡುವಾಗ, ಕಳೆ ತೆಗೆಯುವಾಗ, ಬೆಳೆ ಕೊಯ್ಯುವಾಗ ಹಾಡಿ ನಲಿದರು. ಸೋಬಾನೆ ಹಾಡುಗಳು, ಕಲ್ಯಾಣದ

ಹಾಡುಗಳು, ಲಾಲಿ ಹಾಡುಗಳು, ಸುಗ್ಗಿ ಹಾಡುಗಳ ಮೂಲಕ ನಮ್ಮ ಸ್ವಾವಲಂಬಿ ಹಳ್ಳಿಗಳನ್ನು ಸಮೃದ್ಧಗೊಳಿಸಿದರು.

ಗ್ರಾಮೀಣ ಮಹಿಳೆಯರ ಬಗ್ಗೆ ನಮ್ಮ ದೇವನೂರು ಮಹಾದೇವರು ಆಡಿರುವ ಮಾತುಗಳು ಇಲ್ಲಿ ಸ್ಮರಣೀಯ **"ಇಷ್ಟುಹೊತ್ತಿಗಾಗ್ಲೇನೆ ಹಳ್ಳಿಗಳು ದಿವಾಳಿಯೆದ್ದು ಹೋಗಬೇಕಾಗಿತ್ತು. ಆದ್ರೆ ಗ್ರಾಮೀಣ ಭಾರತದ ಮಹಿಳೆಯರು ಹಳ್ಳಿಗಳ ನೊಗ ಹೊತ್ತು ನಿಂತ ಪರಿಣಾಮ ಹಳ್ಳಿಗಳು ಉಳಿದುಕೊಂಡಿವೆ. ಮಹಿಳೆಯರು ಸಂಘ ಸಂಸ್ಥೆಗಳನ್ನು ಮಾಡ್ಕೊಂಡು, ಸಣ್ಣಪುಟ್ಟ ರಚನಾತ್ಮಕ ಕೆಲಸಗಳನ್ನು ಮಾಡ್ಕೊಂಡು, ಪರಸ್ಪರ ಆರ್ಥಿಕ ಸಹಕಾರ ಮಾಡ್ಕೊಂಡು ಹಳ್ಳಿಗಳ ಮಾನ ಉಳುಸುದ್ರು, ಹಳ್ಳಿಗಳ ಗಂಡಸರ ಮಾನ ಕೂಡ ಕಾಪಾಡಿದ್ರು, ಇಲ್ದೆ ಹೋಗಿದ್ರೆ ಇಷ್ಟೊತ್ತಿಗೆ ಹಳ್ಳಿಗಳು ಪಾಪರ್ ಆಗುತ್ತಿದ್ದವೇನೊ. ಇವತ್ತು ೭೦ ಭಾಗ ಭಾರತ, ಅಂದ್ರೆ ಗ್ರಾಮೀಣ ಭಾರತ, ಮಲಗಿದೆ. ಇದನ್ನು ಬಡಿದು ಎಬ್ಬಿಸಬೇಕಾಗಿದೆ. ಚಾವುಟಿ ಏಟು ಕೊಟ್ಟು ಎಬ್ಬಿಸಬೇಕಾಗಿದೆ. ಈ ಚಾವುಟಿ ಏಟು ಕೊಡುವಂಥ ಕೆಲಸವನ್ನು ಹಳ್ಳಿಗಳಲ್ಲಿ ರಚನಾತ್ಮಕ ಕೆಲಸ ಮಾಡ್ತಿರೊ ಮಹಿಳಾ ಸಂಘ ಸಂಸ್ಥೆಗಳೆ ಮಾಡಿ ಕಾಪಾಡಬೇಕಾಗಿದೆ. ಇಲ್ಲದಿದ್ದರೆ ದಾರಿ ಇಲ್ಲ."**

ಇಡೀ ಜಗತ್ತಿಗೆ ಮಾದರಿ ಎಂಬಂತೆ ಹಳ್ಳಿಗಾಡ ಸಂಸ್ಕೃತಿಯನ್ನು ಕಟ್ಟಿದವರು, ಎಲ್ಲ ಕಾಲಕ್ಕೂ, ಎಲ್ಲ ರೀತಿಯಲ್ಲೂ ಆದರ್ಶವಾಗಿ ಬಾಳಿದವರು, ಸಾವಿರಾರು ವರ್ಷ ತಪಸ್ಸಿನಂತೆ ದುಡಿದು ಬೇಸಾಯದ ಚರಿತ್ರೆ ನಿರ್ಮಿಸಿದವರು ನಮ್ಮ ಹೆಣ್ಣು ಮಕ್ಕಳು.

ಈಗಲೂ ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ಕೋಳಿ ಕೂಗುವ ಹೊತ್ತಿಗೆ ಏಳುತ್ತಾರೆ. ಅವರ ಮನೆಗಳಲ್ಲಿ ಈಗ ದನಗಳು ಇಲ್ಲ, ಕರಾವೂ ಇಲ್ಲ. ಹಳ್ಳಿಯ ಜೀವನ ಅವರಿಗೆ ಒಗ್ಗದಾಗಿದೆ. ಪೇಟೆಯ ಹೆಣ್ಣು ಮಕ್ಕಳು ಅವರ ಬಾಳಿನ ಆದರ್ಶದಂತೆ ಕಾಣುತ್ತಾರೆ. ರೈತರ ಗಂಡು ಮಕ್ಕಳಿಗೆ ಯಾರೂ ಹೆಣ್ಣು ಕೊಡಲು ಮುಂದೆ ಬರುವುದಿಲ್ಲ ಎಂಬ ಮಾತು ಜನಜನಿತ ಎಂಬಂತಾಗಿದೆ. ನಮ್ಮ ಹೆಣ್ಣು ಮಕ್ಕಳು ಬಿಸಿಲಲ್ಲಿ, ಮಳೆಯಲ್ಲಿ, ಗಾಳಿಯಲ್ಲಿ, ಛಳಿಯಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಹಿಂಜರಿಯುತ್ತಿದ್ದಾರೆ. ಹೊಲ-ಗದ್ದೆಗಳು ಬೇಡುವ ಶ್ರಮವನ್ನು ನೀಡಲು ಇವರ ಮನಸ್ಸು ಮುಷ್ಕರ ಹೂಡಿ ನಿಂತಿದೆ. ಮನೆ ಮನೆಗೂ ಟಿ.ವಿ.ಗಳು ಬಂದಿವೆ. ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಫೋನ್‌ಗಳಿವೆ. ಪ್ರತಿಯೊಂದು ಮಾಹಿತಿಯೂ ಈಗ ಬೆರಳ ತುದಿಯಲ್ಲೇ ಸಿಗುತ್ತಿದೆ.

ಓದು, ಬರಹ ಬಾರದಿದ್ದರೂ ಟಿ.ವಿ. ಸೀರಿಯಲ್ಲುಗಳು, ಸಿನಿಮಾಗಳು, ಜಾಹೀರಾತುಗಳು ಎಲ್ಲ ಬಗೆಯ ಭಾಷೆಗಳನ್ನೂ ಕಲಿಸುತ್ತಿವೆ. ಎಲ್ಲ ಬಗೆಯ ತಿಳುವಳಿಕೆಗಳನ್ನು ಹೇಳಿಕೊಡುತ್ತಿವೆ. ಎಲ್ಲರೂ ಟಿ.ವಿ. ಫ್ಯಾಷನ್, ಡಿಸೈನ್‌ಗಳನ್ನು ಇಷ್ಟಪಡುತ್ತಾರೆ. ಅಂಥ ಬಟ್ಟೆಗಳನ್ನು ತೊಡಬೇಕೆಂದು ಆಸೆ ಪಡುತ್ತಾರೆ. ಆದರೆ, ನಮ್ಮ ಭತ್ತ, ರಾಗಿ, ಜೋಳಗಳಿಗೆ ಆ ತಾಕತ್ತು ಇಲ್ಲ. ನಮ್ಮ ಲೀಟರ್ ಹಾಲಿಗೆ ೨೦ ರೂಪಾಯಿ; ಬಾಟಲ್ ನೀರಿಗೂ ಇಪ್ಪತ್ತು ರೂಪಾಯಿ! ಒಂದು ಕೆ.ಜಿ. ಸಕ್ಕರೆ ನಿರ್ಮಾಣದ ಹಿಂದೆ ೭೦೦ ಲೀಟರ್ ನೀರು ಅಡಗಿದೆ. ಆದರೆ ಸಕ್ಕರೆ ಬೆಲೆ ಕೆ.ಜಿ.ಗೆ ಕೇವಲ ೩೫ ರೂಪಾಯಿ ಹಳ್ಳಿಗಾಡಿನಿಂದ ವಿಮುಖವಾಗುವ ಒಂದು ಮನಃಸ್ಥಿತಿ ಈಗಷ್ಟೇ ಚಿಗುರೊಡೆಯಲು ಪ್ರಯತ್ನಿಸಿದೆ. ಆ ಪ್ರಯತ್ನದ ಭಾಗವಾಗಿ ಕೋಳಿ ಕೂಗುವ ಹೊತ್ತಿಗೆ ಏಳುವ ನಮ್ಮ

ಹೆಣ್ಣು ಮಕ್ಕಳು ಊರ ಮುಂದೆ ಬಂದು ಬಸ್ಸಿಗಾಗಿ ಕಾಯುತ್ತಾರೆ. ಬೆಂಗಳೂರು, ಮೈಸೂರಿನ ಸಿದ್ಧ ಉಡುಪುಗಳ ಕಾರ್ಖಾನೆಗಳು ಹಳ್ಳಿ ಹಳ್ಳಿಗೆ ಬಸ್ಸುಗಳನ್ನು ಕಳಿಸುತ್ತವೆ. ಈ ಬಸ್ಸುಗಳಿಗೆ ತುಂಬಿ ಹೋಗುವ ಹೆಣ್ಣು ಮಕ್ಕಳು ರಾತ್ರಿ ಮರಳಿ ಮನೆಗೆ ಹಿಂದಿರುಗುತ್ತಾರೆ. ತುಮಕೂರಿನಿಂದ, ಕೋಲಾರ ಜಿಲ್ಲೆಯಿಂದ, ಮೈಸೂರಿನಿಂದ ಓಡಾಡುವ ರೈಲುಗಳಲ್ಲಿ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುವ ಹೆಣ್ಣು ಮಕ್ಕಳೇ ತುಂಬಿರುತ್ತಾರೆ. ಇದು ಹಳ್ಳಿಗಳನ್ನು ತಬ್ಬಲಿಗಳನ್ನಾಗಿಸುವ ಒಂದು ದುರಂತ ಚಿತ್ರಣವಾಗಿ ಪರಿವರ್ತನೆಗೊಂಡಿದೆ.

ಶೇಕಡ ೪೦ ರಷ್ಟು ಹದಿ ಹರೆಯದ ಹಳ್ಳಿಯ ಹೆಣ್ಣು ಮಕ್ಕಳು ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಜಿಲ್ಲೆಗಳಿಂದ ಬೆಂಗಳೂರು ನಗರದ ಗಾರ್ಮೆಂಟ್ ಫ್ಯಾಕ್ಟರಿಗಳಿಗೆ ದುಡಿಯಲು ಹೋದರೆ ಈ ಭಾಗದ ಗ್ರಾಮೀಣ ಜಗತ್ತಿಗೆ ಆಗುವ ನಷ್ಟದ ಪರಿಣಾಮವನ್ನು ಯಾರೂ ಊಹಿಸಿದಂತೆ ಕಾಣುವುದಿಲ್ಲ. ಕಡಿಮೆ ಸಂಬಳ, ಕಡಿಮೆ ವೆಚ್ಚದಲ್ಲಿ ಉಡುಪು ತಯಾರಿಸಿಕೊಳ್ಳುವ ಬಹುರಾಷ್ಟ್ರೀಯ ಕಂಪನಿಗಳ ನೀತಿಯಿಂದಾಗಿ ನಮ್ಮ ಗ್ರಾಮೀಣ ಜೀವನ ವ್ಯವಸ್ಥೆ ಬಲಿಯಾಗುತ್ತಿದೆ.

ಹಳ್ಳಿಯ ಹೆಣ್ಣು ಮಕ್ಕಳು ಬೇಸಾಯ ಸಂಸ್ಕೃತಿಯ ಕೌಶಲ್ಯ ಅರಿತವರು. ನಾಟಿ ಹಾಕುವುದು, ಕಳೆ ಕೀಳುವುದು, ಕೊಯ್ಲು ಮಾಡುವುದು, ಧಾನ್ಯಗಳ ಒಕ್ಕಣೆ, ವಿಭಜನೆ, ಶುದ್ಧಿ ಇತ್ಯಾದಿಗಳನ್ನು ನಿರ್ವಹಿಸಲು ಇಂಥ ಕೌಶಲ್ಯದಲ್ಲಿ ಪಳಗಿದವರೇ ಆಗಬೇಕು. ನೆಲಮೂಲ ಜ್ಞಾನ ಮತ್ತು ಶ್ರಮದ ದುಡಿಮೆಯ ಕೌಶಲ್ಯ ಇರುವವರು ಬೇರೆ ಯಾವುದೇ ಜ್ಞಾನ ವಲಯವನ್ನು ಪ್ರವೇಶಿಸಬಹುದು ಮತ್ತು ಯಶಸ್ವಿಯೂ ಆಗಬಹುದು. ಆದರೆ ಇತರೆ ಜ್ಞಾನದ ಶಿಸ್ತಿನ ಜನ ನೆಲಮೂಲ ಜ್ಞಾನ ಕೃಷಿಯಲ್ಲಿ ಯಶಸ್ವಿಯಾಗುತ್ತಿಲ್ಲ. ಅಂದರೆ ಬೇಸಾಯ ಜ್ಞಾನ ಇರುವವರು ಬೇರೆ ಕ್ಷೇತ್ರಕ್ಕೆ ಹೋದರೆ ಅವರ ಅಷ್ಟೂ ಬೇಸಾಯ ಜ್ಞಾನ ವ್ಯರ್ಥ. ಅದು ಪೀಳಿಗೆಯಿಂದ ಪೀಳಿಗೆಗೆ ಪ್ರವಹಿಸುವುದಿಲ್ಲ. ಬೇಸಾಯದ ಶ್ರಮಕ್ಕಿಂತ ನಗರದ ನೆರಳಲ್ಲಿ, ತಂಪಿನ ವಾತಾವರಣದಲ್ಲಿ ದುಡಿಯುವುದು ಸುಲಭ ಎನ್ನಿಸಿದ ಮೇಲೆ ಅವರು ಮತ್ತೆ ಹಿಂದಿರುಗುವ ಪ್ರಶ್ನೆಯೇ ಇಲ್ಲ. ಜೊತೆಗೆ ಅವರಿಗೆ ಹುಟ್ಟುವ ಮಕ್ಕಳಿಗೂ ಅವರು ಬೇಸಾಯ ಸಖ್ಯ ದೊರೆಯದ ಹಾಗೆ ಮಾಡುತ್ತಾರೆ. ನಮ್ಮಲ್ಲಿ ಬೇಸಾಯ ಜೀವನದಿಂದ ಹೊರ ಹೋದವರು ಉದಾಹರಣೆಗೆ ಸರಕಾರಿ ನೌಕರಿ/ ಬ್ಯಾಂಕು/ ಖಾಸಗಿ ಉದ್ದಿಮೆ.....ಹೀಗೆ ಯಾವುದೇ ಕ್ಷೇತ್ರಕ್ಕೆ ಹೋದವರು ಮರಳಿ ಬರಲೇ ಇಲ್ಲ. ಮರಳಿ ಬಂದರೂ ಅವರು ಬೆರಳೆಣಿಕೆಯಷ್ಟು ಮಾತ್ರ.

ದೇಶೀ ಕೃಷಿ ಜ್ಞಾನ ಸಂಸ್ಕೃತಿ ವಿಸ್ಮರಣೆಗೆ ಸರಿಯುತ್ತಿದ್ದಂತೆ ಹಸಿರು ಕ್ರಾಂತಿಯ ಆಕ್ರಮಣಶೀಲತೆ ಹಳ್ಳಿಯ ಸಮಗ್ರತೆಗೆ, ಸಮಗ್ರ ಜೀವನ ಶೈಲಿಗೆ ಬಲವಾದ ಪೆಟ್ಟು ನೀಡಿತು. ನೂರಾರು ದಾಳಿಗಳು, ಬ್ರಿಟೀಷರ ಆಳ್ವಿಕೆಯ ಪರಿಣಾಮದ ಭಾರೀ ಲೂಟಿಗಳು ಕೂಡ ಹಳ್ಳಿಗಾಡುಗಳನ್ನು ಈ ಮಟ್ಟದ ಶೋಚನೀಯ ಸ್ಥಿತಿಗೆ ತಳ್ಳಿರಲಿಲ್ಲ. ನಮ್ಮ ಆಧುನಿಕ ಶಿಕ್ಷಣದ ಪ್ರೀತಿಯೂ ಕೂಡ ಹಳ್ಳಿಗಾಡಿನ ದು:ಸ್ಥಿತಿಗೆ ಕಾರಣವಾಗಿ ನಿಂತಿದೆ. ಹೀಗಾಗಿ ಇಂದು ಹಳ್ಳಿಗಳು ಬದುಕಲು ಯೋಗ್ಯವಲ್ಲದ ರೀತಿಯಲ್ಲಿ ಬದಲಾಗುತ್ತಲಿವೆ.

೭.೧. ದೇಸೀ ಕೃಷಿಜ್ಞಾನ ಮತ್ತು ರೈತ ಮಕ್ಕಳು:

ಕೃಷಿ ಕುಟುಂಬದ ಮಕ್ಕಳ ಬಾಲ್ಯ ಸಮೃದ್ಧವಾಗಿರುತ್ತದೆ. ಸ್ವಾತಂತ್ರ್ಯ-ಸ್ವೇಚ್ಛೆಗಳ ನಡುವೆ ಇಲ್ಲಿ ಗೆರೆಗಳಿರುವುದಿಲ್ಲ. ಎಲ್ಲ ಬಗೆಯ ಗಡಿಗಳು ಇಲ್ಲಿ ಉಲ್ಲಂಘನೆಯಾಗುತ್ತವೆ. ಎಲ್ಲ ಬಗೆಯ ದಿಗ್ಬಂಧನಗಳು ಇಲ್ಲಿ ಅಮಾನ್ಯಗೊಳ್ಳುತ್ತವೆ. ಇಲ್ಲಿ ಹಿರಿಯರ ಗಮನ ಮಕ್ಕಳು ಅಪಾಯಕ್ಕೀಡಾಗಬಾರದು ಎನ್ನುವಂತಿರುತ್ತದೆಯೇ ಹೊರತು ಉಳಿದಂತೆ ಅವರೂ ನಿರಾಳವೆ. ಬೇಸಾಯ ಶಿಕ್ಷಣ ಇಲ್ಲಿ ಮಕ್ಕಳಿಗೆ ಹೇಳದೆ-ಕೇಳದೆ ಬರುವಂಥದ್ದು. ಅವರಿರುವ ಪರಿಸರವೇ ಅವರಿಗೆ ಪಾಠಶಾಲೆ. ಅವರ ಕಲಿಯುವಿಕೆ ಒಳಾಂಗಣಕ್ಕಿಂತ ಹೊರಾಂಗಣದಲ್ಲೇ, ಬೀದಿಗಳಲ್ಲಿ, ಓಣಿಗಳಲ್ಲಿ, ಕೇರಿಗಳಲ್ಲಿ, ಹೊಲ, ತೋಟ, ಗದ್ದೆಗಳಲ್ಲಿ, ಹಳ್ಳ, ಕೊಳ್ಳ, ಕೆರೆ, ತೋಡು, ತೊರೆಗಳಲ್ಲಿ; ಆಡುತ್ತಲೇ ಈಜು ಕಲಿಯುತ್ತಾರೆ, ಆಟ ಆಡುತ್ತಲೇ ಎಲ್ಲವನ್ನೂ ಕಲಿಯುತ್ತಾರೆ. ಬಾಲ್ಯದಲ್ಲೆ ತಮ್ಮ ಜಾನುವಾರುಗಳೊಂದಿಗೆ ಪಳಗಿ, ಕೊಟ್ಟಿಗೆಯ ಕಸಗುಡಿಸಿ ತಿಪ್ಪೆಗೆ ಎಸೆದು; ದನಗಳ ಹಿಂದೆ ದನ ಮೇಯಿಸಲು ಹೋಗುತ್ತಾರೆ, ಎಮ್ಮೆಗಳ ಮೇಲೆ ಕುಳಿತು ಸವಾರಿ ಮಾಡುತ್ತಾರೆ. ಕಡೆಗೆ ಅರಿವಿಗೆ ಬರುವ ಮುಂಚೆಯೇ ವ್ಯವಸಾಯ ಜೀವನದ ಭಾಗವೇ ಆಗಿ ಹೋಗುತ್ತಾರೆ. ೧೯೭೦ ಕ್ಕೂ ಮುಂಚೆ ಹಳ್ಳಿಗಾಡಿನ ರೈತರಿಗೆ ಮಕ್ಕಳು ಯಾವತ್ತಿಗೂ ಹೊರೆ ಅನಿಸುತ್ತಿರಲಿಲ್ಲ. ಬೆಳೆದ ಮಕ್ಕಳು ವ್ಯವಸಾಯಕ ಕಸುಗುಬಳಿಗೆ ಉಪಯುಕ್ತವಾಗುತ್ತಿದ್ದರು. ಇವತ್ತಿನ ರೈತ ಮಕ್ಕಳು ಶಾಲೆಗೆ ಹೋಗಿ ಕಲಿಯುವವರು, ಎಸ್.ಎಸ್.ಎಲ್.ಸಿ. ದಾಟಿದರೆ ಮಣ್ಣಿನ ಸಖ್ಯದಿಂದಲೇ ದೂರ ಇರಬಯಸುವವರು, ಪ್ರತಿ ಕಲಿತ ಮಕ್ಕಳು ವ್ಯವಸಾಯ ಜೀವನಕ್ಕೆ ಅನುಪಯುಕ್ತವಾಗುವವರು ಆಗಿದ್ದಾರೆ. ನಮ್ಮ ನಾಡಿನ ನಗರದ ಮಕ್ಕಳನ್ನು ನಮ್ಮ ಅಂದಿನ ಹಳ್ಳಿಯ ರೈತರು ನೋಡಿದ್ದರೆ 'ಅಯ್ಯೋ ದುಡಿಯುವ ವಯಸ್ಸಿನ ಹುಡುಗರು ದುಡಿಯದೇ, ದೇಶಕ್ಕೆ ಭಾರವಾಗಿದ್ದಾರೆ' ಎಂಬ ಉದ್ಗಾರ ಹೊರಡಿಸುತ್ತಿದ್ದರೇನೋ ಆಗ ಹಳ್ಳಿ ಜೀವನದಿಂದ ಹೊರ ಹೋಗುವ ಪರಿಸ್ಥಿತಿ ಶುರುವಾಗಿರಲಿಲ್ಲ. ಪ್ರತಿ ಹಳ್ಳಿಯ ಮಕ್ಕಳು ಶಾಲೆಗಳನ್ನು ತಿರಸ್ಕೃತವಾಗಿ ನೋಡುತ್ತಿದ್ದರು. ಮಕ್ಕಳು ಬಗೆ ಬಗೆಯ ಆಟವಾಡುತ್ತಿದ್ದರು. ಕಣ್ಣಾಮುಚ್ಚಾಲೆ, ಜೂಟಾಟ, ಚೌಕಭಾರ, ಕುಂಟೋಬಿಲ್ಲೆ, ಕಬ್ಬಡ್ಡಿಯಂಥ ಅನೇಕ ಆಟಗಳು ಅವರಿಗೆ ಹೆಚ್ಚು ಪ್ರಿಯವಾಗಿರುತ್ತಿದ್ದವು. ಹೀಗೆ ಆಡುತ್ತಲೆ ಉಳುವುದು, ಮರ ಹತ್ತುವುದು, ಅಗೆಯುವುದು ಮುಂತಾಗಿ ವ್ಯವಸಾಯ ಜೀವನದ ಎಲ್ಲ ಕೆಲಸಗಳನ್ನು ಕಲಿಯುತ್ತಿದ್ದರು.

ಒಗಟು ಬಿಡಿಸುವುದು, ಕತೆ ಹೇಳುವುದು, ಇವೆಲ್ಲ ಆಟಗಳೇ ಆಗಿದ್ದವು. ಹಾಡುಗಳು ಆಟದ ಭಾಗವಾಗಿರುತ್ತಿದ್ದವು, ವ್ಯವಸಾಯದ ಭಾಗವೂ ಆಗಿರುತ್ತಿದ್ದವು.

ಪಡಸಾಲೆಯಲ್ಲೊ, ಜಗುಲಿಯಲ್ಲೊ ಗುಂಪಿನಲ್ಲಿ ಆಡುವ ಮಕ್ಕಳು ನೆಲದ ಮೇಲೆ ಅಂಗೈ ಇಟ್ಟು ಚಿಟ್ಟ-ಪಟ್ಟ ಆಡುವ ಮಕ್ಕಳು, ಕಡೆಗೆ ಕೈಗಳನ್ನು ಬೆನ್ನ ಹಿಂದೆ ಇರಿಸಿ ಒಬ್ಬರಿಗೊಬ್ಬರು ಪ್ರಶ್ನೆ ಕೇಳುತ್ತ ಉತ್ತರಿಸುತ್ತ ಹೋಗುವ ಪದ ಹೀಗಿದೆ.

'ಕೈಯೆಲ್ಲಾ ಎಲ್ಲೋದ್ವು?
ಸಂತೆಗೋದ್ವು

ಸಂತೆಯಿಂದ ಏನು ತಂದೆ?

ಸಂತೆಯಿಂದ ಬಾಳೆಹಣ್ಣು ತಂದೆ

ಬಾಳೆಹಣ್ಣು ಏನು ಮಾಡ್ದೆ?

ಹಣ್ಣು ತಿಂದು ಸಿಪ್ಪೆ ಬಾಗಿಲು ಹಿಂದೆ ಹಾಕ್ದೆ.

ಬಾಗಿಲು ಏನು ಕೊಡ್ತು?

ಬಾಗಿಲು ಚಕ್ಕೆ ಕೊಡ್ತು.

ಚಕ್ಕೆ ಏನು ಮಾಡ್ದೆ?

ಚಕ್ಕೆ ಒಲೆಗಾಕ್ದೆ

ಒಲೆ ಏನ್ಕೊಡ್ತು?

ಒಲೆ ಬೂದಿ ಕೊಡ್ತು.

ಬೂದಿ ಏನ್ಮಾಡ್ದೆ?

ಬೂದಿ ತಿಪ್ಪೆಗಾಕ್ದೆ.

ತಿಪ್ಪೆ ಏನು ಕೊಡ್ತು?

ತಿಪ್ಪೆ ಗೊಬ್ಬರ ಕೊಡ್ತು.

ಗೊಬ್ಬರ ಏನ್ಮಾಡ್ದೆ?

ಗೊಬ್ಬರ ಹೊಲಕ್ಕಾಕ್ದೆ.

ಹೊಲ ಏನ್ ಕೊಡ್ತು?

ಹೊಲ ರಾಗಿ ಕೊಡ್ತು.

ರಾಗಿ ಏನ್ಮಾಡ್ದೆ?

ರೊಟ್ಟಿ ತಟ್ಟಿ ಅಡ್ಡಗೋಡೆ ಮೇಲಿಟ್ಟಿದ್ದೆ. ಚಂದಮಾಮ ಬೆಂಕಿಗೇಂತ ಬಂದು ಹೊತ್ಕಂಡು ಓಡೋದ.....!'೧

ಮಣ್ಣಿನಲ್ಲಿ ಆಡುತ್ತ, ಗಿಡಗಳೊಂದಿಗೆ ಆಡುತ್ತಾ ನಿಸರ್ಗದ ಭಾಗವಾಗುವ ಮಕ್ಕಳ ಬಾಲ್ಯ ಬೇಸಾಯದಲ್ಲಿ ದೊಡ್ಡವರನ್ನನುಸರಿಸಲು ತಹತಹಿಸುತ್ತದೆ. 'ಮೇಣಿ ಹಾಲು' ಕುಡಿಸುತ್ತೇನೆ ಬಾ ಅನ್ನುವ ಹಿರಿಯರು ಮಕ್ಕಳ ಕೈಯನ್ನು ಮೇಣಿಯ ಮೇಲಿರಿಸಿ ಹದವಾಗಿ ಅಮುಕುತ್ತಾರೆ. ಮೇಣಿಯ ಮೇಲೆ ಕೈಯಿಟ್ಟ ಹುಡುಗ ಕೆಲವೇ ದಿನಗಳಲ್ಲಿ ಉಳುವುದನ್ನು ಕಲಿಯುತ್ತಾನೆ. ಎತ್ತುಗಳಿಗೆ ನೊಗ ಹೂಡುವುದು, ಹೊಲದ ಬದುಗಳಲ್ಲಿ ಎತ್ತುಗಳನ್ನು ಮೇಯಿಸುವುದು, ಎತ್ತುಗಳಿಗೆ ನೀರು ಕುಡಿಸುವುದು, ಗೊಂತುಗಳಿಗೆ ಕಟ್ಟುವುದು ಹೀಗೆ ಸಾಗುವ ಆರಂಭ ತನ್ನ ತಾರುಣ್ಯದೊಳಗೆ ಅವನ ಬಾಲ್ಯವನ್ನೂ ತುಂಬಿಕೊಳ್ಳುತ್ತದೆ. ಹಳ್ಳಿಗಾಡಿನಲ್ಲಿ ಹೀಗೆ ಹುಟ್ಟಿದ ಪ್ರತಿಯೊಬ್ಬರು ಬೇಸಾಯ ಬಿಟ್ಟು ಬದುಕಿನ ಇತರ ಅವಕಾಶಗಳ ಕುರಿತು ಯೋಚನೆ ಮಾಡುತ್ತಿರಲಿಲ್ಲ. ಹಳ್ಳಿಗಾಡಿನ ಜೀವನ ಶೈಲಿಯಿಂದಾಗಿ ಹಣಕ್ಕೆ ಅಷ್ಟಾಗಿ ಮಹತ್ವ ಇರಲಿಲ್ಲ. ಕುಟುಂಬ ವ್ಯವಸ್ಥೆ ಸರಳವೂ, ಆರ್ದ್ರವೂ ಆಗಿ ಜವಬ್ದಾರಿಯ ಸ್ಥಾನ ನಿರ್ವಹಿಸುತ್ತಿತ್ತು. ಪರಸ್ಪರರ ಸಂಬಂಧಗಳು

ಆಳವಾಗಿಯೂ, ಆಪ್ತವಾಗಿಯೂ ಬೆಸೆಯಲ್ಪಟ್ಟಿರುತ್ತಿದ್ದವು. ಹೆಚ್ಚಿನ ಮದುವೆಗಳು ಗುರುತಿಸುವವರು, ಸಂಬಂಧ ಇರುವವರು, ಸುತ್ತಲ ಹಳ್ಳಿಗಳಲ್ಲಿ ಪರಿಚಯವಿರುವವರ ನಡುವೆ ನಡೆಯುತ್ತಿದ್ದವು. ಕುಟುಂಬದೊಂದಿಗೆ ಅವಲಂಬನೆ ಬೆಳೆಸಿಕೊಂಡಿರುತ್ತಿದ್ದ ರೈತರ ಮಕ್ಕಳು ಅಂಥ ಪರಿಸರದಿಂದ ದೂರವಾಗಿ ಬದಲಿ ಬದುಕು ಕಟ್ಟಿಕೊಳ್ಳುವ ಸಾಹಸ ಕೈಗೊಳ್ಳುತ್ತಿರಲಿಲ್ಲ. ಬಹುತೇಕ ಹಳ್ಳಿಗರು ಹುಟ್ಟಿದಲ್ಲೆ ಬೆಳೆದು, ಬಾಳಿ ಅಲ್ಲೆ ಲೀನವಾಗುತ್ತಿದ್ದರು.

೭.೨. ಆಯಗಾರರು ಮತ್ತು ಗ್ರಾಮೀಣ ಉಪ ಕಸುಬುಗಳು

ಬೇಸಾಯ ಜೀವನದ ಯಶಸ್ಸಿನ ಹಿಂದೆ ಉಪ ಕಸುಬುಗಳ ಪಾತ್ರ ಮಹತ್ವದ್ದಾಗಿತ್ತು. ಗ್ರಾಮೀಣ ಸಂಸ್ಕೃತಿ ಎಂಬುದು ಕೇವಲ ವ್ಯವಸಾಯದಿಂದ ಮಾತ್ರವಾದದ್ದಲ್ಲ. ನೇಕಾರಿಕೆ, ಕುಂಬಾರಿಕೆ, ಬಡಗಿ ಸೇರಿದಂತೆ ಸಮಸ್ತ ಗ್ರಾಮೀಣ ಉಪ ಕಸುಬುಗಳೂ ಸೇರಿ ಗ್ರಾಮೀಣ ಸಂಸ್ಕೃತಿ ರೂಪುಗೊಂಡಿತ್ತು. ಗ್ರಾಮ ಸ್ವಾವಲಂಬನೆಗೆ ಉಪಕಸುಬುಗಳು ಅಡಿಪಾಯವಾಗಿದ್ದವು. ಕುಂಬಾರರು ಮಡಕೆ ಮಾಡುತ್ತಿದ್ದರು. ನೇಕಾರರು ಬಟ್ಟೆ ನೇಯುತ್ತಿದ್ದರು. ಅಗಸ ಅಥವಾ ಮಡಿವಾಳರು ಬಟ್ಟೆ ಒಗೆಯುತ್ತಿದ್ದರು; ಕಮ್ಮಾರ ವೃತ್ತಿ ಕಬ್ಬಿಣದ ಕೆಲಸ ಮಾಡುವುದಾಗಿತ್ತು. ಬಡಗಿಯವರು ಮರಗೆಲಸ ಮಾಡುತ್ತಿದ್ದರು, ಹಜಾಮ ಅಥವಾ ನಾಯಿಂದ ಕ್ಷೌರಿಕ ವೃತ್ತಿ ಮಾಡುತ್ತಿದ್ದರು. ಉಪವೃತ್ತಿ ಮಾಡುವವರಿಗೂ ಬೇಸಾಯ ಭೂಮಿಗಳು ಇರುತ್ತಿದ್ದವು, ಅವರು ಅರೆ ಬೇಸಾಯಗಾರರಾಗಿರುತ್ತಿದ್ದರು.

ಗ್ರಾಮೀಣ ಸಮಾಜ ರಚನೆಯಲ್ಲಿ ಊರ ಗೌಡ ಅಥವಾ ಪಾಟಿಲ/ ಪಟೇಲ, ಶ್ಯಾನುಭೋಗ/ ಕುಲಕರ್ಣಿ, ತಳವಾರ, ನೀರಗಂಟಿ ಆಡಳಿತದ ಭಾಗವಾದರೆ; ಕುಂಬಾರ, ನೇಕಾರ, ಅಗಸ, ಬಡಗಿ, ಕಮ್ಮಾರ, ಅಕ್ಕಸಾಲಿಗ, ಈಡಿಗ, ಹಜಾಮ ಮುಂತಾದ ವೃತ್ತಿ ಕೌಶಲ್ಯದವರನ್ನು ಒಟ್ಟುಗೂಡಿಸಿ ಆಯಗಾರರು ಎನ್ನುತ್ತಿದ್ದರು. ಆಯಗಾರರಿಗೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿದ್ದವು. ಉತ್ತರ ಕರ್ನಾಟಕದ ಗಡಿಯಲ್ಲಿ ಆಯಗಾರರನ್ನು 'ಬಾರ ಬಲೂತೆ' ಎಂದರೆ, ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಭಾಗಗಳಲ್ಲಿ 'ಅಡದೆ'ಯವರು ಎನ್ನುತ್ತಿದ್ದರು. ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುತ್ತಿನವರು, ಹಕ್‌ದಾರರು, ಬಾಬುದಾರರು ಎನ್ನುತ್ತಿದ್ದರು. ಪ್ರೊ|| ಎಂ.ಜಿ.ಈಶ್ವರಪ್ಪ ತಮ್ಮ "ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ" ಎಂಬ ಸಂಶೋಧನ ಕೃತಿಯಲ್ಲಿ ಆಯಗಾರರನ್ನು "ವ್ಯವಸಾಯ ಬದುಕಿನ ದೃಷ್ಟಿಯಿಂದ ಗಮನಿಸುವುದಾದರೆ ಆಯದ ಅಂತರಂಗವು ಬೇಸಾಯದ ಭೂಮಿಯ ಸುತ್ತ ಹೆಣೆದುಕೊಂಡ ಶ್ರಮ ವಿಭಜನೆಯಾಗಿದೆ" ಎಂದಿದ್ದಾರೆ. ಮುಂದುವರಿದು ಅವರು ಚಿತ್ರದುರ್ಗ ಜಿಲ್ಲೆಯ ಬೇಸಾಯ ಜೀವನದಲ್ಲಿದ್ದ ಆಯಗಾರರ ಪಟ್ಟಿಯನ್ನು ಈ ಕೆಳಕಂಡಂತೆ ನೀಡುತ್ತಾರೆ.

ಆಯ ಪದ್ಧತಿ

ನಿಜ ಆಯಗಾರರು	ಅರೆ ಆಯಗಾರರು
೧) ಗೌಡ	೭) ಈಡಿಗ ಗೌಡ
೨) ಶಾನುಭೋಗ	೮) ಗೊಲ್ಲ ಗೌಡ
೩) ತೋಟಿ	೯) ಅಗಸ
೪) ತಳವಾರ	೧೦) ಕುಂಬಾರ
೫) ಬಡಗಿ	೧೧) ಕ್ಷೌರಿಕ / ಹಜಾಮ
೬) ಕಮ್ಮಾರ	೧೨) ಪಂಚಾಂಗ ಅಥವಾ ಜೋಯಿಸ

"ಇವರಲ್ಲಿ ಗೌಡ, ಶಾನುಭೋಗರನ್ನುಳಿದು ಉಳಿದವರೆಲ್ಲರೂ ಕಣಕ್ಕೇ ಬಂದು ರಾಶಿಯ ಮುಂದೆ ಆಯ ಪಡೆಯುತ್ತಾರೆ. ಈಡಿಗ ಗೌಡ, ಗೊಲ್ಲಗೌಡರು ಸಹ ಕಣದಲ್ಲೇ ಆಯ ಪಡೆಯುತ್ತಾರೆ. ಆಯಗಾರರು ಬರುವವರೆಗೆ ರಾಶಿ ಅಳೆಯುವಂತಿಲ್ಲ. ಅವರೆಲ್ಲರಿಗೂ ಕೊಡಬೇಕಾದುದನ್ನು ಕೊಟ್ಟ ನಂತರವೇ ರಾಶಿ ಅಳೆಯಲು ಅಧಿಕಾರ ಸಿಗುತ್ತದೆ. ಇದು ಗ್ರಾಮೀಣರು ನಂಬಿರುವ ಪರಂಪರೆಯ ವಿಧಿ".

ಸಮಾಜ ವಿಜ್ಞಾನಿ ಕೆ.ಈಶ್ವರನ್‌ರವರು ಆಯ ಪದ್ಧತಿಯನ್ನು "The Traditional patronal and reciprocal economic system" ಎಂದು ವರ್ಣಿಸಿದ್ದಾರೆ. ವಾಸ್ತವವಾಗಿ ಹಿಂದೆ ಈ ಕಸುಬುಗಳನ್ನು ಮಾಡುವವರೆಲ್ಲರೂ ರೈತರೆ ಆಗಿದ್ದರು. ಕ್ರಮೇಣ ಕೌಶಲ್ಯಗಳು ವೃತ್ತಿಪರತೆಯ ಆಯಾಮ ಪಡೆದುಕೊಂಡವು. ಕಡೆಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವೃತ್ತಿಗಳು ಜಾತಿಗಳಾಗಿ ಪರಿಗಣಿಸಲ್ಪಟ್ಟವು. ಒಕ್ಕಲುತನ ಮಾಡುವ ರೈತನು 'ಜಾತಿ'ಯಾಗಿ ರೂಪುಗೊಂಡದ್ದನ್ನು ನಾವು ಕಾಣಬಹುದು. ವ್ಯವಸ್ಥಿತ ಆಯಗಾರರಿರುವ ಹಳ್ಳಿಗಳು ಪೂರ್ಣ ಮಟ್ಟದಲ್ಲಿ ಸ್ವಾವಲಂಬಿಗಳಾಗಿದ್ದವು. ರೈತರು ತಾವು ಬೆಳೆದ ಧಾನ್ಯಗಳಲ್ಲಿ ಆಯಗಾರರಿಗೂ 'ಅಡದೆ' ಕೊಡುತ್ತಿದ್ದರು. ಪ್ರತಿಯೊಬ್ಬರ ಪಾಲೂ ಇಂತಿಷ್ಟು ಎಂದು ನಿಗಧಿಯಾಗಿತ್ತು. ಸಂಬಂಧಗಳು ಪರಸ್ಪರ ಅವಲಂಬನೆಯಿಂದ ಕೂಡಿದ್ದವು. ಹಣದ ರೂಪದಲ್ಲಿ ಅಷ್ಟಾಗಿ ವ್ಯವಹಾರಗಳು ಇರಲಿಲ್ಲ. ಬಡಗಿಯವರು (ಮರಗೆಲಸದವರು) ಬೇಸಿಗೆಯಲ್ಲಿ ವ್ಯವಸಾಯದ ಉಪಕರಣಗಳನ್ನು ತಯಾರು ಮಾಡುತ್ತಿದ್ದರು. ಗಾಡಿ, ನೊಗ, ನೇಗಿಲು, ಕುಂಟೆ ಇತ್ಯಾದಿ. ಮಳೆಗಾಲದಲ್ಲಿ ಹೆಚ್ಚಿನದಾಗಿ ರಿಪೇರಿ ಕೆಲಸಗಳು ನಡೆಯುತ್ತಿದ್ದವು. ಕುಂಬಾರಿಕೆ ಮಾಡುವವರು ಮಣ್ಣಿನ ಮಡಕೆ, ಕೊಡ, ಕುಡಿಕೆ, ಬೋಗುಣಿ, ಹಳಗೆ, ಗುಡಾಣ, ಬಾನಿ ಇತ್ಯಾದಿಗಳನ್ನು ಮಾಡುತ್ತಿದ್ದರು. ಇವು ದೈನಂದಿನ ಅಡಿಗೆ ಕೆಲಸಗಳಿಗೂ, ದೀರ್ಘಾವಧಿಯ ಧಾನ್ಯ ಸಂಗ್ರಹಣೆಗೂ ನೆರವಾಗುತ್ತಿದ್ದವು. ಸುಮಾರು ನೂರೈವತ್ತು ವರ್ಷಗಳ ಹಿಂದೆ ಮಾಡಿರುವ ಹಳಗೆ, ಗುಡಾಣಗಳು ಹಳ್ಳಿಗಳ ಮನೆಗಳಲ್ಲಿ ಈಗಲೂ ಕಾಣಬಹುದು. ಪ್ರತಿ ಹಳ್ಳಿಯಲ್ಲಿ ತಿದಿಯೊತ್ತಿ ಮಾಡುವ ಕುಲುಮೆಗಳಿದ್ದವು. ನೇಗಿಲ ಗುಳ, ಕೊಡಲಿ,

ಮಚ್ಚು, ಕುಡುಗೋಲು, ಕಳೆ ಕೀಳುವ, ಕೊಚ್ಚುವ ವಿವಿಧ ನಮೂನೆಯ ಕಳೆ ಕುಡಿಲು, ಬೀಸುಗತ್ತಿ, ಮಚ್ಚುಗತ್ತಿ, ಚಾಣ, ಸುತ್ತಿಗೆ, ಹಾರೆ, ಗುದ್ದಲಿ, ಪಿಕಾಸಿ ಎಲ್ಲ ಬಗೆಯ ಕಬ್ಬಿಣದ ಉಪಕರಣಗಳು ಇಲ್ಲಿ ತಯಾರಾಗುತ್ತಿದ್ದವು. ಎತ್ತಿನ ಗಾಡಿಯ ಕಡಾಣಿ, ಬಂಡಿಯ ಸುತ್ತಲಿನ ಬಳೆ, ಬಂಡಿಗಳ ನಡುವಿನ ಆಕ್ಸಲ್.....ಇಂದಿನ ದೊಡ್ಡ ಇಂಡಸ್ಟ್ರಿಯ ಪುಟ್ಟ ಮಿನೇಚರ್‌ನಂತಿದ್ದರು ನಮ್ಮ ಕಮ್ಮಾರರು.

ನೀರುಗಂಟಿ ನೀರಿನ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ, ತಳವಾರ ಊರ ನೆಮ್ಮದಿಗಾಗಿ ಪರಿಚಾರಿಕೆ ಮಾಡುತ್ತಿದ್ದ. ಚಮ್ಮಾರಿಕೆಯವರು ಚರ್ಮ ಹದ ಮಾಡಿ, ಬಾರುಗೋಲು ಮಾಡುತ್ತಿದ್ದರು, ಚಪ್ಪಲಿ ಮಾಡುತ್ತಿದ್ದರು, ಚರ್ಮದ ಚೀಲಗಳನ್ನು ಮಾಡುತ್ತಿದ್ದರು. ......ಹೀಗೆ ದೇಸೀ ಜಗತ್ತಿನ ಶ್ರಮ ಆಧಾರಿತ ಜ್ಞಾನ ಕೌಶಲ್ಯಗಳು ಸಹಸ್ರಾರು ವರ್ಷ ಕರ್ನಾಟಕವೇ ಏಕೆ ಇಡೀ ಭಾರತ ದೇಶವನ್ನೆ ಸಲಹಿದ್ದವು.

೭.೩. ಧಾನ್ಯ ಸಂರಕ್ಷಣೆ

ಸಾಂಪ್ರದಾಯಿಕ ದೇಸಿ ಕೃಷಿಕರು ತಮಗೆ ಬೇಕಾದ ಎಲ್ಲವನ್ನು ಬೆಳೆಯುತ್ತಿದ್ದರು. ಬೆಳೆಯದವರು ಬೆಳೆದವರಿಂದ ಪಡೆಯುತ್ತಿದ್ದರು. ಆಯಗಾರರಿಗೆ ಹಂಚಿ, ಕಂದಾಯದವರಿಗೆ ಕೊಟ್ಟು ಉಳಿದ ಧಾನ್ಯಗಳನ್ನು ರೈತರು ಸಂಗ್ರಹಿಸಿಡುತ್ತಿದ್ದರು. ಸಿಂಧೂ ನಾಗರಿಕತೆಯಲ್ಲಿ ಧಾನ್ಯಗಳನ್ನು ಸಂರಕ್ಷಿಸುವ ಪದ್ಧತಿಗಳು ಚಾಲ್ತಿಯಲ್ಲಿದ್ದವು ಎಂಬದನ್ನು ಈಗಾಗಲೇ ಪರಿಶೀಲಿಸಿದ್ದೇವೆ. ನಮ್ಮ ರೈತರು ಅಲ್ಪಾವಧಿ ಸಂರಕ್ಷಣೆ, ವಾರ್ಷಿಕ ಸಂರಕ್ಷಣೆ, ದೀರ್ಘಾವಧಿ ಸಂರಕ್ಷಣೆ......ಈ ಮೂರು ಸಂರಕ್ಷಣಾ ವಿಧಾನಗಳನ್ನು ಅನುಸರಿಸುತ್ತಿದ್ದರು. ಅಲ್ಪಾವಧಿ ಸಂರಕ್ಷಣೆಯು ದೈನಂದಿನ ಬಳಕೆಗೆ ಸಂಬಂಧಿಸಿದ್ದಾಗಿತ್ತು. ವಾರ್ಷಿಕ ಸಂರಕ್ಷಣೆಯೂ, ಭತ್ತ, ಜೋಳ, ರಾಗಿ, ಸಜ್ಜೆ, ನವಣೆ ಇತ್ಯಾದಿಗಳಿಗೆ ಸಂಬಂಧವಾಗಿತ್ತು. ದೀರ್ಘಾವಧಿ ಸಂರಕ್ಷಣೆಯು ಹೆಚ್ಚಿನ ದಾಸ್ತಾನು ಇದ್ದಾಗ; ಅಭಾವದ ಪರಿಸ್ಥಿತಿ ಎದುರಾದಾಗ ಎರಡು ವರ್ಷಕ್ಕೊ ಮೂರು ವರ್ಷಕ್ಕೋ ಬರುವ ಹಬ್ಬ, ಜಾತ್ರೆ, ಮದುವೆ ಇತ್ಯಾದಿ ಕಾರಣಗಳಿಗಾಗಿ ಸಂಗ್ರಹಗೊಳ್ಳುತ್ತಿದ್ದವು.

ಈರುಳ್ಳಿ, ಬೆಳ್ಳುಳ್ಳಿಗಳನ್ನು ತಾತ್ಕಾಲಿಕ ಬಳಕೆಗೆ ಉಳಿಸಿಕೊಂಡು, ಮುಂದಿನ ಬಳಕೆಗಾಗಿ ಮತ್ತು ಭಿತ್ತನೆಗಾಗಿ ಅಡಿಗೆ ಮನೆಯಲ್ಲಿ ಮತ್ತು ಇತರೆಡೆಗೆ ತೀರುಗಳಿಗೆ ಉದ್ದನೆ ಗಳ ಕಟ್ಟಿ ನೇತು ಹಾಕುತ್ತಿದ್ದರು. ಹೀಗೆ ನೇತು ಹಾಕುವುದರಿಂದ ಗಾಳಿ ಸಂಚಾರವಿರುತ್ತಿತ್ತು. ಇದರಿಂದಾಗಿ ಈರುಳ್ಳಿ ಕೆಡುತ್ತಿರಲಿಲ್ಲ, ತಕ್ಷಣವೇ ಮೊಳಕೆ ಬಂದು ಹಾಳಾಗುತ್ತಿರಲಿಲ್ಲ. ಈರುಳ್ಳಿ/ ಬೆಳ್ಳುಳ್ಳಿ ಸಂರಕ್ಷಣೆಯ ಈ ದೇಸೀ ತಂತ್ರಜ್ಞಾನ ಪ್ರತಿ ರೈತರ ಮನೆಯಲ್ಲೂ ಚಾಲ್ತಿಯಲ್ಲಿತ್ತು.

ಹೊಸ ಧಾನ್ಯಗಳು ಹಳೆಯದಾದ ನಂತರ ಬಳಸುವುದು ಹಿಂದಿನಿಂದಲೂ ರೂಢಿಯಲ್ಲಿದೆ. ಭತ್ತ ಕೊಯ್ಲಾಗಿ ೮ ತಿಂಗಳ ನಂತರ, ಅಕ್ಕಿಗಾಗಿ ಬಳಸುತ್ತಾರೆ. ಹೊಸ ಅಕ್ಕಿಯಲ್ಲಿ ಅನ್ನ ಮಾಡಿದರೆ ಮುದ್ದೆ ಮುದ್ದೆ ರೀತಿಯಾಗುತ್ತದೆ, ಗಂಜಿ ಸುತ್ತುಕೊಳ್ಳುತ್ತದೆ, ಹೆಚ್ಚು ಒದಗುವುದಿಲ್ಲ ಎಂಬುದು ಹಿಂದಿನವರಿಗೆ ಗೊತ್ತಿತ್ತು. ಭತ್ತ ಹಳೆಯದಾದಷ್ಟು ಅನ್ನ

ಚೆನ್ನಾಗಿ ಆಗುತ್ತದೆ. ಬೇಯಲು ಹೆಚ್ಚು ನೀರು ಬೇಕಾಗುತ್ತದೆ, ಅನ್ನ ಒದಗುತ್ತದೆ ಎಂಬುದನ್ನು ತಿಳಿದುಕೊಂಡಿದ್ದರು. ಹೀಗೆಯೇ ಇತರ ಧಾನ್ಯಗಳು ಕೂಡ ಹೊಸದರಲ್ಲಿ ಒದಗುವುದಿಲ್ಲ, ಬೇಗ ಹಳಸಿ ಹೋಗುತ್ತದೆ. ಹೀಗಾಗಿ ರಾಗಿ, ಜೋಳ, ಸಜ್ಜೆ, ನವಣೆ, ಸಾಮೆ, ಹಾರಕ, ಬರಗು, ಊದಲು ಮುಂತಾದ ತೃಣ ಧಾನ್ಯಗಳನ್ನು ಕೂಡ ಸುಗ್ಗಿ ಮಾಡಿದ ನಾಲ್ಕು ತಿಂಗಳ ನಂತರ ಬಳಸುವುದು ವಾಡಿಕೆಯಾಗಿತ್ತು. ದ್ವಿದಳ ಧಾನ್ಯಗಳು ಕೂಡ ಇದರಿಂದ ಹೊರತಾಗಿರಲಿಲ್ಲ. ಪ್ರಧಾನವಾಗಿ ಈ ಕಾರಣಗಳಿಗಾಗಿಯೇ ಕೂಡಿಡಬೇಕಿತ್ತೇ ವಿನ: ಕೂಡಿಡುವುದು ಅವರ ಮೂಲ ಪ್ರವೃತ್ತಿ ಆಗಿರಲಿಲ್ಲ. ಕೊಡಗಿನ ಹುತ್ತರಿ ಸೇರಿದಂತೆ ಸುಗ್ಗಿಯ ಆಚರಣೆಗಳಲ್ಲಿ ಮಾತ್ರ ಹೊಸ ಧಾನ್ಯಗಳಿಂದಲೇ ಪೂಜೆ, ಅಡುಗೆ ಇತ್ಯಾದಿಗಳೆಲ್ಲ. ಬಳಕೆಗೆ ಸಿದ್ಧವಾದ ಯಾವುದೇ ಧಾನ್ಯ/ ಕಾಳುಗಳು ಮೂರು ತಿಂಗಳ ಬಳಿಕ ಸ್ವಾಭಾವಿಕವಾಗಿ ಹುಳ-ಉಪ್ಪಟೆ ಕೀಟಗಳಿಗೂ ಆಹಾರವಾಗಬೇಕು. ಬೆಳೆದಿಟ್ಟ ಧಾನ್ಯಾದಿಗಳು ಕೇವಲ ಮನುಷ್ಯನ ಬಳಕೆಗೆ ಮಾತ್ರ ಮೀಸಲು ಎಂಬ ನಿಯಮವೇನು ನಿಸರ್ಗದಲ್ಲಿ ಇಲ್ಲ. ಹೀಗಾಗಿ ಇಲಿಗಳು, ಹೆಗ್ಗಣಗಳು, ಕೀಟಗಳು ಸ್ವಾಭಾವಿಕವಾಗಿ ಸಿಗುವ ಧಾನ್ಯಗಳ ಮೇಲೆ ಎರಗುವುದು ಸಹಜ. ವಿಶೇಷವಾಗಿ ಕೀಟಗಳು, ಇರುವೆಗಳು, ಇಲಿ, ಹೆಗ್ಗಣಗಳು ಸಂಗ್ರಹಿಸಿಡುವ ಬುದ್ಧಿಯನ್ನು ಹುಟ್ಟುವಾಗಲೆ ಧಾರಾಳವಾಗಿ ಪಡೆದುಕೊಂಡು ಬಂದಿರುತ್ತವೆ. ಇಂತಿರುವಾಗ ರೈತ ತನಗಾಗಿ ತಾನು ಬೆಳೆದುದನ್ನು ಜೋಪಾನ ಮಾಡಲೇ ಬೇಕಾಯಿತು.

ಹೀಗೆ ಜೋಪಾನ ಮಾಡಿಕೊಳ್ಳಲು ಹುಟ್ಟಿದ ದೇಸಿ ಜ್ಞಾನವೇ ಕಣಜ, ಹಗೇವು, ಕರ್ಚಿ, ಮುಡಿ, ವಾಡೆ, ಗುಡಾಣ ಇತ್ಯಾದಿ. ಇದು ಇರುವೆ, ಗೆದ್ದಲು, ಇಲಿ, ಹೆಗ್ಗಣ, ಕೀಟಗಳಿಂದ ಧಾನ್ಯಗಳನ್ನು ಸಂರಕ್ಷಿಸಿ ಇಡುವ ವಿಷಮುಕ್ತ ಜ್ಞಾನ. ಸಂಗ್ರಹಣ ವಿಧಾನ ವಿಜ್ಞಾನ ಮತ್ತು ತಾಂತ್ರಿಕ ಯಶಸ್ಸಿನಿಂದ ಕೂಡಿತ್ತು. ಹಗೇವುಗಳು ಸ್ಥಳೀಯ ಅಗತ್ಯ ಅನುಕೂಲಗಳನ್ನು ಅವಲಂಬಿಸಿ ನಿರ್ಮಾಣವಾಗುತ್ತಿದ್ದವು. ಅವುಗಳ ಗಾತ್ರವು ಅಗತ್ಯವನ್ನೆ ಅವಲಂಬಿಸುತ್ತಿದ್ದವು. ಹಗೇವುಗಳನ್ನು ಸಾಮಾನ್ಯವಾಗಿ ಮನೆಯಿಂದ ಹೊರಗೆ; ಸಾರ್ವಜನಿಕ ಗಮನ ಸೆಳೆಯುವೆಡೆ ನಿರ್ಮಿಸಲಾಗುತ್ತಿತ್ತು. ಬಹುಶ: ಇದು ಲೂಟಿ ಹೊಡೆಯುವವರು ಮತ್ತು ಕಳ್ಳಕಾಕರನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಮಿಸಿದ್ದಾಗಿರಬೇಕು. ಹಗೇವುಗಳನ್ನು ದೊಡ್ಡ ದೊಡ್ಡ ಹಿಡುವಳಿದಾರರು ಹೊಂದಿರುತ್ತಿದ್ದರು. ಕೆಲವು ಹಗೇವುಗಳು ಸಮುದಾಯ ಹಿತ ರಕ್ಷಣೆಯಿಂದಾಗಿಯೂ ನಿರ್ಮಾಣವಾಗುತ್ತಿದ್ದವು. ಮತ್ತೆ ಕೆಲವು ಹಗೇವುಗಳು ಗ್ರಾಮದ ಅಭ್ಯುದಯಕ್ಕಾಗಿಯೂ ಮೀಸಲಾಗಿರುತ್ತಿದ್ದವು. ಪಾಳೇಗಾರರ, ಸಾಮಂತರ, ಕಂದಾಯ ವಸೂಲಿಗಾರರ ಅಧಿಕ ಕಂದಾಯ ವಸೂಲಿ ಸಮಯದಲ್ಲಿ ಇಂಥ ಹಗೇವುಗಳು ನೆರವಿಗೆ ಬರುತ್ತಿದ್ದವು.

ಹಗೇವುಗಳನ್ನು ಭೂಮಿಯ ಒಳಭಾಗದಲ್ಲಿ ನಿರ್ಮಿಸುತ್ತಿದ್ದರು. ನೀರು ಜಿನುಗದ ಕಡೆ, ವಸ್ತಿ ಆಗದ ಕಡೆ ಹಗೇವುಗಳಿಗೆ ಜಾಗ ಕಲ್ಪಿಸಲಾಗುತ್ತಿತ್ತು. ಊರಿನ ದೇಗುಲದ ಮುಂದೆ, ಎತ್ತರವಾದ ಜಾಗಗಳಲ್ಲಿಯೂ, ರಸ್ತೆ ಬದಿಗಳಲ್ಲಿಯೂ ಹಗೇವುಗಳನ್ನು ನಿರ್ಮಾಣ ಮಾಡುತ್ತಿದ್ದರು. ದೊಡ್ಡ ದೊಡ್ಡ ಗುಡಾಣಗಳ ಆಕೃತಿಯಲ್ಲು, ತಳ ಅಗಲವಿದ್ದು, ಹೊಟ್ಟೆಯ ಗಾತ್ರ ದೊಡ್ಡದಿದ್ದು ಕುತ್ತಿಗೆಯ ಭಾಗ ಹತ್ತಿ, ಇಳಿಯಲು ಅನುವು ಆಗುವಂತೆಯೂ ಮತ್ತೆ ಕೆಲವು ಹತ್ತಿ ಇಳಿಯಲು ಮೆಟ್ಟಿಲುಗಳು ಇರುವಂತೆಯೂ

ನಿರ್ಮಾಣವಾಗುತ್ತಿದ್ದವು. ೨೦ ಚೀಲದಿಂದ (ಪಲ್ಲದ ಚೀಲ) ೨೦೦ ಚೀಲದವರೆಗಿನ ಧಾನ್ಯ ಸಂಗ್ರಹದ ಹಗೇವುಗಳು ಇರುತ್ತಿದ್ದವು. ಸಾಮಾನ್ಯವಾಗಿ ಹಗೇವುಗಳಲ್ಲಿ ಭತ್ತ, ಗೋಧಿ ಮತ್ತು ಕಾಳುಗಳನ್ನು ಹೊರತುಪಡಿಸಿ ರಾಗಿ, ಜೋಳ, ಸಜ್ಜೆ, ನವಣೆ ಸೇರಿದಂತೆ ಇತರ ತೃಣ ಧಾನ್ಯಗಳನ್ನು ತುಂಬಿಡಲಾಗುತ್ತಿತ್ತು. ಹಗೇವಿನ ಒಳ ಆವರಣವನ್ನು ಕೆಮ್ಮಣ್ಣಿನಿಂದ ಗಿಲಾವು ಮಾಡಿ ಸಗಣಿಯಿಂದ ಸಾರಿಸುತ್ತಿದ್ದರು. ಹಗೇವಿನ ತಳ ಭಾಗಕ್ಕೆ ರಾಗಿ ಕಣದಲ್ಲಿ ತೂರಿದ ಒಟ್ಟನ್ನು ಹಾಸಿಗೆಯಂತೆ ಹಾಸಿ ಅದರ ಮೇಲೆ ರಾಗಿ ಹುಲ್ಲನ್ನು ಹರಡುತ್ತಿದ್ದರು. ನಂತರ ಧಾನ್ಯಗಳನ್ನು ತುಂಬಿ ಚೌಕಾಕಾರವಿರುವ ಬಾಯಿ ಭಾಗವನ್ನು ಚಪ್ಪಡಿ ಕಲ್ಲುಗಳಿಂದ ಮುಚ್ಚಿ ಅದರ ಮೇಲೆ ಮಣ್ಣು ಸುರಿದು ಗುರುತು ಇಟ್ಟುಕೊಳ್ಳುತ್ತಿದ್ದರು.

ಮರು ವರ್ಷ ಹೊಸ ಧಾನ್ಯ ಬಂದಾಗ ಹಗೇವುಗಳನ್ನು ತೆರೆಯುತ್ತಿದ್ದರು. ಹಳೇ ಧಾನ್ಯಗಳನ್ನು ಹೊರ ತೆಗೆದು ಹೊಸ ಧಾನ್ಯಗಳನ್ನು ತುಂಬಿ ಯಥಾ ಪ್ರಕಾರ ಮುಚ್ಚಿಡುತ್ತಿದ್ದರು. ದೊಡ್ಡ ದೊಡ್ಡ ಹಗೇವುಗಳಲ್ಲಿ ಆಮ್ಲಜನಕದ ಕೊರತೆಯಾಗುವುದು ಸಹಜ. ಹಗೇವು ತೆರೆದಾದ ಮೇಲೆ ಒಂದಷ್ಟೊತ್ತು ಗಾಳಿಯಾಡಲು ಬಿಡುತ್ತಿದ್ದರು. ದೀಪ ಹಚ್ಚಿ ಹಗೇವಿನಲ್ಲಿ ಇಳಿಬಿಟ್ಟು ಆಮ್ಲಜನಕದ ಪ್ರಮಾಣವನ್ನು ಪರೀಕ್ಷೆ ಮಾಡುತ್ತಿದ್ದರು. ಹಗೇವಿನ ಒಳಗೆ ಇಳಿಬಿಟ್ಟ ದೀಪ ನಂದಿ ಹೋದರೆ ಅಲ್ಲಿ ಗಾಳಿ ಸಂಚಾರ ಇಲ್ಲ ಎಂದು ಅರ್ಥ. ದೀಪ ನಂದದೆ ಹೋದರೆ ಅಲ್ಲಿ ಗಾಳಿ ಸಂಚಾರ ಸುಗಮವಾಗಿದೆ ಅಪಾಯ ಇಲ್ಲ ಎಂದು ಅರ್ಥ. ಪ್ರತಿಯೊಂದನ್ನು ಕ್ರಮಬದ್ಧವಾಗಿ ಪರೀಕ್ಷೆ ಮಾಡಿಯೆ ಅವರು ಮುಂದಿನ ಹೆಜ್ಜೆ ಇಡುತ್ತಿದ್ದರು. ಈಚೆಗೆ ಆಗಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುವುದನ್ನು ಗಮನಿಸಿದ್ದೇನೆ; ಚಾಮರಾಜನಗರ ತಾಲ್ಲೂಕಿನ ಆಳದ ಹಳೆ ಬಾವಿಗೆ ನೀರು ಬಂದಿದೆ, ನೀರೆತ್ತುವ ಮೋಟಾರು ಪಂಪು ನೀರಿನಲ್ಲಿ ಮುಳುಗಿದೆ. ಪಂಪು ಎತ್ತಲು ೪ ಜನ ನೀರಿಗಿಳಿಯುತ್ತಾರೆ, ಅವರು ಮೇಲೆ ಬರುವುದಿಲ್ಲ. ಮತ್ತೆ ಇಬ್ಬರು ಕೆಳಗಿಳಿಯುತ್ತಾರೆ. ಅವರು ಕೂಡ ಮೇಲೆ ಬರುವುದಿಲ್ಲ. ಕಡೆಗೆ ಒನೆಯವನು ಇಳಿಯುತ್ತಾನೆ, ಆತ ಕೂಡ ಮೇಲೆ ಬರುವುದಿಲ್ಲ. ಇದರಿಂದ ಗಾಬರಿಗೊಂಡ ಜನ ಆಸ್ಪತ್ರೆ, ಜಿಲ್ಲಾಡಳಿತಗಳ ಮೊರೆ ಹೋಗುತ್ತಾರೆ. ಬಾವಿಗೆ ಇಳಿದ ಏಳು ಜನರೂ ಅಸು ನೀಗಿರುತ್ತಾರೆ. ಇದಕ್ಕೆ ಕಾರಣ ಬಾವಿಯಲ್ಲಿ ವಿಷಾನಿಲ ಉತ್ಪತ್ತಿಯಾಗಿದ್ದವು ಮತ್ತು ಆಮ್ಲಜನಕದ ಪ್ರಮಾಣ ಕಡಿಮೆ ಇತ್ತು.

ಗುಂಡ್ಲುಪೇಟೆ ತಾಲ್ಲೂಕಿನ ಮತ್ತೊಂದು ಪ್ರಕರಣ:

ಮನೆಯ ಒಂದು ಕೊಠಡಿಯಲ್ಲಿ ನೆಲಮಾಳಿಗೆ ಮಾಡಿ ಅದನ್ನು ಕಣಜವನ್ನಾಗಿ ಮಾಡಿಕೊಳ್ಳಲಾಗಿತ್ತು. ಒಂದು ದಿನ ಕಣಜದಲ್ಲಿರುವ ಭತ್ತ ತೆಗೆಯಲು ಏರ್ಪಾಡು ಮಾಡಲಾಯಿತು. ಮೆಟ್ಟಿಲುಗಳ ಮೂಲಕ ಕೆಳಕ್ಕಿಳಿದ ಆಳು ಅಲ್ಲೇ ಭತ್ತದ ರಾಶಿಯ ಮೇಲೆ ಒರಗಿ ಬಿದ್ದ. ಅವನನ್ನು ಎತ್ತಲು ಇಳಿದ ಇಬ್ಬರಿಗೂ ಅದೇ ಗತಿಯಾಯಿತು. ನೆಲ ಮಾಳಿಗೆಯ ಕಣಜಕ್ಕೆ ವಿದ್ಯುತ್‌ದೀಪ ಇತ್ತು, ಬೆಳಕೂ ಇತ್ತು. ನೆಲಮಾಳಿಗೆಗೆ ಕಿಟಕಿಗಳಿರಲಿಲ್ಲ. ಗಾಳಿ ಸಂಚಾರವೂ ಇಲ್ಲ. ಹೀಗಾಗಿ ಈ ಅನಾಹುತ ಘಟಿಸಿ ಹೋಯಿತು. ಇಂಥ ಪ್ರಕರಣಗಳು ಎಷ್ಟೇ ಸುದ್ದಿಯಾದರೂ ಮತ್ತೆ ಅಲ್ಲಿ-ಇಲ್ಲಿ ನಡೆಯುತ್ತಲೇ ಇರುತ್ತವೆ. ಆದರೆ ನಮ್ಮ ಹಿಂದಿನವರಿಗೆ ಇಂಥ ಯಾವುದೊ ಒಂದು

ಅನುಭವ ಪಾಠ ಕಲಿಸಿರಬೇಕು. ಹೀಗಾಗಿ ಅವರಲ್ಲಿ ಪ್ರತಿಯೊಂದನ್ನು ಪರಿಶೀಲಿಸಿ ಮುನ್ನಡೆಯುವ ವೈಜ್ಞಾನಿಕ ಮನೋಭಾವ ಇತ್ತು.

ಕಣಜ:– ಕಣಜ ಅಥವಾ ಪಳತ ಧಾನ್ಯ ಸಂಗ್ರಹಣೆ ಮತ್ತು ಸಂರಕ್ಷಣೆಯ ಮತ್ತೊಂದು ವಿಧಾನ. ಸಾಮಾನ್ಯವಾಗಿ ಕಣಜ/ ಪಳತಗಳಲ್ಲಿ ಭತ್ತಕ್ಕೆ ಅಗ್ರಮಾನ್ಯ ಸ್ಥಾನ. ಕಣಜಗಳನ್ನು ಮನೆಯ ಒಳ ಆವರಣದಲ್ಲೂ, ಮನೆಯ ಹೊರಗೆ ಜಗುಲಿಯಲ್ಲೂ ನಿರ್ಮಾಣ ಮಾಡುತ್ತಿದ್ದರು.

ಮನೆ ಕಟ್ಟುವಾಗಲೆ ಧಾನ್ಯ ಸಂಗ್ರಹಣೆಯ ಉದ್ದೇಶವೂ ಇರುತ್ತಿತ್ತು. ಜಗುಲಿಯ ಮುಂಭಾಗ ಜಗುಲಿ ಸೇರಿದಂತೆ– ಜಗುಲಿ ಮಟ್ಟದಿಂದ ೬ ರಿಂದ ೭ ಅಡಿ ಕೆಳಭಾಗಕ್ಕೆ ೪೦ ರಿಂದ ೬೦ ಪಲ್ಲ ಭತ್ತ ತುಂಬುವಷ್ಟು ಜಾಗ ಮಾಡಿಕೊಳ್ಳುತ್ತಿದ್ದರು. ನೆಲದ ತಳಭಾಗಕ್ಕೆ ಚಪ್ಪಡಿ ಕಲ್ಲುಗಳನ್ನು ಹಾಸುತ್ತಿದ್ದರು. ಕಣಜದ ಸುತ್ತಲ ಗೋಡೆಯನ್ನು ಚಪ್ಪಡಿ ಕಲ್ಲುಗಳನ್ನು ನಿಲ್ಲಿಸಿ ಕಟ್ಟುತ್ತಿದ್ದರು. ಮೇಲ್ಭಾವಣಿಗೂ ಚಪ್ಪಡಿ ಹೊದಿಸಿ– ಒಂದು ರೀತಿಯಲ್ಲಿ ನೆಲದೊಳಗಿರುವ ಕಲ್ಲುಮಂಟಪದಂತೆ ನಿರ್ಮಾಣ ಮಾಡುತ್ತಿದ್ದರು. ಭತ್ತ ಸುರಿಯಲು ಮತ್ತು ತೆಗೆಯಲು ಒಂದು ಚಪ್ಪಡಿ ಕಲ್ಲಿನ ಜಾಗ ಮಾಡಿಕೊಳ್ಳುತ್ತಿದ್ದರು. ಜಗುಲಿಯ ಈ ಜಾಗದಲ್ಲಿ ರಾತ್ರಿಯ ವೇಳೆ ಯಾರಾದರೂ ಮಲಗುತ್ತಿದ್ದರು. ಮನೆಯ ಒಳ ಆವರಣದಲ್ಲೂ ಇದೇ ಮಂಟಪದ ಶೈಲಿಯ ಕಣಜಗಳಿರುತ್ತಿದ್ದವು. ಇಷ್ಟಲ್ಲದೆ ಭೂಮಿಯ ಮೇಲ್ಮಟ್ಟದಲ್ಲೂ ಕಣಜಗಳನ್ನು ನಿರ್ಮಾಣ ಮಾಡುತ್ತಿದ್ದರು. ಕೊಠಡಿಯ ಒಂದು ಭಾಗದಲ್ಲಿ ಬಾಗಿಲು ಇರದ ಪುಟ್ಟ ಕೊಠಡಿ ಆಕಾರದ ಗೋಡೆ ಕಟ್ಟುತ್ತಿದ್ದರು. ಇದು ಆರರಿಂದ ಎಂಟು ಅಡಿ ಎತ್ತರವಿರುತ್ತಿತ್ತು. ಕಣದ ಮುಚ್ಚಳವಾಗಿ ಮರದ ಹಲಗೆಗಳನ್ನು ಬಳಸುತ್ತಿದ್ದರು. ಇಲಿ, ಹೆಗ್ಗಣಗಳಿಂದ ಧಾನ್ಯಗಳನ್ನು ಸಂರಕ್ಷಿಸಲು ಈ ಎಲ್ಲ ವಿಧಾನಗಳು ಅತ್ಯಂತ ಪರಿಣಾಮಕಾರಿಯಾಗಿದ್ದವು.

ಬಿದಿರಿನಲ್ಲಿ ನೇಯ್ದ ವೃತ್ತಾಕಾರದ ಆಕೃತಿಯೇ ಕರ್ಜೆ (ಗಳಗೆ). ಇದು ೬ ರಿಂದ ೭ ಪಲ್ಲ ಸಂಗ್ರಹ ಸಾಮರ್ಥ್ಯ ಹೊಂದಿರುತ್ತಿತ್ತು. ೫ ರಿಂದ ೬ ಅಡಿ ಎತ್ತರ ಇರುತ್ತಿತ್ತು. ರೈತರು ತಮಗೆ ಅನುಕೂಲ ಅನ್ನಿಸಿದ ಕಡೆ ಇದನ್ನು ಸಗಣಿಯಿಂದ ಸಾರಿಸಿ ಇಟ್ಟುಕೊಳ್ಳುತ್ತಿದ್ದರು. ಇನ್ನು ದಿನ ನಿತ್ಯ ಬಳಕೆಯ ಸಂಗ್ರಹಗಳಾಗಿ ವಡೇವು (ವಾಡೆ), ಹಳಗೆ, ಗುಡಾಣ, ಮಡಕೆ ಇತ್ಯಾದಿಗಳಿರುತ್ತಿದ್ದವು. ಇವುಗಳನ್ನು ಕುಂಬಾರಸಾಲೆಯಿಂದ ತರುತ್ತಿದ್ದರು. ಪ್ರದೇಶದಿಂದ ಪ್ರದೇಶಕ್ಕೆ ಧಾನ್ಯ ಸಂಗ್ರಹಣೆಯ ಜಾಗ, ಪರಿಕರಗಳ ಹೆಸರುಗಳು ಬೇರೆ ಬೇರೆಯಾಗಿರುತ್ತಿದ್ದವು.

ನಿಲ: ಸಾಮಾನ್ಯವಾಗಿ ರೈತರ ಅಡುಗೆ ಮನೆಯಲ್ಲಿ ತೂಗಾಡುವ ಮಾದರಿಯ ಅಟ್ಟಡಗಳಿರುತ್ತಿದ್ದವು. ಈ ಅಟ್ಟದ ಗಳಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿ ಕಂತೆಗಳಲ್ಲದೆ; ಬೂದುಗುಂಬಳ, ಸೋರೆ, ಸಿಹಿಗುಂಬಳ, ಸೌತೆಕಾಯಿಗಳು ದೀರ್ಘ ಬಾಳಿಕೆಗೆ ನೇತಾಲ್ಪಡುತ್ತಿದ್ದವು. ಬೆಣ್ಣೆಗಡಿಗೆ 'ನೆಲ' 'ನಿಲ', 'ನಿಲು'ಗಳ ಮೇಲೆ ನೇತಾಡುತ್ತಿದ್ದವು. ಎಣ್ಣೆ ಗಡಿಗೆಗಳು, ಹಾಲು, ಮಜ್ಜಿಗೆ, ಮೊಸರುಗಳು, ಅಪರೂಪದ ತಿಂಡಿ ಪದಾರ್ಥಗಳ 'ನಿಲ'ದ ಮೇಲೆ ಆಶ್ರಯ ಪಡೆಯುತ್ತಿದ್ದವು. ಇವುಗಳ ಜೊತೆಗೆ ಬೆಸ್ತರ ಮನೆಗಳಲ್ಲಿ ಒಣಗಿದ

ಮೀನುಗಳನ್ನು ನೇತು ಹಾಕುತ್ತಿದ್ದರು. ದಲಿತರ ಅಡುಗೆ ಮನೆಗಳಲ್ಲಿ ಒಣಗಿದ 'ಕೊರಬಾಡು'ಗಳ ಮಾಲೆ ಯಾವತ್ತಿಗೂ ಇರುತ್ತಿತ್ತು. ಇವುಗಳ ಜೊತೆಗೆ ಭಿತ್ತನೆಗಾಗಿ ಜೋಪಾನ ಮಾಡಲ್ಪಟ್ಟ ಈರೆ, ಹಾಗಲ, ಸೋರೆಕಾಯಿ ಬರುಡೆಗಳೂ ಜಾಗ ಮಾಡಿಕೊಳ್ಳುತ್ತಿದ್ದವು. ನಮ್ಮ ಹೆಣ್ಣು ಮಕ್ಕಳು ತಮ್ಮ ಅಡುಗೆ ಮನೆಗಳನ್ನು ಪೇಟೆಯ ಅಗತ್ಯ ಬಾರದಂತೆ ನಿಭಾಯಿಸುತ್ತಿದ್ದರು.

<u>ಮುಡಿ:</u>- ಕರಾವಳಿಯ ಕನ್ನಡ ಜಿಲ್ಲೆಗಳ ಧಾನ್ಯ ಸಂಗ್ರಹ ಪದ್ಧತಿ ನಿಜಕ್ಕೂ ಅತ್ಯಂತ ಸುಂದರ, ಕಲಾತ್ಮಕ ಮತ್ತು ವೈಜ್ಞಾನಿಕ. ಬೈ ಹುಲ್ಲು ಅಥವಾ ಭತ್ತದ ಹುಲ್ಲನ್ನು ಬಳಸಿ ಧಾನ್ಯಗಳನ್ನು ತುಂಬಿಸಿಡುವ ಮೋಹಕ ಸಂಗ್ರಹವೆ "ಮುಡಿ' ಎನ್ನಬಹುದು. ಭತ್ತ, ಅಕ್ಕಿ ಮತ್ತು ಇತರ ಧಾನ್ಯಗಳನ್ನು ಪುಟ್ಟ, ಪಉಟ್ಟ ಸಂಗ್ರಹಾಗಾರಗಳಲ್ಲಿ ಒಂದು ರೀತಿಯ ಹವಾ ನಿಯಂತ್ರಿತ ವ್ಯವಸ್ಥೆಯಲ್ಲಿ ಸಂರಕ್ಷಿಸಿ ಇಡುವುದೇ 'ಮುಡಿ'ಯ ಪಾತ್ರ, ಭತ್ತದ ಹುಲ್ಲು ಮತ್ತು ಭತ್ತದ ಹುಲ್ಲಿನಿಂದಲೇ ತಯಾರಿಸಿದ ಹಗ್ಗದ ನೆರವಿನಿಂದ 'ಮುಡಿ' ಕಟ್ಟಡಲಾಗುತ್ತದೆ. ಧಾನ್ಯದ ಸುತ್ತ ಹುಲ್ಲಿನ ಕೋಟೆಯೇ ನಿರ್ಮಾಣವಾಗುವುದರಿಂದ ವಾತಾವರಣದಲ್ಲಿ ಹುಲ್ಲಿನ ಕೋಟೆಯೇ ನಿರ್ಮಾಣವಾಗುವುದರಿಂದ ವಾತಾವರಣದಲ್ಲಿ ತೇವಾಂಶ ಹೆಚ್ಚಾದಾಗ - ಹೆಚ್ಚಾದ ತೇವಾಂಶ ಹುಲ್ಲಿನ ಕೋಟೆಯನ್ನು ದಾಟಿ ಧಾನ್ಯಗಳನ್ನು ತಲುಪುವುದಿಲ್ಲ. ಹಾಗೆಯೇ ಉಷ್ಣಾಂಶ ಹೆಚ್ಚಾದಾಗ ಹುಲ್ಲಿನಲ್ಲಿರುವ ತೇವಾಂಶ ಹೆಚ್ಚಾದ ಉಷ್ಣಾಂಶವನ್ನು ಧಾನ್ಯಗಳೆಡೆಗೆ ರವಾನಿಸಲು ಬಿಡುವುದಿಲ್ಲ. 'ಮುಡಿ' ನಿರ್ಮಾಣದ ಹಿಂದೆ ಈ ವೈಜ್ಞಾನಿಕತೆ ಅಡಗಿದೆ. ಸಾಮಾನ್ಯವಾಗಿ ೩ ಕಳಸೆ (೪೨ ಸೇರು) ಗೆ ಒಂದು ಮುಡಿ ಕಟ್ಟುವುದು ವಾಡಿಕೆಯಲ್ಲಿತ್ತು. ೧೦ ಸೇರಿನ ಪುಟ್ಟ ಪುಟ್ಟ ಮುಡಿಗಳನ್ನು ಕಟ್ಟುವುದೂ ಇತ್ತು. ೧೦ ಸೇರಿನ ಮುಡಿಯನ್ನು 'ಕುರುಂಟು' ಎಂದು ಕರೆಯುತ್ತಾರೆ. ಕನ್ನಡ ಜಿಲ್ಲೆಗಳಲ್ಲಿ ಗೇಣಿ ಕೊಡುವ ಕಾಲದಲ್ಲಿ ಬೆಳ್ತಿಗೆ ಮತ್ತು ಕುಚ್ಚಲು ಅಕ್ಕಿಯನ್ನು ಭೂ ಮಾಲೀಕರಿಗೆ ಮುಡಿ ಕಟ್ಟಿಯೇ ಕೊಡಬೇಕಾಗುತ್ತಿತ್ತು. 'ಮುಡಿ' ಧಾನ್ಯಗಳನ್ನು ಸುಭದ್ರವಾಗಿ ಇಡುವುದರ ಜೊತೆಗೆ ರೈತರ ಸಾಂಸ್ಕೃತಿಕ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿಯೂ ನಿಂತಿದೆ.

ಕೃಷಿ ಉಪಕರಣಗಳು:

ಕೃಷಿಯ ಪ್ರಗತಿ ಮತ್ತು ವಿಕಾಸದ ಇತಿಹಾಸದಲ್ಲಿ ಕೃಷಿ ಉಪಕರಣಗಳ ಪಾತ್ರ ಹಿರಿದು. ಬೇಸಾಯದಲ್ಲಿ ಎತ್ತುಗಳು ಸಾಧನವಾಗಿ ಬಂದ ಮೇಲೆ ಉಪಕರಣಗಳ ಅಗತ್ಯ ಹೆಚ್ಚಾಯಿತು. ಪ್ರತಿಯೊಂದು ಉಪಕರಣವೂ ಅಗತ್ಯ ಮತ್ತು ಅನುಕೂಲವನ್ನವಲಂಬಿಸಿ ರೂಪುಗೊಂಡಿವೆ. ಈ ಹಿನ್ನೆಲೆಯಲ್ಲಿ ದೇಸಿ ಗುಡಿ ಕೈಗಾರಿಕೆಯ ನೈಪುಣ್ಯ ಬೆರಗು ಮೂಡಿಸುತ್ತದೆ. ಬೇಸಾಯಕ್ಕೆ ಸಂಬಂಧಿಸಿದ ಪ್ರತಿಯೊಂದು ಉಪಕರಣದ ಹಿಂದೆ ಒಂದು ಕ್ರಮಬದ್ಧವಾದ, ನಿಶ್ಚಿತವಾದ, ತಾಂತ್ರಿಕವಾಗಿ ನೂರಕ್ಕೆ ನೂರರಷ್ಟು ಪರಿಪೂರ್ಣವಾದ ದೇಸಿ ಎಂಜಿನಿಯರಿಂಗ್ ಕೆಲಸ ಮಾಡಿದೆ. ಪ್ರತಿಯೊಂದು ಉಪಕರಣವೂ ಅನುಭವದ ಅನ್ವೇಷಣೆಯಲ್ಲಿ ಮೂರ್ತಗೊಂಡಿದೆ. ಪ್ರಾಚೀನ ಕಾಲದಿಂದಲೂ ನೇಗಿಲು ಬಳಕೆಯಲ್ಲಿದೆ. ಹೆಚ್ಚು ಪರಿಷ್ಕರಣೆಗೂ ಒಳಪಟ್ಟಿದೆ. ಎಷ್ಟೇ ಪರಿಷ್ಕರಣೆಗೆ ಒಳಗಾದರೂ ಅದರ ಮೂಲ ವಿನ್ಯಾಸ ಬದಲಾಗದೆ ಉಳಿದಿದೆ. ಮರದ ನೇಗಿಲುಗಳಲ್ಲಿ ಆಳವಾಗಿ ಉಳುವ, ಮಧ್ಯಮ

ಆಳವಾಗಿ ಉಳುವ ಮತ್ತು ತೇಲಿಸಿ ಉಳುವ ಬೇರೆ ಬೇರೆ ನೇಗಿಲುಗಳು ಇಲ್ಲ. ಒಂದೇ ನೇಗಿಲಿನಲ್ಲಿ ಈ ಎಲ್ಲ ಬಗೆಯ ಮಾರ್ಪಾಡುಗಳನ್ನು ಮಾಡಿಕೊಳ್ಳುವ ನೈಪುಣ್ಯತೆ ನಮ್ಮ ರೈತರಲ್ಲಿತ್ತು. ನೊಗಕ್ಕೆ ಏರು ಕಟ್ಟುವಾಗಲೇ ತಮಗೆ ಯಾವ ಆಳದ ಉಳುಮೆ ಬೇಕು ಎಂಬುದನ್ನು ಅವರು ನಿರ್ಧರಿಸಿಕೊಳ್ಳುತ್ತಿದ್ದರು. ಆ ಪ್ರಕಾರ ನೇಗಿಲ ಈಮು ಅಥವಾ ಈಚನ್ನು ಹಿಂದಕ್ಕೆ, ಮುಂದಕ್ಕೆ ಅಥವಾ ಎತ್ತರಕ್ಕೆ ಕಟ್ಟಿ ಏರಿನ ಆಳವನ್ನು ನಿರ್ಧರಿಸುತ್ತಿದ್ದರು. ಅತ್ಯುತ್ತಮ ನೇಗಿಲು ಮಾಡುವ ಮರಗೆಲಸದವರಿಗೆ ಅಥವಾ ಬಡಗಿಗೆ ಹಳ್ಳಿಗಳಲ್ಲಿ ಗೌರವ ಇರುತ್ತಿತ್ತು. ಕೆಲವು ಬಡಗಿಗಳು ತಾವು ತಯಾರಿಸುವ ನೇಗಿಲುಗಳಿಗೆ ತಾವೇ ಗುಳ, ಗುಳ ಸಿಕ್ಕಿಸಲು ಬೇಕಾದ ಕೊಂಡಿಗಳನ್ನು ಮಾಡಿಕೊಳ್ಳುತ್ತಿದ್ದರು. ಮೇಣಿಗಳು ಮತ್ತು ಮೇಣಿಯ ಹಿಡಿಕೆಗಳು ಒಂದೊಂದು ಪ್ರದೇಶದಲ್ಲಿ ಒಂದೊಂದು ತರ ಇರುತ್ತಿದ್ದವು. ಒಂದೇ ಊರಿನಲ್ಲಿ ಇಬ್ಬರು ಬಡಗಿಗಳಿದ್ದರೂ ಇಬ್ಬರ ಶೈಲಿಯೂ ಬೇರೆ ಬೇರೆಯಾಗಿರುತ್ತಿತ್ತು. ಶೈಲಿಗನುಗುಣವಾಗಿ ನೇಗಿಲುಗಳು, ನೊಗಗಳು ನಿರ್ಮಾಣವಾದರೂ ಉದ್ದೇಶದಲ್ಲಿ ವ್ಯತ್ಯಾಸವಿರುತ್ತಿರಲಿಲ್ಲ.

ಬೇಸಾಯ ಪರಿಕರಗಳು ಬೇಸಾಯ ಸಂಸ್ಕೃತಿಯಲ್ಲಿ ರೈತನ ಯೋಗ್ಯತೆಯನ್ನಳೆಯುವ ಮಾನದಂಡಗಳಾಗಿದ್ದವು. ಕಸುಬುದಾರ ರೈತ ತನ್ನ ಉಪಕರಣಗಳನ್ನು ಸದಾ ಸಜ್ಜಾಗಿರುವಂತೆ ನೋಡಿಕೊಳ್ಳುತ್ತಿದ್ದ. ಅವನ ಸಂಗ್ರಹಣಾಗಾರದಲ್ಲಿ ನೇಗಿಲು, ನೊಗ, ಬಾರುಕೋಲು, ಜತ್ತಿಗೆ, ಬಾಯಿಕುಕ್ಕೆ, ಹಾರೆ, ಗುದ್ದಲಿ, ಕೋಲುಗುದ್ದಲಿ, ಪಿಕಾಸಿ, ಮಚ್ಚು, ಕುಡುಗೋಲು, ಮಂಕರಿ, ಒಂದರಿ ಮುಂತಾದವು ಕಡ್ಡಾಯವಾಗಿ ಇರಲೇಬೇಕಾಗಿತ್ತು.

ರೈತ ಸಂಸ್ಕೃತಿಯ ದೇಸಿ ಪರಿಕರಗಳ ಸಾಮ್ರಾಜ್ಯ ಇಂತಿದೆ.

೧) <u>ಉಳುವ, ಬಿತ್ತುವ ಪರಿಕರಗಳು:</u>

ನೇಗಿಲು, ನೊಗ, ಕುಂಟೆ, ಹೆಗ್ಗುಂಟೆ, ಕಳೆಕುಂಟೆ, ಹರಗುವ ಕುಂಟೆ, ಬಾಚಿಹಲ್ಲಿನ ಕುಂಟೆ, ಬೋದು ಕುಂಟೆ, ಕೂರಿಗೆ, ಹಲಗೆ, ಹಲುಬೆ, ಜಡ್ಡಿಬಟ್ಟಲು, ಐದು ತಾಳಿನ ಕೂರಿಗೆ, ಹನ್ನೆರಡು ತಾಳಿನ ಕೂರಿಗೆ ಇತ್ಯಾದಿ.

೨) <u>ಕೊಯ್ಲು ಉಪಕರಣಗಳು:</u>

ಕುಡ್ಲು, ಕುಡಿಗೋಲು, ಕಳೆಕುಡ್ಲು, ಕಳಾರಿ, ಮಚ್ಚು, ಬಿಚ್ಚುಗತ್ತಿ, ಕೊಕ್ಕೆಜವಳಿ, ಕೊಡಲಿ, ಚೂರಿ, ಚಾಕು, ಸೊಪ್ಪುಗತ್ತಿ, ಹಾಯ್ಗತ್ತಿ, ಮೆಳೆಗತ್ತಿ, ಹರಿವಾಳೆ, ಸೊಪ್ಪುಗತ್ತಿತಿ, ಕಡ್‌ಕತ್ತಿ, ಗರಗಸ ಇತ್ಯಾದಿ.

೩) <u>ಬಾವಿ ತೋಡಲು ಮತ್ತು ಅಗೆಯಲು ಬಳಸುವ ಉಪಕರಣಗಳು:</u>

ಹಾರೆ, ಗುದ್ದಲಿ, ಕೋಲುಗುದ್ದಲಿ, ಸಲಿಕೆ, ಪಿಕಾಸಿ, ಮಂಕರಿ, ರಾಟೆ, ಹಗ್ಗ ಇತ್ಯಾದಿ.

೪) <u>ಸಾರಿಗೆ :</u>

ಎತ್ತಿನಗಾಡಿ, ತಡಿಕೆಗಾಡಿ, ಹಲಗೆ ಗಾಡಿ, ಕಮಾನುಗಾಡಿ, ಅಮಲ್ದಾರ ಗಾಡಿ, ಕೈಗಾಡಿ ಇತ್ಯಾದಿ.

೫) <u>ಇತರೆ ಉಪಕರಣಗಳು:</u>

ಮೊರ, ಮಂಕರಿ, ಬುಟ್ಟಿ, ಹೆಡಿಗೆ, ಕೋಳಿ ಪಂಜರ, ರೋಣುಗಲ್ಲು, ಒನಕೆ, ಬೀಸೋಕಲ್ಲು, ಗಾಣ, ಒಳಕಲ್ಲು, ಮಜ್ಜಿಗೆ ಕಡೆಯುವ ಮಂತು, ಜರಡಿಗಳು, ಏಣಿ, ಅಳತೆಯ ಉಪಕರಣಗಳು ಇತ್ಯಾದಿ.

೭.೪. ದೇಸಿ ಜ್ಞಾನ ಸಂಸ್ಕೃತಿ ಮತ್ತು ನೀರಾವರಿ

ಕುಡಿಯುವ ನೀರಿಗಾಗಿ ೩–೪ ಕಿ.ಮೀ. ದೂರದವರೆಗೆ ಮಹಿಳೆಯರು ಕೊಡ ಹಿಡಿದು ಹೋಗುವ ಚಿತ್ರಣಗಳು ನಮ್ಮ ಕಣ್ಣಮುಂದೆ ಈಗಲೂ ಇವೆ. ಸ್ವಾತಂತ್ರ್ಯ ಬಂದು ೬೮ ವರ್ಷ ಕಳೆದರೂ ಗ್ರಾಮೀಣ ಭಾಗಕ್ಕೆ ಯೋಗ್ಯ ರೀತಿಯಲ್ಲಿ ಕುಡಿಯುವ ನೀರಿನ ಸರಬರಾಜು ಆಗಿಲ್ಲ. ಅಂತರ್ಜಲದ ಮಟ್ಟ ಇಳಿಯುತ್ತಿರುವ ಕಾರಣಕ್ಕೆ ನಮ್ಮ ನಾಡಿನ ಕುಡಿಯುವ ನೀರಿನ ಬಾವಿಗಳು ಬತ್ತಿ ಹೋಗುತ್ತಿವೆ. ಸುಮಾರು ೬೦ ವರ್ಷಗಳ ಮಳೆಯ ಪ್ರಮಾಣದ ಅಂಕಿ ಅಂಶಗಳ ಪಟ್ಟಿ ನೋಡಿದರೆ ವಾಡಿಕೆಯ ಮಳೆಗಳಲ್ಲಿ ಮಹತ್ತರವಾದ ವ್ಯತ್ಯಾಸಗಳೇನೂ ಕಾಣಿಸುತ್ತಿಲ್ಲ. ಆದರೆ ಅಂತರ್ಜಲದ ಮಟ್ಟ ಮಾತ್ರ ನಿರಂತರವಾಗಿ ಕುಸಿಯುತ್ತಿರುವುದನ್ನು ಕಾಣಬಹುದು.

ಈ ಮೊದಲೇ ಹೇಳಿದಂತೆ ಅಂತರ್ಜಲದ ಕುಸಿತಕ್ಕೆ ನೇರ ಕಾರಣ ಯೂರಿಯಾ. ಯೂರಿಯಾ ಬಳಕೆಯಿಂದಾಗಿ ಮಣ್ಣಿನ ಕಣ ಕಣಗಳ ನಡುವೆ ಬಂಧನ ಏರ್ಪಟ್ಟು ಭೂಮಿ ಗಾರೆ ನೆಲದಂತಾಗುತ್ತದೆ. ಇಂತಲ್ಲಿ ಬಿದ್ದ ಮಳೆ ನೀರು ಇಂಗುವುದಾದರೂ ಹೇಗೆ?

ಹಸಿರು ಕ್ರಾಂತಿಗೂ ಮುಂಚೆ ನಮ್ಮ ಕೆರೆ-ಬಾವಿಗಳು ತುಂಬಿರುತ್ತಿದ್ದವು. ದಾರಿ ಹೋಕರು, ದನ ಮೇಯಿಸುವ ಹುಡುಗರು ನೀರು ಕುಡಿಯಲು ಇಂದಿನಂತೆ ಬಿಸ್ಲೆರಿ ಬಾಟಲುಗಳನ್ನು ಹಿಡಿದುಕೊಂಡು ಓಡಾಡುತ್ತಿರಲಿಲ್ಲ. ಕೆರೆ, ತೊರೆ, ನದಿ, ಹಳ್ಳ ಎಲ್ಲೆಂದರಲ್ಲಿ, ನೀರು ಕಂಡಲ್ಲಿ ನೀರು ಕುಡಿಯುತ್ತಿದ್ದರು. ೧೯೮೦ ನೇ ಇಸವಿಯವರೆಗೂ ನಮ್ಮ ಜನ ಇಂತೆಡೆ ಕುಡಿಯುವ ನೀರಿಗಾಗಿ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಗದ್ದೆಗಳಲ್ಲಿ ಕೆಲಸ ಮಾಡುವ ರೈತರು ಗದ್ದೆ ಬದಿಯ ಕಾಲುವೆಗಳಲ್ಲಿ ಹರಿವ ನೀರನ್ನು ಕುಡಿಯುವುದನ್ನು ಕಾಣಬಹುದಿತ್ತು. ಈಗ ರಾಸಾಯನಿಕ ವಿಷ ಕೃಷಿಯ ಪರಿಣಾಮ ಏನಾಗಿದೆ ಅಂದರೆ ರೈತರು ತಮ್ಮ ಸ್ವಂತ ತೋಟ, ಜಮೀನುಗಳಲ್ಲಿ ತಾವೇ ತೋಡಿಸಿಕೊಂಡ ಕೊಳವೆ ಬಾವಿಗಳ ನೀರನ್ನು ಕುಡಿಯುತ್ತಿಲ್ಲ! ಕಾರಣ ಅವರು ಕೃಷಿಗಾಗಿ ಬಳಸುತ್ತಿರುವ ವಿಷಗಳು (ಔಷಧಿಗಳು!) ಕೊಳವೆ ಬಾವಿಗಳ ನೀರನ್ನು ಪ್ರವೇಶಿಸಿರುವುದು ಅವರಿಗೆ ಚೆನ್ನಾಗಿ ಮನದಟ್ಟಾಗಿದೆ. ಹೀಗಾಗಿ ಅವರು ಅಡುಗೆಗಾಗಿ ಮತ್ತು ಕುಡಿಯುವ ನೀರಿಗಾಗಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ನ ಮೊರೆ ಹೋಗಿದ್ದಾರೆ. ಆ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಆದರೂ ನೇರವಾಗಿ ಆಕಾಶದಿಂದ ಇಳಿದು ಬಂದದ್ದಲ್ಲ. ತಮ್ಮ ಸ್ವಂತ ಬಾವಿಯ ನೀರನ್ನು ತಾವೇ ಕುಡಿಯುತ್ತಿಲ್ಲ ಅಂದ ಮೇಲೆ ಇಂದಿನ ಬೇಸಾಯ ಕ್ರಮ ತಲುಪಿರುವ ಸ್ಥಿತಿ ಎಂಥದೆಂಬುದನ್ನು ಯಾರು ಬೇಕಾದರೂ ಊಹಿಸಬಹುದು. ಹೀಗಾಗಿಯೆ ಕರ್ನಾಟಕ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರು ಸ್ವತ: ಮುತುವರ್ಜಿವಹಿಸಿ ಹಳ್ಳಿ ಹಳ್ಳಿಗೂ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಸರವರಾಜಿಗೆ ಟೊಂಕ ಕಟ್ಟಿ ನಿಂತಿದ್ದಾರೆ.

ಇನ್ನು ಕರ್ನಾಟಕದ ಎಲ್ಲ ದೊಡ್ಡ ದೊಡ್ಡ ನಗರಗಳಿಗೂ ಸುಸಜ್ಜಿತ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಮನೆಗೂ- ಸ್ನಾನದ ಮನೆ, ಅಡುಗೆ ಮನೆ, ಕಕ್ಕಸುಮನೆಗೆಲ್ಲ ನೇರ ನಲ್ಲಿಗಳಿವೆ. ಆದರೆ ನಗರದ ಶೇಕಡ ೬೦ ರಷ್ಟು ಜನ ಕುಡಿಯಲು ಮತ್ತು ಅಡುಗೆಗಾಗಿ ಬಳಸುತ್ತಿರುವುದು ಬಿಸ್ಲೇರಿ, ಕಿನ್ಲೆ ಬ್ರಾಂಡಿನ ನೀರುಗಳನ್ನೆ. ಯಾವುದೇ ಬ್ರಾಂಡಿನ, ಯಾವುದೇ ನೀರಿಗೆ ಎಷ್ಟೇ ಬೆಲೆಯಾದರೂ ಜನ ಚಿಂತಿಸುವುದಿಲ್ಲ. ಆದರೆ ಲೀಟರ್ ಹಾಲಿನ ಬೆಲೆ ೨ ಹೆಚ್ಚಾದರೆ ಹಾಹಾಕಾರವೆಬ್ಬಿಸುತ್ತಾರೆ. ತಾವು ಕುಡಿಯುವ ನೀರನ್ನು ತಾವೇ ನಂಬದ ಸ್ಥಿತಿಗೆ ಇಂದು ಜನ ಬಂದು ನಿಂತಿದ್ದಾರೆ. ಹಾಲಿನ ವಿಷಯದಲ್ಲಿ ಇದು ಹೀಗೆಯೇ ಆಗುತ್ತಿದೆ. ಪರಿಸ್ಥಿತಿ ಹಿಗೆಯೇ ಮುಂದುವರಿದರೆ ಹಾಲು ಕೂಡ ಬಿಳಿಯ ವಿಷವಾಗಿ ಮಾರ್ಪಾಡಾಗುವ ದಿನಗಳು ಬಹಳ ದೂರವೇನಿಲ್ಲ. ತಮ್ಮ ಆರೋಗ್ಯದ ಬಗೆಗೆ ಕಾಳಜಿ ಇರುವವರು ಈಗಾಗಲೇ ಹಾಲು ಕುಡಿಯುವುದು ಬಿಟ್ಟಿದ್ದಾರೆ. ಆಲ್ಕೋಹಾಲ್‌ಗಿಂತ ಹಾಲು ಕೆಟ್ಟದು ಎಂಬ ಭಾವನೆ ಈಗಾಗಲೇ ಬಂದಿದೆ.

ನಮ್ಮ ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳು ಬರುವ ಮೊದಲು ರೈತರು, ಸ್ಥಳೀಯ ಜಲಮೂಲಗಳನ್ನು ಅವಲಂಬಿಸಿ ಮತ್ತು

ಮಳೆಯನ್ನು ಆಧರಿಸಿ, ಘಟಪ್ರಭ, ಮಲಪ್ರಭ, ತುಂಗಭದ್ರ, ಶರಾವತಿ, ಹೇಮಾವತಿ, ಕಪಿಲಾ, ತಾರಕ, ನುಗು, ನೇತ್ರಾವತಿ, ವೇದಾವತಿ, ಕಾಳಿ, ಕುಮಾರಧಾರ, ಅಘನಾಶಿನಿ ಇವು ನಮ್ಮ ನಾಡಿನ ಮುಖ್ಯ ನದಿಗಳು. ಎರಡನೇ ನಾಗವರ್ಮರ (ಕ್ರಿ.ಪೂ.೧೦೪೨) ಕನ್ನಡ ನಿಘಂಟು 'ಅಭಿದಾನವಸ್ತುಕೋಶ' ದಲ್ಲಿ ಎರಡು ಬಗೆಯ ನೀರಾವರಿ ಆಧಾರಿತ ಭೂಮಿಗಳ ಬಗೆಗೆ ತಿಳಿಸಿದ್ದಾರೆ. (೧) ದೇವಮೂರ್ತಿಕ ಮಳೆ ಆಧಾರಿತ ಭೂಮಿ (೨) ನದಿಮೂರ್ತಿಕ ನೀರಾವರಿ ಭೂಮಿ. ಜನಸಂಖ್ಯೆ ವಿರಳವಾಗಿದ್ದ ಆ ಸಂದರ್ಭದಲ್ಲಿ ಬಹುಶ: ಹೆಚ್ಚಿನ ರೈತರು ಬೇಸಾಯಕ್ಕಾಗಿ ನದಿ ನೀರು ಮತ್ತು ಮಳೆ ನೀರನ್ನು ಆಶ್ರಯಿಸಿದ್ದಿರಬೇಕು. ಕ್ರಮೇಣ ಕೆರೆ, ಹಳ್ಳ, ತೊರೆಗಳತ್ತ ವಿಸ್ತರಿಸಿದ್ದಿರಬೇಕು.

ಭೌಗೋಳಿಕವಾಗಿ ರೂಪುಗೊಂಡಿದ್ದ ತಗ್ಗಿನ ಪ್ರದೇಶಗಳು ಕ್ರಮೇಣ ಕೆರೆಗಳಾಗಿರಬೇಕು. ನದಿಗಳು ಮತ್ತು ಕೆರೆಗಳು ನಮ್ಮ ನಾಡಿನ ಜೀವನಾಡಿಗಳು. ಊರೊಟ್ಟಿನ ಸಾಮಾಜಿಕ ಕೆಲಸವಾಗಿ ಕೆರೆ ನಿರ್ಮಾಣಗಳು ಪ್ರಾಶಸ್ತ್ಯ ಪಡೆದುಕೊಂಡಿರುವುದಕ್ಕೆ ಉಲ್ಲೇಖಗಳಿವೆ. ೧೨ನೇ ಶತಮಾನದ ಶರಣ ಸಿದ್ಧರಾಮ ಕೆರೆ ಕಟ್ಟುವುದರಲ್ಲಿ ಪರಿಣಿತಿ ಸಾಧಿಸಿದ್ದರು. ಕೆರೆಗಳ ನಿರ್ಮಾಣವನ್ನು ಲೋಕೋದ್ಧಾರಕ, ಧರ್ಮೋದ್ಧಾರಕ ಎಂದು ನಮ್ಮ ಜನ ತಿಳಿದಿದ್ದರು. ಕರ್ನಾಟಕದ 'ಸೂಳೆಕೆರೆ' ನಿರ್ಮಿಸಿ ವೇಶ್ಯೆಯೊಬ್ಬರು ಇಂದಿಗೂ ಜನಮಾನಸದಲ್ಲಿ ಉಳಿದು ಬಂದಿದ್ದಾರೆ. ಗಂಗರಾಜರ ಕಾಲದ ಆಡಳಿತ ದೇವಸ್ಥಾನಗಳು ಮುಂದೆ ಕಲ್ಯಾಣಿಗಳಿರಲೇಬೇಕೆಂದು ಕಲ್ಯಾಣಿಗಳ ನಿರ್ಮಾಣಕ್ಕೆ ಒತ್ತು ಕೊಟ್ಟಿತ್ತು. ನಮ್ಮ ರಾಜ್ಯದ ಬಲ್ಲರಾಯಸಮುದ್ರ, ದೇವರಾಯ ಸಮುದ್ರ, ಭರಮಸಾಗರ, ಚಂದ್ರವಳ್ಳಿ, ತಾಳಗುಂದ ಮುಂತಾದ ದೊಡ್ಡ ದೊಡ್ಡ ಕೆರೆಗಳು ರಾಜ್ಯವನ್ನಾಳಿದ ದೊರೆಗಳು ಕಟ್ಟಿಸಿದಂಥವು.

ನಮ್ಮ ರಾಜ್ಯದಲ್ಲಿ, ವಿಸ್ತೀರ್ಣದಲ್ಲಿ ೧೦ ಎಕರೆಗಿಂತ ಹೆಚ್ಚಿನ ವೈಶಾಲ್ಯತೆ ಇರುವ ೨೨,೭೪೨ ಕೆರೆಗಳಿವೆ. ಹತ್ತು ಎಕರೆಗಳಿಗಿಂತ ಕಡಿಮೆ ವೈಶಾಲ್ಯವಳ್ಳ ೧೫,೦೦೦ ಕೆರೆಗಳಿವೆ. ರಾಜ್ಯದ ಶಿವಮೊಗ್ಗ, ಹಾಸನ, ಕೋಲಾರ, ಧಾರವಾಡ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಕೆರೆಗಳಿವೆ.

ರಾಜರುಗಳ ಕಾಲದಲ್ಲಿ ನಿರ್ಮಿಸಿದ ಕೆರೆಗಳ ಸಂಖ್ಯೆ ಕೆಳಕಾಣಿಸಿದ ಪಟ್ಟಿಯಲ್ಲಿದೆ.

ಕ್ರ ಸಂ.	ರಾಜವಂಶ	ಕೆರೆಗಳ ಸಂಖ್ಯೆ	
		ನಿರ್ಮಿಸಿದ ಕೆರೆಗಳು	ಪುನರುಜ್ಜೀವನಗೊಳಿಸಿದ ಕೆರೆಗಳು
೧)	ಹೊಯ್ಸಳರು	೨೧೫	೩೬
೨)	ವಿಜಯನಗರದ ರಾಜರು	೭೭	೧೯
೩)	ಗಂಗರು	೨೩	೭
೪)	ಚಾಲುಕ್ಯರು	೨೭	೨
೫)	ಚೋಳರು	೨೦	೫
೬)	ರಾಷ್ಟ್ರಕೂಟರು	೪	೧
೭)	ಕದಂಬರು	೭	೦
೮)	ಯಾದವರು	೮	೧

೯)	ಟಿಪ್ಪು ಮತ್ತು ಇತರರು	೧೫೩	೨೮
	ಒಟ್ಟು	೫೩೪	೯೯

ಮೇಲಿನ ಪಟ್ಟಿಯನ್ನು ಗಮನಿಸಿದರೆ; ರಾಜ್ಯದಲ್ಲಿ ಹಾಲಿ ಇರುವ ಕೆರೆಗಳಿಗೂ ರಾಜವಂಶಗಳ ಆಳ್ವಿಕೆಯಲ್ಲಿ ನಿರ್ಮಾಣವಾದ ಕೆರೆಗಳಿಗೂ ನಡುವಿನ ಅಂತರ ಬಹು ದೂರದ್ದಾಗಿದೆ. ಹೀಗಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯ ಕೆರೆಗಳನ್ನು ನಮ್ಮ ಇಡೀ ಸಮಾಜವೇ ಮುಂದೆ ನಿಂತು ಕಟ್ಟಿದೆ. ಅತಿ ಸಣ್ಣ (೧೦ ಎಕ್ರೆಗೂ ಕಡಿಮೆ ವಿಸ್ತೀರ್ಣ), ಸಣ್ಣ, ಮಧ್ಯಮ ಮತ್ತು ದೊಡ್ಡ ಕೆರೆಗಳೂ ಸೇರಿ ೩೭,೭೪೨ ಕೆರೆಗಳಲ್ಲಿ ಸರಿ ಸುಮಾರು ೩೦ ಸಾವಿರ ಕೆರೆಗಳನ್ನು ಸಮಾಜವೇ ನಿರ್ಮಿಸಿದೆ ಎಂದ ಮೇಲೆ ನಮ್ಮ ಜನ ಕೆರೆಗಳಿಗೆ ನೀಡಿದ ಮಹತ್ವ ಎಷ್ಟು ಎಂಬುದನ್ನು ಮನಗಾಣಬಹದು.

ನಮ್ಮ ರಾಜ್ಯದ ಪ್ರಮುಖ ನದಿ ಕಣಿವೆಗಳು– ಕೃಷ್ಣಾ, ಕಾವೇರಿ, ಗೋದಾವರಿ, ಪಶ್ಚಿಮವಾಹಿನಿ, ಉತ್ತರಪಿನಾಕಿನಿ, ದಕ್ಷಿಣ ಪಿನಾಕಿನಿ, ಪಾಲರ್ – ಈ ಏಳು ಕಣಿವೆಗಳಿಂದ ಬೃಹತ್, ಮಧ್ಯಮ ಗಾತ್ರದ ನೀರಾವರಿ ಯೋಜನೆಗಳಿಂದ ನಾವು ಈವರೆಗೆ ಸಾಧಿಸಿರುವ ಅಚ್ಚುಕಟ್ಟು ವ್ಯಾಪ್ತಿ ಹದಿನಾಲ್ಕು ಲಕ್ಷದ (೧೪,೬೯,೦೯೦) ಹೆಕ್ಟೇರ್. ಪ್ರಸ್ತುತ ೨೦೧೬–೨೦೧೭ನೇ ಸಾಲಿಗೆ ನೀರಾವರಿ ಯೋಜನೆಗಳಿಗೆ ೧೦ ಸಾವಿರ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕರ್ನಾಟಕ ಸರಕಾರ ನಿಗಧಿಮಾಡಿದೆ. ನಮ್ಮ ಸಾಂಪ್ರದಾಯಿಕ ಕೆರೆಗಳಿಂದ ಆಗಿರುವ ನೀರಾವರಿ ಅಚ್ಚುಕಟ್ಟು ಪ್ರದೇಶ ಒಂದು ಲಕ್ಷದ ಐವತ್ತಮೂರು ಸಾವಿರದ ಒಂಭೈನೂರ ಎಪ್ಪತ್ತೆರಡು (೧,೫೩,೯೭೨) ಹೆಕ್ಟೇರ್. ಸ್ವತ: ರೈತರು ತಮ್ಮ ಸಾಂಪ್ರದಾಯಿಕ ತೆರೆದ ಬಾವಿಗಳಿಮದ ಮಾಡಿಕೊಂಡಿರುವ ನೀರಾವತಿ ಅಚ್ಚುಕಟ್ಟು ನಾಲ್ಕು ಲಕ್ಷದ ಅರವತ್ತೊಂದು ಸಾವಿರದ ಮುನ್ನೂರ ಎಂಭತ್ತೆರಡು (೪,೬೧,೩೮೨) ಹೆಕ್ಟೇರ್‌ಗಳು. ಏತ ನೀರಾವರಿಯಿಂದ ಆಗಿರುವ ಒಂದು ಲಕ್ಷದ ನಾಲ್ಕು ಸಾವಿರದ ಆರುನೂರ ಎಂಭತ್ತೈದು (೧,೦೪,೬೮೫) ಹೆಕ್ಟೇರ್‌ಗಳು ಹಾಗೂ ಇತರ ಮೂಲಗಳಿಂದ ಆಗಿರುವ ಮೂರು ಲಕ್ಷದ ಐವತ್ತೆರಡು ಸಾವಿರದ ನೂರಹದಿನೆಂಟು (೩,೫೨,೧೧೮) ಹೆಕ್ಟೇರ್‌ಗಳು ಒಟ್ಟು ಎಲ್ಲಾ ಬಗೆಯ ನೀರಾವರಿ ಮೂಲಗಳಿಂದ ನಲವತ್ತೊಂದು ಲಕ್ಷದ ಹನ್ನೊಂದು ಸಾವಿರದ ಒಂಭೈನೂರ ಎಪ್ಪತ್ತೈದು (೪೧,೧೧,೯೭೫) ಹೆಕ್ಟೇರ್‌ಗಳಿಗೆ ಕರ್ನಾಟಕ ಸರಕಾರದ ನೀರಾವರಿ ಇಲಾಖೆಯ ಅಂಕಿಸಂಖ್ಯೆಗಳ ಪ್ರಕಾರ ಏತ ನೀರಾವರಿಯಿಂದ ಮತ್ತು ಜಲಾಶಯಗಳಿಂದ ಆಗುವ ನೀರಾವರಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿ ೧೬,೦೫,೨೯೫ ಹೆಕ್ಟೇರ್. ಸ್ವತ: ನಮ್ಮ ರೈತರು ಬಾವಿ, ಕೊಳವೆ ಬಾವಿ ಮತ್ತು ಇತರ ಮೂಲಗಳಿಂದ ಮಾಡಿಕೊಂಡಿರುವ ಅಚ್ಚುಕಟ್ಟು ವ್ಯಾಪ್ತಿ ೨೫,೦೬,೭೧೬ ಹೆಕ್ಟೇರ್. ಇಲ್ಲಿ ಸರಕಾರ ರೂಪಿಸಿರುವ ನೀರಾವರಿ ಯೋಜನೆಗೆ ಲಕ್ಷಾಂತರ ಕೋಟಿ ರೂ.ಗಳನ್ನು ವ್ಯಯ ಮಾಡಲಾಗಿದೆ.

ಇಲ್ಲಿ ನಮ್ಮ ರೈತರ ದೇಸಿ ಎಂಜಿನಿಯರ್ ತಂತ್ರಜ್ಞಾನ ನೈಸರ್ಗಿಕ ಸಂಪನ್ಮೂಲವನ್ನು ಜಾಣ್ಮೆಯಿಂದ ಬಳಸಿಕೊಂಡಿದೆ. ಬೆಳೆ ವೈವಿಧ್ಯತೆಯನ್ನೆ ಆಧಾರ ಮಾಡಿಕೊಂಡಿದೆ. ಸರಕಾರ ಭಾರೀ ನೀರಾವರಿ ತಂತ್ರಜ್ಞಾನ ವರ್ಷಕ್ಕೆ ೨ ರಿಂದ ೩ ಭತ್ತದ ಬೆಳೆಗೆ ಅವಕಾಶ ಕಲ್ಪಿಸಿದೆ. ನಮ್ಮ ಬೃಹತ್ ಮತ್ತು ಮಧ್ಯಮ ಗಾತ್ರದ ಅಣೆಕಟ್ಟೆಗಳ ನೀರಾವರಿಯಿಂದ ಕಬ್ಬು ಮತ್ತು ಭತ್ತದ ಬೆಳೆಯನ್ನು ಮಾತ್ರ ಬೆಳೆಯಬಹುದಾಗಿದೆ.

ಈ ಬಗೆಯ ನೀರಾವರಿ ವ್ಯವಸ್ಥೆಯಿಂದ ಆಗಿರುವ ಪ್ರಮಾದಗಳನ್ನು ಹೀಗೆ ಪಟ್ಟಿ ಮಾಡಬಹದು.

- ❖ ಬಹು ಬಗೆಯ ಬೆಳೆಯನ್ನು ಬೆಳೆಯಲು ಆಗುವುದಿಲ್ಲ ಹೀಗಾಗಿ ವೈವಿಧ್ಯತೆ ನಾಶವಾಗುತ್ತದೆ.
- ❖ ಏಕ ಬೆಳೆ ಪದ್ಧತಿ (ಒಂದೇ ತರದ ಬೆಳೆ) ನಿಸರ್ಗ ವಿರೋಧಿಯಾಗಿದೆ. ಹೀಗಾಗಿ ರೋಗ ಮತ್ತು ಕೀಟ ಬಾಧೆಗಳು ಹೆಚ್ಚು.
- ❖ ಕೀಟನಾಶಕವಾಗಿ ಬಳಸುವ ವಿಷಗಳುಇ ಬೆಳೆಯುತ್ತಿರುವ ಬೆಳೆಯಲ್ಲಿ ಸೇರುತ್ತವೆ. ಪರಿಸರಕ್ಕೂ ಸೇರುತ್ತವೆ.
- ❖ ನೀರಾವರಿಯ ಬೆಳೆಗಳಿಗೆ ಹೆಚ್ಚು ರಾಸಾಯನಿಕ ಗೊಬ್ಬರಗಳಿಗೆ ಯೂರಿಯಾ ಬಳಕೆಯಿಂದಾಗಿ ನೀರಾವತಿ ಪ್ರದೇಶಗಳಲ್ಲಿ ಅಂತರ್ಜಲ ಮರುಪೂರಣದ ಸಮಸ್ಯೆ ಉದ್ಭವವಾಗಿದೆ.
- ❖ ಹೆಚ್ಚು ಕಾಲ ನೀರು ನಿಲ್ಲುವುದು, ಅಧಿಕ ರಸಗೊಬ್ಬರಗಳ ಬಳಕೆ ಮತ್ತು ವಿಷಗಳ ಸಿಂಪರಣೆ – ಭೂಮಿಯ ವಾಯು ಪೂರಣಕ್ಕೆ ಆಸ್ಪದ ನೀಡುವುದಿಲ್ಲ. ಇದರಿಂದ ಭವಿಷ್ಯತ್ತಿನಲ್ಲಿ ಗದ್ದೆಯ ಜಮೀನುಗಳು ಬಹುವಿಧದ ಸಮಸ್ಯೆಗಳಿಗೆ ಗುರಿಯಾಗುತ್ತವೆ.
- ❖ ನಾಲೆಗಳನ್ನು ನಿರ್ಮಾಣ ಮಾಡುವಾಗ ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಸಾಗಿಸುವ ಗುರಿ ಸಾಧಿಸಲು ಪ್ರಯತ್ನಿಸಲಾಯಿತೆ ಹೊರತು, ನಾಲೆ ಹಾದು ಹೋಗುವ ಮಾರ್ಗದಲ್ಲಿ ಬರುವ ಲಿಂಕ್ ಕೆರೆಗಳಿಗೆ ಸಂಪರ್ಕ ಕಲ್ಪಿಸಲಿಲ್ಲ.
- ❖ ನಮ್ಮ ಜನ ತಮ್ಮ ಜ್ಞಾನ ಬಳಸಿ ಒಂದು ಕೆರೆ ತುಂಬಿದ ಮೇಲೆ ಮತ್ತೊಂದು ಕೆರೆಗೆ ನೀರು ತಲುಪುವ ಹಾಗೆ ಮಾಡಿದ್ದರು. ಹೀಗೆ ಒಂದಾದ ಮೇಲೆ ಒಂದರಂತೆ ಸರಣಿ ರೂಪದಲ್ಲಿ ಕೆರೆಗಳು ತುಂಬುತ್ತಿದ್ದವು. ಅಂಥ ವ್ಯವಸ್ಥೆಯಿರುವ ಕೆರೆಗೆ ಅಡ್ಡಲಾಗಿ ಹೋಗುವ ನಾಲೆಗಳು ಸ್ಥಳೀಯ ತಂತ್ರಜ್ಞಾನಗಳನ್ನು ಸಂಪೂರ್ಣ ಕಡೆಗಣಿಸಿದವು.

೨೦೦೪ ರಿಂದ ೨೦೧೪ ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮೀ) ಪಟ್ಟಿ.

ಕ್ರ ಸಂ.	ಜಿಲ್ಲೆಗಳು	೨೦೦೪	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	೨೦೧೨	೨೦೧೩	೨೦೧೪
೧	೨	೩	೪	೫	೬	೭	೮	೯	೧೦	೧೧	೧೨	೧೩
೧	ಬೆಂಗಳೂರು	೯೭೯	೧೨೦೬	೫೨೨	೯೩೫	೯೭೧	೭೪೬	೮೮೪	೯೫೪	೫೩೩	೮೨೧	೮೨೧
೨	ಬೆಂಗಳೂರು (ಗ್ರಾ)	೮೩೭	೯೩೦	೪೬೭	೮೫೨	೮೭೯	೬೭೯	೭೮೨	೭೨೧	೪೮೭	೭೪೪	೮೩೧
೩	ರಾಮನಗರ	೧೧೪೨	೧೧೪೨	೫೩೩	೬೮೦	೭೫೦	೮೭೦	೭೯೮	೭೪೫	೪೪೭	೬೯೮	೭೪೯
೪	ಚಿತ್ರದುರ್ಗ	೫೫೨	೮೦೩	೪೬೦	೭೦೨	೬೪೫	೮೧೩	೮೯೧	೩೬೩	೫೨೮	೫೪೮	೭೬೮
೫	ದಾವಣಗೆರೆ	೬೦೮	೮೭೧	೫೫೨	೮೨೧	೬೮೦	೯೫೫	೯೬೯	೫೩೫	೫೪೨	೭೦೧	೯೦೧
೬	ಕೋಲಾರ	೭೫೧	೧೧೯೫	೫೧೮	೬೩೩	೮೧೧	೭೭೮	೮೦೨	೬೪೩	೭೬೦	೫೭೯	೪೯೪
೭	ಚಿಕ್ಕಬಳ್ಳಾಪುರ	೯೬೫	೯೬೫	೪೯೭	೮೧೯	೮೭೦	೬೯೪	೯೩೪	೬೭೪	೬೦೨	೫೭೮	೪೨೪
೮	ಶಿವಮೊಗ್ಗ	೨೬೬೦	೨೯೬೮	೨೯೫೬	೩೩೯೫	೨೬೩೮	೨೯೭೨	೨೭೫೪	೨೮೬೯	೨೩೫೯	೩೦೫೯	೨೯೯೪
೯	ತುಮಕೂರು	೬೧೭	೮೩೬	೪೭೧	೬೮೧	೭೭೯	೬೭೩	೮೪೧	೫೪೯	೪೭೩	೫೮೪	೬೯೦
೧೦	ಚಿಕ್ಕಮಗಳೂರು	೧೭೪೯	೨೦೩೫	೧೯೯೩	೨೩೫೭	೧೯೮೨	೨೨೭೦	೧೯೯೮	೧೭೭೨	೧೫೪೨	೨೧೨೮	೧೯೭೭
೧೧	ದಕ್ಷಿಣ ಕನ್ನಡ	೩೫೨೬	೩೮೯೯	೪೩೫೦	೪೧೦೭	೩೫೯೯	೪೨೨೬	೪೪೭೧	೪೨೯೩	೩೩೯೨	೪೨೨೩	೩೭೨೪
೧೨	ಉಡುಪಿ	೪೨೮೭	೪೨೫೧	೪೬೭೨	೫೦೬೪	೪೦೦೪	೫೪೮೦	೫೦೮೪	೫೧೧೩	೪೨೬೫	೪೮೧೫	೪೦೦೯
೧೩	ಹಾಸನ	೧೫೨೭	೨೦೮೩	೧೬೧೫	೧೮೯೨	೧೬೪೪	೧೬೩೯	೧೬೭೬	೧೫೧೬	೧೧೪೧	೧೪೯೯	೧೫೦೦
೧೪	ಕೊಡಗು	೨೬೭೮	೩೫೦೯	೩೩೭೪	೩೪೪೮	೨೪೧೩	೨೯೧೨	೨೬೪೭	೩೦೭೭	೨೦೦೧	೩೪೨೯	೩೦೧೬
೧೫	ಮಂಡ್ಯ	೮೦೯	೧೧೦೦	೪೮೫	೬೪೭	೭೧೦	೭೦೫	೮೬೪	೬೬೪	೪೪೬	೫೬೯	೭೮೧
೧೬	ಮೈಸೂರು	೭೪೫	೯೯೦	೬೨೭	೭೪೪	೭೦೦	೭೫೦	೮೭೩	೭೮೨	೪೯೧	೬೮೧	೮೩೫
೧೭	ಚಾಮರಾಜನಗರ	೮೫೮	೧೧೮೮	೬೩೪	೮೪೮	೮೧೯	೭೦೪	೮೬೭	೬೯೮	೪೩೮	೫೩೬	೮೬೭
೧೮	ಬೆಳಗಾವಿ	೯೫೧	೧೩೬೬	೧೨೯೫	೧೨೦೬	೧೦೭೨	೧೨೪೮	೧೧೯೦	೧೧೫೩	೭೩೪	೮೨೫	೧೧೨೫
೧೯	ವಿಜಯಪುರ	೪೯೯	೫೦೯	೪೭೯	೫೫೨	೪೭೩	೯೦೩	೫೮೮	೩೫೬	೪೪೦	೫೬೪	೮೮೨
೨೦	ಬಾಗಲಕೋಟೆ	೫೦೯	೫೫೩	೪೨೬	೬೮೬	೫೦೫	೯೪೦	೬೩೩	೫೧೬	೩೭೨	೫೨೮	೬೩೬
೨೧	ಧಾರವಾಡ	೬೨೪	೮೯೮	೭೧೨	೮೮೩	೭೦೭	೯೩೭	೮೭೩	೭೪೪	೫೨೬	೬೬೨	೯೮೦
೨೨	ಗದಗ	೫೯೨	೫೭೮	೪೪೩	೮೨೨	೬೦೨	೮೨೨	೬೯೬	೩೯೭	೪೦೩	೫೧೮	೬೯೮
೨೩	ಹಾವೇರಿ	೬೪೬	೮೭೬	೬೮೨	೯೫೫	೭೮೦	೧೦೧೬	೧೦೧೬	೭೭೨	೫೫೦	೭೬೪	೧೦೯೪
೨೪	ಉತ್ತರ ಕನ್ನಡ	೨೪೪೧	೩೧೫೮	೩೪೦೩	೩೩೪೯	೨೭೨೧	೩೧೨೭	೨೮೭೯	೩೨೩೭	೨೫೨೮	೩೨೩೭	೨೯೯೯
೨೫	ಬಳ್ಳಾರಿ	೪೬೪	೬೨೯	೪೧೬	೫೫೩	೫೨೦	೮೨೮	೬೭೨	೩೮೦	೪೧೮	೪೮೨	೫೬೭
೨೬	ಬೀದರ್	೬೯೧	೮೯೨	೮೦೮	೬೮೦	೮೭೯	೬೮೯	೧೦೪೦	೭೧೯	೭೨೭	೯೭೦	೬೦೭
೨೭	ಕಲಬುರಗಿ	೬೧೯	೭೭೩	೫೩೭	೬೫೧	೭೧೩	೭೮೧	೮೮೧	೫೯೩	೫೯೪	೭೭೬	೭೦೨
೨೮	ಯಾದಗಿರಿ	೪೯೫	೮೩೫	೫೩೨	೬೪೬	೬೦೭	೮೯೩	೮೩೦	೫೪೫	೫೪೫	೭೪೭	೫೩೧
೨೯	ರಾಯಚೂರು	೫೧೧	೬೫೨	೪೨೫	೬೭೪	೪೯೩	೮೨೮	೬೫೩	೩೫೮	೩೫೩	೬೩೯	೫೪೭
೩೦	ಕೊಪ್ಪಳ	೫೧೦	೫೭೩	೩೨೯	೭೨೨	೫೫೩	೯೨೧	೭೫೧	೪೧೭	೩೯೨	೫೬೦	೭೨೫
	ರಾಜ್ಯ (ಒಟ್ಟು)	೧೨೭೧	೧೫೮೪	೧೪೦೩	೧೫೭೮	೧೩೪೦	೧೫೪೪	೧೫೦೦	೧೩೭೫	೧೦೪೯	೧೪೦೯	೧೪೧೪

- ಮಾಹಿತಿ – ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ಕರ್ನಾಟಕ ಸರ್ಕಾರ

ಕರ್ನಾಟಕ ಅಂಕಿ ಅಂಶಗಳ ನೋಟ

ಕ್ರ.ಸಂ	ವಿವರಗಳು	ಘಟಕ	1960-61	1970-71	1980-81	1990-91	2000-01	2009-10	2010-11
1	ಭೌಗೋಳಿಕ ವಿಸ್ತೀರ್ಣ	(000 ಚ.ಕಿ.)	192	192	192	192	192	192	192
	ಆಡಳಿತ ರಚನೆ								
2	ಕಂದಾಯ ವಿಭಾಗಗಳು	ಸಂಖ್ಯೆಗಳು	4	4	4	4	4	4	4
3	ಜಿಲ್ಲೆಗಳು	-"-	19	19	19	20	27	30	30
4	ತಾಲ್ಲೂಕುಗಳು	-"-	175	175	175	175	175	176	176
5	ಜನವಸತಿ ಇರುವ ಗ್ರಾಮಗಳು	-"-	26377	26826	27028	27066	27481	27481	27397
6	ಜನವಸತಿ ಇಲ್ಲದಿರುವ ಗ್ರಾಮಗಳು	-"-	2972	2707	2362	2127	1925	1925	1943
7	ಪಟ್ಟಣಗಳು	-"-	231	245	281	306	270	270	347
	ಜನಸಂಖ್ಯೆ- ಜನಗಣತಿಯಂತೆ		1951	1961	1971	1981	1991	2001	2011
8	ಒಟ್ಟು	(000 ಗಳಲ್ಲಿ)	19401	23587	29299	37136	44977	52851	61095
9	ಗಂಡಸರು	-"-	9866	12041	14972	18923	22952	26899	30967
10	ಹೆಂಗಸರು	-"-	9535	11546	14327	18213	22025	25952	30128
11	ಗ್ರಾಮೀಣ	-"-	14945	18320	22177	26406	31069	34889	37469
12	ನಗರ	-"-	4456	5267	7122	10730	13908	17962	23626
13	ಪರಿಶಿಷ್ಟ ಜಾತಿ	-"-	2583	3117	3850	5595	7369	8564	10475
14	ಪರಿಶಿಷ್ಟ ಪಂಗಡ	-"-	60	192	231	1825	1916	3464	4249
15	ಜನಸಾಂದ್ರತೆ	(ಪ್ರತಿ ಚ.ಕಿ.)	262[a]	123	153	194	235	276	319
16	ಸಾಕ್ಷರತೆ ಪ್ರಮಾಣ	ಶೇಕಡಾವಾರು	19.26[b]	29.80[b]	36.83[b]	46.21[c]	56.04[c]	66.60[c]	75.40[c]
17	ಲಿಂಗ ಪ್ರಮಾಣ (ಪ್ರತಿ 1000 ಗಂಡಸರಿಗೆ ಹೆಂಗಸರು)	ಸಂಖ್ಯೆಗಳಲ್ಲಿ	966	959	957	963	960	965	973
18	ನಗರ ಜನಸಂಖ್ಯೆ	ಶೇಕಡಾವಾರು	22.96	22.33	24.3	28.89	30.92	33.99	38.7
	ರಾಜ್ಯಾದಾಯ - ಪ್ರಸಕ್ತ ಬೆಲೆಗಳಲ್ಲಿ		1960-61	1970-71	1980-81	1990-91	2000-01	2014-15[F]	2015-16[F]
19	ರಾಜ್ಯಾದಾಯ	(ಕೋಟಿ ರೂ.ಗಳಲ್ಲಿ)	751	2016	5587	20551	96348	907839	1022729
20	ಪ್ರಾಥಮಿಕ ವಲಯ	-"-	432	1063	2573	7626	31473	117416	121340
21	ದ್ವಿತೀಯ ವಲಯ	-"-	122	418	1160	4734	18684	199848	214719
22	ತೃತೀಯ ವಲಯ	-"-	197	535	1854	8191	46191	513651	598812
23	ತಲಾದಾಯ	(ರೂ.ಗಳಲ್ಲಿ)	321	696	1520	4598	18344	130897	145799
	ಕೃಷಿ		1960-61	1970-71	1980-81	1990-91	2000-01	2012-13	2013-14
24	ಬಿತ್ತನೆಯಾದ ನಿವ್ವಳ ಪ್ರದೇಶ	'000 ಹೆ.ಗಳಲ್ಲಿ	10228	10248	9899	10381	10410	9793	9923
25	ಬೆಳೆಗಳಾದ ಒಟ್ಟು ಪ್ರದೇಶ	-"-	10588	10887	10660	11759	12284	11748	12267
26	ಒಟ್ಟು ನೀರಾವರಿ ಪ್ರದೇಶ	-"-	NA	1355	1676	2590	3271	4007	4112
27	ಒಟ್ಟು ಬೆಳೆಯುವ ವಿಸ್ತೀರ್ಣದಲ್ಲಿ ಒಟ್ಟು ನೀರಾವರಿಯಾದ ವಿಸ್ತೀರ್ಣ.	-"-	NA	12.45	15.72	22.09	26.63	34.11	33.52
	ಪ್ರಮುಖ ಬೆಳೆಗಳ ವಿಸ್ತೀರ್ಣ		1960-61	1970-71	1980-81	1990-91	2000-01	2013-14	2014-15
28	ಭತ್ತ	000 ಹೆ.ಗಳಲ್ಲಿ	1028	1170	1114	1173	1483	1330	1326
29	ಗೋಧಿ	-"-	324	343	322	198	266	214	198
30	ಜೋಳ	-"-	2969	2224	1991	2155	1782	1176	1047
31	ರಾಗಿ	-"-	500	562	564	425	462	286	234
32	ಒಟ್ಟು ಏಕದಳ ಧಾನ್ಯಗಳು	-"-	6274	5971	5573	5415	5757	5043	4873
33	ಒಟ್ಟು ದ್ವಿದಳ ಧಾನ್ಯಗಳು	-"-	1306	1444	1531	1621	2047	2461	2320
34	ಒಟ್ಟು ಆಹಾರ ಧಾನ್ಯಗಳು	-"-	7579	7416	7104	7036	7804	7504	7193
35	ಕಬ್ಬು ಕಟಾವು ಕ್ಷೇತ್ರ	-"-	NA	NA	NA	NA	NA	420	480
36	ಹತ್ತಿ	-"-	984	1142	1012	596	552	654	875
37	ನೆಲಗಡಲೆ	-"-	915	1027	790	1212	1063	725	654

- ಮಾಹಿತಿ – ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ಕರ್ನಾಟಕ ಸರ್ಕಾರ

ಕರ್ನಾಟಕ ಅಂಕಿ ಅಂಶಗಳ ನೋಟ

	ಪ್ರಮುಖ ಬೆಳೆಗಳ ಉತ್ಪಾದನೆ		1960-61	1970-71	1980-81	1990-91	2000-01	2013-14	2014-15
38	ಅಕ್ಕಿ	000 ಟನ್ನುಗಳಲ್ಲಿ	1328	2000	2258	2428	3847	3758	4025
39	ಗೋಧಿ	-"-	77	130	174	123	250	230	261
40	ಜೋಳ	-"-	1154	1565	1506	1282	1547	1300	1174
41	ಸಜ್ಜೆ	-"-	129	211	192	203	342	309	248
42	ಒಟ್ಟು ಏಕದಳ ಧಾನ್ಯಗಳು	-"-	3578	5235	5714	5705	10004	11040	11232
43	ಒಟ್ಟು ದ್ವಿದಳ ಧಾನ್ಯಗಳು	-"-	352	511	488	539	956	1465	1390
44	ಒಟ್ಟು ಆಹಾರ ಧಾನ್ಯಗಳು	-"-	3930	5746	6202	6244	10960	12505	12622
45	ಕಬ್ಬು	-"-	5184	8106	12127	20750	42924	35910	43776
46	ಹತ್ತಿ *	-"-	382	570	597	640	855	1437	2312
47	ನೆಲಗಡಲೆ	-"-	448	780	475	816	1081	708	502
	ಕೃಷಿ ಗಣತಿ		1970-71	1980-81	1990-91	2000-01	2005-06	2010-11	2010-11
48	ಹಿಡುವಳಿದಾರರು (ಸಂಖ್ಯೆ)	'000 ಗಳಲ್ಲಿ	3551	4309	5776	7029	7581	7832	7832
49	ಹಿಡುವಳಿಯ ವಿಸ್ತೀರ್ಣ	ಹೆ. ಗಳಲ್ಲಿ	11368	11746	12321	12307	12385	12162	12162
50	ಸರಾಸರಿ ಹಿಡುವಳಿಯ ವಿಸ್ತೀರ್ಣ	ಹೆ. ಗಳಲ್ಲಿ	3.2	2.73	2.13	1.74	1.63	1.55	1.55
	ಜಾನುವಾರು ಗಣತಿ		1972	1977	1983	1990	1997	2007	2012
51	ಒಟ್ಟು ಜಾನುವಾರು	000 ಗಳಲ್ಲಿ	21965	21800	24680	24968	30688	32883	27701
52	ಒಟ್ಟು ಕೋಳಿಗಳು	-"-	10163	9696	12096	15694	21399	42433	53442
	ಅರಣ್ಯ		1962-63	1970-71	1980-81	1990-91	2000-01	2010-11	2014-15
53	ಅರಣ್ಯ ಪ್ರದೇಶ	'000 ಹೆ.ಗಳಲ್ಲಿ	3522	3621	3838	3872	3828	4335	4335
	ಕಾರ್ಖಾನೆಗಳು		1971	1981	1991	2001	2009	2014 *	2015 *
54	ಕಾರ್ಯನಿರತ ಕಾರ್ಖಾನೆಗಳು	ಸಂಖ್ಯೆಗಳಲ್ಲಿ	3668	4985	7768	9440	11983	8762	15515
55	ಉದ್ಯೋಗಿಗಳು	-"-	252074	434202	777900	903895	1079681	880047	1646670
56	ಪ್ರತಿ ಲಕ್ಷ ಜನಸಂಖ್ಯೆಗೆ ಉದ್ಯೋಗಿಗಳು	-"-	860	1169	1730	1710	1785	1440	2745
ಕೈಗಾರಿಕೆ			2006-07	2007-08	2008-09	2009-10	2010-11	2013-14	2014-15
ಕೈಗಾರಿಕಾ ಹೂಡಿಕೆ (ರೂ.3.00 ಕೋಟಿಗಳಿಂದ ರೂ.50.00 ಕೋಟಿಗಳ ವರೆಗೆ)									
57	ಅನುಮೋದಿತ ಯೋಜನೆಗಳು	ಸಂಖ್ಯೆಗಳಲ್ಲಿ	871	727	310	359	439	209	72
58	ಹೂಡಿಕೆ	ರೂ. ಕೋಟಿಗಳಲ್ಲಿ	11511	10267	5182	7750	6880	354821	199633
59	ಉದ್ಯೋಗ	ಸಂಖ್ಯೆಗಳಲ್ಲಿ	612620	349015	135623	115932	110505	43759	24248
ಕೈಗಾರಿಕಾ ಹೂಡಿಕೆ (ರೂ.50.00 ಕೋಟಿಗಳಿಗೆ ಮೇಲ್ಪಟ್ಟು)									
60	ಅನುಮೋದಿತ ಯೋಜನೆಗಳು	ಸಂಖ್ಯೆಗಳಲ್ಲಿ	66	108	50	110	186	46	36
61	ಹೂಡಿಕೆ	ರೂ. ಕೋಟಿಗಳಲ್ಲಿ	92056	160523	105266	288549	187186	38733	52148
62	ಉದ್ಯೋಗ	ಸಂಖ್ಯೆಗಳಲ್ಲಿ	781966	1996504	410842	284934	580161	127692	31819
	ವಿದ್ಯುಚ್ಛಕ್ತಿ		1970-71	1980-81	1990-91	2000-01	2010-11	2013-14 (ಅ)	2014-15 (ಅ)
63	ಒಟ್ಟು ಉತ್ಪಾದನೆ	ದಶಲಕ್ಷ-ಯೂನಿಟ್‌ಗಳಲ್ಲಿ	4833	6389	12431	21985	47112	59024	62035
64	ಒಟ್ಟು ಬಳಕೆ	-"-	3187	5189	12182	17860	37202	56737	59760 $
65	ಕೈಗಾರಿಕಾ ಬಳಕೆ	-"-	2488	3864	5429	4882	8425	10268	9935
66	ಕೃಷಿ ಬಳಕೆ	-"-	179	384	4486	7350	12802	17897	17872
67	ಗೃಹ ಬಳಕೆ	-"-	217	696	1803	3909	7893	9843	10620

- ಮಾಹಿತಿ – ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ಕರ್ನಾಟಕ ಸರ್ಕಾರ

ಸಾಮಾನ್ಯ ವಿವರಣೆ - ಕರ್ನಾಟಕ ಭಾರತ ಹೋಲಿಕೆ

ಕ್ರಸಂ	ವಿವರಗಳು	ಘಟಕ	ಕರ್ನಾಟಕ	ಭಾರತ
	ಒಟ್ಟು ಜನಸಂಖ್ಯೆ 2011 ರ ಜನಗಣತಿ			
1	ಒಟ್ಟು	ಸಾವಿರಗಳಲ್ಲಿ	61095	1210570
2	ಗಂಡಸರು	-"-	30967	623122
3	ಹೆಂಗಸರು	-"-	30128	587448
4	ಗ್ರಾಮೀಣ ಜನಸಂಖ್ಯೆ	-"-	37469	833463
5	ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು ಗ್ರಾಮೀಣ ಜನಸಂಖ್ಯೆ	ಶೇಕಡವಾರು	61.30	68.80
6	ನಗರ ಜನಸಂಖ್ಯೆ	ಸಾವಿರಗಳಲ್ಲಿ	23626	377106
7	ಒಟ್ಟು ಜನಸಂಖ್ಯೆಯಲ್ಲಿ ಶೇಕಡಾವಾರು ನಗರ ಜನಸಂಖ್ಯೆ	ಶೇಕಡವಾರು	38.70	31.20
8	ಲಿಂಗಾನುಪಾತ ಪ್ರಮಾಣ (ಪ್ರತಿ 1000 ಗಂಡಸರಿಗೆ ಹೆಂಗಸರು)	ಸಂಖ್ಯೆಗಳಲ್ಲಿ	973	943
9	ಬೆಳವಣಿಗೆ ಪ್ರಮಾಣ 2001-2011	ಶೇಕಡವಾರು	15.6	17.7
10	ಸಾಕ್ಷರತೆ	ಶೇಕಡವಾರು	75.40	73.00
11	ಪ.ಜಾ./ ಪ.ವರ್ಗಗಳ ಜನಸಂಖ್ಯೆ (2011 ರ ಜನಗಣತಿಯಂತೆ)	ಸಾವಿರಗಳಲ್ಲಿ	14724	305659
12	ಒಟ್ಟು ಕೆಲಸಗಾರರು (2011 ರ ಜನಗಣತಿಯಂತೆ)	-"-	27873	481743
13	ಭೌಗೋಳಿಕ ವಿಸ್ತೀರ್ಣ (2011 ರ ಜನಗಣತಿಯಂತೆ)	ಲಕ್ಷ ಚ.ಕಿ.ಮಿ.ಗಳಲ್ಲಿ	1.92	32.87
14	ಬಿತ್ತನೆ ಮಾಡಿದ ನಿವ್ವಳ ಪ್ರದೇಶ (2010-11)	ಸಾವಿರ ಹೆ.ಗಳಲ್ಲಿ	10523	141579
15	ಬೆಳೆಯಾದ ಒಟ್ಟು ಪ್ರದೇಶ (2010-11)	-"-	13062	198969
16	ಒಟ್ಟು ನೀರಾವರಿ ಪ್ರದೇಶ 2011-12 (P)	-"-	4137	91530
17	ಒಟ್ಟು ಬೆಳೆಯಾದ ವಿಸ್ತೀರ್ಣದಲ್ಲಿ ಶೇಕಡವಾರು ನೀರಾವರಿಯಾದ ಒಟ್ಟು ವಿಸ್ತೀರ್ಣ. (2019-11)	ಶೇಕಡವಾರು	32.76	44.91
ಪ್ರಮುಖ ಬೆಳೆಗಳ ವಿಸ್ತೀರ್ಣ (2012-13)				
18	ಭತ್ತ	ಸಾವಿರ ಹೆ.ಗಳಲ್ಲಿ	1276	42754
19	ಮುಸುಕಿನ ಜೋಳ	-"-	1322	8673
20	ಜೋಳ	-"-	1263	6214
21	ಗೋಧಿ	-"-	225	30003
22	ಸಜ್ಜೆ	-"-	275	7297
23	ಒಟ್ಟು ಆಹಾರ ಧಾನ್ಯಗಳು	-"-	7299	120776
24	ಒಟ್ಟು ದ್ವಿದಳ ಧಾನ್ಯಗಳು	-"-	2269	23257
25	ಕಬ್ಬು	-"-	425	4999
26	ಹತ್ತಿ	-"-	485	11927
27	ನೆಲಗಡಲೆ	-"-	569	4721
28	ಒಟ್ಟು ಜಾನುವಾರುಗಳು 2012	ಸಾವಿರಗಳಲ್ಲಿ	27701	53442
29	ಅರಣ್ಯ ಪ್ರದೇಶ 2010-11	ಸಾವಿರ ಹೆ.ಗಳಲ್ಲಿ	3072	70006
30	ಒಟ್ಟು ವಿದ್ಯುಚ್ಛಕ್ತಿ ಉತ್ಪಾದನೆ 2012-13 (P)	ಜಿ.ಗಾ..ವ್ಯಾಟ್ ಅವರ್ಸ್	46338	964489
31	ಒಟ್ಟು ವಿದ್ಯುಚ್ಛಕ್ತಿ ಬಳಕೆ 2012-13 (P)	ಗಿ.ಗಾ..ವ್ಯಾಟ್ ಅವರ್ಸ್	51439.47	708843.39
32	ವಿದ್ಯುಚ್ಛಕ್ತಿಯ ಕೈಗಾರಿಕಾ ಬಳಕೆ 2012-13 (P)	ಜಿ.ಗಾ..ವ್ಯಾಟ್ ಅವರ್ಸ್	15596.2	250531.22
33	ಒಟ್ಟು ಬಳಕೆಗೆ ಶೇಕಡವಾರು ಕೈಗಾರಿಕ ಬಳಕೆ	ಶೇಕಡವಾರು	30.32	35.34
34	ಎಲ್ಲಾ ಸೆಡ್ಯೂಲ್ ವಾಣಿಜ್ಯ ಬ್ಯಾಂಕುಗಳು (ಮಾರ್ಚ್2013)	ಸಂಖ್ಯೆಗಳಲ್ಲಿ	7361	104647
ರಾಜ್ಯ/ರಾಷ್ಟ್ರದ ಆದಾಯ ಪ್ರಸಕ್ತ ಬೆಲೆಗಳಲ್ಲಿ (2015-16) (ಪ್ರ.ಪ.ಅಂ.) 2011-12 ಶ್ರೇಣಿ				
35	ಒಟ್ಟು ಆದಾಯ	ರೂ.ಕೋಟಿಗಳಲ್ಲಿ	1022729	13567192
36	ನಿವ್ವಳ ಆದಾಯ	-"-	936045	12118624
37	ಒಟ್ಟು ತಲಾದಾಯ	ರೂ.ಗಳಲ್ಲಿ	159301	104520
38	ನಿವ್ವಳ ತಲಾದಾಯ	-"-	145799	93231

P: ತಾತ್ಕಾಲಿಕ, ಪ್ರಥಮ ಪರಿಷ್ಕೃತ ಅಂದಾಜು.

- ಮಾಹಿತಿ – ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು. ಕರ್ನಾಟಕ ಸರ್ಕಾರ

ಕೊನೆ ಟಿಪ್ಪಣಿ:–

೧) 'ಬೆಳ್ದಿಂಗಪ್ಪನ ಪೂಜೆ'– ಡಾ. ಅಗ್ರಹಾರ ಕೃಷ್ಣಮೂರ್ತಿ

ಅಧ್ಯಾಯ-೮

ಅಧ್ಯಯನದ ಫಲಿತಗಳು

ದೇಸಿ ಕೃಷಿ ಜ್ಞಾನ ಪರಂಪರೆಗಳ ಈ ಅಧ್ಯಯನದಲ್ಲಿ ಕಂಡುಬಂದ ಫಲಿತಗಳು ಇಂತಿವೆ.

ಕರ್ನಾಟಕದಲ್ಲಿ ಹಾಲಿ ಇರುವ ಮೆಟ್ರೋ ನಗರಗಳು ಹಿಂದೆ ಹಳ್ಳಿಗಳೇ ಆಗಿದ್ದವು. ಇಡೀ ಕರ್ನಾಟಕ ಹಳ್ಳಿಗಳ ನಾಡಾಗಿತ್ತು. ಬೇಸಾಯ ಪ್ರಧಾನ ಕಸುಬಾಗಿತ್ತು. ಕರ್ನಾಟಕದ ದೊಡ್ಡ ದೊಡ್ಡ ನಗರಗಳ ಹಲವು ಬಡಾವಣೆಗಳಲ್ಲಿ ಹಳ್ಳಿಯ ಸೊಗಡು ಇಂದಿಗೂ ಉಳಿದುಕೊಂಡು ಬಂದಿದೆ. ನಾಡಿನ ಗ್ರಾಮೀಣ ಸಂಸ್ಕೃತಿಗೆ ಅಷ್ಟೊಂದು ಪ್ರಬಲವಾಗಿರುವ ಬೇರುಗಳು ಇರುವುದು ಇದರಿಂದ ತಿಳಿಯುತ್ತದೆ. ಹಳ್ಳಿಗಳು ಸ್ವಾವಲಂಬಿ ಜ್ಞಾನದ ಸ್ವಾಭಾವಿಕ ನೆಲೆಗಳಾಗಿದ್ದವು. ಬಹುತೇಕ ೧೯೬೦ ರವರೆಗೆ ಕರ್ನಾಟಕದ ಗ್ರಾಮೀಣ ಸಮಾಜ ಯಾವ ವಿಷಯದಲ್ಲೂ ನಗರಗಳಿಗೆ ಅವಲಂಬಿಯಾಗಿರಲಿಲ್ಲ. ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳು ಆಡಳಿತ, ವಾಣಿಜ್ಯ, ಶಿಕ್ಷಣ, ಮನರಂಜನೆ ಮತ್ತು ಮಾಹಿತಿ ಕೇಂದ್ರಗಳಾಗಿ ಸೀಮಿತಗೊಂಡಿದ್ದವು ಮತ್ತು ಗ್ರಾಮೀಣ ಸಮಾಜದ ಮೇಲೆ ಇವೆಲ್ಲವೂ ಅವಲಂಬನೆಯಾಗಿದ್ದವು.

ಈಗ ನಗರಗಳು ಗ್ರಾಮೀಣ ಆರ್ಥಿಕತೆಯನ್ನು, ಸಾಮಾಜಿಕತೆಯನ್ನು, ಸಂಸ್ಕೃತಿಯನ್ನು ನಿರ್ಧರಿಸುವ ಮಟ್ಟಿಗೆ ಬೆಳೆದುಹೋಗಿವೆ. ಒಂದು ಮಟ್ಟಿಗೆ ಕರ್ನಾಟಕದ ಬಹುತೇಕ ಹಳ್ಳಿಗಳು ನಗರದ ಜಾಗತೀಕರಣದ ಜೀತದಾಳುಗಳಾಗಿವೆ. ರೈತರು ಆತ್ಮಹತ್ಯೆಯ ಸುಳಿಗೆ ಸಿಲುಕಿದ್ದಾರೆ.

ಇಷ್ಟಾದರೂ ಇಂಥ ಪರಿಸ್ಥಿತಿಯಿಂದ ಹೊರಬರುವ ವಿವೇಕ ಕೂಡ ಹಳ್ಳಿಗಾಡಿನಲ್ಲೆ ಅಂತರ್ಗತವಾಗಿದೆ. ಆ ವಿವೇಕ ದೇಸಿ ವಿವೇಕವಾಗಿ ಬೆಳೆ ವೈವಿಧ್ಯತೆಗಳ ಮೂಲಕ ವ್ಯಕ್ತವಾಗಲು ಶುರುವಾಗಿದೆ. ಒಂದೇ ಬಗೆಯ ಬೆಳೆ ಬೆಳೆಯುವುದು ಅದೂ ಲಕ್ಷಾಂತರ ಎಕರೆಗಳಲ್ಲಿ ಎಡೆ ಬಿಡದೆ ಬೆಳೆಯುವುದು ಎಷ್ಟು ಮೂರ್ಖತನದ್ದು ಎಂಬುದೀಗ ಅರಿವಿಗೆ ಬರುತ್ತಿದೆ. ಫ್ಯಾಕ್ಟರಿಗಳ ಅರೆಯುವ ಸಾಮರ್ಥ್ಯ, ಸಾಮಾನ್ಯ ವಾರ್ಷಿಕ ಬೇಡಿಕೆ ಈ ಯಾವುದನ್ನೂ ಯೋಜನಾ ಬದ್ಧವಾಗಿ ನಿರ್ವಹಿಸದ ಕಾರಣ ಸಕ್ಕರೆಯ ಬೆಲೆ ಒಂದು ಕೆ.ಜಿ.ಗೆ ಕೇವಲ ೨೮ ರಿಂದ ೩೫ ರೂಪಾಯಿವರೆಗೆ ಇದೆ. ಬೆಳೆದ ಕಬ್ಬಿನ ಗದ್ದೆಗಳಿಗೆ ಬೆಂಕಿ ಹಚ್ಚಿದರೂ, ಮಾರುಕಟ್ಟೆಗೆ ಸಾಗಿಸದೆ ಪ್ರತಿಭಟನಾರ್ಥ ರಸ್ತೆಗೆ ಸುರಿದರೂ ಟನ್ ಕಬ್ಬಿನ ಬೆಂಬಲ ಬೆಲೆಯೂ ಸೇರಿ ರೂ.ಎರಡು ಸಾವಿರ ದಾಟಿಲ್ಲ. ಇಷ್ಟು ಕಡಿಮೆ ಬೆಲೆಗೆ ಕಬ್ಬು ಬೆಳೆಯುವುದು ಜೀತಕ್ಕಿಂತ ನಿಕೃಷ್ಟ ಬೆಲೆಯಲ್ಲಿ ಮಾರಾಟವಾಗುತ್ತಿವೆ. ದೇಸಿ ಸ್ವಾವಲಂಬನೆಯ ಮಾರ್ಗದಲ್ಲಿ ಇಂಥವೆಲ್ಲ ಘಟಿಸುವುದು ಸಾಧ್ಯವಿರಲಿಲ್ಲ.

ನಾಲ್ಕು ಎಕ್ರೆ ಹಿಡುವಳಿ ಹೊಂದಿರುವ ಒಬ್ಬ ರೈತ, ತನ್ನ ನಾಲ್ಕು ಎಕರೆಯಲ್ಲಿ ಭತ್ತವೊ, ಕಬ್ಬನ್ನೊ ಅಥವಾ ಯಾವುದೇ ಬಗೆಯ ಏಕಬೆಳೆ ಬೆಳೆದು ಉಳಿದ ಎಲ್ಲಕ್ಕೂ ಮಾರುಕಟ್ಟೆಯ ದಾಸನಾಗಿ ಹೋದ. ಈ ಬಗೆಯ ಚಿತ್ರಣ ನಿರ್ಮಾಣವಾಗಲು ನೇರವಾಗಿ ಹಸಿರುಕ್ರಾಂತಿ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಇದರ ಕೆಟ್ಟ ಪರಿಣಾಮದ ಅರಿವಿರದವರು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದದ್ದು ಕಾರಣ.

ಹಸಿರು ಕ್ರಾಂತಿಗೂ ಮುಂಚೆ ರೈತರು ತಮ್ಮ ಹೊಲ, ಗದ್ದೆ, ತೋಟಗಳಲ್ಲಿ ತಮಗೆ ಬೇಕಾದ ಎಲ್ಲವನ್ನು ಬೆಳೆದು ಹೆಚ್ಚುವರಿಯಾದ ಎಲ್ಲವನ್ನು ಮಾರುಕಟ್ಟೆಗೆ ರವಾನಿಸುತ್ತಿದ್ದರು. ಇದು ಪೂರ್ತಿ ಲಾಭವಾಗಿ ರೈತರ ಕೈ ಸೇರುತ್ತಿತ್ತು. ಕಳೆಗಳನ್ನು ಬೆಳೆ ಬೆಳೆಯಲು ಪೂರಕವಾಗಿ ಬಳಸಿಕೊಳ್ಳುತ್ತಿದ್ದರು. ಈಗಿನಂತೆ ಕಳೆ ನಿರ್ಮೂಲನಕ್ಕೆ ವಿಷಗಳ ಮೊರೆ ಹೋಗುತ್ತಿರಲಿಲ್ಲ. ಬೆಳೆ ಸಂರಕ್ಷಣೆಗೆ ತಮ್ಮದೇ ಆದ ಮಾನವೀಯ ತಂತ್ರಗಳನ್ನು ಅನುಸರಿಸುತ್ತಿದ್ದರು. 'ಚರಗ ಚೆಲ್ಲುವ' ಆಚರಣೆ ಉತ್ತರ ಕರ್ನಾಟಕದ ಬೇಸಾಯ ಜೀವನದಲ್ಲಿ ಇಂದಿಗೂ ಜೀವಂತವಾಗಿದೆ. ಬೆಳೆಗಳು ಸಮೃದ್ಧವಾಗಿ ಬೆಳೆದು, ಕೀಟಗಳು ಸಮರ ಸಾರಿದಾಗ ನಮ್ಮ ಈ ಭಾಗದ ರೈತರು ವಿಷಾಸ್ತ್ರಗಳನ್ನು ಹಿಡಿದು ಯುದ್ಧ ಎದುರಿಸಲು ಹೋಗಲಿಲ್ಲ. 'ಚರಗ ಚೆಲ್ಲುವುದು' ಮೂಢನಂಬಿಕೆಯೋ, ಕಂದಾಚಾರವೋ ಅಥವಾ ಯಾವುದೋ ಕಾಣದ ಭೀತಿ ನಿವಾರಣೆಗಾಗಿಯೋ ಮೂಡಿ ಬಂದ ಆಚರಣೆಯಲ್ಲ; ವಿಷಮ ಪರಿಸ್ಥಿತಿ ನಿವಾರಣೆಗೆ ಕಂಡುಕೊಂಡ ಅತ್ಯಂತ ವಿಜ್ಞಾನಿಕ ಉಪಾಯ. ತಾವು ಹಬ್ಬದ ದಿನಗಳಲ್ಲಿ ಸಂಭ್ರಮದ ದಿನಗಳಲ್ಲಿ ಮಾಡುವ ವಿಶೇಷ ಅಡಿಗೆಗಳನ್ನು ಮಾಡಿ 'ಯಳ್ಳಾಮಸೆ' ದಿವಸ ಹೊಲಗಳಿಗೆ ಹೋಗಿ ಮಾಡಿದ ಅಡುಗೆಗಳನ್ನು ತುಂಬಿ ಬೆಳೆದ ಹೊಲಗಳಲ್ಲಿ ಚೆಲ್ಲಿ ಬರುತ್ತಾರೆ. ಇದು ತಮ್ಮ ಸುತ್ತಲ ಪರಿಸರದಲ್ಲಿ, ದೂರದ ಪರಿಸರದಲ್ಲಿರುವ ಹಕ್ಕಿಗಳೆಲ್ಲ ಬಂದು ತಿನ್ನಲಿ ಎಂಬ ಕಾರಣಕ್ಕೆ. ಹಾಗೆ ಬಂದ ಹಕ್ಕಿಗಳಿಗೆ ಬೆಳೆಯಲ್ಲಿರುವ ಕೀಟಗಳೂ ಆಹಾರವಾಗುತ್ತವೆ. ಹೊನ್ನೇರು ಕಟ್ಟುವಾಗ ಭೂಮಿ ತಾಯಿಗೆ ನಮಿಸಿ ಬೆಳೆ ಬೆಳೆಯುವ ಈ ಹಾದಿಯಲ್ಲಿ ಅಡ್ಡ ಬರುವ ಅಡೆ ತಡೆಗಳನ್ನೆಲ್ಲ ನಿವಾರಿಸಲು/ ನಿಭಾಯಿಸಲು ಬೇಕಾಗುವ ಜ್ಞಾನವನ್ನು ಪ್ರಕೃತಿ ಮತ್ತು ಸಂದರ್ಭಗಳಿಂದಲೆ ಕಲಿತಿದ್ದಾರೆ. ಕೃಷಿಕರ ಎಲ್ಲ ಬಗೆಯ 'ಕೃಷಿ ಆಚರಣೆಗಳು'ಗಳು ಈ ಅರಿವಿನಿಂದಲೆ ಮೂಡಿ ಬಂದಿದೆ.

ಆದರೆ ಹಸಿರುಕ್ರಾಂತಿ ಈ ಯಾವ ಹಿನ್ನೆಲೆಯೂ ಇಲ್ಲದೆ ರೈತರ ಜ್ಞಾನ ಸೀಮೆಗಳನ್ನು ಉಲ್ಲಂಘಿಸಿ, ವೈಜ್ಞಾನಿಕ ನಿರ್ವಹಣೆ ಹೆಸರಲ್ಲಿ ಕೀಟಗಳ ನಾಶಕ್ಕಾಗಿ ಬೆಳೆಗಳ ಮೇಲೆ ವಿಷಗಳನ್ನು ಸುರಿದು ಕುಡಿಯುವ ನೀರು, ಉಸಿರಾಡುವ ಗಾಳಿ, ಉಣ್ಣುವ ಅನ್ನ ಎಲ್ಲವನ್ನು ವಿಷಮಯಗೊಳಿಸಿದ್ದನ್ನು ಈ ಅಧ್ಯಯನದಲ್ಲಿ ಗಮನಿಸಬಹುದು. ಕ್ರಿಮಿಕೀಟಗಳ ವಿನಾಶಕ್ಕೆ ಬಂದ ವಿಷಗಳನ್ನೆ ರೈತರು ಕುಡಿದು ಸಾಯಬೇಕಾದ ಸ್ಥಿತಿ ನಿರ್ಮಾಣವಾಗಿರುವುದು ಆಘಾತಕರ.

ಅಧ್ಯಯನದಲ್ಲಿ ಸಾವಯವ ಕೃಷಿ, ಸಹಜ ಕೃಷಿ, ರಾಸಾಯನಿಕ ಕೃಷಿಗಳ ವೈಜ್ಞಾನಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಎಲ್ಲವನ್ನು ವೈಜ್ಞಾನಿಕ ವಿಧಾನಗಳ ಮೂಲಕವೇ ಪರಿಶೀಲಿಸಲಾಗಿದೆ. ಅಧ್ಯಯನದ ಒಟ್ಟು ಧ್ವನಿಯು ಸಹಸ್ರಾರು ವರ್ಷಗಳ

ಕಾಲದ ಪರೀಕ್ಷೆಗಳಲ್ಲಿ ಗೆದ್ದು "ಸ್ವಯಂ ಪರಿಪೂರ್ಣ" ಅನ್ನಿಸಿಕೊಂಡಿದ್ದ ದೇಸಿ ಕೃಷಿ ಪದ್ಧತಿಯನ್ನು ಮತ್ತೆ ಮರುಸ್ಥಾಪಿಸಿಕೊಳ್ಳುವ ಅಗತ್ಯವಿರುವುದನ್ನು ಹೇಳುತ್ತದೆ.

ಹೈನುಗಾರಿಕೆಗಾಗಿ ಬಳಸಲ್ಪಡುತ್ತಿರುವ ವಿದೇಶಿ ಮೂಲದ ಜೆರ್ಸಿ, ಹೋಲ್‌ಸ್ಟಿನ್, ಎಚ್.ಎಫ್. ಮುಂತಾದ ಹಸುಗಳು ಜೆಬುಕುಲಕ್ಕೆ ಸೇರಿದವುಗಳಲ್ಲ ಮತ್ತು ಇವುಗಳ ಸಗಣಿ ಮತ್ತು ಗಂಜಳ ದೇಸಿ ಹಸುಗಳ ಸಗಣಿ, ಗಂಜಳದಷ್ಟು ಪರಿಣಾಕಾರಿ ಅಲ್ಲ. ಬದಲಿಗೆ ವಿದೇಶಿ ಮೂಲದ ಹಸುಗಳ ಸಗಣಿ ಮತ್ತು ಗಂಜಳಗಳಲ್ಲಿ ರೋಗ ನಿವಾರಣಾ ಗುಣಗಳಿಲ್ಲ, ಬದಲಿಗೆ ರೋಗವರ್ಧಕ ಗುಣಗಳಿರುವುದು ವೈಜ್ಞಾನಿಕವಾಗಿ ಸಾಬೀತಾಗಿರುವ ಸತ್ಯವಾಗಿರುತ್ತದೆ. ಜೊತೆಗೆ ಹೆಚ್ಚಿನ ಹಾಲು ಇಳುವರಿಗಾಗಿ ಹೆಚ್ಚು ಮೇವು, ಯೂರಿಯಾ, ಪೌಷ್ಠಿಕಾಂಶಭರಿತ ಹಿಂಡಿಗಳು ಮತ್ತು ಇವುಗಳನ್ನು ಚೆನ್ನಾಗಿ ಜೀರ್ಣಿಸಿಕೊಳ್ಳಲು ಜೀರ್ಣಕಾರಕ ಎಂಜೈಮ್‌ಗಳನ್ನು ನೀಡಬೇಕಾಗುತ್ತದೆ. ಅಲ್ಲದೆ ಅಧಿಕ ಹಾಲು ಅಭಿವೃದ್ಧಿಗಾಗಿ ಗ್ರೋಥ್ ಹಾರ್ಮೋನ್‌ಗಳನ್ನು ಕೂಡ ನೀಡಬೇಕಾಗುತ್ತದೆ. ಅತಿಯಾದ ಮೇವು, ಯೂರಿಯಾ ಜೀರ್ಣಕಾರಕ ಎಂಜೈಮ್‌ಗಳು, ಗ್ರೋಥ್ ಹಾರ್ಮೋನ್‌ಗಳ ಜೊತೆಗೆ ಜಂತುನಾಶವನ್ನು ನೀಡಲಾಗುತ್ತದೆ. ಇದರ ಒಟ್ಟು ಪರಿಣಾಮ ಹಾಲು ಕುಡಿಯುವ ಹಸುಳೆಗಳ ಮೇಲಾಗುತ್ತದೆ, ಬೆಳೆ ಬೆಳೆಯುವ ಮಣ್ಣಿನಲ್ಲಿ ಆಗುತ್ತದೆ. ಇದೇ ಹಾಲನ್ನು ಅವಲಂಬಿಸಿರುವ ಮಕ್ಕಳಲ್ಲಿ ಹಾರ್ಮೋನ್‌ಗಳ ವ್ಯತ್ಯಾಸವಾಗುವುದು. ಹೆಣ್ಣು ಮಕ್ಕಳು ಬೇಗನೆ ಋತುಮತಿಯರಾಗುವುದು, ಗಂಡು ಮಕ್ಕಳಲ್ಲಿ ಲೈಂಗಿಕ ಸಾಮರ್ಥ್ಯ ಕುಂಠಿತಗೊಳ್ಳುವುದೂ ಸೇರಿದಂತೆ ಮಾನಸಿಕ ಮತ್ತು ದೈಹಿಕ ಏರುಪೇರುಗಳು ಉಂಟಾಗುತ್ತವೆ. ಇನ್ನು ಬೇಸಾಯ ಭೂಮಿಗೆ ಈ ಹಸುಗಳ ಸಗಣಿ ಮತ್ತು ಗಂಜಳಗಳನ್ನು ಬಳಸಿದಾಗ ಮಣ್ಣಿನಲ್ಲಿರುವ ಜೀವಾಣುಗಳು ನಾಶವಾಗುತ್ತವೆ. ಯಾಕೆಂದರೆ ಹಸುವಿಗೆ ನೀಡುವ ಜಂತುನಾಶಕಗಳು ಹಸುಗಳ ಕರುಳಿನಲ್ಲಷ್ಟೆ ಕೆಲಸ ಮಾಡುವುದಿಲ್ಲ. ಅವು ಹೊರಗೂ ಅಂದರೆ, ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಕೆಲಸ ಮಾಡಿ ಮಣ್ಣಿನಲ್ಲಿರುವ ಜೀವಾಣುಗಳನ್ನು ಹತ್ಯೆಗೈಯುತ್ತವೆ. ಜೊತೆಗೆ ಈ ಹಸುಗಳ ಗಂಡು ಕರುಗಳು ಮುಂದೆ ಉಳುವ, ಗಾಡಿ ಕಟ್ಟುವ ಮುಂತಾದ ಬೇಸಾಯದ ಕೆಲಸಗಳನ್ನು ತಡೆಯಲಾರವು. ಹೀಗಾಗಿ ಇವು ಬೇಸಾಯ ಜೀವನಕ್ಕೆ ಅನುಪಯುಕ್ತವಾಗಿ ಕಾಣುತ್ತವೆ.

ಇತ್ತೀಚೆಗೆ ಸಾವಯವ ಹಾಲು ಎಂದು ಇದೇ ಹಸುಗಳ ಹಾಲನ್ನು ನಗರಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಹಸುಗಳನ್ನು ಕಟ್ಟಿ ಮೇಯಿಸುವುದಿಲ್ಲ, ಫಾರಂಗಳಲ್ಲಿ ಓಡಾಡಿ ಮೇಯುತ್ತವೆ. ಅವು ಫಾರಂನಲ್ಲಿ ಓಡಾಡಿ ಮೇಯುವ ಜಾಗಕ್ಕೆ ಯಾವುದೇ ರಸಗೊಬ್ಬರ-ಕೀಟನಾಶಕ ಬಳಸುವುದಿಲ್ಲ. ಹೈಜನಿಕ್ ವಾತಾವರಣ ರೂಪಿಸಿರುವ ಸಲುವಾಗಿ ಕೈಯಿಂದ ಹಾಲು ಕರೆಯುವುದಿಲ್ಲ. ಹಸುವಿನ ಕೆಚ್ಚಲಿಗೆ ಕರುವಿನ ಬಾಯಿ ಹಾಕಿಸುವುದಿಲ್ಲವೆಂದು ಸಾವಯವ ಹಾಲು ಮಾರುವವರು ಹೇಳುತ್ತಾರೆ.

ಹಸುವಿನ ಕೆಚ್ಚಲಿಗೆ ಕರು ಬಾಯಿ ಹಾಕಿದರೆ ಎಂಜಲಾಗುತ್ತದೆ ಅನ್ನುವ ಕಾರಣಕ್ಕೆ; ತಾಯಿಯಿಂದ ಮಗುವನ್ನು ದೂರ ಮಾಡುವ ವಿಧಾನ ಅತ್ಯಂತ ಅಮಾನವೀಯ. ಹಸು ಕರುಗಳ ಸಂಬಂಧ ತುಂಡರಿಸುವುದರಿಂದ; ಒಂದು ಬಗೆಯ ಡಿಸ್ಟ್ರಕ್ಟೀವ್ ಮನಃಸ್ಥಿತಿ ಹಸುವಿಗೂ ಬರುತ್ತದೆ; ಕರುವಿಗೂ ಬರುತ್ತದೆ. ಅದರ ಹಾಲನ್ನು ಕುಡಿಯುವವರಿಗೂ

ಬರುತ್ತದೆ. ರಾಸಾಯನಿಕ ಕೃಷಿಯಿಂದ ಆಗಿರುವ ಅವಘಡಗಳಿಗೆ ಪ್ರಗತಿಪರ ರೈತರೆನಿಸಿಕೊಂಡವರು ಈ ಬಗೆಯ ದಾರಿ ಹಿಡಿಯುವುದು ಮೂರ್ಖತನದಿಂದ ಕೂಡಿದೆ. ಇವು ಕೇವಲ ತೋರಿಕೆಯ ಪರ್ಯಾಯ ಮಾರ್ಗಗಳೇ ಹೊರತು ರೋಗಕ್ಕೆ ಮದ್ದಲ್ಲ. ನಿಜವಾದ ರೋಗಕ್ಕೆ ಮದ್ದು ಇರುವುದು ನಮ್ಮ ದೇಶಿ ಜ್ಞಾನ ಪರಂಪರೆಯಲ್ಲಿ.

ನಮ್ಮ ನಡುವಿನ ಕೋಳಿ ಉದ್ಯಮವೂ ಸಾರ್ವಜನಿಕ ಆರೋಗ್ಯ ಕಾಳಜಿಗೆ ವಿರುದ್ಧವಾಗಿಯೇ ಬೆಳೆದು ನಿಂತಿದೆ. ಕೇವಲ ೬ ರಿಂದ ೮ ವಾರಗಳಲ್ಲಿ ೨ ರಿಂದ ೨.೫ ಕೆ.ಜಿ. ತೂಗುವವರೆಗೆ ಮಾಂಸದ ಕೋಳಿ ಬೆಳೆಯುವ ಪವಾಡಗಳು ಜರುಗಿಹೋಗಿವೆ. ವಿಪರೀತ ಮಟ್ಟದ ಗ್ರೋಥ್ ಹಾರ್ಮೋನ್‌ಗಳು, ಜಂತುನಾಶಕಗಳು ಕೋಳಿಗಳ ಆರೋಗ್ಯವನ್ನೇ ಬಲಿ ತೆಗೆದುಕೊಂಡಿವೆ. ನಿಸರ್ಗದಲ್ಲಿ ಹಕ್ಕಿ ಜ್ವರ ಬಂದರೆ ಯಾವ ಹಕ್ಕಿಗಳೂ ಈವರೆಗೆ ಸತ್ತ ಉದಾಹರಣೆ ಇಲ್ಲ. ಒಂದು ಸಣ್ಣ ಹಕ್ಕಿ ಜ್ವರ ಬಂದರೆ ಫಾರಂಗಳಲ್ಲಿ ಸಾಕಿರುವ ಕೋಳಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಸಾಯುತ್ತವೆ ಅಷ್ಟರ ಮಟ್ಟಿಗೆ ಪ್ರತಿರೋಧಕ ಶಕ್ತಿ ಇಲ್ಲದಿರುವ ಕೋಳಿಗಳನ್ನು ದಿನಂಪ್ರತಿ ಕರ್ನಾಟಕದ ಜನ ತಿನ್ನುತ್ತಿದ್ದಾರೆ. ೨೦೧೨ ರ ಕೋಳಿ ಗಣತಿಯ ಪ್ರಕಾರ ಅವುಗಳ ಸಂಖ್ಯೆ ಐದು ಕೋಟಿ, ಮೂವತ್ತನಾಲ್ಕು ಲಕ್ಷದ ನಲವತ್ತೆರಡು ಸಾವಿರದ ಮೂವತ್ತು ಕೋಳಿಗಳು! (ಗಣತಿ ಮಾಡಿದ ಕಾಲದಲ್ಲಿದ್ದ ಜೀವಂತ ಕೋಳಿಗಳು) ಬೆಳೆದ ಆರರಿಂದ ಎಂಟು ವಾರಗಳಲ್ಲಿ ಆಯುಷ್ಯ ಪೂರೈಸುವ ಇಂಥ ಕೋಳಿಗಳ ವೈಜ್ಞಾನಿಕ ಗಣತಿಯಾದರೂ ಹೇಗೆ ಸಾಧ್ಯ.

ದೇಸಿ ಕೃಷಿ ಸಂಸ್ಕೃತಿಯ ರೈತರುಗಳು ಇಂಥ ಕೋಳಿಗಳ ಅನ್ವೇಷಣೆಗೆ ಎಂದೂ ಮನಸ್ಸು ಮಾಡಿರಲಿಲ್ಲ. ಜೊತೆಗೆ ಇಂಥ ಕೋಳಿಗಳನ್ನು ಸಾಕುವ ಪ್ರಯತ್ನ ಕೂಡ ಮಾಡಲಿಲ್ಲ. ೧೯೫೧ ರ ಜಾನುವಾರು ಗಣತಿಯ ಪ್ರಕಾರ ಅಂದು ರಾಜ್ಯದಲ್ಲಿದ್ದ ಕೋಳಿಗಳ ಸಂಖ್ಯೆ ಐವತ್ತೇಳು ಲಕ್ಷದ ಐದು ಸಾವಿರದ ನೂರ ಮೂವತ್ತೆರಡು (೫೭,೦೫,೧೩೨) ಇವತ್ತಿನ ಸಂಖ್ಯೆಗೆ ಹೋಲಿಸಿದರೆ ಆವತ್ತಿನ ಸಂಖ್ಯೆ ಅವುಗಳ ಸಂಖ್ಯೆ ಕಡಿಮೆಯೇನಲ್ಲ. ಅಂದಿನ ಕೋಳಿಗಳ ಆಯುಷ್ಯ ೮ ವರ್ಷದವರಗೆ ಪೂರ್ಣ ನೈಸರ್ಗಿಕ ಪರಿಸರದಲ್ಲಿ ನಿರ್ಭಿಡೆಯಿಂದ ವಿಹರಿಸುವ ಅವಕಾಶ ಅಂದಿನ ಕೋಳಿಗಳಿಗಿತ್ತು. ಕನ್ನಡ ಜಿಲ್ಲೆಗಳಲ್ಲಿ 'ಕೋಳಿ ಅಂಕ' ಇಂದಿಗೂ ಪ್ರಸಿದ್ಧ ಕ್ರೀಡೆ. ಇಂಥ ಸಮೃದ್ಧ ಕನ್ನಡದ ನೆಲದಲ್ಲಿ ರೋಗಿಷ್ಟ ಕೋಳಿಗಳನ್ನು ತಿನ್ನುವ ಅನಿವಾರ್ಯತೆ ಸೃಷ್ಟಿ ಮಾಡಿದ್ದು ಯಾರು? ನಾವು ತಿನ್ನುವ ಅನ್ನ ನಮ್ಮ ಮನಸ್ಥಿತಿಯನ್ನು ನಿರ್ಧರಿಸುತ್ತದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ರಸಾಯನಿಕ ಕೃಷಿಗೆ ಪರ್ಯಾಯ ಮಾರ್ಗ ಹುಡುಕುವವರು ಎರೆಹುಳು ಗೊಬ್ಬರದ ದಂಧೆ ಶುರುಮಾಡಿದರು. ಹಾಗೆ ಎರೆಹುಳು ಸಾಕಿ ಮಾಡುವ ಬೇಸಾಯ ಎಷ್ಟು ಹಾನಿಕಾರಕ ಎಂಬುದನ್ನು ಈ ಅಧ್ಯಯನದಲ್ಲಿ ವಿವರವಾಗಿ ಹೇಳಲಾಗಿದೆ.

ಇವತ್ತಿನ ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರಿ ಚಿಂತಕರು, ಅಭಿವೃದ್ಧಿ ಅರ್ಥಶಾಸ್ತ್ರಜ್ಞರು, ರೈತಪರ ಕಾಳಜಿಯುಳ್ಳ ಪ್ರತಿಯೊಬ್ಬರೂ 'ಸುಸ್ಥಿರ ಕೃಷಿ', 'ಸುಸ್ಥಿರ ಬದುಕು' ಇತ್ಯಾದಿಯಾಗಿ ಮಾತಾಡಲು ಶುರು ಮಾಡಿದ್ದಾರೆ. ವಾಸ್ತವವಾಗಿ 'ಸುಸ್ಥಿರ ಕೃಷಿ', 'ಸುಸ್ಥಿರ ಬದುಕು', 'ಸುಸ್ಥಿರ ನಿಸರ್ಗ', 'ಸುಸ್ಥಿರ ಪರಿಸರ', 'ಸುಸ್ಥಿರ ಪ್ರಪಂಚ' ಎಂಬಂಥವುಗಳು ಆದಿ, ಅನಾದಿ ಕಾಲಗಳಿಂದ ಇಂದಿನವರೆಗೆ ಎಲ್ಲಿಯೂ ಅಸ್ತಿತ್ವದಲ್ಲಿಲ್ಲ.

ಸುಸ್ಥಿರ ಕೃಷಿ ಕೇವಲ ನಮ್ಮ ಆಶಯ ಅಷ್ಟೆ. ನಿಸರ್ಗದ ನಿಜ ಅರಿತ ಯಾರೂ ಸುಸ್ಥಿರ ಕೃಷಿಯ ಬಗೆಗೆ ಮಾತನಾಡುವುದಿಲ್ಲ. ಸುಸ್ಥಿರತೆ ಎಂಬುದು ನಿಸರ್ಗಕ್ಕೆ ವಿರುದ್ಧವಾದ ಒಂದು ಸ್ಥಿತಿ. ಅದು ಇಂದಿನವರೆಗೆ ಉದ್ಭವಿಸಿಲ್ಲ. ಹಾಗೆ ನೋಡಿದರೆ ಸುಸ್ಥಿರತೆಯನ್ನು ದಮನ ಮಾಡುವುದೇ ನಿಸರ್ಗದ ನಿಜ ಸ್ವಭಾವ. ವಾಸ್ತವವಾಗಿ ನಿಸರ್ಗದಲ್ಲಿರುವುದು ಸರ್ವೋದಯದ ಆಶಯ. ನಿಸರ್ಗ ದೃಷ್ಟಿಯಲ್ಲಿ ಪ್ರತಿಯೊಂದು ವಿಶಿಷ್ಟ ಮತ್ತು ವಿನೂತನ. ಹೀಗಾಗಿಯೇ ಹಿಂದೆ ಹುಟ್ಟಿದ ಯಾರೂ ಇಂದು ಇಲ್ಲ. ಹೀಗಾಗಿ ನಮ್ಮ ತತ್ವಪದಕಾರರು "ಇದು ಇರವಲ್ಲ, ಸ್ಥಿರವಲ್ಲ ನರಜನ್ಮ ಸ್ಥಿರವಲ್ಲ" ಎಂಬ ದರ್ಶನವನ್ನೆ ಸಾರಿದ್ದಾರೆ. ಇದು ನಿಜಕ್ಕೂ ದೇಸಿ ಚಿಂತನೆ. ಹೀಗಾಗಿಯೇ ನಮ್ಮ ಜನ ಆರಂಭವನ್ನು ಆರಂಭದ ಸ್ಥಿತಿಯಲ್ಲಿಯೇ ಕಾಪಾಡಿಕೊಂಡಿರುವುದು.

ಈ ದೇಶದ ಮುಖ್ಯವಾಹಿನಿ ಕೃಷಿ ದೇಸಿ ಕೃಷಿಯೇ ಹೊರತು ಬೇರಾವ ಕೃಷಿಯೂ ಅಲ್ಲ. ರಸಾಯನಿಕ ಕೃಷಿ ದೇಸಿ ಕೃಷಿಗೆ ಪರ್ಯಾಯವಾಗಿ ಬಂದದ್ದೇ ಹೊರತು, ಅದುವೆ ಪ್ರಧಾನ ಕೃಷಿಯಲ್ಲ. ಪ್ರಧಾನ ಕೃಷಿಯ ಮುಖ್ಯ ಧ್ಯೇಯ ಅದು ಎಲ್ಲರನ್ನು ತಾಯಿಯಂತೆ ಸಲಹಬೇಕು. ಆದರೆ ರಸಾಯನಿಕ ಕೃಷಿ ಆ ಧ್ಯೇಯಕ್ಕೆ ವಿರುದ್ಧವಾಗಿ ನಡೆಯಿತು. ಸಾವಯವ ಕೃಷಿ ರಸಾಯನಿಕ ಕೃಷಿಗೆ ಪರ್ಯಾಯವೆಂಬಂತೆ ಬಿಂಬಿಸಲ್ಪಟ್ಟಿತು. ಆದರೆ ಅದೂ ಕೂಡ ರಸಾಯನಿಕ ಕೃಷಿಯಷ್ಟೆ ಅವೈಜ್ಞಾನಿಕ ಕೃಷಿಯಾಗಿ ರೂಪಾಂತರವಾಯಿತು. ಅಧ್ಯಯನವು ಈ ನಗ್ನ ಸತ್ಯಗಳನ್ನು ಬಿಚ್ಚಿಡಲು ಯತ್ನಿಸಿದೆ.

ಜನತೆಯ ಪಾರಂಪರಿಕ ಜ್ಞಾನದಲ್ಲಿ ಅವರ ಹಬ್ಬ, ಆಚರಣೆಗಳು, ಅವರು ಸಾಗಿ ಬಂದ ದಾರಿಗಳನ್ನು ಸಾರಿ ಹೇಳುವ ಮೈಲಿಗಲ್ಲುಗಳು. ಪ್ರತಿ ಹಬ್ಬ, ಆಚರಣೆಗಳು ಒಂದೊಂದು ಪಿಎಚ್.ಡಿ. ಸಂಶೋಧನೆಗಾಗುವಷ್ಟು ಸಮೃದ್ಧ ಸರಕುಗಳನ್ನು ಇಟ್ಟುಕೊಂಡಿರುವುದು ಈ ಅಧ್ಯಯನ ಸಂದರ್ಭದಲ್ಲಿ ಅರಿವಿಗೆ ಬಂತು.

ಬಹುತೇಕ ಹಳ್ಳಿಗರು ಅನಕ್ಷರಸ್ಥರಾಗಿದ್ದರೇ ಹೊರತು ಅಜ್ಞಾನಿಗಳಾಗಿರಲಿಲ್ಲ. ಅರಿವುಗೇಡಿಗಳಾಗಿರಲಿಲ್ಲ. ಭಾರತಕ್ಕೆ ಪ್ರವಾಸಕ್ಕೆ / ಅಧ್ಯಯನಕ್ಕೆ ಬಂದ ವಿದೇಶಿ ಪ್ರವಾಸಿಗರು/ ಸಂಶೋಧಕರು ಬರೆದಿರುವ ಜ್ಞಾನವನ್ನೆಲ್ಲ ಪರಿಶೀಲಿಸುವ ಬೆಳಕಿಗೆ ತರುವ ಮಹತ್ವದ ಕೆಲಸಗಳು ಆಗಬೇಕಾಗಿವೆ. ಈ ದಿಸೆಯಲ್ಲಿ ಡಾ. ಎಚ್.ಎಲ್.ನಾಗೇಗೌಡರು ನಡೆದ ದಾರಿ ನಮಗೆ ಮಾರ್ಗದರ್ಶನ ನೀಡಬಲ್ಲದಾಗಿದೆ. ಆಧುನಿಕ ಶಿಕ್ಷಣ ಪಡೆದ ಯುವಕರು ಹಳ್ಳಿಗೆ ಬೆನ್ನು ತೋರತೊಡಗಿದ್ದಾರೆ. ಅಂಥವರಿಗೆ ನಮ್ಮ ಜ್ಞಾನ ಪರಂಪರೆಗಳನ್ನು ಪರಿಚಯಿಸಬೇಕು ಮತ್ತು ಇವತ್ತಿನ ಶಿಕ್ಷಣ ಪದ್ಧತಿ ಹುಟ್ಟಿದ ಎಲ್ಲರಿಗೂ ಒಂದೇ ಬಗೆಯ ಶಿಕ್ಷಣ ನೀಡುತ್ತಿದೆ ಮತ್ತು ಓದುವ ಎಲ್ಲರೂ ಶ್ರಮದ ದುಡಿಮೆಯನ್ನು ತಿರಸ್ಕಾರದಿಂದ ನೋಡುತ್ತಿದ್ದಾರೆ. ಈ ಮನೋಭಾವವನ್ನು ಬದಲು ಮಾಡುವ ಶಿಕ್ಷಣಕ್ರಮ ಇಲ್ಲಿ ಜಾರಿಯಾಗಬೇಕು.

******

ಪರಾಮರ್ಶನ ಗ್ರಂಥಗಳು

೧.	ಅಗ್ರಹಾರ ಕೃಷ್ಣಮೂರ್ತಿ	ಬೆಳ್ದಿಂಗಳಪ್ಪನ ಪೂಜೆ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು -೧೯೯೯, ೨ನೇ ಮುದ್ರಣ
೨.	ಅರ್ಚಕ ಬಿ. ರಂಗಸ್ವಾಮಿ	ಹುಟ್ಟಿದ ಹಳ್ಳಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ೧೯೭೯.
೩.	ಅಂಬಳಿಕೆ ಹಿರಿಯಣ್ಣ(ಡಾ)	ತೀರ್ಥಹಳ್ಳಿ ಸುತ್ತಿನ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೬
೪.	ಅಂಗಡಿ ವಿರೂಪಾಕ್ಷ	ಒಕ್ಕಲಿಗರ ಸ್ವರ್ಗ (ಸಾಮೂಹಿಕ ವ್ಯವಸಾಯ), ಅಜಾದ್ ಹಿಂದ್ ಕಾರ್ಯಾಲಯ, ಸಾಮ್ಯವಾದಿ ಸಾಹಿತ್ಯ ಮಾಲೆ ವಿಜಾಪುರ, ೧೯೫೨
೫.	ಅಪ್ಪಯ್ಯ ಕೊರವಂಡ ಎಂ,	ವ್ಯವಸಾಯ ಧರ್ಮ ಬೋಧಿನಿ (ಸಚಿತ್ರ), ಬೆಂಗಳೂರು, ೧೯೦೮
೬.	ಅಲ್ಬರ್ಟ್ ಹೋವರ್ಡ್ (ಅನು)- ವಾಲ್ಮೀಕಿ	ಹೀಗೊಂದು ಕೃಷಿ ಸಂಹಿತೆ ಇನ್‌ಸ್ಟಿಟ್ಯೂಟ್ ಫಾರ್‌ಕಲ್ಚರಲ್‌ರಿಸರ್ಚ್. ಬೆಂಗಳೂರು, ೨೦೦೨.
೭.	ಆನಂದತೀರ್ಥ ಪ್ಯಾಟಿ ನರೇಂದ್ರ ರೈ ದೇರ್ಲ	ನಿರ್ಮಾಣ ಕಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮
೮.	ಆರ್ದ್ವೀಯಸ್ ಸುಂದರಂ(ಡಾ.) (ಮೂಲ:ಬಿ. ರಾಮರಾಜು)	ಆಂಧ್ರಪ್ರದೇಶದ ಜಾನಪದ, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ. ೧೯೮೭
೯.	ಇರ್ಫಾನ್ ಹಬೀಬ್ ಕನ್ನಡಕ್ಕೆ- ಪ್ರದೀಪ್ ಬೆಳಗಲ್	ಸಿಂಧೂ ನಾಗರಿಕತೆ ಚಿಂತನ ಪುಸ್ತಕ, ಬೆಂಗಳೂರು, ೨೦೧೪, ೨ನೇ ಮುದ್ರಣ
೧೦.	ಇರ್ಫಾನ್ ಹಬೀಬ್ ಕನ್ನಡಕ್ಕೆ- ಪ್ರದೀಪ್ ಬೆಳಗಲ್	ಪೂರ್ವೇತಿಹಾಸ ಚಿಂತನ ಪುಸ್ತಕ ಬೆಂಗಳೂರು ೨೦೧೪, ೨ನೇ ಮುದ್ರಣ

೧೧. ಡಾ॥ ಇಂದಿರಾ ಹೆಗ್ಗಡೆ	ಸರ್.ಎಂ. ವಿಶ್ವೇಶ್ವರಯ್ಯ ನವಕರ್ನಾಟಕ ಪ್ರಕಾಶನ, ಬೆಂಗಳೂರು-೨೦೧೫
೧೨. ಡಾ.ಎಂ.ಜಿ. ಈಶ್ವರಪ್ಪ	ಚಿತ್ರದುರ್ಗಜಿಲ್ಲೆಯ ವ್ಯವಸಾಯ ಜಾನಪದ ಕನ್ನಡ ಸಾಹಿತ್ಯ ಪರಿಷತ್ತು,
೧೩. ಎಲಗಾರ ಶಂಕರ ಅಪ್ಪಾಜಿ	ಘಟಸ್ಥಾಪನೆಯಿಂದ ಮಳೆಯ ಪೂರೈಕೆ (ಯಜ್ಞಾದ್ಭವತಿ ಪರ್ಜನ್ಯ) ಬೆಳಗಾವಿ.೧೯೩೯
೧೪. (ಸಂ) ಕುವೆಂಪು ಮತ್ತು ಮಾಸ್ತಿ	ಕರ್ಣಾಟ ಭಾರತ ಕಥಾಮಂಜರಿ ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೫೮
೧೫. ಕಮತಗಿ ಹ. ಕೃ.	ದೇವರ ನೇಗಿಲು, ಸಾಧನಾ ಪ್ರಕಾಶನ, ಹೈದರಾಬಾದ್.೧೯೫೬
೧೬. ಕಲಬುರ್ಗಿ ಎಂ. ಎಂ. (ಡಾ)	ಮಾರ್ಗ (ಸಂಪುಟ ಎರಡು), ನರೇಶ್ ಅಂಡ್ ಕಂಪನಿ, ಬೆಂಗಳೂರು.೧೯೮೮
೧೭. ಕಲಮರಹಳ್ಳಿ ಮಲ್ಲಿಕಾರ್ಜುನ	ಕಲಮರಹಳ್ಳಿಯ ಕಥೆಗಳು, ಚಿನ್ಮಯ ಪ್ರಕಾಶನ ಚಿತ್ರದುರ್ಗ. ೧೯೮೬
೧೮. ಕವಲಿ ಜೆ. ಎ	ಭಾರತೀಯ ಹಬ್ಬಗಳು, ರಾಮಾಶ್ರಯ ಬುಕ್ ಡಿಪೋ, ಧಾರವಾಡ.೧೯೬೧
೧೯. ಕಾಳೇಗೌಡ ನಾಗವಾರ (ಸಂ)	ಬಯಲುಸೀಮೆಯ ಲಾವಣಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೧

೨೦.	ಕ್ಯಾತನಹಳ್ಳಿ ರಾಮಣ್ಣ	ಜಾನಪದ ವಿಹಾರ(ಸಂಪುಟ ಎರಡು), ದಿನಕರ ಪ್ರಕಾಶನ, ಬನಶಂಕರಿ, ಬೆಂಗಳೂರು. ೧೯೮೫
೨೧.	ಕೃಷ್ಣಮೂರ್ತಿ ಹನೂರು (ಸಂ)	ಲೀಲಾವತಿ ಪದ್ಮಾವತಿ, ಚಿತ್ರದುರ್ಗ ಜಿಲ್ಲಾ ಜನಪದ ಸಾಹಿತ್ಯ ಪ್ರಕಾಶನ ಸಮಿತಿ, ಚಿತ್ರದುರ್ಗ.೧೯೭೮
		ಕತ್ತಾಲ ದಾರಿ ದೂರ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ೧೯೮೧
೨೨.	ಕೆ. ಕೆಂಪೇಗೌಡ, ವಸಂತಎಲ್	ಸೊಪ್ಪು ತರಕಾರಿಗಳು ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೪, ೨ನೇ ಮುದ್ರಣ
೨೩.	ಕೃಷ್ಣೇಗೌಡ. ಟಿ.ಎಲ್(ಅನು)	ಪಿ. ಸಾಯಿನಾಥ್‌ರೈತರ ಬವಣೆಗಳ ಬಗ್ಗೆ ಚಿಂತನ ಪುಸ್ತಕ.ಬೆಂಗಳೂರು-೨೦೦೯
೨೪.	ಕೃಷಿ ವಿಶ್ವವಿದ್ಯಾಲಯ	ಬೆಳೆಗಳ ಅಧಿಕ ಇಳುವರಿಗೆ ಸುಧಾರಿತ ಬೇಸಾಯ ಪದ್ದತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಜುಲೈ- ೨೦೦೬
೨೫.	ಕೃಷಿ ಇಲಾಖೆ	ಸಾವಯವಕರ್ನಾಟಕ-ಮಾಹಿತಿಕೈಪಿಡಿ ಕರ್ನಾಟಕರಾಜ್ಯ ಕೃಷಿ ಇಲಾಖೆ. ಬೆಂಗಳೂರು.
೨೬.	ಜಿ. ಎಂ. ಕೃಷ್ಣಮೂರ್ತಿ	ವಿಜ್ಞಾನ ವಿಶ್ವಕೋಶ-೧ ಸಪ್ನ ಬುಕ್ ಹೌಸ್, ಬೆಂಗಳೂರು.೨೦೦೫
೨೭.	ಕೃಷಿ ಇಲಾಖೆ	ಕೃಷಿ ವಿಜ್ಞಾನ ಪಾರಿಭಾಷಿಕ ಪದಕೋಶ ಕನ್ನಡಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೪

೨೮. ಜಿ.ಎಂ. ಕೃಷ್ಣಮೂರ್ತಿ(ಸಂ) — ವಿಜ್ಞಾನ ವಿಶ್ವಕೋಶ ಭಾಗ ೧ ಮತ್ತು ೨
ಸಪ್ನ ಬುಕ್ ಹೌಸ್. ಬೆಂಗಳೂರು.೨೦೧೫

೨೯. ಪ್ರೊ, ಕಾಳೇಗೌಡ ನಾಗವಾರ — ಬೀದಿ ಮಕ್ಕಳು ಬೆಳದೊ (ಗಾದೆಗಳು)
ಸಪ್ನ ಬುಕ್ ಹೌಸ್. ಬೆಂಗಳೂರು,
೨೦೧೬, ೬ನೇ ಮುದ್ರಣ.

೩೦. ಕೆದಂಬಾಡಿ ಜತ್ತಪ್ಪ ರೈ — ಬೇಟೆಯ ನೆನಪುಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು, ೨೦೦೮.

೩೧. ಕೇಶವ ರೆಡ್ಡಿ ಹಂದ್ರಾಳ — ಒಂದು ಹಿಡಿ ಮಣ್ಣು
ಕ್ರಾಂತಿ ಸಿರಿ ಪ್ರಕಾಶನ, ಬೆಂಗಳೂರು,
೨೦೦೫

೩೨. ಕೋಟಿಗಾನಹಳ್ಳಿ ರಾಮಯ್ಯ — ಸಿಂಧ್ ಮಾದಿಗರ ಸಂಸ್ಕೃತಿ
ಕರ್ನಾಟಕ ಸಾಹಿತ್ಯಅಕಾಡೆಮಿ,

೩೩. ಡಿ.ಡಿ. ಕೋಸಾಂಬಿ
(ಅನು) ಟಿ.ಎಸ್. ವೇಣುಗೋಪಾಲ್ — ಪ್ರಾಚೀನ ಭಾರತದ ಸಂಸ್ಕೃತಿ ಮತ್ತು
ನಾಗರಿಕತೆ
ಚಿಂತನ ಪುಸ್ತಕ, ಬೆಂಗಳೂರು. ೨೦೧೧.

೩೪. ಗದ್ದಗೀಮಠ ಬಿ. ಎಸ್.(ಡಾ) — ಕನ್ನಡ ಜಾನಪದ ಗೀತೆಗಳು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.೧೯೭೩

೩೫. ಗಿರಿಜ ಟಿ. — ದಾವಣಗೆರೆ ದರ್ಶಿನಿ,
ಪ್ರಜಾವಾದಿ ಪ್ರಕಾಶನ, ದಾವಣಗೆರೆ. ೧೯೮೫

೩೬. ಗೊ.ರಾಮಸ್ವಾಮಿ ಅಯ್ಯಂಗಾರ್ — ಹಳ್ಳಿಯ ಹಾಡುಗಳು,
ರದಾ ಮಂದಿರ, ಮೈಸೂರು.
೧೯೭೩, (ಎ. ಮು.)

೩೭. ಗೋವಿಂದರಾಜು, — ಪ್ರಾಚೀನ ಕೃಷಿತಂತ್ರಗಳು,
ಪ್ರಸಾರಾಂಗ, ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು. ೧೯೭೮

೩೮. ಗೌಡರ ಎಸ್. ಆರ್. — ಹಂತಿಯ ಪದಗಳು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೮೩

೩೯. ಟಿ. ಗೋವಿಂದಯ್ಯ — ಕರ್ನಾಟಕ ನೀರಾವರಿಅರ್ಥಶಾಸ್ತ್ರ

		ಸಮಾಜವಿಜ್ಞಾನ ಸಂಶೋಧನಾ ಸಂಸ್ಥೆ ಬೆಂಗಳೂರು – ೧೯೯೨
೪೦.	ಡಾ. ಬಿ.ಆರ್.ಗುರುಮೂರ್ತಿ	ರೇಷ್ಮೆ ಕೃಷಿ ಕೈಗಾರಿಕೆ ಕಾಲ ಪ್ರಕಾಶನ, ಬೆಂಗಳೂರು ೨೦೦೭
೪೧.	ಗುಂಡಪ್ಪದೇವಕೇರಿ ಎನ್.ಎಲ್.ಆನಂದ್	ನೆಲದೊಡಲ ಚಿಗುರು ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬, ೨ನೇ ಮುದ್ರಣ.
೪೨.	ಶ್ರೀ ಘನಮಠ ಶಿವಯೋಗಿ	ಕೃಷಿ ಜ್ಞಾನ ದೀಪಿಕೆ ಶ್ರೀಘನಮಠೇಶ್ವರ ಮಠ, ಸಂತೆಕೆಲ್ಲೂರು, ರಾಯಚೂರು, ೨೦೦೩
೪೩.	(ಸಂ) ಡಿ. ಚಂಪಾಬಾಯಿ	ಹದಿಬದೆಯ ಧರ್ಮ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೪೦ (ಅರ್ವಾಚೀನ ಕೃತಿಗಳು)
೪೪.	ಡಾ ॥ ಚಂದ್ರಶೇಖರ ಕಂಬಾರ	ನಮ್ಮ ಜಾನಪದ, ಅಭಿಜಾತ ಗ್ರಂಥಮಾಲೆ, ಬೆಂಗಳೂರು. ೧೯೮೦
೪೫.	ಡಾ. ಚಕ್ಕರೆ ಶಿವಶಂಕರ್	ಕರ್ನಾಟಕ ಜಾನಪದ ಪರಿಷತ್ತು; ನಡೆದು ಬಂದ ಹಾದಿ. ಕರ್ನಾಟಕ 'ಜಾನಪದ ಪರಿಷತ್ತು, ಬೆಂಗಳೂರು–೨೦೧೦
೪೬.	ಡಾ. ಚಕ್ಕರೆ ಶಿವಶಂಕರ್ ಪ್ರೊ.ಡಿ.ಲಿಂಗಯ್ಯ (ಸಂ)	ರೋಗ ಜಾನಪದ ಲೇಖನಗಳ ಸಂಗ್ರಹ ಕರ್ನಾಟಕಜಾನಪದ ಪರಿಷತ್ತು, ಬೆಂಗಳೂರು, ೨೦೦೮.
೪೭.	ಕೆ.ಎಂ.ಚಿಣ್ಣಪ್ಪ ಟಿ.ಎಸ್.ಗೋಪಾಲ್	ಕಾಡಿನೊಳಗೊಂದು ಜೀವ, ಭಾಗ–೨ ಪುಸ್ತಕ ಪ್ರಕಾಶನ, ಮೈಸೂರು ೨೦೦೧, ೨ನೇ ಮುದ್ರಣ
೪೮.	ಎಂ.ಚಂದ್ರಪೂಜಾರಿ	ಬಡತನ ಮತ್ತು ಪ್ರಜಾಪ್ರಭುತ್ವ ಗಾಯತ್ರಿ ಪ್ರಕಾಶನ, ಬಳ್ಳಾರಿ. ೨೦೧೪

೪೯. ಜ್ಯೋತಿ ಆರ್. ಎಸ್. — ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.೧೯೮೫

೫೦. ಜೋಶಿ ಶಂ. ಬಾ. — ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ (ದ್ವಿತೀಯ ಭಾಗ)ಸಮಾಜ ಪುಸ್ತಕಾಲಯ, ಧಾರವಾಡ. ೧೯೬೭

೫೧. ಜೋಷಿ ಎ. ವಿ. ಮತ್ತು ಇತರರು — ಸಾಗುವಳಿ ಉಪಕರಣಗಳು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ. ೧೯೮೫

೫೨. ಡಾ.ಎನ್. ಜಗದೀಶ್‌ಕೊಪ್ಪ — ಜಾಗತೀಕರಣ ಮತ್ತು ಗ್ರಾಮ ಭಾರತ ಸಿಂಚನ ಗ್ರಂಥಮಾಲೆ, ಹಾವೇರಿ, ೨೦೦೮

೫೩. ತಿಮ್ಮೇಗೌಡ ಎನ್.ಎಸ್ — ತುಮಕೂರು ಜಿಲ್ಲೆಯ ಜಾನಪದ ನಂಬಿಕೆಗಳು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧

೫೪. ಎಸ್. ತಮ್ಮೇಗೌಡ, ಎಸ್.ಮೃತ್ಯುಂಜಯ — ಹೊಲದ ಬೆಳೆಗಳ ಆಧುನಿಕ ಸಮಗ್ರ ಬೇಸಾಯ ಪದ್ಧತಿಗಳು, ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೨

೫೫. ಡಾ॥ ಎಸ್. ತಿಮ್ಮೇಗೌಡ, ಡಾ॥ ವಿ.ಆರ್. ರಾಮಕೃಷ್ಣಪರಮ — ಸಾವಯವಕೃಷಿಯ ತತ್ವಗಳು ಕೃಷಿವಿಕಾಸ್ ಪಬ್ಲಿಕೇಷನ್ಸ್. ಬೆಂಗಳೂರು. ೨೦೦೪

೫೬. ದೇವೇಂದ್ರಕುಮಾರ ಹಕಾರಿ(ಡಾ) — ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನಚಿತ್ರಣ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫

೫೭. ದೇವುಡು ನರಸಿಂಹಶಾಸ್ತ್ರೀ — ಕರ್ಣಾಟಕ ಸಂಸ್ಕೃತಿ, ಶ್ರೀ ಗೌರಿಶಂಕರ ಬುಕ್ ಡಿಪೊ, ಮೈಸೂರು. ೧೯೫೩

೫೮. ದ್ವಾರಕಿನಾಥ ಆರ್. ಮುರಿಗಪ್ಪ ಶ್ರೇಷ್ಠಿ. — ಕೃಷಿ ಕರ್ನಾಟಕ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–೬೫.

೫೯. ದೇವಿಂದರ್ ಶರ್ಮಾ (ಅನು) ನಾಗೇಶ್‌ಕೆ.ಎನ್ — ನೆಲದ ಸತ್ಯ ಕೃಷಿ ಸಮಯ, ಬೆಂಗಳೂರು೨೦೧೫.

೬೦. (ಸಂ) ದೇ. ಜವರೇಗೌಡ — ರಾಮಧಾನ್ಯ ಚರಿತ್ರೆ
ಶ್ರೀ ಕನಕದಾಸ ನಾಲ್ಕನೆಯ
ಶತಮಾನೋತ್ಸವ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು,೧೯೬೫

೬೧. (ಸಂ) ಎಚ್. ದೇವೀರಪ್ಪ, ದೇ.ಜವರೇಗೌಡ — ಗಿರಿಜಾ ಕಲ್ಯಾಣ ಮಹಾಪ್ರಬಂಧಂ
ಶ್ರೀ ಗೌರಿಶಂಕರ ಬುಕ್ ಡಿಪೊ, ಮೈಸೂರು.
೧೯೫೩

೬೨. (ಸಂ) ಎಲ್. ಗುಂಡಪ್ಪ — ಆದಿಪುರಾಣ ಸಂಗ್ರಹ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು, ೧೯೫೬

೬೩. (ಸಂ) ಡಿ. ಎಲ್. ನರಸಿಂಹಾಚಾರ್ — ಶಬ್ದಮಣಿದರ್ಪಣಂ
ಶಾರದಾ ಮಂದಿರ, ಮೈಸೂರು, ೧೯೬೮

೬೪. ಹಾ. ವೆಂ. ನಾಗೇಶ್ — ಭಾರತೀಯಗ್ರಾಮ
ಕನ್ನಡ ಅಧ್ಯಯನ ಸಂಸ್ಥೆ.
ಮೈಸೂರು ವಿಶ್ವವಿದ್ಯಾನಿಲಯ ೧೯೮೬

೬೫. ನಂಜಯ್ಯ ಆರ್. ಡಿ, ಸತ್ಯನಾರಾಯಣರಾವ್ ಎಂ. (ಡಾ) — ಪಶುರೋಗಗಳು ಮತ್ತು ಸಾರ್ವಜನಿಕ
ಆರೋಗ್ಯ, ಕೃಷಿ ವಿಶ್ವವಿದ್ಯಾನಿಲಯ,
ಬೆಂಗಳೂರು.

೬೬. ಡಾ. ನಾಗೇಗೌಡ ಎಚ್. ಎಲ್. — ನನ್ನೂರು, ಸಾಹಿತ್ಯ ಸದನ, ಬೆಂಗಳೂರು
೧೯೪೮ ಪ್ರವಾಸಿ ಕಂಡ ಇಂಡಿಯಾ,
ಸಂ-೧ ಮತ್ತು ೨ ಮೈಸೂರು ವಿವಿ,
ಮೈಸೂರು. ೧೯೬೪-೧೯೬೬

ಸೋಬಾನೆ ಚಿಕ್ಕಮ್ಮನ ಪದಗಳು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೯೭೨

೬೭. ನಾಗೇಶ್. ಹಾ. ವೆಂ — ಭಾರತೀಯ ಗ್ರಾಮ ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು. ೧೯೮೬

೬೮. ನಾಯಕ ಹಾ. ಮಾ. (ಡಾ) — ಜಾನಪದ ಸ್ವರೂಪ, ತ. ವೆಂ. ಸ್ಮಾರಕ
ಗ್ರಂಥಮಾಲೆ, ಮೈಸೂರು. ೧೯೭೧

ಸಂವಾದ
ಉಷಾ ಸಾಹಿತ್ಯ ಮಾಲೆ, ಮೈಸೂರು.
೧೯೭೨

೧೯.	**ನಾಯಕ ಎನ್. ಆರ್. (ಡಾ)**	ಜಾನಪದ ಮೆಲುಕು ಜಾನಪದ ಪ್ರಕಾಶನ, ಹೊನ್ನಾವರ (ಉ. ಕ.) ೧೯೮೭
೨೦.	ಡಾ. ಎಚ್.ಎಲ್. ನಾಗೇಗೌಡ	ಬೆಟ್ಟದಿಂದ ಬಟ್ಟಲಿಗೆ ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೧೯೭೮, ೨ನೇ ಮುದ್ರಣ
೭೧.	ನಾಯ್ಡು ಜಿ.ವಿ.ಬಿ. ಮತ್ತು ಇತರರು	ವ್ಯವಸಾಯ ಕೈಪಿಡಿ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೨ ವ್ಯವಸಾಯ ಪ್ರಗತಿ ಸಾಧನೆಯ ಸೂತ್ರಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೮
೭೨.	ನರೇಂದ್ರ ರೈ ದೇರ್ಲ	ಬೊಗಸೆ ತುಂಬಾ ಬೀಜ ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು – ೨೦೦೪
೭೩.	(ಇಂ) ನಳಿನಿ ಸಾಥಲೆ ಕನ್ನಡಕ್ಕೆ– ಆರ್.ಪಿ.ಹೆಗಡ	ವೃಕ್ಷಾಯುರ್ವೇದ ಅಂಕಿತ ಪುಸ್ತಕ ಪ್ರಕಾಶನ ಬಸವನಗುಡಿ, ಬೆಂಗಳೂರು, ೨೦೦೫
೭೪.	ಕೆ. ನಟರಾಜನ್	ಪಂಚಗವ್ಯ ಸಹಜ ಸಮೃದ್ಧ ಪ್ರಕಾಶನ, ಬೆಂಗಳೂರು,೨೦೦೭
೭೫.	ಡಾ. ಎಚ್.ಎಲ್. ನಾಗೇಗೌಡ	ಪ್ರವಾಸಿ ಕಂಡ ಭಾರತ ಸಂಪುಟ ೧ ಮತ್ತು ೨ ಐಬಿಎಚ್ ಪ್ರಕಾಶನ. ಬೆಂಗಳೂರು ೨೦೦೬, ೨ನೇ ಮುದ್ರಣ
೭೬.	ಡಾ. ಡಿ.ಆರ್. ನಾಗರಾಜ್	ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ. ೨೦೧೪, ೫ನೇ ಮುದ್ರಣ.
೭೭.	ಎಂ.ನಾರಾಯಣಸ್ವಾಮಿ	ಜಾನುವಾರು ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೮.

೭೮. ಡಾ॥ ಎಂ. ಎ ನಾರಾಯಣರೆಡ್ಡಿ — ಅಡಿಕೆ ಮತ್ತು ವೀಳೆದೆಲೆ ಬೇಸಾಯ
ಕೃಷಿವಿಕಾಸ್ ಪಬ್ಲಿಕೇಷನ್ಸ್
ಬೆಂಗಳೂರು – ೨೦೦೫

೭೯. ಪ್ರೊ.ಎಂ.ನಾರಾಯಣಸ್ವಾಮಿ ರಮೇಶ್ ಸಂಕ್ರಾಂತಿ — ರಾಗಿ ಲಕ್ಷ್ಮಣಯ್ಯ
ಅಸೀಮ ಅಕ್ಷರ ಪ್ರಕಾಶನ,ಬೆಂಗಳೂರು, ೨೦೧೨

೮೦. (ಸಂ) ಕೆ. ಸಿ. ಪಂಚಲಿಂಗೇಗೌಡ — ರಾಮಧಾನ್ಯ ಚರಿತ್ರೆ
ಕಲಾಕ್ಷೇತ್ರ, ೧೭೩, ರಮಾವಿಳಾಸ ಅಗ್ರಹಾರ,
ಮೈಸೂರು, ೧೯೬೫

೮೧. (ಸಂ) ಪಂಡಿತ ಬಿ. ಎಸ್. ಕೃಷ್ಣಪ್ಪ — ಜೈಮಿನಿ ಭಾರತ
ಶಾರದಾ ಬುಕ್ ಡಿಪೊ, ಮೈಸೂರು,
೧೯೫೧

೮೨. ಪರಮಶಿವಯ್ಯ ಜೀ.ಶಂ (ಡಾ) — ನಮ್ಮ ಜಾನಪದ ಸಾಹಿತ್ಯ
ಸಾಹಿತ್ಯ ಸದನ,ಮೈಸೂರು. ೧೯೬೭

೮೩. ಪುಟ್ಟರುದ್ರಯ್ಯ ಎಂ. (ಡಾ) — ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು
ಹಾಗೂ
ಅವುಗಳ ಹತೋಟಿ ಕೃಷಿ
ವಿಶ್ವವಿದ್ಯಾನಿಲಯ, ಬೆಂಗಳೂರು– ೧೯೭೫

೮೪. ಫಾದರ್ ಸಿ.ಸಿ.ಎ. ಪೈ — ಜಾನಪದ ವೈಜ್ಞಾನಿಕ ಕ್ಷೇತ್ರ ಕಾರ್ಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೭೮

೮೫. ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಡಾ. ವಿ. ವಿ. ಬೆಳವಾಡಿ — ನಡೆಯುವ ಕಡ್ಡಿ ಹಾರುವ ಎಲೆ
ಪುಸ್ತಕ ಪ್ರಕಾಶನಮೈಸೂರು, ೧೯೯೯, ೩ನೇ
ಮುದ್ರಣ

೮೬. ಪ್ರಸನ್ನ — ದೇಸಿ ಆಹಾರ ಪದ್ಧತಿ
ಒಂಟಿದನಿ ಪ್ರಕಾಶನ
ಹೊನ್ನೇಸರ, ಸಾಗರ, ೨೦೧೩

೮೭. ಕೆ.ಪಿ. ಪೂರ್ಣಚಂದ್ರತೇಜಸ್ವಿ — ಅಣ್ಣನ ನೆನಪು
ಪುಸ್ತಕ ಪ್ರಕಾಶನ, ಮೈಸೂರು, ೨೦೧೩,
೧೧ನೇ ಮುದ್ರಣ.

೮೮. ಕೆ.ಪಿ. ಪೂರ್ಣಚಂದ್ರತೇಜಸ್ವಿ ಪ್ಲೇಯಿಂಗ್ ಸಾಸರ್ಸ್ ಭಾಗ–೧
ಪುಸ್ತಕ ಪ್ರಕಾಶನ, ಮೈಸೂರು
೨೦೧೧, ೯ನೇ ಮುದ್ರಣ

೮೯. ಕೆ.ಪಿ.ಪೂರ್ಣಚಂದ್ರ ತೇಜಸ್ವಿ — ಕರ್ವಾಲೋ
ಪುಸ್ತಕ ಪ್ರಕಾಶನ, ಮೈಸೂರು, ೨೦೧೩
೩೨ನೇ ಮುದ್ರಣ

೯೦. ಕೆ.ಪಿ.ಪೂರ್ಣಚಂದ್ರ ತೇಜಸ್ವಿ
ಪ್ರದೀಪ್ ಕೆಂಜಿಗೆ — ವಿಸ್ಮಯ ೧ ಮತ್ತು ೨
ಪುಸ್ತಕ ಪ್ರಕಾಶನ. ಮೈಸೂರು, ೧೯೯೩

೯೧. ಪ್ರೊ, ಸಿ.ಡಿ.ಪಾಟೀಲ — ಆಹಾರ ಕಲಬೆರಕೆ
ಕರ್ನಾಟಕರಾಜ್ಯ ವಿಜ್ಞಾನ ಪರಿಷತ್,

೯೨. ಡಾ.ಎಸ್.ಬಿ.ಪಾಟೀಲ ಮತ್ತು
ಡಾ॥ ಲ.ಅ.ದೀಕ್ಷಿತ — ಮಣ್ಣು ಮತ್ತು ನೀರು ನಿರ್ವಹಣೆ
ಕನ್ನಡಅಧ್ಯಯನ ವಿಭಾಗ,
ಕೃಷಿ ವಿ. ವಿ, ಬೆಂಗಳೂರು,೨೦೦೪

೯೩. ಬಿರಾದಾರ ಮ. ಗು. (ಡಾ) — ಜಾನಪದ ಜೀವಾಳ
ಪುಸ್ತಕ ಅಕಾಡೆಮಿ, ಕಲಬುರಗಿ. ೧೯೮೭

೯೪. ಬೆಟಗೇರಿ ಕೃಷ್ಣಶರ್ಮ — ನಮ್ಮ ಸಂಸ್ಕೃತಿ ಪರಂಪರೆ
ಸಮಾಜ ಪುಸ್ತಕಾಲಯ, ಧಾರವಾಡ.
೧೯೬೯

೯೫. ಭಟ್ಟ ಜಿ. ಎಸ್ — ನಾಗರಿಕತೆಯ ಇತಿಹಾಸ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ,
ಮೈಸೂರು. ೧೯೮೮

೯೬. ಬಂಜಗೆರೆ ಜಯಪ್ರಕಾಶ್ — ಭೂಮಿ ನಿರ್ವಹಣೆ
ಪ್ರಾರಂಭ ಪ್ರಕಾಶನ
ಬೆಂಗಳೂರು – ೧೯೯೬

೯೭. ಡಾ. ಜಿ.ವಿ. ಬಸವರಾಜು — ಕೃಷಿ ಬೆಳೆಗಳ ಬೀಜೋತ್ಪಾದನೆ
ಕೃಷಿ ವಿಕಾಸ್ ಪಬ್ಲಿಕೇಷನ್
ಬೆಂಗಳೂರು, ೨೦೦೬

೯೮. ಡಾ. ಎಲ್ ಬಸವರಾಜು (ಸಂ) — ಅಲ್ಲಮನ ವಚನಗಳು
ಗೀತಾ ಬುಕ್ ಹೌಸ್ ಪ್ರಕಾಶನ.
ಮೈಸೂರು, ೧೯೯೫,೪ನೇ ಮುದ್ರಣ

೯೯. ಡಾ. ಮರುಳಿಸಿದ್ದಪ್ಪ ಕೆ. — ಲಾವಣಿಗಳು (ಸಂ)
ಬೆಂಗಳೂರು ವಿಶ್ವವಿದ್ಯಾನಿಲಯ,
ಬೆಂಗಳೂರು. ೧೯೭೨
ಭಾರತೀಯ ಜಾನಪದ ಸಮೀಕ್ಷೆ (ಅನು),

		ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ೧೯೭೪
೧೦೦.	**ಮಾಸ್ತಿ ವೆಂಕಟೇಶ ಅಯ್ಯಂಗಾರ್**	ಕರ್ನಾಟಕದ ಜನತೆಯ ಸಂಸ್ಕೃತಿ ಜೀವನ ಕಾರ್ಯಾಲಯ, ಬೆಂಗಳೂರು. ೧೯೩೧
		ಕರ್ನಾಟಕದ ಜನಪದ ಸಾಹಿತ್ಯ **ಜೀವನ ಕಾರ್ಯಾಲಯ, ಬೆಂಗಳೂರು.** **೧೯೫೬**
೧೦೧.	ಕೆ.ವೆಂಕಟರಾಮಪ್ಪ	ಧರ್ಮಾಮೃತಂ ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು, ೧೯೭೭
೧೦೨.	(ಸಂ) ಟಿ. ಎಸ್. ವೆಂಕಣ್ಣಯ್ಯ, ಡಿ.ಎಲ್.ನರಸಿಂಹಾಚಾರ್	ಸಿದ್ಧರಾಮ ಚಾರಿತ್ರ ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೫
೧೦೩.	ಪ್ರೊ. ಬಿ.ವಿ.ವೆಂಕಟರಾವ್	ಕೃಷಿ ಮತ್ತು ಪರಿಸರ ಹೊಸ ಸವಾಲುಗಳು ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪, ೨ನೇ ಮುದ್ರಣ.
೧೦೪.	**ಮೈಲಹಳ್ಳಿ ರೇವಣ್ಣ (ಸಂ)**	**ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು** **ಮೈಸೂರು ವಿಶ್ವವಿದ್ಯಾನಿಲಯ,** **ಮೈಸೂರು.೧೯೮೪**
೧೦೫.	ಡಾ॥ ಕೆ.ಎನ್. ಮುನಿಸ್ವಾಮಿಗೌಡ	ಸಾವಯವ ಸಸ್ಯ ಸಂರಕ್ಷಣೆ: ತತ್ವಗಳು ಮತ್ತು ಪರಿಕಲ್ಪನೆ ಕೃಷಿ ವಿಕಾಸ್ ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫

೧೦೬.	(ಸಂ) ಕ. ವೆಂ. ರಾಘವಾಚಾರ್	ಯಶೋಧರ ಚರಿತೆ ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು, ೧೯೬೧
೧೦೭.	ಓಕ ರಂಗನಾಥ ಹರಪಂಥ	(ಇಲ್ಲ), ಒಕ್ಕಲಿಗರ ಉಪಯೋಗಕ್ಕೆ ಪಶುಸಾಮುದ್ರಿಕ ಶಾಸ್ತ್ರಸಾರ ಅಥವಾ ದನಗಳ ಲಕ್ಷಣಗಳು, ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ
೧೦೮.	ರಂಗಸ್ವಾಮಿ ಡಿ.ಟಿ.	ಭಾರತದ ಹಬ್ಬ ಹರಿದಿನಗಳು ಹೊರಕೆರೆ, ದೇವನಪುರ. ೧೯೬೧
೧೦೯.	ರಾಗೌ	ನಮ್ಮ ಗಾದೆಗಳು (ಸಂ) ಗೀತಾ ಬುಕ್ ಹೌಸ್, ಮೈಸೂರು. ೧೯೬೮
		ಕಾವ್ಯಾನುಶೀಲನ ಸುರುಚಿ ಪ್ರಕಾಶನ, ಮೈಸೂರು. ೧೯೬೮ (ಮರುಮುದ್ರಣ)
		ಕಿಟ್ಟೆಲ್ ಕೋಶದ ಗಾದೆಗಳು(ಸಂ), ಮೈ. ವಿ. ಗ್ರಂ. ಮೈಸೂರು. ೧೯೭೩
೧೧೦.	ರಾಜೇಂದ್ರ ಡಿ. ಕೆ. (ಡಾ)	ಜಾನಪದ ಸಮೀಕ್ಷೆ ಗೀತಾ ಬುಕ್ ಹೌಸ್ ಮೈಸೂರು. ೧೯೭೦
		ನಮ್ಮ ಸುತ್ತಿನ ನಂಬಿಕೆಗಳು (ಸಂ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ ವಿ. ೧೯೭೩
೧೧೧.	ರಾಜೇಗೌಡ ಹ. ಕ.	ಕರ್ನಾಟಕ ವ್ಯವಸಾಯ ಉಪಕರಣಗಳು ಐ.ಬಿ,ಹೆಚ್. ಪ್ರಕಾಶನ, ಬೆಂಗಳೂರು. ೧೯೮೦
		ಕರ್ನಾಟಕದ ವ್ಯವಸಾಯ ಪದ್ಧತಿ, ಐ.ಬಿ,ಹೆಚ್. ಪ್ರಕಾಶನ, ಬೆಂಗಳೂರು. ೧೯೮೧
೧೧೨.	ರಾಮಚಂದ್ರೇಗೌಡ ಹಿ.ಶಿ.	ಜಾನಪದ ಅಂತರಂಗ ಮಾನವಿ ಪ್ರಕಾಶನ, ಮೈಸೂರು. ೧೯೮೭
೧೧೩.	ರೇವಣ್ಣ , ಪಂಡಿತ (ದ್ಯಾಮವ್ವನಹಳ್ಳಿ)	ಪಶುವೈದ್ಯ ಸಂಜೀವಿನಿ

ದ್ಯಾಮವ್ವನಹಳ್ಳಿ, ದಾವಣಗೆರೆ ತಾಲ್ಲೂಕು. ೧೯೬೨

ಸಚಿತ್ರ ಯಕ್ಷಗಾಯನ ಶನಿಮಹಾತ್ಮ ಪುರಾಣ
ಮೃತ್ಯುಂಜಯ ಪ್ರಕಾಶನ, ದಾವಣಗೆರೆ.

೧೧೪. ರಾಗೌ — ಕಿಟ್ಟೆಲ್‌ಕೋಶದ ಗಾದೆಗಳು
ಡಿ.ವಿ.ಕೆ. ಮೂರ್ತಿ ಪ್ರಕಾಶನ
ಮೈಸೂರು, ೨೦೦೮, ೪ನೇ ಮುದ್ರಣ.

೧೧೫. ಡಾ. ರಾಗೌ — ನಮ್ಮ ಗಾದೆಗಳು ಮತ್ತು ನಮ್ಮ ಒಗಟುಗಳು
ತನುಮನ ಪ್ರಕಾಶನ, ಮೈಸೂರು, ೨೦೧೫

೧೧೬. ಡಾ॥ ರಾಧಾ ಡಿ. ಕಾಳೆ — ಎರೆಗೊಬ್ಬರ–ಖರೇಗೊಬ್ಬರ
ದಿನಕರ ಕಾಳೆ ಪ್ರಕಾಶನ
ಬೆಂಗಳೂರು, ೨೦೦೫

೧೧೭. ಡಾ.ಎಸ್.ಎನ್. ರಾಮಸ್ವಾಮಿ — ವೇದ ವೃಕ್ಷಗಳು
ಡಿ.ವಿ.ಕೆ.ಮೂರ್ತಿಪ್ರಕಾಶನ
ಮೈಸೂರು, ೨೦೧೨.

೧೧೮. ಡಾ.ಸಿ.ಎಸ್. ರಘುಪತಿ — ಕುರಿಸಾಕಣೆ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು, ೨೦೦೮.

೧೧೯. **ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್(ಸಂ)** — ಐತಿಹಾಸಿಕ ಚಿತ್ರದುರ್ಗ,
ಜಿಲ್ಲಾ ಇತಿಹಾಸ ಸಂಶೋಧನ
ಮಂಡಲಿ,ಚಿತ್ರುದುರ್ಗ. ೧೯೭೯

೧೨೦. **ಲಕ್ಷ್ಮಿ ಎಂ. ಎಸ್** — ಉತ್ತರ ಕರ್ನಾಟಕದ ಹಂತಿಯ ಹಾಡುಗಳು. ೧೯೭೫

೧೨೧. **ಲಿಂಗಯ್ಯ ಡಿ** — ಕೊಂತಿ ಪೂಜೆ
ಸಾಹಿತ್ಯ ಭಂಡಾರ, ಬಳೇಪೇಟೆ,
ಬೆಂಗಳೂರು. ೧೯೭೬

ಜನಪದ ಸಾಹಿತ್ಯ ಸಂವಾದ
ದಿನಕರ ಪ್ರಕಾಶನ, ಬನಶಂಕರಿ,
ಬೆಂಗಳೂರು. ೧೯೮೨

೧೨೨. ಡಾ.ಎನ್.ಎಸ್.ಲೀಲಾ — ಜೀವಿ ವೈವಿಧ್ಯ ಮತ್ತು ವಿಕಾಸ
ನವಕರ್ನಾಟಕ ಪ್ರಕಾಶನ,
ಬೆಂಗಳೂರು, ೨೦೧೪, ೨ನೇ ಮುದ್ರಣ.

೧೨೩. ಡಾ॥ ಎನ್.ಎಸ್. ಲೀಲಾ — ಜೀವಾವಾಸಗಳು ನೆಲೆಸು-ಬೆಳೆಸು
ನವಕರ್ನಾಟಕ ಪ್ರಕಾಶನ,
ಬೆಂಗಳೂರು, ೨೦೧೪.

೧೨೪. ಎಚ್.ಜೆ. ಲಕ್ಕಪ್ಪಗೌಡ — ಜಾನಪದ ಕೈಪಿಡಿ
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು, ೧೯೯೭

೧೨೫. (ಸಂ) ಎಸ್. ವಿದ್ಯಾಶಂಕರ್ — ಸರ್ವಜ್ಞ ವಚನ ಸಂಗ್ರಹ
ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿರಸ್ತೆ,ಚಾಮರಾಜ ಪೇಟೆ,
ಬೆಂಗಳೂರು-೧೮, ೧೯೭೪

೧೨೬. ಡಾ॥ ವನಜಾರಾಮ್‌ಪ್ರಸಾದ್ ಮತ್ತು ತಂಡ — ಸುಸ್ಥಿರ ಕೃಷಿ ಪದ್ಧತಿಗಳ ಗ್ರೀನ್
ಪ್ರತಿಷ್ಠಾನ.ಬೆಂಗಳೂರು-೨೦೧೧, ೨ನೇ
ಮುದ್ರಣ

೧೨೭. ವಂದನಾಶಿವ
(ಅನು) ಮಾಧವ ಐತಾಳ್ — ಭತ್ತದ ಚಿಲುಮೆ
ಪ್ರಸರಾಂಗ, ಕನ್ನಡ ವಿವಿ.
ಹಂಪಿ, ೧೯೯೫, ೫ನೇ ಮುದ್ರಣ

೧೨೮. ಆರ್.ವೇಣುಗೋಪಾಲ್
ಬಿ.ಎಸ್.ಜೈಪ್ರಕಾಶ್ — ರಾಸಾಯನಿಕ ಧಾತುಗಳು
ನವಕರ್ನಾಟಕ ಪ್ರಕಾಶನ,
ಬೆಂಗಳೂರು, ೨೦೧೬

೧೨೯. ಡಾ॥ ಜಿ.ಕೆ. ವೀರೇಶ್ — ಸಾವಯವ ಕೃಷಿ, ಏಕೆ? ಹೇಗೆ?
ಸಾವಯವ ಕೃಷಿ ಉತ್ತೇಜಕ ಸಂಘ;

೧೩೦. ವಿರೂಪಾಕ್ಷಗೌಡ ಕೆ. — ಸುಗ್ಗಿಯ ಕಣ
ಹಗರಿಬೊಮ್ಮನಹಳ್ಳಿ,
ಬಳ್ಳಾರಿ ಜಿಲ್ಲೆ. ೧೯೫೮

ಹಳ್ಳಿಯ ಪದಗಳು,
ಹಗರಿಬೊಮ್ಮನಹಳ್ಳಿ, ೧೯೭೮

೧೩೧. ವಿವೇಕ ರೈ, ಬಿ.ಎ. (ಡಾ) — ಅನ್ವಯಿಕ ಜಾನಪದ
ಮಂಗಳೂರು ವಿಶ್ವವಿದ್ಯಾನಿಲಯ,

ಮಂಗಳೂರು. ೧೯೮೫

೧೩೨. ವಿಶ್ವೇಶ್ವರಪ್ಪ ಜಿ.(ಸ) — ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು. ೧೯೮೩

೧೩೩. ವೆಂಕಟರಾವ್ ಟಿ.ವಿ. — ಗೊಬ್ಬರಗಳು, ಮೈಸೂರು
ವಿಶ್ವವಿದ್ಯಾನಿಲಯ,ಮೈಸೂರು. ೧೯೭೦

೧೩೪. ಡಾ. ವಸುಂದರ ಭೂಂಬೆ — ಸಂಬಾರ ಪದಾರ್ಥಗಳು
ನವಕರ್ನಾಟಕ ಪ್ರಕಾಶನ
ಬೆಂಗಳೂರು – ೨೦೧೩

೧೩೫. ಶಂಕರನಾರಾಯಣ ಎಚ್.ಎಂ. — ಜನಪದ ಮುಕ್ತಕಗಳು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು. ೧೯೬೯

೧೩೬. ಶಿವರುದ್ರಪ್ಪ ಜಿ.ಎಸ್.(ಡಾ) — ಪರಿಶೀಲನ
ಉಷಾ ಸಾಹಿತ್ಯ ಮಾಲೆ, ಮೈಸೂರು.
೧೯೭೨

ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ(ಸಂ)
ಬೆಂಗಳೂರು ವಿಶ್ವವಿದ್ಯಾನಿಲಯ,
ಬೆಂಗಳೂರು. ೧೯೭೭

೧೩೭. ಶಿವರಾಮ್ ಕಾರಂತ ಕೆ.(ಡಾ) — ಜಾನಪದ ಗೀತೆಗಳು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು. ೧೯೭೧

ಕೀಟನಾಶಕಗಳ ಪಿಡುಗು: ಬೆಳೆಯುತ್ತಿರುವ
ಸಮಸ್ಯೆ.(ಅನು) ಅಕ್ಷರ ಪ್ರಕಾಶನ, ಸಾಗರ.
೧೯೮೩
ನಮ್ಮೆಲ್ಲರಿಗೂ ಒಂದೇ ಭವಿಷ್ಯ (ಅನು)
ಅಕ್ಷರ ಪ್ರಕಾಶನ, ಸಾಗರ. ೧೯೮೯

೧೩೮. ಶಿವಪ್ಪ ಡಿ. ಎಸ್. (ಡಾ) — (ಅನು)ಜೀವಂತ ಭೂಮಿ
(ಮೂಲ: ಪೀಟರ್ ಫಾರ್ಬ)

೧೩೯ ಶ್ರೀಕಂಠ ಕೂಡಿಗೆ (ಡಾ) — ಭೂಮಿ ಹುಣ್ಣಿಮೆ
ದಖನ್ ಪಬ್ಲಿಷರ್ಸ್, ಜೆ.ಸಿ. ರಸ್ತೆ,
ಬೆಂಗಳೂರು. ೧೯೮೧

೧೪೦	ಶುಭಚಂದ್ರ ಜೈನ	ಸಾಹಿತ್ಯ ಮತ್ತು ಸಂಸ್ಕೃತಿ-ಕೆಲವು ಅಧ್ಯಯನಗಳು ಗೀತಾ ಬುಕ್ ಹೌಸ್, ಮೈಸೂರು. ೧೯೭೬
೧೪	ಶ್ರೀನಿವಾಸ ಎಂ.ವಿ. (ಡಾ),	ಚಂದ್ರವಳ್ಳಿ ತೆಲಗಾವಿ (ಸಂ)ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ. ೧೯೭೬
೧೪೨	ಶೇಷಗಿರಿರಾವ್ ಡಿ.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ೧೯೭೫
		ಧಾನ್ಯ ಸಂರಕ್ಷಣೆ ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು. ೧೯೮೪
೧೪೩	ಶೇಷಾದ್ರಿ ಎಂ.(ಡಾ)	ಹರಪ್ಪಾ ಸಂಸ್ಕೃತಿ ಚೇತನಾ ಪ್ರಕಾಶನ, ಮೈಸೂರು. ೧೯೫೫
೧೪೪	ಜಿ. ಶರಶ್ಚಂದ್ರರಾನಡೆ	ಕೃಷಿ ಉತ್ಪನ್ನ ದರ್ಶನ ಅಭಿನವ ಪ್ರಕಾಶನ, ಬೆಂಗಳೂರು, ೨೦೦೪
೧೪೫	ಜಿ. ಶರಶ್ಚಂದ್ರ ರಾನಡೆ	ಸಸ್ಯಶಾಲಿನಿ ಅಭಿನವ ಪ್ರಕಾಶನ, ಬೆಂಗಳೂರು, ೨೦೦೬
೧೪೬	ಡಾ.ಎಸ್. ಶ್ರೀಕಂಠಶಾಸ್ತ್ರೀ	ಭಾರತೀಯ ಸಂಸ್ಕೃತಿ ಕಾಮಧೇನು ಪುಸ್ತಕ ಭವನ ಬೆಂಗಳೂರು, ೨೦೧೫
೧೪೭	(ಸಂ) ಶ್ರೀನಿವಾಸ ರಾಘವಾಚಾರ್, ಡಿ.ಎಲ್. ನರಸಿಂಹಾಚಾರ್	ಪಂಪರಾಮಾಯಣ ಸಂಗ್ರಹ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೧
೧೪೮	ಡಾ॥ ಸೋಮೇಶ್ವರ. ನಾ.	ನಮ್ಮ ದಿನನಿತ್ಯದ ಆಹಾರ ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೧೪
೧೪೯	ಶ್ರೀ ಸಿದ್ಧೇಶ್ವರ ಸ್ವಾಮಿಗಳು	ಅಲ್ಲಮಪ್ರಭು ದೇವರ ವಚನ-ನಿರ್ವಚನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು, ಮೇ. ೨೦೦೧
೧೫೦	ಪ್ರೊ.ಸುಧಾಕರ	ನಮ್ಮ ಸುತ್ತಿನ ಗಾದೆಗಳು

ಕಾವ್ಯಶ್ರೀ ಪ್ರಕಾಶನ
ಮೈಸೂರು, ೨೦೧೧, ೩ನೇ ಮುದ್ರಣ.

೧೫೧ ಸಂತೋಷ್ ಕೌಜಲಗಿ — ಒಂದು ಹುಲ್ಲಿನಕ್ರಾಂತಿ
ಜನಪದ ಸೇವಾ ಟ್ರಸ್ಟ್ ಪ್ರಕಾಶನ,
ಮೇಲುಕೋಟೆ, ಮಂಡ್ಯ ೨೦೦೦, ೬ನೇ
ಮುದ್ರಣ.

೧೫೨ ಸ್ವಾಮಿ ಆನಂದ್ ಆರ್ — ಸುಭಾಷ ಪಾಳೇಕರರ
ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ
ಅಗ್ನಿ ಪ್ರಕಾಶನ, ಬೆಂಗಳೂರು,
ಮೇ ೨೦೧೨, ೧೬ನೇ ಮುದ್ರಣ

೧೫೩ ಸ್ವಾಮಿ.ಬಿ.ಜಿ.ಎಲ್ — ಹಸಿರು ಹೊನ್ನು
ಕಾವ್ಯಾಲಯ, ಜಯನಗರ, ಮೈಸೂರು,
೨೦೧೪

೧೫೪ (ಸಂ) ಡಾ। ಆರ್.ಸಿ.ಹಿರೇಮಠ — ಬಸವಣ್ಣನವರ ವಚನಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,
೧೯೬೮

Reference Books.

ACHARYA K. T.

1979, Getting more food to everyone, prasaranga, university of Mysore, Mysore.

ANANTHA KRISHNA IYER K. & NANJUNDAIAH H.V.

1936, The Mysore tribes and castes, University of Mysore, Mysore.

BUCHNAN, FRANCIS

1807, A Journey (Journey from Madras through the Countries of Malabar, Mysore and canara) Asiatic Society, London (Madras), (3 Vols.)

ELIOT T.S.

1949, Notes towards the definition of Culture, Faber and Faber, London.

GUSTAV OPPERT

1893, The Original Inhabitants of India, Oriental, Madras- Delhi.

HAYAVADANA RAO C.

1930, The Mysore Gazetteer, Vol.5

ISHWARAN K.

1996, Tradition and Economy in Village India, Allied Publishers Private Ltd, Bombay, Calcutta, Delhi, Madras.

KOSAMBI D.D

1970, The culture and civilization of ancient India in historical outline, Vikas publications, Delhi-Bombay-Bangalore.

KRISHNAMURTHY BHADRIRAJU

1962, Mandalika Vrittipadakosha, Agriculture, Vol. 1 Andhrapradesh Sahitya Academy, Hyderabad.

MISHRA D.P.

1968,Diffusion of Agricultural Innovations, Prasaranga, University of Mysore, Mysore.

NIRMAL KUMAR BOSE

1961, Cultural Anthropology, Asia Publishing House, New Delhi.

PIERRE DE SCHLIPPE

1956, Shifting Cultivation in Africa: The Zande System of agriculture, Rutledge, London.

RAGHUBIR DAYAL AND AET BARROW

1975, An outline of Indian history and culture, vol-1, Orient Longman Ltd., New-Delhi

RAO R.V.

1969, Ghandhian Contribution to Indian Economy, Prasaranga, University of Mysore, Mysore.

RANDHAWA M.S.

1980-84, A History of Agriculture in Indian Council of Agricultural Research, New Delhi, 4 Vols.

SHANKER SEN GUPTA

1965, A guide to field study, Indian Publication, Calcutta.

SHANKER SEN GUPTA & UPADHYA K.D.

1964, Studies in Indian Folk Culture, Indian Publication, Calcutta.

SRINIVAS M.N.

1966, India's Villages, Asia Publishing House, Bombay.

SRISATHYAN B.N. (Ed.)

1967, Chitradurga District Gazetteer, Mysore State.

VIJAYARAM P.G.K. (Ed.)

1985, A will Durant Reader, Oxford University Press, Madras.

WILLIAM I THOMAS (Ed.)

1909, Source Book for Social Origins, University Press, Chicago.

VANISHED CIVILISATIONS

1988, Reader's Digest, Sydney.

******

